ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲಾ

ಸಂಖ್ಯೆ—೫೦

ಶ್ರೀ ಬ್ರಹ್ಮವೈವರ್ತ ಮಹಾಪುರಾಣಂ

(ಕನ್ನಡ ಅನುವಾದ ಸಹಿತ)

ಸಂಚಿಕೆ ೬

ಅನುವಾದಕ:
ಸಾಹಿತ್ಯ ಮತ್ತು ಕನ್ನಡ ವಿದ್ವಾನ್
ಬಿಟ್ಟದಪುರದ ಸುಬ್ರಾಯರ ಮಗ ಕೃಷ್ಣಪ್ಪ,
ಸಂಸ್ಕೃತ ಪಂಡಿತ,
ಗಾ|| ಹೈಸ್ಕೂಲ್, ನಂಜನಗೂಡು.

ಶ್ರೀ ಶಾರದಾ ಪ್ರೆಸ್,
ಮೈಸೂರು,
೧೯೫೦

ಪೀಠಿಕೆ

ಗಣಪತಿಖಂಡದ ಈ ದ್ವಿತೀಯ ಸಂಪುಟದಲ್ಲಿ ಜಮದಗ್ನಿಯ ಪುತ್ರನಾದ ಪರಶುರಾಮನು ಕಾರ್ತವೀರ್ಯಾರ್ಜುನನನ್ನು ಸಂಹರಿಸಿ ಇಪ್ಪತ್ತೊಂದುಸಾರಿ ಭೂಪ್ರದಕ್ಷಿಣೆ ಮಾಡಿ ಕ್ಷತ್ರಿಯರನ್ನೆಲ್ಲ ನಿರ್ಮೂಲಗೊಳಿಸಿದುದೂ, ಕೈಲಾಸದಲ್ಲಿ ಶಿವಪಾರ್ವತಿಯರ ಸಂದರ್ಶನಕ್ಕೆ ತಡೆಮಾಡಿದ ಗಣೇಶನ ಒಂದು ದಂತವನ್ನು ಮುರಿದು 'ಏಕದಂತ' ನನ್ನಾಗಿ ಮಾಡಿದುದೂ ನಿರೂಪಿತವಾಗಿದೆ. ಬ್ರಾಹ್ಮತೇಜಸ್ಸಿನ ಮುಂದೆ ಕ್ಷಾತ್ರತೇಜಸ್ಸು ನಿಷ್ಫಲವಾಗುವುದೆಂದೂ, ದೈವ ಮತ್ತು ಪೌರುಷಗಳಲ್ಲಿ ದೈವವೇ ಬಲೀಯವೆಂದೂ ಇಲ್ಲಿಯ ಸನ್ನಿವೇಶಗಳಿಂದ ಸ್ಪಷ್ಟವಾಗುತ್ತದೆ.

ಅತಿಥಿಸತ್ಕಾರಕ್ಕೋಸ್ಕರವೇ ಕಾಮಧೇನುವನ್ನು ಹೊಂದಿದ್ದ ನಿಷ್ಕಾಮನಾದ ಜಮದಗ್ನಿಯನ್ನು ಕೊಂದು ಸ್ವಾರ್ಥಕ್ಕಾಗಿ ಕಾಮಧೇನುವನ್ನು ಹೊಂದಲೆಳಸಿದ ಕಾರ್ತವೀರ್ಯನು ಪರಶುರಾಮನ ಕ್ರೋಧಾಗ್ನಿಗೆ ತುತ್ತಾದುದಲ್ಲದೆ ಕ್ಷತ್ರಿಯರೆಲ್ಲರ ನಿರ್ಮೂಲಕ್ಕೆ ಕಾರಣನಾದನು. ಕಾರ್ತವೀರ್ಯನು ದತ್ತಾತ್ರೇಯನ ಪರಮ ಭಕ್ತನಾದರೂ ಅವನ ಸ್ವಾರ್ಥಪರತೆಯೇ ಅವನ ನಾಶಕ್ಕೆ ಮೂಲಕಾರಣವಾಯಿತು. ತಾನು ಅಪ್ರತಿಮವೀರನೆಂದೂ ಬ್ರಾಹ್ಮಣನಾದ ಪರಶುರಾಮನು ಬಲಹೀನನೆಂದೂ ಅಹಂಕಾರದಿಂದ ಮೆರೆಯುತ್ತಿದ್ದ ಕಾರ್ತವೀರ್ಯನು ಸಾಯುವ ಕಡೆಗಾಲದಲ್ಲಿ ಬ್ರಾಹ್ಮತೇಜಸ್ಸಿಗೆ ಮಣಿದನು.

ಮುಂಗೋಪಿಯಾದ ಪರಶುರಾಮನು ಯುಕ್ತಾಯುಕ್ತಾವಿಮರ್ಶೆಯಿಲ್ಲದೆ ಗಣಪತಿಯ ದಂತವನ್ನು ಮುರಿದರೂ ಕೂಡ ಪಶ್ಚಾತ್ತಾಪಾಗ್ನಿಯಿಂದ ಶುದ್ಧನಾಗಿ ನಿರಹಂಕಾರಿಯಾಗಿದ್ದುದರಿಂದ ದೈವಾನುಗ್ರಹಕ್ಕೆ ಪಾತ್ರನಾದನು. ಆದಕಾರಣ ನಿಸ್ವಾರ್ಥನಾಗಿ ಪಾರಮಾರ್ಥಿಕದೃಷ್ಟಿಯಿಂದಲೇ ಮಾನವನು ತನ್ನ ಬಾಳನ್ನು ಬಾಳಬೇಕು.

ಸ್ವಾರ್ಥವು ನ್ಯಾಯಬಾಹಿರವಾದುದು, ನಿಸ್ವಾರ್ಥವು ನ್ಯಾಯಸಮ್ಮತವಾದುದು. ನಿಸ್ವಾರ್ಥತೆಯು ಬಹಳ ಫಲಕಾರಿಯಾದುದರಿಂದ ಅದನ್ನು ಜನರು ತಾಳ್ಮೆಯಿಂದ ಸಾಧಿಸಬೇಕು.' ಎಂಬ ವಿವೇಕಾನಂದರ ಅಮರವಾಣಿಯನ್ನು ನೆನಪಿನಲ್ಲಿಟ್ಟುಕೊಂಡು ಮಾನವನು ನಿಷ್ಕಾಮನಾಗಿ ತನ್ನ ಕರ್ತವ್ಯದಲ್ಲಿ ಪರಾಯಣನಾಗಿರಬೇಕೆಂಬುದೇ ಈ ಸಂಪುಟದ ಸಂದೇಶ.

ಈ ರೀತಿಯಾದ ಮಹಾಪುರಾಣಗಳನ್ನು ಕರ್ಣಾಟಕ ಭಾಷೆಯಲ್ಲಿ ಅನುವಾದ ಮಾಡಿಸಿ ಪ್ರಜಾವೃಂದಕ್ಕೆ ಮಹದುಪಕಾರವಾಡುತ್ತಿರುವ ಪರಮೋದಾರಿಗಳೂ, ವಿದ್ವದಭಿಮಾನಿಗಳೂ ಕರ್ಣಾಟಕ ಸಿಂಹಾಸನಾಧೀಶ್ವರರೂ ಆದ **ಶ್ರೀಮಜ್ಜಯ ಚಾಮರಾಜೇಂದ್ರ ಒಡೆಯರ್ ಬಹದ್ದೂರ್, ಜಿ. ಸಿ. ಬಿ., ಜಿ. ಸಿ. ಎಸ್. ಐ.,** ಮಹಾಪ್ರಭುಗಳವರು ಬಂಧುಮಿತ್ರಕಳತ್ರಾದಿಗಳೊಡನೆ ಚಿರಕಾಲ ಸುಖವಾಗಿದ್ದು, ಧರ್ಮದಿಂದ ರಾಜ್ಯವನ್ನು ಪರಿಪಾಲಿಸುವಂತೆ ಅನುಗ್ರಹಿಸಲೆಂದು ಮಹಾಗಣಪತಿಯನ್ನು ಪ್ರಾರ್ಥಿಸುವ,

ವಿಕೃತಿ ಸಂ॥ ದ ಚೈತ್ರ ಕೃಷ್ಣ ದ್ವಾದಶೀ ಶುಕ್ರವಾರ

ಅನುವಾದಕ,
ಬಿ. ಎಸ್. ಕೃಷ್ಣಪ್ಪ.

ವಿ ಷ ಯಾ ನು ಕ್ರ ಮ ಣಿ ಕೆ

—॥ ಓಂ ॥—

—॥ ಶ್ರೀ ಗಣೇಶಾಯ ನಮಃ ॥—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಗಣಪತಿಖಂಡೇ

ಚತುರ್ವಿಂಶತಿತಮೋಽಧ್ಯಾಯಃ

॥ ನಾರದ ಉವಾಚ ॥

ನಾರಾಯಣ ಮಹಾಭಾಗ ಹರೇರಂಶಸಮುದ್ಭವ ।
ಸರ್ವಂ ಶ್ರುತಂ ತ್ವತ್ಪ್ರಸಾದಾದ್ಗಣೇಶಚರಿತಂ ಶುಭಂ ॥ ೧ ॥

ದಂತದ್ವಯಯುತಂ ವಕ್ತ್ರಂ ಗಜರಾಜಸ್ಯ ಬಾಲಕೇ ।
ವಿಷ್ಣುನಾ ಯೋಜಿತಂ ಬ್ರಹ್ಮನ್ನೇಕದಂತಃ ಕಥಂ ಶಿಶುಃ ॥ ೨ ॥

ಕುತೋ ಗತೋಽಸ್ಯ ದಂತೋಽನ್ಯಸ್ತದ್ಭವಾನ್ವಕ್ತುಮರ್ಹತಿ ।
ಸರ್ವೇಶ್ವರಸ್ತ್ವಂ ಸರ್ವಜ್ಞಃ ಕೃಪಾವಾನ್ಭಕ್ತವತ್ಸಲಃ ॥ ೩ ॥

ಇಪ್ಪತ್ತನಾಲ್ಕನೆಯ ಅಧ್ಯಾಯವು

೧. ನಾರದ:—ಶ್ರೀಹರಿಯ ಅಂಶಸಂಭವನಾದ ಎಲೈ ನಾರಾಯಣ ಮಹರ್ಷಿಯೇ, ನಿನ್ನ ಅನುಗ್ರಹದಿಂದ ಗಣಪತಿಯ ದಿವ್ಯಚರಿತ್ರೆಯನ್ನು ಕೇಳಿದೆನು.

೨. ಶ್ರೀಮನ್ನಾರಾಯಣನು ಎರಡು ದಂತಗಳಿರುವ ಆನೆಯ ಮುಖವನ್ನು ಬಾಲಕನಾದ ಗಣಪತಿಯ ಮುಂಡಕ್ಕೆ ಜೋಡಿಸಿದನಲ್ಲವೇ? ಹೀಗಿರುವಾಗ ಗಣಪತಿಯು ಏಕದಂತನಾದುದು ಹೇಗೆ ?

೩. ಆ ಗಣಪತಿಯ ಮತ್ತೊಂದು ದಂತವು ಏನಾಯಿತು ? ಸರ್ವಜ್ಞನೂ, ಭಕ್ತವತ್ಸಲನೂ, ದಯಾಮಯನೂ, ಆದ ನೀನು ಆ ವಿಚಾರವನ್ನು ನನಗೆ ತಿಳಿಸು.

॥ ಸೂತ ಉವಾಚ ॥

ನಾರದಸ್ಯ ವಚಃ ಶ್ರುತ್ವಾ ಸ್ಮೇರಾನನಸರೋರುಹಃ ।
ಏಕದಂತಸ್ಯ ಚರಿತಂ ಪ್ರವಕ್ತುಮುಪಚಕ್ರಮೇ ॥ ೪ ॥

॥ ನಾರಾಯಣ ಉವಾಚ ॥

ಶ್ರಣು ನಾರದ ವಕ್ಷ್ಯೇಽಹಮಿತಿಹಾಸಂ ಪುರಾತನಂ ।
ಏಕದಂತಸ್ಯ ಚರಿತಂ ಸರ್ವಮಂಗಲಮಂಗಲಂ ॥ ೫ ॥

ಏಕದಾ ಕಾರ್ತವೀರ್ಯಾರ್ಜುನಶ್ಚ ಜಗಾಮ ಮೃಗಯಾಂ ಮುನೇ ।
ಮೃಗಾನ್ನಿಹತ್ಯ ಬಹುಲಾನ್ಪರಿಶ್ರಾಂತೋ ಬಭೂವ ಸಃ ॥ ೬ ॥

ನಿಶಾಮುಖೇ ದಿನೇಽತೀತೇ ತತ್ರ ತಸ್ಥೌ ವನೇ ನೃಪಃ ।
ಜಮದಗ್ನ್ಯಾಶ್ರಮಾಭ್ಯಾಶೇ ಚೋಪೋಷ್ಯಾನೀಕಸಂಯುತಃ ॥ ೭ ॥

---

೪. ಸೂತ:— ನಾರದನ ಪ್ರಶ್ನೆಯನ್ನು ಕೇಳಿ ನಾರಾಯಣಋಷಿಯು ಮುಖಾರವಿಂದದಲ್ಲಿ ಮಂದಹಾಸವನ್ನು ಬೀರುತ್ತ ಏಕದಂತನ ಚರಿತ್ರೆಯನ್ನು ಹೇಳಲುಪಕ್ರಮಿಸಿದನು.

೫. ನಾರಾಯಣ :—ಎಲೈ ನಾರದನೇ, ಮಂಗಳಗಳಿಗೆಲ್ಲ ಮಂಗಳವೂ ಪುರಾತನ ಇತಿಹಾಸವೂ ಆದ ಏಕದಂತನ ಚರಿತ್ರೆಯನ್ನು ಹೇಳುವೆನು. ಕೇಳು.

೬. ಒಂದೊಮ್ಮೆ ಕಾರ್ತವೀರ್ಯಾರ್ಜುನನು ಬೇಟೆಗಾಗಿ ಕಾಡಿಗೆ ಹೋದನು. ಅಲ್ಲಿ ಅನೇಕ ಮೃಗಗಳನ್ನು ಕೊಂದು ಬಹಳ ಬಳಲಿದನು.

೭. ಹಗಲು ಕಳೆದು ಸಾಯಂಕಾಲವಾಗಲು ಆ ರಾಜನು ಜಮದಗ್ನಿ ಮಹರ್ಷಿಯ ಆಶ್ರಮ ಸಮೀಪದಲ್ಲಿರುವ ಆ ವನದಲ್ಲಿಯೇ ಸೈನ್ಯಸಮೇತನಾಗಿ ಉಪವಾಸದಿಂದಿದ್ದನು.

ಸ್ನಾತಃ ಸರೋವರೇ ರಾಜಾ ಸ್ನಾತಃ ಶುಚಿರಲಂಕೃತಃ ।
ತದಾತ್ರೇಯೇನ ದತ್ತಂ ಚ ಜಜಪದ್ಭಕ್ತಿತೋ ಮನುಂ ॥ ೮ ॥

ಮುನಿರ್ದದರ್ಶ ರಾಜಾನಂ ಶುಷ್ಕಕಂಠೌಷ್ಠತಾಲುಕಂ ।
ಪ್ರೀತ್ಯಾದರೇಣ ಮೃದುಲಂ ಪಪ್ರಚ್ಛ ಕುಶಲಂ ಮುನಿಃ ॥ ೯ ॥

ನನಾಮ ಸಂಭ್ರಮಾದ್ರಾಜಾ ಮುನಿಂ ಸೂರ್ಯಸಮಪ್ರಭಂ ।
ಸ ಚ ತಸ್ಮೈ ದದೌ ಪ್ರೀತ್ಯಾ ಪ್ರಣತಾಯ ಶುಭಾಶಿಷಃ ॥ ೧೦ ॥

ವೃತ್ತಾಂತಂ ಕಥಯಾಮಾಸ ರಾಜಾ ಚಾನಶನಾದಿಕಂ ।
ಸಂಭ್ರಮೇಣೈವ ಮುನಿನಾ ತ್ರಸ್ತೋ ರಾಜಾ ನಿಮಂತ್ರಿತಃ ॥ ೧೧ ॥

ವಿಜ್ಞಾಪ್ಯ ತಂ ಮುನಿಶ್ರೇಷ್ಠಃ ಪ್ರಯಯೌ ಸ್ವಾಲಯಂ ಮುದಾ ।
ಏತದ್ವೃತ್ತಂ ಕಾಮಧೇನುಂ ಕಥಯಾಮಾಸ ಭೀತವತ್ ॥ ೧೨ ॥

---

೮. ಉಷಃಕಾಲದಲ್ಲೆದ್ದು ರಾಜನು ಸರೋವರದಲ್ಲಿ ಮಿಂದು ಶುಭ್ರವಾದ ವಸ್ತ್ರಗಳನ್ನುಟ್ಟು ಅಲಂಕಾರಗಳನ್ನು ತೊಟ್ಟು ದತ್ತಾತ್ರೇಯನು ತನಗುಪದೇಶಿಸಿದ ಮಂತ್ರವನ್ನು ಜಪಿಸಿದನು.

೯. ಆ ಸಮಯಕ್ಕೆ ಸರಿಯಾಗಿ ಜಮದಗ್ನಿಯು ಬಂದು ಪ್ರೀತ್ಯಾದರಗಳಿಂದ ಆ ರಾಜನನ್ನು ಕುಶಲಪ್ರಶ್ನೆ ಮಾಡಿದನು.

೧೦. ರಾಜನು ಸಂಭ್ರಮದಿಂದ ಸೂರ್ಯನಂತೆ ತೇಜಸ್ವಿಯಾದ ಆ ಋಷಿಗೆ ನಮಸ್ಕರಿಸಲು ಆ ಮುನಿಯೂ ಕೂಡ ಪ್ರೀತಿಯಿಂದ ಅವನಿಗೆ ಮಂಗಳಾಶೀರ್ವಾದ ಮಾಡಿದನು.

೧೧. ಅನಂತರ ರಾಜನು ಪರಿವಾರದೊಡನೆ ಉಪವಾಸದಿಂದಿರುವ ವೃತ್ತಾಂತವನ್ನು ತಿಳುಹಿದನು. ಆ ಮಹರ್ಷಿಯೂ ಕೂಡ ಅತ್ಯಾದರದಿಂದ ಆ ರಾಜನನ್ನು ಪರಿವಾರದೊಡನೆ ಭೋಜನಕ್ಕೆ ಕರೆದನು.

೧೨. ಇಂತು ರಾಜನಿಗೆ ಆಮಂತ್ರಣಕೊಟ್ಟು ತನ್ನ ಮಂದಿರಕ್ಕೆ ಹಿಂತಿರುಗಿದ ಆ ಮುನಿವರ್ಯನು ಭಯವಿಸ್ಮಯದಿಂದ ಈ ಸಮಾಚಾರವನ್ನು ತನ್ನಲ್ಲಿದ್ದ ಕಾಮಧೇನುವಿಗೆ ವಿಜ್ಞಾಪಿಸಿದನು.

ಉವಾಚ ಸಾ ಮುನಿಂ ಭೀತಂ ಭಯಂ ಕಿಂ ತೇ ಮಯಿ ಸ್ಥಿತೇ ।
ಜಗದ್ಭೋಜಯಿತುಂ ಶಕ್ತಸ್ತ್ವಂ ಮಯಾ ಕೋ ನೃಪೋ ಮುನೇ ॥ ೧೩ ॥

ರಾಜಭೋಜನಯೋಗ್ಯಾರ್ಹಂ ಯದ್ಯದ್ದ್ರವ್ಯಂ ಪ್ರಯಾಚಸೇ ।
ಸರ್ವಂ ತುಭ್ಯಂ ಪ್ರದಾಸ್ಯಾಮಿ ತ್ರಿಷು ಲೋಕೇಷು ದುರ್ಲಭಂ ॥ ೧೪ ॥

ಸೌವರ್ಣಾನಿ ಚ ರೌಪ್ಯಾಣಿ ಪಾತ್ರಾಣಿ ವಿವಿಧಾನಿ ಚ ।
ಭೋಜನಾರ್ಹಾಣ್ಯಸಂಖ್ಯಾನಿ ಪಾಕಪಾತ್ರಾಣಿ ಯಾನಿ ಚ ॥ ೧೫ ॥

ಪಾತ್ರಾಣಿ ಸ್ವಾದು ಪೂರ್ಣಾನಿ ಪ್ರದದೌ ಮುನಯೇ ಚ ಸಾ ।
ನಾನಾವಿಧಾನಿ ಸ್ವಾದೂನಿ ಪರಿಪಕ್ವಫಲಾನಿ ಚ ॥ ೧೬ ॥

ಪನಸಾಮ್ರಶ್ರೀಫಲಾನಿ ನಾರಿಕೇಲಾದಿಕಾನಿ ಚ ।
ರಾಶೀಭೂತಾನ್ಯಸಂಖ್ಯಾನಿ ಸ್ವಾದು ಲಡ್ಡುಕರಾಶಯಃ ॥ ೧೭ ॥

---

೧೩. ಭಯಗೊಂಡಿರುವ ಮುನಿಯನ್ನು ನೋಡಿ ಕಾಮಧೇನುವು 'ನಾನಿರುವಾಗ ನಿನಗೇತರ ಭಯ, ನನ್ನಿಂದ ನೀನು ಜಗತ್ತಿಗೇ ಊಟಬಡಿಸಲು ಶಕ್ತನಾಗಿರುವಾಗ ಆ ರಾಜನನ್ನು ತೃಪ್ತಿಪಡಿಸಲಾರೆಯಾ?' ಎಂದಿತು.

೧೪. ರಾಜಭೋಜನಕ್ಕೆ ಯೋಗ್ಯವಾದ ಯಾವ ಯಾವ ಪದಾರ್ಥಗಳನ್ನು ಬೇಡಿದರೂ. ಆಯಾ ಪದಾರ್ಥಗಳು ತ್ರಿಲೋಕದಲ್ಲಿ ದುರ್ಲಭವಾದರೂ ನಾನು ಅವುಗಳನ್ನು ಕೊಡುವೆನು.

೧೫. ಭೋಜನಕ್ಕೆ ಯೋಗ್ಯವಾದ ಚಿನ್ನ ಮತ್ತು ಬೆಳ್ಳಿಯ ವಿವಿಧ ಪಾತ್ರೆಗಳನ್ನೂ, ಅಡಿಗೆಗೆ ಬೇಕಾದ ಅನೇಕ ಪಾತ್ರೆಗಳನ್ನೂ ನಾನು ಒದಗಿಸಿಕೊಡುವೆನು.

೧೬. ಹೀಗೆ ಹೇಳಿ ಆ ಕಾಮಧೇನುವು ಸಿಹಿತಿಂಡಿಗಳಿಂದ ತುಂಬಿದ ಕೆಲವು ಪಾತ್ರೆಗಳನ್ನೂ, ಪಕ್ವವೂ ಸಿಹಿಯೂ ಆದ ಕೆಲವು ಫಲಗಳನ್ನೂ ಆ ಮುನಿಗೆ ಕೊಟ್ಟಿತು.

೧೭. ಅಂತೆಯೇ ಹಲಸು, ಮಾವು, ಬಿಲ್ವ ಮತ್ತು ನಾರಿಕೇಳ ಮುಂತಾದ ಅಸಂಖ್ಯ ಫಲಗಳೂ, ಸಿಹಿಯಾದ ಲಾಡುಉಂಡೆಯ ರಾಶಿಗಳೂ ಸಿದ್ಧವಾದವು.

ಯವಗೋಧೂಮಚೂರ್ಣಾನಾಂ ಭಕ್ಷ್ಯಾಣಿ ವಿವಿಧಾನಿ ಚ ।
ಪಕ್ವಾನ್ನಾನಾಂ ಪರ್ವತಾಂಶ್ಚ ಪರಮಾನ್ನಸ್ಯ ಕಂದರಾನ್ ॥ ೧೮ ॥

ದುಗ್ಧಾನಾಂ ಚ ಘೃತಾನಾಂ ಚ ನದೀರ್ದಧ್ನಾಂ ದದೌ ಮುದಾ ।
ಶರ್ಕರಾಣಾಂ ತಥಾ ರಾಶಿಂ ಮೋದಕಾನಾಂ ಚ ಪರ್ವತಾನ್ ॥ ೧೯ ॥

ಪೃಥುಕಾನಾಂ ಸುಶೀಲಾನಾಂ ಪರ್ವತಾನ್ಸ್ವದದೌ ಮುದಾ ।
ತಾಂಬೂಲಂ ಚ ದದೌ ಪೂರ್ಣಂ ಕರ್ಪೂರಾದಿ ಸುವಾಸಿತಂ ॥ ೨೦ ॥

ನೃಪಯೋಗ್ಯಂ ಕೌತುಕಾಚ್ಚ ಸುಂದರಂ ವಸ್ತ್ರಭೂಷಣಂ ।
ಮುನಿಃ ಸಂಭೃತಸಂಭಾರೋ ದತ್ವಾ ದ್ರವ್ಯಂ ಮನೋಹರಂ ॥ ೨೧ ॥

ಭೋಜಯಾಮಾಸ ರಾಜಾನಂ ಸಸೈನ್ಯಮಪಿ ಲೀಲಯಾ ।
ಯದ್ಯತ್ಸುದುರ್ಲಭಂ ವಸ್ತು ಪರಿಪೂರ್ಣಂ ನೃಪೇಶ್ವರಃ ॥ ೨೨ ॥

೧೮–೧೯ ಅಕ್ಕಿ ಮತ್ತು ಗೋಧಿಹಿಟ್ಟಿನಿಂದ ಮಾಡಿದ ವಿವಿಧ ಭಕ್ಷ್ಯಗಳೂ ಪಕ್ವಾನ್ನದ ಪರ್ವತಗಳೂ, ಪಾಯಸದ ಮಡುಗಳೂ, ಹಾಲು, ಮೊಸರು ಮತ್ತು ತುಪ್ಪದ ನದಿಗಳೂ, ಸಕ್ಕರೆಯ ರಾಶಿಗಳೂ ಮೋದಕದ ಪರ್ವತಗಳೂ ಆ ಕಾಮ ಧೇನುವಿನಿಂದ ಸೃಷ್ಟವಾದುವು.

೨೦. ಅವಲಕ್ಕಿ, ಅರಳು ಮುಂತಾದವುಗಳ ರಾಶಿಯನ್ನೂ, ಪಚ್ಚಕರ್ಪೂರಾದಿಗಳಿಂದ ಸುಸಂಸ್ಕೃತವಾದ ತಾಂಬೂಲವನ್ನೂ ಆ ಕಾಮಧೇನುವು ಕೊಟ್ಟಿತು.

೨೧–೨೨ ರಾಜಮರ್ಯಾದೆಗೆ ಯೋಗ್ಯವಾದ ಸುಂದರ ವಸ್ತ್ರಾಭರಣಗಳೂ ಸೃಷ್ಟವಾದನಂತರ, ಸಕಲ ಸಾಮಗ್ರಿಗಳ ಪರಿಪೂರ್ಣತೆಯನ್ನು ಕಂಡು ಮುನಿಯು ಸೈನ್ಯಸಹಿತನಾದ ರಾಜನನ್ನು ಲೀಲಾಮಾತ್ರದಿಂದ ತೃಪ್ತಿಗೊಳಿಸಿದನು. ಅತ್ಯಂತ ದುರ್ಲಭವಾದ ವಸ್ತುಗಳೂ ರಾಜನಿಗೆ ಸಮೃದ್ಧಿಯಾಗಿ ದೊರೆತವು.

ಜಗಾಮ ವಿಸ್ಮಯಂ ರಾಜಾ ದೃಷ್ಟ್ವಾ ಪಾತ್ರಾಣ್ಯುವಾಚ ಹ ।

॥ ರಾಜೋವಾಚ ॥

ದ್ರವ್ಯಾಣ್ಯೇತಾನಿ ಸಚಿವ ದುರ್ಲಭಾನ್ಯಶ್ರುತಾನಿ ಚ ॥ ೨೩ ॥

ಮಮಾಸಾಧ್ಯಾನಿ ಸಹಸಾ ಕ್ವಾಗತಾನ್ಯವಲೋಕಯ ।
ನೃಪಾಜ್ಞಯಾ ಚ ಸಚಿವಃ ಸರ್ವಂ ದೃಷ್ಟ್ವಾ ಮುನೇರ್ಗೃಹೇ ॥ ೨೪ ॥

ರಾಜಾನಂ ಕಥಯಾಮಾಸ ವೃತ್ತಾಂತಂ ಮಹದದ್ಭುತಂ ।

॥ ಸಚಿವ ಉವಾಚ ॥

ದೃಷ್ಟಂ ಸರ್ವಂ ಮಹಾರಾಜ ನಿಬೋಧ ಮುನಿಮಂದಿರಂ ॥ ೨೫ ॥

ವಹ್ನಿಕುಂಡಂ ಯಜ್ಞಕಾಷ್ಠಕುಶಪುಷ್ಪಫಲಾನ್ವಿತಂ ।
ಕೃಷ್ಣಚರ್ಮಸ್ರುವಸ್ರುಗ್ಭಿಃ ಶಿಷ್ಯಸಂಘೈಶ್ಚ ಸಂಕುಲಂ ॥ ೨೬ ॥

---

೨೩. ಭೋಜನ ಪಾತ್ರೆಗಳೂ ಇನ್ನೂ ತುಂಬಿರುವುದನ್ನು ಕಂಡು ವಿಸ್ಮಯಗೊಂಡ ರಾಜನು ತನ್ನ ಮಂತ್ರಿಯನ್ನು ಕುರಿತು ಈ ರೀತಿ ಹೇಳಿದನು. ರಾಜ :—ಎಲೈ ಸಚಿವೋತ್ತಮನೇ ಇಲ್ಲಿ ಬಡಿಸಿರುವ ದ್ರವ್ಯಗಳೆಲ್ಲವೂ, ಅಪೂರ್ವವೂ ದುರ್ಲಭವೂ ಆದುದು.

೨೪. ನನ್ನಂಥವನಿಗೇ ದುರ್ಲಭವಾದ ಈ ವಸ್ತುಗಳೆಲ್ಲಿಂದ ಬಂತೆಂಬುದನ್ನು ನೋಡಿಹೇಳು. ರಾಜನ ಅಪ್ಪಣೆಯಂತೆ ಮಂತ್ರಿವರ್ಯನು ಮುನಿಯ ಮಂದಿರವನ್ನು ಪರಿಶೀಲಿಸಿದನು.

೨೫. ಅನಂತರದಲ್ಲಿ ರಾಜನನ್ನು ಕುರಿತು ಆಶ್ಚರ್ಯಕರವಾದ ಸಮಾಚಾರವನ್ನು ಹೇಳಿದನು. ಸಚಿವ :—ಎಲೈ ಮಹಾರಾಜನೇ ಮುನಿಯ ಮಂದಿರದಲ್ಲಿ ನೋಡಿದ ಅತ್ಯದ್ಭುತವನ್ನು ಹೇಳುವೆನು, ಕೇಳು.

೨೬. ಯಜ್ಞಕುಂಡವು ಸಮಿತ್ತು ದರ್ಭೆಗಳಿಂದಲೂ, ಫಲಪುಷ್ಪಗಳಿಂದಲೂ, ಪರಿವೃತವಾಗಿ, ಕೃಷ್ಣಾಜಿನದಲ್ಲಿ ಕುಳಿತು ಸ್ರುಕ್‌ಸ್ರುವಗಳಿಂದ ಹೋಮಮಾಡುತ್ತಿದ್ದ ಶಿಷ್ಯಸಮೂಹದಿಂದ ಸಂಕುಲವಾಗಿದೆ.

ತೈಜಸಾಧಾರಸಸ್ಯಾದಿ ಸರ್ವಸಂಪದ್ವಿವರ್ಜಿತಂ ।
ವೃಕ್ಷಚರ್ಮಪರೀಧಾನಾ ದೃಷ್ಟಾಃ ಸರ್ವೇ ಜಟಾಧರಾಃ ॥ ೨೭ ॥

ಗೃಹೈಕದೇಶೇ ದೃಷ್ಟ್ವಾ ಸಾ ಕಪಿಲೈಕಾ ಮನೋಹರಾ ।
ಚಾರ್ವಂಗೀ ಚಂದ್ರವರ್ಣಾಭಾ ರಕ್ತಪಂಕಜಲೋಚನಾ ॥ ೨೮ ॥

ಜ್ವಲಂತೀ ತೇಜಸಾ ತತ್ರ ಪೂರ್ಣಚಂದ್ರಸಮಪ್ರಭಾ ।
ಸರ್ವಸಂಪದ್ಗುಣಾಧಾರಾ ಸಾಕ್ಷಾದಿವ ಹರಿಪ್ರಿಯಾ ॥ ೨೯ ॥

ಇತ್ಯೇವಂ ಬೋಧಿತೋ ರಾಜಾ ದುರ್ಬುದ್ಧಿಃ ಸಚಿವಾಜ್ಞಯಾ ।
ಮುನಿಂ ಯಯಾಚೇ ತಾಂ ಧೇನುಂ ನಿಬದ್ಧಃ ಕಾಲಪಾಶತಃ ॥ ೩೦ ॥

ಕಿಂ ವಾ ಪುಣ್ಯಂ ಚ ಕಾ ಬುದ್ಧಿಃ ಕಃ ಕಾಲಃ ಸರ್ವತೋ ಬಲೀ ।
ಪುಣ್ಯವಾನ್ಬುದ್ಧಿಮಾನ್ ದೈವಾದ್ರಾಜೇಂದ್ರೋಽಯಾಚತದ್ದ್ವಿಜಂ ॥ ೩೧ ॥

---

೨೭. ತೇಜಸ್ಸೇ ಆಧಾರವಾದ ಯಾವ ಸಸ್ಯಸಂಪತ್ತೂ ಆ ಆಶ್ರಮದಲ್ಲಿಲ್ಲ. ಅಲ್ಲಿದ್ದ ಋಷಿಗಳೆಲ್ಲರೂ ನಾರುಬಟ್ಟೆಯನ್ನುಟ್ಟು ಜಟಾಧಾರಿಗಳಾಗಿದ್ದಾರೆ.

೨೮. ಪರ್ಣಶಾಲೆಯ ಒಂದು ಭಾಗದಲ್ಲಿ ಚಂದ್ರನಂತೆ ಕಾಂತಿಮತಿಯೂ ಮನೋಹರವೂ ಆದ ಒಂದು ಕಾಮಧೇನುವು ಕೆಂದಾವರೆಯ ದಳದಂತಿರುವ ಕಣ್ಣುಗಳಿಂದ ಪ್ರಕಾಶಿಸುತ್ತಿತ್ತು.

೨೯. ಪೂರ್ಣಚಂದ್ರನಿಗೆ ಸಮಾನವಾದ ಪ್ರಭೆಯಿಂದ ಕೂಡಿದ ಆ ಕಾಮಧೇನುವು ಸಕಲಸಂಪತ್ತಿಗೂ ಆಧಾರಳೂ, ಶ್ರೀಹರಿಯ ಪ್ರಿಯಳೂ ಆದ ಲಕ್ಷ್ಮೀದೇವಿಯಂತಿತ್ತು.

೩೦. ಈ ಸಮಾಚಾರವನ್ನು ಕೇಳಿ ದುರಾಶೆಗೊಂಡ ಆ ರಾಜನು ಮಂತ್ರಿಯಿಂದ ಪ್ರೇರಿತನಾಗಿ, ಕಾಲಪಾಶಕ್ಕೆ ಸಿಲುಕಿ, ಆ ಕಾಮಧೇನುವನ್ನು ತನಗೆ ಕೊಡಬೇಕೆಂದು ಮುನಿಯನ್ನು ಬೇಡಿದನು.

೩೧. ಎಲ್ಲಕ್ಕಿಂತಲೂ ಬಲಿಷ್ಠವಾದ ಕಾಲದಮುಂದೆ ಪೂರ್ವಪುಣ್ಯವಾಗಲೀ, ಬುದ್ಧಿಯಾಗಲೀ ಏನುಮಾಡೀತು? ಏಕೆಂದರೆ ಪುಣ್ಯಶಾಲಿಯೂ, ಬುದ್ಧಿವಂತನೂ ಆದ ಆ ಕಾರ್ತವೀರ್ಯಾರ್ಜುನನೂ ಕೂಡ ಕಾಲವಶದಿಂದ ಮುನಿಯನ್ನು ಬೇಡಿದನು.

ಪುಣ್ಯಾತ್ಪ್ರಜಾಯತೇ ಕರ್ಮ ಪುಣ್ಯರೂಪಂ ಚ ಭಾರತೇ ।
ಪಾಪಾತ್ಪ್ರಜಾಯತೇ ಕರ್ಮ ಪಾಪರೂಪಂ ಭಯಾವಹಂ ॥ ೩೨ ॥

ಪುಣ್ಯಾತ್ಕೃತ್ವಾ ಸ್ವರ್ಗಭೋಗಂ ಜನ್ಮ ಪುಣ್ಯಸ್ಥಲೇ ನೃಣಾಂ ।
ಪಾಪಾದ್ಭುಕ್ತ್ವಾ ಚ ನರಕಂ ಕುತ್ಸಿತಂ ಜನ್ಮ ಜೀವಿನಾಂ ॥ ೩೩ ॥

ಜೀವಿನಾಂ ನಿಷ್ಕೃತಿರ್ನಾಸ್ತಿ ಸ್ಥಿತೇ ಕರ್ಮಣಿ ನಾರದ ।
ತೇನ ಕುರ್ವಂತಿ ಸಂತಶ್ಚ ಸಂತತಂ ಕರ್ಮಣಃ ಕ್ಷಯಂ ॥ ೩೪ ॥

ಸಾ ವಿದ್ಯಾ ತತ್ತಪೋಜ್ಞಾನಂ ಸ ಗುರುಃ ಸ ಚ ಬಾಂಧವಃ ।
ಸಾ ಮಾತಾ ಸ ಪಿತಾ ಪುತ್ರಸ್ತತ್ಕ್ಷಯಂ ಕಾರಯೇತ್ತು ಯಃ ॥ ೩೫ ॥

ಜೀವಿನಾಂ ದಾರುಣೋ ರೋಗಃ ಕರ್ಮಭೋಗಃ ಶುಭಾಶುಭಃ ।
ಭಕ್ತವೈದ್ಯಸ್ತಂ ನಿಹಂತಿ ಕೃಷ್ಣಭಕ್ತಿರಸಾಯನಾತ್ ॥ ೩೬ ॥

---

೩೨. ಭರತಖಂಡದಲ್ಲಿರುವವರಿಗೆ ಪುಣ್ಯದಿಂದ ಪುಣ್ಯಕರ್ಮವೂ. ಪಾಪದಿಂದ ಪಾಪಕರ್ಮವೂ ನಿಶ್ಚಿತವಾಗಿ ಸಂಘಟಿಸುವುದು.

೩೩. ಮನುಜರಿಗೆ ಪುಣ್ಯಕರ್ಮದಿಂದ ಸ್ವರ್ಗಭೋಗವು ಲಭಿಸಿ, ಪುಣ್ಯಸ್ಥಳದಲ್ಲಿ ಪುನರ್ಜನ್ಮವು ದೊರೆಯುವುದು. ಅಂತೆಯೇ ಪಾಪಕರ್ಮವನ್ನು ಮಾಡಿ ನರಕಯಾತನೆಯನ್ನನುಭವಿಸಿದ ನಂತರ ನೀಚಯೋನಿಯಲ್ಲಿ ಜನ್ಮದೊರೆಯುವುದು.

೩೪. ಎಲೈ ನಾರದನೇ, ಜನ್ಮಾಂತರದ ಕರ್ಮಸವೆಯುವವರೆಗೂ ಪ್ರಾಣಿಗಳಿಗೆ ಮೋಕ್ಷದೊರೆಯುವುದಿಲ್ಲ. ಆದುದರಿಂದ ಸತ್ಪುರುಷರು ಕರ್ಮನಾಶಕ್ಕಾಗಿ ಸಂತತವೂ ಪ್ರಯತ್ನಿಸುವರು.

೩೫. ಕರ್ಮಕ್ಷಯಕ್ಕೆ ಕಾರಣವಾದುದೇ ನಿಜವಾದ ವಿದ್ಯೆ, ತಪಸ್ಸು ಮತ್ತು ಜ್ಞಾನವೆನಿಸುವುದು. ಯಾರು ಕರ್ಮಕ್ಷಯದ ಮಾರ್ಗವನ್ನು ಬೋಧಿಸುವರೋ ಅವರೇ ನಿಜವಾದ ಗುರುಗಳು, ಬಂಧುಗಳು, ತಂದೆತಾಯಿಗಳು ಮತ್ತು ಪುತ್ರರೆನಿಸಿರುವರು.

೩೬. ಶುಭಾಶುಭಕರ್ಮಗಳ ಫಲಭೋಗವೆಂಬುದೇ ಜೀವಿಗಳಿಗೆ ದಾರುಣವಾದ ರೋಗವು. ಆ ರೋಗವನ್ನು ವಿಷ್ಣುಭಕ್ತನೆಂಬ ವೈದ್ಯನು ಭಕ್ತಿಯೆಂಬ ರಸಾಯನವನ್ನು ಪಾನಮಾಡಿ ಪರಿಹರಿಸಿಕೊಳ್ಳುವನು.

ಮಾಯಾ ದದಾತಿ ತಾಂ ಭಕ್ತಿಂ ಪ್ರತಿಜನ್ಮನಿ ಸೇವಿತಾ ।
ಪರಿತುಷ್ಟಾ ಜಗದ್ಧಾತ್ರೀ ಭಕ್ತೇಭ್ಯೋ ಬುದ್ಧಿದಾಯಿನೀ ॥ ೩೭ ॥

ಪರಾ ಪರಮಭಕ್ತಾಯ ಮಾಯಾ ಯಸ್ಮೈ ದದಾತಿ ಚ ।
ಮಾಯಾಂ ತಸ್ಮೈ ಮೋಹಯಿತುಂ ನ ವಿವೇಕಂ ಕದಾಚನ ॥ ೩೮ ॥

ಮಾಯಾವಿಮೋಹಿತೋ ರಾಜಾ ಮುನಿಮಾನೀಯ ಯತ್ನತಃ ।
ಉವಾಚ ವಿನಯಾದ್ಭಕ್ತ್ಯಾ ಕೃತಾಂಜಲಿಪುಟೋ ಮುದಾ ॥ ೩೯ ॥

॥ ರಾಜೋವಾಚ ॥

ದೇಹಿ ಭಿಕ್ಷಾಂ ಕಲ್ಪತರೋ ಕಾಮಧೇನುಂ ಚ ಕಾಮದಾಂ ।
ಮಹ್ಯಂ ಭಕ್ತಾಯ ಭಕ್ತೇಶ ಭಕ್ತಾನುಗ್ರಹಕಾರಕ ॥ ೪೦ ॥

ಯುಷ್ಮದ್ವಿಧಾನಾಂ ದಾತೄಣಾಮದೇಯಂ ನಾಸ್ತಿ ಭಾರತೇ ।
ದಧೀಚಿರ್ದೇವತಾಭ್ಯಶ್ಚ ದದೌ ಸ್ವಾಸ್ಥಿ ಪುರಾ ಶ್ರುತಂ ॥ ೪೧ ॥

---

೩೭) ಜಗನ್ಮಾತೆಯಾದ ಮಾಯೆಯು ಭಕ್ತರ ಅನೇಕ ಜನ್ಮಗಳ ಸೇವೆಯಿಂದ ಸಂತುಷ್ಟಳಾಗಿ ಅವರಿಗೆ ಕೃಷ್ಣಭಕ್ತಿಯನ್ನು ಅನುಗ್ರಹಿಸುವಳು.

(೩೮) ಭಕ್ತರಲ್ಲದವರನ್ನು ಮಾಯೆಯು ಮೋಹಗೊಳಿಸಿ ಅಜ್ಞಾನಾಂಧಕಾರದಲ್ಲಿ ಮುಳುಗಿಸುವಳು. ಅಂಥವರಿಗೆ ಎಂದೆಂದಿಗೂ ವಿವೇಕವುಂಟಾಗುವುದಿಲ್ಲ.

೩೯. ಕಾರ್ತವೀರ್ಯಾರ್ಜುನನೂ ಕೂಡ ಮಾಯೆಯ ಮೋಹಜಾಲಕ್ಕೆ ಸಿಲುಕಿ ಜಮದಗ್ನಿಮಹರ್ಷಿಯನ್ನು ಕರೆಸಿ, ಕೈಮುಗಿದುಕೊಂಡು ವಿನಯಪೂರ್ವಕವಾಗಿ ಇಂತು ವಿಜ್ಞಾಪಿಸಿಕೊಂಡನು.

೪೦. ರಾಜ :—ಕಲ್ಪವೃಕ್ಷದಂತೆ ಉದಾರಿಯೂ, ಭಕ್ತಾನುಗ್ರಹದಾಯಕನೂ ಆದ ಎಲೈ ಮಹರ್ಷಿಯೇ, ನಿನ್ನ ಭಕ್ತನಾದ ನನಗೆ, ಬೇಡಿದ ಇಷ್ಟಾರ್ಥವನ್ನು ಕೊಡುವ ಕಾಮಧೇನುವನ್ನು ದಯಪಾಲಿಸು.

೪೧. ತಮ್ಮಂಥ ದಾನಶೂರರು ದಾನಮಾಡಬಾರದ ವಸ್ತುವು ಭರತಖಂಡದಲ್ಲಿಯೇ ಇಲ್ಲ. ಹಿಂದೆ ದಧೀಚಿಯು ದೇವತೆಗಳಿಗೆ ತನ್ನ ಶರೀರದ ಮೂಳೆಯನ್ನೇ ದಾನಮಾಡಿದನೆಂದು ಹೇಳುವರು.

ಭ್ರೂಭಂಗಲೀಲಾಮಾತ್ರೇಣ ತಪೋರಾಶೇ ತಪೋಧನ ।
ಸಮೂಹಂ ಕಾಮಧೇನೂನಾಂ ಸ್ರಷ್ಟುಂ ಶಕ್ತೋಽಸಿ ಭಾರತೇ ॥ ೪೨ ॥

॥ ಮುನಿರುವಾಚ ॥

ಅಹೋ ವ್ಯತಿಕ್ರಮಂ ರಾಜನ್ಬ್ರವೀಷಿ ಶಠ ವಂಚಕ ।
ದಾನಂ ದಾಸ್ಯಾಮಿ ವಿಪ್ರೋಽಹಂ ಕ್ಷತ್ರಿಯಾಯ ಕಥಂ ನೃಪ ॥ ೪೩ ॥

ಕೃಷ್ಣೇನ ದತ್ತಾ ಗೋಲೋಕೇ ಬ್ರಹ್ಮಣೇ ಪರಮಾತ್ಮನಾ ।
ಕಾಮಧೇನುರಿಯಂ ಯಜ್ಞೇ ನ ದೇಯಾ ಪ್ರಾಣತಃ ಪ್ರಿಯಾ ॥ ೪೪ ॥

ಬ್ರಹ್ಮಣಾ ಭೃಗವೇ ದತ್ತಾ ಪ್ರಿಯಪುತ್ರಾಯ ಭೂಮಿಪ ।
ಮಹ್ಯಂ ದತ್ತಾ ಚ ಭೃಗುಣಾ ಕಪಿಲಾ ಪೈತೃಕೀ ಮಮ ॥ ೪೫ ॥

ಗೋಲೋಕಜಾ ಕಾಮಧೇನುರ್ದುರ್ಲಭಾ ಭುವನತ್ರಯೇ ।
ಲೀಲಾಮಾತ್ರಾತ್ಕಥಮಹಂ ಕಪಿಲಾಂ ಸ್ರಷ್ಟುಮೀಶ್ವರಃ ॥ ೪೬ ॥

---

೪೨. ಎಲೈ ತಪೋಧನನೇ ನೀನು ಭರತಖಂಡದಲ್ಲಿ ಹುಬ್ಬುಹಾರಿಸುವ ಲೀಲಾಮಾತ್ರದಿಂದಲೇ ಕಾಮಧೇನುಗಳ ಸಮೂಹವನ್ನು ಸೃಷ್ಟಿಮಾಡಲು ಶಕ್ತನಾಗಿದ್ದೀಯೆ.

೪೩. ಜಮದಗ್ನಿ :—ಎಲೈ ರಾಜನೇ ನೀನು ವಂಚಕನಂತೆ ವ್ಯತ್ಯಸ್ತವಾಗಿ ಮಾತನಾಡುತ್ತಿರುವೆಯಲ್ಲ. ಇದೇನು ನಿನ್ನ ಮೂರ್ಖತನ ಬ್ರಾಹ್ಮಣನಾದ ನಾನು ಕ್ಷತ್ರಿಯನಾದ ನಿನಗೆ ಹೇಗೆ ದಾನಮಾಡುವೆನು ?

೪೪. ಶ್ರೀಕೃಷ್ಣಪರಮಾತ್ಮನು ಗೋಲೋಕದಲ್ಲಿದ್ದ ಈ ಕಾಮಧೇನುವನ್ನು ಯಜ್ಞಕಾಲದಲ್ಲಿ ಬ್ರಹ್ಮನಿಗೆ ಕೊಟ್ಟನು, ಪ್ರಾಣಕ್ಕಿಂತಲೂ ಪ್ರಿಯತಮವಾದ ಈ ಕಾಮಧೇನುವನ್ನು ಮತ್ಯಾರೂ ಕೊಡಲಾರರು.

೪೫. ಎಲೈ ರಾಜೇಂದ್ರನೇ, ಆ ಬ್ರಹ್ಮನು ತನ್ನ ಪ್ರಿಯಪುತ್ರನಾದ ಭೃಗುವಿಗೂ, ಭೃಗುವು ಮಗನಾದ ನನಗೂ ಕೊಟ್ಟಿರುವುದರಿಂದ ಈ ಕಾಮಧೇನುವು ನನಗೆ ಪಿತ್ರಾರ್ಜಿತವಾಗಿರುವುದು.

೪೬. ಗೋಲೋಕದಲ್ಲಿ ಹುಟ್ಟಿದ ಈ ಕಾಮಧೇನುವು ತ್ರಿಭುವನದಲ್ಲೂ ದುರ್ಲಭವಾದುದು. ಇಂಥಾ ಕಾಮಧೇನುವನ್ನು ನಾನು ಲೀಲಾಮಾತ್ರದಿಂದ ಸೃಷ್ಟಿ ಮಾಡಲು ಹೇಗೆ ಸಮರ್ಥನಾಗುವೆನು?

ನಾಹಂ ರೇಹಾಲಿಕೋ ಮೂಢಸ್ತುತ್ಯಾನೋತ್ಥಾ ಪಿತೋ ಬುಧಃ ।
ಕ್ಷಣೇನ ಭಸ್ಮಸಾತ್ಕರ್ತುಂ ಕ್ಷಮೋಽಹಮತಿಥಿಂ ವಿನಾ ॥ ೪೭ ॥

ಗೃಹಂ ಗಚ್ಛ ಗೃಹಂ ಗಚ್ಛ ಮೇ ಕೋಪಂ ನೈವ ವರ್ಧಯ ।
ಪುತ್ರದಾರಾದಿಕಂ ಪಶ್ಯ ದೈವಬಾಧಿತ ಪಾಮರ ॥ ೪೮ ॥

ಮುನೇಸ್ತದ್ವಚನಂ ಶ್ರುತ್ವಾ ಚುಕೋಪ ಸ ನರಾಧಿಪಃ ।
ನತ್ವಾ ಮುನಿಂ ಸೈನ್ಯಮಧ್ಯಂ ಪ್ರಯಯೌ ವಿಧಿಬಾಧಿತಃ ॥ ೪೯ ॥

ಗತ್ವಾ ಸೈನ್ಯಸಕಾಶಂ ಸ ಕೋಪಪ್ರಸ್ಫುರಿತಾಧರಃ ।
ಕಿಂಕರಾನ್ಪ್ರೇಷಯಾಮಾಸ ಧೇನುಮಾನಯಿತುಂ ಬಲಾತ್ ॥ ೫೦ ॥

ಕಪಿಲಾಸನ್ನಿಧಿಂ ಗತ್ವಾ ರುರೋದ ಮುನಿಪುಂಗವಃ ।
ಕಥಯಾಮಾಸ ವೃತ್ತಾಂತಂ ಶೋಕೇನ ಹತಚೇತನಃ ॥ ೫೧ ॥

---

೪೭. ನಾನು ಮೂರ್ಖನಾದ ಒಕ್ಕಲಿಗನಾಗಲೀ ಸ್ತುತಿಗೆ ಉಬ್ಬಿಹೋಗುವ ಪಂಡಿತನಸ್ನಾಗಲೀ ಅಲ್ಲ. ಅತಿಥಿಯೊಬ್ಬನನ್ನು ಬಿಟ್ಟು ಉಳಿದವರನ್ನೆಲ್ಲ ಕ್ಷಣಮಾತ್ರದಲ್ಲಿ ಬೂದಿಮಾಡಬಲ್ಲ ತೇಜಸ್ವಿಯು ನಾನು.

೪೮. ಎಲೈ ದುರದೃಷ್ಟಶಾಲಿಯಾದ ಪಾಮರನೇ, ಮನೆಗೆಹೋಗಿ ನಿನ್ನ ಪತ್ನೀಪುತ್ರರ ಯೋಗಕ್ಷೇಮವನ್ನು ನೋಡಿಕೋ. ಸುಮ್ಮನೆ ನನ್ನ ಕೋಪವನ್ನು ಹೆಚ್ಚಿಸಬೇಡ.

೪೯. ಜಮದಗ್ನಿಯಾಡಿದ ಮಾತನ್ನು ಕೇಳಿ ಆ ರಾಜನು ಕುಪಿತನಾದನು. ಕೂಡಲೇ ಮುನಿಗೆ ಕೈಮುಗಿದು, ದುರ್ದೈವದಿಂದ ಪ್ರೇರಿತನಾಗಿ ಸೈನ್ಯಮಧ್ಯಕ್ಕೆ ಹೋದನು.

೫೦. ಅಲ್ಲಿ ಕೋಪದಿಂದ ಕೆಳತುಟಿಯು ನಡುಗುತ್ತಿರಲು, ಸೇವಕರನ್ನು ಕುರಿತು ಬಲತ್ಕಾರದಿಂದ ಕಾಮಧೇನುವನ್ನು ಎಳೆದು ತರುವಂತೆ ಆಜ್ಞೆಮಾಡಿದನು.

೫೧. ಈ ಸಮಾಚಾರವನ್ನು ತಿಳಿದ ಜಮದಗ್ನಿಮಹರ್ಷಿಯು ಕಾಮಧೇನುವಿನ ಸಮೀಪಕ್ಕೆ ಹೋಗಿ, ಚಿಂತಾಕ್ರಾಂತಮನಸ್ಕನಾಗಿ, ಸಮಾಚಾರವನ್ನೆಲ್ಲ ತಿಳಿಸಿದನು.

ರುದಂತಂ ಬ್ರಾಹ್ಮಣಂ ದೃಷ್ಟ್ವಾ ಸುರಭಿಸ್ತಮುವಾಚ ಹ ।
ಸಾಕ್ಷಾಲ್ಲಕ್ಷ್ಮೀಸ್ವರೂಪಾ ಸಾ ಭಕ್ತಾನುಗ್ರಹಕಾರಿಕಾ ॥ ೫೨ ॥

॥ ಸುರಭಿರುವಾಚ ॥

ಇಂದ್ರೋ ವಾ ಹಾಲಿಕೋ ವಾಪಿ ವಸ್ತುಸ್ವಂ ದಾತುಮೀಶ್ವರಃ ।
ಶಾಸ್ತಾ ಪಾಲಯಿತಾ ದಾತಾ ಸ್ವವಸ್ತೂನಾಂ ಚ ಸಂತತಂ ॥ ೫೩ ॥

ಸ್ವೇಚ್ಛಯಾ ಚೇನ್ನೃಪೇಂದ್ರಾಯ ಮಾಂ ದದಾಸಿ ತಪೋಧನ ।
ತೇನ ಸಾರ್ಧಂ ಗಮಿಷ್ಯಾಮಿ ಸ್ವೇಚ್ಛಯಾ ಚ ತವಾಜ್ಞಯಾ ॥ ೫೪ ॥

ಅಥವಾ ನ ದದಾಸಿ ತ್ವಂ ನ ಗಮಿಷ್ಯಾಮಿ ತೇ ಗೃಹಾತ್ ।
ಮತ್ತೋ ದತ್ತೇನ ಸೈನ್ಯೇನ ದೂರೀಕುರು ನೃಪಂ ದ್ವಿಷಂ ॥ ೫೫ ॥

---

೫೨. ಸಾಕ್ಷಾತ್ ಲಕ್ಷ್ಮೀದೇವಿಯಂತೆ ಭಕ್ತರಿಗೆ ಅನುಗ್ರಹಕಾರಕವಾದ ಆ ಕಾಮಧೇನುವು ಗೋಳಾಡುತ್ತಿರುವ ಆ ಬ್ರಾಹ್ಮಣನನ್ನು ಕಂಡು ಅವನನ್ನು ಕುರಿತು ಇಂತೆಂದಿತು.

೫೩. ಸುರಭಿ :—ಎಲೈ ವಿಪ್ರವರ್ಯನೇ, ಇಂದ್ರನಾಗಲೀ ಬಡರೈತನೇ ಆಗಲೀ ತನ್ನ ವಸ್ತುವನ್ನು ತಾನು ದಾನಮಾಡಲು ಶಕ್ತನಾಗಿರುವನು. ಒಂದು ವಸ್ತುವನ್ನು ರಕ್ಷಣೆಮಾಡುವವನು ಅದನ್ನು ಶಿಕ್ಷೆಮಾಡುವುದಕ್ಕೂ, ದಾನಮಾಡುವುದಕ್ಕೂ ಸರ್ವದಾ ಸಮರ್ಥನು.

೫೪. ಎಲೈ ತಪೋಧನನೇ, ನೀನು ಮನಃಪೂರ್ವಕವಾಗಿ ಮಹಾರಾಜನಿಗೆ ನನ್ನನ್ನು ಕೊಟ್ಟದ್ದೇ ಆದರೆ ನಿನ್ನ ಅಪ್ಪಣೆಯಂತೆ ಸ್ವೇಚ್ಛೆಯಾಗಿ ಅವನ ಹಿಂದೆ ಹೋಗುವೆನು.

೫೫. ಹಾಗಲ್ಲದೆ ನೀನಾಗಿ ಕೊಡದಿದ್ದರೆ ನಿನ್ನ ಮನೆಯನ್ನು ಬಿಟ್ಟು ನಾನು ಹೋಗುವುದಿಲ್ಲ. ನಾನು ಸೃಜಿಸುವ ಸೈನ್ಯದಿಂದ ಆ ಶತ್ರುರಾಜನನ್ನು ದೂರ ಓಡಿಸು.

ಕಥಂ ರೋದಿಷಿ ಸರ್ವಜ್ಞ ಮಾಯಾಮೋಹಿತಚೇತನಃ ।
ಸಂಯೋಗಶ್ಚ ವಿಯೋಗಶ್ಚ ಕಾಲಸಾಧ್ಯೋ ನ ಚಾತ್ಮನಃ ॥ ೫೬ ॥

ತ್ವಂ ವಾ ಕೋ ಮೇ ತವಾಹಂ ಕಾ ಸಂಬಂಧಃ ಕಾಲಯೋಜಿತಃ ।
ಯಾವದೇವ ಹಿ ಸಂಬಂಧೋ ಮಮತ್ವಂ ತಾವದೇವ ಹಿ ॥ ೫೭ ॥

ಮನೋ ಜಾನಾತಿ ಯದ್ದ್ರವ್ಯಮಾತ್ಮೀಯಂ ಚೇತಿ ಕೇವಲಂ ।
ದುಃಖಂ ಚ ತಸ್ಯ ವಿಚ್ಛೇದಾದ್ಯಾವತ್ಸ್ವತ್ವಂ ಚ ತತ್ರ ವೈ ॥ ೫೮ ॥

ಇತ್ಯುಕ್ತ್ವಾ ಕಾಮಧೇನುಶ್ಚ ಸುಷಾವ ವಿವಿಧಾನಿ ಚ ।
ಶಸ್ತ್ರಾಣ್ಯಸ್ತ್ರಾಣಿ ಸೈನ್ಯಾನಿ ಸೂರ್ಯತುಲ್ಯಪ್ರಭಾಣಿ ಚ ॥ ೫೯ ॥

ನಿರ್ಗತಾಃ ಕಪಿಲಾವಕ್ತ್ರಾತ್ತ್ರಿಕೋಟ್ಯಃ ಖಡ್ಗಧಾರಿಣಾಂ ।
ವಿನಿಃಸೃತಾ ನಾಸಿಕಾಯಾಃ ಶೂಲಿನಃ ಪಂಚಕೋಟಯಃ ॥ ೬೦

---

೫೬. ಸರ್ವಜ್ಞನಾದ ನೀನು ಕೂಡ ಮಾಯಾಜಾಲಕ್ಕೆ ಸಿಲುಕಿ ಮೋಹಗೊಂಡು ವ್ಯಥೆಪಡುತ್ತಿರುವೆಯಲ್ಲ. ಪ್ರಾಣಿಗಳಿಗೆ ಸಂಬಂಧವಾಗಲೀ ವಿರಹವಾಗಲೀ ಕಾಲವಶವಾದುದೇ ಹೊರತು ಆತ್ಮವಶವಲ್ಲ.

೫೭. ನೀನು ನನಗೆ ಯಾರು ? ನಾನು ನಿನಗೆ ಯಾರು ? ನಮ್ಮಿಬ್ಬರಿಗೂ ಕಾಲವಶದಿಂದ ಸಂಬಂಧವುಂಟಾಗಿದೆ. ಸಂಬಂಧವಿರುವವರೆಗೆ ‘ ನಾನು ನನ್ನದು ಎಂದು ಹೇಳಿಕೊಳ್ಳುವುದು.

೫೮. ಯಾವ ವಸ್ತುವನ್ನು ಮನಸ್ಸು ನನ್ನದೆಂದು ತಿಳಿಯುವುದೋ, ಅದರಲ್ಲಿ ಅಭಿಮಾನವಿರುವವರಿಗೆ ಅದರ ವಿಯೋಗದಿಂದ ದುಃಖವುಂಟಾಗುವುದು.

೫೯ ‘ ಹೀಗೆ ಹೇಳಿ ಆ ಕಾಮಧೇನುವು ವಿಧ ವಿಧ ಶಾಸ್ತ್ರಾಸ್ತ್ರಗಳನ್ನೂ ಸೂರ್ಯನಂತೆ ಪರಾಕ್ರಮಶಾಲಿಗಳಾದ ಸೈನಿಕರನ್ನೂ ಸೃಷ್ಟಿಮಾಡಿತು.

೬೦. ಅಂತೆಯೇ ಆ ಕಾಮಧೇನುವಿನ ಮುಖದಿಂದ ಮೂರು ಕೋಟಿ ಖಡ್ಗಧಾರಿಗಳೂ, ಮೂಗಿನ ಹೊಳ್ಳೆಯಿಂದ ಐದು ಕೋಟಿ ಶೂಲಧಾರಿಗಳೂ ಹೊರಕ್ಕೆ ಬಂದರು.

ವಿನಿಸ್ಸೃತಾ ಲೋಚನಾಭ್ಯಾಂ ಶತಕೋಟಿ ಧನುರ್ಧರಾಃ ।
ಕಪಾಲಾನ್ನಿಸ್ಸೃತಾ ವೀರಾಸ್ತ್ರಿಕೋಟ್ಯೋ ದಂಡಧಾರಿಣಾಂ ॥ ೬೧ ॥

ವಕ್ಷಸ್ಥಲಾನ್ನಿಸ್ಸೃತಾಶ್ಚ ತ್ರಿಕೋಟ್ಯಃ ಶಕ್ತಿಧಾರಿಣಾಂ ।
ಶತಕೋಟ್ಯೋ ಗದಾಹಸ್ತಾಃ ಪೃಷ್ಠದೇಶಾದ್ವಿನಿರ್ಗತಾಃ ॥ ೬೨ ॥

ವಿನಿಸ್ಸೃತಾಃ ಪಾದತಲಾದ್ವಾದ್ಯಭಾಂಡಾಃ ಸಹಸ್ರಶಃ ।
ಜಂಘಾದೇಶಾನ್ನಿಸ್ಸೃತಾಶ್ಚ ತ್ರಿಕೋಟ್ಯೋ ರಾಜಪುತ್ರಕಾಃ ॥ ೬೩ ॥

ವಿನಿರ್ಗತಾ ಗುಹ್ಯ ದೇಶಾತ್ತ್ರಿಕೋಟಿಮ್ಲೇಚ್ಛಜಾತಯಃ ।
ದತ್ವಾ ಸೈನ್ಯಾನಿ ಕಪಿಲಾ ಮುನಯೇ ಚಾಭಯಂ ದದೌ ।
ಯುದ್ಧಂ ಕುರ್ವಂತು ಸೈನ್ಯಾನಿ ತ್ವಂ ನ ಯಾಹೀತ್ಯುವಾಚ ಹ ॥ ೬೪ ॥

ಮುನಿಸ್ಸಂಭೃತಸಂಭಾರೈರ್ಹರ್ಷಯುಕ್ತೋ ಬಭೂವ ಹ ।
ನೃಪೇಣ ಪ್ರೇರಿತೋ ಭೃತ್ಯೋ ನೃಪಂ ಸರ್ವಮುವಾಚ ಹ ॥ ೬೫ ॥

---

೬೧. ಆ ಕಾಮಧೇನುವಿನ ಎರಡು ಕಣ್ಣುಗಳಿಂದ ನೂರುಕೋಟಿ ಧನುರ್ಧಾರಿಗಳೂ, ಕಪಾಲದಿಂದ ಮೂರು ಕೋಟಿ ದಂಡಧಾರಿಗಳೂ ಹೊರಕ್ಕೆ ಬಂದರು.

೬೨. ವಕ್ಷಃಸ್ಥಲದಿಂದ ಮೂರುಕೋಟಿ ಶಕ್ತ್ಯಾಯುಧಧಾರಿಗಳೂ, ಪೃಷ್ಠಪ್ರದೇಶದಿಂದ ನೂರುಕೋಟಿ ಗದಾಧಾರಿಗಳೂ ಹೊರಕ್ಕೆ ಬಂದರು.

೬೩. ಹಾಗೆಯೇ ಪಾದಪ್ರದೇಶದಿಂದ ಸಾವಿರಾರು ವಾದ್ಯಭಾಂಡಗಳೂ. ಮಂಡಿಯ ಪ್ರದೇಶದಿಂದ ಮೂರುಕೋಟಿ ರಾಜಪುತ್ರರೂ ವ್ಯಕ್ತರಾದರು.

೬೪. ಗುಹ್ಯಪ್ರದೇಶದಿಂದ ಮೂರುಕೋಟಿ ಮ್ಲೇಚ್ಛರೂ, ಜನಿಸಿದರು. ಈ ಸೈನ್ಯವನ್ನೆಲ್ಲ ಕಾಮಧೇನುವು ಆ ಮುನಿಗೆ ಕೊಟ್ಟು, ಅಭಯಪ್ರದಾನ ಮಾಡಿ, ಈ ಸೈನ್ಯವೆಲ್ಲವೂ ಯುದ್ಧಮಾಡಲಿ, ನೀನು ಇಲ್ಲಿಯೇ ಇರು, ಎಂದಿತು.

೬೫. ಜಮದಗ್ನಿಯು ಯುದ್ಧಕ್ಕೆ ಸಿದ್ಧವಾದ ಸೈನ್ಯವನ್ನು ನೋಡಿ ಆನಂದತುಂದಿಲನಾದನು. ಇತ್ತ ರಾಜನಿಂದ ಪ್ರೇರಿತನಾದ ಭೃತ್ಯನು ಹಿಂದಕ್ಕೆ ಬಂದು ರಾಜನಿಗಿಂತೆಂದನು.

ಕಪಿಲಾಸೈನ್ಯವೃತ್ತಾಂತಮಾತ್ಮವರ್ಗಪರಾಜಯಂ ।
ತಚ್ಛ್ರುತ್ವಾ ನೃಪಶಾರ್ದೂಲಸ್ತ್ರಸ್ತಃ ಕಾತರಮಾನಸಃ ।
ದೂತಾನ್ಸಂಪ್ರೇಷ್ಯ ಸೈನ್ಯಾನಿ ಚಾಜಹಾರ ಸ್ವದೇಶತಃ ॥ ೬೬ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ತೃತೀಯೇ ಗಣಪತಿಖಂಡೇ ನಾರದನಾರಾಯಣಸಂವಾದೇ ಏಕದಂತತ್ವಹೇತುಪ್ರಶ್ನಪ್ರಸಂಗೇ ಜಮದಗ್ನಿಕಾರ್ತವೀರ್ಯಯುದ್ಧಾರಂಭವರ್ಣನಂ ನಾಮ ಚತುರ್ವಿಂಶತಿತಮೋಽಧ್ಯಾಯಃ

---

೬೬. ಕಾಮಧೇನುವಿನಿಂದ ಸೃಷ್ಟವಾದ ಸೈನ್ಯದ ಸಮಾಚಾರವನ್ನೂ, ತನ್ನ ಸೈನಿಕರು ಸೋತುಹೋದುದನ್ನೂ, ಕೇಳಿ ವ್ಯಾಕುಲಿತಚಿತ್ತನಾದ ಮಹಾರಾಜನು ದೂತರನ್ನು ಕಳುಹಿಸಿ ತನ್ನ ರಾಜ್ಯದಿಂದ ಹೆಚ್ಚು ಸೈನಿಕರನ್ನು ಕರೆತರಿಸಿದನು.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಗಣಪತಿಖಂಡದಲ್ಲಿ ಜಮದಗ್ನಿ ಕಾರ್ತವೀರ್ಯರಿಗೆ ಯುದ್ಧಾರಂಭವಾದುದನ್ನು ತಿಳಿಸುವ ಇಪ್ಪತ್ತನಾಲ್ಕನೆಯ ಅಧ್ಯಾಯವು ಮುಗಿದುದು.

ಇಪ್ಪತ್ತನಾಲ್ಕನೆಯ ಅಧ್ಯಾಯದ ಸಾರಾಂಶ

ಗಣಪತಿಯು ಏಕದಂತನಾಗಲು ಕಾರಣವೇನೆಂದು ಪ್ರಶ್ನೆಯು ಪ್ರಸ ಾಗಲು, ನಾರಾಯಣಮಹರ್ಷಿಯು ಇಂತೆಂದನು. ಪೂರ್ವದಲ್ಲಿ ಕಾರ್ತವೀರ್ಯಾ ರ್ಜುನನು ಸೈನ್ಯಸಮೇತನಾಗಿ ಬೇಟೆಗೆಂದು ಅರಣ್ಯಕ್ಕೆ ಹೋದನು. ಬೇಟೆ ಆಯಾಸ ಪರಿಹಾರಕ್ಕಾಗಿ ವಿಶ್ರಾಂತಿಗೊಳ್ಳುತ್ತಿರಲು ಸಾಯಂಕಾಲವಾದುದರಿ ಅಲ್ಲಿಯೇ ನಿರಾಹಾರನಾಗಿ ನಿಂತನು. ಅಲ್ಲಿಗೆ ಸಮೀಪದ ಆಶ್ರಮದಲ್ಲಿದ್ದ ಜಮದ ಮುಷಿಯು ರಾಜನು ನಿರಾಹಾರದಿಂದಿರುವುದನ್ನು ತಿಳಿದು, ಅವನನ್ನು ಸೈನ್ಯಸಮೇ ತಾಗಿ ಆಮಂತ್ರಿಸಿ ತನ್ನಲ್ಲಿದ್ದ ಕಾಮಧೇನುವಿನ ಪ್ರಭಾವದಿಂದ ಅವರಿಗೆ ಸಮೃ ಯಾಗಿ ಊಟೋಪಚಾರಗಳನ್ನು ಮಾಡಿಸಿದನು. ಆ ಕಾಮಧೇನುವಿನ ಮಹಿಮೆ ಸ್ಮರಿತ ರಾಜನು ಅದನ್ನು ತನಗೆ ಕೊಡಬೇಕೆಂದು ಬೇಡಿ, ಮುನಿಯು ಒಪ್ಪದಿ ಂದ ಬಲಾತ್ಕಾರವಾಗಿ ಎಳೆದುಕೊಂಡುಹೋಗಲು ಬಯಸಿ ಸೈನ್ಯವನ್ನು ಕಳ ದನು. ಆದರೆ ಆ ಕಾಮಧೇನುವಿನ ಅವಯುವಗಳಿಂದ ಸೃಷ್ಟವಾದ ಅಸ ಸೈನ್ಯದಿಂದ ರಾಜನ ಸೈನ್ಯವೆಲ್ಲವೂ ಸೋತುಹೋಗಲು, ರಾಜನು ತನ್ನ ರಾಜ್ಯ ಕೆಚ್ಚು ಸೈನಿಕರನ್ನು ಕರೆತರಲು ದೂತರನ್ನು ಕಳುಹಿಸಿದನು.

—॥ ಓಂ ॥—

—॥ ಶ್ರೀ ಗಣೇಶಾಯ ನಮಃ ॥—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಗಣಪತಿಖಂಡೇ

ಪಂಚವಿಂಶತಿತಮೋಽಧ್ಯಾಯಃ

॥ ನಾರಾಯಣ ಉವಾಚ ॥

ಹರಿಂ ಸ್ಮರನ್ಕಾರ್ತವೀರ್ಯೋ ಹೃದಯೇನ ವಿದೂಯತಾ ।
ದೂತಂ ಪ್ರಸ್ಥಾಪಯಾಮಾಸ ಕುಪಿತೋ ಮುನಿಸನ್ನಿಧಿಂ ॥ ೧ ॥

ಯುದ್ಧಂ ದೇಹಿ ಮುನಿಶ್ರೇಷ್ಠ ಕಿಂ ವಾ ಧೇನುಂ ಚ ವಾಂಛಿತಾಂ ।
ಮಹ್ಯಂ ಭೃತ್ಯಾಯಾತಿಥಯೇ ಸುವಿಚಾರ್ಯ ಯಥೋಚಿತಂ ॥ ೨ ॥

ದೂತಸ್ಯ ವಚನಂ ಶ್ರುತ್ವಾ ಜಹಾಸ ಮುನಿಪುಂಗವಃ ।
ಹಿತಂ ಸತ್ಯಂ ನೀತಿಸಾರಂ ಸರ್ವಂ ದೂತಮುವಾಚ ಹ ॥ ೩ ॥

ಇಪ್ಪತ್ತೈದನೆಯ ಅಧ್ಯಾಯವು

೧. ನಾರಾಯಣ :—ಇತ್ತ ಚಿಂತಾಕ್ರಾಂತನಾದ ಕಾರ್ತವೀರ್ಯನು ಶ್ರೀಹರಿಯನ್ನು ಮನಸ್ಸಿನಲ್ಲಿಯೇ ಸ್ಮರಿಸುತ್ತ, ಕುಪಿತನಾಗಿ ಜಮದಗ್ನಿಯ ಸಮೀಪಕ್ಕೆ ದೂತನನ್ನು ಕಳುಹಿಸಿದನು.

೨. ಆ ದೂತನು ಜಮದಗ್ನಿಯನ್ನು ಕುರಿತು ಇಂತೆಂದನು. ಎಲೈ ಮುನಿವರ್ಯನೇ ನಿನ್ನ ಅತಿಥಿಯೂ, ಭೃತ್ಯಸದೃಶನೂ ಆದ ಕಾರ್ತವೀರ್ಯನಿಗೆ ಅಭಿಲಷಿತವಾದ ಕಾಮಧೇನುವನ್ನಾಗಲೀ, ಅಥವಾ ವಿರುದ್ಧವಾದ ಯುದ್ಧವನ್ನಾಗಲೀ ಯುಕ್ತಾಯುಕ್ತ ವಿಚಾರಣೆಯಿಂದ ಕೊಡಲು ಸಿದ್ಧನಾಗು.

೩. ದೂತನ ಈ ನುಡಿಗಳನ್ನು ಕೇಳಿ ಮುನಿಶ್ರೇಷ್ಠನು ನಸುನಕ್ಕು ಹಿತವೂ, ಸತ್ಯವೂ, ನೀತಿಬೋಧಕವೂ ಆದ ಕೆಲವು ಮಾತುಗಳನ್ನು ಹೇಳಿದನು.

॥ ಮುನಿರುವಾಚ ॥

ದೃಷ್ಟ್ವೋ ನೃಪೋ ನಿರಾಹಾರಃ ಸಮಾನೀತೋ ಮಯಾ ಗೃಹಂ ।
ವಿವಿಧಂ ಚ ಯಥಾ ಶಕ್ತ್ಯಾ ಭೋಜಿತಶ್ಚ ಯಥೋಚಿತಂ ॥ ೪ ॥

ಕಪಿಲಾಂ ಯಾಚತೇ ರಾಜಾ ಮಮ ಪ್ರಾಣಾಧಿಕಾಂ ಪ್ರಿಯಾಂ ।
ತಾಂ ದಾತುಮಕ್ಷಮೋ ದೂತ ಯುದ್ಧಂ ದಾಸ್ಯಾಮಿ ನಿಶ್ಚಿತಂ ॥ ೫ ॥

ಮುನೇಸ್ತದ್ವಚನಂ ಶ್ರುತ್ವಾ ದೂತಃ ಸರ್ವಮುವಾಚ ಹ ।
ನೃಪೇಂದ್ರಂ ಚ ಸಭಾಮಧ್ಯೇ ಸನ್ನಾಹೈಸ್ಸಂಯುತಂ ಭಿಯಾ ॥ ೬ ॥

ಮುನಿಶ್ಚ ಕಪಿಲಾಮಾಹ ಸಾಂಪ್ರತಂ ಕಿಂ ಕರೋಮ್ಯಹಂ ।
ಕರ್ಣಧಾರಂ ವಿನಾ ನೌಕಾ ತಥಾ ಸೈನ್ಯಂ ವಿನಾ ಮಯಾ ॥ ೭ ॥

ಕಪಿಲಾ ಚ ದದೌ ತಸ್ಮೈ ಶಸ್ತ್ರಾಣಿ ವಿವಿಧಾನಿ ಚ ।
ಯುದ್ಧಶಾಸ್ತ್ರೋಪದೇಶಂ ಚ ಸಂಧಾನಂ ಚೌಪಯೋಗಿಕಂ ॥ ೮ ॥

---

೪. ಜಮದಗ್ನಿ :—ರಾಜನು ಉಪವಾಸವಿದ್ದುದನ್ನು ನೋಡಿ ನಾನು ಮನೆಗೆ ಕರೆತಂದು ಶಕ್ತ್ಯನುಗುಣವಾಗಿ ಅವನಿಗೆ ರಾಜೋಚಿತವಾದ ಭೋಜನವನ್ನು ಮಾಡಿಸಿದೆನು.

೫. ಈಗ ರಾಜನು ನನ್ನ ಪ್ರಾಣಕ್ಕಿಂತಲೂ ಪ್ರಿಯವಾದ ಕಾಮಧೇನುವನ್ನು ಬೇಡುತ್ತಿದ್ದಾನೆ; ಎಲೈ ದೂತನೇ, ನಾನು ಆ ಕಪಿಲೆಯನ್ನು ಕೊಡಲಾರೆ, ಯುದ್ಧ ಮಾಡಲು ಖಂಡಿತವಾಗಿಯೂ ಸಿದ್ಧನಾಗಿರುವೆನು.

೬. ಈ ನುಡಿಗಳನ್ನು ಕೇಳಿ ಹೋದ ದೂತನೂ, ಸಕಲ ಯುದ್ಧಸಾಮಗ್ರಿಗಳೊಡನೆ ಸಿದ್ಧನಾಗಿ ಸಭಾಮಧ್ಯದಲ್ಲಿ ಕುಳಿತಿದ್ದ ರಾಜನಿಗೆ ಎಲ್ಲಾ ಸಮಾಚಾರವನ್ನೂ ಹೇಳಿದನು.

೭. ಇತ್ತ ಮುನಿಯು ಕಾಮಧೇನುವನ್ನು ಕುರಿತು, ಅಂಬಿಗನಿಲ್ಲದ ನಾವೆಯಂತೆ, ಸೈನ್ಯರಹಿತನಾದ ನಾನು ಈಗ ಏನುಮಾಡಲಿ ಎಂದನು.

೮. ಆಗ ಆ ಕಾಮಧೇನುವು ಆ ಮುನಿಗೆ ಯುದ್ಧಶಾಸ್ತ್ರೋಪದೇಶಮಾಡಿ, ವಿವಿಧ ಶಸ್ತ್ರಾಸ್ತ್ರಗಳನ್ನೂ, ಅವುಗಳ ಸಂಧಾನ ಮತ್ತು ಉಪಯೋಗ ಕ್ರಮವನ್ನೂ ವಿವರಿಸಿತು.

ಜಯಂ ಭವತು ತೇ ವಿಪ್ರ ಯುದ್ಧೇ ಜೇಷ್ಯಸಿ ನಿಶ್ಚಿತಂ ।
ತವ ಮೃತ್ಯುರ್ನ ಭವಿತಾ ಸತ್ಯಮಸ್ತ್ರಂ ವಿನಾ ಮುನೇ ॥ ೯ ॥

ನೃಪೇಣ ಸಾರ್ಧಂ ತೇ ಯುದ್ಧಮಯುಕ್ತಂ ಬ್ರಾಹ್ಮಣಸ್ಯ ಚ ।
ದತ್ತಾತ್ರೇಯಸ್ಯ ಶಿಷ್ಯೇಣ ವ್ಯರ್ಥಂ ವೈ ಶಕ್ತಿಧಾರಿಣಾ ॥
ಇತ್ಯುಕ್ತ್ವಾ ಕಪಿಲಾ ಬ್ರಹ್ಮನ್ವಿರರಾಮ ಮನಸ್ವಿನೀ ॥ ೧೦ ॥

ಮುನಿರ್ಮನಸ್ವೀ ಸೈನ್ಯಂ ಚ ಸಜ್ಜೀಕೃತ್ಯ ತತೋ ಮುನೇ ।
ಗೃಹೀತ್ವಾ ಸರ್ವಸೈನ್ಯಂ ಚ ಸ ಜಗಾಮ ರಣಾಜಿರಂ ॥ ೧೧ ॥

ರಾಜಾ ಜಗಾಮ ಯುದ್ಧಾಯ ನನಾಮ ಮುನಿಪುಂಗವಂ ।
ಉಭಯೋಃ ಸೈನ್ಯಯೋರ್ಯುದ್ಧಂ ಬಭೂವ ಬಹುದುಷ್ಕರಂ ॥ ೧೨ ॥

ರಾಜಸೈನ್ಯಂ ಜಿತಂ ಸರ್ವಂ ಕಪಿಲಾಸೇನಯಾ ಬಲಾತ್ ।
ವಿಚಿತ್ರಂ ಚ ರಥಂ ರಾಜ್ಞೋ ಬಭಂಜೇ ಲೀಲಯಾ ರಣೇ ॥ ೧೩ ॥

---

೯. ಎಲೈ ಬ್ರಾಹ್ಮಣೋತ್ತಮನೇ ನಿನಗೆ ಜಯವಾಗಲಿ. ಯುದ್ಧದಲ್ಲಿ ನಿನ್ನ ಕಡೆಯವರು ಜಯಶೀಲರಾಗುವರು. ನೀನು ಅಸ್ತ್ರಧಾರಣೆ ಮಾಡದಿದ್ದರೆ ನಿನಗೆ ಮರಣವುಂಟಾಗುವುದಿಲ್ಲ.

೧೦. ದತ್ತಾತ್ರೇಯನ ಭಕ್ತನೂ, ಶಕ್ತಿಧರನೂ ಆದ ರಾಜನೊಡನೆ ಬ್ರಾಹ್ಮಣನಾದ ನಿನಗೆ ಯುದ್ಧವು ಯುಕ್ತವಾದುದಲ್ಲ. ಎಂದು ಹೇಳಿ ಧೈರ್ಯಶಾಲಿನಿಯಾದ ಕಪಿಲೆಯು ಸುಮ್ಮನಾಯಿತು.

೧೧. ಅನಂತರ ಧೈರ್ಯಗೊಂಡ ಜಮದಗ್ನಿಯು ಸೈನ್ಯವನ್ನು ಸಿದ್ಧಗೊಳಿಸಿಕೊಂಡು, ಯುದ್ಧಾಂಗಣಕ್ಕೆ ಕರೆದುಕೊಂಡುಹೋದನು.

೧೨. ಇತ್ತ ಕಾರ್ತವೀರ್ಯನೂ ಕೂಡ ಯುದ್ಧಾಂಗಣಕ್ಕೆ ಬಂದು ಜಮದಗ್ನಿಗೆ ನಮಿಸಿದನು. ಅನಂತರ ಎರಡು ಸೈನ್ಯಗಳಿಗೂ ಅತ್ಯುಗ್ರವಾದ ಯುದ್ಧವುಂಟಾಯಿತು.

೧೩. ಕಾಮಧೇನುವಿನ ಸೈನ್ಯಬಲದಿಂದ ರಾಜನ ಸೈನ್ಯವೆಲ್ಲವೂ ಸೋತುಹೋಯಿತು. ಅಲ್ಲದೆ ರಾಜನ ವಿಚಿತ್ರವಾದ ರಥವೂ ಕೂಡ ಲೀಲಾಮಾತ್ರದಿಂದ ಮುರಿದು ಬಿದ್ದಿತು.

ಧನುಶ್ಛಿಚ್ಛೇವ ಸಜ್ಯಂತತ್ಸಾಸೇನಾ ಕಾಪಿಲೀ ಮುದಾ ।
ನೃಪೇಂದ್ರ ಕಾಪಿಲೇಯಾನಿ ಜೇತುಂ ಸೈನ್ಯಾನಿ ಚಾಕ್ಷಮಃ ॥ ೧೪ ॥

ಸೈನ್ಯಾನಿ ತಂ ಶಸ್ತ್ರವೃಷ್ಟ್ಯಾ ನ್ಯಸ್ತಶಸ್ತ್ರಂ ಚಕಾರ ಹ ।
ಶರವೃಷ್ಟ್ಯಾ ಶಸ್ತ್ರವೃಷ್ಟ್ಯಾ ರಾಜಾ ಮೂರ್ಛಾಮವಾಪ ಹ ॥ ೧೫ ॥

ಕಿಂಚಿಚ್ಛಿಷ್ಟಂ ಬಲಂ ರಾಜ್ಞಃ ಕಿಂಚಿದೇವ ಪಲಾಯಿತಂ ।
ಮುನೀಂದ್ರೋ ಮೂರ್ಛಿತಂ ದೃಷ್ಟ್ವಾ ನೃಪೇಂದ್ರಮತಿಥಿಂ ಮುನೇ ॥ ೧೬ ॥

ಕೃಪಾನಿಧಿಶ್ಚ ಕೃಪಯಾ ತೆತ್ಸೈನ್ಯಂ ಸಂಜಹಾರ ಚ ।
ಗತ್ವಾ ಸೈನ್ಯಂ ವಿಲೀನಂ ಚ ಕಪಿಲಾಯಾಂ ಚ ಕೃತ್ರಿಮಂ ॥ ೧೭ ॥

---

೧೪. ಅಲ್ಲದೆ ಆ ಕಪಿಲೆಯ ಸೈನ್ಯವು ರಾಜನ ಸಿದ್ಧವಾದ ಧನುಸ್ಸನ್ನು ಕತ್ತರಿಸಿತು. ರಾಜನು ಆ ಕಪಿಲೆಯ ಸೈನ್ಯವನ್ನು ಗೆಲ್ಲಲು ಸಾಧ್ಯವಾಗಲಿಲ್ಲ.

೧೫. ಆ ಸೈನ್ಯವೆಲ್ಲವೂ ರಾಜನ ಮೇಲೆ ಬಾಣದ ಮಳೆಗರೆದು ರಾಜನು ಅಸ್ತ್ರಪರಿತ್ಯಾಗ ಮಾಡುವಂತೆ ಮಾಡಿತು. ಬಾಣ ಮತ್ತು ಇತರ ಆಯುಧಗಳ ಧಾರಾಪ್ರವಾಹಕ್ಕೆ ಸಿಲುಕಿ ರಾಜನು ಮೂರ್ಛೆಗೊಂಡನು.

೧೬. ರಾಜನ ಸೈನ್ಯದಲ್ಲಿ ಕೆಲವು ಉಳಿದವು. ಮತ್ತೆ ಕೆಲವು ಪಲಾಯನ ಮಾಡಿದವು. ಆಗ ಜಮದಗ್ನಿಯು ತನ್ನ ಅತಿಥಿಯಾದ ರಾಜನು ಮೂರ್ಛೆಗೊಂಡುದನ್ನು ನೋಡಿದನು.

೧೭. ಕೂಡಲೆ ದಯಾಮಯನಾದ ಆ ಋಷಿಯು ತನ್ನ ಸೈನ್ಯವನ್ನು ಹಿಂದಕ್ಕೆ ಕರೆಯಲು, ಕೃತ್ರಿಮವಾದ ಆ ಸೈನ್ಯವೆಲ್ಲವೂ ಆ ಕಾಮಧೇನುವಿನಲ್ಲಿಯೇ ಐಕ್ಯವಾಗಿಹೋಯಿತು.

ನೃಪಾಯ ಮುನಿನಾ ಶೀಘ್ರಂ ದತ್ತ್ವಾಶ್ಚರಣರೇಣವಃ ।
ಆಶೀರ್ವಾದಂ ಪ್ರದತ್ತಂ ಚ ಜಯೋಽಸ್ತ್ವಿತಿ ಕೃಪಾಲುನಾ ॥
ಕಮಂಡಲುಜಲಂ ಪ್ರೋಕ್ಷ್ಯ ಜೀವಯಾಮಾಸ ತಂ ನೃಪಂ ॥ ೧೮ ॥

ಸ ರಾಜಾ ಚೇತನಾಂ ಪ್ರಾಪ್ಯ ಸಮುತ್ಥಾಯ ರಣಾಜಿರಾತ್ ।
ಮೂರ್ಧ್ನಾ ನನಾಮ ಭಕ್ತ್ಯಾ ಚ ಮುನಿಶ್ರೇಷ್ಠಂ ಕೃತಾಂಜಲಿಃ ॥ ೧೯ ॥

ಮುನಿಃ ಶುಭಾಶಿಷಂ ದತ್ವಾ ರಾಜಾನಂ ತ್ವಾಲಿಲಿಂಗ ಸಃ ।
ಪುನಸ್ತಂ ಸ್ನಾಪಯಿತ್ವಾ ಚ ಭೋಜಯಾಮಾಸ ಯತ್ನತಃ ॥ ೨೦ ॥

ನವನೀತಂ ಹಿ ಹೃದಯಂ ಬ್ರಾಹ್ಮಣಾನಾಂ ತು ಸಂತತಂ ।
ಅನ್ಯೇಷಾಂ ಕ್ಷುರಧಾರಾಭಮಸಾಧ್ಯಂ ದಾರುಣಂ ಸದಾ ॥ ೨೧ ॥

---

೧೮. ಅನಂತರ ಕರುಣಾಳುವಾದ ಮುನಿಯು ಆಶೀರ್ವಾದಪೂರ್ವಕವಾಗಿ ತನ್ನ ಪಾದಧೂಳಿಯನ್ನು ಆ ರಾಜನ ಮೇಲೆ ಹಾಕಿ, ನಿನಗೆ ಜಯವಾಗಲೆಂದು ಹೇಳಿ, ತನ್ನ ಕಮಂಡಲುವಿನ ಜಲವನ್ನು ಪ್ರೋಕ್ಷಿಸಿ, ಆ ರಾಜನನ್ನು ಪುನರುಜ್ಜೀವಗೊಳಿಸಿದನು.

೧೯. ಪುನರ್ಜೀವಿತನಾದ ರಾಜನು ಯುದ್ಧಾಂಕಣದಿಂದ ಮೇಲಕ್ಕೆದ್ದು ಕೈಮುಗಿದುಕೊಂಡು ಆ ಮುನಿವರ್ಯನಿಗೆ ಭಕ್ತಿಪೂರ್ವಕವಾಗಿ ತಲೆಬಾಗಿ ನಮಸ್ಕರಿಸಿದನು.

೨೦. ಆ ಮುನಿಯೂ ಕೂಡ ರಾಜನಿಗೆ ಮಂಗಳಾಶೀರ್ವಾದಗಳನ್ನು ಮಾಡಿ ಆಲಿಂಗಿಸಿಕೊಂಡುದಲ್ಲದೆ, ಪುನಃ ಸ್ನಾನಾದಿಗಳನ್ನು ಮಾಡಿಸಿ ಭೋಜನದಿಂದ ತೃಪ್ತಿಪಡಿಸಿದನು.

೨೧. ಬ್ರಾಹ್ಮಣರ ಹೃದಯವು ಸರ್ವದಾ ಬೆಣ್ಣೆಯಂತೆ ಕೋಮಲವಾದುದು. ಇತರರ ಹೃದಯವಾದರೋ ಕತ್ತಿಯ ಅಲುಗಿನಂತೆ ತೀಕ್ಷ್ಣವೂ, ದಾರುಣವೂ ಆದುದು.

ಉವಾಚ ತಂ ಮುನಿಶ್ರೇಷ್ಠೋ ಗೃಹಂ ಗಚ್ಛ ಧರಾಧಿಪ ।

॥ ರಾಜೋವಾಚ ॥

ರಣಂ ದೇಹಿ ಮಹಾಬಾಹೋ ಧೇನುಂ ಕಿಂ ವಾ ಮಯೇಪ್ಸಿತಾಂ ॥ ೨೨ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ತೃತೀಯೇ ಗಣಪತಿಖಂಡೇ
ನಾರದನಾರಾಯಣಸಂವಾದೇ ಜಮದಗ್ನಿ–ಕಾರ್ತವೀರ್ಯಾ
ರ್ಜುನ ಯುದ್ಧ ವರ್ಣನಂ ನಾಮ ಪಂಚವಿಂಶತಿತ
ಮೋಽಧ್ಯಾಯಃ

---

೨೨. ಮುನಿವರ್ಯನು ನಿನ್ನ ಮನೆಗೆ ಹೋಗು ಎಂದು ರಾಜನಿಗೆ ಹೇಳಲು ಎಲೈ ಮುನಿವರ್ಯನೇ, ನೀನು ನನಗೆ ಇಷ್ಟವಾದ ಕಾಮಧೇನುವನ್ನು ನನಗೆ ಕೊಡ ದಿದ್ದರೆ ಪುನಃ ಯುದ್ಧಕ್ಕೆ ಸಿದ್ಧನಾಗು ಎಂದು ರಾಜನು ಹೇಳಿದನು.

ಇಲ್ಲಿಗೆ ಬ್ರಹ್ಮವೈವರ್ತಮಹಾಪುರಾಣದ ಗಣಪತಿಖಂಡದಲ್ಲಿ ಜಮದಗ್ನಿ
ಮತ್ತು ಕಾರ್ತವೀರ್ಯಾರ್ಜುನರ ಯುದ್ಧವರ್ಣನೆ ರೂಪವಾದ
ಇಪ್ಪತ್ತೈದನೆಯ ಅಧ್ಯಾಯವು ಮುಗಿದುದು.

ಇಪ್ಪತ್ತೈದನೆಯ ಅಧ್ಯಾಯದ ಸಾರಾಂಶವು

ಕಾರ್ತವೀರ್ಯನು ಪುನಃ ತನ್ನ ರಾಜ್ಯದಿಂದ ಅಸಂಖ್ಯ ಸೈನ್ಯವನ್ನು ಕರೆಸಿದನು. ಕಾಮಧೇನುವೂ ಯಥೇಚ್ಛವಾಗಿ ಸೈನ್ಯವನ್ನೂ ಶಸ್ತ್ರಾಸ್ತ್ರಗಳನ್ನೂ ಸೃಜಿಸಿತು. ಪುನಃ ಎರಡು ಪಕ್ಷದವರಿಗೂ ಘೋರ ಯುದ್ಧವಾಗಿ, ಆ ಯುದ್ಧದಲ್ಲಿ ರಾಜನ ಸೈನ್ಯವೆಲ್ಲವೂ ಪಲಾಯನ ಮಾಡಿದುದಲ್ಲದೆ ರಾಜನೂ ಮೂರ್ಛೆಗೊಂಡನು. ಆಗ ದಯಾಮಯನಾದ ಋಷಿಯು ತನ್ನ ಸೈನ್ಯವನ್ನು ಹಿಂದಕ್ಕೆ ಕರೆಯಲು ಆ ಸೈನ್ಯವು ಕಾಮಧೇನುವಿನಲ್ಲೇ ಐಕ್ಯವಾಯಿತು. ಜಮದಗ್ನಿಯು ತನ್ನ ಪಾದಧೂಳಿಯನ್ನೂ, ಕಮಂಡಲು ಜಲವನ್ನೂ ರಾಜನ ಮೇಲೆ ಆಶೀರ್ವಾದಪೂರ್ವಕವಾಗಿ ಎರಚಿ ರಾಜನನ್ನು ಪುನರುಜ್ಜೀವಿಸಿದನು. ಮೂರ್ಛೆತಿಳಿದ ರಾಜನು, ಕಾಮಧೇನುವನ್ನು ತನಗೆ ಕೊಡದಿದ್ದರೆ ಪುನಃ ಯುದ್ಧಮಾಡುವುದಾಗಿ ಹೇಳಿ ಹಠಹಿಡಿದನು.

— ॥ ಓಂ ॥—

—॥ ಶ್ರೀ ಗಣೇಶಾಯ ನಮಃ ॥—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಗಣಪತಿಖಂಡೇ

ಷಡ್ವಿಂಶತಿತಮೋಽಧ್ಯಾಯಃ

॥ ನಾರಾಯಣ ಉವಾಚ ॥

ಹರಿಂ ಸ್ಮರನ್ ಮುನಿಶ್ರೇಷ್ಠೋ ವಾಕ್ಯಂ ಶ್ರುತ್ವಾ ಚ ಭೂಭೃತಃ ।
ಹಿತಂ ಸತ್ಯಂ ನೀತಿಸಾರಂ ಪ್ರವಕ್ತುಮುಪಚಕ್ರಮೇ ॥ ೧ ॥

॥ ಮುನಿರುವಾಚ ॥

ಗೃಹಂ ಗಚ್ಛ ಮಹಾಭಾಗ ರಕ್ಷ ಧರ್ಮಂ ಸನಾತನಂ ।
ಸರ್ವಸಂಪತ್ಸ್ಥಿರಾ ಶಶ್ವತ್ಸ್ಥಿತೇ ಧರ್ಮೇ ಸುನಿಶ್ಚಿತಂ ॥ ೨ ॥

ತ್ವಾಂ ಚ ದೃಷ್ಟ್ವಾ ನಿರಾಹಾರಂ ಸಮಾನೀಯ ಗೃಹಂ ನೃಪ ।
ತವ ಪೂಜಾಮಕರವಂ ಯಥಾಶಕ್ತಿ ವಿಧಾನತಃ ॥ ೩ ॥

ಇಪ್ಪತ್ತಾರನೆಯ ಅಧ್ಯಾಯವು

೧. ನಾರಾಯಣ :—ಕಾರ್ತವೀರ್ಯನ ಮಾತುಗಳನ್ನು ಕೇಳಿದ ಜಮದಗ್ನಿಯು ಶ್ರೀಹರಿಯನ್ನು ಸ್ಮರಿಸುತ್ತ ಅವನನ್ನು ಕುರಿತು ಹಿತವೂ ಸತ್ಯವೂ ನೀತಿಯುತವೂ ಆದ ಕೆಲವು ಮಾತುಗಳನ್ನು ಹೇಳಿದನು.

೨. ಜಮದಗ್ನಿ :—ಎಲೈ ಮಹಾರಾಜನೇ ಸುಮ್ಮನೆ ನಿನ್ನ ರಾಜ್ಯಕ್ಕೆ ಹಿಂತಿರುಗಿ ಸನಾತನ ಧರ್ಮವನ್ನು ಕಾಪಾಡಿಕೊ. ಧರ್ಮವೊಂದುಳಿದರೆ ಸಕಲಸಂಪತ್ತೂ ಸ್ಥಿರವಾಗಿರುವುದರಲ್ಲಿ ಸಂಶಯವಿಲ್ಲ.

೩. ಎಲೈ ರಾಜನೇ, ನೀನು ನಿರಾಹಾರನಾಗಿದ್ದುದನ್ನು ನೋಡಿ ನನ್ನ ಮನೆಗೆ ಕರೆತಂದು, ಯಥಾಯೋಗ್ಯವಾಗಿ ನಿನಗೆ ಊಟೋಪಚಾರಗಳನ್ನು ಸಲ್ಲಿಸಿದೆನು.

ಸಾಂಪ್ರತಂ ಮೂರ್ಛಿತಂ ದೃಷ್ಟ್ವಾ ಪಾದರೇಣುಂ ಶುಭಾಶಿಷಂ।
ಅದದಾಂ ಚೇತಯಾಂ ಚಕ್ರೇ ವಕ್ತುಮೇವ್ಯೋಚಿತಂ ನ ಚ ॥ ೪ ॥

ನೃಪಸ್ತದ್ವಚನಂ ಶ್ರುತ್ವಾ ಪ್ರಣಮ್ಯ ಮುನಿಪುಂಗವಂ।
ರಥಮನ್ಯಂ ತ್ವಾರುರೋಹ ಯುದ್ಧಂ ದೇಹೀತ್ಯುವಾಚ ಹ ॥ ೫ ॥

ಮುನಿಃ ಕೃತ್ವಾ ಚ ಸನ್ನಾಹಂ ತಂ ಯೋದ್ಧುಮುಪಚಕ್ರಮೇ।
ರಾಜಾ ತಂ ಯುಯುಧೇ ತತ್ರ ಕೋಪೇನಾಹತಚೇತನಃ ॥ ೬ ॥

ಕಪಿಲಾದತ್ತಶಸ್ತ್ರೇಣ ನ್ಯಸ್ತಶಸ್ತ್ರಂ ಚಕಾರ ತಂ।
ಕಪಿಲಾದತ್ತಯಾ ಶಕ್ತ್ಯಾ ಪುನರ್ಮೂರ್ಛಾಮವಾಪ ಚ ॥ ೭ ॥

ಪುನಶ್ಚ ಚೇತನಾಂ ಪ್ರಾಪ್ಯ ರಾಜಾ ರಾಜೀವಲೋಚನಃ।
ಮುನಿನಾ ಯುಯುಧೇ ತತ್ರ ಕೋಪೇನ ಪುನರೇವ ಚ ॥ ೮ ॥

---

೪. ಈಗ ತಾನೇ ಮೂರ್ಛೆಗೊಂಡಿದ್ದ ನಿನ್ನ ಮೇಲೆ ಪಾದಧೂಳಿಯನ್ನು ಆಶೀರ್ವಾದಪೂರ್ವಕವಾಗಿ ಎರಚಿ ಚೇತನಗೊಳಿಸಿದೆನು. ಇದನ್ನೆಲ್ಲ ಹೇಳಿಕೊಂಡು ಹೆಮ್ಮೆಪಡಬಾರದು.

೫. ಆ ಮಾತನ್ನು ಕೇಳಿ ರಾಜನು ಆ ಮುನಿಗೆ ವಂದಿಸಿ, ಸಿದ್ಧವಾದ ಬೇರೊಂದು ರಥವನ್ನೇರಿ ಯುದ್ಧಸನ್ನದ್ಧನಾದನು.

೬. ಮುನಿಯೂ ಕೂಡ ಯುದ್ಧಸನ್ನದ್ಧನಾಗಿ ಯುದ್ಧಮಾಡಲುಪಕ್ರಮಿಸಿದನು. ಕುಪಿತನಾದ ರಾಜನಿಗೂ, ಮುನಿಗೂ ಘೋರ ಯುದ್ಧವಾಯಿತು.

೭ ಮುನಿಯು ಕಪಿಲೆಯು ಕೊಟ್ಟ ಶಸ್ತ್ರದಿಂದ ರಾಜನು ಶಸ್ತ್ರವನ್ನು ಕೆಳಗಿಡುವಂತೆ ಮಾಡಿದನು. ಅಲ್ಲದೆ ಕಪಿಲಾದತ್ತವಾದ ಶಕ್ತ್ಯಾಯುಧದ ಪೆಟ್ಟಿನಿಂದ ರಾಜನು ಮತ್ತೆ ಮೂರ್ಛೆಗೊಂಡನು.

೮. ಪುನಃ ಕಮಲದಳನಯನನಾದ ರಾಜನು ಚೇತನವನ್ನು ಹೊಂದಿ, ಕೋಪದಿಂದ ಮುನಿಯೊಡನೆ ಮತ್ತೆ ಮತ್ತೆ ಯುದ್ಧಮಾಡಿದನು. ಇಬ್ಬರಿಗೂ ಭಯಂಕರವಾದ ಯುದ್ಧವಾರಂಭವಾಯಿತು.

ಆಗ್ನೇಯಂ ಯೋಜಯಾಮಾಸ ಸಮರೇ ನೃಪಪುಂಗವಃ ।
ಮುನಿರ್ನಿರ್ವಾಪಯಾಮಾಸ ವಾರುಣೇನ ಚ ಲೀಲಯಾ ॥ ೯ ॥

ನೃಪೇಂದ್ರೋ ವಾರುಣಾಸ್ತ್ರಂ ಚ ಚಿಕ್ಷೇಪ ಸಮರೇ ಮುನೌ ।
ವಾಯವ್ಯಾಸ್ತ್ರೇಣ ಸ ಮುನಿಃ ಶಮಯಾಮಾಸ ಲೀಲಯಾ ॥ ೧೦ ॥

ವಾಯವ್ಯಾಸ್ತ್ರಂ ನೃಪಶ್ರೇಷ್ಠಶ್ಚಿಕ್ಷೇಪ ಸಮರೇ ತದಾ ।
ಗಾಂಧರ್ವೇಣ ಮುನಿಶ್ರೇಷ್ಠಃ ಶಮಯಾಮಾಸ ತತ್ಕ್ಷಣಂ ॥ ೧೧ ॥

ನಾಗಾಸ್ತ್ರಂ ಚ ನೃಪಶ್ರೇಷ್ಠಶ್ಚಿಕ್ಷೇಪ ರಣಮೂರ್ಧನಿ ।
ಗಾರುಡೇನ ಮುನಿಶ್ರೇಷ್ಠೋ ನಿಜಘಾನ ಕ್ಷಣಾನ್ಮುದಾ ॥ ೧೨ ॥

ಮಾಹೇಶ್ವರಂ ಮಹಾಸ್ತ್ರಂ ಚ ಶತಸೂರ್ಯಸಮಪ್ರಭಂ ।
ಚಿಕ್ಷೇಪ ನೃಪತಿಶ್ರೇಷ್ಠೋ ದ್ಯೋತಯಂತಂ ದಿಶೋ ದಶ ॥ ೧೩ ॥

---

೯. ಕಾರ್ತವೀರ್ಯನು ಯುದ್ಧದಲ್ಲಿ ಆಗ್ನೇಯಾಸ್ತ್ರವನ್ನು ಮಂತ್ರಿಸಿ ಬಿಡಲು ಜಮದಗ್ನಿಯು ವಾರುಣಾಸ್ತ್ರವನ್ನು ಬಿಟ್ಟು ಆ ಅಗ್ನಿಯನ್ನು ಆರಿಸಿದನು.

೧೦. ಕುಪಿತನಾದ ರಾಜನು ವಾರುಣಾಸ್ತ್ರವನ್ನು ಮಂತ್ರಿಸಿ ಬಿಡಲು, ಮುನಿಯು ಬಿಟ್ಟ ವಾಯವ್ಯಾಸ್ತ್ರದಿಂದ ಆ ಅಸ್ತ್ರವು ಶಾಂತವಾಯಿತು.

೧೧. ಅನಂತರ ರಾಜನು ಬಿಟ್ಟ ವಾಯವ್ಯಾಸ್ತ್ರವು, ಮುನಿಯು ಬಿಟ್ಟ ಗಾಂಧರ್ವಾಸ್ತ್ರದಿಂದ ಕ್ಷಣಮಾತ್ರದಲ್ಲಿಯೇ ಅಡಗಿಹೋಯಿತು.

೧೨. ರಾಜನು ಸರ್ಪಾಸ್ತ್ರವನ್ನು ಮಂತ್ರಿಸಿ ಬಿಡಲು ಮುನಿಯು ಗಾರುಡಾಸ್ತ್ರವನ್ನು ಬಿಟ್ಟು ಅದನ್ನು ನಾಶಗೊಳಿಸಿದನು.

೧೩. ಆಗ ಕೋಪೋದ್ರಿಕ್ತನಾದ ರಾಜನು ನೂರು ಸೂರ್ಯರ ತೇಜಸ್ಸಿನಿಂದ ಹತ್ತು ದಿಕ್ಕುಗಳನ್ನೂ ಬೆಳಗುತ್ತಿರುವ ಮಾಹೇಶ್ವರಾಸ್ತ್ರವನ್ನು ಮುನಿಯ ಮೇಲೆ ಪ್ರಯೋಗಿಸಿದನು.

ವೈಷ್ಣವಾಸ್ತ್ರೇಣ ದಿವ್ಯೇನ ತ್ರಿಲೋಕವ್ಯಾಪಕೇನ ಚ ।
ಮುನಿರ್ನಿರ್ವಾಪಯಾಮಾಸ ಬಹುಯತ್ನೇನ ನಾರದ ॥ ೧೪ ॥

ಮುನಿರ್ನಾರಾಯಣಾಸ್ತ್ರಂ ಚ ಚಿಕ್ಷೇಪ ಮಂತ್ರಪೂರ್ವಕಂ ।
ಶಸ್ತ್ರಂ ದೃಷ್ಟ್ವಾ ಮಹಾರಾಜೋ ನನಾಮ ಶರಣಂ ಯಯೌ ॥ ೧೫ ॥

ಊರ್ಧ್ವಂ ಚ ಭ್ರಮಣಂ ಕೃತ್ವಾ ಕ್ಷಣಂ ದೀಪ್ತ್ವಾ ದಿಶೋ ದಶ ।
ಪ್ರಲಯಾಗ್ನಿಸಮಂ ತತ್ರ ಸ್ವಯಮಂತರಧೀಯತ ॥ ೧೬ ॥

ಜೃಂಭಣಾಸ್ತ್ರಂ ಚ ಸ ಮುನಿಶ್ಚಿಕ್ಷೇಪ ರಣಮೂರ್ಧನಿ ।
ನಿದ್ರಾಂ ಪ್ರಾಪ ತೇನ ರಾಜಾ ಸುಷ್ವಾಪ ಚ ಮೃತೋ ಯಥಾ ॥ ೧೭ ॥

ದೃಷ್ಟ್ವಾ ನೃಪಂ ನಿದ್ರಿತಂ ತಂ ಚಾರ್ಧಚಂದ್ರೇಣ ತತ್ಕ್ಷಣಂ ।
ಚಿಚ್ಛೇದ ಸಾರಥಿಂ ಯಾನಂ ಧನುರ್ಬಾಣಂ ಮುನಿಸ್ತದಾ ॥ ೧೮ ॥

---

೧೪. ಎಲೈ ನಾರದನೇ, ಆಗ ಮುನಿಯು ಬಹಳ ಪ್ರಯತ್ನದಿಂದ, ತ್ರಿಲೋಕ ವ್ಯಾಪಕವಾದ ವೈಷ್ಣವಾಸ್ತ್ರವನ್ನು ಅದಕ್ಕೆ ಪ್ರತಿಯಾಗಿ ಬಿಟ್ಟು ಅದನ್ನು ಶಮನ ಮಾಡಿದನು.

೧೫. ಕೊನೆಗೆ ಮುನಿಯು ನಾರಾಯಣಾಸ್ತ್ರವನ್ನು ಮಂತ್ರಪೂರ್ವಕವಾಗಿ ಪ್ರಯೋಗಿಸಲು, ಮಹಾರಾಜನು ಆ ಅಸ್ತ್ರಕ್ಕೆ ತಲೆಬಾಗಿ ಶರಣಾಗತನಾದನು.

೧೬. ಪ್ರಳಯಾಗ್ನಿಯಂತಿದ್ದ ಆ ನಾರಾಯಣಾಸ್ತ್ರವು ಮೇಲೆಲ್ಲ ಸುತ್ತಾಡಿ, ಹತ್ತು ದಿಕ್ಕುಗಳನ್ನೂ ಕ್ಷಣಕಾಲ ಬೆಳಗಿ, ತಾನಾಗಿಯೇ ಅಂತರ್ಧಾನ ಹೊಂದಿತು.

೧೭. ಅನಂತರದಲ್ಲಿ ಮುನಿಯು ಜೃಂಭಣಾಸ್ತ್ರವನ್ನು ಪ್ರಯೋಗಿಸಲು, ಅದರ ಪ್ರಭಾವದಿಂದ ರಾಜನು ಯುದ್ಧಾಂಕಣದಲ್ಲಿ ಸತ್ತವನಂತೆ ಚಲಿಸದೆ ಬಿದ್ದು ಕೊಂಡನು.

೧೮. ಈ ರೀತಿ ರಾಜನು ಮೂರ್ಛಿತನಾದುದಂ ಕಂಡು ಮುನಿಯು ಅರ್ಧ ಚಂದ್ರಾಸ್ತ್ರವನ್ನು ಪ್ರಯೋಗಿಸಿ, ಅವನ ಸಾರಥಿಯನ್ನೂ, ರಥವನ್ನೂ, ಧನುರ್ಬಾಣ ಗಳನ್ನೂ ಕತ್ತರಿಸಿದನು.

ಮುಕುಟಂ ಚ ಕ್ಷುರಪ್ರೇಣ ಛತ್ರಂ ಸನ್ನಾಹಮೇವ ಚ ।
ಅಸ್ತ್ರಂ ತೂಣಂ ವಾಜಿಗಣಂ ವಿವಿಧೇನ ಚ ಭೂಭೃತಃ ॥ ೧೯ ॥

ಮುನಿಸ್ತತ್ಸಚಿವಾನ್ಸರ್ವಾನ್ನಾಗಾಸ್ತ್ರೇಣೈವ ಲೀಲಯಾ ।
ನಿಬಧ್ಯ ಸ್ಥಾಪಯಾಮಾಸ ಪ್ರಹಸ್ಯ ಸಮರಸ್ಥಲೇ ॥ ೨೦ ॥

ಮುನಿಸ್ತಂ ಬೋಧಯಾಮಾಸ ಸುಮಂತ್ರೇಣೈವ ಲೀಲಯಾ ।
ನಿಬದ್ಧಸರ್ವಾಮಾತ್ಯಾನಾಂ ದರ್ಶಯಾಮಾಸ ಭೂಮಿಪಂ ॥ ೨೧ ॥

ದರ್ಶಯಿತ್ವಾ ನೃಪಂ ತಾಂಶ್ಚ ಮೋಚಯಾಮಾಸ ತತ್ಕ್ಷಣಂ ।
ನೃಪೇಂದ್ರಮಾಶಿಷಂ ಕೃತ್ವಾ ಗೃಹಂ ಗಚ್ಛೇತ್ಯುವಾಚ ಹ ॥ ೨೨ ॥

ರಾಜಾ ಕೋಪಾತ್ಸಮುತ್ಥಾಯ ಶೂಲಮುದ್ಯಮ್ಯ ಯತ್ನತಃ ।
ಚಿಕ್ಷೇಪ ತಂ ಮುನಿಶ್ರೇಷ್ಠಂ ಮುನಿಃ ಶಕ್ತ್ಯಾ ಜಘಾನ ತಂ ॥ ೨೩ ॥

---

೧೯. ಅಲ್ಲದೆ ಕ್ಷುರಪ್ರ (ಕುದುರೆಯ ತಲೆಯಂತಿರುವ ಬಾಣ) ಶಸ್ತ್ರವನು ಪ್ರಯೋಗಿಸಿ, ರಾಜನ ಕಿರೀಟ ಮತ್ತು ಛತ್ರಿಗಳನ್ನೂ, ಬಾಣ ಬತ್ತಳಿಕೆಗಳನ್ನೂ, ಕುದುರೆಗಳ ಸಮೂಹವನ್ನೂ ನಾಶಗೊಳಿಸಿದನು.

೨೦. ಅನಂತರ ಮುನಿಯು ಆ ರಾಜನ ಮಂತ್ರಿಗಳೆಲ್ಲರನ್ನೂ, ಸರ್ಪಾಸ್ತ್ರದಿಂದ ಲೀಲಾಜಾಲವಾಗಿ ಬಂಧಿಸಿ, ಸಮರಾಂಗಣದಲ್ಲಿ ಕಟ್ಟಿ ನಗುತ್ತ ನಿಂತನು.

೨೧. ಮತ್ತು ಮಂತ್ರಶಕ್ತಿಯಿಂದ ರಾಜನನ್ನು ಎಚ್ಚರಗೊಳಿಸಿ, ಬಂಧಿತರಾದ ಮಂತ್ರಿಗಳಿಗೆಲ್ಲ ಆ ರಾಜನನ್ನು ತೋರಿಸಿದನು.

೨೨. ರಾಜನನ್ನು ತೋರಿಸಿದನಂತರ ಆ ಮಂತ್ರಿಗಳನ್ನೂ ಕ್ಷಣಮಾತ್ರದಲ್ಲಿ ಬಿಡುಗಡೆಮಾಡಿದನು. ಮತ್ತು ರಾಜನಿಗೆ ಆಶೀರ್ವಾದಮಾಡಿ ಈಗಲಾದರೂ ಮನೆಗೆ ಹೋಗೆಂದು ಹೇಳಿದನು.

೨೩. ರಾಜನಾದರೋ ಅವಮಾನದಿಂದ ಕೋಪಗೊಂಡು ಶೂಲಾಯುಧವನ್ನೆತ್ತಿ, ಮುನಿಯಮೇಲೆಸೆಯಲು ಮುನಿಯು ಶಕ್ತ್ಯಾಯುಧದಿಂದ ಆ ಶೂಲಾಯುಧವನ್ನು ಕತ್ತರಿಸಿದನು.

ಏತಸ್ಮಿನ್ನಂತರೇ ಬ್ರಹ್ಮಾ ಸಮಾಗತ್ಯ ರಣಸ್ಥಲಂ ।
ಸಂಪ್ರೀತಿಂ ಜನಯಾಮಾಸ ಸುನೀತ್ಯಾ ಚ ಪರಸ್ಪರಂ ॥ ೨೪ ॥

ಮುನಿರ್ನನಾಮ ಬ್ರಹ್ಮಾಣಂ ಸಂತುಷ್ಟಶ್ಚ ರಣಸ್ಥಲೇ ।
ರಾಜಾ ನತ್ವಾ ವಿಧಿಂ ಚರ್ಷಿಂ ಸ್ವಪುರಂ ಪ್ರಯಯೌ ತದಾ ॥ ೨೫ ॥

ಮುನಿರ್ಯಯೌ ಸ್ವಾಶ್ರಮಂ ಚ ಸ್ವಲೋಕಂ ಕಮಲೋದ್ಭವಃ ।
ಇತ್ಯೇವಂ ಕಥಿತಂ ಕಿಂಚಿದಪರಂ ಕಥಯಾಮಿ ತೇ ॥ ೨೬ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ತೃತೀಯೇ ಗಣಪತಿಖಡೇ
ನಾರದನಾರಾಯಣಸಂವಾದೇ ಜಮದಗ್ನಿಕಾರ್ತವೀರ್ಯ
ಯುದ್ಧೋಪಶಮವರ್ಣನಂ ನಾಮ ಷಡ್ವಿಂಶತಿ
ತಮೋಽಧ್ಯಾಯಃ

---

೨೪. ಅಷ್ಟುಹೊತ್ತಿಗೆ ಸರಿಯಾಗಿ ಬ್ರಹ್ಮನು ಯುದ್ಧಾಂಗಣಕ್ಕೆ ಬಂದು ನೀತಿಬೋಧೆಮಾಡಿ ಅವರಿಬ್ಬರಿಗೂ ಅನ್ಯೋನ್ಯ ಸ್ನೇಹವನ್ನುಂಟುಮಾಡಿಸಿದನು.

೨೫. ಸಂತುಷ್ಟನಾದ ಮುನಿಯು ಆ ಯುದ್ಧರಂಗದಲ್ಲಿಯೇ ಬ್ರಹ್ಮನಿಗೆ ಸಾಷ್ಟಾಂಗವೆರಗಿದನು. ರಾಜನೂ ಕೂಡ ಬ್ರಹ್ಮನಿಗೂ, ಆ ಮುನಿಗೂ ನಮಸ್ಕರಿಸಿ ತನ್ನ ರಾಜ್ಯಕ್ಕೆ ಹಿಂತಿರುಗಿದನು.

೨೬. ಜಮದಗ್ನಿಯು ತನ್ನ ಆಶ್ರಮಕ್ಕೂ, ಬ್ರಹ್ಮನು ತನ್ನ ಲೋಕಕ್ಕೂ ಹಿಂತಿರುಗಿದರು. ಈರೀತಿಯಾಗಿ ಜಮದಗ್ನಿ ಕಾರ್ತವೀರ್ಯರ ಯುದ್ಧವು ಪರಿಸಮಾಪ್ತವಾಯಿತು. ಉಳಿದುದನ್ನು ಮುಂದಿನ ಅಧ್ಯಾಯದಲ್ಲಿ ಹೇಳುವೆನು.

ಇಲ್ಲಿಗೆ ಬ್ರಹ್ಮವೈವರ್ತಮಹಾಪುರಾಣದ ಗಣಪತಿಖಂಡದಲ್ಲಿ ಜಮದಗ್ನಿ
ಕಾರ್ತವೀರ್ಯರ ಯುದ್ಧಶಮನರೂಪವಾದ ಇಪ್ಪತ್ತಾರನೆಯ
ಅಧ್ಯಾಯವು ಮುಗಿದುದು.

ಇಪ್ಪತ್ತಾರನೇ ಅಧ್ಯಾಯದ ಸಾರಾಂಶವು

ಜಮದಗ್ನಿಯ ಹಿತನುಡಿಗಳಿಗೆ ಕಾರ್ತವೀರ್ಯನು ಕಿವಿಗೊಡದಿರಲು ಇಬ್ಬರೂ ಮಂತ್ರಾಸ್ತ್ರಗಳಿಂದ ಯುದ್ಧಮಾಡಬೇಕಾಯಿತು. ರಾಜನು ಪ್ರಯೋಗಿಸಿದ ಮಂತ್ರಾಸ್ತ್ರಗಳನ್ನೆಲ್ಲ ಮುನಿಯು ವಿರುದ್ಧಾಸ್ತ್ರಗಳಿಂದ ಕತ್ತರಿಸಿ, ಕೊನೆಗೆ ಜೃಂಭಣಾಸ್ತ್ರವನ್ನು ಪ್ರಯೋಗಿಸಿ ಪುನಃ ರಾಜನನ್ನು ಮೂರ್ಛೆಗೊಳಿಸಿದುದಲ್ಲದೆ, ಅರ್ಧಚಂದ್ರಾಸ್ತ್ರಪ್ರಯೋಗದಿಂದ ಅವನ ಸಾರಥಿ, ರಥ, ವಾಹನ ಮತ್ತು ಧನುರ್ಬಾಣಾದಿಗಳನ್ನು ನಾಶಗೊಳಿಸಿ ಸರ್ಪಾಸ್ತ್ರದಿಂದ ಅವನ ಮಂತ್ರಿಗಳನ್ನೆಲ್ಲ ಬಂಧಿಸಿದನು. ಅನಂತರ ಮಂತ್ರಶಕ್ತಿಯಿಂದ ರಾಜನನ್ನು ಚೇತನಗೊಳಿಸಿ, ಮಂತ್ರಿಗಳನ್ನೆಲ್ಲ ತೋರಿಸಿ ಅವಮಾನಗೊಳಿಸಿದರೂ ರಾಜನು ಯುದ್ಧೋದ್ಯಮವನ್ನು ಬಿಡಲಿಲ್ಲ. ಆಗ ಬ್ರಹ್ಮನು ಬಂದು ಅವರಿಬ್ಬರನ್ನೂ ಶಾಂತಗೊಳಿಸಿ, ಅವರವರ ಸ್ಥಾನಕ್ಕೆ ಹಿಂತಿರುಗಿಸಿದನು.

—|| ಓಂ ||—

—|| ಶ್ರೀ ಗಣೇಶಾಯ ನಮಃ ||—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಗಣಪತಿಖಂಡೇ

ಸಪ್ತವಿಂಶತಿತಮೋಽಧ್ಯಾಯಃ

|| ನಾರಾಯಣ ಉವಾಚ ||

ಹರಿಂ ಸ್ಮೃತ್ವಾ ಗೃಹಂ ಗತ್ವಾ ರಾಜಾ ವಿಸ್ಮಿತಮಾನಸಃ |
ಆಜಗಾಮ ಮಹಾರಣ್ಯೇ ಜಮದಗ್ನ್ಯಾಶ್ರಮಂ ಪುನಃ || ೧ ||

ರಥಾನಾಂ ಚ ಚತುರ್ಲಕ್ಷಂ ರಥಿನಾಂ ದಶಲಕ್ಷಕಂ |
ಅಶ್ವೇಂದ್ರಾಣಾಂ ಗಜೇಂದ್ರಾಣಾಂ ಪದಾತೀನಾಮಸಂಖ್ಯಕಂ || ೨ ||

ರಾಜೇಂದ್ರಾಣಾಂ ಸಹಸ್ರಂ ಚ ಮಹಾಬಲಪರಾಕ್ರಮಂ |
ಮಹಾಸಮೃದ್ಧಿಯುಕ್ತಶ್ಚ ತ್ರೈಲೋಕ್ಯಂ ಜೇತುಮೀಶ್ವರಃ || ೩ ||

ಇಪ್ಪತ್ತೇಳನೆಯ ಅಧ್ಯಾಯ

೧. ನಾರಾಯಣ :—ಕಾರ್ತವೀರ್ಯಾರ್ಜುನನು ಹರಿಸ್ಮರಣೆಮಾಡುತ್ತ ತನ್ನ ರಾಜ್ಯಕ್ಕೆ ಹೋಗಿ, ಕಾಮಧೇನುವಿನ ಮಹಿಮೆಯಿಂದ ವಿಸ್ಮಯಗೊಂಡು ಪುನಃ ಜಮದಗ್ನಿಯ ಆಶ್ರಮಕ್ಕೆ ಬಂದನು.

೨. ನಾಲ್ಕುಲಕ್ಷ ರಥಗಳನ್ನೂ, ಹತ್ತುಲಕ್ಷ ರಥಿಕರನ್ನೂ, ಅಗಣಿತವಾದ ಹಸ್ತ್ಯಶ್ವಪದಾತಿಗಳನ್ನೂ ರಾಜನು ತನ್ನೊಡನೆ ತಂದನು.

೩. ಮಹಾಪರಾಕ್ರಮಶಾಲಿಗಳಾದ ಸಹಸ್ರಾರು ರಾಜಪುತ್ರರೊಡಗೂಡಿ ಸಮೃದ್ಧಿಯುತನಾಗಿ ತ್ರಿಲೋಕವನ್ನೂ ಗೆಲ್ಲಲು ಸಮರ್ಥನಾಗಿದ್ದನು.

ಸರ್ವತೋ ವೇಷ್ಟಯಾಮಾಸ ಜಮದಗ್ನ್ಯಾಶ್ರಮಂ ಮುದಾ ।
ರಥಸ್ಥೋ ವರ್ಮಯುಕ್ತಶ್ಚ ಕಾರ್ತವೀರ್ಯಾರ್ಜುನಃ ಸ್ವಯಂ ॥ ೪ ॥

ಸೈನ್ಯಶಬ್ದೈರ್ವಾದ್ಯಶಬ್ದೈರ್ಮಹಾಕೋಲಾಹಲೈರ್ಮುನೇ ।
ಜಮದಗ್ನ್ಯಾಶ್ರಮಸ್ಥಾಶ್ಚ ಮೂರ್ಛಾಮಾಪುರ್ಭಯೇನ ಚ ॥ ೫ ॥

ಕುಟೀಂ ಪ್ರವಿಶ್ಯ ಬಲವಾನ್ಗೃಹೀತ್ವಾ ಕಪಿಲಾಂ ಶುಭಾಂ ।
ಪುರಂ ಗಂತುಂ ಮನಶ್ಚಕ್ರೇ ದುರ್ಬುದ್ಧಿರಸದಾಶ್ರಯಃ ॥ ೬ ॥

ಸಮುತ್ತಸ್ಥೌ ಮುನಿಶ್ರೇಷ್ಠೋ ಗೃಹೀತ್ವಾ ಸಶರಂ ಧನುಃ ।
ಏಕಾಕೀ ಮುಕ್ತಗಾತ್ರಶ್ಚ ಧೇನುಂ ನತ್ವಾ ಹರಿಂ ಸ್ಮರನ್ ॥ ೭ ॥

ಆಶ್ರಮಸ್ಥಾಞ್ಜನಾನ್ಸರ್ವಾನ್ಸಮಾಶ್ವಾಸ್ಯ ಚ ಯತ್ನತಃ ।
ಆಜಗಾಮ ರಣಸ್ಥಾನಂ ನಿಶ್ಶಂಕೋ ನೃಪತೇಃ ಪುರಃ ॥ ೮ ॥

---

೪. ತಾನು ಲೋಹದ ಕವಚವನ್ನು ತೊಟ್ಟು, ರಥದಲ್ಲಿ ಕುಳಿತು, ಜಮದಗ್ನಿಯ ಆಶ್ರಮದ ಸುತ್ತಲೂ ಆವರಿಸಿಕೊಳ್ಳುವಂತೆ ತನ್ನ ಸೈನಿಕರಿಗೆ ಹೇಳಿದನು.

೫. ಎಲೈ ನಾರದಮುನಿಯೇ, ಸೈನ್ಯದ ಕೋಲಾಹಲ ಧ್ವನಿಯಿಂದಲೂ, ವಾದ್ಯದ ಘೋರ್ಗರೆಯುವಿಕೆಯಿಂದಲೂ, ಜಮದಗ್ನಿಯ ಆಶ್ರಮದಲ್ಲಿದ್ದವರೆಲ್ಲರೂ ಭಯಗೊಂಡು ಮೂರ್ಛಿತರಾದರು.

೬. ಆಗ ದುರ್ಬುದ್ಧಿಯೂ, ದುಷ್ಟಾಶ್ರಯನೂ ಆದ ರಾಜನು ಜಮದಗ್ನಿಯ ಪರ್ಣಶಾಲೆಯನ್ನು ಹೊಕ್ಕು, ಕಾಮಧೇನುವನ್ನು ಎಳೆದುಕೊಂಡು ತನ್ನ ಊರಿಗೆ ಹೋಗಲು ಮನಸ್ಸುಮಾಡಿದನು.

೭. ಆ ಸಮಯದಲ್ಲಿ ಜಮದಗ್ನಿಯು ಧನುರ್ಬಾಣಗಳನ್ನು ತೆಗೆದುಕೊಂಡು ಶ್ರೀಹರಿಯನ್ನು ಸ್ಮರಿಸುತ್ತ, ಕಾಮಧೇನುವಿಗೆ ವಂದಿಸಿ ಏಕಾಕಿಯಾಗಿ ಕವಚವನ್ನೂ ಧರಿಸದೆ ಬಂದನು.

೮. ಆಶ್ರಮವಾಸಿಗಳೆಲ್ಲರನ್ನೂ ಸಮಾಧಾನಗೊಳಿಸಿ, ನಿರ್ಭೀತನಾಗಿ ಯುದ್ಧರಂಗಕ್ಕೆ ಬಂದು ರಾಜನ ಮುಂದೆ ನಿಂತನು.

ನಿರ್ಮಮೇ ಶರಜಾಲಂ ಚ ಸ ಮುನಿರ್ಮಂತ್ರಪೂರ್ವಕಂ ।
ಆಚ್ಛಾದಯೇತ್ಸ್ವಾಶ್ರಮಂ ತೈರ್ಮಾನೇವಂ ವರ್ಮಣಾ ಯಥಾ ॥ ೯ ॥

ಅಪರಂ ಶರಜಾಲಂ ಚ ನಿರ್ಮಮೇ ಮುನಿಪುಂಗವಃ ।
ತೈರೇವ ವಾರಯಾಮಾಸ ಸರ್ವಸೈನ್ಯಂ ಯಥಾ ಕ್ರಮಂ ॥ ೧೦ ॥

ಮುನಿನಾ ಶರಜಾಲೇನ ಸರ್ವಸೈನ್ಯಂ ಸಮಾವೃತಂ ।
ತಾನಿ ಸರ್ವಾಣಿ ಗುಪ್ತಾನಿ ಯಥಾ ಪತ್ರಾಣಿ ಪಂಜರೇ ॥ ೧೧ ॥

ರಾಜಾ ದೃಷ್ಟ್ವಾ ಮುನಿಶ್ರೇಷ್ಠಮವರುಹ್ಯ ರಥಾತ್ಪುರಃ ।
ಸಾರ್ಧಂ ನೃಪೇಂದ್ರೈರ್ಭಕ್ತ್ಯಾ ಚ ಪ್ರಣನಾಮ ಕೃತಾಂಜಲಿಃ ॥ ೧೨ ॥

ನತ್ವಾರುರೋಹ ಯಾನಂ ಸ ಮುನೇಃ ಪ್ರಾಪ್ಯ ಶುಭಾಶಿಷಃ ।
ಆರುಹ್ಯ ಚ ನೃಪಶ್ರೇಷ್ಠಃ ಸ್ವಯಾನಂ ಹೃಷ್ಟಮಾನಸಃ ॥ ೧೩ ॥

---

೯. ಅಲ್ಲಿ ಮಂತ್ರಪೂರ್ವಕವಾಗಿ ಬಾಣಗಳ ಸಮೂಹವನ್ನು ನಿರ್ಮಿಸಿ ಮನುಜನ ಶರೀರವನ್ನು ಕವಚದಿಂದ ಮುಚ್ಚುವಂತೆ ಅವುಗಳಿಂದ ತನ್ನ ಆಶ್ರಮವನ್ನು ಮರೆಮಾಡಿದನು.

೧೦. ಅದೇ ರೀತಿ ಮತ್ತೊಂದು ಶರಜಾಲವನ್ನು ನಿರ್ಮಿಸಿ ಅವುಗಳಿಂದಲೇ ಕ್ರಮವಾಗಿ ಆ ರಾಜನ ಸೈನ್ಯವೆಲ್ಲವನ್ನೂ ತಡೆದನು.

೧೧. ಪಕ್ಷಿಗಳೆಲ್ಲವೂ ಪಂಜರದೊಳಗೆ ಸೇರಿಹೋಗುವಂತೆ ಆ ಮುನಿಯು ನಿರ್ಮಿಸಿದ ಶರಜಾಲದಲ್ಲಿ ಆ ರಾಜನ ಸೈನ್ಯವೆಲ್ಲವೂ ಅಡಗಿಹೋಯಿತು.

೧೨. ಈ ಆಶ್ಚರ್ಯವನ್ನು ನೋಡಿ ರಾಜನು ಮೊದಲು ರಥದಿಂದಿಳಿದು ಇತರ ರಾಜಪುತ್ರರೊಡನೆ ಮುನಿಯ ಸಮೀಪಕ್ಕೆ ಬಂದು ಭಕ್ತಿಯಿಂದ ಕೈಮುಗಿದು ನಮಸ್ಕರಿಸಿದನು.

೧೩. ಆ ಮುನಿಯ ಮಂಗಳಾಶೀರ್ವಾದಗಳನ್ನು ಪಡೆದು ಪುನಃ ತನ್ನ ರಥಕ್ಕೆ ಹತ್ತಿ ರಾಜನು ಸಂತುಷ್ಟಮನಸ್ಕನಾದನು.

ನೃಪೈಃ ಸಾರ್ಧಂ ನೃಪಶ್ರೇಷ್ಠಶ್ಚಿಕ್ಷೇಪ ಮುನಿಪುಂಗವೇ ।
ಅಸ್ತ್ರಂ ಶಸ್ತ್ರಂ ಗದಾಂ ಶಕ್ತಿಂ ಜಘಾನ ಕ್ರೀಡಯಾ ಮುನಿಃ ॥
ಮುನಿಶ್ಚಿಕ್ಷೇಪ ದಿವ್ಯಾಸ್ತ್ರಂ ಚಿಚ್ಛಿದೇ ಲೀಲಯಾ ನೃಪಃ ॥ ೧೪ ॥

ಶೂಲಂ ಚಿಕ್ಷೇಪ ನೃಪತಿಸ್ತಂ ಜಘಾನ ತದಾ ಮುನಿಃ ।
ಅಪರಂ ಶರಜಾಲಂ ಚ ನಿರ್ಮಮೇ ಮುನಿಪುಂಗವಃ ॥ ೧೫ ॥

ಶಸ್ತ್ರೌಘೈರ್ದುರ್ನಿವಾರ್ಯೈಶ್ಚ ಖಂಡಂ ಖಂಡಂ ಚಕಾರ ಸಃ ।
ನಿಬದ್ಧಾಶ್ಶರಜಾಲೇನ ನ ಚ ಶಕ್ತಾಃ ಪಲಾಯಿತುಂ ॥ ೧೬ ॥

ಜೃಂಭಣಾಸ್ತ್ರೇಣ ಮುನಿನಾ ತೇ ಚ ಸರ್ವೇ ವಿಜೃಂಭಿತಾಃ ।
ಹಸ್ತ್ಯಶ್ವರಥಪಾದಾತಸಹಿತಂ ಸರ್ವಸೈನ್ಯಕಂ ॥ ೧೭ ॥

---

೧೪. ಅನಂತರ ರಾಜನು ಇತರ ರಾಜರೊಡನೆ ಆ ಮುನಿಯ ಮೇಲೆ ಅಸ್ತ್ರ ಶಸ್ತ್ರಗಳನ್ನೂ, ಗದೆ, ಶಕ್ತಿ ಮುಂತಾದವುಗಳನ್ನೂ ಪ್ರಯೋಗಿಸಲು ಆ ಮುನಿಯು ಲೀಲಾಜಾಲವಾಗಿ ಅವುಗಳನ್ನು ಕತ್ತರಿಸಿದನು. ಅಂತೆಯೇ ಮುನಿಯು ಪ್ರಯೋಗಿಸಿದ ದಿವ್ಯಾಸ್ತ್ರಗಳನ್ನೆಲ್ಲ ರಾಜನು ಸುಲಭವಾಗಿ ಕತ್ತರಿಸಿದನು.

೧೫. ರಾಜನು ಪ್ರಯೋಗಮಾಡಿದ ಶೂಲಾಯುಧವನ್ನು ಮುನಿಯೂ ನಾಶಗೊಳಿಸಿ ಮತ್ತೊಂದು ಶರಜಾಲವನ್ನು ಸೃಷ್ಟಿಮಾಡಿದನು.

೧೬. ಅಲ್ಲದೆ ತಡೆಯಲಸಾಧ್ಯವಾದ ಶಸ್ತ್ರಸಮೂಹಗಳಿಂದ ಆ ರಾಜನ ಅಸ್ತ್ರಗಳೆಲ್ಲವನ್ನೂ ಚೂರು ಚೂರು ಮಾಡಿ, ಅವನ ಸೈನಿಕರನ್ನೆಲ್ಲ ಶರಜಾಲದಲ್ಲಿ ಬಂಧಿಸಿ ಓಡಿಹೋಗದಂತೆ ಮಾಡಿದನು.

೧೭. ಮುನಿಯು ಪ್ರಯೋಗಿಸಿದ ಜೃಂಭಣಾಸ್ತ್ರದಿಂದ ಅಲ್ಲಿದ್ದ ಆನೆ. ಕುದುರೆ, ರಥ ಮತ್ತು ಪದಾತಿಸಹಿತವಾದ ಸಕಲ ಸೈನಿಕರೂ ಮೂರ್ಛೆಗೊಂಡರು (ಚದರಿ ಹೋದರು)

ರಾಜಾನಂ ನಿದ್ರಿತಂ ದೃಷ್ಟ್ವಾ ನ ಜಘಾನ ಮುನೀಶ್ವರಃ ।
ಗೃಹೀತ್ವಾ ಕಪಿಲಾಂ ಹೃಷ್ಟೋ ರುದಂತೀಂ ಶೋಕಮೂರ್ಛಿತಾಂ ॥
ಬೋಧಯಿತ್ವಾ ಪುರಃ ಕೃತ್ವಾ ಸ್ವಾಶ್ರಮಂ ಗಂತುಮುದ್ಯತಃ ॥ ೧೮ ॥

ಏತಸ್ಮಿನ್ನಂತರೇ ರಾಜಾ ಚೇತನಾಂ ಪ್ರಾಪ್ಯ ನಾರದ ।
ನಿವಾರಯಾಮಾಸ ಮುನಿಂ ಗೃಹೀತ್ವಾಸಶರಂ ಧನುಃ ॥ ೧೯ ॥

ಜಗಾಮ ಕಪಿಲಾ ತ್ರಸ್ತಾ ಸ್ವಸ್ಥಾನಂ ಚ ರಣಾಜಿರಾತ್ ।
ಮುನಿಶ್ಚ ತಸ್ಥೌ ನಿಶ್ಶಂಕೋ ಗೃಹೀತ್ವಾ ಸಶರಂ ಧನುಃ ॥ ೨೦ ॥

ಬ್ರಹ್ಮಾಸ್ತ್ರಂ ಚ ನೃಪಶ್ರೇಷ್ಠಃ ಸ ಚಿಕ್ಷೇಪ ಮುನೌ ತದಾ ।
ಬ್ರಹ್ಮಾಸ್ತ್ರೇಣ ಮುನೀಂದ್ರಸ್ಯ ಸದ್ಯೋ ನಿರ್ವಾಣತಾಂ ಗತಂ ॥ ೨೧ ॥

ದಿವ್ಯಾಸ್ತ್ರೇಣ ಮುನಿಶ್ರೇಷ್ಠೋ ನೃಪಸ್ಯ ಸಶರಂ ಧನುಃ ।
ರಥಂ ಚ ಸಾರಥಿಂ ಚೈವ ಚಿಚ್ಛಿದೇ ವರ್ಮ ದುರ್ವಹಂ ॥ ೨೨ ॥

---

೧೮. ರಾಜನು ನಿದ್ರೆ ಮಾಡುತ್ತಿರುವುದನ್ನು ಕಂಡು ಜಮದಗ್ನಿಯು ಅವನ ಮೇಲೆ ಅಸ್ತ್ರಪ್ರಯೋಗಮಾಡದೆ, ದುಃಖದಿಂದ ಗೋಳಾಡುತ್ತಿರುವ ಕಾಮಧೇನುವನ್ನು ಮಾತ್ರ ಹಿಡಿದುಕೊಂಡು ಅದನ್ನು ಸಮಾಧಾನಗೊಳಿಸಿ ಮುಂದುಮಾಡಿಕೊಂಡು ತನ್ನ ಆಶ್ರಮಕ್ಕೆ ಹೊರಡಲನುವಾದನು.

೧೯. ಅಷ್ಟುಹೊತ್ತಿಗೆ ರಾಜನು ಎಚ್ಚತ್ತು ತನ್ನ ಧನುರ್ಬಾಣಗಳನ್ನು ಹಿಡಿದುಕೊಂಡು ಕಾಮಧೇನುವಿನೊಡನೆ ಹೊರಟಿದ್ದ ಮುನಿಯನ್ನು ಅಡ್ಡಗಟ್ಟಿದನು.

೨೦. ಭಯಗೊಂಡ ಕಾಮಧೇನುವು ಯುದ್ಧಾಂಕಣವನ್ನು ಬಿಟ್ಟು ತನ್ನ ಸ್ಥಾನಕ್ಕೆ ಹೊರಟುಹೋಗಲು, ಮುನಿಯು ನಿರ್ಭೀತನಾಗಿ ಧನುರ್ಬಾಣಗಳನ್ನು ಹಿಡಿದುಕೊಂಡು ಯುದ್ಧಸಿದ್ಧನಾದನು.

೨೧. ಅನಂತರ ಕಾರ್ತವೀರ್ಯನು ಆ ಮುನಿಯ ಮೇಲೆ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಲು ಅದು ಆ ಮುನಿಯು ಬಿಟ್ಟ ಬ್ರಹ್ಮಾಸ್ತ್ರದಿಂದ ಶಾಂತವಾಯಿತು.

೨೨. ಮುನಿಯು ದಿವ್ಯಾಸ್ತ್ರದಿಂದ ರಾಜನ ಧನುರ್ಬಾಣಗಳನ್ನೂ ಸಾರಥಿ, ರಥ ಮತ್ತು ಅವನು ತೊಟ್ಟಿರುವ ಕವಚವನ್ನೂ ಕತ್ತರಿಸಿದನು.

ಅಥ ರಾಜಾ ಮಹಾಕ್ರುದ್ಧೋ ದದರ್ಶ ಸ್ವಸಮೀಪತಃ ।
ದತ್ತೇನ ದತ್ತಾಂ ಶಕ್ತಿಂ ತಾಮೇಕಪೂರುಷಘಾತಿನೀಂ ॥ ೨೩ ॥

ಜಗ್ರಾಹ ನತ್ವಾ ದತ್ತಂ ತಂ ಸ ನತ್ವಾ ಶಕ್ತಿಮುಲ್ಬಣಾಂ ।
ಚೂರ್ಣಯಾಮಾಸ ತತ್ರೈವ ಶತಸೂರ್ಯಸಮಪ್ರಭಾಂ ॥ ೨೪ ॥

ಯತ್ತೇಜಃ ಸರ್ವದೇವಾನಾಂ ತೇಜೋ ನಾರಾಯಣಸ್ಯ ಚ ।
ಶಂಭೋಶ್ಚ ಬ್ರಹ್ಮಣಶ್ಚೈವ ಮಾಯಾಯಾಶ್ಚೈವ ನಾರದ ॥ ೨೫ ॥

ತತ್ರೈವಾವಾಹಯಾಮಾಸ ಸ ಯೋಗೀ ಮಂತ್ರಪೂರ್ವಕಂ ।
ತೇಜಸಾ ದ್ಯೋತಯಾಮಾಸ ಗಗನಂ ಚ ದಿಶೋ ದಶ ॥ ೨೬ ॥

ದೃಷ್ಟ್ವಾ ಕ್ಷಿಪಂತೀಂ ತಾಂ ದೇವಾ ಹಾಹಾಕಾರೇಣ ಚುಕ್ರುಶುಃ ।
ಆಕಾಶಸ್ಥಾಶ್ಚ ಸಮರಂ ಪಶ್ಯಂತೋ ದುಃಖಿತಾ ಹೃದಾ ॥ ೨೭ ॥

---

೨೩. ಆಗ ಅತ್ಯಂತ ಕೋಪಾವಿಷ್ಟನಾದ ರಾಜನು ದತ್ತಾತ್ರೇಯನು ಕೊಟ್ಟ ಒಬ್ಬ ಪುರುಷನನ್ನು ಮಾತ್ರ ಸಂಹರಿಸುವ, ಶಕ್ತ್ಯಾಯುಧವನ್ನು ತನ್ನ ಸಮೀಪದಲ್ಲಿ ಕಂಡನು.

೨೪. ಕೂಡಲೇ ದತ್ತಾತ್ರೇಯನಿಗೂ, ಆ ಶಕ್ತ್ಯಾಯುಧಕ್ಕೂ ನಮಸ್ಕಾರ ಮಾಡಿ ಶತಸೂರ್ಯರಂತೆ ತೇಜೋಮಯವಾದ ಆ ಶಕ್ತಿಯನ್ನು ತೆಗೆದುಕೊಂಡು ಧನುಸ್ಸಿಗೆ ಜೋಡಿಸಿ ಹೆದೆಯೇರಿಸಿದನು.

೨೫—೨೬. ಎಲೈ ನಾರದನೇ, ಯೋಗಿಶ್ರೇಷ್ಠನಾದ ಆ ಕಾರ್ತವೀರ್ಯಾರ್ಜುನನು ಬ್ರಹ್ಮ, ವಿಷ್ಣು, ಮಹೇಶ್ವರ, ಮಾಯೆ ಮುಂತಾದ ಸಕಲ ದೇವತೆಗಳ ತೇಜಸ್ಸನ್ನೂ ಆ ಶಕ್ತ್ಯಾಯುಧದಲ್ಲಿ ಮಂತ್ರಪೂರ್ವಕವಾಗಿ ಆವಾಹನೆಮಾಡಿ ಅದರ ತೇಜಸ್ಸಿನಿಂದ ಅಂತರಿಕ್ಷವನ್ನೂ, ದಶದಿಕ್ಕುಗಳನ್ನೂ ಬೆಳಗಿದನು.

೨೭. ಆ ಯುದ್ಧವನ್ನು ನೋಡಲು ಆಕಾಶದಲ್ಲಿ ನೆರೆದಿದ್ದ ದೇವತೆಗಳೆಲ್ಲರೂ ಉರಿಯುತ್ತಿರುವ ಆ ಶಕ್ತ್ಯಾಯುಧವನ್ನು ನೋಡಿ ದುಃಖಿತರಾಗಿ ಹಾಹಾಕಾರ ಧ್ವನಿ ಮಾಡಿದರು.

ಚಿಕ್ಷೇಪ ತಾಂ ಚೂರ್ಣಯಿತ್ವಾ ಕಾರ್ತವೀರ್ಯಾರ್ಜುನಃ ಸ್ವಯಂ ।
ಸದ್ಯಃ ಪಪಾತ ಸಾ ಶಕ್ತಿರ್ಜ್ವಲಂತೀ ಮುನಿವಕ್ಷಸಿ ॥ ೨೮ ॥

ವಿದಾರ್ಯೋರೋ ಮುನೇಃ ಶಕ್ತಿರ್ಜಗಾಮ ಹರಿಸನ್ನಿಧಿಂ ।
ದತ್ತಾಯ ಹರಿಣಾ ದತ್ತಾ ಶಸ್ತ್ರಾಸ್ತ್ರನಿಧಯೇ ತದಾ ॥ ೨೯ ॥

ಮೂರ್ಛಾಂ ಸಂಪ್ರಾಪ್ಯ ಸ ಮುನಿಃ ಪ್ರಾಣಾಂಸ್ತತ್ಯಾಜ ತತ್ಕ್ಷಣಂ ।
ತೇಜೋಂಬರೇ ಭ್ರಮಿತ್ವಾ ಚ ಬ್ರಹ್ಮಲೋಕಂ ಜಗಾಮ ಹ ॥ ೩೦ ॥

ಯುದ್ಧೇ ಮುನಿಂ ಮೃತಂ ದೃಷ್ಟ್ವಾ ರುರೋದ ಕಪಿಲಾ ಮುಹುಃ ।
ಹೇ ತಾತ ತಾತೇತ್ಯುಚ್ಚಾರ್ಯ ಗೋಲೋಕಂ ಸಾ ಜಗಾಮ ಹ ॥ ೩೧ ॥

ಸರ್ವಂ ಸಾ ಕಥಯಾಮಾಸ ಗೋಲೋಕೇ ಕೃಷ್ಣಮೀಶ್ವರಂ ।
ರತ್ನಸಿಂಹಾಸನಸ್ಥಂ ತಂ ಗೋಪೈರ್ಗೋಪೀಭಿರಾವೃತಂ ॥ ೩೨ ॥

೨೮—ಕಾರ್ತವೀರ್ಯಾರ್ಜುನನು ಹೆದೆಯೇರಿಸಿ ಪ್ರಯೋಗಿಸಿದ ಆ ಶಕ್ತ್ಯಾಯುಧವು ಪ್ರಜ್ವಲಿಸುತ್ತ ಕೂಡಲೆ ಆ ಜಮದಗ್ನಿಯ ವಕ್ಷಸ್ಥಲದಲ್ಲಿ ಬಿದ್ದಿತು.

೨೯. ಆ ಮುನಿಯ ವಕ್ಷಃಸ್ಥಳವನ್ನು ಸೀಳಿ ಆ ಶಕ್ತ್ಯಾಯುಧವು ಶ್ರೀಹರಿಯ ಸಮೀಪಕ್ಕೆ ಹೋಯಿತು. ಏಕೆಂದರೆ ಶ್ರೀಹರಿಯು ಆ ಶಕ್ತಿಯನ್ನು ಶಸ್ತ್ರಾಸ್ತ್ರ ನಿಧಿಯಾದ ದತ್ತಾತ್ರೇಯನಿಗೆ ಕೊಟ್ಟಿದ್ದನು.

೩೦. ಇತ್ತ ಮುನಿಯು ಮೂರ್ಛೆಗೊಂಡು ಉತ್ತರಕ್ಷಣದಲ್ಲಿಯೇ ಪ್ರಾಣತ್ಯಾಗ ಮಾಡಿದನು. ಅವನ ಆತ್ಮತೇಜಸ್ಸು ಆಕಾಶದಲ್ಲಿ ಭ್ರಮಿಸಿ ಬ್ರಹ್ಮಲೋಕಕ್ಕೆ ಸೇರಿತು.

೩೧. ಯುದ್ಧದಲ್ಲಿ ಜಮದಗ್ನಿಯು ಮೃತನಾದುದನ್ನು ನೋಡಿ ಆ ಕಾಮಧೇನುವು, ಅಯ್ಯೋ ತಂದೆ, ತಂದೆ ಎಂದು ಬಹಳವಾಗಿ ಗೋಳಾಡಿ ಗೋಲೋಕಕ್ಕೆ ಹೊರಟುಹೋಯಿತು.

೩೨. ಅಲ್ಲಿ ಗೋಪಗೋಪಿಯರಿಂದ ಪರಿವೃತನಾಗಿ ರತ್ನಸಿಂಹಾಸನದಲ್ಲಿ ಕುಳಿತಿದ್ದ ಶ್ರೀ ಕೃಷ್ಣಪರಮಾತ್ಮನಿಗೆ ನಡೆದ ಸಮಾಚಾರವನ್ನೆಲ್ಲ ತಿಳಿಸಿತು.

ಕೃಷ್ಣೇನ ಬ್ರಹ್ಮಣೇ ದತ್ತಾ ಬ್ರಹ್ಮಣಾ ಭೃಗವೇ ಪುರಾ ।
ಸಾ ಪ್ರೀತ್ಯಾ ಪುಷ್ಕರೇ ಬ್ರಹ್ಮನ್ಭೃಗುಣಾ ಜಮದಗ್ನಯೇ ॥ ೩೩ ॥

ನತ್ವಾ ಚ ಕಾಮಧೇನೂನಾಂ ಸಮೂಹಂ ಸಾ ಜಗಾಮ ಹ ।
ತದಶ್ರುಬಿಂದುನಾಮರ್ತ್ಯೇ ರತ್ನಸಂಘೋ ಬಭೂವ ಹ ॥ ೩೪ ॥

ಅಥ ರಾಜಾ ತಂ ನಿಹತ್ಯ ಬೋಧಯಿತ್ವಾ ಸ್ವಸೈನ್ಯಕಂ ।
ಪ್ರಾಯಶ್ಚಿತ್ತಂ ವಿನಿರ್ವರ್ತ್ಯ ಜಗಾಮ ಸ್ವಪುರಂ ಮುದಾ ॥ ೩೫ ॥

ಪ್ರಾಣನಾಥಂ ಮೃತಂ ಶ್ರುತ್ವಾ ಜಗಾಮ ರೇಣುಕಾ ಸತೀ ।
ಮುನಿಂ ವಕ್ಷಸಿ ಸಂಸ್ಥಾಪ್ಯ ಕ್ಷಣಂ ಮೂರ್ಛಾಮವಾಪ ಸಾ ॥ ೩೬ ॥

ತತಃ ಸಾ ಚೇತನಾಂ ಪ್ರಾಪ್ಯ ನ ರುರೋದ ಪತಿವ್ರತಾ ।
ಏಹಿ ವತ್ಸ ಭೃಗೋ ರಾಮ ರಾಮರಾಮೇತ್ಯುವಾಚ ಹ ॥ ೩೭ ॥

---

೩೩. ಪೂರ್ವದಲ್ಲಿ ಶ್ರೀಕೃಷ್ಣನು ಆ ಕಾಮಧೇನುವನ್ನು ಬ್ರಹ್ಮನಿಗೂ, ಬ್ರಹ್ಮನು ಭೃಗುವಿಗೂ ಅವನು ಪುಷ್ಕರಕ್ಷೇತ್ರದಲ್ಲಿ ತನ್ನ ಪುತ್ರನಾದ ಜಮದಗ್ನಿಗೂ ಪ್ರೀತಿಯಿಂದ ಕೊಟ್ಟರು.

೩೪. ಗೋಲೋಕದಲ್ಲಿದ್ದ ಕಾಮಧೇನುಗಳ ಸಮೂಹಕ್ಕೆ ಆ ಕಪಿಲೆಯು ನಮಸ್ಕರಿಸಿ ತನ್ನ ಸ್ಥಾನಕ್ಕೆ ಹೊರಟುಹೋಯಿತು. ಆ ಕಪಿಲೆಯ ಕಣ್ಣೀರು ಹನಿಗಳಿಂದಲೇ ಭೂಲೋಕದಲ್ಲಿ ರತ್ನಗಳ ಸೃಷ್ಟಿಯಾಯಿತು.

೩೫. ಇತ್ತ ಕಾರ್ತವೀರ್ಯಾರ್ಜುನನು ಮುನಿಯನ್ನು ಸಂಹರಿಸಿದ ನಂತರ ಪ್ರಾಯಶ್ಚಿತ್ತಮಾಡಿಕೊಂಡು ತನ್ನ ಸೈನ್ಯದೊಡನೆ ತನ್ನ ರಾಜ್ಯಕ್ಕೆ ಹಿಂತಿರುಗಿದನು.

೩೬. ತನ್ನ ಪ್ರಾಣಕಾಂತನು ಮೃತನಾದದನ್ನು ಕೇಳಿ ರೇಣುಕಾದೇವಿಯು ಯುದ್ಧರಂಗಕ್ಕೆ ಹೋಗಿ, ಅವನ ಮೃತದೇಹವನ್ನು ತನ್ನ ಎದೆಗಪ್ಪಿಕೊಂಡು ಮೂರ್ಛೆಹೋದಳು.

೩೭. ಪುನಃ ಚೇತನವನ್ನು ಹೊಂದಿದ ಆ ಪತಿವ್ರತೆಯು ಪತಿಯ ಮರಣಕ್ಕಾಗಿ ವ್ಯಥೆಪಡದೆ, ತನ್ನ ಪುತ್ರನಾದ ಪರಶುರಾಮನನ್ನು ಸ್ಮರಿಸಿಕೊಂಡು ಕೂಗಿದಳು.

ಆಜಗಾಮ ಭೃಗುಸ್ತೂರ್ಣಂ ಕ್ಷಣಾದ್ವೈ ಪುಷ್ಕರಾದಹೋ ।
ನನಾಮ ಮಾತರಂ ಭಕ್ತ್ಯಾ ಮನೋಯಾಯೀ ಚ ಯೋಗವಿತ್ ॥ ೩೮ ॥

ದೃಷ್ಟ್ವಾ ರಾಮೋ ಮೃತಂ ತಾತಂ ಶೋಕಾರ್ತಾಂ ಜನನೀಂ ಸತೀಂ ।
ಆಕರ್ಣ್ಯ ರಣವೃತ್ತಾಂತಂ ಪ್ರಯಾಂತೀಂ ಕಪಿಲಾಂ ಶುಚಾ ॥ ೩೯ ॥

ವಿಲಲಾಪ ಭೃಶಂ ತತ್ರ ಹೇ ತಾತ ಜನನೀತಿ ಚ ।
ಚಿತಾಂ ಚಕಾರ ಯೋಗೀಂದ್ರಶ್ಚಂದನೈರಾಜ್ಯಸಂಯುತಂ ॥ ೪೦ ॥

ರೇಣುಕಾ ರಾಮಮಾದಾಯ ತೂರ್ಣಂ ಕೃತ್ವಾ ಸ್ವವಕ್ಷಸಿ ।
ಚುಚುಂಬ ಗಂಡೇ ಶಿರಸಿ ರುರೋದೋಚ್ಚೈರ್ಭೃಶಂ ಮುಹುಃ ॥ ೪೧ ॥

ರಾಮ ರಾಮ ಮಹಾಬಾಹೋ ಕ್ವ ಯಾಮಿ ತ್ವಾಂ ವಿಹಾಯ ಚ ।
ವತ್ಸ ವತ್ಸೇತಿ ಕೃತ್ವೈವಂ ವಿಲಲಾಪ ಭೃಶಂ ಮುಹುಃ ॥ ೪೨ ॥

---

೩೮. ಪುಷ್ಕರಕ್ಷೇತ್ರದಲ್ಲಿ ಪರಶುರಾಮನು ಯೋಗಬಲದಿಂದ, ತಾಯಿಯು ಕೂಗಿದಳೆಂದು ತಿಳಿದು ಮನೋವೇಗದಿಂದ ಅಲ್ಲಿಗೆ ಬಂದು ತಾಯಿಗೆ ನಮಸ್ಕಾರ ಮಾಡಿದನು.

೩೯. ಪರಶುರಾಮನು ಮೃತನಾದ ತಂದೆಯನ್ನೂ, ದುಃಖಿತಳಾದ ತಾಯಿಯನ್ನೂ ನೋಡಿ, ಯುದ್ಧದ ಪರಿಣಾಮವಾಗಿ ತಂದೆಯು ಮೃತನಾದುದಲ್ಲದೆ ಕಪಿಲೆಯು ಹೊರಟುಹೋಯಿತೆಂದು ಗೋಳಾಡಿದನು.

೪೦. ತಂದೆತಾಯಿಯರನ್ನು ನೆನಸಿಕೊಂಡು ಬಹಳ ಹೊತ್ತು ಗೋಳಾಡಿದ ಮೇಲೆ ಯೋಗಿಶ್ರೇಷ್ಠನಾದ ಆ ಪರಶುರಾಮನು ಚಂದನ ಕಾಷ್ಠಗಳನ್ನು ತುಪ್ಪದಲ್ಲದ್ದಿ ಚಿತೆಯನ್ನು ರಚಿಸಿದನು.

೪೧. ಆಗ ರೇಣುಕಾದೇವಿಯು ಪರಶುರಾಮನನ್ನು ಸೆಳೆದು ವೃಕ್ಷಃಸ್ಥಲದಲ್ಲಿ ಅಪ್ಪಿಕೊಂಡು ತಲೆಯ ಮೇಲೂ, ಕಪೋಲಗಳಲ್ಲಿಯೂ ಚುಂಬಿಸಿ ಬಹಳವಾಗಿ ಅತ್ತಳು.

೪೨. ಮಹಾಪರಾಕ್ರಮಶಾಲಿಯಾದ ಎಲೈ ರಾಮನೇ, ನಿನ್ನನ್ನು ಬಿಟ್ಟು ನಾನೆಲ್ಲಿಗೆ ಹೋಗಲಿ? ವತ್ಸ, ವತ್ಸ, ನನ್ನನ್ನು ಕಾಪಾಡು ಕಾಪಾಡು ಎಂದು ರೇಣುಕಾದೇವಿಯು ಗೋಳಾಡಿದಳು.

ಮತ್ಪ್ರಾಣಾಧಿಕ ಹೇ ವತ್ಸ ಮದೀಯಂ ವಚನಂ ಶೃಣು ।
ಪಿತ್ರೋಃ ಶೇಷಕ್ರಿಯಾಂ ಕೃತ್ವಾ ಯಾಯಾಯುದ್ಧಂ ನ ಪುತ್ರಕ ॥ ೪೩ ॥

ಗೃಹೇ ತಿಷ್ಠ ಸುಖಂ ವತ್ಸ ತಪಸ್ಯಾಂ ಕುರು ಶಾಶ್ವತೀಂ ।
ಸಮರಂ ನೈವ ಸುಖದಂ ದಾರುಣೈಃ ಕ್ಷತ್ರಿಯೈಃ ಸಹ ॥ ೪೪ ॥

ಮಾತುರ್ವಚನಮಶ್ರುತ್ವಾ ಪ್ರತಿಜ್ಞಾಂ ತಾಂ ಚಕಾರ ಹ ।
ತ್ರಿಸ್ಸಪ್ತಕೃತ್ವೋ ನಿರ್ಭೂಪಾಂ ಕರಿಷ್ಯಾಮಿ ಧ್ರುವಂ ಮಹೀಂ ॥ ೪೫ ॥

ಕಾರ್ತವೀರ್ಯಂ ಹನಿಷ್ಯಾಮಿ ಲೀಲಯಾ ಕ್ಷತ್ರಿಯಾಧಮಂ ।
ಪಿತೄಂಶ್ಚ ತರ್ಪಯಿಷ್ಯಾಮಿ ಕ್ಷತ್ರಿಯಕ್ಷತಜೈಸ್ತಥಾ ॥ ೪೬ ॥

ಇತ್ಯುದೀರ್ಯ ಪುರೋ ಮಾತುರ್ವಿಲಲಾಪ ಮುಹುರ್ಮುಹುಃ ।
ಹಿತಂ ತಥ್ಯಂ ನೀತಿಸಾರಂ ಬೋಧಯಾಮಾಸ ಮಾತರಂ ॥ ೪೭ ॥

---

೪೩. ನನ್ನ ಪ್ರಾಣಕ್ಕಿಂತಲೂ ಪ್ರೀತಿಪಾತ್ರನಾದ ವತ್ಸನೇ, ನನ್ನ ಮಾತನ್ನು ಕೇಳು. ನಿನ್ನ ತಾಯಿತಂದೆಯರ ಉತ್ತರಕ್ರಿಯೆಯನ್ನು ಮಾಡು, ಯುದ್ಧಕ್ಕೆ ಮಾತ್ರ ಹೋಗಬೇಡ.

೪೪. ಮನೆಯಲ್ಲಿ ಸುಖವಾಗಿದ್ದುಕೊಂಡು ಶಾಶ್ವತಫಲಪ್ರದವಾದ ತಪಸ್ಸನ್ನು ಮಾಡು. ಕ್ರೂರಿಗಳಾದ ಕ್ಷತ್ರಿಯರೊಡನೆ ಯುದ್ಧ ಮಾಡುವುದು ಮಾತ್ರ ಎಂದೆಂದಿಗೂ ಸುಖಕರವಲ್ಲ.

೪೫. ಪರಶುರಾಮನಾದರೋ ತಾಯಿಯ ಮಾತಿಗೆ ಕಿವಿಗೊಡದೆ, ಭೂಮಿಯನ್ನು ಇಪ್ಪತ್ತೊಂದು ಸಾರಿ ಸುತ್ತಿ ಕ್ಷತ್ರಿಯರಿಲ್ಲದಂತೆ ಮಾಡುವುದಾಗಿ ಪ್ರತಿಜ್ಞೆಮಾಡಿದನು.

೪೬. ಕ್ಷತ್ರಿಯಾಧಮನಾದ ಕಾರ್ತವೀರ್ಯನನ್ನು ಲೀಲಾಜಾಲದಿಂದಕೊಂದು, ಕ್ಷತ್ರಿಯ ರಕ್ತದಿಂದ ತಂದೆತಾಯಿಗಳಿಗೆ ತರ್ಪಣ ಕೊಡುವೆನು.

೪೭. ಹೀಗೆ ಹೇಳಿ ತಾಯಿಯ ಮುಂದೆ ಸ್ವಲ್ಪಹೊತ್ತು ಗೋಳಾಡಿ ಹಿತವೂ ಸತ್ಯವೂ ಆದ ಕೆಲವು ನೀತಿವಾಕ್ಯಗಳನ್ನು ತಾಯಿಗೆ ಬೋಧಿಸಿದನು.

॥ ರಾಮ ಉವಾಚ ॥

ಪಿತುಃ ಶಾಸನಹಂತಾರಂ ಪಿತುರ್ವಧವಿಧಾಯಕಂ ।
ಯೋ ನ ಹಂತಿ ಮಹಾಮೂಢೋ ರೌರವಂ ಸ ವ್ರಜೇದ್ಧ್ರುವಂ ॥ ೪೮ ॥

ಅಗ್ನಿದೋ ಗರದಶ್ಚೈವ ಶಸ್ತ್ರಪಾಣಿರ್ಧನಾಪಹಃ ।
ಕ್ಷೇತ್ರದಾರಾಪಹಾರೀ ಚ ಪಿತೃಬಂಧುವಿಹಿಂಸಕಃ ॥ ೪೯ ॥

ಸತತಂ ಮಂದಕಾರೀ ಚ ನಿಂದಕಃ ಕಟುಜಲ್ಪಕಃ ।
ಏಕಾದಶೈತೇ ಪಾಪಿಷ್ಠಾ ವಧಾರ್ಹಾ ವೇದಸಮ್ಮತಾಃ ॥ ೫೦ ॥

ದ್ವಿಜಾನಾಂ ದ್ರವಿಣಾದಾನಂ ಸ್ಥಾನಾನ್ನಿರ್ವಾಸನಂ ಸತಿ ।
ವಪನಂ ತಾಡನಂ ಚೈವ ವಧಮಾಹುರ್ಮನೀಷಿಣಃ ॥ ೫೧ ॥

ಏತಸ್ಮಿನ್ನಂತರೇ ತತ್ರ ಚಾಜಗಾಮ ಭೃಗುಃ ಸ್ವಯಂ ।
ಅತಿತ್ರಸ್ತೋ ಮನಸ್ವೀ ಚ ಹೃದಯೇನ ವಿದೂಯತಾ ॥ ೫೨ ॥

---

೪೮. ಪರಶುರಾಮ :—ತಂದೆಯ ಆಜ್ಞೋಲ್ಲಂಘನೆಮಾಡುವವನನ್ನೂ, ತಂದೆಯ ವಧೆಮಾಡುವವನನ್ನೂ, ವಧೆಮಾಡದಿರುವ ಮೂರ್ಖನು ರೌರವ ನರಕಕ್ಕೆ ನಿಶ್ಚಯವಾಗಿಯೂ ಹೋಗುವನು.

೪೯–೫೦. ಅಗ್ನಿ, ವಿಷ ಮತ್ತು ಶಸ್ತ್ರವನ್ನು ಪ್ರಯೋಗಿಸಿ ಕೊಲ್ಲುವವರೂ, ಹೊನ್ನು, ಹೆಣ್ಣು, ಮಣ್ಣು (ಕ್ಷೇತ್ರ) ಗಳನ್ನು ಅಪಹರಿಸುವವರೂ, ತಂದೆ ಮತ್ತು ನೆಂಟರಿಷ್ಟರನ್ನು ಹಿಂಸಿಸುವವರೂ, ನಿದಾನದ್ರೋಹಿಯೂ, ನಿಂದಕ ಮತ್ತು ಹೆಚ್ಚುಮಾತನಾಡುವವರೂ ಈ ಹನ್ನೊಂದು ಮಂದಿಯೂ ಪಾಪಿಷ್ಠರಾದುದರಿಂದ ಇವರನ್ನು ವಧೆಮಾಡಬಹುದೆಂದು ವೇದೋಕ್ತವಾಗಿದೆ.

೫೧. ಬ್ರಾಹ್ಮಣರ ಸ್ವತ್ತನ್ನು ಕಿತ್ತುಕೊಳ್ಳುವುದಾಗಲೀ, ಅವರನ್ನು ಸ್ಥಳದಿಯಿಂದ ಓಡಿಸುವುದಾಗಲೀ, ಅವರಿಗೆ ಮುಂಡನಮಾಡಿಸುವುದಾಗಲೀ, ಹೊಡೆಯುವುದಾಗಲೀ, ಅವರ ವಧೆಮಾಡಿದ್ದಕ್ಕೆ ಸಮಾನವೆಂದು ಬಲ್ಲವರು ಹೇಳುವರು.

೫೨. ಪರಶುರಾಮನು ಹೀಗೆ ಹೇಳುತ್ತಿರಲು, ಅವರ ವಂಶದ ಮೂಲಪುರುಷನಾದ ಭೃಗುಮಹರ್ಷಿಯು, ಇವನೇನು ಮಾಡಿಬಿಡುವನೋ ಎಂಬ ಭಯದಿಂದ ತಾನಾಗಿಯೇ ಅಲ್ಲಿಗೆ ಬಂದನು.

ದೃಷ್ಟ್ವಾ ತಂ ರೇಣುಕಾರಾಮೌ ವಿನತೌ ಸಂಬಭೂವತುಃ ।
ಸ ತಾವುವಾಚ ವೇದೋಕ್ತಂ ಪರಲೋಕಹಿತಾಯ ಚ ॥ ೫೩ ॥

॥ ಭೃಗುರುವಾಚ ॥

ಮದ್ವಂಶಜಾತೋ ಜ್ಞಾನೀ ತ್ವಂ ಕಥಂ ವಿಲಪಸೇ ಸುತ ।
ಜಲಬುದ್ಬುದವತ್ಸರ್ವಂ ಸಂಸಾರೇ ಚ ಚರಾಚರಂ ॥ ೫೪ ॥

ಸತ್ಯಸಾರಂ ಸತ್ಯಬೀಜಂ ಕೃಷ್ಣಂ ಚಿಂತಯ ಪುತ್ರಕ ।
ಯದ್ಗತಂ ತದ್ಗತಂ ವತ್ಸ ಗತಂ ನೈವಾಗಮಿಷ್ಯತಿ ॥ ೫೫ ॥

ಯದ್ಭವೇತ್ತದ್ಭವತ್ಯೇವ ಭವಿತಾ ಯದ್ಭವಿಷ್ಯತಿ ।
ಪೂರ್ವಾರ್ಜಿತಂ ಸ್ವೀಯಕರ್ಮಫಲಂ ಕೇನ ನಿವಾರ್ಯತೇ ॥ ೫೬ ॥

---

೫೩. ಅವನನ್ನು ನೋಡಿ ರೇಣುಕೆಯೂ ಪರಶುರಾಮನೂ ತಲೆಬಾಗಿದರು. ಆಗ ಆ ಭೃಗುವು ಅವರಿಬ್ಬರನ್ನೂ ಕುರಿತು ಪರಲೋಕ ಸಾಧಕವೂ ವೇದೋಕ್ತವೂ ಆದ ಕೆಲವು ಮಾತುಗಳನ್ನು ಹೇಳಿದನು.

೫೪. ಭೃಗು:—ಎಲೈ ಪುತ್ರನೇ, ನನ್ನ ವಂಶದಲ್ಲಿ ಹುಟ್ಟಿ ಜ್ಞಾನಿಯಾದ ನೀನೂ ಕೂಡ ವ್ಯಥೆಪಡುತ್ತಿರುವೆಯಲ್ಲ. ಚರಾಚರಾತ್ಮಕವಾದ ಸಂಸಾರವೆಲ್ಲವೂ ನೀರಿನ ಗುಳ್ಳೆಯಂತೆ ಚಂಚಲವಾದುದು.

೫೫. ಆದುದರಿಂದ ಸತ್ಯಕ್ಕೆ ಬೀಜಸ್ವರೂಪನೂ, ಸತ್ಯಸಾರನೂ ಆದ ಶ್ರೀಕೃಷ್ಣ ಪರಮಾತ್ಮನನ್ನು ಭಜಿಸು. ಏನಾಗಬೇಕೋ ಅದು ಆಗಿಹೋಯಿತು. ಹೋದದ್ದು ಪುನಃ ಹಿಂದಕ್ಕೆ ಬರುವುದಿಲ್ಲ.

೫೬. ಯಾವುದಾಗಬೇಕೋ ಅದು ಆಗಿಯೇ ಆಗುವುದು. ಪೂರ್ವಾರ್ಜಿತ ಕರ್ಮಫಲವನ್ನು ಅನುಭವಿಸದೆ ನಿವಾರಿಸಿಕೊಳ್ಳಲು ಸಾಧ್ಯವಿಲ್ಲ.

ಭೂತಂ ಭವ್ಯಂ ಭವಿಷ್ಯಂ ಚ ಯತ್ಕೃಷ್ಣೇನ ನಿರೂಪಿತಂ |
ನಿರೂಪಿತಂ ಯತ್ತತ್ಕರ್ಮ ಕೇನ ವತ್ಸ ನಿವಾರ್ಯತೇ || ೫೭ ||

ಮಾಯಾಬೀಜಂ ಮಾಯಿನಾಂ ಚ ಶರೀರಂ ಪಾಂಚಭೌತಿಕಂ |
ಸಂಕೇತಪೂರ್ವಕಂ ನಾಮ ಪ್ರಾತಃ ಸ್ವಪ್ನಸಮಂ ಸುತ || ೫೮ ||

ಕ್ಷುಧಾ ನಿದ್ರಾ ದಯಾ ಶಾಂತಿಃ ಕ್ಷಮಾ ಕಾಂತ್ಯಾದಯಸ್ತಥಾ |
ಯಾಂತಿ ಪ್ರಾಣಾ ಮನೋಜ್ಞಾನಂ ಪ್ರಯಾತೇ ಪರಮಾತ್ಮನಿ || ೫೯ ||

ಬುದ್ಧಿಶ್ಚ ಶಕ್ತಯಃ ಸರ್ವಾ ರಾಜೇಂದ್ರಮಿವ ಕಿಂಕರಾಃ |
ಸರ್ವೇ ತಮನುಗಚ್ಛಂತಿ ತಂ ಕೃಷ್ಣಂ ಭಜ ಯತ್ನತಃ || ೬೦ ||

ಕೇ ವಾ ಕೇಷಾಂ ಚ ಪಿತರಃ ಕೇ ವಾ ಕೇಷಾಂ ಸುತಾಃ ಸುತ |
ಕರ್ಮೋರ್ಮಿಪ್ರೇರಿತಾಃ ಸರ್ವೇ ಭವಾಬ್ಧೌ ದುಸ್ತರೇ ಪರಂ || ೬೧ ||

---

೫೭. ಶ್ರೀಕೃಷ್ಣಪರಮಾತ್ಮನಿಂದ ನಿರ್ಮಿತವಾದ ಭೂತಭವಿಷ್ಯದ್ವರ್ತಮಾನ ಕಾಲದ ಕರ್ಮ ಫಲವನ್ನು ಅನುಭವಿಸದಿರಲು ಸಾಧ್ಯವಿಲ್ಲ.

೫೮. ಮಾಯೆಗೊಳಗಾದ ಜೀವಿಗಳ ಪಾಂಚಭೌತಿಕ ಶರೀರವೂ ಮಾಯಾ ಬೀಜಾತ್ಮಕವಾದುದು. ಜೀವಿಗಳಿಗಿಡುವ ಸಾಂಕೇತಿಕವಾದ ಹೆಸರು ಹಗಲಿನ ಸ್ವಪ್ನದಂತೆ ಸುಳ್ಳಾದುದು.

೫೯. ದೇಹವನ್ನು ಬಿಟ್ಟು ಆತ್ಮನು ಹೊರಟರೆ, ಹಸಿವು ನಿದ್ರೆಗಳೂ, ದಯೆ ಕ್ಷಮೆಗಳೂ, ಶಾಂತಿಕಾಂತಿಗಳೂ, ಪ್ರಾಣ, ಜ್ಞಾನ, ಮತ್ತು ಮನಸ್ಸುಗಳೂ ಅವನ ಹಿಂದೆಯೇ ಹೊರಟುಹೋಗುವುವು.

೬೦. ರಾಜನನ್ನು ಸೇವಕರು ಅನುಸರಿಸುವಂತೆ ಬುದ್ಧ್ಯಾದಿ ಸಕಲ ಶಕ್ತಿಗಳೂ ಪರಮಾತ್ಮನನ್ನು ಅನುಸರಿಸುವುವು ಆದುದರಿಂದ ಆ ಪರಮಾತ್ಮನನ್ನು ಭಕ್ತಿಯಿಂದ ಭಜಿಸು.

೬೧. ಯಾರು ಯಾರಿಗೆ ತಂದೆ ? ಯಾರು ಯಾರಿಗೆ ಮಕ್ಕಳು ? ಅಪಾರವಾದ ಸಂಸಾರದಲ್ಲಿ ಮುಳುಗಿರುವ ಜೀವಿಗಳು ಕರ್ಮಗಳೆಂಬ ಅಲೆಗಳಿಂದ ಒಂದೆಡೆ ಸೇರಿ ವಿಯೋಗ ಹೊಂದುವರು.

ಜ್ಞಾನಿನೋ ಮಾ ರುದಂತ್ಯೇವ ಮಾ ರೋದೀಃ ಪುತ್ರ ಸಾಂಪ್ರತಂ ।
ರೋದನಾಶ್ರುಪ್ರಪತನಾನ್ಮೃತಾನಾಂ ನರಕಂ ಧ್ರುವಂ ॥ ೬೨ ॥

ಸಂಕೇತಾಖ್ಯೋಚ್ಚಾರಣೇನ ಯಮ್ರುದಂತಿ ಚ ಬಾಂಧವಾಃ ।
ಶತವರ್ಷಂ ರುದಿತ್ವಾ ತಂ ಪ್ರಾಪ್ನುವಂತಿ ನ ನಿಶ್ಚಿತಂ ॥ ೬೩ ॥

ಪಾರ್ಥಿವಾಂಶಂ ಚ ಪೃಥಿವೀ ಗೃಹ್ಣಾತ್ಯಸ್ಥಿತ್ವಚಾದಿಕಂ ।
ತೋಯಾಂಶಂ ಚ ತಥಾ ತೋಯಂ ಶೂನ್ಯಾಂಶಂ ಗಗನಂ ತಥಾ ।
ವಾಯ್ವಂಶಂ ಚ ತಥಾ ವಾಯುಸ್ತೇಜಸ್ತೇಜಾಂಶಕಂ ತಥಾ ॥ ೬೪ ॥

ಸರ್ವೇ ವಿಲೀನಾಃ ಸರ್ವೇಷು ಕೋ ವಾ ಯೋಽಸ್ಯತಿ ರೋದನಾತ್ ।
ನಾಮ ಶ್ರುತಿ ಯಶಃ ಕರ್ಮ ಕಥಾ ಮಾತ್ರಾವಶೇಷಿತಃ ॥ ೬೫ ॥

---

೬೨. ಆದುದರಿಂದ ಜ್ಞಾನಿಗಳು ಇದಕ್ಕಾಗಿ ಅಳುವುದಿಲ್ಲ. ಎಲೈ ಪುತ್ರನೇ ನೀನೂ ಈಗ ಅಳಬೇಡ. ಅತ್ತು ಕಣ್ಣೀರು ಸುರಿಸುವುದರಿಂದ ಸತ್ತವರಿಗೆ ನರಕ ಪ್ರಾಪ್ತಿಯಾಗುವುದು.

೬೩. ಜೀವಿಗಳ ಸಾಂಕೇತಿಕವಾದ ಹೆಸರನ್ನೂ, ಅವರು ಮಾಡಿದ ಕರ್ಮವನ್ನೂ ಉಲ್ಲೇಖಿಸಿಕೊಂಡು ಬಂಧುಗಳು ಗೋಳಾಡುವರು. ಹೀಗೆ ಹತ್ತುವರ್ಷ ಅತ್ತರೂ ಸತ್ತವರನ್ನು ಖಂಡಿತವಾಗಿಯೂ ಪಡೆಯಲಾರರು.

೬೪. ಸತ್ತ ಪ್ರಾಣಿಯ ಪಾರ್ಥಿವಾಂಶವಾದ ಮೂಳೆ ಚರ್ಮಗಳನ್ನು ಪೃಥಿವಿಯೂ ಜಲಾಂಶವಾದ ರಕ್ತಪೂಯಾದಿಗಳನ್ನು ಜಲವೂ, ಶೂನ್ಯಾಂಶವನ್ನು ಆಕಾಶವೂ, ಪ್ರಾಣಾಪಾನಾದಿ ವಾಯುವಿನ ಅಂಶವನ್ನು ವಾಯುವೂ, ತೇಜಸ್ಸಿನ ಅಂಶವನ್ನು ತೇಜಸ್ಸೂ ಹಿಂದಕ್ಕೆ ತೆಗೆದುಕೊಳ್ಳುವುವು.

೬೫. ಎಲ್ಲವೂ ತಮ್ಮ ತಮ್ಮ ಮಹಾಭೂತದಲ್ಲಿ ಅಡಗಿ ಹೋಗುವಾಗ ಅತ್ತರೆ ಬರುವವರಾರು ? ಅವರ ಹೆಸರು, ವಿದ್ಯೆ ಅವರು ಮಾಡಿದ ಧರ್ಮಾಧರ್ಮಕಾರ್ಯಗಳು, ಅವರು ಗಳಿಸಿರುವ ಕೀರ್ತಿ ಇಷ್ಟುಮಾತ್ರ ಉಳಿಯುವುದು.

ವೇದೋಕ್ತಂ ಚೈವ ಯತ್ಕರ್ಮ ಕುರು ತತ್ಪಾರಲೌಕಿಕಂ ।
ಸ ಚ ಬಂಧುಃ ಸುಪುತ್ರಶ್ಚ ಪರಲೋಕ ಹಿತಾಯ ಯಃ　　　॥ ೬೬ ॥

ಭೃಗೋಸ್ತದ್ವಚನಂ ಶ್ರುತ್ವಾ ಶೋಕಂ ತತ್ಯಾಜ ತತ್ಕ್ಷಣಂ ।
ರೇಣುಕಾ ಚ ಮಹಾಸಾಧ್ವೀ ತಂ ವಕ್ತುಮುಪಚಕ್ರಮೇ　　　॥ ೬೭ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ತೃತೀಯೇ ಗಣಪತಿಖಂಡೇ
ನಾರದನಾರಾಯಣಸಂವಾದೇ ಜಮದಗ್ನಿ ಸಂಹಾರ–ಪರಶುರಾಮ
ಪ್ರತಿಜ್ಞಾದಿ ವರ್ಣನಂ ನಾಮ ಸಪ್ತವಿಂಶತಿತಮೋಽಧ್ಯಾಯಃ

---

೬೬. ಆದುದರಿಂದ ನಿನ್ನ ತಂದೆ ತಾಯಿಯವರಿಗೆ ಪಾರಲೌಕಿಕ ಕರ್ಮವನ್ನು ವೇದೋಕ್ತವಾಗಿ ಮಾಡು. ಪರಲೋಕದ ಹಿತಸಾಧಕರೇ ನಿಜವಾದ ಬಂಧುಗಳ ಮತ್ತು ಪುತ್ರರು.

೬೭. ಭೃಗುಮಹರ್ಷಿಯಾಡಿದ ಮಾತುಗಳನ್ನು ಕೇಳಿ ಪರಶುರಾಮನು ದುಃಖಪರಿತ್ಯಾಗಮಾಡಿದನು. ಅನಂತರ ಪತಿವ್ರತಾಶಿರೋಮಣಿಯಾದ ರೇಣುಕೆಯು ಭೃಗುಮಹರ್ಷಿಯನ್ನು ಕುರಿತಿಂತೆಂದಳು.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಗಣಪತಿಖಂಡದಲ್ಲಿ ಜಮದಗ್ನಿ ಸಂಹಾರ
ಮತ್ತು ಪರಶುರಾಮನ ಪ್ರತಿಜ್ಞೆಯನ್ನು ತಿಳಿಸುವ ಇಪ್ಪತ್ತೇಳನೆಯ
ಅಧ್ಯಾಯವು ಮುಗಿದುದು

ಇಪ್ಪತ್ತೇಳನೆಯ ಅಧ್ಯಾಯದ ಸಾರಾಂಶ

ಹೀರನಾದ ಕಾರ್ತವೀರ್ಯನಿಗೆ ಕಾಮಧೇನುವಿನ ಬಯಕೆ ತಪ್ಪಲಿಲ್ಲ. ಅದಕ್ಕಾಗಿ ಪುನಃ ಅಗಾಧವಾದ ಸೈನ್ಯದೊಡನೆ ಜಮದಗ್ನಿಯನ್ನು ಮುತ್ತಿ ಕಾಮಧೇನುವನ್ನು ಹಿಡಿದುಕೊಂಡು ಹೊರಡಲನುವಾದನು. ಅತಿಕ್ರಮ ಪ್ರವೇಶವಾಡಿದ ರಾಜನ ಸೈನ್ಯ ವೆಲ್ಲವನ್ನೂ ಜಮದಗ್ನಿಯು ಮಂತ್ರ ಶಕ್ತಿ ನಿರ್ಮಿತವಾದ ಶರಜಾಲದಿಂದ ಬಂಧಿಸಲು, ಬ್ರಾಹ್ಮತೇಜಸ್ಸಿನ ಮಹಿಮೆಯನ್ನರಿತ ರಾಜನು ವಿನಯದಿಂದ ಮಹರ್ಷಿಗೆ ನಮಸ್ಕರಿಸಿ ಆಶೀರ್ವಾದ ಪಡೆದು ಯುದ್ಧ ಸನ್ನದ್ಧನಾದನು. ಸ್ವಲ್ಪಕಾಲ ಘೋರಯುದ್ಧವಾದ ಮೇಲೆ ರಾಜನು ದತ್ತಾತ್ರೇಯನ ವರನಿಂದ ಪಡೆದ ಶಕ್ತ್ಯಾಯುಧವನ್ನು ಪ್ರಯೋಗಿಸಿ ಜಮದಗ್ನಿಯನ್ನು ಸಂಹರಿಸಿದನು, ಮುನಿಯು ಸತ್ತುದನ್ನು ನೋಡಿ ಕಾಮಧೇನುವು ಗೋಲೋಕಕ್ಕೆ ಹೊರಟು ಹೋಯಿತು. ರಾಜನು ಬ್ರಾಹ್ಮಣವಧೆ ಮಾಡಿದ ತಪ್ಪಿಗಾಗಿ ಪ್ರಾಯಶ್ಚಿತ್ತ ಮಾಡಿಕೊಂಡು, ನಿಷ್ಫಲನಾಗಿ ಹಿಂತಿರುಗಿದನು.

ಇತ್ತ ಜಮದಗ್ನಿಯ ಪತ್ನಿಯಾದ ರೇಣುಕೆಯೂ ಪುತ್ರನಾದ ಪರಶುರಾಮನೂ ಯುದ್ಧಾಂಕಣಕ್ಕೆ ಬಂದು ಅವನ ಮೃತದೇಹವನ್ನು ಅಪ್ಪಿಕೊಂಡು ಬಹಳ ಹೊತ್ತು ಗೋಳಾಡಿ ಚಿತೆಯನ್ನು ಸಿದ್ಧಗೊಳಿಸಿದರು. ರೇಣುಕೆಯು ಪುತ್ರನಿಗೆ ಆಶೀರ್ವದಿಸಿ, ನಮ್ಮ ಉತ್ತರಕ್ರಿಯೆಯನ್ನು ಮಾಡಿ ತಪೋನಿರತನಾಗು. ಕ್ಷತ್ರಿಯರೊಡನೆ ಮಾತ್ರ ಯುದ್ಧಮಾಡಬೇಡವೆಂದು ಬೇಡಿಕೊಂಡಳು. ಆದರೂ ಪರಶುರಾಮನು ಇಪ್ಪತ್ತೊಂದುಸಾರಿ ಭೂಪ್ರದಕ್ಷಣೆ ಮಾಡಿ ಕ್ಷತ್ರಿಯರನ್ನೆಲ್ಲ ನಿರ್ಮೂಲಗೊಳಿಸಿ ಅವರ ರಕ್ತದಿಂದ ಪಿತೃಗಳಿಗೆ ತರ್ಪಣಮಾಡುವುದಾಗಿ ಪ್ರತಿಜ್ಞೆಮಾಡಿದನು. ಅಲ್ಲದೆ ತಂದೆಯನ್ನು ಕೊಂದ ಮಹಾಪಾಪಿಯನ್ನು ಕೊಲ್ಲುವುದು ದೋಷವಿಲ್ಲವೆಂದು ತಾಯಿಗೆ ಬೋಧಿಸಿದನು.

ಅಷ್ಟುಹೊತ್ತಿಗೆ ಸರಿಯಾಗಿ ಅವರ ವಂಶದ ಮೂಲಪುರುಷನಾದ ಭೃಗುವು ಅಲ್ಲಿಗೆ ಬಂದು, ಅವರಿಗೆ ಆತ್ಮತತ್ವವನ್ನು ಬೋಧಿಸಿ, ಪೂರ್ವಾರ್ಜಿತ ಕರ್ಮಫಲವನ್ನು ಎಲ್ಲರೂ ಅನುಭವಿಸಿಯೇ ತೀರಬೇಕೆಂದು ಹೇಳಿ ಸಮಾಧಾನಗೊಳಿಸಿದನು. ಭೃಗು ಮಹರ್ಷಿಯ ಮಾತನ್ನು ಕೇಳಿ ಪರಶುರಾಮನು ದುಃಖವನ್ನು ಬಿಟ್ಟು, ಪಿತೃಗಳ ಪರಲೋಕಸಾಧನೆಯಲ್ಲಿ ನಿರತನಾದನು.

—॥ ಓಂ ॥—

—॥ ಶ್ರೀ ಗಣೇಶಾಯ ನಮಃ ॥—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಗಣಪತಿಖಂಡೇ

ಅಷ್ಟಾವಿಂಶತಿತಮೋಽಧ್ಯಾಯಃ

॥ ರೇಣುಕೋವಾಚ ॥

ಬ್ರಹ್ಮನ್ನನುಗಮಿಷ್ಯಾಮಿ ಪ್ರಾಣನಾಥಸ್ಯ ಸಾಂಪ್ರತಂ ।
ಋತೋಶ್ಚತುರ್ಥದಿವಸೇ ಮೃತೋಽಯಂಚಾದ್ಯಮಾನದಃ ॥ ೧ ॥

ಕರ್ತವ್ಯಾ ಕಾ ವ್ಯವಸ್ಥಾತ್ರ ವದ ವೇದವಿದಾಂ ವರ ।
ತ್ವಮಾಗತೋ ಮೇ ಸಹಸಾ ಪುಣ್ಯೇನ ಕತಿ ಜನ್ಮನಾಂ ॥ ೨ ॥

॥ ಭೃಗುರುವಾಚ ॥

ಅಹೋ ಪುಣ್ಯವತೋ ಭರ್ತುರನುಗಚ್ಛ ಮಹಾಸತಿ ।
ಚತುರ್ಥದಿವಸಂ ಶುದ್ಧಂ ಸ್ವಾಮಿನಂ ಸರ್ವಕರ್ಮಸು ॥ ೩ ॥

ಇಪ್ಪತ್ತೆಂಟನೆಯ ಅಧ್ಯಾಯವು

೧. ರೇಣುಕೆ :— ಋಷಿವರ್ಯನೇ, ನಾನು ನನ್ನ ಪ್ರಾಣಕಾಂತನನ್ನು ಅನುಸರಿಸುವೆನು. ನಾನು ಋತುಸ್ನಾತಳಾಗಿರುವ ಈದಿವಸ ನನ್ನ ಪತಿದೇವನು ಮೃತಿಹೊಂದಿದನು.

೨. ವೇದವೇದಾಂಗ ಪಾರಗಂತನಾದ ನೀನು ನಾನೀಗ ಏನುಮಾಡಬೇಕೆಂದು ವ್ಯವಸ್ಥೆಮಾಡು. ನನ್ನ ಅನೇಕಜನ್ಮದ ಪುಣ್ಯಫಲವಾಗಿ ನೀನಾಗಿಯೇ ಇಲ್ಲಿಗೆ ಬಂದಿರುವೆ.

೩. ಭೃಗು :— ಎಲೌ ಮಹಾಪತಿವ್ರತೆಯೇ, ಪುಣ್ಯವಂತನಾದ ಪತಿದೇವನನ್ನು ನೀನಿಂದು ಅನುಸರಿಸು. ಪತಿಸಂಬಂಧವಾದ ಸಕಲ ಕರ್ಮಗಳಿಗೂ ಋತುವಾದ ನಾಲ್ಕನೆಯ ದಿವಸವು ಶುದ್ಧವಾದುದು.

ಶುದ್ಧಾ ಭರ್ತುಶ್ಚತುರ್ಥೇಽಹ್ನಿ ನ ಶುದ್ಧಾ ದೈವಪಿತ್ರ್ಯಯೋಃ ।
ದೈವೇ ಕರ್ಮಣೀ ಪಿತ್ರ್ಯೇ ಚ ಪಂಚಮೇಽಹ್ನಿ ವಿಶುಧ್ಯತಿ ॥ ೪ ॥

ವ್ಯಾಲಗ್ರಾಹೀ ಯಥಾ ವ್ಯಾಲಂ ಬಿಲಾದುದ್ಧರತೇ ಬಲಾತ್ ।
ತದ್ವತ್ಸ್ವಾಮಿನಮಾದಾಯ ಸಾಧ್ವೀ ಸ್ವರ್ಗಂ ಪ್ರಯಾತಿ ಚ ॥ ೫ ॥

ಮೋದತೇ ಸ್ವಾಮಿನಾ ತತ್ರ ಯಾವದಿಂದ್ರಾಶ್ಚತುರ್ದಶ ।
ಅತ ಊರ್ಧ್ವಂ ಕರ್ಮಭೋಗಂ ಭುಂಕ್ಷ್ವ ಸಾಧ್ವಿ ಶುಭಾಶುಭಂ ॥ ೬ ॥

ಸ ಪುತ್ರೋ ಭಕ್ತಿದಾತಾ ಯಃ ಸಾ ಚ ಸ್ತ್ರೀ ಯಾನುಗಚ್ಛತಿ ।
ಸ ಬಂಧುರ್ದಾನದಾತಾ ಯಃ ಸ ಶಿಷ್ಯೋ ಗುರುಮರ್ಚಯೇತ್ ॥ ೭ ॥

ಸೋಽಭೀಷ್ಟದೇವೋ ಯೋ ರಕ್ಷೇತ್ಸ ರಾಜಾ ಪಾಲಯೇತ್ಪ್ರಜಾಃ ।
ಸ ಚ ಸ್ವಾಮೀ ಪ್ರಿಯಾಂ ಧರ್ಮಮತಿಂ ದಾತುಮಿಹೇಶ್ವರಃ ॥ ೮ ॥

---

೪. ಋತುಮತಿಯಾದ ಸ್ತ್ರೀಯು ಪತಿಯ ಕಾರ್ಯಗಳಿಗೆ ಮಾತ್ರ ನಾಲ್ಕನೆಯ ದಿವಸವು ಶುದ್ಧಳೆನಿಸುವಳು. ಅಂದು ದೇವ ಪಿತೃಕರ್ಮಗಳಿಗೆ ಶುದ್ಧಳಲ್ಲ. ದೈವ ಮತ್ತು ಪಿತೃಕರ್ಮಗಳಿಗೆ ಐದನೆಯ ದಿವಸ ಸ್ನಾನಮಾಡಿ ಶುದ್ಧಳಾಗುವಳು.

೫. ಹಾವಾಡಿಗನು ಹಾವನ್ನು ಬಿಲದಿಂದ ಬಲಾತ್ಕಾರವಾಗಿ ತೆಗೆಯುವಂತೆ ಪತಿವ್ರತೆಯು ತನ್ನ ಪತಿಯನ್ನು ಸಂಸಾರಬಂಧನದಿಂದ ತಪ್ಪಿಸಿ ಕರೆದುಕೊಂಡು ಸ್ವರ್ಗಕ್ಕೆ ಹೋಗುವಳು.

೬. ಸ್ವರ್ಗದಲ್ಲಿ ಚತುರ್ದಶೇಂದ್ರರ ಜೀವಿತಕಾಲದವರೆಗೆ ಪತಿಯೊಡನೆ ಸುಖಸಂತೋಷದಿಂದಿರುವಳು. ಅಲ್ಲಿಂದ ಮುಂದಕ್ಕೆ ಅವರವರ ಶುಭಾಶುಭ ಕರ್ಮ ಫಲವನ್ನು ಭೋಗಿಸುವರು. ಎಲೌ ಸಾಧ್ವೀ ಶಿರೋಮಣಿಯೇ, ನೀನೂ ನಿನ್ನ ಪತಿಯನ್ನನುಸರಿಸಿ ಶುಭಾಶುಭ ಕರ್ಮಫಲವನ್ನನುಭವಿಸು.

೭. ತಂದೆತಾಯಿಗಳಿಗೆ ದೈವಭಕ್ತಿಯುಂಟುಮಾಡುವವನೇ ನಿಜವಾದ ಪುತ್ರನು. ಪತಿಯನ್ನನುಸರಿಸುವವಳೇ ನಿಜವಾದ ಪತಿವ್ರತೆಯು. ಬೇಡಿದ್ದನ್ನು ಕೊಡುವವನೇ ನಿಜವಾದ ಬಂಧುವು. ಗುರುವನ್ನು ಪೂಜಿಸುವವನೇ ನಿಜವಾದ ಶಿಷ್ಯನು.

೮. ರಕ್ಷಣೆ ಮಾಡುವವನೇ ಇಷ್ಟದೇವರು. ಪ್ರಜಾಪರಿಪಾಲಕನೇ ರಾಜನು. ಪತ್ನಿಗೆ ಧರ್ಮಬುದ್ಧಿಯನ್ನು ಕಲಿಸುವವನೇ ನಿಜವಾದ ಪತಿಯು.

ಸ ಗುರುರ್ಧರ್ಮದಾತಾ ಯೋ ಹರಿಭಕ್ತಿಪ್ರದಾಯಕಃ ।
ಏತೇ ಪ್ರಶಂಸ್ಯಾ ವೇದೇಷು ಪುರಾಣೇಷು ಚ ನಿಶ್ಚಿತಂ ॥ ೯ ॥

॥ ರೇಣುಕೋವಾಚ ॥

ಗಂತುಂ ಚ ಸ್ವಾಮಿನಾ ಸಾರ್ಧಂ ಕಾ ಶಕ್ತಾ ಭಾರತೇ ಮುನೇ ।
ಕಾ ವಾಪ್ಯಶಕ್ತಾ ನಾರೀಷು ತನ್ಮೇ ಬ್ರೂಹಿ ತಪೋಧನ ॥ ೧೦ ॥

॥ ಭೃಗುರುವಾಚ ॥

ಬಾಲಾಪತ್ಯಾಶ್ಚ ಗರ್ಭಿಣ್ಯೋ ಹ್ಯದೃಷ್ಟಋತವಸ್ತಥಾ ।
ರಜಸ್ವಲಾ ಚ ಕುಲಟಾ ಗಲಿತಾ ವ್ಯಾಧಿಸಂಯುತಾ ॥ ೧೧ ॥

ಪತಿಸೇವಾವಿಹೀನಾ ಯಾ ಹ್ಯಭಕ್ತಾ ಕಟುಭಾಷಿಣೀ ।
ಏತಾ ಗಚ್ಛಂತಿ ಚೇದ್ದೈವಾನ್ನ ಕಾಂತಂ ಪ್ರಾಪ್ನುವಂತಿ ತಾಃ ॥ ೧೨ ॥

---

೯. ಹರಿಭಕ್ತಿಪ್ರದನೂ ಮತ್ತು ಧರ್ಮಬೋಧಕನೂ ನಿಜವಾದ ಗುರುವು. ಇವರೆಲ್ಲರೂ ವೇದ ಮತ್ತು ಪುರಾಣಗಳಲ್ಲಿ ಪ್ರಶಂಸಿತರಾಗಿದ್ದಾರೆ.

೧೦. ರೇಣುಕೆ:—ತಪೋಧನನಾದ ಎಲೈ ಭೃಗು ಮಹರ್ಷಿಯೇ, ಭರತ ಖಂಡದಲ್ಲಿರುವ ಸ್ತ್ರೀಯರಲ್ಲಿ ಪತಿಯನ್ನು ಅನುಸರಿಸಿ ಹೋಗಲು ಅರ್ಹಳಾರು? ಅನರ್ಹಳಾರು ?

೧೧–೧೨. ಭೃಗು :—ಶಿಶುವಿನ ಮಾತೆಯೂ, ಗರ್ಭಿಣಿಯೂ, ಋತುಮತಿಯಾಗದವಳೂ, ಮುಟ್ಟಾದವಳೂ, ಕುಲಟೆಯೂ, ಕುಷ್ಠಾದಿರೋಗಪೀಡಿತಳೂ, ಪತಿಸೇವೆಮಾಡದವಳೂ, ಪತಿಭಕ್ತಿರಹಿತಳೂ, ಕ್ರೂರನುಡಿಯಾಡುವವಳೂ, ಪತಿಯನ್ನು ಹಿಂಬಾಲಿಸಿ ಹೋದರೂ ಪರಲೋಕದಲ್ಲಿ ತಮ್ಮ ಪತಿಯೊಡನೆ ಸೇರಲಾರರು.

ಸಂಸ್ಕೃತಾಗ್ನಿಂ ಪುರೋ ದತ್ವಾ ಚಿತಾಸು ಶಾಯಿತಂ ಪತಿಂ ।
ಕಾಂತಾಸ್ತಮನುಗಚ್ಛಂತಿ ಕಾಂತಾಶ್ಚೇತ್ಪ್ರಾಪ್ನುವಂತಿ ತಾಃ ॥ ೧೩ ॥

ಅನುಗಚ್ಛಂತಿ ಯಾಃ ಕಾಂತಂ ತಮೇವ ಪ್ರಾಪ್ನುವಂತಿ ತಾಃ ।
ಸಾರ್ಧಂ ಕೃತ್ವಾ ಪುಣ್ಯಭೋಗಂ ದಿವಿ ಜನ್ಮನಿ ಜನ್ಮನಿ ॥ ೧೪ ॥

ಇಯಂ ತೇ ಕಥಿತಾ ಸಾಧ್ವೀ ವ್ಯವಸ್ಥಾ ಗೃಹಿಣಾಂ ಧ್ರುವಂ ।
ತೀರ್ಥೇ ಜ್ಞಾನಮೃತಾನಾಂ ಚ ವೈಷ್ಣವಾನಾಂ ಗತಿಂ ಶೃಣು ॥ ೧೫ ॥

ಯಾ ಸಾಧ್ವೀ ವೈಷ್ಣವಂ ಕಾಂತಂ ಯತ್ರ ಯತ್ರಾನುಗಚ್ಛತಿ ।
ಪ್ರಯಾತಿ ಸ್ವಾಮಿನಾ ಸಾರ್ಧಂ ವೈಕುಂಠೇ ಹರಿಸನ್ನಿಧಿಂ ॥ ೧೬ ॥

ವಿಶೇಷೋ ನಾಸ್ತಿ ಭಕ್ತಾನಾಂ ತೀರ್ಥೇ ವಾನ್ಯತ್ರ ನಾರದ ।
ಮರಣೇನ ಫಲಂ ತುಲ್ಯಂ ಮುಕ್ತಾನಾಂ ಕೃಷ್ಣಭಾವಿನಾಂ ॥ ೧೭ ॥

---

೧೩. ಮೊದಲು ಪತಿಯ ದೇಹವನ್ನು ಚಿತೆಯ ಮೇಲಿಟ್ಟು ಸಂಸ್ಕಾರಮಾಡಿದ ಅಗ್ನಿಯಿಂದ ಪ್ರಜ್ವಲಿಸಿ ಅನಂತರ ಆ ಅಗ್ನಿಯಲ್ಲಿ ಪ್ರವೇಶಿಸುವ ಪತಿವ್ರತೆಯೇ ಪರಲೋಕದಲ್ಲಿ ಪತಿಯೊಡನೆ ಸೇರುವಳು.

೧೪. ಯಾರು ಅನನ್ಯಭಕ್ತಿಯಿಂದ ಪತಿಯನ್ನು ಹಿಂಬಾಲಿಸುವರೋ ಅವರು ತಮ್ಮ ಪತಿಯನ್ನು ಹೊಂದಿಯೇ ಹೊಂದುವರು ಅವರೊಡನೆ ಸ್ವರ್ಗದಲ್ಲಿ ಪುಣ್ಯಫಲವನ್ನನುಭವಿಸಿ ಪ್ರತಿ ಜನ್ಮದಲ್ಲಿಯೂ ಅವನನ್ನೇ ಪಡೆಯುವರು.

೧೫ ಎಲೌ ಸಾಧ್ವೀಮಣಿಯೇ, ಇದುವರೆಗೂ ನಾನು ಹೇಳಿದುದು ಗೃಹಸ್ಥ ಸ್ತ್ರೀಯರ ವಿಷಯವಾಯಿತು. ಈಗ ಪುಣ್ಯತೀರ್ಥಗಳಲ್ಲಿ ಜ್ಞಾನಿಗಳಾಗಿ ಸತ್ತ ವೈಷ್ಣವ ಸ್ತ್ರೀಯರ ವಿಷಯವನ್ನು ಹೇಳುವೆನು.

೧೬. ಪತಿವ್ರತೆಯಾದ ಸ್ತ್ರೀಯು ವಿಷ್ಣುಭಕ್ತನಾದ ಕಾಂತನನ್ನು ಎಲ್ಲೆಲ್ಲಿ ಅನುಸರಿಸಿದರೂ, ತನ್ನ ಸ್ವಾಮಿಯನ್ನು ಸೇರಿ ವೈಕುಂಠದಲ್ಲಿ ಶ್ರೀಹರಿಯ ಸಾನ್ನಿಧ್ಯವನ್ನು ಪಡೆಯುವಳು.

೧೭. ಶ್ರೀಕೃಷ್ಣನಲ್ಲಿ ಅನನ್ಯ ಭಕ್ತಿಯುಳ್ಳ ನಿತ್ಯಮುಕ್ತರಾದ ಭಕ್ತರು ತೀರ್ಥ ಕ್ಷೇತ್ರಗಳಲ್ಲಾಗಲೀ, ಮತ್ತೆಲ್ಲಾಗಲಿ ಮೃತಿಹೊಂದಿದರೂ ಅವರಿಗೆ ಏಕರೀತಿಯಾದ ಫಲಪ್ರಾಪ್ತಿಯಾಗುವುದು.

ತಯೋಃ ಪಾತೋ ನಾಸ್ತಿ ತಸ್ಮಾನ್ಮಹತಿ ಪ್ರಲಯೇ ಸತಿ।
ನಾರಾಯಣಂ ತಂ ಭಜೇತ ಪುಮಾಂಸ್ತ್ರೀ ಕಮಲಾಲಯಾಂ ॥ ೧೮ ॥

ತೀರ್ಥೇ ಜ್ಞಾನಮೃತಶ್ಚಾಪಿ ವೈಕುಂಠಂ ಯಾತಿ ನಿಶ್ಚಿತಂ।
ಸಭಾರ್ಯೋ ಮೋದತೇ ತತ್ರ ಯಾವದ್ವೈ ಬ್ರಹ್ಮಣಃ ಶತಂ ॥ ೧೯ ॥

ಇತ್ಯುಕ್ತ್ವಾ ರೇಣುಕಾಂ ತತ್ರ ಜಾಮದಗ್ನ್ಯಮುವಾಚ ಹ।
ವೇದೋಕ್ತಂ ವಚನಂ ಸರ್ವಂ ಸ ಭೃಗುಃ ಸಮಯೋಚಿತಂ ॥ ೨೦ ॥

ಏಹಿ ವತ್ಸ ಮಹಾಭಾಗ ತ್ಯಜ ಶೋಕಮಮಂಗಲಂ।
ಉತ್ಥಾನಂ ಕುರು ತಾತಂ ಚ ದಕ್ಷಿಣಾಶಿರಸಂ ಭೃಗೋ ॥ ೨೧ ॥

ವಸ್ತ್ರಂ ಯಜ್ಞೋಪವೀತಂ ಚ ನೂತನಂ ಪರಿಧಾಪಯ।
ಅನಶ್ರುನಯನೋ ಭೂತ್ವಾ ಸಂತಿಷ್ಠನ್ ದಕ್ಷಿಣಾಮುಖಃ ॥ ೨೨ ॥

---

೧೮. ಪುರುಷನು ಶ್ರೀಮನ್ನಾರಾಯಣನನ್ನೂ ಸ್ತ್ರೀಯು ಅಂಬುಜವಾಸಿನಿಯಾದ ಮಹಾಲಕ್ಷ್ಮಿಯನ್ನೂ ಭಜಿಸಿದರೆ ಅವರಿಬ್ಬರಿಗೂ ಮಹಾಪ್ರಲಯದಲ್ಲಿಯೂ ಪತನವುಂಟಾಗುವುದಿಲ್ಲ.

೧೯. ಜ್ಞಾನಾರ್ಜನೆಮಾಡಿ ಪುಣ್ಯಕ್ಷೇತ್ರದಲ್ಲಿ ಮರಣಹೊಂದಿದವನೂ ಕೂಡ ಪತ್ನೀಸಮೇತನಾಗಿ ವೈಕುಂಠಕ್ಕೆ ಹೋಗಿ ನೂರು ಚತುರ್ಮುಖ ಬ್ರಹ್ಮರ ಜೀವಿತಾವಧಿ ಸುಖಸಂತೋಷದಿಂದಿರುವನು.

೨೦. ರೇಣುಕಾದೇವಿಯನ್ನು ಕುರಿತು ಹೀಗೆ ಹೇಳಿದನಂತರ ಭೃಗು ಮಹರ್ಷಿಯು ಪರಶುರಾಮನಿಗಿಂತೆಂದನು. ಆ ನುಡಿಯು ವೇದೋಕ್ತವೂ ಸಮಯೋಚಿತವೂ ಆಗಿದ್ದಿತು.

೨೧. ಮಹಾಭಾಗ್ಯಶಾಲಿಯಾದ ವತ್ಸನೆ, ಇಲ್ಲಿ ಬಾ. ಈ ಸಮಯದಲ್ಲಿ ದುಃಖಪಡುವುದು ಅಮಂಗಳಕರವಾದುದು. ತಂದೆಯ ದೇಹವನ್ನು ದಕ್ಷಿಣದಿಕ್ಕಿಗೆ ತಲೆಮಾಡಿ ಮೇಲಕ್ಕೆಬ್ಬಿಸು.

೨೨. ಆ ಶರೀರಕ್ಕೆ ಹೊಸದಾದ ವಸ್ತ್ರ ಮತ್ತು ಯಜ್ಞೋಪವೀತವನ್ನು ಧಾರಣೆಮಾಡು. ಕಣ್ಣೀರನ್ನು ಒರಸಿಕೊಂಡು ದಕ್ಷಿಣಾಭಿಮುಖನಾಗಿ ನಿಂತುಕೋ.

ಅರಣೀಸಂಭವಾಗ್ನಿಂ ಚ ಗೃಹಾಣ ಪ್ರೀತಿಪೂರ್ವಕಂ।
ಪೃಥಿವ್ಯಾಂ ಯಾನಿ ತೀರ್ಥಾನಿ ಸರ್ವೇಷಾಂ ಸ್ಮರಣಂ ಕುರು ॥ ೨೩ ॥

ಗಯಾದೀನಿ ಚ ತೀರ್ಥಾನಿ ಯೇ ಚ ಪುಣ್ಯಾಃ ಶಿಲೋಚ್ಚಯಾಃ।
ಕುರುಕ್ಷೇತ್ರಂ ಚ ಗಂಗಾಂ ಚ ಯಮುನಾಂ ಚ ಸರಿದ್ವರಾಂ ॥ ೨೪ ॥

ಕೌಶಿಕೀಂ ಚಂದ್ರಭಾಗಾಂ ಚ ಸರ್ವಪಾಪಪ್ರಣಾಶಿನೀಂ।
ಗಂಡಕೀಮಥ ಕಾಶೀಂ ಚ ಪನಸಾಂ ಸರಯೂಂ ತಥಾ ॥ ೨೫ ॥

ಪುಷ್ಪಭದ್ರಾಂ ಚ ಭದ್ರಾಂ ಚ ನರ್ಮದಾಂ ಚ ಸರಸ್ವತೀಂ।
ಗೋದಾವರೀಂ ಚ ಕಾವೇರೀಂ ಸ್ವರ್ಣರೇಖಾಂ ಚ ಪುಷ್ಕರಂ ॥ ೨೬ ॥

---

೨೩. ಕಾಷ್ಠಮಥನದಿಂದ ಉತ್ಪನ್ನವಾದ ಅಗ್ನಿಯನ್ನು ಪ್ರೀತಿಪೂರ್ವಕವಾಗಿ ತೆಗೆದುಕೊಂಡು ಪೃಥಿವಿಯಲ್ಲಿರುವ ಎಲ್ಲ ಪುಣ್ಯತೀರ್ಥಗಳನ್ನೂ ಒಮ್ಮೆ ಸ್ಮರಿಸಿಕೋ.

೨೪. ಗಯೆ ಮುಂತಾದ ಪುಣ್ಯಕ್ಷೇತ್ರಗಳನ್ನೂ, ಪುಣ್ಯಕರವಾದ ಪರ್ವತಗಳನ್ನೂ, ಕುರುಕ್ಷೇತ್ರವನ್ನೂ, ಗಂಗೆ, ಯಮುನೆ ಮುಂತಾದ ಪುಣ್ಯನದಿಗಳನ್ನೂ ಸ್ಮರಿಸಿಕೋ.

೨೫. ಕೌಶಿಕೀ, ಚಂದ್ರಭಾಗಾ. ಪಾಪನಾಶಿನೀ, ಗಂಡಕೀ, ಪನಸಾ, ಸರಯೂ ಮುಂತಾದ ನದಿಗಳನ್ನೂ ಕಾಶೀ ಮುಂತಾದ ಪುಣ್ಯಕ್ಷೇತ್ರಗಳನ್ನೂ ನೆನೆಸಿಕೋ.

೨೬. ಪುಷ್ಪಭದ್ರಾ, ಭದ್ರಾ, ನರ್ಮದಾ, ಸರಸ್ವತೀ, ಗೋದಾವರೀ, ಕಾವೇರೀ, ಸ್ವರ್ಣರೇಖಾ ಮೊದಲಾದ ನದಿಗಳನ್ನೂ, ಪುಷ್ಕರ ಮುಂತಾದ ಕ್ಷೇತ್ರಗಳನ್ನೂ ಸ್ಮರಿಸಿಕೋ.

ರೈವತಂ ಚ ವರಾಹಂ ಚ ಶ್ರೀಶೈಲಂ ಗಂಧಮಾದನಂ ।
ಹಿಮಾಲಯಂ ಚ ಕೈಲಾಸಂ ಸುಮೇರುಂ ರತ್ನಪರ್ವತಂ || ೨೭ ||

ವಾರಾಣಸೀಂ ಪ್ರಯಾಗಂ ಚ ಪುಣ್ಯಂ ವೃಂದಾವನಂ ವನಂ ।
ಹರಿದ್ವಾರಂ ಚ ಬದರೀಂ ಸ್ಮಾರಂ ಸ್ಮಾರಂ ಪುನಃ ಪುನಃ || ೨೮ ||

ಚಂದನಾಗರುಕಸ್ತೂರೀಸುಗಂಧಿ ಕುಸುಮಂ ತಥಾ ।
ಪ್ರದಾಯ ವಾಸಸಾಚ್ಛಾದ್ಯ ಸ್ಥಾಪಯೈನಂ ಚಿತೋಪರಿ || ೨೯ ||

ಕರ್ಣಾಕ್ಷಿನಾಸಿಕಾಸ್ಯೇ ತ್ವಂ ಶಲಾಕಾಂ ಚ ಹಿರಣ್ಮಯೀಂ ।
ಕೃತ್ವಾ ನಿರ್ಮಂಥನಂ ತಾತ ವಿಪ್ರೇಭ್ಯೋ ದೇಹಿ ಸಾದರಂ || ೩೦ ||

ಸತಿಲಂ ತಾಮ್ರಪಾತ್ರಂ ಚ ಧೇನುಂ ಚ ರಜತಂ ತಥಾ ।
ಸದಕ್ಷಿಣಂ ಸುವರ್ಣಂ ಚ ದತ್ವಾಗ್ನಿಂ ದೇಹ್ಯಕಾತರಃ || ೩೧ ||

---

೨೭. ರೈವತ, ವರಾಹ, ಶ್ರೀಶೈಲ, ಗಂಧಮಾದನ, ಹಿಮಾಲಯ, ಕೈಲಾಸ, ಸುಮೇರು ಮತ್ತು ರತ್ನಗಿರಿ ಮೊದಲಾದ ಪುಣ್ಯಪರ್ವತಗಳನ್ನೂ ಸ್ಮರಣೆ ಮಾಡಿಕೋ.

೨೮–೨೯. ವಾರಾಣಸಿ, ಪ್ರಯಾಗ, ಪುಣ್ಯಕರವಾದ ವೃಂದಾವನ, ಹರಿದ್ವಾರ, ಬದರಿ ಮುಂತಾದ ಪುಣ್ಯಕ್ಷೇತ್ರಗಳನ್ನು ಮತ್ತೆ ಮತ್ತೆ ಸ್ಮರಿಸಿಕೊಳ್ಳುತ್ತ, ಚಂದನ, ಅಗುರು, ಕಸ್ತೂರಿ ಮುಂತಾದ ಸುಗಂಧದ್ರವ್ಯಗಳನ್ನೂ, ಸುವಾಸನೆಯಾದ ಪುಷ್ಪವನ್ನೂ ಸಮರ್ಪಿಸಿ, ಬಟ್ಟೆಯನ್ನು ಹೊದಿಸಿ ಚಿತೆಯ ಮೇಲೆ ತಂದೆಯ ಶರೀರವನ್ನಿಡು.

೩೦. ಅನಂತರ ಸುವರ್ಣದ ಶಲಾಕೆ (ಕಡ್ಡಿ) ಯೊಂದನ್ನು ತೆಗೆದುಕೊಂಡು ಕಿವಿ, ಕಣ್ಣು, ಮೂಗು, ಮತ್ತು ಮುಖದ ರಂಧ್ರಗಳಲ್ಲಿ ಮಥನಮಾಡಿ ಆದರಪೂರ್ವಕವಾಗಿ ಬ್ರಾಹ್ಮಣರಿಗೆ ದಾನಮಾಡು

೩೧. ತಿಲಪೂರ್ಣವಾದ ತಾಮ್ರಪಾತ್ರೆಯನ್ನೂ, ಗೋವು, ಚಿನ್ನ ಮತ್ತು ಬೆಳ್ಳಿಗಳನ್ನೂ ದಕ್ಷಿಣಾಸಹಿತವಾಗಿ ಕೊಟ್ಟು ಅನಂತರ ತಂದೆಯ ದೇಹಕ್ಕೆ ಅಗ್ನಿಪ್ರತಿಷ್ಠಾಪನೆ ಮಾಡು

ಓಂ ಕೃತ್ವಾ ದುಷ್ಕೃತಂ ಕರ್ಮ ಜಾನತಾವಾಪ್ಯಜಾನತಾ ।
ಮೃತ್ಯುಕಾಲವಶಂ ಪ್ರಾಪ್ಯ ನರಂ ಪಂಚತ್ವಮಾಗತಂ ॥ ೩೨ ॥

ಧರ್ಮಾಧರ್ಮಸಮಾಯುಕ್ತಂ ಲೋಭಮೋಹಸಮಾವೃತಂ ।
ದಹ ಸರ್ವಾಣಿ ಗಾತ್ರಾಣಿ ದಿವ್ಯಾಂಲ್ಲೋಕಾನ್ಸ ಗಚ್ಛತು ॥ ೩೩ ॥

ಇಮಂ ಮಂತ್ರಂ ಪಠಿತ್ವಾ ತು ತಾತಂ ಕೃತ್ವಾ ಪ್ರದಕ್ಷಿಣಂ ।
ಮಂತ್ರೇಣಾನೇನ ದೇಹ್ಯಗ್ನಿಂ ಜನಕಾಯ ಹರಿಂ ಸ್ಮರನ್ ॥ ೩೪ ॥

ಓಂ ಅಸ್ಮತ್ಕುಲೇ ತ್ವಂ ಜಾತೋಽಸಿ ತ್ವದೀಯೋ ಜಾಯತಾಂ ಪುನಃ ।
ಅಸೌ ಸ್ವರ್ಗಾಯ ಲೋಕಾಯ ಸ್ವಾಹೇತಿ ವದ ಸಾಂಪ್ರತಂ ॥ ೩೫ ॥

ಅಗ್ನಿಂ ದೇಹಿ ಶಿರಃಸ್ಥಾನೇ ಹೇ ಭೃಗೋ ಭ್ರಾತೃಭಿಃ ಸಹ ।
ಚಕಾರ ಭೃಗುಃ ಸರ್ವಂ ಸಗೋತ್ರೈರಾಜ್ಞಯಾ ಭೃಗೋಃ ॥ ೩೬ ॥

೩೨–೩೩ ತಿಳಿದೋ, ತಿಳಿಯದೆಯೋ ದುಷ್ಕರ್ಮಗಳನ್ನಾಚರಿಸಿ, ಲೋಭಮೋಹಗಳಿಂದ ಧರ್ಮಾಧರ್ಮವನ್ನು ಗಳಿಸಿಕೊಂಡು ಕಾಲವಶದಿಂದ ಮರಣವನ್ನು ಹೊಂದಿರುವ ಮನುಜನ ಶರೀರವನ್ನು ಓಂಕಾರೋಚ್ಚಾರಣಪೂರ್ವಕವಾಗಿ ಸುಡುವುದರಿಂದ ಸತ್ತವನು ದಿವ್ಯಲೋಕಕ್ಕೆ ಹೋಗುವನು.

೩೪. ಆದರಿಂದ ಮುಂದೆ ಹೇಳುವ ಮಂತ್ರವನ್ನು ಪಠಿಸಿ, ತಂದೆಯನ್ನು ಪ್ರದಕ್ಷಿಣೆಮಾಡಿ ಶ್ರೀಹರಿಯನ್ನು ಸ್ಮರಿಸುತ್ತ, ಮಂತ್ರಪೂರ್ವಕವಾಗಿ ತಂದೆಗೆ ಅಗ್ನಿಯನ್ನು ಅರ್ಪಿಸು.

೩೫. “ನೀನು ನಮ್ಮ ವಂಶದಲ್ಲಿ ಹುಟ್ಟಿದೆ. ನಿನ್ನ ವಂಶದವನು ಮುಂದೆಯೂ ಹುಟ್ಟಲಿ. ನೀನು ಸ್ವರ್ಗಲೋಕಕ್ಕೆ ಹೋಗಿಸೇರು” ಎಂಬರ್ಥವನ್ನು ಕೊಡುವ ಮಂತ್ರವನ್ನುಚ್ಚರಿಸು.

೩೬. “ಎಲೈ ಭಾರ್ಗವನೇ, ನಿನ್ನ ಸಹೋದರರೊಡನೆ ತಂದೆಯ ತಲೆಯ ಮೇಲೆ ಅಗ್ನಿಯನ್ನಿಟ್ಟು ಪ್ರಜ್ವಲಿಸು” ಎಂದ ಭೃಗುವಿನಾಜ್ಞೆಯಂತೆ ಪರಶುರಾಮನು ಸಹೋದರರೊಡನೆ ತಂದೆಯ ದೇಹಕ್ಕೆ ಅಗ್ನಿಸಂಸ್ಕಾರಮಾಡಿದನು.

ಅಥ ಪುತ್ರಂ ರೇಣುಕಾ ಸಾ ಕೃತ್ವಾ ತತ್ರ ಸ್ವವಕ್ಷಸಿ ।
ಉವಾಚ ಕಿಂಚಿದ್ವಚನಂ ಪರಿಣಾಮಸುಖಾವಹಂ ॥ ೩೭ ॥

ಅವಿರೋಧೋ ಭವಾಬ್ಧೌ ಚ ಸರ್ವಮಂಗಲಮಂಗಲಂ ।
ವಿರೋಧೋ ನಾಶಬೀಜಂ ಚ ಸರ್ವೋಪದ್ರವಕಾರಣಂ ॥ ೩೮ ॥

ಅಕರ್ತವ್ಯೋ ವಿರೋಧೋ ವೈ ದಾರುಣೈಃ ಕ್ಷತ್ರಿಯೈಃ ಸಹ ।
ಪ್ರತಿಜ್ಞಾ ಚೈವ ಕರ್ತವ್ಯಾ ಮದೀಯೇ ವಚನೇ ಶ್ರುತೇ ॥ ೩೯ ॥

ಆಲೋಚ್ಯ ಬ್ರಹ್ಮಣಾ ಸಾರ್ಧಂ ಭೃಗುಣಾ ದಿವ್ಯಮಂತ್ರಿಣಾ ।
ಯಥೋಚಿತಂ ಚ ಕರ್ತವ್ಯಂ ಸದ್ಭಿರಾಲೋಚನಂ ಶುಭಂ ॥ ೪೦ ॥

ಇತ್ಯುಕ್ತ್ವಾ ತಂ ಪರಿತ್ಯಜ್ಯ ಕಾಂತಂ ಕೃತ್ವಾ ಸ್ವವಕ್ಷಸಿ ।
ಸಾ ಸುಷ್ವಾಪ ಚಿತಾಯಾಂ ಚ ಪಶ್ಯಂತೀ ತಂ ಹರಿಸ್ಮೃತಿಃ ॥ ೪೧ ॥

---

೩೭. ಅನಂತರದಲ್ಲಿ ರೇಣುಕಾದೇವಿಯು ಪರಶುರಾಮನನ್ನು ತನ್ನ ವಕ್ಷಃಸ್ಥಲದಲ್ಲಪ್ಪಿಕೊಂಡು ಪರಿಣಾಮದಲ್ಲಿ ಸುಖಕರವಾದ ಕೆಲವು ಹಿತನುಡಿಗಳನ್ನಾಡಿದಳು.

೩೮. ಈ ಘೋರ ಸಂಸಾರದಲ್ಲಿ ಪರಸ್ಪರ ವಿರೋಧವಿಲ್ಲದಿರುವುದೇ ಮಂಗಳಕರವಾದುದು. ವಿರೋಧದಿಂದ ನಾಶವೂ ಸಕಲತೊಂದರೆಗಳೂ ಸಂಭವಿಸುವುವು.

೩೯. ಆದರಲ್ಲಿಯೂ ಕ್ರೂರಿಗಳಾದ ಕ್ಷತ್ರಿಯರೊಡನೆ ಎಂದೆಂದಿಗೂ ವಿರೋಧಮಾಡಿಕೊಳ್ಳಬಾರದು. ನನ್ನ ಮಾತಿನಂತೆ ನೀನು ನಡೆಯುವುದಾಗಿ ಪ್ರತಿಜ್ಞೆಮಾಡು.

೪೦. ನಿನಗೆ ದಿವ್ಯವಾದ ಮಂತ್ರಾಲೋಚನೆಯನ್ನು ಕೊಡತಕ್ಕ ಬ್ರಹ್ಮನೊಡನೆಯೂ ಭೃಗುವಿನೊಡನೆಯೂ ಚೆನ್ನಾಗಿ ಪರಿಶೀಲಿಸಿ ಉಚಿತವಾದುದನ್ನು ಮಾಡು. ಯಾವುದಕ್ಕೂ ಸತ್ಪುರುಷರೊಡನೆ ಆಲೋಚಿಸುವುದುತ್ತಮ.

೪೧. ಹೀಗೆಂದು ಅವನನ್ನು ಬಿಟ್ಟುಕೊಟ್ಟು ತನ್ನ ಪತಿಯನ್ನು ಎದೆಗಪ್ಪಿಕೊಂಡು ಶ್ರೀಹರಿಯನ್ನು ಸ್ಮರಿಸುತ್ತ ಚಿತೆಯ ಮೇಲೆ ಮಲಗಿಕೊಂಡಳು.

ವಹ್ನಿಂ ದದೌ ಚಿತಾಯಾಂ ಚ ಸ ರಾಮೋ ಭ್ರಾತೃಭಿಃ ಸಹ ।
ಭ್ರಾತೃಭಿಃ ಪಿತೃಶಿಷ್ಯೈಶ್ಚ ಸಾರ್ಧಂ ಸ ವಿಲಲಾಪ ಚ ॥ ೪೨ ॥

ರಾಮ ರಾಮೇತಿ ರಾಮೇತಿ ವಾಕ್ಯಮುಚ್ಚಾರ್ಯ ಸಾ ಸತೀ ।
ಪುರಸ್ತಾಜ್ಜಾಮದಗ್ನ್ಯಸ್ಯ ಭಸ್ಮೀಭೂತಾ ಬಭೂವ ಸಾ ॥ ೪೩ ॥

ಭರ್ತುರ್ನಾಮ ಸಮಾಕರ್ಣ್ಯ ತತ್ರಾಜಗ್ಮುರ್ಹರೇಶ್ವರಾಃ ।
ರಥಸ್ಥಾಃ ಶ್ಯಾಮವರ್ಣಾಶ್ಚ ಸರ್ವೇ ಚಾರುಚತುರ್ಭುಜಾಃ ॥ ೪೪ ॥

ಶಂಖಚಕ್ರಗದಾಪದ್ಮಧಾರಿಣೋ ವನಮಾಲಿನಃ ।
ಕಿರೀಟಿನಃ ಕುಂಡಲಿನಃ ಪೀತಕೌಶೇಯವಾಸಸಃ ॥ ೪೫ ॥

ರಥೇ ಕೃತ್ವಾ ರೇಣುಕಾಂ ತಾಂ ಗತ್ವಾ ತೇ ಬ್ರಹ್ಮಣಃ ಪದಂ ।
ಮದಗ್ನಿಂ ಸಮಾದಾಯ ಪ್ರಜಗ್ಮುರ್ಹರಿಸನ್ನಿಧಿಂ ॥ ೪೬ ॥

---

೪೨. ಪರಶುರಾಮನು ಸಹೋದರರೊಡನೆ ಚಿತೆಗೆ ಅಗ್ನಿಪ್ರದೀಪನ ಮಾಡಿದನು. ಮತ್ತು ತಂದೆಯ ಶಿಷ್ಯರೊಡನೆಯೂ, ಸಹೋದರರೊಡನೆಯೂ ಅತ್ತು ಗೋಳಾಡಿದನು.

೪೩. ಪತಿವ್ರತೆಯಾದ ರೇಣುಕಾದೇವಿಯಾದರೋ ರಾಮ, ರಾಮ, ರಾಮ ಎಂದು ಉಚ್ಚರಿಸುತ್ತಲೇ ಪರಶುರಾಮನ ಎದುರಿನಲ್ಲಿ ಭಸ್ಮರಾಶಿಯಾದಳು.

೪೪. ಶ್ರೀಹರಿಯ ನಾಮೋಚ್ಚಾರಣೆಯನ್ನು ಕೇಳಿ ಶ್ಯಾಮವರ್ಣರೂ, ಚತುರ್ಭುಜರೂ, ಆದ ವಿಷ್ಣುದೂತರು ರಥದಲ್ಲಿ ಕುಳಿತು ಅಲ್ಲಿಗೆ ಬಂದರು.

೪೫. ಅವರೆಲ್ಲರೂ ಶಂಖಚಕ್ರಗದಾಪದ್ಮಗಳನ್ನು ಧರಿಸಿ, ವನಮಾಲೆಯನ್ನು ಹಾಕಿಕೊಂಡು, ಕಿರೀಟಕುಂಡಲಗಳಿಂದಲೂ ಪೀತಾಂಬರದಿಂದಲೂ ಶೋಭಿಸುತ್ತಿದ್ದರು.

೪೬. ಅವರು ರಥದಲ್ಲಿ ರೇಣುಕೆಯನ್ನೂ ಜಮದಗ್ನಿಯನ್ನೂ ಕುಳ್ಳಿರಿಸಿಕೊಂಡು ಶ್ರೀಹರಿಯ ಸನ್ನಿಧಿಗೆ ಕರೆದೊಯ್ದರು.

ತೌ ದಂಪತೀ ಚ ವೈಕುಂಠೇ ತಸ್ಥತುರ್ಹರಿಸನ್ನಿಧೌ ।
ಕೃತ್ವಾ ದಾಸ್ಯಂ ಹರೇಃ ಶಶ್ವತ್ಸರ್ವಮಂಗಲಮಂಗಲಂ ॥ ೪೭ ॥

ಅಥ ರಾಮೋ ಬ್ರಾಹ್ಮಣೈಶ್ಚ ಭೃಗುಣಾ ಸಹ ನಾರದ ।
ಪಿತ್ರೋಃ ಶೇಷಕ್ರಿಯಾಂ ಕೃತ್ವಾ ಬ್ರಾಹ್ಮಣೇಭ್ಯೋ ಧನಂ ದದೌ ॥ ೪೮ ॥

ಗೋಭೂಹಿರಣ್ಯವಾಸಾಂಸಿ ದಿವ್ಯಶಯ್ಯಾಂ ಮನೋರಮಾಂ ।
ಸುವರ್ಣಾಧಾರಸಹಿತಾಂ ಜಲಮನ್ನಂ ಚ ಚಂದನಂ ॥ ೪೯ ॥

ರತ್ನದೀಪಂ ರೌಪ್ಯಶೈಲಂ ಸುವರ್ಣಾಸನಮುತ್ತಮಂ ।
ಸುವರ್ಣಾಧಾರಸಹಿತಾಂ ತಾಂಬೂಲಂ ಚ ಸುವಾಸಿತಂ ॥ ೫೦ ॥

ಛತ್ರಂ ಚ ಪಾದುಕೇ ಚೈವ ಫಲಂ ಮಾಲ್ಯಂ ಮನೋಹರಂ ।
ಫಲಂ ಮೂಲಾದಿಕಂ ಚೈವ ಮಿಷ್ಟಾನ್ನಂ ಚ ಮನೋಹರಂ ।
ಬ್ರಾಹ್ಮಣೇಭ್ಯೋ ಧನಂ ದತ್ವಾಂ ಬ್ರಹ್ಮಲೋಕಂ ಜಗಾಮ ಸಃ ॥ ೫೧ ॥

---

೪೭. ಆ ದಂಪತಿಗಳು ವೈಕುಂಠದಲ್ಲಿ ಸರ್ವಮಂಗಳಕರವಾದ ಶ್ರೀಹರಿಯ ದಾಸ್ಯವನ್ನು ಅನವರತವೂ ಮಾಡಿಕೊಂಡು ಶ್ರೀಹರಿಯ ಸನ್ನಿಧಿಯಲ್ಲಿಯೇ ಸುಖವಾಗಿದ್ದರು.

೪೮. ಇತ್ತ ಪರಶುರಾಮನು, ಭೃಗುಮಹರ್ಷಿ ಮತ್ತು ಶ್ರೋತ್ರಿಯ ಬ್ರಾಹ್ಮಣರೊಡಗೂಡಿ ತಾಯಿತಂದೆಗಳಿಗೆ ಉತ್ತರಕ್ರಿಯೆಯನ್ನು ಮಾಡಿ ಬ್ರಾಹ್ಮಣರಿಗೆ ದ್ರವ್ಯದಾನಮಾಡಿದನು.

೪೯. ಗೋವು, ಭೂಮಿ, ಸುವರ್ಣ ಮತ್ತು ದಿವ್ಯವಸ್ತುಗಳನ್ನೂ ಮನೋಹರವಾದ ಶಯ್ಯೆಯನ್ನೂ ದಾನಮಾಡಿದನು.

೫೦. ಅಂತೆಯೇ ರತ್ನದೀಪಗಳನ್ನೂ, ಬೆಳ್ಳಿಯ ರಾಶಿಯನ್ನೂ, ಸ್ವರ್ಣ ಪೀಠವನ್ನೂ, ಸುವರ್ಣಪಾತ್ರೆಯಲ್ಲಿ ಸುವಾಸಿತವಾದ ತಾಂಬೂಲವನ್ನೂ ಬ್ರಾಹ್ಮಣರಿಗೆ ದಾನಮಾಡಿದನು.

೫೧. ಛತ್ರಿ ಮತ್ತು ಪಾದುಕೆಗಳನ್ನೂ, ಮನೋಹರವಾದ ಫಲಪುಷ್ಪ ಮಾಲಾದಿಗಳನ್ನೂ, ಮಿಷ್ಟಾನ್ನವನ್ನೂ, ವಿಪುಲದ್ರವ್ಯವನ್ನೂ ಬ್ರಾಹ್ಮಣರಿಗೆ ದಾನಮಾಡಿ ಆ ಪರಶುರಾಮನು ಬ್ರಹ್ಮಲೋಕಕ್ಕೆ ಹೋದನು.

ದದರ್ಶ ಬ್ರಹ್ಮಲೋಕಂ ಸ ಶಾತಕುಂಭವಿನಿರ್ಮಿತಂ ।
ಸ್ವರ್ಣಪ್ರಾಕಾರಸಂಯುಕ್ತಂ ಸ್ವರ್ಣಸ್ತಂಭೈರ್ವಿಭೂಷಿತಂ ॥ ೫೨ ॥

ದದರ್ಶ ತತ್ರ ಬ್ರಹ್ಮಾಣಂ ಜ್ವಲಂತಂ ಬ್ರಹ್ಮತೇಜಸಾ ।
ರತ್ನಸಿಂಹಾಸನಸ್ಥಂ ಚ ರತ್ನಭೂಷಣಭೂಷಿತಂ ॥ ೫೩ ॥

ಸಿದ್ಧೈಸ್ತಪಶ್ಚಾಂದ್ರಾಯಣೈಃ ಋಷೀಂದ್ರೈಃ ಪರಿವೇಷ್ಟಿತಂ ।
ವಿದ್ಯಾಧರೀಣಾಂ ನೃತ್ಯಂ ಚ ಪಶ್ಯಂತಂ ಸಸ್ಮಿತಂ ಮುದಾ ॥ ೫೪ ॥

ಸಂಗೀತಮುಪಶೃಣ್ವಂತಂ ಗೀಯಮಾನಂ ಚ ಗಾಯಕೈಃ ।
ಚಂದನಾಗರುಕಸ್ತೂರೀ ಕುಂಕುಮೇನ ವಿರಾಜಿತಂ ॥ ೫೫ ॥

ತಪಸಾಂ ಫಲದಾತಾರಂ ದಾತಾರಂ ಸರ್ವಸಂಪದಾಂ ।
ಧಾತಾರಂ ಸರ್ವಜಗತಾಂ ಕರ್ತಾರಂ ಚೇಶ್ವರಂ ಪರಂ ॥ ೫೬ ॥

---

೫೨. ಅಲ್ಲಿ ಸ್ವರ್ಣನಿರ್ಮಿತವೂ, ಸುವರ್ಣದ ಕೋಟೆಕೊತ್ತಲು ಮತ್ತು ಕಂಭಗಳಿಂದ ವಿಭೂಷಿತವೂ ಆದ ಬ್ರಹ್ಮಲೋಕವನ್ನು ನೋಡಿದನು.

೫೩. ರತ್ನಸಿಂಹಾಸನದಲ್ಲಿ ಕುಳಿತು, ರತ್ನಾಭರಣಗಳನ್ನು ತೊಟ್ಟು ಬ್ರಹ್ಮತೇಜಸ್ಸಿನಿಂದ ಪ್ರಜ್ವಲಿಸುತ್ತಿರುವ ಬ್ರಹ್ಮನನ್ನು ಅಲ್ಲಿ ಕಂಡನು.

೫೪. ಆವನ ಸುತ್ತಲೂ ತಪಸ್ಸು ಮತ್ತು ಚಂದ್ರಾಯಣಾದಿ ವ್ರತಗಳಿಂದ ಸಿದ್ಧರಾದ ಋಷಿವರ್ಯರು ಕುಳಿತಿದ್ದರು. ಮುಂದೆ ನಡೆಯುತ್ತಿದ್ದ ವಿದ್ಯಾಧರಿಯರ ನರ್ತನವನ್ನು ಬ್ರಹ್ಮನು ಸ್ಮಿತವದನನಾಗಿ ನೋಡುತ್ತಿದ್ದನು.

೫೫. ಗಾಯಕರು ಹಾಡುತ್ತಿದ್ದ ದಿವ್ಯಗಾನವನ್ನು ಕೇಳಿ ಆನಂದಮಯನಾದ ಆ ಬ್ರಹ್ಮನು ಅಗುರು, ಚಂದನ ಮತ್ತು ಕಸ್ತೂರಿ ಮುಂತಾದ ಸುಗಂಧದ್ರವ್ಯವನ್ನು ಮೈಗೆ ಲೇಪಿಸಿಕೊಂಡನು.

೫೬–೫೭. ತಪಃಫಲದಾತೃವೂ, ಸರ್ವಸಂಪತ್ಪ್ರದಾತೃವೂ, ಸಕಲಜಗದಾಧಾರನೂ, ಉದ್ಧಾರಕರ್ತೃವೂ, ಸರ್ವೇಶ್ವರನೂ ಪರಿಪೂರ್ಣತಮನೂ ಆದ ಶ್ರೀಕೃಷ್ಣ

ಪರಿಪೂರ್ಣತಮಂ ಬ್ರಹ್ಮ ಜಪನ್ತಂ ಕೃಷ್ಣಮೀಶ್ವರಂ ।
ಗುಹ್ಯಂ ಯೋಗಂ ಪ್ರವೋಚಂತಂ ಪೃಚ್ಛತಂ ಶಿಷ್ಯಮಂಡಲಂ ॥ ೫೭ ॥

ದೃಷ್ಟ್ವಾ ತಮವ್ಯಯಂ ಭಕ್ತ್ಯಾ ಪ್ರಣನಾಮ ಭೃಗುಃ ಪುರಃ ।
ಉಚ್ಚೈಶ್ಚ ರೋದನಂ ಕೃತ್ವಾ ಸ್ವವೃತ್ತಾಂತಮುವಾಚ ಹ ॥ ೫೮ ॥

॥ ಭೃಗುರುವಾಚ ॥

ಬ್ರಹ್ಮಂಸ್ತ್ವದ್ವಂಶಜಾತೋಽಹಂ ಜಮದಗ್ನಿಸುತೋ ವಿಧೇ ।
ಪಿತಾಮಹಸ್ತ್ವಮಸ್ಮಾಕಂ ಸರ್ವಜ್ಞಂ ಕಥಯಾಮಿ ಕಿಂ ॥ ೫೯ ॥

ಮೃಗಯಾಮಾಗತಂ ಭೂಪಂ ಪಿತಾ ಮೇ ಚೋಪವಾಸಿನಂ ।
ಪಾರಣಾಂ ಕಾರಯಾಮಾಸ ಕಪಿಲಾದತ್ತವಸ್ತುನಾ ॥ ೬೦ ॥

ಸ ರಾಜಾ ಕಪಿಲಾಲೋಭಾತ್ಕಾರ್ತವೀರ್ಯಾರ್ಜುನಃ ಸ್ವಯಂ ।
ಘಾತಯಾಮಾಸ ಮತ್ತಾತಮಿತ್ಯುಕ್ತ್ವೋಚ್ಚೈ ರುರೋದ ಸಃ ॥ ೬೧ ॥

ಪರಮಾತ್ಮನ ದಿವ್ಯನಾಮವನ್ನು ಜಪಿಸುತ್ತ, ಆ ಬ್ರಹ್ಮನು ಪ್ರಶ್ನೆಮಾಡುತ್ತಿದ್ದ ಶಿಷ್ಯಮಂಡಲಿಗೆ ಯೋಗಶಕ್ತಿಯ ಗೂಢಾರ್ಥವನ್ನು ಉಪದೇಶಿಸುತ್ತಿದ್ದನು.

೫೮. ಪರಶುರಾಮನು ನಾಶರಹಿತನಾದ ಬ್ರಹ್ಮನನ್ನು ನೋಡಿ, ಸಾಷ್ಟಾಂಗ ವೆರಗಿ, ಗಟ್ಟಿಯಾಗಿ ಅಳುತ್ತ ತನ್ನ ವೃತ್ತಾಂತವನ್ನೆಲ್ಲ ವಿವರಿಸಿದನು.

೫೯. ಪರಶುರಾಮ :—ಎಲೈ ಬ್ರಹ್ಮನೇ, ನಾನು ನಿನ್ನ ವಂಶಜನಾದ ಜಮದಗ್ನಿಮಹರ್ಷಿಯ ಮಗನು. ನಮ್ಮ ಅಜ್ಜನೂ ಸರ್ವಜ್ಞನೂ ಆದ ನಿನಗೆ ನಾನೇನನ್ನು ಹೇಳಲಿ ?

೬೦. ಬೇಟೆಗಾಗಿ ಬಂದು ಬಳಲಿ ಉಪವಾಸ ಕುಳಿತಿದ್ದ ಕಾರ್ತವೀರ್ಯಾರ್ಜುನನನ್ನು ನನ್ನ ತಂದೆಯು ಆಮಂತ್ರಿಸಿ ಕಾಮಧೇನುವು ಕೊಟ್ಟ ಸಾಮಗ್ರಿಗಳಿಂದ ಭೋಜನಮಾಡಿಸಿದನು.

೬೧. ರಾಜನಾದ ಕಾರ್ತವೀರ್ಯನು ಕಾಮಧೇನುವಿನಾಸೆಗಾಗಿ ನನ್ನ ತಂದೆಯನ್ನು ಸಂಹರಿಸಿದನು. ಎಂದು ಹೇಳಿ ಪರಶುರಾಮನು ಗಟ್ಟಿಯಾಗಿ ಅಳತೊಡಗಿದನು.

ನಿರುಧ್ಯ ಬಾಷ್ಪಂ ಸ ಪುನರುವಾಚ ಕರುಣಾನಿಧಿಃ ।
ಮಾತಾ ಮೇಽನುಗತಾ ಸಾಧ್ವೀ ಮಾಂ ವಿಹಾಯ ಜಗದ್ಗುರೋ ॥ ೬೨ ॥

ಅಧುನಾಽಹಮನಾಥಶ್ಚ ತ್ವಂ ಮೇ ಮಾತಾ ಪಿತಾ ಗುರುಃ ।
ಕರ್ತಾ ಪಾಲಯಿತಾ ದಾತಾ ಪಾಹಿ ಮಾಂ ಶರಣಾಗತಂ ॥ ೬೩ ॥

ಆಗತೋಽಹಂ ತವ ಸಭಾಂ ಪ್ರಮಾತುರ್ಮಾತುರಾಜ್ಞಯಾ ।
ಉಪಾಯೋ ನ ಜಗನ್ನಾಥ ಮದ್ವೈರಿಹನನಂ ಕುರು ॥ ೬೪ ॥

ಸ ರಾಜಾ ಸ ಚ ಧರ್ಮಿಷ್ಠಃ ಸ ದಯಾಲುರ್ಯಶಸ್ಕರಃ ।
ಸ ಪೂಜ್ಯಃ ಸ ಸ್ಥಿರಶ್ರೀಶ್ಚ ಯೋ ದೀನಂ ಪರಿಪಾಲಯೇತ್ ॥ ೬೫ ॥

---

೬೨. ಕರುಣಾಮಯನಾದ ಪರಶುರಾಮನು ಕಣ್ಣೀರನ್ನು ತಡೆದುಕೊಂಡು ಪುನಃ ಹೀಗೆಂದನು. ಎಲೈ ಜಗನ್ನಾಥನೆ, ಸಾಧ್ವೀಶಿರೋಮಣಿಯಾದ ನನ್ನ ಮಾತೆಯೂ ಕೂಡಾ ನನ್ನನ್ನು ಬಿಟ್ಟು ನನ್ನ ತಂದೆಯನ್ನೇ ಅನುಸರಿಸಿ ಹೋದಳು.

೬೩. ಈಗ ನಾನು ದಿಕ್ಕಿಲ್ಲದವನು. ನೀನೇ ನನಗೆ ತಂದೆ ತಾಯಿ. ಪಾಲನೆ ಪೋಷಣೆಗಳಿಗೆ ಕರ್ತೃವೂ ದಾತೃವೂ ಆದ ನೀನು ಶರಣಾಗತನಾದ ನನ್ನನ್ನು ಕಾಪಾಡು.

೬೪. ನನ್ನ ತಾಯಿಯ ಆಜ್ಞೆಯಂತೆ ನಾನು ನಿನ್ನ ಸಭೆಗೆ ಬಂದಿರುವೆನು. ಎಲೈ ಜಗದೊಡೆಯನೇ, ಈಗ ಉಪಾಯದಿಂದ ನನ್ನ ಶತ್ರುವು ನಾಶವಾಗುವಂತೆ ಮಾಡು.

೬೫. ದೀನಾನಾಥರನ್ನು ರಕ್ಷಿಸುವವನೇ ನಿಜವಾದ ರಾಜನು, ಧರ್ಮಿಷ್ಠನೂ, ದಯಾಳುವೂ, ಕೀರ್ತಿದಾತನೂ, ಪೂಜ್ಯನೂ, ಸ್ಥಿರಸಂಪತ್ತುಳ್ಳವನೂ ಅವನೇ.

ಧನಿದೀನೌ ಸಮಂ ದೃಷ್ಟ್ವಾ ಯಃ ಪ್ರಜಾಂ ನ ಚ ಪಾಲಯೇತ್ ।
ತದ್ದೇಹಾದ್ಯಾತಿ ರುಷ್ಟಾಶ್ರೀಃ ಸ ಭವೇದ್ಭ್ರಷ್ಟರಾಜ್ಯಕಃ ॥ ೬೬ ॥

ಶ್ರುತ್ವಾ ವಿಪ್ರವಟೋರ್ವಾಕ್ಯಂ ಕರುಣಾಸಾಗರೋ ವಿಧಿಃ ।
ದತ್ವಾ ಶುಭಾಶಿಷಂ ತಸ್ಮೈ ವಾಸಯಾಮಾಸ ವಕ್ಷಸಿ ॥ ೬೭ ॥

ಶ್ರುತ್ವಾ ಭೃಗೋಃ ಪ್ರತಿಜ್ಞಾಂ ಚ ವಿಸ್ಮಿತಶ್ಚತುರಾನನಃ ।
ಅತೀವದುಷ್ಕರಾಂ ಘೋರಾಂ ಬಹುಜೀವವಿಘಾತಿನೀಂ ॥ ೬೮ ॥

ಕರ್ಮಣಾ ತದ್ಭವೇತ್ಸರ್ವಮಿತಿ ಕೃತ್ವಾ ತು ಮಾನಸೇ ।
ಉವಾಚ ಜಾಮದಗ್ನ್ಯಂ ತಂ ಪರಿಣಾಮಸುಖಾವಹಂ ॥ ೬೯ ॥

॥ ಬ್ರಹ್ಮೋವಾಚ ॥

ಪ್ರತಿಜ್ಞಾ ದುಷ್ಕರಾ ವತ್ಸ ಬಹುಜೀವವಿಘಾತಿನೀ ।
ಸೃಷ್ಟಿರೇಷಾ ಭಗವತಃ ಸಂಭವೇದೀಶ್ವರೇಚ್ಛಯಾ ॥ ೭೦ ॥

---

೬೬. ಭಾಗ್ಯವಂತರನ್ನೂ ಬಡವರನ್ನೂ ಸಮವಾಗೆಣಿಸಿ ಪ್ರಜಾಪರಿಪಾಲನೆ ಮಾಡದಿದ್ದರೆ ಆ ಪ್ರಭುವಿನ ದೇಹದಿಂದ ಲಕ್ಷ್ಮಿಯು ಕುಪಿತಳಾಗಿ ದೂರಹೋಗುವಳು ಅಲ್ಲದೆ ಅವನು ರಾಜ್ಯಭ್ರಷ್ಟನಾಗುವನು.

೬೭. ಬ್ರಾಹ್ಮಣವಟುವಾಡಿದ ಆ ಮಾತುಗಳನ್ನು ಕೇಳಿ ಕರುಣಾಮಯನಾದ ಬ್ರಹ್ಮನು ಅವನಿಗೆ ಆಶೀರ್ವಾದವನ್ನು ಮಾಡಿ ಎದೆಗಪ್ಪಿಕೊಂಡನು.

೬೮. ಅಲ್ಲದೆ, ದುಷ್ಕರವೂ, ಅತ್ಯಂತಘೋರವೂ, ಅನೇಕ ಜೀವನಾಶಕವೂ ಆದ ಆ ಪರಶುರಾಮನ ಪ್ರತಿಜ್ಞೆಯನ್ನು ಕೇಳಿ ಚತುರ್ಮುಖನು ವಿಸ್ಮಿತನಾದನು.

೬೯. ಕರ್ಮಾನುಗುಣವಾಗಿ ಸಕಲವೂ ನಡೆಯುವುದೆಂದು ಮನಸ್ಸಿನಲ್ಲಿಯೇ ಅಂದುಕೊಂಡು, ಆ ಪರಶುರಾಮನನ್ನು ಕುರಿತು ಬ್ರಹ್ಮನು ಪರಿಣಾಮಸುಖಕರವಾದ ಕೆಲವು ಮಾತುಗಳನ್ನು ಹೇಳಿದನು.

೭೦. ಬ್ರಹ್ಮ :—ಎಲೈ ವತ್ಸನೇ, ನೀನು ಮಾಡಿರುವ ಪ್ರತಿಜ್ಞೆಯು ಅತಿ ದುಷ್ಕರವೂ, ಅನೇಕಜೀವ ವಿಘಾತಕವೂ ಆದುದು. ಷಡ್ಗುಣೈಶ್ವರ್ಯಪರಿಪೂರ್ಣನಾದ ಈಶ್ವರನ ಇಚ್ಛೆಯಿಂದಲೇ ಈ ಪ್ರಪಂಚದ ಸೃಷ್ಟಿಯಾಗುವುದು.

ಸೃಷ್ಟಿಃ ಸೃಷ್ಟಾ ಮಯಾ ಪುತ್ರಕ್ಲೇಶೇನೈವೇಶ್ವರಾಜ್ಞಯಾ ।
ಸೃಷ್ಟಿಲುಪ್ತೌ ಪ್ರತಿಜ್ಞಾ ತೇ ದಾರುಣಾಽಕರುಣಾ ಪರಾ ॥ ೭೧ ॥

ತ್ರಿಸ್ಸಪ್ತಕೃತ್ವೋ ನಿರ್ಭೂಪಾಂ ಕರ್ತುಮಿಚ್ಛಸಿ ಮೇದಿನೀಂ ।
ಏಕಕ್ಷತ್ರಿಯದೋಷೇಣ ತಜ್ಜಾತಿಂ ಹಂತುಮಿಚ್ಛಸಿ ॥ ೭೨ ॥

ಬ್ರಹ್ಮಕ್ಷತ್ರಿಯವಿಟ್ಛೂದ್ರೈರ್ನಿತ್ಯಾ ಸೃಷ್ಟಿಶ್ಚತುರ್ವಿಧೈಃ ।
ಆವಿರ್ಭೂತಾ ತಿರೋಭೂತಾ ಹರೇರೇವ ಪುನಃ ಪುನಃ ॥ ೭೩ ॥

ಅನ್ಯಥಾ ತ್ವತ್ಪ್ರತಿಜ್ಞಾ ಚ ಭವಿತಾ ಪ್ರಾಕ್ತನೇನ ತೇ ।
ಬಹ್ವಾಯಾಸೇನ ತೇ ಕಾರ್ಯಸಿದ್ಧಿರ್ಭವಿತುಮರ್ಹತಿ ॥ ೭೪ ॥

ಶಿವಲೋಕಂ ಗಚ್ಛ ವತ್ಸ ಶಂಕರಂ ಶರಣಂ ವ್ರಜ ।
ಪೃಥಿವ್ಯಾಂ ಬಹವೋ ಭೂಪಾಃ ಸಂತಿ ಶಂಕರಕಿಂಕರಾಃ ॥ ೭೫ ॥

---

೭೧. ಎಲೈ ಪುತ್ರನೇ, ಈಶ್ವರನ ಆಜ್ಞಾಪರಿಪಾಲನೆಗಾಗಿ ನಾನು ಬಹಳ ಕ್ಲೇಶದಿಂದ ಈ ಜಗತ್ಸೃಷ್ಟಿಮಾಡಿರುವೆನು. ದಾರುಣವೂ, ದಯಾರಹಿತವೂ ಆದ ನಿನ್ನ ಈ ಪ್ರತಿಜ್ಞೆಯು ಈ ಸೃಷ್ಟಿಯನ್ನೇ ನಾಶಗೊಳಿಸುತ್ತದೆ.

೭೨. ಇಪ್ಪತ್ತೊಂದುಸಾರಿ ಭೂಪ್ರದಕ್ಷಿಣೆಮಾಡಿ ಭೂಮಿಯಲ್ಲಿ ಕ್ಷತ್ರಿಯರಿಲ್ಲದಂತೆ ಮಾಡಬಯಸುತ್ತಿರುವೆ. ಒಬ್ಬ ಕ್ಷತ್ರಿಯನ ದೋಷದಿಂದ ಆ ಜಾತಿಯನ್ನೇ ನಾಶಗೊಳಿಸಲಿಚ್ಛಿಸುತ್ತಿರುವೆ.

೭೩. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರರೆಂಬ ಚಾತುರ್ವರ್ಣ್ಯದ ಸೃಷ್ಟಿಯು ಶ್ರೀಹರಿಯಿಂದ ಆವಿರ್ಭವಿಸಿ ಪುನಃ ಅವನಲ್ಲಿಯೇ ಐಕ್ಯವಾಗುವುದು.

೭೪. ಅನಭಿಜ್ಞನಾದ ನೀನು ಮಾಡಿರುವ ಪ್ರತಿಜ್ಞೆಯು ವ್ಯರ್ಥವಾಗುವುದು. ಅಥವಾ ನಿನ್ನ ಪ್ರತಿಜ್ಞೆಯು ಕೈಗೂಡಬೇಕಾದರೆ ನೀನು ಬಹಳ ಆಯಾಸ ಪಡಬೇಕಾಗಬಹುದು.

೭೫. ಆದುದರಿಂದ ಎಲೈ ವತ್ಸನೇ, ನೀನು ಶಿವಲೋಕಕ್ಕೆ ಹೋಗಿ ಶಂಕರನನ್ನು ಶರಣುಹೊಂದು. ಭೂಮಂಡಲದಲ್ಲಿ ಶಂಕರನ ಭಕ್ತರಾದ ರಾಜರನೇಕರಿದ್ದಾರೆ.

ವಿನಾಜ್ಞಯಾ ಮಹೇಶಸ್ಯ ಕೋ ವಾ ತಾನ್ಹಂತುಮೀಶ್ವರಃ ।
ಬಿಭ್ರತೇ ಕವಚಂ ದಿವ್ಯಂ ಶಕ್ತೇರ್ವೈ ಶಂಕರಸ್ಯ ಚ ॥ ೭೬ ॥

ಉಪಾಯಂ ಕುರು ಯತ್ನೇನ ಜಯಬೀಜಂ ಶುಭಾವಹಂ ।
ಉಪಾಯತಃ ಸಮಾರಬ್ಧಾಃ ಸರ್ವೇ ಸಿದ್ಧ್ಯಂತ್ಯುಪಕ್ರಮಾಃ ॥ ೭೭ ॥

ಶ್ರೀಕೃಷ್ಣಮಂತ್ರಕವಚಗ್ರಹಣಂ ಕುರು ಶಂಕರಾತ್ ।
ದುರ್ಲಭಂ ವೈಷ್ಣವಂ ತೇಜಃ ಶೈವಂ ಶಾಕ್ತಂ ವಿಜೇಷ್ಯತಿ ॥ ೭೮ ॥

ಗುರುಸ್ತೇ ಜಗತಾಂ ನಾಥಃ ಶಿವೋ ಜನ್ಮನಿ ಜನ್ಮನಿ ।
ಮಂತ್ರೋ ಮತ್ತೋ ನ ಯುಕ್ತಸ್ತೇ ಯೋಯುಕ್ತಃ ಸಭವೇದ್ವಿಧಿಃ ॥ ೭೯ ॥

ಕರ್ಮಣಾ ಲಭ್ಯತೇ ಮಂತ್ರಃ ಕರ್ಮಣಾ ಲಭ್ಯತೇ ಗುರುಃ ।
ಸ್ವಯಮೇವೋಪತಿಷ್ಠಂತೇ ಯೇ ಯೇಷಾಂ ತೇಷು ತೇ ಧ್ರುವಂ ॥ ೮೦ ॥

---

೭೬. ಮಹೇಶನ ಅನುಜ್ಞೆಯಿಲ್ಲದೆ ಆ ರಾಜರನ್ನೆಲ್ಲ ಸಂಹರಿಸಲು ಯಾರಿಗೂ ಸಾಧ್ಯವಿಲ್ಲ. ಅವರೆಲ್ಲರೂ ಶಂಕರನ ಶಕ್ತಿರೂಪವಾದ ಅಭೇದ್ಯಕವಚವನ್ನು ಧರಿಸಿದ್ದಾರೆ.

೭೭. ಆದುದರಿಂದ ನಿನ್ನ ಜಯಕ್ಕೆ ಬೀಜರೂಪವೂ, ಶುಭಕರವೂ ಆದ ಉಪಾಯವೊಂದನ್ನು ಯೋಚಿಸು. ಪ್ರಾರಂಭಿಸಿದ ಕಾರ್ಯವೆಲ್ಲವೂ ಉಪಾಯದಿಂದ ಸಿದ್ಧಿಸುವುದು.

೭೮. ಶಂಕರನ ಅನುಗ್ರಹದಿಂದ ಶ್ರೀಕೃಷ್ಣಪರಮಾತ್ಮನ ಮಂತ್ರಕವಚಗಳನ್ನು ಸ್ವೀಕರಿಸು. ದುರ್ಲಭವಾದ ವೈಷ್ಣವ ತೇಜಸ್ಸು, ಶೈವಶಕ್ತಿಯನ್ನು ಜಯಿಸುವುದು.

೭೯. ಜಗತ್ಪತಿಯಾದ ಶಂಕರನೇ ನಿನಗೆ ಪ್ರತಿಜನ್ಮದಲ್ಲಿಯೂ ಗುರುವಾಗಿರುವನು. ಆದುದರಿಂದ ನೀನು ನನ್ನಿಂದ ಮಂತ್ರೋಪದೇಶವನ್ನು ಸ್ವೀಕರಿಸುವುದು ಯುಕ್ತವಲ್ಲ. ಯಾವುದು ನ್ಯಾಯವಾದುದೋ ಅದೇ ವಿಧಿಯೆನಿಸುವುದು.

೮೦. ಮಂತ್ರವಾಗಲೀ, ಗುರುವಾಗಲೀ ಕರ್ಮಾನುಗುಣವಾಗಿ ದೊರೆಯುವುವು. ಆ ಮಂತ್ರ ಮತ್ತು ಗುರುಗಳು ತಾವಾಗಿಯೇ ಒದಗಿ ಬರುವುವು.

ತ್ರೈಲೋಕ್ಯ ವಿಜಯಂ ನಾಮ ಗೃಹೀತ್ವಾ ಕವಚಂ ವರಂ ।
ತ್ರಿಸ್ಸಪ್ತಕೃತ್ವೋ ನಿರ್ಭೂಪಾಂ ಕರಿಷ್ಯಸಿ ಮಹೀಂ ಭೃಗೋ ॥ ೬೧ ॥

ದಿವ್ಯಂ ಪಾಶುಪತಂ ತುಭ್ಯಂ ದಾತಾ ದಾಸ್ಯತಿ ಶಂಕರಃ ।
ತೇನ ದತ್ತೇನ ಮಂತ್ರೇಣ ಕ್ಷತ್ರಸಂಘಂ ವಿಜೇಷ್ಯಸಿ ॥ ೬೨ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ತೃತೀಯೇ ಗಣೇಶಖಂಡೇ
ನಾರದನಾರಾಯಣಸಂವಾದೇ ಭೃಗೋರ್ಬ್ರಹ್ಮಲೋಕಗಮನೇ
ಬ್ರಹ್ಮೋಕ್ತೋಪಾಯ ವರ್ಣನಂ ನಾಮ
ಅಷ್ಟಾವಿಂಶತಿತಮೋಽಧ್ಯಾಯಃ

---

೬೧. ತ್ರೈಲೋಕ್ಯವಿಜಯಿಯಾದ ಶ್ರೀಕೃಷ್ಣಪರಮಾತ್ಮನ ಕವಚವನ್ನು ಸ್ವೀಕರಿಸಿ, ಇಪ್ಪತ್ತೊಂದು ಸಾರಿ ಸುತ್ತಿ ಭೂಮಿಯಲ್ಲಿ ಕ್ಷತ್ರಿಯರಿಲ್ಲದಂತೆ ಮಾಡಲು ಶಕ್ತನಾಗುವೆ.

೬೨. ದಾನಿಯಾದ ಶಂಕರನು ದಿವ್ಯವಾದ ಪಾಶುಪತಾಸ್ತ್ರವನ್ನು ನಿನಗೆ ಅನುಗ್ರಹಿಸುವನು. ಅವನುಪದೇಶಿಸಿದ ಮಂತ್ರಶಕ್ತಿಯಿಂದ ಕ್ಷತ್ರಿಯರ ಗುಂಪನ್ನು ಗೆಲ್ಲುವೆ.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಗಣಪತಿಖಂಡದಲ್ಲಿ ಪರಶುರಾಮನಿಗೆ
ಬ್ರಹ್ಮನು ಹೇಳಿದ ಉಪಾಯವರ್ಣನಾತ್ಮಕವಾದ ಇಪ್ಪತ್ತೆಂಟನೆಯ
ಅಧ್ಯಾಯವು ಮುಗಿದುದು

ಇಪ್ಪತ್ತೆಂಟನೆಯ ಅಧ್ಯಾಯದ ಸಾರಾಂಶ

ಜಮದಗ್ನಿಯು ಮೃತನಾದ ದಿವಸ ಅವನ ಪತ್ನಿಯಾದ ರೇಣುಕೆಯು ಋತುಸ್ನಾತಳಾಗಿದ್ದುದರಿಂದ ಪತಿಯ ಅನುಸರಣವು ಉಚಿತವೇ ? ಅನುಚಿತವೇ? ಎಂಬ ಸಂದೇಹವುಂಟಾಗಿ ಭೃಗುಮಹರ್ಷಿಯನ್ನು ಕೇಳಲು ಹೆಂಗಸು ಋತುಸ್ನಾತಳಾದ ದಿವಸ ತನ್ನ ಪತಿಯ ಸಂಬಂಧವಾದ ಸೇವಾಕಾರ್ಯಗಳಿಗೆ ಮಾತ್ರ ಶುದ್ಧಳಾದುದರಿಂದ ಪತಿಯನ್ನನುಸರಿಸಬಹುದೆಂದು ಮಹರ್ಷಿಯು ಹೇಳಿದನು. ಮತ್ತು ಪತಿಯ ಅನುಗಮನಮಾಡಿ ಪರಲೋಕದಲ್ಲಿ ಅವನೊಡನೆ ಸೇರಲರ್ಹರಾರೆಂಬುದನ್ನು ವಿವರಿಸಿದನು. ಅನಂತರ ಪರಶುರಾಮನನ್ನು ಸಮಾಧಾನಗೊಳಿಸಿ ಮೃತಶರೀರಕ್ಕೆ ಅಗ್ನಿಸಂಸ್ಕಾರ ಮಾಡುವ ಕ್ರಮವನ್ನು ಬೋಧಿಸಿದನು. 'ಮೃತದೇಹವನ್ನು ದಕ್ಷಿಣಕ್ಕೆ ತಲೆಮಾಡಿ ಮಲಗಿಸಿ, ಅದಕ್ಕೆ ಹೊಸದಾದ ವಸ್ತ್ರ ಯಜ್ಞೋಪವೀತಗಳನ್ನು ತೊಡಿಸಿ ದಕ್ಷಿಣಾಭಿಮುಖವಾಗಿ ನಿಂತುಕೊಂಡು, ಅರಣಿಕಾಷ್ಠಮಥನದಿಂದ ಅಗ್ನಿಸೃಷ್ಟಿಯನ್ನು ಮಾಡಿ ಸಕಲ ಪುಣ್ಯಕ್ಷೇತ್ರತೀರ್ಥಗಳ ಸ್ಮರಣೆಮಾಡಿಕೊಂಡು, ಚಂದನಾದಿ ಸುಗಂಧದ್ರವ್ಯಗಳನ್ನು ಸಮರ್ಪಿಸಿ ಚಿತಿಯಮೇಲಿರಿಸಬೇಕು. ಅನಂತರ ಚಿನ್ನದಕಡ್ಡಿಯೊಂದರಿಂದ ಬಾಹ್ಯೇಂದ್ರಿಯಗಳ ಕೊಳೆಯನ್ನೆಲ್ಲ ತೆಗೆದು, ತಿಲ ಗೋವು, ಭೂಮಿ ಮತ್ತು ಹಿರಣ್ಯಗಳನ್ನು ಬ್ರಾಹ್ಮಣರಿಗೆ ದಾನಮಾಡಿ, ಮೃತದೇಹಕ್ಕೆ ಮಂತ್ರಪೂರ್ವಕವಾಗಿ ಅಗ್ನಿಸಮರ್ಪಣೆ ಮಾಡಬೇಕು.' ಭೃಗುಮಹರ್ಷಿಯ ಅಪ್ಪಣೆಯಂತೆ ಆಚರಿಸಿ ಪರಶುರಾಮನು ಸಹೋದರರೊಡನೆ ತಂದೆಗೆ ಮಂತ್ರಾಗ್ನಿಯನ್ನು ಸಮರ್ಪಿಸಿದನು. ಅನಂತರ ರೇಣುಕೆಯು ಪುತ್ರನನ್ನು ಅಪ್ಪಿಕೊಂಡು ಕ್ಷತ್ರಿಯರೊಡನೆ ಯುದ್ಧದ ಗೋಜಿಗೆ ಹೋಗಬೇಡವೆಂದೂ, ಬ್ರಹ್ಮನೊಡನೆ ಪರ್ಯಾಲೋಚಿಸಿ ಉಚಿತವಾದುದನ್ನು ಮಾಡಬೇಕೆಂದೂ ಮತ್ತೊಮ್ಮೆ ಹೇಳಿ ತಾನೂ ಪತಿಯ ಶರೀರವನ್ನಪ್ಪಿಕೊಂಡು ಚಿತಿಯ ಮೇಲೆ ಮಲಗಿ ಕ್ಷಣಮಾತ್ರದಲ್ಲಿ ಬೂದಿಯಾದಳು. ಪರಶುರಾಮನು, ಮಾತಾಪಿತೃಗಳಿಗೆ ಯೋಗ್ಯವಾದ ಉತ್ತರಕ್ರಿಯೆಗಳನ್ನು ಮಾಡಿ ತಾಯಿಯ ಮಾತಿನಂತೆ ಬ್ರಹ್ಮಲೋಕಕ್ಕೆ ಹೋಗಿ ನಡೆದ ಸಮಾಚಾರವನ್ನೂ ತಾನು ಮಾಡಿರುವ ಪ್ರತಿಜ್ಞೆಯನ್ನೂ ಬ್ರಹ್ಮನಿಗೆ ತಿಳಿಸಲು, ಬ್ರಹ್ಮನು ಶಂಕರನ ಭಕ್ತರಾದ ಅನೇಕ ರಾಜರಿರುವುದರಿಂದ ಶಂಕರನ ಅನುಗ್ರಹವನ್ನು ಸಂಪಾದಿಸಿದ ಹೊರತೂ ಅವರೆಲ್ಲರನ್ನೂ ಸಂಹರಿಸಿ ಪ್ರತಿಜ್ಞಾಪಾಲನೆ ಮಾಡಲಸಾಧ್ಯವೆಂದೂ, ಆದುದರಿಂದ ಶಂಕರನನ್ನು ಸೇವೆಯಿಂದ ಮೆಚ್ಚಿಸಿ ಅವನಿಂದ ಪಾಶುಪತಾಸ್ತ್ರವನ್ನು ಪಡೆದು ಕ್ಷತ್ರಿಯರನ್ನು ಸಂಹರಿಸಿ, ಪ್ರತಿಜ್ಞೆಯನ್ನು ಪಾಲಿಸಿಕೊಳ್ಳಬೇಕೆಂದು ಹೇಳಿದನು.

॥ ಓಂ ॥

॥ ಶ್ರೀ ಗಣೇಶಾಯ ನಮಃ ॥

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಗಣಪತಿಖಂಡೇ

॥ ಏಕೋನತ್ರಿಂಶತ್ತಮೋಽಧ್ಯಾಯಃ ॥

॥ ನಾರಾಯಣ ಉವಾಚ ॥

ಬ್ರಹ್ಮಣೋ ವಚನಂ ಶ್ರುತ್ವಾ ಪ್ರಣಮ್ಯ ಚ ಜಗದ್ಗುರುಂ ।
ಸ್ಥಿತಸ್ತಸ್ಮಾದ್ವರಂ ಪ್ರಾಪ್ಯ ಶಿವಲೋಕಂ ಜಗಾಮ ಸಃ ॥ ೧ ॥

ಲಕ್ಷಯೋಜನಮೂರ್ಧ್ವಂ ಚ ಬ್ರಹ್ಮಲೋಕಾದ್ವಿಲಕ್ಷಣಂ ।
ಅನಿರ್ವಾಚ್ಯಂ ಸುಶೋಭಾಢ್ಯಂ ವಾಯ್ವಾಧಾರಂ ಮನೋಹರಂ ॥ ೨ ॥

ವೈಕುಂಠಂ ದಕ್ಷಿಣೇ ಯಸ್ಯ ಗೌರೀಲೋಕಶ್ಚ ವಾಮತಃ ।
ಯದಧೋ ಧ್ರುವಲೋಕಶ್ಚ ಸರ್ವಲೋಕಾತ್ಪರಃ ಸ್ಮೃತಃ ॥ ೩ ॥

ಇಪ್ಪತ್ತೊಂಭತ್ತನೆಯ ಅಧ್ಯಾಯವು

೧. ನಾರಾಯಣ :—ಪರಶುರಾಮನು ಜಗದ್ಗುರುವಾದ ಬ್ರಹ್ಮನ ಮಾತನ್ನು ಕೇಳಿ, ಅವನಿಗೆ ನಮಸ್ಕರಿಸಿ, ಅವನಿಂದ ವರವನ್ನು ಪಡೆದು, ಶಿವಲೋಕಕ್ಕೆ ಹೋದನು.

೨. ಬ್ರಹ್ಮಲೋಕಕ್ಕಿಂತ ಲಕ್ಷಯೋಜನ ಮೇಲುಭಾಗದಲ್ಲಿರುವ ಆ ಶಿವ ಲೋಕವು ವಿಲಕ್ಷಣವೂ, ವರ್ಣಿಸಲಸಾಧ್ಯವೂ, ಕಾಂತಿಯುತವೂ ಆಗಿ ವಾಯುವಿನ ಆಧಾರದಿಂದಿದ್ದಿತು.

೩. ಆ ಶಿವಲೋಕದ ಬಲಭಾಗದಲ್ಲಿ ವೈಕುಂಠವೂ, ಎಡಭಾಗದಲ್ಲಿ ಗೌರೀ ಲೋಕವೂ, ಅದರ ಕೆಳಗೆ ಹದಿನಾಲ್ಕು ಲೋಕಗಳಿಗೂ ಮೇಲಾದ ಧ್ರುವಲೋಕವೂ ಇರುವುದು.

ತೇಷಾಮೂರ್ಧ್ವಂ ಚ ಗೋಲೋಕಃ ಪಂಚಾಶತ್ಕೋಟಿಯೋಜನಃ ।
ಅತ ಊರ್ಧ್ವಂ ನ ಲೋಕಶ್ಚ ಸರ್ವೋಪರಿ ಚ ಸಸ್ಕೃತಃ ॥ ೪ ॥

ಮನೋಯಾಯೀ ಸ ಯೋಗೀಂದ್ರಃ ಶಿವಲೋಕಂ ದದರ್ಶ ಹ ।
ಉಪಮಾನೋಪಮೇಯಾಭ್ಯಾಂ ರಹಿತಂ ಮಹದದ್ಭುತಂ ॥ ೫ ॥

ಯೋಗೀಂದ್ರಾಣಾಂ ವರೇಣ್ಯೈಶ್ಚ ಸಿದ್ಧವಿದ್ಯಾವಿಶಾರದೈಃ ।
ಕೋಟಿಕಲ್ಪತಪಃಪೂತೈಃ ಪುಣ್ಯವದ್ಭಿರ್ನಿಷೇವಿತಂ ॥ ೬ ॥

ವೇಷ್ಟಿತಂ ಕಲ್ಪವೃಕ್ಷಾಣಾಂ ಸಮೂಹೈರ್ವಾಂಛಿತಪ್ರದೈಃ ।
ಸಮೂಹೈಃ ಕಾಮಧೇನೂನಾಮಸಂಖ್ಯಾನಾಂ ವಿರಾಜಿತಂ ॥ ೭ ॥

ಪಾರಿಜಾತತರೂಣಾಂ ಚ ವನರಾಜಿವಿರಾಜಿತಂ ।
ಪುಷ್ಪೋದ್ಯಾನಾಯುತೈರ್ಯುಕ್ತಂ ಸದಾ ಚಾತಿಸುಶೋಭಿತಂ ॥ ೮ ॥

---

೪. ಎಲ್ಲಕ್ಕಿಂತಲೂ ಮೇಲೆ ಐವತ್ತುಕೋಟಿಯೋಜನ ವಿಸ್ತೀರ್ಣವುಳ್ಳ ಗೋಲೋಕವಿರುವುದು. ಅದರ ಮೇಲೆ ಯಾವ ಲೋಕವೂ ಇಲ್ಲ. ಅದೇ ಕೊಟ್ಟ ಕೊನೆಯ ಲೋಕ.

೫. ಯೋಗಿಶ್ರೇಷ್ಠನಾದ ಪರಶುರಾಮನು ಮನೋವೇಗದಿಂದ ಹೋಗಿ ಅನನ್ವಯವೂ. ಅತ್ಯದ್ಭುತವೂ ಆದ ಶಿವಲೋಕವನ್ನು ನೋಡಿದನು.

೬. ಅಲ್ಲಿ ಅನೇಕ ಯೋಗಿವರೇಣ್ಯರೂ, ಸಿದ್ಧವಿದ್ಯಾವಿಶಾರದರೂ, ಕೋಟಿ ಕಲ್ಪಗಳ ಕಾಲ ತಪಸ್ಸುಮಾಡಿ ಪವಿತ್ರರಾದ ಪುಣ್ಯವಂತರೂ ನೆಲೆಸಿದ್ದರು.

೭. ಬೇಡಿದ ಇಷ್ಟಾರ್ಥವನ್ನು ಕೊಡುವ ಅನೇಕ ಕಲ್ಪವೃಕ್ಷಗಳೂ, ಅಸಂಖ್ಯ ಕಾಮಧೇನುಗಳೂ ಅಲ್ಲಿದ್ದವು.

೮. ಪಾರಿಜಾತವೃಕ್ಷಗಳ ವನರಾಜಿಯಿಂದಲೂ, ಹತ್ತುಸಾವಿರ ಹೂದೋಟ ಗಳಿಂದಲೂ ಕೂಡಿ ಆ ಲೋಕವು ಶೋಭಿಸುತ್ತಿದ್ದಿತು.

ಮಣೀಂದ್ರಸಾರರಚಿತೈಃ ಶೋಭಿತೈರ್ಮಣಿವೇದಿಭಿಃ ।
ರಾಜಮಾರ್ಗಶತೈರ್ದಿವ್ಯೈಃ ಸರ್ವತಃ ಪರಿಭೂಷಿತಂ ॥ ೯ ॥

ಮಣೀಂದ್ರಸಾರನಿರ್ಮಾಣಶತಕೋಟಿಗೃಹೈರ್ಯುತಂ ।
ನಾನಾಚಿತ್ರವಿಚಿತ್ರಾಢ್ಯೈರ್ಮಣೀಂದ್ರಕಲಶೋಜ್ವಲೈಃ ॥ ೧೦ ॥

ತನ್ಮಧ್ಯದೇಶೇ ರಮ್ಯೇ ಚ ದದರ್ಶ ಶಂಕರಾಲಯಂ ।
ಮಣೀಂದ್ರಸಾರರಚಿತಪ್ರಾಕಾರಂ ಸುಮನೋಹರಂ ॥ ೧೧ ॥

ಅತ್ಯೂರ್ಧ್ವಮಂಬರಸ್ಪರ್ಶಿ ಕ್ಷೀರನೀರನಿಭಂ ಪರಂ ।
ಷೋಡಶದ್ವಾರಸಂಯುಕ್ತಂ ಶೋಭಿತಂ ಶತಮಂದಿರೈಃ ॥ ೧೨ ॥

ಅಮೂಲ್ಯರತ್ನರಚಿತೈ ರತ್ನಸೋಪಾನಭೂಷಿತೈಃ ।
ರತ್ನಸ್ತಂಭಕಪಾಟೈಶ್ಚ ಹೀರಕೇಣ ಪರಿಷ್ಕೃತೈಃ ॥ ೧೩ ॥

೯–೧೦. ಶ್ರೇಷ್ಠಮಣಿಗಳನ್ನು ಮೆಟ್ಟಿರುವ ರತ್ನವಿಕಾರವಾದ ಜಗಲಿಗಳಿಂದಲೂ, ತಳಿರುತೋರಣಗಳಿಂದಲಂಕೃತವಾದ ರಾಜಮಾರ್ಗಗಳಿಂದಲೂ ಶೋಭಿತವಾದ ಆ ಲೋಕವು ಮಣಿನಿರ್ಮಿತವಾದ ನೂರುಕೋಟಿಮನೆಗಳಿಂದಲೂ, ಚಿತ್ರವಿಚಿತ್ರವಾದ ರತ್ನಕಲಶಗಳಿಂದಲೂ ಅಲಂಕೃತವಾಗಿದ್ದಿತು.

೧೧. ಆ ಲೋಕದ ಮಧ್ಯಪ್ರದೇಶದಲ್ಲಿದ್ದ ಶಂಕರನ ಮಂದಿರದ ಸುತ್ತಲೂ ಶ್ರೇಷ್ಠಮಣಿಗಳಿಂದ ಪ್ರಾಕಾರವು ನಿರ್ಮಿತವಾಗಿ ಮನೋಹರವಾಗಿದ್ದಿತು.

೧೨. ಆ ಮಂದಿರವು ಹದಿನಾರು ಬಾಗಿಲುಗಳಿಂದಲೂ ನೂರಾರು ಕೊಠಡಿಗಳಿಂದಲೂ ಕೂಡಿ, ಕ್ಷೀರಸಾಗರದಂತೆ ಶುಭ್ರವೂ, ಕೈಲಾಸಪರ್ವತದಂತೆ ಗಗನಚುಂಬಿತವೂ ಆಗಿದ್ದಿತು.

೧೩. ರತ್ನಸ್ತಂಭಗಳಿಂದಲೂ ವಜ್ರದಬಾಗಿಲುಗಳಿಂದಲೂ ನಿರ್ಮಿತವಾದ ಆ ಮಂದಿರಕ್ಕೆ ಹೋಗಲು ಅಮೂಲ್ಯರತ್ನಗಳಿಂದ ಖಚಿತವಾದ ದಿವ್ಯಸೋಪಾನಗಳಿದ್ದವು.

ಮಾಣಿಕ್ಯ ಜಾಲಮಾಲಾಭಿಃ ಸದ್ರತ್ನಕಲಶೋಜ್ವಲೈಃ ।
ನಾನಾವಿಚಿತ್ರಚಿತ್ರೇಣ ಚಿತ್ರಿತೈಃ ಸುಮನೋಹರೈಃ ॥ ೧೪ ॥

ಆಲಯಸ್ಯ ಪುರಸ್ತತ್ರ ಸಿಂಹದ್ವಾರಂ ದದರ್ಶ ಸಃ ।
ರತ್ನೇಂದ್ರಸಾರರಚಿತ ಕಪಾಟೈಶ್ಚ ವಿರಾಜಿತಂ ॥ ೧೫ ॥

ಶೋಭಿತಂ ವೇದಿಕಾಭಿಶ್ಚ ಬಾಹ್ಯಾಭ್ಯಂತರತಃ ಸದಾ ।
ರಚಿತಾಭಿಃ ಪದ್ಮರಾಗೈರ್ಮಹಾಮರಕತೈರ್ಗೃಹಂ ॥ ೧೬ ॥

ನಾನಾಪ್ರಕಾರಚಿತ್ರೇಣ ಚಿತ್ರಿತಂ ಸುಮನೋಹರಂ ।
ಕರಾಲರೂಪಾವದ್ರಾಕ್ಷೀದ್ದ್ವಾರಪಾಲೌ ಭಯಂಕರೌ ॥ ೧೭ ॥

ಮಹಾಕರಾಲದಂತಾಸ್ಯೌ ವಿರಕ್ತೌ ರಕ್ತಲೋಚನೌ ।
ದಗ್ಧಶೈಲಪ್ರತೀಕಾಶೌ ಮಹಾಬಲಪರಾಕ್ರಮೌ ॥ ೧೮ ॥

---

೧೪. ಬಾಗಿಲುಗಳಿಗೆಲ್ಲ ಮಾಣಿಕ್ಯದ ಮಾಲೆಗಳನ್ನು ಹಾಕಿ ಉಭಯ ಪಾರ್ಶ್ವದಲ್ಲಿಯೂ ರತ್ನಕಲಶಗಳನ್ನಿಟ್ಟಿದ್ದರು. ಗೋಡೆಗಳ ಮೇಲೆಲ್ಲ ನಾನಾವರ್ಣದ ಚಿತ್ರಗಳು ಚಿತ್ರಿತವಾಗಿ ಮನೋಹರವಾಗಿದ್ದವು.

೧೫. ಆ ಮನೆಯ ಮುಂಭಾಗದಲ್ಲಿ ರತ್ನದ ಬಾಗಿಲುಗಳಿಂದ ಪರಿಶೋಭಿತವಾದ ಸಿಂಹದ್ವಾರವು ಮನೋಹರವಾಗಿದ್ದುದನ್ನು ಆ ಪರಶುರಾಮನು ನೋಡಿದನು.

೧೬. ಮರಕತರತ್ನಗಳಿಂದ ನಿರ್ಮಿತವಾದ ಆ ಗೃಹದ ಮುಂಭಾಗದಲ್ಲಿಯೂ ಒಳಭಾಗದಲ್ಲಿಯೂ ಪದ್ಮರಾಗ ರತ್ನಗಳಿಂದ ರಚಿತವಾದ ಜಗಲಿಗಳು ಸುಂದರವಾಗಿದ್ದವು.

೧೭. ವಿಚಿತ್ರಚಿತ್ರಗಳಿಂದ ಚಿತ್ರಿತವಾಗಿ ಮನೋಹರವಾಗಿದ್ದ ಆ ಮಂದಿರದ ದ್ವಾರದಲ್ಲಿ ಭಯಂಕರರೂಪಿಗಳಾದ ಇಬ್ಬರು ದ್ವಾರಪಾಲಕರಿದ್ದರು.

೧೮. ಮಹಾಪರಾಕ್ರಮಶಾಲಿಗಳಾದ ಅವರು ವಿಕಾರವಾದ ಮುಖ ಮತ್ತು ದಂತಗಳಿಂದಲೂ ಕೆಂಪಾದ ಕಣ್ಣುಗಳಿಂದಲೂ, ಸುಟ್ಟ ಬೆಟ್ಟದಂತೆ ಕಪ್ಪಾದ ಶರೀರದಿಂದಲೂ ಅತಿ ಭಯಂಕರರಾಗಿದ್ದರು.

ವಿಭೂತಿ ಭೂಷಿತಾಂಗೌ ಚ ವ್ಯಾಘ್ರಚರ್ಮಾಂಬರೌ ವರೌ ।
ಪಿಂಗಲಾಕ್ಷೌ ವಿಶಾಲಾಕ್ಷೌ ಜಟಿಲೌ ಚ ತ್ರಿಲೋಚನೌ ॥ ೧೯ ॥

ತ್ರಿಶೂಲಪಟ್ಟಿಶಧರೌ ಜ್ವಲಂತೌ ಬ್ರಹ್ಮತೇಜಸಾ ।
ತೌ ದೃಷ್ಟ್ವಾ ಮನಸಾ ಭೀತಸ್ತ್ರಸ್ತಃ ಕಿಂಚಿದುವಾಚ ಹ ॥ ೨೦ ॥

ವಿನಯೇನ ವಿನೀತಶ್ಚ ದುರ್ವಿನೀತೌ ಮಹಾಬಲೌ ।
ಆತ್ಮನಃ ಸರ್ವವೃತ್ತಾಂತಂ ಕಥಯಾಮಾಸ ತತ್ಪುರಃ ॥ ೨೧ ॥

ವಿಪ್ರಸ್ಯ ವಚನಂ ಶ್ರುತ್ವಾ ಕೃಪಾಯುಕ್ತೌ ಬಭೂವತುಃ ।
ಗೃಹೀತ್ವಾಜ್ಞಾಂ ಚರದ್ವಾರಾ ಶಂಕರಸ್ಯ ಮಹಾತ್ಮನಃ ॥ ೨೨ ॥

ಪ್ರವೇಷ್ಟುಮಾಜ್ಞಾಂ ದದತುರೀಶ್ವರಾನುಚರೌ ವರೌ ।
ಭೃಗುಸ್ತದಾಜ್ಞಾಮಾದಾಯ ಪ್ರವಿವೇಶ ಹರಿಂ ಸ್ಮರನ್ ॥ ೨೩ ॥

---

೧೯. ಮೈಗೆಲ್ಲ ಬೂದಿಯನ್ನು ಬಳಿದುಕೊಂಡು ವ್ಯಾಘ್ರಚರ್ಮವನ್ನುಟ್ಟು ಪಿಂಗಲವರ್ಣವಾದ ಮೂರು ಕಣ್ಣುಗಳಿಂದಲೂ, ಹೊಂಬಣ್ಣದ ಜಟೆಗಳಿಂದಲೂ ಆ ದ್ವಾರಪಾಲಕರು ಶೋಭಿಸುತ್ತಿದ್ದರು.

೨೦. ತ್ರಿಶೂಲ, ಪಟ್ಟಿಶ ಮುಂತಾದ ಆಯುಧಗಳನ್ನು ಧರಿಸಿ ಬ್ರಹ್ಮತೇಜಸ್ಸಿನಿಂದ ಪ್ರಜ್ವಲಿಸುತ್ತಿರುವ ಅವರನ್ನು ನೋಡಿ ಪರಶುರಾಮನು ಭಯದಿಂದ ಇಂತೆಂದನು.

೨೧. ದುರ್ವಿನೀತರೂ, ಮಹಾಪರಾಕ್ರಮಶಾಲಿಗಳೂ ಆದ ಅವರ ಮುಂದೆ ವಿನಯದಿಂದ ತಲೆಬಾಗಿ ಪರಶುರಾಮನು ತಾನು ಬಂದ ಸಮಾಚಾರವನ್ನು ವಿಜ್ಞಾಪಿಸಿದನು.

೨೨. ಬ್ರಾಹ್ಮಣನ ದೀನನುಡಿಯನ್ನು ಕೇಳಿ ಆ ದ್ವಾರಪಾಲಕರು ದಯೆ ತೋರಿ, ದೂತರನ್ನು ಕಳುಹಿ, ಶಂಕರನ ಅಪ್ಪಣೆಯನ್ನು ತೆಗೆದುಕೊಂಡರು.

೨೩. ಅನಂತರ ಈಶ್ವರನ ಆ ಸೇವಕರು ಒಳಕ್ಕೆ ಪ್ರವೇಶಮಾಡಲು ಅವನಿಗೆ ಅಪ್ಪಣೆಯನ್ನಿತ್ತರು. ಪರಶುರಾಮನು ಅವರ ಅಪ್ಪಣೆ ಪಡೆದು ಶ್ರೀಹರಿಯನ್ನು ಸ್ಮರಿಸುತ್ತ ಒಳಕ್ಕೆ ಪ್ರವೇಶಿಸಿದನು.

ಪ್ರತ್ಯೇಕಂ ಷೋಡಶದ್ವಾರೋ ದದರ್ಶ ಸುಮನೋಹರಾಃ ।
ದ್ವಾರಪಾಲೈರ್ನಿಯುಕ್ತಾಶ್ಚ ನಾನಾಚಿತ್ರವಿಚಿತ್ರಿತಾಃ ॥ ೨೪ ॥

ದೃಷ್ಟ್ವಾ ತಾ ಮಹದಾಶ್ಚರ್ಯಾದಪಶ್ಯಚ್ಛೂಲಿನಃ ಸಭಾಂ ।
ನಾನಾಸಿದ್ಧಗಣಾಕೀರ್ಣಾಂ ಮಹರ್ಷಿಗಣಸೇವಿತಾಂ ॥ ೨೫ ॥

ಪಾರಿಜಾತ ಸುಗಂಧಾಢ್ಯವಾಯುನಾ ಸುರಭೀಕೃತಾಂ ।
ದದರ್ಶ ತತ್ರ ದೇವೇಶಂ ಶಂಕರಂ ಚಂದ್ರಶೇಖರಂ ॥ ೨೬ ॥

ತ್ರಿಶೂಲಪಟ್ಟಿಶಧರಂ ವ್ಯಾಘ್ರಚರ್ಮಾಂಬರಂ ಪರಂ ।
ವಿಭೂತಿ ಭೂಷಿತಾಂಗಂ ತಂ ನಾಗಯಜ್ಞೋಪವೀತಿನಂ ।
ರತ್ನಸಿಂಹಾಸನಸ್ಥಂ ಚ ರತ್ನಭೂಷಣಭೂಷಿತಂ ॥ ೨೭ ॥

---

೨೪. ಅಲ್ಲಿ ವಿಚಿತ್ರಚಿತ್ರಗಳಿಂದ ಮನೋಹರವೂ, ದ್ವಾರಪಾಲಕರಿಂದ ಪರಿವೃತವೂ ಆದ ಹದಿನಾರು ಬಾಗಿಲುಗಳನ್ನೂ ಒಂದೊಂದಾಗಿ ನೋಡಿಕೊಂಡು ಹೋದನು.

೨೫. ಆ ಅದ್ಭುತಗಳನ್ನೆಲ್ಲ ನೋಡುತ್ತ ಮುಂದೆ ಹೋಗಿ, ಅನೇಕ ಸಿದ್ಧರಿಂದಲೂ, ಮಹರ್ಷಿಗಳಿಂದಲೂ ಪರಿಪೂರ್ಣವಾದ ಶಂಕರನ ಸಭೆಯನ್ನು ನೋಡಿದನು.

೨೬. ಪಾರಿಜಾತದ ಪರಿಮಳವನ್ನು ಪಸರಿಸುತ್ತಿರುವ ವಾಯುವಿನಿಂದ, ಸುವಾಸಿತವಾದ ಆ ಸಭಾಮಧ್ಯದಲ್ಲಿ ದೇವದೇವನೂ, ಚಂದ್ರಶೇಖರನೂ ಆದ ಶಂಕರನನ್ನು ಪರಶುರಾಮನು ನೋಡಿದನು.

೨೭. ತ್ರಿಶೂಲ, ಪಟ್ಟಿಶ ಮುಂತಾದ ಆಯುಧಗಳನ್ನು ಧರಿಸಿ, ವ್ಯಾಘ್ರಚರ್ಮವನ್ನುಟ್ಟು, ಮೈಗೆಲ್ಲ ಭಸ್ಮವನ್ನು ಲೇಪಿಸಿಕೊಂಡು ನಾಗಯಜ್ಞೋಪವೀತವನ್ನು ತೊಟ್ಟು, ರತ್ನಭೂಷಣಗಳಿಂದಲಂಕೃತನಾಗಿದ್ದ ಆ ಶಂಕರನು ರತ್ನಸಿಂಹಾಸನದಲ್ಲಿ ಮಂಡಿಸಿದ್ದನು.

ಮಹಾಶಿವಂ ಶಿವಕರಂ ಶಿವಬೀಜಂ ಶಿವಾಶ್ರಯಂ ।
ಆತ್ಮಾರಾಮಂ ಪೂರ್ಣಕಾಮಂ ಸೂರ್ಯಕೋಟಿಸಮಪ್ರಭಂ ॥ ೨೮ ॥

ಈಷದ್ಧಾಸ್ಯಂ ಪ್ರಸನ್ನಾಸ್ಯಂ ಭಕ್ತಾನುಗ್ರಹಕಾತರಂ ।
ಶಶ್ವಜ್ಜ್ಯೋತಿಸ್ಸ್ವರೂಪಂ ಚ ಲೋಕಾನುಗ್ರಹವಿಗ್ರಹಂ ॥ ೨೯ ॥

ಧೃತವಂತಂ ಜಟಾಜಾಲಂ ದಕ್ಷಕನ್ಯಾಸಮನ್ವಿತಂ ।
ತಪಸಾಂ ಫಲದಾತಾರಂ ದಾತಾರಂ ಸರ್ವಸಂಪದಾಂ ॥ ೩೦ ॥

ಶುದ್ಧಸ್ಫಟಿಕಸಂಕಾಶಂ ಪಂಚವಕ್ತ್ರಂ ತ್ರಿಲೋಚನಂ ।
ಗುಹ್ಯಂ ಬ್ರಹ್ಮ ಪ್ರವೋಚಂತಂ ಶಿಷ್ಯೇಭ್ಯಸ್ತತ್ತ್ವಮುದ್ರಯಾ ॥ ೩೧ ॥

ಸ್ತೂಯಮಾನಂ ಚ ಯೋಗೀಂದ್ರೈಃ ಸಿದ್ಧೇಂದ್ರೈಃ ಪರಿಸೇವಿತಂ ।
ಪಾರ್ಷದಪ್ರವರೈಸ್ತತ್ರ ಸೇವಿತಂ ಶ್ವೇತಚಾಮರೈಃ ॥ ೩೨ ॥

---

೨೮. ಮಂಗಳಕರನೂ, ಮಂಗಳಕ್ಕೆ ಬೀಜನೂ, ಮಂಗಳಾಶ್ರಯನೂ, ಆತ್ಮಾರಾಮನೂ, ಪರಿಪೂರ್ಣಕಾಮನೂ, ಕೋಟಿಸೂರ್ಯಸಮಪ್ರಭನೂ ಆದ ಆ ಮಹೇಶ್ವರನನ್ನು ನೋಡಿದನು

೨೯. ಜ್ಯೋತಿರ್ಮಯನಾದ ಆ ಪರಮೇಶ್ವರನು ಭಕ್ತಾನುಗ್ರಹಕ್ಕಾಗಿ ವಿಗ್ರಹವನ್ನು ಧರಿಸಿ ಸ್ಮಿತವದನದಿಂದ ಪ್ರಸನ್ನನಾಗಿ ಕುಳಿತಿದ್ದನು.

೩೦. ತಪಃಫಲದಾತೃವೂ, ಸರ್ವಸಂಪತ್ಪ್ರದಾತೃವೂ ಆದ ಆ ಪರಶಿವನು ತಲೆಯ ಮೇಲಿರುವ ಪಿಂಗಳವರ್ಣವಾದ ಜಟಾಭಾರದಿಂದಲೂ, ವಾಮಭಾಗದಲ್ಲಿ ಕುಳಿತಿರುವ ದಕ್ಷಕನ್ಯೆಯಾದ ಪಾರ್ವತಿಯಿಂದಲೂ ಕೂಡಿ ಶೋಭಿಸುತ್ತಿದ್ದನು.

೩೧. ಸ್ಫಟಿಕಮಣಿಯಂತೆ ನಿರ್ಮಲನೂ, ಪಂಚಮುಖನೂ, ತ್ರಿನಯನನೂ ಆದ ಆ ಶಂಕರನು ಹಸ್ತದಲ್ಲಿ ತತ್ತ್ವಮುದ್ರೆಯನ್ನು ಹಿಡಿದು ಶಿಷ್ಯರಿಗೆಲ್ಲ ಬ್ರಹ್ಮತತ್ತ್ವವನ್ನು ಬೋಧಿಸುತ್ತಿದ್ದನು.

೩೨. ಆ ಪರಶಿವನನ್ನು ಸಿದ್ಧರೂ, ಯೋಗಿಗಳೂ, ಹೊಗಳಿ ಸೇವಿಸುತ್ತಿದ್ದರು. ಪಾರ್ಷದಶ್ರೇಷ್ಠರು ಉಭಯಪಾರ್ಶ್ವದಲ್ಲಿಯೂ ಕುಳಿತು ಬಿಳಿದಾದ ಚಾಮರಗಳನ್ನು ಬೀಸುತ್ತಿದ್ದರು.

ಧ್ಯಾಯಮಾನಂ ಪರಂ ಬ್ರಹ್ಮ ಪರಿಪೂರ್ಣತಮಂ ಪರಂ ।
ಸ್ವೇಚ್ಛಾಮಯಂ ಗುಣಾತೀತಂ ಜರಾಮೃತ್ಯುಹರಂ ಪರಂ ॥ ೩೩ ॥

ಜ್ಯೋತೀರೂಪಂ ಚ ಸರ್ವಾದ್ಯಂ ಶ್ರೀಕೃಷ್ಣಂ ಪ್ರಕೃತೇಃ ಪರಂ ।
ಧ್ಯಾಯಂತಂ ಪರಮಾನಂದಂ ಪುಲಕಾಂಚಿತವಿಗ್ರಹಂ ।
ಸುಸ್ವರಂ ಸಾಶ್ರುನೇತ್ರಂ ತಮುದ್ಗಾಯಂತಂ ಗುಣಾರ್ಣವಂ ॥ ೩೪ ॥

ಭೂತೇಂದ್ರೈರ್ವೈರ್ ರುದ್ರಗಣೈಃ ಕ್ಷೇತ್ರಸಾಲೈಶ್ಚ ವೇಷ್ಟಿತಂ ।
ಮೂರ್ಧ್ನಾ ನನಾಮ ಪರಶುರಾಮೋ ದೃಷ್ಟ್ವಾ ತಮಾದರಾತ್ ॥ ೩೫ ॥

ತದ್ವಾಮೇ ಕಾರ್ತಿಕೇಯಂ ಚ ದಕ್ಷಿಣೇ ಚ ಗಣೇಶ್ವರಂ ।
ನಂದೀಶ್ವರಂ ಮಹಾಕಾಲಂ ವೀರಭದ್ರಂ ಚ ತತ್ಪುರಃ ।
ಅಂಕೇ ದದರ್ಶ ಕಾಂತಾಂ ತಾಂ ಗೌರೀಂ ಶೈಲೇಂದ್ರಕನ್ಯಕಾಂ ॥ ೩೬ ॥

---

೩೩. ಪರಿಪೂರ್ಣಸ್ವರೂಪನೂ, ಸ್ವೇಚ್ಛಾಮಯನೂ, ತ್ರಿಗುಣಾತೀತನೂ, ಜನ್ಮಜರಾಮರಣಪರಿಹಾರಕನೂ ಆದ ಪರಬ್ರಹ್ಮನನ್ನು ಆ ಪರಶಿವನು ಧ್ಯಾನಿಸುತ್ತಿದ್ದನು.

೩೪. ಜ್ಯೋತಿರ್ಮಯನೂ, ಸರ್ವಕಾರಣನೂ, ಪ್ರಕೃತಿಗಿಂತ ಶ್ರೇಷ್ಠನೂ, ಪರಮಾನಂದಸ್ವರೂಪನೂ ಆದ ಪರಮಾತ್ಮನ ಗುಣಗಣಗಳನ್ನು ಶಿವನು ರೋಮಾಂಚಿತಶರೀರನಾಗಿ ಕಣ್ಣುಗಳಲ್ಲಿ ಆನಂದಬಾಷ್ಪವನ್ನು ಸುರಿಸುತ್ತ ಸುಸ್ವರದಿಂದ ಹಾಡುತ್ತಿದ್ದನು.

೩೫. ಭೂತಗಣಗಳಿಂದಲೂ, ರುದ್ರ ಮತ್ತು ಕ್ಷೇತ್ರಪಾಲರಿಂದಲೂ ಪರಿವೃತನಾದ ಆ ಪರಶಿವನನ್ನು ನೋಡಿ ಆ ಪರಶುರಾಮನು ಅತ್ಯಾದರದಿಂದ ತಲೆಬಾಗಿ ನಮಸ್ಕರಿಸಿದನು.

೩೬. ಪರಶಿವನ ಎಡಭಾಗದಲ್ಲಿ ಷಣ್ಮುಖನನ್ನೂ, ಬಲಭಾಗದಲ್ಲಿ ಗಣಪತಿಯನ್ನೂ, ಮುಂದುಗಡೆ ನಂದಿ, ಮಹಾಕಾಳ ಮತ್ತು ವೀರಭದ್ರರನ್ನೂ, ತೊಡೆಯ ಮೇಲೆ ಪರ್ವತರಾಜಪುತ್ರಿಯಾದ ಪಾರ್ವತಿಯನ್ನೂ ಪರಶುರಾಮನು ನೋಡಿದನು.

ನನಾಮ ಸರ್ವಾನ್ಮೂರ್ಧ್ನಾ ಚ ಭಕ್ತ್ಯಾ ಚ ಪರಯಾ ಮುದಾ |
ದೃಷ್ಟ್ವಾ ಹರಂ ಪರಂ ತೋಷಾತ್ಸ್ತೋತುಂ ತಮುಪಚಕ್ರಮೇ || ೩೭ ||

ಸಗದ್ಗದಪದಂ ದೀನಸ್ಸಾಶ್ರುನೇತ್ರೋಽತಿಕಾತರಃ |
ಕೃತಾಂಜಲಿಪುಟಃ ಶಾಂತಃ ಶೋಕಾರ್ತಃ ಶೋಕನಾಶನಂ || ೩೮ ||

|| ಪರಶುರಾಮ ಉವಾಚ ||

ಈಶ ತ್ವಾಂ ಸ್ತೋತುಮಿಚ್ಛಾಮಿ ಸರ್ವಥಾ ಸ್ತೋತುಮಕ್ಷಮಃ |
ಅಕ್ಷರಾಕ್ಷಯಬೀಜಂ ಚ ಕಿಂ ವಾ ಸ್ತೌಮಿ ನಿರೀಹಕಂ || ೩೯ ||

ನ ಯೋಜನಾಂ ಕರ್ತುಮೀಶೋ ದೇವೇಶಂ ಸ್ತೌಮಿ ಮೂಢಧೀಃ |
ವೇದಾ ನ ಶಕ್ತಾ ಯಂ ಸ್ತೋತುಂ ಕಸ್ತ್ವಾಂ ಸ್ತೋತುಮಿಹೇಶ್ವರಃ || ೪೦ ||

ವಾಗ್ಬುದ್ಧಿಮನಸಾಂ ದೂರಂ ಸಾರಾತ್ಸಾರಂ ಪರಾತ್ಪರಂ |
ಜ್ಞಾನಮಾತ್ರೇಣ ಸಾಧ್ಯಂ ಚ ಸಿದ್ಧಂ ಸಿದ್ಧೈರ್ನಿಷೇವಿತಂ || ೪೧ ||

---

೩೭. ಎಲ್ಲರಿಗೂ ಪರಮ ಭಕ್ತಿಯಿಂದ ತಲೆಬಾಗಿ ನಮಿಸಿ ಪರಮಸಂತೋಷದಿಂದ ಪರಶಿವನನ್ನು ಸ್ತುತಿಸಲಾರಂಭಿಸಿದನು.

೩೮. ಶೋಕಪೀಡಿತನಾದ ಪರಶುರಾಮನು ಶೋಕವಿನಾಶಕನಾದ ಶಿವನನ್ನು ಗದ್ಗದಕಂಠದಿಂದ ಸ್ತುತಿಸುತ್ತ ಆನಂದಾಶ್ರುಪೂರಿತಲೋಚನನಾಗಿ ಕೈಮುಗಿದುಕೊಂಡು ನಿಂತನು.

೩೯. ಪರಶುರಾಮ :—ಎಲೈ ಈಶ್ವರನೇ, ನಿನ್ನ ಗುಣಗಣಗಳನ್ನು ಹೊಗಳಲಸಮರ್ಥನಾದ ನಾನೂ ಕೂಡ ನಿನ್ನನ್ನು ಹೊಗಳಬಯಸುತ್ತಿದ್ದೇನೆ. ಇಚ್ಛಾರಹಿತನೂ, ನಾಶರಹಿತನೂ ಆದ ನಿನ್ನನ್ನು ಎಂತು ಹೊಗಳಲಿ!

೪೦. ಪದಗಳನ್ನೇ ಜೋಡಿಸಲಶಕ್ತನಾದ ನಾನು ದೇವದೇವನಾದ ನಿನ್ನನ್ನು ಸ್ತುತಿಸುವೆನೆಂಬುದು ಮೂಢತನವಲ್ಲವೇ? ಚತುರ್ವೇದಗಳೇ ನಿನ್ನನ್ನು ಸ್ತುತಿಸಲಾಗದಿರುವಾಗ ಉಳಿದವರು ಯಾರು ತಾನೇ ಸ್ತುತಿಸಬಲ್ಲರು?

೪೧. ಸಾರಾತ್ಸಾರನೂ, ಪರಾತ್ಪರನೂ ಸಿದ್ಧಸೇವಿತನೂ ಆದ ನೀನು ವಾಙ್ಮನೋಬುದ್ಧಿಗಳಿಗೆ ಅಗೋಚರನಾಗಿ ಜ್ಞಾನಮಾತ್ರಗಮ್ಯನಾಗಿದ್ದೀಯೆ.

ಯಮಾಕಾಶಮಿವಾದ್ಯಂತಮಧ್ಯಹೀನಂ ತಥಾಽವ್ಯಯಂ ।
ವಿಶ್ವತಂತ್ರಮತಂತ್ರಂ ಚ ಸ್ವತಂತ್ರಂ ತಂತ್ರಬೀಜಕಂ ॥ ೪೨ ॥

ಧ್ಯಾನಾಸಾಧ್ಯಂ ದುರಾರಾಧ್ಯಮತಿಸಾಧ್ಯಂ ಕೃಪಾನಿಧಿಂ ।
ತ್ರಾಹಿ ಮಾಂ ಕರುಣಾಸಿಂಧೋ ದೀನಬಂಧೋಽತಿದೀನಕಂ ॥ ೪೩ ॥

ಅದ್ಯ ಮೇ ಸಫಲಂ ಜನ್ಮ ಜೀವಿತಂ ಚ ಸುಜೀವಿತಂ ।
ಸ್ವಪ್ನೇಽಪ್ಯದೃಷ್ಟಂ ಭಕ್ತೈಶ್ಚಾಧುನಾ ಪಶ್ಯಾಮಿ ಚಕ್ಷುಷಾ ॥ ೪೪ ॥

ಶಕ್ರಾದಯಃ ಸುರಗಣಾಃ ಕಲಯಾ ಯಸ್ಯ ಸಂಭವಾಃ ।
ಚರಾಚರಾಃ ಕಲಾಂಶೇನ ತಂ ನಮಾಮಿ ಮಹೇಶ್ವರಂ ॥ ೪೫ ॥

ಸ್ತ್ರೀರೂಪಂ ಕ್ಲೀಬರೂಪಂ ಚ ಪೌರುಷಂ ಚ ಬಿಭರ್ತಿ ಯಃ ।
ಸರ್ವಾಧಾರಂ ಸರ್ವರೂಪಂ ತಂ ನಮಾಮಿ ಮಹೇಶ್ವರಂ ॥ ೪೬ ॥

---

೪೨. ಆಕಾಶದಂತೆ ಆದಿಮಧ್ಯಾಂತರಹಿತನೂ, ಅವ್ಯಯನೂ, ವಿಶ್ವರಕ್ಷಕನೂ, ಸ್ವತಂತ್ರನೂ ಆದ ನಿನ್ನನ್ನು ಯಾರು ಸ್ತುತಿಸಬಲ್ಲರು?

೪೩. ಧ್ಯಾನಕ್ಕೆ ಸಿಲುಕದವನೂ, ದುರಾರಾಧ್ಯನೂ, ಜ್ಞಾನಗಮ್ಯನೂ, ದೀನಬಂಧುವೂ ಆದ ಎಲೈ ಶಂಕರನೇ, ಅತ್ಯಂತ ದೀನನಾದ ನನ್ನಲ್ಲಿ ಕರುಣೆದೋರಿ ಕಾಪಾಡು.

೪೪. ಭಕ್ತರು ಸ್ವಪ್ನದಲ್ಲಿಯೂ ನೋಡಲಾಗದ ನಿನ್ನನ್ನು ನಾನು ಚರ್ಮ ಚಕ್ಷುಸ್ಸಿನಿಂದಲೇ ನೋಡುತ್ತಿರುವೆನು. ಇಂದಿಗೆ ನನ್ನ ಜನ್ಮವು ಸಫಲವಾಯಿತು. ಜೀವಿತವು ಸಾರ್ಥಕವಾಯಿತು.

೪೫. ಯಾರ ಕಲೆಯಿಂದ ಇಂದ್ರಾದಿ ದೇವತೆಗಳವತಾರವಾಯಿತೋ, ಚರಾಚರಾತ್ಮಕವಾದ ಜೀವಿಗಳು ಯಾರ ಕಲಾಂಶದಿಂದ ಸಂಭವಿಸಿದರೋ ಆ ಮಹೇಶ್ವರನಿಗೆ ನಮಿಸುವೆನು.

೪೬. ಯಾರು ಸ್ತ್ರೀಪುಂನಪುಂಸಕರೂಪಗಳನ್ನು ಧರಿಸಿದ್ದರೂ ವಸ್ತುತಃ ಅರೂಪನೋ, ಸರ್ವರೂಪನೂ, ಸರ್ವಾಧಾರನೂ ಆದ ಆ ಮಹೇಶ್ವರನಿಗೆ ವಂದಿಸುವೆನು.

ಯಂ ಭಾಸ್ಕರಸ್ವರೂಪಂ ಚ ಶಶಿರೂಪಂ ಹುತಾಶನಂ ।
ಜಲರೂಪಂ ವಾಯುರೂಪಂ ತಂ ನಮಾಮಿ ಮಹೇಶ್ವರಂ ॥ ೪೭ ॥

ಅನಂತವಿಶ್ವಸೃಷ್ಟೀನಾಂ ಸಂಹರ್ತಾರಂ ಭಯಂಕರಂ ।
ಕ್ಷಣೇನ ಲೀಲಾಮಾತ್ರೇಣ ತಂ ನಮಾಮಿ ಮಹೇಶ್ವರಂ ॥ ೪೮ ॥

ಯಃ ಕಾಲಃ ಕಾಲಕಾಲಶ್ಚ ಕಲಿರ್ಬೀಜಂ ಚ ಕಾಲಜಃ ।
ಅಜಃ ಪ್ರಜಶ್ಚ ಯಃ ಸರ್ವಸ್ತಂ ನಮಾಮಿ ಮಹೇಶ್ವರಂ ॥ ೪೯ ॥

ಇತ್ಯೇವಮುಕ್ತ್ವಾ ಸ ಭೃಗುಃ ಪಪಾತ ಚರಣಾಂಬುಜೇ ।
ಆಶಿಷಂ ಚ ದದೌ ತಸ್ಮೈ ಸುಪ್ರಸನ್ನೋ ಬಭೂವ ಸಃ ॥ ೫೦ ॥

---

೪೭. ಯಾರು ಸೂರ್ಯ, ಚಂದ್ರ, ಅಗ್ನಿ, ಜಲ, ವಾಯು ಮುಂತಾದ ರೂಪಗಳಿಂದ ಅಷ್ಟಮೂರ್ತಿಯೆನಿಸಿಕೊಂಡಿರುವನೋ, ಆ ಮಹೇಶ್ವರನಿಗೆ ನಮಿಸುವೆನು.

೪೮. ಕಾಲಾಗ್ನಿರುದ್ರಸ್ವರೂಪನಾದ ಯಾರು ಕ್ಷಣಮಾತ್ರದಲ್ಲಿ ಲೀಲಾಜಾಲವಾಗಿ ನಿಖಿಲ ಪ್ರಪಂಚಸೃಷ್ಟಿಯನ್ನೂ ಸಂಹರಿಸಬಲ್ಲನೋ, ಆ ಮಹೇಶ್ವರನನ್ನು ಭಕ್ತಿಯಿಂದ ವಂದಿಸುವೆನು.

೪೯. ಕಾಲಸ್ವರೂಪನೂ, ಕಾಲಾಂತಕನೂ, ಕಲಿಬೀಜನೂ, ಜನ್ಮರಹಿತನೂ ಆದ ಯಾವನು ಎಲ್ಲ ಸೃಷ್ಟಿಗೂ ಆದಿಕಾರಣನೋ, ಆ ಪರಮೇಶ್ವರನನ್ನು ನಮಿಸುವೆನು.

೫೦. ಹೀಗೆ ಹೇಳುತ್ತ ಪರಶುರಾಮನು ಶಿವನ ಚರಣಕಮಲಗಳ ಮೇಲೆ ಬಿದ್ದನು. ಆಗ ಪ್ರಸನ್ನನಾದ ಮಹೇಶ್ವರನು ಅವನಿಗೆ ಅನಂತ ಆಶೀರ್ವಾದಗಳನ್ನು ಮಾಡಿದನು.

ಜಾಮದಗ್ನ್ಯಕೃತಂ ಸ್ತೋತ್ರಂ ಯಃ ಪಠೇದ್ಭಕ್ತಿಸಂಯುತಃ ।
ಸರ್ವಪಾಪವಿನಿರ್ಮುಕ್ತಃ ಶಿವಲೋಕಂ ಸ ಗಚ್ಛತಿ ॥ ೫೧ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ತೃತೀಯೇ ಗಣಪತಿಖಂಡೇ ನಾರದನಾರಾಯಣಸಂವಾದೇ ಪರಶುರಾಮಸ್ಯ ಕೈಲಾಸಗಮನಂ ನಾಮ ಏಕೋನತ್ರಿಂಶತ್ತಮೋಽಧ್ಯಾಯಃ

---

೫೧. ಪರಶುರಾಮಕೃತವಾದ ಈ ಸ್ತೋತ್ರವನ್ನು ಯಾರು ಭಕ್ತಿಪೂರ್ವಕವಾಗಿ ಪಠಿಸುವರೋ, ಅವರು ಸಕಲ ಪಾಪವಿಮುಕ್ತರಾಗಿ ಶಿವಲೋಕಕ್ಕೆ ಹೋಗುವರು.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಗಣಪತಿಖಂಡದಲ್ಲಿ ಪರಶುರಾಮನು ಕೈಲಾಸದಲ್ಲಿ ಶಿವದರ್ಶನ ಮಾಡಿದ್ದನ್ನು ತಿಳಿಸುವ ಇಪ್ಪತ್ತೊಂಭತ್ತನೆಯ ಅಧ್ಯಾಯವು ಮುಗಿದುದು.

ಇಪ್ಪತ್ತೊಂಭತ್ತನೆಯ ಅಧ್ಯಾಯದ ಸಾರಾಂಶ

ಬ್ರಹ್ಮನ ಅಪ್ಪಣೆಯನ್ನು ಪಡೆದು ಪರಶುರಾಮನು ಶಿವಲೋಕಕ್ಕೆ ಹೋಗಿ, ಅಲ್ಲಿಯ ಸೌಂದರ್ಯವನ್ನು ನೋಡಿ ಆಶ್ಚರಿಗೊಂಡನು. ದ್ವಾರಪಾಲಕರ ಅನುಜ್ಞೆಯನ್ನು ಪಡೆದು, ಶಂಕರನ ದಿವ್ಯಮಂದಿರವನ್ನು ಹೊಕ್ಕು, ಸಭಾಮಂಟಪದ ರತ್ನ ಸಿಂಹಾಸನದಲ್ಲಿ ಕುಳಿತಿರುವ ಪರಿಪೂರ್ಣಸ್ವರೂಪನಾದ ಶಂಕರನನ್ನು ಕಂಡು ನೆಲ ಮುಟ್ಟಿ ನಮಸ್ಕರಿಸಿದ್ದನು. ಅನಂತರ ಶಿವನ ಗುಣಗಣಗಳನ್ನು ಭಕ್ತಿಪೂರ್ವಕವಾಗಿ ವರ್ಣಿಸಿ ಸ್ತುತಿಸಲು, ಶಿವನು ಪ್ರಸನ್ನನಾಗಿ ಅವನಿಗೆ ಮಂಗಳಾಶೀರ್ವಾದ ಮಾಡಿದನು.

--॥ ಓಂ ॥--

--॥ ಶ್ರೀ ಗಣೇಶಾಯ ನಮಃ ॥--

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಗಣಪತಿಖಂಡೇ

॥ ತ್ರಿಂಶತ್ತಮೋಽಧ್ಯಾಯಃ ॥

॥ ಶಂಕರ ಉವಾಚ ॥

ಕಸ್ತ್ವಂ ವಟೋ ಕಸ್ಯ ಪುತ್ರಃ ಕ್ವ ವಾಸಃ ಸ್ತವನಂ ಕಥಂ ।
ಕಿಂ ವಾ ತೇಽಹಂ ಕರಿಷ್ಯಾಮಿ ವಾಂಛಿತಂ ವದ ಸಾಂಪ್ರತಂ ॥ ೧ ॥

॥ ಪಾರ್ವತ್ಯುವಾಚ ॥

ಶೋಕಾಕುಲಂ ತ್ವಾಂ ಪಶ್ಯಾಮಿ ವಿಮನಸ್ಕಂ ಸುವಿಸ್ಮಿತಂ ।
ವಯಸಾತಿಶಿಶುಂ ಶಾಂತಂ ಗುಣೇನ ಗುಣಿನಾಂ ವರಂ ॥ ೨ ॥

ಮೂವತ್ತನೆಯ ಅಧ್ಯಾಯವು

೧. ಶಂಕರ:—ಎಲೈ ಬ್ರಹ್ಮಚಾರಿಯೇ, ನೀನಾರು ? ಯಾರ ಮಗನು ? ನಿನ್ನ ವಾಸಸ್ಥಾನವಾವುದು ? ನನ್ನನ್ನು ಹೊಗಳಲು ಕಾರಣವೇನು? ನಾನು ಪೂರ್ಣಗೊಳಿಸಬೇಕಾಗಿರುವ ನಿನ್ನ ಇಷ್ಟಾರ್ಥವೇನು? ತಿಳಿಸು.

೨. ಪಾರ್ವತಿ:—ನೀನು ಶೋಕಪೀಡಿತನಾಗಿರುವಂತೆ ತೋರುತ್ತಿದೆ. ವಯಸ್ಸಿನಲ್ಲಿ ಚಿಕ್ಕವನಾದರೂ ಶಾಂತನೂ, ಗುಣವಂತರಲ್ಲಿ ಶ್ರೇಷ್ಠನೂ ಆದ ನಿನಗೆ ಮನಃಕಷಾಯವುಂಟಾಗಿರುವುದು ಅತ್ಯಾಶ್ಚರ್ಯವಾಗಿದೆ.

॥ ಭೃಗುರುವಾಚ ॥

ಜಮದಗ್ನಿಸುತೋಽಹಂ ಚ ಭೃಗುವಂಶಸಮುದ್ಭವಃ ।
ರೇಣುಕಾಂಬಾ ಮೇ ಪರಶುರಾಮೋಽಹಂ ನಾಮತಃ ಪ್ರಭೋ ॥ ೩ ॥

ಕ್ರೀಣೀಹಿ ಮಾಂ ದಯಾಸಿಂಧೋ ವಿದ್ಯಾಪಣ್ಯೇನ ಕಿಂಕರಂ ।
ತ್ವಾಮೀಶ ಶರಣಾಪನ್ನಂ ರಕ್ಷ ಮಾಂ ದೀನವತ್ಸಲ ॥ ೪ ॥

ಮೃಗಯಾಮಾಗತಂ ಭೂಪಂ ಪಿತಾ ಮೇ ಚೋಪವಾಸಿನಂ ।
ಚಕಾರಾತಿಥ್ಯಮಾನೀಯ ಕಪಿಲಾದತ್ತವಸ್ತುನಾ ॥ ೫ ॥

ರಾಜಾ ತಂ ಕಪಿಲಾಲೋಭಾದ್ಘಾತಯಾಮಾಸ ಮಂದಧೀಃ ।
ಕಪಿಲಾ ತಂ ಮೃತಂ ದೃಷ್ಟ್ವಾ ಗೋಲೋಕಂ ಚ ಜಗಾಮ ಸಾ ॥ ೬ ॥

---

೩. ಪರಶುರಾಮ :—ಎಲೈ ಮಹೇಶನೇ, ನಾನು ಭೃಗುವಂಶದಲ್ಲಿ ಹುಟ್ಟಿದ ಜಮದಗ್ನಿಮಹರ್ಷಿಯ ಮಗನು. ರೇಣುಕಾಪುತ್ರನಾದ ನನ್ನನ್ನು ಪರಶುರಾಮನೆಂದು ಕರೆಯುವರು.

೪. ಎಲೈ ದಯಾಸಾಗರನೇ ಜ್ಞಾನವೆಂಬ ಧನವನ್ನು ಕೊಟ್ಟು ಸೇವಕನಾದ ನನ್ನನ್ನು ನಿನ್ನವನನ್ನಾಗಿ ಮಾಡಿಕೋ. ದೀನಬಂಧುವಾದ ನೀನು ಶರಣಾಗತನಾದ ನನ್ನನ್ನು ಕಾಪಾಡು.

೫. ನನ್ನ ತಂದೆಯು, ಬೇಟೆಗಾಗಿ ಬಂದು ಉಪವಾಸದಿಂದಿದ್ದ ಕಾರ್ತವೀರ್ಯಾರ್ಜುನನನ್ನು ಕರೆತಂದು ಕಾಮಧೇನುವು ಕೊಟ್ಟ ಭೋಜನಸಾಮಗ್ರಿಗಳಿಂದ ಭೋಜನಮಾಡಿಸಿ ತೃಪ್ತಿಪಡಿಸಿದನು.

೬. ಮಂದಮತಿಯಾದ ಆ ಕಾರ್ತವೀರ್ಯನಾದರೋ ಕಾಮಧೇನುವಿನಾಸೆಗಾಗಿ ಜಮದಗ್ನಿಯನ್ನು ಸಂಹರಿಸಿದನು. ಜಮದಗ್ನಿಯು ಸತ್ತುಹೋಗಲು ಕಾಮಧೇನುವು ಗೋಲೋಕಕ್ಕೆ ಹೊರಟುಹೋಯಿತು.

ಮಾತಾನುಗಮನಂ ಚಕ್ರೇ ಹ್ಯನಾಥೋಽಹಂ ಚ ಸಾಂಪ್ರತಂ ।
ತ್ವಂ ಮೇ ಪಿತಾ ಶಿವಾ ಮಾತಾ ರಕ್ಷ ಮಾಂ ಪುತ್ರವತ್ಪ್ರಭೋ ॥ ೭ ॥

ಮಯಾ ಕೃತಾ ಪ್ರತಿಜ್ಞಾ ಚ ಶೋಕೇನೈವಾತಿದುಷ್ಕರಾ ।
ತ್ರಿಸ್ಸಪ್ತಕೃತ್ವೋ ನಿರ್ಭೂಪಾಂ ಕರಿಷ್ಯಾಮಿ ಮಹೀಮಿತಿ ॥ ೮ ॥

ಕಾರ್ತವೀರ್ಯಂ ಹನಿಷ್ಯಾಮಿ ಸಮರೇ ತಾತಘಾತಕಂ ।
ಇತ್ಯೇತತ್ಪರಿಪೂರ್ಣಂ ಮೇ ಭಗವಾನ್ಕರ್ತುಮರ್ಹತಿ ॥ ೯ ॥

ಬ್ರಾಹ್ಮಣಸ್ಯ ವಚಃ ಶ್ರುತ್ವಾ ದೃಷ್ಟ್ವಾ ದುರ್ಗಾಮುಖಂ ಹರಃ ।
ಬಭೂವಾನಮ್ರವಕ್ತ್ರಶ್ಚ ಸಾ ಚ ಶುಷ್ಕೋಷ್ಠತಾಲುಕಾ ॥ ೧೦ ॥

---

೭. ನನ್ನ ತಾಯಿಯು ಪತಿಯೊಡನೆ ಸಹಗಮನಮಾಡಿದಳು. ಈಗ ನಾನು ಅನಾಥನಾದೆನು. ಎಲೈ ಪ್ರಭುವೇ, ಈಗ ನೀನೇ ನನಗೆ ತಂದೆ. ಪಾರ್ವತಿಯೇ ತಾಯಿ. ನನ್ನನ್ನು ಪುತ್ರನಂತೆ ಕಾಪಾಡು.

೮. ಮಾತಾಪಿತೃಗಳ ಮರಣದಿಂದ ದುಃಖಿತನಾದ ನಾನು ಇಪ್ಪತ್ತೊಂದು ಸಾರಿ ಭೂಮಿಯನ್ನು ಸುತ್ತಿ ಕ್ಷತ್ರಿಯರಿಲ್ಲದಂತೆ ಮಾಡುವೆನೆಂದು ದುಷ್ಕರವಾದ ಪ್ರತಿಜ್ಞೆಮಾಡಿದೆನು.

೯. ಭಗವಂತನಾದ ನೀನು, ನನ್ನ ತಂದೆಯನ್ನು ಕೊಂದ ಕಾರ್ತವೀರ್ಯ ನನ್ನು ಯುದ್ಧದಲ್ಲಿ ಕೊಲ್ಲಬೇಕೆಂಬ ನನ್ನ ಬಯಕೆಯನ್ನು ಪೂರ್ಣಗೊಳಿಸು.

೧೦. ಬ್ರಹ್ಮಚಾರಿಯ ಮಾತನ್ನು ಕೇಳಿ ಶಂಕರನು ಪಾರ್ವತಿಯ ಮುಖ ವನ್ನು ನೋಡಿ ತಲೆಬಾಗಿ ಕುಳಿತನು. ಪಾರ್ವತಿಗೂ ಕೂಡ ತುಟಿ ಗಂಟಲು ಗಳೊಣಗಿದವು.

॥ ಪಾರ್ವತ್ಯುವಾಚ ॥

ತಪಸ್ವಿನ್ವಿಪ್ರಪುತ್ರಸ್ತ್ವಂ ನಿರ್ಭೂಪಾಂ ಕರ್ತುಮಿಚ್ಛಸಿ ।
ತ್ರಿಸ್ಸಪ್ತಕೃತ್ವಃ ಕೋಪೇನ ಸಾಹಸಸ್ತೇ ಮಹಾನ್ವಟೋ ॥ ೧೧ ॥

ಹಂತುಮಿಚ್ಛಸಿ ನಿಶ್ಯಸ್ತ್ರಃ ಸಹಸ್ರಾರ್ಜುನಮೀಶ್ವರಂ ।
ಭ್ರೂಭಂಗಲೀಲಯಾ ಯಸ್ಯ ರಾವಣಸ್ಯ ಪರಾಜಯಃ ॥ ೧೨ ॥

ತಸ್ಮೈ ಪ್ರದತ್ತಂ ದತ್ತೇನ ಶ್ರೀಹರೇಃ ಕವಚಂ ಬಟೋ ।
ಶಕ್ತಿರವ್ಯರ್ಥರೂಪಾ ಚ ಯಯಾ ತೇ ಹಿಂಸಿತಃ ಪಿತಾ ॥ ೧೩ ॥

ಹರೇರ್ಮಂತ್ರಂ ಸಂಸ್ತವನಂ ಪಠೇದ್ಯಶ್ಚ ದಿವಾನಿಶಂ ।
ಕೋ ವಾ ಶಕ್ನೋತಿ ತಂ ಹಂತುಂ ನ ಪಶ್ಯಾಮಿಹ ಭೂತಲೇ ॥ ೧೪ ॥

---

೧೧. ಪಾರ್ವತಿ:—ಎಲೈ ತಪಸ್ವಿಯೇ ಬ್ರಾಹ್ಮಣಪುತ್ರನಾದ ನೀನು ಭೂಮಿಯಲ್ಲಿ ಕ್ಷತ್ರಿಯರಿಲ್ಲದಂತೆ ಮಾಡಬಯಸುವೆಯಲ್ಲ. ಕೋಪದಿಂದ ನೀನು ಇಪ್ಪತ್ತೊಂದುಸಾರಿ ಭೂಮಿಯನ್ನು ಸುತ್ತುವುದಾಗಿ ಹೇಳಿದುದು ಮಹಾಸಾಹಸದ ಮಾತು.

೧೨. ಯಾವನು ಹುಬ್ಬನ್ನು ಕುಣಿಸುವಷ್ಟು ಲೀಲಾಜಾಲವಾಗಿ ರಾವಣನನ್ನು ಸೋಲಿಸಿದನೋ ಅಂಥ ಸಹಸ್ರಬಾಹುಗಳುಳ್ಳ ಕಾರ್ತವೀರ್ಯನನ್ನು ನಿರಾಯುಧನಾದ ನೀನು ಕೊಲ್ಲಲು ಬಯಸುವೆಯಲ್ಲವೆ.

೧೩. ಎಲೈ ಬ್ರಹ್ಮಚಾರಿಯೇ, ಯಾವ ಶಕ್ತ್ಯಾಯುಧದಿಂದ ನಿಮ್ಮ ತಂದೆಯು ಹತನಾದನೋ ಅಂಥ ಅವ್ಯರ್ಥವಾದ ಶಕ್ತ್ಯಾಯುಧವನ್ನೂ, ಶ್ರೀಹರಿಯ ಅಭೇದ್ಯವಾದ ಕವಚವನ್ನೂ ಆ ರಾಜನಿಗೆ ದತ್ತಾತ್ರೇಯನು ಕೊಟ್ಟಿರುವನು.

೧೪. ಶ್ರೀಹರಿಯ ಮಂತ್ರಸ್ತೋತ್ರಗಳನ್ನು ಹಗಲೂರಾತ್ರಿ ಪಠಿಸುವವನನ್ನು ಸಂಹರಿಸುವ ಶೂರನು ಈ ಭೂಮಂಡಲದಲ್ಲಿಲ್ಲೂ ಕಾಣಿಸುವುದಿಲ್ಲ.

ಅಯೋ ವಿಪ್ರ ಗೃಹಂ ಗಚ್ಛ ಕಿಂ ಕರಿಷ್ಯತಿ ಶಂಕರಃ ।
ಅನ್ಯೇ ಭೂಪಾಶ್ಚ ಮದ್ಭೃತ್ಯಾಃ ಕಾ ಭೀಸ್ತೇಷಾಂ ಮಯಿ ಸ್ಥಿತೇ ॥ ೧೫ ॥

॥ ಕಾಲ್ಯುವಾಚ ॥

ಅಯೋ ವಿಪ್ರ ಬಟೋ ಜಾಲ್ಮ ನಿರ್ಭೂಪಾನ್ಕರ್ತುಮಿಚ್ಛಸಿ ।
ಯಥಾಹಿ ವಾಮನಶ್ಚಂದ್ರಂ ಕರೇಣಾಹರ್ತುಮಿಚ್ಛತಿ ॥ ೧೬ ॥

ಕೃತಯಜ್ಞಾನ್ಮಹಾಪುಣ್ಯಾನ್ಮಹಾಬಲಪರಾಕ್ರಮಾನ್ ।
ದಿಗಂಬರಸಹಾಯೇನ ಮದ್ಭೃತ್ಯಾನ್ಹಂತುಮಿಚ್ಛಸಿ ॥ ೧೭ ॥

ಸ ತಯೋರ್ವಚನಂ ಶ್ರುತ್ವಾ ರುರೋದೋಚ್ಚೈಶ್ಚ ಶೋಕತಃ ।
ಸಹಸಾ ಪುರತಸ್ತೇಷಾಂ ಪ್ರಾಣಾಂಸ್ತ್ಯಕ್ತುಂ ಸಮುದ್ಯತಃ ॥ ೧೮ ॥

---

೧೫. ಎಲೈ ಬ್ರಹ್ಮಚಾರಿಯೇ, ಸುಮ್ಮನೆ ಮನೆಗೆ ಹೋಗು. ಶಂಕರನು ಏನು ಮಾಡಿಯಾನು? ಅನೇಕ ರಾಜರು ನನ್ನ ಸೇವೆಗೈಯ್ಯುತ್ತಿದ್ದಾರೆ. ನಾನಿರುವಾಗ ಅವರಿಗೇತರ ಭಯವು.

೧೬. ಕಾಳಿಕಾದೇವಿ :—ಎಲೈ ದುಷ್ಟನಾದ ಬ್ರಹ್ಮಚಾರಿಯೇ, ಕುಳ್ಳನು ಚಂದ್ರನನ್ನು ಕೈಯಿಂದ ಕಿತ್ತುಕೊಳ್ಳಲು ಬಯಸುವಂತೆ ನೀನು ರಾಜರಿಲ್ಲದಂತೆ ಮಾಡಬಯಸುವೆಯಾ ?

೧೭. ಅನೇಕ ಯಜ್ಞಯಾಗಗಳನ್ನು ಮಾಡಿ, ಪುಣ್ಯವನ್ನು ಗಳಿಸಿ, ಮಹಾಪರಾಕ್ರಮಶಾಲಿಗಳಾಗಿರುವ ನನ್ನ ಸೇವಕರನ್ನು ದಿಗಂಬರನ ಸಹಾಯದಿಂದ ಸಂಹರಿಸಲಿಚ್ಛಿಸುವೆಯಾ ?

೧೮. ದೇವಿಯರಿಬ್ಬರ ಮಾತನ್ನೂ ಕೇಳಿ ಪರಶುರಾಮನು ದುಃಖದಿಂದ ಗಟ್ಟಿಯಾಗಿ ಅಳುತ್ತ, ಇದ್ದಕ್ಕಿದ್ದಂತೆಯೇ ಅವರ ಮುಂದೆ ಪ್ರಾಣತ್ಯಾಗಮಾಡಲು ಸಿದ್ಧನಾದನು.

ವಿಪ್ರಸ್ಯ ರೋದನಂ ಶ್ರುತ್ವಾ ಶಂಕರಃ ಕರುಣಾನಿಧಿಃ ।
ಪಶ್ಯಂದುರ್ಗಾಂ ಚ ಕಾಲೀಂ ಚ ಜ್ಞಾತ್ವಾಶಯಮಥೋ ವಿಭುಃ ॥ ೧೯ ॥

ತಯೋರನುಮತಿಂ ಪ್ರಾಪ್ಯ ಸರ್ವೇಶೋ ಭಕ್ತವತ್ಸಲಃ ।
ಜಮದಗ್ನಿಸುತಂ ಸದ್ಯಃ ಪ್ರವಕ್ತುಮುಪಚಕ್ರಮೇ ॥ ೨೦ ॥

॥ ಶಂಕರ ಉವಾಚ ॥

ಅದ್ಯ ಪ್ರಭೃತಿ ಹೇ ವತ್ಸ ತ್ವಂ ಮೇ ಪುತ್ರಸಮೋ ಮಹಾನ್ ।
ದಾಸ್ಯಾಮಿ ಮಂತ್ರಂ ಗುಹ್ಯಂ ತೇ ತ್ರಿಷು ಲೋಕೇಷು ದುರ್ಲಭಂ ॥ ೨೧ ॥

ಏವಂ ಭೂತಂ ಚ ಕವಚಂ ದಾಸ್ಯಾಮಿ ಪರಮಾದ್ಭುತಂ ।
ಲೀಲಯಾ ಮತ್ಪ್ರಸಾದೇನ ಕಾರ್ತವೀರ್ಯಂ ಹನಿಷ್ಯಸಿ ॥ ೨೨ ॥

ತ್ರಿಸ್ಸಪ್ತಕೃತ್ವೋ ನಿರ್ಭೂಪಾಂ ಕರಿಷ್ಯಸಿ ಮಹೀಂ ದ್ವಿಜ ।
ಜಗತ್ತೇ ಯಶಸಾ ಪೂರ್ಣಂ ಭವಿಷ್ಯತಿ ನ ಸಂಶಯಃ ॥ ೨೩ ॥

---

೧೯. ಬ್ರಹ್ಮಚಾರಿಯು ದೀನಧ್ವನಿಯನ್ನು ಕೇಳಿ ಕರುಣಾನಿಧಿಯಾದ ಶಂಕರನು ದುರ್ಗೆ ಮತ್ತು ಕಾಳಿಯರ ಮನೋಭಿಪ್ರಾಯವನ್ನು ತಿಳಿಯಲು ಅವರ ಮುಖವನ್ನು ನೋಡಿದನು.

೨೦. ಅವರಿಬ್ಬರ ಒಪ್ಪಿಗೆಯನ್ನು ಪಡೆದು ಭಕ್ತವತ್ಸಲನಾದ ಸರ್ವೇಶ್ವರನು, ಜಮದಗ್ನಿ ಪುತ್ರನಾದ ಪರಶುರಾಮನನ್ನು ಕುರಿತಿಂತೆಂದನು.

೨೧. ಶಂಕರ:—ಎಲೈ ವತ್ಸನೇ, ಇಂದಿನಿಂದ ನೀನು ನನಗೆ ಪುತ್ರ ಸದೃಶನು. ತ್ರಿಲೋಕದಲ್ಲಿಯೂ ದುರ್ಲಭವಾದ ಗೋಪ್ಯಮಂತ್ರವನ್ನು ನಿನಗಿಂದು ಉಪದೇಶಿಸುವೆನು.

೨೨. ಅತ್ಯಾಶ್ಚರ್ಯಕರವಾದ ಕವಚವೊಂದನ್ನು ನಿನಗೆ ಅನುಗ್ರಹಿಸುವೆನು. ನನ್ನ ಅನುಗ್ರಹದಿಂದ ಕಾರ್ತವೀರ್ಯನನ್ನು ಲೀಲಾಜಾಲವಾಗಿ ಸಂಹರಿಸುವೆ.

೨೩. ಎಲೈ ಬ್ರಾಹ್ಮಣನೇ, ಭೂಮಿಯನ್ನು ಇಪ್ಪತ್ತೊಂದುಸಾರಿ ಸುಕ್ಷತ್ರಿಯರಾರೂ ಇಲ್ಲದಂತೆ ಮಾಡುವೆ. ನಿನ್ನ ಕೀರ್ತಿಯು ಜಗತ್ತಿನಲ್ಲೆಲ್ಲ ವ್ಯಾಪಿಸುವುದರಲ್ಲಿ ಸಂದೇಹವಿಲ್ಲ.

ಇತ್ಯುಕ್ತ್ವಾ ಶಂಕರಸ್ತಸ್ಮೈ ದದೌ ಮಂತ್ರಂ ಸುದುರ್ಲಭಂ ।
ತ್ರೈಲೋಕ್ಯವಿಜಯಂ ನಾಮ ಕವಚಂ ಪರಮಾದ್ಭುತಂ　　॥ ೨೪ ॥

ಸ್ತವಂ ಪೂಜಾವಿಧಾನಂ ಚ ಪುರಶ್ಚರಣಪೂರ್ವಕಂ ।
ಮಂತ್ರಸಿದ್ಧೇರನುಷ್ಠಾನಂ ಯಥಾವನ್ನಿಯಮಕ್ರಮಂ　　॥ ೨೫ ॥

ಸಿದ್ಧಿಸ್ಥಾನಂ ಕಾಲಸಂಖ್ಯಂ ಕಥಯಾಮಾಸ ನಾರದ ।
ವೇದವೇದಾಂಗಾದಿಕಂ ಚ ಪಾಠಯಾಮಾಸ ತತ್ಕ್ಷಣಂ　　॥ ೨೬ ॥

ನಾಗಪಾಶಂ ಪಾಶುಪತಂ ಬ್ರಹ್ಮಾಸ್ತ್ರಂ ಚ ಸುದುರ್ಲಭಂ ।
ನಾರಾಯಣಾಸ್ತ್ರಮಾಗ್ನೇಯಂ ವಾಯವ್ಯಂ ವಾರುಣಂ ತಥಾ　　॥ ೨೭ ॥

---

೨೪. ಶಂಕರನು ಹೀಗೆ ಹೇಳಿ ಅವನಿಗೆ ದುರ್ಲಭವಾದ ಮಂತ್ರವನ್ನೂ, ತ್ರೈಲೋಕ್ಯವಿಜಯವೆಂಬ ಅತ್ಯದ್ಭುತ ಕವಚವನ್ನೂ ಕೊಟ್ಟನು.

೨೫. ಅಲ್ಲದೆ ಸ್ತೋತ್ರಪೂಜಾವಿಧಿಗಳನ್ನೂ, ಮಂತ್ರಸಿದ್ಧಿಯಾಗಲು ಪುರಶ್ಚರಣಪೂರ್ವಕವಾಗಿ ಅನುಷ್ಠಾನಮಾಡುವ ವಿಧಿಯನ್ನೂ ಉಪದೇಶಿಸಿದನು.

೨೬. ಎಲೈ ನಾರದನೇ, ಎಷ್ಟುಕಾಲ ಜಪಿಸಿದರೆ ಆ ಮಂತ್ರಸಿದ್ಧಿಯಾಗುವುದೆಂಬುದನ್ನು ತಿಳಿಸಿ, ಆ ಪರಶುರಾಮನಿಗೆ ವೇದವೇದಾಂಗಗಳನ್ನು ಬೋಧಿಸಿದನು.

೨೭. ಅನಂತರ ಅವನಿಗೆ ನಾಗಪಾಶವನ್ನೂ, ಬ್ರಹ್ಮ, ಪಾಶುಪತ ಮತ್ತು ನಾರಾಯಣಾಸ್ತ್ರಗಳನ್ನೂ, ಆಗ್ನೇಯ ವಾಯವ್ಯ ಮತ್ತು ವಾರುಣಾಸ್ತ್ರಗಳನ್ನೂ ಅನುಗ್ರಹಿಸಿದನು.

ಗಾಂಧರ್ವಂ ಗಾರುಡಂ ಚೈವ ಜೃಂಭಣಾಸ್ತ್ರಂ ತಥೈವ ಚ ।
ಗದಾಂ ಶಕ್ತಿಂ ಚ ಪರಶುಂ ಶೂಲಮವ್ಯರ್ಥಮುತ್ತಮಂ ॥ ೨೮ ॥

ನಾನಾಪ್ರಕಾರಶಸ್ತ್ರಾಸ್ತ್ರಮಂತ್ರಂ ಚ ವಿಧಿಪೂರ್ವಕಂ ।
ಶಸ್ತ್ರಾಸ್ತ್ರಾಣಾಂ ಚ ಸಂಹಾರಂ ತೂಣೀ ಚಾಕ್ಷಯಸಾಯಕೌ ॥ ೨೯ ॥

ಆತ್ಮರಕ್ಷಣಸಂಧಾನಂ ಸಂಗ್ರಾಮವಿಜಯಕ್ರಮಂ ।
ಮಾಯಾಯುದ್ಧಂ ಚ ವಿವಿಧಂ ಹುಂಕಾರಂ ಮಂತ್ರಪೂರ್ವಕಂ ॥ ೩೦ ॥

ರಕ್ಷಣಂ ಚ ಸ್ವಸೈನ್ಯಾನಾಂ ಪರಸೈನ್ಯವಿಮರ್ದನಂ ।
ನಾನಾಪ್ರಕಾರಮತುಲಮುಪಾಯಂ ರಣಸಂಕಟೇ ।
ಸಂಹಾರೇ ಮೋಹಿನೀಂ ವಿದ್ಯಾಂ ದದೌ ಮೃತ್ಯುಹರಾಂ ಹರಃ ॥ ೩೧ ॥

---

೨೮. ಗಾಂಧರ್ವ, ಗಾರುಡ ಮತ್ತು ಜೃಂಭಣಾಸ್ತ್ರಗಳೂ, ಅಮೋಘವಾದ ಗದೆ, ಶಕ್ತಿ, ಪರಶು (ಕೊಡಲಿ) ಮತ್ತು ಶೂಲಾಯುಧಗಳೂ ಶಂಕರನ ಅನುಗ್ರಹ ದಿಂದ ದೊರೆತವು.

೨೯. ನಾನಾವಿಧವಾದ ಶಸ್ತ್ರಾಸ್ತ್ರಗಳ ಮಂತ್ರವನ್ನೂ, ವಿಧಿಪೂರ್ವಕವಾಗಿ ಆ ಶಸ್ತ್ರಾಸ್ತ್ರಗಳ ಉಪಸಂಹಾರಕ್ರಮವನ್ನೂ, ಅಕ್ಷಯವಾದ ಬಾಣಬತ್ತಳಿಕೆಗಳನ್ನೂ ಪರಶುರಾಮನಿಗೆ ದಯಪಾಲಿಸಿದನು.

೩೦. ಆತ್ಮರಕ್ಷಣೆಮಾಡಿಕೊಳ್ಳುವ ಉಪಾಯವನ್ನೂ, ಯುದ್ಧದಲ್ಲಿ ಜಯ ಶೀಲನಾಗುವ ಬಗೆಯನ್ನೂ, ವಿಧವಿಧ ಮಾಯಾಯುದ್ಧಮಾಡುವ ಕ್ರಮವನ್ನೂ, ಹುಂಕಾರಮಾಡುವ ರೀತಿಯನ್ನೂ ಮಂತ್ರಪೂರ್ವಕವಾಗಿ ತಿಳಿಸಿದನು.

೩೧. ತನ್ನ ಸೈನ್ಯವನ್ನು ರಕ್ಷಿಸಿಕೊಂಡು ಶತ್ರುಸೈನ್ಯವನ್ನು ನಾಶಗೊಳಿಸುವು ದನ್ನೂ, ಯುದ್ಧಗೊಂದಲದಲ್ಲಿ ನಾನಾವಿಧ ಉಪಾಯಗಳನ್ನು ಮಾಡಿ ತಪ್ಪಿಸಿ ಕೊಳ್ಳುವುದನ್ನೂ, ಶತ್ರುಸಂಹಾರಮಾಡುವ ಮೋಹಿನೀವಿದ್ಯೆಯನ್ನೂ ಶಂಕರನು ಅವನಿಗೆ ಉಪದೇಶಿಸಿದನು.

ಸ್ಥಿತ್ವಾ ಚಿರಂ ಗುರೋರ್ವಾಸೇ ಸರ್ವವಿದ್ಯಾಂ ವಿಬೋಧ್ಯ ಸಃ ।
ತೀರ್ಥೇ ಕೃತ್ವಾ ಮಂತ್ರಸಿದ್ಧಿಂ ತಾಂಶ್ಚ ನತ್ವಾ ಜಗಾಮ ಸಃ ॥ ೩೨ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ತೃತೀಯೇ ಗಣಪತಿಖಂಡೇ ನಾರಾಯಣನಾರದಸಂವಾದೇ ಪರಶುರಾಮಸ್ಯ ಶಿವದತ್ತಾಸ್ತ್ರ ಶಸ್ತ್ರಾದಿಪ್ರಾಪ್ತಿವರ್ಣನಂ ನಾಮ ತ್ರಿಂಶತ್ತಮೋಽಧ್ಯಾಯಃ

---

೩೨. ಪರಶುರಾಮನು ಗುರುವಾದ ಶಂಕರನ ಮಂದಿರದಲ್ಲಿ ಬಹುಕಾಲವಿದ್ದು, ಅವನ ಅನುಗ್ರಹದಿಂದ ಸಕಲವಿದ್ಯೆಯನ್ನೂ ತಿಳಿದು, ಪುಣ್ಯತೀರ್ಥದಲ್ಲಿ ಮಂತ್ರ ಸಿದ್ಧಿಯನ್ನು ಪಡೆದು, ಗುರುವಿಗೆ ವಂದಿಸಿ ಹೊರಟುಹೋದನು.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಗಣಪತಿಖಂಡದಲ್ಲಿ ಪರಶುರಾಮನಿಗೆ ಶಿವನಿಂದ ಶಸ್ತ್ರಾಸ್ತ್ರಗಳ ಪ್ರಾಪ್ತಿಯನ್ನು ತಿಳಿಸುವ ಮೂವತ್ತನೆಯ ಅಧ್ಯಾಯವು ಮುಗಿದುದು.

ಮೂವತ್ತನೆಯ ಅಧ್ಯಾಯದ ಸಾರಾಂಶ

ಪರಶುರಾಮನು ಶಿವಪಾರ್ವತಿಯರಿಗೆ, ತಾನು ಯಾರೆಂಬುದನ್ನೂ, ತನ್ನಾಗಮನಕ್ಕೆ ಕಾರಣವನ್ನೂ, ತಾನುಮಾಡಿರುವ ಪ್ರತಿಜ್ಞೆಯನ್ನೂ ತಿಳಿಸಿ, ಅದು ಸಿದ್ಧಿಸುವಂತೆ ಅನುಗ್ರಹಿಸಬೇಕೆಂದು ಬೇಡಲು ಪಾರ್ವತಿ ಮತ್ತು ಕಾಳಿಕಾದೇವಿಯರು ತಮ್ಮ ಭಕ್ತರಾದ ಕ್ಷತ್ರಿಯರನ್ನು ಬ್ರಹ್ಮಚಾರಿಯಾದ ನೀನು ವಧಿಸಲಾರಿ ಎಂದು ಅಲ್ಲಗಳೆದರು. ಆ ಮಾತನ್ನು ಕೇಳಿ ಶೋಕಾರ್ತನಾದ ಪರಶುರಾಮನಲ್ಲಿ ಶಂಕರನು ದಯೆತೋರಿ ಸಕಲ ದಿವ್ಯಾಸ್ತ್ರಗಳನ್ನೂ, ಅವುಗಳ ಉಪಕ್ರಮೋಪಸಂಹಾರಕ್ರಮವನ್ನೂ, ಯುದ್ಧದಲ್ಲಿ ಜಲಶೀಲನಾಗುವ ಉಪಾಯವನ್ನೂ, ಶ್ರೀಹರಿಯ ಕವಚಮಂತ್ರಗಳನ್ನೂ ಅವನಿಗೆ ಅನುಗ್ರಹಿಸಿ ಬೀಳ್ಕೊಟ್ಟನು. ಶಂಕರನ ಅನುಗ್ರಹದಿಂದ ಪರಶುರಾಮನು ಪುಣ್ಯತೀರ್ಥದಲ್ಲಿ ಮಂತ್ರಸಿದ್ಧಿಯನ್ನು ಪಡೆದು ಹಿಂತಿರುಗಿದನು.

|| ಓಂ ||

|| ಶ್ರೀ ಗಣೇಶಾಯ ನಮಃ ||

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಗಣಪತಿಖಂಡೇ

|| ಏಕತ್ರಿಂಶತ್ತಮೋಽಧ್ಯಾಯಃ ||

|| ನಾರದ ಉವಾಚ ||

ಭಗವಂಚ್ಛ್ರೋತುಮಿಚ್ಛಾಮಿ ಕಿಂ ಮಂತ್ರಂ ಭಗವಾನ್ಹರಃ ।
ಕೃಪಯಾದಾತ್ಪರಶುರಾಮಾಯ ಸ್ತೋತ್ರಂ ಚ ವರ್ಮ ಚ || ೧ ||

ಕೋವಾಸ್ಯ ಮಂತ್ರಸ್ಯಾರಾಧ್ಯಃ ಕಿಂ ಫಲಂ ಕವಚಸ್ಯ ಚ ।
ಸ್ತವನಸ್ಯ ಫಲಂ ಕಿಂ ವಾ ತದ್ಭವಾನ್ವಕ್ತುಮರ್ಹತಿ || ೨ ||

|| ನಾರಾಯಣ ಉವಾಚ ||

ಮಂತ್ರಾರಾಧ್ಯೋ ಹಿ ಭಗವಾನ್ಪರಿಪೂರ್ಣತಮಃ ಸ್ವಯಂ ।
ಗೋಲೋಕನಾಥಃ ಶ್ರೀಕೃಷ್ಣೋ ಗೋಪಗೋಪೀಶ್ವರಃ ಪ್ರಭುಃ || ೩ ||

ಮೂವತ್ತೊಂದನೆಯ ಅಧ್ಯಾಯವು

೧. ನಾರದ :—ಪೂಜ್ಯನಾದ ನಾರಾಯಣಮಹರ್ಷಿಯೇ, ಷಡ್ಗುಣೈಶ್ವರ್ಯ ಪರಿಪೂರ್ಣನಾದ ಶಂಕರನು ಪರಶುರಾಮನಿಗೆ ಅನುಗ್ರಹಿಸಿದ ಕವಚಸ್ತೋತ್ರ ಮಂತ್ರಗಳಾವುವು ?

೨. ಆ ಮಂತ್ರದ ಆರಾಧ್ಯದೇವತೆ ಯಾರು? ಆ ಕವಚಧಾರಣೆಯ ಫಲ ವೇನು ? ಆ ಸ್ತೋತ್ರಪಠನದಿಂದ ದೊರೆಯುವ ಪುಣ್ಯವಾವುದು? ಇವೆಲ್ಲವನ್ನೂ ದಯವಿಟ್ಟು ನನಗೆ ತಿಳಿಸಬೇಕು.

೩. ನಾರಾಯಣ :—ಪರಿಪೂರ್ಣಸ್ವರೂಪನೂ, ಗೋಲೋಕನಾಥನೂ, ಗೋಪಗೋಪಿಯರೊಡೆಯನೂ ಆದ ಶ್ರೀಕೃಷ್ಣಪರಮಾತ್ಮನೇ ಆ ಮಂತ್ರದ ಆರಾಧ್ಯ ದೇವತೆಯು.

ತ್ರೈಲೋಕ್ಯವಿಜಯಂ ನಾಮ ಕವಚಂ ಪರಮಾದ್ಭುತಂ ।
ಸ್ತವರಾಜಂ ಮಹಾಪುಣ್ಯಂ ಭೂತಿಯೋಗಸಮುದ್ಭವಂ ॥ ೪ ॥

ಮಂತ್ರಂ ಕಲ್ಪತರುಂ ನಾಮ ಸರ್ವಕಾಮಫಲಪ್ರದಂ ।
ದದೌ ಪರಶುರಾಮಾಯ ರತ್ನಪರ್ವತಸನ್ನಿಧೌ ॥ ೫ ॥

ಸ್ವಯಂಪ್ರಭಾನದೀತೀರೇ ಪಾರಿಜಾತವನಾಂತರೇ ।
ಆಶ್ರಮೇ ಲೋಕದೇವಸ್ಯ ಮಾಧವಸ್ಯ ಚ ಸನ್ನಿಧೌ ॥ ೬ ॥

॥ ಮಹಾದೇವ ಉವಾಚ ॥

ವತ್ಸಾಗಚ್ಛ ಮಹಾಭಾಗ ಭೃಗುವಂಶಸಮುದ್ಭವ ।
ಪುತ್ರಾಧಿಕೋಽಸಿ ಪ್ರೇಮ್ಣಾ ಮೇ ಕವಚಗ್ರಹಣಂ ಕುರು ॥ ೭ ॥

ಶೃಣು ರಾಮ ಪ್ರವಕ್ಷ್ಯಾಮಿ ಬ್ರಹ್ಮಾಂಡೇ ಪರಮಾದ್ಭುತಂ ।
ತ್ರೈಲೋಕ್ಯವಿಜಯಂ ನಾಮ ಶ್ರೀಕೃಷ್ಣಸ್ಯ ಜಯಾವಹಂ ॥ ೮ ॥

---

೪. ಅತ್ಯದ್ಭುತವಾದ ಆ ಕವಚಧಾರಣೆಯಿಂದ ತ್ರೈಲೋಕ್ಯವಿಜಯ ವುಂಟಾಗುವುದು. ಮಹಾಪುಣ್ಯಕರವಾದ ಆ ಸ್ತೋತ್ರಪಠನದಿಂದ ಯೋಗಸಿದ್ಧಿ ಯುಂಟಾಗುವುದು.

೫. ಸಕಲ ಕಾಮಿತಾರ್ಥವನ್ನು ಕೊಡುವ ಕಲ್ಪತರುವೆಂಬ ಮಂತ್ರವನ್ನು ಶಂಕರನು ಪರಶುರಾಮನಿಗೆ ರತ್ನಪರ್ವತದಲ್ಲಿ ಅನುಗ್ರಹಿಸಿದನು.

೬. ಆ ಪರ್ವತವು ಲೋಕೇಶ್ವರನಾದ ಮಾಧವನ ಆಶ್ರಮದಲ್ಲಿ ಸ್ವಯಂ ಪ್ರಭಾನದಿಯ ತೀರದಲ್ಲಿರುವ ಪಾರಿಜಾತವನದ ಮಧ್ಯದಲ್ಲಿದೆ.

೭. ಮಹಾದೇವ :—ಎಲೈ ಭೃಗುವಂಶೋತ್ಪನ್ನನಾದ ವತ್ಸ ಪರಶು ರಾಮನೇ, ಇಲ್ಲಿ ಬಾ. ನನ್ನ ಪುತ್ರನಿಗಿಂತಲೂ ಪ್ರೀತಿಪಾತ್ರನಾದ ನೀನು ಈ ಕವಚ ವನ್ನು ಸ್ವೀಕರಿಸು.

೮. ಎಲೈ ರಾಮನೇ, ಬ್ರಹ್ಮಾಂಡದಲ್ಲಿ ಅತ್ಯದ್ಭುತವೂ, ಜಯದಾಯಕವೂ ಆದ ಶ್ರೀಕೃಷ್ಣಪರಮಾತ್ಮನ ತ್ರೈಲೋಕ್ಯವಿಜಯವೆಂಬ ಕವಚದ ಮಹಿಮೆಯನ್ನು ಹೇಳುವೆನು, ಕೇಳು.

ಶ್ರೀಕೃಷ್ಣೇನ ಪುರಾ ದತ್ತಂ ಗೋಲೋಕೇ ರಾಧಿಕಾಶ್ರಮೇ ।
ರಾಸಮಂಡಲಮಧ್ಯೇ ಚ ಮಹ್ಯಂ ವೃಂದಾವನೇ ವನೇ ॥ ೯ ॥

ಅತಿಗುಹ್ಯತರಂ ತತ್ವಂ ಸರ್ವಮಂತ್ರೌಘವಿಗ್ರಹಂ ।
ಪುಣ್ಯಾತ್ಪುಣ್ಯತರಂ ಚೈವ ಪರಂ ಸ್ನೇಹಾದ್ವದಾಮಿ ತೇ ॥ ೧೦ ॥

ಯದ್ಧೃತ್ವಾ ಪಠನಾದ್ದೇವೀ ಮೂಲಪ್ರಕೃತಿರೀಶ್ವರೀ ।
ಶುಂಭಂ ನಿಶುಂಭಂ ಮಹಿಷಂ ರಕ್ತಬೀಜಂ ಜಘಾನ ಹ ॥ ೧೧ ॥

ಯದ್ಧೃತ್ವಾಹಂ ಚ ಜಗತಾಂ ಸಂಹರ್ತಾ ಸರ್ವತತ್ವವಿತ್ ।
ಅವಧ್ಯಂ ತ್ರಿಪುರಂ ಪೂರ್ವಂ ದುರಂತಮಪಿ ಲೀಲಯಾ ॥ ೧೨ ॥

ಯದ್ಧೃತ್ವಾ ಪಠನಾದ್ಬ್ರಹ್ಮಾ ಸಸೃಜೇ ಸೃಷ್ಟಿಮುತ್ತಮಾಂ ।
ಯದ್ಧೃತ್ವಾ ಭಗವಾಂಚ್ಛೇಷೋ ವಿಧತ್ತೇ ವಿಶ್ವಮೇವ ಚ ॥ ೧೩ ॥

---

೯. ಈ ಕವಚವನ್ನು ಪೂರ್ವದಲ್ಲಿ ಶ್ರೀಕೃಷ್ಣಪರಮಾತ್ಮನು ಗೋಲೋಕದ ರಾಧಾಶ್ರಮದಲ್ಲಿರುವ ರಾಸಮಂಡಲಮಧ್ಯದ ಬೃಂದಾವನದಲ್ಲಿ ನನಗೆ ಅನುಗ್ರಹಿಸಿದನು.

೧೦. ಅತ್ಯಂತ ಗೂಢವೂ, ಸಕಲಮಂತ್ರಸಾರವೂ, ಪರಮಪುಣ್ಯಪ್ರದವೂ ಆದ ಈ ಕವಚವನ್ನು ಸ್ನೇಹಾತಿಶಯದಿಂದ ನಿನಗೆ ತಿಳಿಸುವೆನು.

೧೧. ಈ ಕವಚಧಾರಣೆಮಾಡಿ ಮಂತ್ರವನ್ನು ಪಠಿಸಿದುದರಿಂದಲೇ ಮೂಲಪ್ರಕೃತಿಯಾದ ದುರ್ಗಾಂಬಿಕೆಯು ಶುಂಭ, ನಿಶುಂಭರನ್ನೂ, ರಕ್ತಬೀಜ ಮಹಿಷಾಸುರರನ್ನೂ ಕೊಲ್ಲಲು ಶಕ್ತಳಾದಳು.

೧೨. ಜಗತ್ಸಂಹಾರಕನೂ, ಸಕಲತತ್ವಜ್ಞನೂ ಆದ ನಾನೂ ಕೂಡ ಈ ಕವಚಧಾರಣೆಯ ಮಹಿಮೆಯಿಂದ ಪೂರ್ವದಲ್ಲಿ ದುಷ್ಟನಾದ ತ್ರಿಪುರಾಸುರನನ್ನು ಲೀಲಾಜಾಲವಾಗಿ ಸಂಹರಿಸಿದೆನು.

೧೩. ಈ ಕವಚಧಾರಣೆಯ ಪ್ರಭಾವದಿಂದಲೇ ಬ್ರಹ್ಮನು ಉತ್ತಮವಾದ ಜಗತ್ಸೃಷ್ಟಿಯನ್ನು ಮಾಡಿದನು. ಆದಿಶೇಷನು ಈ ಭೂಮಂಡಲವನ್ನು ತನ್ನ ತಲೆಯಮೇಲೆ ಹೊತ್ತಿರುವುದೂ ಈ ಕವಚದ ಮಹಿಮೆಯಿಂದಲೇ.

ಯದ್ಧೃತ್ವಾ ಕೂರ್ಮರಾಜಶ್ಚ ಶೇಷಂ ಧತ್ತೇ ಹಿ ಲೀಲಯಾ ।
ಯದ್ಧೃತ್ವಾ ಭಗವಾನ್ವಾಯುರ್ವಿಶ್ವಾಧಾರೋ ವಿಭುಃ ಸ್ವಯಂ ॥ ೧೪ ॥

ಯದ್ಧೃತ್ವಾ ವರುಣಃ ಸಿದ್ಧಃ ಕುಬೇರಶ್ಚ ಧನೇಶ್ವರಃ ।
ಯದ್ಧೃತ್ವಾ ಪಠನಾದಿಂದ್ರೋ ದೇವಾನಾಮಧಿಪಃ ಸ್ವಯಂ ॥ ೧೫ ॥

ಯದ್ಧೃತ್ವಾ ಭಾತಿ ಭುವನೇ ತೇಜೋರಾಶಿಃ ಸ್ವಯಂ ರವಿಃ ।
ಯದ್ಧೃತ್ವಾ ಪಠನಾಚ್ಚಂದ್ರೋ ಮಹಾಬಲಪರಾಕ್ರಮಃ ॥ ೧೬ ॥

ಅಗಸ್ತ್ಯಃ ಸಾಗರಾನ್ಸಪ್ತ ಯದ್ಧೃತ್ವಾ ಪಠನಾತ್ಪಪೌ ।
ಚಕಾರ ತೇಜಸಾ ಜೀರ್ಣಂ ದೈತ್ಯಂ ವಾತಾಪಿಸಂಜ್ಞಕಂ ॥ ೧೭ ॥

---

೧೪. ಆದಿಕೂರ್ಮನು ಲೀಲಾಜಾಲವಾಗಿ ಆದಿಶೇಷನನ್ನು ಧರಿಸಿರುವುದೂ, ಪೂಜ್ಯನಾದ ವಾಯುದೇವನು ವಿಶ್ವವ್ಯಾಪಕನೂ, ವಿಶ್ವಾಧಾರನೂ, ಆಗಿರುವುದೂ ಈ ಕವಚಧಾರಣೆಯ ಪ್ರಭಾವದಿಂದಲೇ.

೧೫. ಈ ಕವಚವನ್ನು ಧರಿಸಿ ವರುಣನು ಜಲಾಭಿಮಾನಿದೇವತೆಯಾದನು. ಕುಬೇರನು ಧನಪತಿಯಾದನು. ಇಂದ್ರನು ಕವಚಧಾರಣೆಮಾಡಿ ಮಂತ್ರಪಠನೆ ಮಾಡಿದುದರಿಂದ ದೇವತೆಗಳಿಗೆಲ್ಲ ತಾನೇ ಅಧಿಪತಿಯಾದನು.

೧೬. ಈ ಕವಚಧಾರಣೆಮಾಡಿ ತೇಜೋಮಯನಾದ ಸೂರ್ಯದೇವನು ಭುವನವನ್ನು ಬೆಳಗುವಂತಾದನು. ಈ ಕವಚವನ್ನು ಧರಿಸಿ, ಮಂತ್ರಪಠನೆಮಾಡಿ, ಚಂದ್ರನು ಮಹಾಪರಾಕ್ರಮಿಯಾದನು.

೧೭. ಅಗಸ್ತ್ಯಮಹರ್ಷಿಯು ಏಳು ಸಮುದ್ರಗಳ ನೀರನ್ನು ಕುಡಿದುದೂ, ವಾತಾಪಿಯೆಂಬ ರಾಕ್ಷಸನನ್ನು ತನ್ನ ಜಾಠರಾಗ್ನಿಯಲ್ಲಿ ಜೀರ್ಣಮಾಡಿದುದೂ, ಈ ಕವಚಧಾರಣೆಯ ಮಹಿಮೆಯೇ.

ಯದ್ಧೃತ್ವಾ ಪಠನಾದ್ದೇವೀ ಸರ್ವಾಧಾರಾ ವಸುಂಧರಾ ।
ಯದ್ಧೃತ್ವಾ ಪಠನಾತ್ಪೂತಾ ಗಂಗಾ ಭುವನಪಾವನೀ ॥ ೧೮ ॥

ಯದ್ಧೃತ್ವಾ ಜಗತಾಂ ಸಾಕ್ಷೀ ಧರ್ಮೋ ಧರ್ಮಭೃತಾಂ ವರಃ ।
ಸರ್ವವಿದ್ಯಾಧಿದೇವೀ ಸಾ ಯಚ್ಚ ಧೃತ್ವಾ ಸರಸ್ವತೀ ॥ ೧೯ ॥

ಯದ್ಧೃತ್ವಾ ಜಗತಾಂ ಲಕ್ಷ್ಮೀರನ್ನದಾತ್ರೀ ಪರಾತ್ಪರಾ ।
ಯದ್ಧೃತ್ವಾ ಪಠನಾದ್ವೇದಾನ್ಸಾವಿತ್ರೀ ಸಾ ಸುಷಾವ ಚ ॥ ೨೦ ॥

ವೇದಾಶ್ಚ ಧರ್ಮವಕ್ತಾರೋ ಯದ್ಧೃತ್ವಾ ಪಠನಾದ್ಭೃಗೋ ।
ಯದ್ಧೃತ್ವಾ ಪಠನಾಚ್ಛುದ್ಧಸ್ತೇಜಸ್ವೀ ಹವ್ಯವಾಹನಃ ।
ಸನತ್ಕುಮಾರೋ ಭಗವಾನ್ಯದ್ಧೃತ್ವಾ ಜ್ಞಾನಿನಾಂ ವರಃ ॥ ೨೧ ॥

---

೧೮. ಈ ಕವಚವನ್ನು ಧರಿಸಿ ಮಂತ್ರಪಠನೆಮಾಡಿ ವಸುಂಧರೆಯು ಸರ್ವಾಧಾರಳೆನಿಸಿದಳು. ಗಂಗೆಯು ಈ ಕವಚಧಾರಣೆಯಿಂದ ಪೂತಳಾಗಿ ಭುವನಪಾವನೆಯಾದಳು.

೧೯. ಧರ್ಮಗಳಿಗೆ ಮೂಲಪುರುಷನಾದ ಧರ್ಮದೇವನು ಈ ಕವಚವನ್ನು ಧರಿಸಿ ಜಗತ್ಸಾಕ್ಷಿಯಾದನು. ಸರಸ್ವತಿಯು ಈ ಕವಚಧಾರಣೆಯ ಪ್ರಭಾವದಿಂದ ಸಕಲವಿದ್ಯಾಧಿದೇವತೆಯಾದಳು.

೨೦. ಪರಾತ್ಪರಳಾದ ಲಕ್ಷ್ಮೀದೇವಿಯು ಜಗತ್ತಿಗೆ ಅನ್ನದಾತೆಯಾದುದೂ, ಸಾವಿತ್ರಿಯು ಚತುರ್ವೇದಗಳ ಮಾತೆಯಾದುದೂ ಈ ಕವಚಧಾರಣೆಯ ಪ್ರಭಾವದಿಂದಲೇ.

೨೧. ಎಲೈ ಭಾರ್ಗವರಾಮನೇ, ಈ ಕವಚವನ್ನು ಧರಿಸಿದುದರಿಂದಲೇ ವೇದಗಳು ಧರ್ಮಬೋಧಕವಾದವು. ಅಗ್ನಿಯು ತೇಜಸ್ವಿಯೂ, ಪರಿಶುದ್ಧನೂ ಆದನು. ಪೂಜ್ಯನಾದ ಸನತ್ಕುಮಾರನು ಜ್ಞಾನಿಶ್ರೇಷ್ಠನೆನಿಸಿದನು.

ದಾತವ್ಯಂ ಕೃಷ್ಣಭಕ್ತಾಯ ಸಾಧವೇ ಚ ಮಹಾತ್ಮನೇ ।
ಶಠಾಯ ಪರಶಿಷ್ಯಾಯ ದತ್ವಾ ಮೃತ್ಯುಮವಾಪ್ನುಯಾತ್ ॥ ೨೨ ॥

ತ್ರೈಲೋಕ್ಯವಿಜಯಸ್ಯಾಸ್ಯ ಕವಚಸ್ಯ ಪ್ರಜಾಪತಿಃ ।
ಋಷಿಶ್ಛಂದಶ್ಚ ಗಾಯತ್ರೀ ದೇವೋ ರಾಸೇಶ್ವರಃ ಸ್ವಯಂ ॥ ೨೩ ॥

ತ್ರೈಲೋಕ್ಯವಿಜಯಪ್ರಾಪ್ತೌ ವಿನಿಯೋಗಃ ಪ್ರಕೀರ್ತಿತಃ ।
ಪರಾತ್ಪರಂ ಚ ಕವಚಂ ತ್ರಿಷು ಲೋಕೇಷು ದುರ್ಲಭಂ ॥ ೨೪ ॥

ಪ್ರಣವೋ ಮೇ ಶಿರಃ ಪಾತು ಶ್ರೀಕೃಷ್ಣಾಯ ನಮಃ ಸದಾ ।
ಪಾಯಾತ್ಕಪಾಲಂ ಕೃಷ್ಣಾಯ ಸ್ವಾಹಾ ಪಂಚಾಕ್ಷರಃ ಸ್ಮೃತಃ ॥ ೨೫ ॥

ಕೃಷ್ಣೇತಿ ಪಾತು ನೇತ್ರೇ ಚ ಕೃಷ್ಣಸ್ವಾಹೇತಿ ತಾರಕಂ ।
ಹರಯೇ ನಮ ಇತ್ಯೇವಂ ಭ್ರೂಲತಾಂ ಪಾತು ಮೇ ಸದಾ ॥ ೨೬ ॥

---

೨೨. ಸತ್ಪುರುಷನೂ, ಮಹಾತ್ಮನೂ ಆದ ಶ್ರೀಕೃಷ್ಣಭಕ್ತನಿಗೆ ಮಾತ್ರ ಉಪದೇಶಿಸಬಹುದು. ಮೂರ್ಖನಿಗೂ, ಮತ್ತೊಬ್ಬರ ಶಿಷ್ಯನಿಗೂ ಉಪದೇಶಿಸಿದರೆ ಮರಣ ಸಂಭವಿಸುವುದು.

೨೩. ತ್ರೈಲೋಕ್ಯವಿಜಯವೆಂಬ ಈ ಕವಚಕ್ಕೆ ಪ್ರಜಾಪತಿಯೇ ಋಷಿಯು. ಗಾಯತ್ರಿಯೇ ಛಂದಸ್ಸು. ರಾಸಾಧಿಪತಿಯಾದ ಶ್ರೀಕೃಷ್ಣಪರಮಾತ್ಮನೇ ದೇವತೆಯು.

೨೪. ತ್ರೈಲೋಕ್ಯವಿಜಯಪ್ರಾಪ್ತಿಯಲ್ಲಿ ಈ ಕವಚದ ವಿನಿಯೋಗವು. ಪರಾತ್ಪರವಾದ ಈ ಕವಚವು ತ್ರಿಲೋಕದಲ್ಲಿಯೂ ದುರ್ಲಭವಾದುದು

೨೫. 'ಓಂ ಶ್ರೀ ಕೃಷ್ಣಾಯ ನಮಃ' ಎಂಬ ಪ್ರಣವಪೂರ್ವಕವಾದ ಮಂತ್ರವು ನನ್ನ ಶಿರಸ್ಸನ್ನು ಸರ್ವದಾ ಕಾಪಾಡಲಿ, 'ಕೃಷ್ಣಾಯ ಸ್ವಾಹಾ' ಎಂಬ ಐದಕ್ಷರದ ಮಂತ್ರವು ನನ್ನ ಕಪಾಲವನ್ನು ರಕ್ಷಿಸಲಿ.

೨೬. "ಕೃಷ್ಣ" ಎಂಬೆರಡಕ್ಷರವು ನನ್ನ ಕಣ್ಣುಗಳನ್ನೂ "ಕೃಷ್ಣಸ್ವಾಹಾ" ಎಂಬದು ಕಣ್ಣುಗುಡ್ಡೆಗಳನ್ನೂ, "ಹರಯೆ ನಮಃ" ಎಂಬುದು ಹುಬ್ಬುಗಳನ್ನೂ ಸರ್ವದಾ ಕಾಪಾಡಲಿ.

ಓಂ ಗೋವಿಂದಾಯ ಸ್ವಾಹೇತಿ ನಾಸಿಕಾಂ ಪಾತು ಸಂತತಂ ।
ಗೋಪಾಲಾಯ ನಮೋ ಗಂಡೌ ಪಾತು ಮೇ ಸರ್ವತಃ ಸದಾ ॥ ೨೭ ॥

ಓಂ ನಮೋ ಗೋಪಾಂಗನೇಶಾಯ ಕರ್ಣೌ ಪಾತು ಸದಾ ಮಮ ।
ಓಂ ಕೃಷ್ಣಾಯ ನಮಃ ಶಶ್ವತ್ಪಾತುಮೇಽಧರಯುಗ್ಮಕಂ ॥ ೨೮ ॥

ಓಂ ಗೋವಿಂದಾಯ ಸ್ವಾಹೇತಿ ದಂತೌಘಂ ಮೇ ಸದಾವತು ।
ಪಾತು ಕೃಷ್ಣಾಯ ದಂತಾಧೋ ದಂತೋರ್ಧ್ವಂ ಕ್ಲೀಂ ಸದಾವತು ॥ ೨೯ ॥

ಓಂ ಶ್ರೀಕೃಷ್ಣಾಯ ಸ್ವಾಹೇತಿ ಜಿಹ್ವಿಕಾಂ ಪಾತು ಮೇ ಸದಾ ।
ರಾಸೇಶ್ವರಾಯ ಸ್ವಾಹೇತಿ ತಾಲುಕಂ ಪಾತು ಮೇ ಸದಾ ॥ ೩೦ ॥

---

೨೭. "ಓಂ ಗೋವಿಂದಾಯ ಸ್ವಾಹಾ" ಎಂಬ ಮಂತ್ರವು ನನ್ನ ನಾಸಿಕವನ್ನೂ, "ಗೋಪಾಲಾಯ ನಮಃ" ಎಂಬುದು ನನ್ನ ಕಪೋಲಗಳನ್ನೂ ಸರ್ವದಾ ರಕ್ಷಿಸಲಿ.

೨೮. "ಓಂ ನಮೋ ಗೋಪಾಂಗನೇಶಾಯ" ಎಂಬುದು ನನ್ನ ಕಿವಿಗಳನ್ನೂ, "ಓಂ ಕೃಷ್ಣಾಯ ನಮಃ" ಎಂಬುದು ನನ್ನ ಎರಡು ತುಟಿಗಳನ್ನೂ ಯಾವಾಗಲೂ ಕಾಪಾಡಲಿ.

೨೯. "ಓಂ ಗೋವಿಂದಾಯ ಸ್ವಾಹಾ" ಎಂಬುದು ನನ್ನ ಹಲ್ಲುಗಳ ಸಾಲನ್ನೂ, "ಕೃಷ್ಣಾಯ ಸ್ವಾಹಾ" ಎಂಬುದು ಹಲ್ಲುಗಳ ಕೆಳಭಾಗವನ್ನೂ, "ಕ್ಲೀಂ ಕೃಷ್ಣಾಯ ಸ್ವಾಹಾ" ಎಂಬುದು ಹಲ್ಲುಗಳ ಮೇಲುಭಾಗವನ್ನೂ ಸರ್ವದಾ ರಕ್ಷಿಸಲಿ.

೩೦. "ಓಂ ಶ್ರೀ ಕೃಷ್ಣಾಯ ಸ್ವಾಹಾ" ಎಂಬುದು ನಾಲಿಗೆಯನ್ನೂ, "ರಾಸೇಶ್ವರಾಯ ಸ್ವಾಹಾ" ಎಂಬುದು ತಾಲು (ಅಂಗಳು)ಗಳನ್ನೂ ಸರ್ವದಾ ಕಾಪಾಡಲಿ.

ರಾಧಿಕೇಶಾಯ ಸ್ವಾಹೇತಿ ಕಂಠಂ ಪಾತು ಸದಾ ಮಮ ।
ನಮೋ ಗೋಪಾಂಗನೇಶಾಯ ವಕ್ಷಃ ಪಾತು ಸದಾ ಮಮ ॥ ೩೧ ॥

ಓಂ ಗೋಪೇಶಾಯ ಸ್ವಾಹೇತಿ ಸ್ಕಂಧಂ ಪಾತು ಸದಾ ಮಮ ।
ನಮಃ ಕಿಶೋರವೇಷಾಯ ಸ್ವಾಹಾ ಪೃಷ್ಠಂ ಸದಾವತು ॥ ೩೨ ॥

ಉದರಂ ಪಾತು ಮೇ ನಿತ್ಯಂ ಮುಕುಂದಾಯ ನಮಃ ಸದಾ ।
ಓಂ ಹ್ರೀಂ ಕ್ಲೀಂ ಕೃಷ್ಣಾಯ ಸ್ವಾಹೇತಿ ಕರೌ ಪಾದೌ ಸದಾ ಮಮ ॥ ೩೩ ॥

ಓಂ ವಿಷ್ಣವೇ ನಮೋ ಬಾಹುಯುಗ್ಮಂ ಪಾತು ಸದಾ ಮಮ ।
ಓಂ ಹ್ರೀಂ ಭಗವತೇ ಸ್ವಾಹಾ ನಖರಂ ಪಾತು ಮೇ ಸದಾ ॥ ೩೪ ॥

ಓಂ ನಮೋ ನಾರಾಯಣಾಯೇತಿ ನಖರಂಧ್ರಂ ಸದಾವತು ।
ಓಂ ಹ್ರೀಂ ಹ್ರೀಂ ಪದ್ಮನಾಭಾಯ ನಾಭಿಂ ಪಾತು ಸದಾ ಮಮ ॥ ೩೫ ॥

---

೩೧. "ರಾಧಿಕೇಶಾಯ ಸ್ವಾಹಾ" ಎಂಬುದು ನನ್ನ ಕಂಠವನ್ನೂ, "ನಮೋ ಗೋಪಾಂಗನೇಶಾಯ ಸ್ವಾಹಾ" ಎಂಬುದು, ವಕ್ಷಃಸ್ಥಲವನ್ನೂ ಅನವರತವೂ ರಕ್ಷಿಸಲಿ.

೩೨. "ಓಂ ಗೋಪೇಶಾಯ ಸ್ವಾಹಾ" ಎಂಬುದು ನನ್ನ ಹೆಗಲುಗಳನ್ನೂ, "ನಮಃ ಕಿಶೋರವೇಷಾಯ ಸ್ವಾಹಾ" ಎಂಬುದು ಪೃಷ್ಠಭಾಗವನ್ನೂ ಯಾವಾಗಲೂ ಕಾಪಾಡಲಿ.

೩೩. 'ಮುಕುಂದಾಯ ನಮಃ' ಎಂಬ ಮಂತ್ರವು ನನ್ನ ಹೊಟ್ಟೆಯನ್ನೂ 'ಓಂ ಹ್ರೀಂ ಕ್ಲೀಂ ಕೃಷ್ಣಾಯ ಸ್ವಾಹಾ' ಎಂಬುದು ನನ್ನ ಹಸ್ತಪಾದಗಳನ್ನೂ ಸರ್ವದಾ ರಕ್ಷಿಸಲಿ.

೩೪. 'ಓಂ ವಿಷ್ಣವೇ ನಮಃ' ಎಂಬುದು ನನ್ನ ಬಾಹುದ್ವಯಗಳನ್ನೂ 'ಓಂ ಹ್ರೀಂ ಭಗವತೇ ಸ್ವಾಹಾ' ಎಂಬುದು ನನ್ನ ಉಗುರುಗಳನ್ನೂ ಸರ್ವದಾ ಕಾಪಾಡಲಿ.

೩೫. ಓಂ ನಮೋ ನಾರಾಯಣಾಯ' ಎಂಬುದು ನನ್ನ ಉಗುರುಸಂ ಗಳನ್ನೂ, 'ಓಂ ಹ್ರೀಂ ಹ್ರೀಂ ಪದ್ಮನಾಭಾಯ' ಎಂಬ ಮಂತ್ರವು ನನ್ನ ನಾ ಪ್ರದೇಶವನ್ನೂ ಸರ್ವದಾ ರಕ್ಷಿಸಲಿ.

ಓಂ ಸರ್ವೇಶಾಯ ಸ್ವಾಹೇತಿ ಕಂಕಾಲಂ ಪಾತು ಮೇ ಸದಾ ।
ಓಂ ಗೋಪೀರಮಣಾಯ ಸ್ವಾಹಾ ನಿತಂಬಂ ಪಾತು ಮೇ ಸದಾ ॥ ೩೬ ॥

ಓಂ ಗೋಪೀರಮಣನಾಥಾಯ ಪಾದೌ ಪಾತು ಸದಾ ಮಮ ।
ಓಂ ಹ್ರೀಂ ಕ್ಲೀಂ ರಸಿಕೇಶಾಯ ಸ್ವಾಹಾ ಸರ್ವಂ ಸದಾವತು ॥ ೩೭ ॥

ಓಂ ಕೇಶವಾಯ ಸ್ವಾಹೇತಿ ಮಮ ಕೇಶಾನ್ ಸದಾವತು ।
ನಮಃ ಕೃಷ್ಣಾಯ ಸ್ವಾಹೇತಿ ಬ್ರಹ್ಮರಂಧ್ರಂ ಸದಾವತು ॥ ೩೮ ॥

ಓಂ ಮಾಧವಾಯ ಸ್ವಾಹೇತಿ ಮೇ ಲೋಮಾನಿ ಸದಾವತು ।
ಓಂ ಹ್ರೀಂ ಶ್ರೀಂ ರಸಿಕೇಶಾಯ ಸ್ವಾಹಾ ಸರ್ವಂ ಸದಾವತು ॥ ೩೯ ॥

ಪರಿಪೂರ್ಣತಮಃ ಕೃಷ್ಣಃ ಪ್ರಾಚ್ಯಾಂ ಮಾಂ ಸರ್ವದಾವತು ।
ಸ್ವಯಂ ಗೋಲೋಕನಾಥೋ ಮಾಮಾಗ್ನೇಯ್ಯಾಂ ದಿಶಿ ರಕ್ಷತು ॥ ೪೦ ॥

---

೩೬. 'ಓಂ ಸರ್ವೇಶಾಯ ಸ್ವಾಹಾ' ಎಂಬ ಮಂತ್ರವು ನನ್ನ ಮೂಳೆಗಳನ್ನೂ, 'ಓಂ ಗೋಪೀರಮಣಾಯ ಸ್ವಾಹಾ' ಎಂಬುದು ನನ್ನ ನಿತಂಬಭಾಗವನ್ನೂ ಸರ್ವದಾ ಕಾಪಾಡಲಿ

೩೭. 'ಓಂ ಗೋಪೀರಮಣನಾಥಾಯ' ಎಂಬ ಮಂತ್ರವು ನನ್ನ ಪಾದಗಳನ್ನೂ, 'ಓಂ ಹ್ರೀಂ ಕ್ಲೀಂ ರಸಿಕೇಶಾಯ ಸ್ವಾಹಾ' ಎಂಬುದು ನನ್ನ ಸರ್ವಾಂಗಗಳನ್ನೂ ಸರ್ವದಾ ರಕ್ಷಿಸಲಿ.

೩೮. ನನ್ನ ತಲೆಗೂದಲುಗಳನ್ನು 'ಓಂ ಕೇಶವಾಯ ಸ್ವಾಹಾ' ಎಂಬ ಮಂತ್ರವೂ, ನನ್ನ ಬ್ರಹ್ಮರಂಧ್ರವನ್ನು 'ಓಂ ಕೃಷ್ಣಾಯ ಸ್ವಾಹಾ' ಎಂಬ ಮಂತ್ರವೂ ಸರ್ವದಾ ಕಾಪಾಡಲಿ.

೩೯. 'ಓಂ ಮಾಧವಾಯ ಸ್ವಾಹಾ' ಎಂಬುದು ನನ್ನ ಮೈಗೂದಲುಗಳನ್ನೂ, 'ಓಂ ಹ್ರೀಂ ಶ್ರೀಂ ರಸಿಕೇಶಾಯ ಸ್ವಾಹಾ' ಎಂಬುದು ಸರ್ವಾವಯವಗಳನ್ನೂ ಸರ್ವದಾ ಕಾಪಾಡಲಿ.

೪೦. ಪರಿಪೂರ್ಣಸ್ವರೂಪನಾದ ಶ್ರೀಕೃಷ್ಣನು ಪೂರ್ವದಿಕ್ಕಿನಲ್ಲಿಯೂ, ಗೋಲೋಕನಾಥನು ಆಗ್ನೇಯದಿಕ್ಕಿನಲ್ಲಿಯೂ ನನ್ನನ್ನು ರಕ್ಷಿಸಲಿ.

ಪೂರ್ಣಬ್ರಹ್ಮಸ್ವರೂಪಶ್ಚ ದಕ್ಷಿಣೇ ಮಾಂ ಸದಾವತು ।
ನೈಋರ್ತ್ಯಾಂ ಪಾತು ಮಾಂ ಕೃಷ್ಣಃ ಪಶ್ಚಿಮೇ ಪಾತು ಮಾಂ ಹರಿಃ ॥ ೪೧ ॥

ಗೋವಿಂದಃ ಪಾತು ಮಾಂ ಶಶ್ವದ್ವಾಯವ್ಯಾಂ ದಿಶಿ ನಿತ್ಯಶಃ ।
ಉತ್ತರೇ ಮಾಂ ಸದಾ ಪಾತು ರಸಿಕಾನಾಂ ಶಿರೋಮಣಿಃ ॥ ೪೨ ॥

ಐಶಾನ್ಯಾಂ ಮಾಂ ಸದಾ ಪಾತು ವೃಂದಾವನವಿಹಾರಕೃತ್ ।
ವೃಂದಾವತೀಪ್ರಾಣನಾಥಃ ಪಾತು ಮಾಮೂರ್ಧ್ವದೇಶತಃ ॥ ೪೩ ॥

ಸದೈವ ಮಾಧವಃ ಪಾತು ಬಲಹಾರೀ ಮಹಾಬಲಃ ।
ಜಲೇ ಸ್ಥಲೇ ಚಾಂತರಿಕ್ಷೇ ನೃಸಿಂಹಃ ಪಾತು ಮಾಂ ಸದಾ ॥ ೪೪ ॥

ಸ್ವಪ್ನೇ ಜಾಗರಣೇ ಶಶ್ವತ್ಪಾತು ಮಾಂ ಮಾಧವಃ ಸದಾ ।
ಸರ್ವಾಂತರಾತ್ಮಾ ನಿರ್ಲಿಪ್ತಃ ಪಾತು ಮಾಂ ಸರ್ವತೋ ವಿಭುಃ ॥ ೪೫ ॥

---

೪೧. ಪೂರ್ಣಬ್ರಹ್ಮಸ್ವರೂಪನು ದಕ್ಷಿಣದಿಕ್ಕಿನಲ್ಲಿಯೂ, ಶ್ರೀಕೃಷ್ಣನು ನೈಋತ್ಯ ದಿಕ್ಕಿನಲ್ಲಿಯೂ, ಹರಿಯು ಪಶ್ಚಿಮದಿಕ್ಕಿನಲ್ಲಿಯೂ ನನ್ನನ್ನು ರಕ್ಷಿಸಲಿ.

೪೨ ವಾಯುವ್ಯ ದಿಕ್ಕಿನಲ್ಲಿ ಗೋವಿಂದನೂ ಉತ್ತರದಿಕ್ಕಿನಲ್ಲಿ ರಸಿಕ ಶಿರೋಮಣಿಯೂ ನಿತ್ಯವೂ ನನ್ನನ್ನು ಪಾಲಿಸಲಿ.

೪೩. ವೃಂದಾವನವಿಹಾರಿಯು ಐಶಾನ್ಯದಿಕ್ಕಿನಲ್ಲಿಯೂ, ವೃಂದಾವತೀ ಪ್ರಾಣಪ್ರಿಯನು ಮೇಲುಭಾಗದಲ್ಲಿಯೂ, ನನ್ನನ್ನು ರಕ್ಷಿಸಲಿ.

೪೪. ಮಹಾಬಲಿಷ್ಠನೂ, ಬಲಿಸಂಹಾರಕನೂ ಆದ ಮಾಧವನು ಸರ್ವ ಕಾಲದಲ್ಲಿಯೂ, ನರಸಿಂಹನು-ನೀರು, ನೆಲ ಮತ್ತು ಅಂತರಿಕ್ಷಗಳಲ್ಲಿಯೂ ನನ್ನನ್ನು ಸರ್ವಾತ್ಮನಾ ಕಾಪಾಡಲಿ.

೪೫. ಜಾಗ್ರತ್ಸ್ವಪ್ನಗಳಲ್ಲಿ ಮಾಧವನೂ, ಸಕಲ ದಿಕ್ಕುಗಳಲ್ಲಿ ಸರ್ವಾಂತ ರ್ಯಾಮಿಯೂ, ನಿರ್ಲಿಪ್ತನೂ ಆದ ವಿಭುವೂ ನನ್ನನ್ನು ರಕ್ಷಿಸಲಿ.

ಇತಿ ತೇ ಕಥಿತಂ ವತ್ಸ ಸರ್ವಮಂತ್ರೌಘವಿಗ್ರಹಂ ।
ತ್ರೈಲೋಕ್ಯವಿಜಯಂ ನಾಮ ಕವಚಂ ಪರಮಾದ್ಭುತಂ　　॥ ೪೬ ॥

ಮಯಾ ಶ್ರುತಂ ಕೃಷ್ಣವಕ್ತ್ರಾತ್ಪ್ರವಕ್ತವ್ಯಂ ನ ಕಸ್ಯ ಚಿತ್ ।
ಗುರುಮಭ್ಯರ್ಚ್ಯ ವಿಧಿವತ್ಕವಚಂ ಧಾರಯೇತ್ತು ಯಃ　　॥ ೪೭ ॥

ಕಂಠೇ ವಾ ದಕ್ಷಿಣೇ ಬಾಹೌ ಸೋಽಪಿ ವಿಷ್ಣುರ್ನ ಸಂಶಯಃ ।
ಸ ಚ ಭಕ್ತೋ ವಸೇದ್ಯತ್ರ ಲಕ್ಷ್ಮೀರ್ವಾಣೀ ವಸೇತ್ತತಃ　　॥ ೪೮ ॥

ಯದಿ ಸ್ಯಾತ್ಸಿದ್ಧಕವಚೋ ಜೀವನ್ಮುಕ್ತೋ ಭವೇತ್ತು ಸಃ ।
ನಿಶ್ಚಿತಂ ಕೋಟಿವರ್ಷಾಣಾಂ ಪೂಜಾಯಾಃ ಫಲಮಾಪ್ನುಯಾತ್　　॥ ೪೯ ॥

ರಾಜಸೂಯಸಹಸ್ರಾಣಿ ವಾಜಪೇಯಶತಾನಿ ಚ ।
ಅಶ್ವಮೇಧಾಯುತಾನ್ಯೇವ ನರಮೇಧಾಯುತಾನಿ ಚ　　॥ ೫೦ ॥

---

೪೬. ವತ್ಸ ಪರಶುರಾಮನೇ, ಈ ರೀತಿಯಾದ ಮಂತ್ರಸಮೂಹದಿಂದ ಕೂಡಿ ಪರಮಾಶ್ಚರ್ಯಕರವಾಗಿರುವ ತ್ರೈಲೋಕ್ಯವಿಜಯವೆಂಬ ಕವಚವನ್ನು ನಿನಗೆ ಉಪದೇಶಿಸಿರುವೆನು.

೪೭–೪೮. ನಾನು ಈ ಕವಚವನ್ನು ಶ್ರೀಕೃಷ್ಣನ ಮುಖದಿಂದ ಕೇಳಿ ತಿಳಿದುಕೊಂಡೆನು. ಅಯೋಗ್ಯರಿಗೆ ಇದನ್ನು ಉಪದೇಶಿಸಬಾರದು: ವಿಧಿಪೂರ್ವಕವಾಗಿ ತನ್ನ ಗುರುವನ್ನು ಪೂಜಿಸಿ, ಕಂಠದಲ್ಲಾಗಲೀ, ಬಲಭುಜದಲ್ಲಾಗಲೀ ಈ ಕವಚ ಧಾರಣೆಮಾಡುವವನು ವಿಷ್ಣುವಿಗೆ ಸದೃಶನಾಗುವುದರಲ್ಲಿ ಸಂಶಯವಿಲ್ಲ. ಈ ಕವಚ ಧಾರಣೆಮಾಡಿರುವ ಭಕ್ತನು ವಾಸಿಸುವ ಸ್ಥಳದಲ್ಲಿ ಲಕ್ಷ್ಮಿ ಮತ್ತು ಸರಸ್ವತಿಯರು ವಾಸಮಾಡಿಕೊಂಡಿರುವರು.

೪೯. ಈ ಕವಚಸಿದ್ಧಿಯನ್ನು ಪಡೆದವನು ಜೀವನ್ಮುಕ್ತನಾಗುವನು. ಕೋಟಿವರ್ಷಗಳಕಾಲ ಪೂಜೆಮಾಡಿ ಪಡೆಯುವ ಪುಣ್ಯವನ್ನು ಈ ಕವಚಧಾರಣೆ ಮಾತ್ರದಿಂದ ಪಡೆಯುವನು.

೫೦–೫೧. ಸಾವಿರ ರಾಜಸೂಯಯಾಗಗಳನ್ನೂ, ನೂರು ವಾಜಪೇಯಗಳನ್ನೂ, ಹತ್ತುಸಾವಿರ ಅಶ್ವಮೇಧ ಮತ್ತು ನರಮೇಧಯಾಗಗಳನ್ನೂ, ಗೋದಾ

ಮಹಾದಾನಾನಿ ಯಾನ್ಯೇವ ಪ್ರಾದಕ್ಷಿಣ್ಯಂ ಭುವಸ್ತಥಾ ।
ತ್ರೈಲೋಕ್ಯವಿಜಯಸ್ಯಾಸ್ಯ ಕಲಾಂ ನಾರ್ಹಂತಿ ಷೋಡಶೀಂ ॥ ೫೧ ॥

ವ್ರತೋಪವಾಸನಿಯಮಂ ಸ್ವಾಧ್ಯಾಯಾಧ್ಯಯನಂ ತಪಃ ।
ಸ್ನಾನಂ ಚ ಸರ್ವತೀರ್ಥೇಷು ನಾಸ್ಯಾರ್ಹಂತಿ ಕಲಾಮಪಿ ॥ ೫೨ ॥

ಸಿದ್ಧಿತ್ವಮಮರತ್ವಂ ಚ ದಾಸತ್ವಂ ಶ್ರೀಹರೇರಪಿ ।
ಯದಿ ಸ್ಯಾತ್ಸಿದ್ಧಕವಚಃ ಸರ್ವಂ ಪ್ರಾಪ್ನೋತಿ ನಿಶ್ಚಿತಂ ॥ ೫೩ ॥

ಸ ಭವೇತ್ಸಿದ್ಧಕವಚೋ ದಶಲಕ್ಷಂ ಜಪೇತ್ತು ಯಃ ।
ಯೋ ಭವೇತ್ಸಿದ್ಧಕವಚೋ ಸರ್ವಜ್ಞಃ ಸ ಭವೇದ್ಧ್ರುವಂ ॥ ೫೪ ॥

ಇದಂ ಕವಚಮಜ್ಞಾತ್ವಾ ಭಜೇತ್ಕೃಷ್ಣಂ ಸುಮಂದಧೀಃ ।
ಕೋಟಿಕಲ್ಪಂ ಪ್ರಜಪ್ತೋಽಪಿ ನ ಮಂತ್ರಃ ಸಿದ್ಧಿದಾಯಕಃ ॥ ೫೫ ॥

ನವೇ ಮುಂತಾದ ಮಹಾದಾನಗಳನ್ನೂ ಭೂಪ್ರದಕ್ಷಿಣೆಯನ್ನೂ ಮಾಡಿ, ಈ ಕವಚ ಧಾರಣೆಯ ಹದಿನಾರನೆ ಒಂದಂಶದ ಫಲವನ್ನೂ ಪಡೆಯಲಾಗುವುದಿಲ್ಲ.

೫೨. ವ್ರತೋಪವಾಸಾದಿ ನಿಯಮಗಳೂ, ವೇದಾಧ್ಯಯನವೂ, ತಪಸ್ಸೂ, ಸಕಲಪುಣ್ಯತೀರ್ಥಗಳ ಸ್ನಾನವೂ, ಈ ಕವಚದ ಹದಿನಾರನೆ ಒಂದಂಶಕ್ಕೂ ಎಣೆಯಾಗುವುದಿಲ್ಲ

೫೩. ಈ ಕವಚಸಿದ್ಧಿಯನ್ನು ಪಡೆದವನು, ತನ್ನ ಇಷ್ಟಸಿದ್ಧಿಯನ್ನೂ, ಸಾವಿಲ್ಲದಿರುವಿಕೆಯನ್ನೂ, ಶ್ರೀಹರಿಯ ಸೇವಕತನವನ್ನೂ, ನಿಶ್ಚಯವಾಗಿಯೂ ಪಡೆಯುವನು.

೫೪. ಹತ್ತುಲಕ್ಷಸಾರಿ ಜಪಿಸುವವನು ಕವಚಸಿದ್ಧಿಯನ್ನು ಪಡೆಯುವನು. ಸಿದ್ಧಕವಚವುಳ್ಳವನು ಸರ್ವಜ್ಞನೆನಿಸುವನು.

೫೫. ಈ ಕವಚದ ಮಹಿಮೆಯನ್ನು ತಿಳಿಯದೆ ಶ್ರೀಕೃಷ್ಣನನ್ನು ಭಜಿಸುವ ಮೂಢನು, ಕೋಟಿಕಲ್ಪಗಳಕಾಲ ಜಪಿಸಿದರೂ ಮಂತ್ರಸಿದ್ಧಿಯನ್ನು ಪಡೆಯಲಾರನು.

ಗೃಹೀತ್ವಾ ಕವಚಂ ವತ್ಸ ಮಹೀಂ ನಿಃಕ್ಷತ್ರಿಯಾಂ ಕುರು ।
ತ್ರಿಸ್ಸಪ್ತಕೃತ್ವಾ ನಿಶ್ಶಂಕಃ ಸದಾನಂದೋ ಹಿ ಲೀಲಯಾ ॥ ೫೬ ॥

ರಾಜ್ಯಂ ದೇಯಂ ಶಿರೋ ದೇಯಂ ಪ್ರಾಣಾ ದೇಯಾಶ್ಚ ಪುತ್ರಕ ।
ಏವಂ ಭೂತಂ ಚ ಕವಚಂ ನ ದೇಯಂ ಪ್ರಾಣಸಂಕಟೇ ॥ ೫೭ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ತೃತೀಯೇ ಶ್ರೀ ಗಣಪತಿಖಂಡೇ
ನಾರದನಾರಾಯಣಸಂವಾದೇ ಪರಶುರಾಮಾಯ
ಶ್ರೀಕೃಷ್ಣಕವಚಪ್ರದಾನಂ ನಾಮ
ಏಕತ್ರಿಂಶತ್ತಮೋಽಧ್ಯಾಯಃ

---

೫೬. ವತ್ಸನೇ, ಈ ಕವಚವನ್ನು ಧರಿಸಿ, ನಿರ್ಭಯನಾಗಿ ಇಪ್ಪತ್ತೊಂದು ಸಾರಿ ಭೂಪ್ರದಕ್ಷಿಣೆಮಾಡಿ, ಲೀಲಾಮಾತ್ರದಿಂದ ಕ್ಷತ್ರಿಯರನ್ನು ಸಂಹರಿಸಿ. ಆನಂದದಿಂದಿರು.

೫೭. ಎಲೈ ಪುತ್ರನೇ, ರಾಜ್ಯವನ್ನಾಗಲೀ, ತಲೆಯನ್ನಾಗಲೀ, ಕಡೆಗೆ ತನ್ನ ಪ್ರಾಣವನ್ನಾಗಲೀ ಮತ್ತೊಬ್ಬರಿಗೆ ಕೊಡಬಹುದು. ಈ ಕವಚವನ್ನು ಮಾತ್ರ ಪ್ರಾಣಸಂಕಟದಲ್ಲಿಯೂ ಮತ್ತೊಬ್ಬರಿಗೆ ಕೊಡಬಾರದು.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಗಣಪತಿಖಂಡದಲ್ಲಿ ಪರಶುರಾಮನಿಗೆ
ಶ್ರೀಕೃಷ್ಣನ ಕವಚೋಪದೇಶವಾದುದನ್ನು ತಿಳಿಸುವ ಮೂವತ್ತೊಂದನೆಯ
ಅಧ್ಯಾಯವು ಮುಗಿದುದು.

ಮೂವತ್ತೊಂದನೆಯ ಅಧ್ಯಾಯದ ಸಾರಾಂಶ

ಮಹಾದೇವನು ಪರಶುರಾಮನಿಗೆ ಶ್ರೀಕೃಷ್ಣನ ಕವಚದ ಮಹಿಮೆಯನ್ನೂ, ಅದರ ಧಾರಣೆಗೆ ಅರ್ಹರಾದವರನ್ನೂ ತಿಳಿಸಿ, ಮಂತ್ರೋಚ್ಚಾರಣಪೂರ್ವಕವಾಗಿ ಆತ್ಮರಕ್ಷಣೆಯ ವಿಧಾನವನ್ನೂ ಉಪದೇಶಿಸಿದನು. ಅಲ್ಲದೆ ಕವಚಸಿದ್ಧಿ ಹೊಂದುವ ಕ್ರಮವನ್ನೂ ಅದರ ಫಲವನ್ನೂ ತಿಳಿಸಿ, 'ಅದನ್ನು ಧರಿಸುವುದರಿಂದ ನೀನು ಇಪ್ಪತ್ತೊಂದುಸಾರಿ ಭೂಪ್ರದಕ್ಷಿಣೆಮಾಡಿ ನಿಖಿಲ ಕ್ಷತ್ರಿಯರನ್ನೂ ಸಂಹರಿಸಲು ಶಕ್ತನಾಗುವೆ' ಎಂದು ಹರಸಿ ಬೀಳ್ಕೊಟ್ಟನು.

—॥ ಓಂ ॥—

—॥ ಶ್ರೀ ಗಣೇಶಾಯ ನಮಃ ॥—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಗಣಪತಿಖಂಡೇ

॥ ದ್ವಾತ್ರಿಂಶತ್ತಮೋಽಧ್ಯಾಯಃ ॥

॥ ಭೃಗುರುವಾಚ ॥

ಸಂಪ್ರಾಪ್ತಂ ಕವಚಂ ನಾಥ ಶಶ್ವತ್ಸರ್ವಾಂಗರಕ್ಷಣಂ ।
ಸುಖದಂ ಮೋಕ್ಷದಂ ಸಾರಂ ಶತ್ರುಸಂಹಾರಕಾರಣಂ ॥ ೧ ॥

ಅಧುನಾ ಭಗವನ್ಮಂತ್ರಂ ಸ್ತೋತ್ರಂ ಪೂಜಾವಿಧಿಂ ಪ್ರಭೋ ।
ದೇಹಿ ಮಹ್ಯಮನಾಥಾಯ ಶರಣಾಗತೆ ಪಾಲಕ ॥ ೨ ॥

ಮೂವತ್ತೆರಡನೆಯ ಅಧ್ಯಾಯವು

೧. ಪರಶುರಾಮ :—ಎಲೈ ಜಗತ್ಪತಿಯೇ, ಸಕಲಾವಯವಗಳನ್ನೂ ರಕ್ಷಿಸಿ, ಶತ್ರುಸಂಹಾರಕ್ಕೆ ಕಾರಣವಾಗಿ, ಮೋಕ್ಷಸುಖವನ್ನು ಕೊಡುವ ಅತ್ಯುತ್ತಮವಾದ ಕವಚವನ್ನು ನಿನ್ನ ಅನುಗ್ರಹದಿಂದ ಪಡೆದೆನು.

೨. ಶರಣಾಗತಪರಿಪಾಲಕನಾದ ಪ್ರಭುವೇ, ಈಗ ಶ್ರೀಕೃಷ್ಣನ ಮಂತ್ರ ಸ್ತೋತ್ರಗಳನ್ನೂ, ಪೂಜಾವಿಧಾನವನ್ನೂ, ಬೋಧಿಸಿ ಅನಾಥನಾದ ನನ್ನನ್ನು ಕಾಪಾಡು.

॥ ಮಹಾದೇವ ಉವಾಚ ॥

ಓಂ ಹ್ರೀಂ ಶ್ರೀಂ ನಮಃ ಕೃಷ್ಣಾಯ ಪರಿಪೂರ್ಣತಮಾಯ ಚ ।
ಮಂತ್ರೇಷು ಮಂತ್ರರಾಜೋಽಯಂ ಮಹಾನ್ಸಪ್ತದಶಾಕ್ಷರಃ ॥ ೩ ॥

ಸಿದ್ಧೋಽಯಂ ಪಂಚಲಕ್ಷೇಣ ಜಪೇನ ಮುನಿಪುಂಗವ ।
ತದ್ದಶಾಂಶಂ ಚ ಹವನಂ ತದ್ದಶಾಂಶಾಭಿಷೇಚನಂ ॥
ತರ್ಪಣಂ ತದ್ದಶಾಂಶಂ ಚ ತದ್ದಶಾಂಶಂ ಚ ಮಾರ್ಜನಂ ।
ಸುವರ್ಣಾನಾಂ ಚ ಶತಕಂ ಪುರಶ್ಚರಣದಕ್ಷಿಣಾ ॥ ೪ ॥

ಮಂತ್ರಸಿದ್ಧಸ್ಯ ಪುಂಸಶ್ಚ ವಿಶ್ವಂ ಕರತಲಂ ಮುನೇ ।
ಶಕ್ತಃ ಪಾತುಂ ಸಮುದ್ರಾಂಶ್ಚ ವಿಶ್ವಂ ಸಂಹರ್ತುಮೀಶ್ವರಃ ॥ ೫ ॥

---

೩. ಮಹಾದೇವ :—"ಓಂ ಹ್ರೀಂ ಶ್ರೀಂ ನಮಃ ಶ್ರೀಕೃಷ್ಣಾಯ ಪರಿಪೂರ್ಣತಮಾಯ ಚ" ಹದಿನೇಳಕ್ಷರಗಳುಳ್ಳ ಈ ಮಹಾಮಂತ್ರವು, ಮಂತ್ರಗಳಿಗೆಲ್ಲ ಉತ್ತಮವೂ, ಮಂತ್ರರಾಜನೂ ಎನಿಸಿರುವುದು.

೪. ಎಲೈ ಮುನಿಶ್ರೇಷ್ಠನೇ, ಈ ಮಂತ್ರವನ್ನು ಐದು ಲಕ್ಷಾವರ್ತಿ ಜಪಿಸುವುದರಿಂದ ಸಿದ್ಧಿಸುವುದು. ಜಪದ ಹತ್ತನೆಯ ಒಂದು ಭಾಗ ಹೋಮಮಾಡುವುದರಿಂದಲೂ, ಹೋಮದ ಹತ್ತನೆಯ ಒಂದು ಭಾಗ ಅಭಿಷೇಕಮಾಡುವುದರಿಂದಲೂ, ಅಭಿಷೇಕದ ಹತ್ತನೆಯ ಒಂದು ಭಾಗ ತರ್ಪಣ ಕೊಡುವುದರಿಂದಲೂ, ತರ್ಪಣದ ಹತ್ತನೆಯ ಒಂದು ಭಾಗ ಮಾರ್ಜನೆಮಾಡಿಕೊಳ್ಳುವುದರಿಂದಲೂ, ನೂರು ಸುವರ್ಣ ನಾಣ್ಯಗಳನ್ನು ಪುರಶ್ಚರಣ ದಕ್ಷಿಣೆಯಾಗಿ ಕೊಡುವುದರಿಂದಲೂ, ಈ ಮಂತ್ರ ಸಿದ್ಧಿಯನ್ನು ಪಡೆಯಬಹುದು.

೫. ಮಂತ್ರಸಿದ್ಧಿಯನ್ನು ಪಡೆದ ಪುರುಷನಿಗೆ ಪ್ರಪಂಚವು ಕರತಲಾಮಲಕವಾಗುವುದು. ಅವನು ಸಪ್ತಸಮುದ್ರಗಳನ್ನು ಪಾನಮಾಡುವುದಕ್ಕೂ, ನಿಖಿಲ ವಿಶ್ವವನ್ನು ಸಂಹರಿಸುವುದಕ್ಕೂ ಸಮರ್ಥನಾಗುವನು

ಪಾಂಚಭೌತಿಕದೇಹೇನ ವೈಕುಂಠಂ ಗಂತುಮೀಶ್ವರಃ ।
ತಸ್ಯ ಸಂಸ್ಪರ್ಶಮಾತ್ರೇಣ ಪದಪಂಕಜರೇಣುನಾ ।
ಪೂತಾನಿ ಸರ್ವತೀರ್ಥಾನಿ ಸದ್ಯಃ ಪೂತಾ ವಸುಂಧರಾ ॥ ೬ ॥

ಧ್ಯಾನಂ ಚ ಸಾಮವೇದೋಕ್ತಂ ಶೃಣು ಮನ್ಮುಖತೋ ಮುನೇ ।
ಸರ್ವೇಶ್ವರಸ್ಯ ಕೃಷ್ಣಸ್ಯ ಭಕ್ತಿಮುಕ್ತಿಪ್ರದಾಯಿ ಚ ॥ ೭ ॥

ನವೀನಜಲದಶ್ಯಾಮಂ ನೀಲೇಂದೀವರಲೋಚನಂ ।
ಶರತ್ಪಾರ್ವಣಚಂದ್ರಾಸ್ಯಮೀಷದ್ಧಾಸ್ಯಂ ಮನೋಹರಂ ॥ ೮ ॥

ಕೋಟಿಕಂದರ್ಪಲಾವಣ್ಯಲೀಲಾಧಾಮ ಮನೋಹರಂ ।
ರತ್ನಸಿಂಹಾಸನಸ್ಥಂ ತಂ ರತ್ನಭೂಷಣಭೂಷಿತಂ ॥ ೯ ॥

ಚಂದನೋಕ್ಷಿತಸರ್ವಾಂಗಂ ಪೀತಾಂಬರಧರಂ ವರಂ ।
ವೀಕ್ಷ್ಯಮಾಣಂ ಚ ಗೋಪೀಭಿಃ ಸಸ್ಮಿತಾಭಿಶ್ಚ ಸಂತತಂ ॥ ೧೦ ॥

---

೬. ಅವನು ಪಂಚಭೂತಾತ್ಮಕವಾದ ಈ ಶರೀರದಿಂದಲೇ ವೈಕುಂಠಕ್ಕೆ ಹೋಗಲು ಶಕ್ತನಾಗುವನು. ಅವನ ಮತ್ತು ಅವನ ಪದಕಮಲಧೂಳಿಯ ಸ್ಪರ್ಶಮಾತ್ರದಿಂದ ಸಕಲ ಪುಣ್ಯತೀರ್ಥಗಳೂ, ವಸುಂಧರೆಯೂ ಕೂಡ ಪವಿತ್ರ ವೆನಿಸುವುವು.

೭. ಎಲೈ ಮುನೀಶ್ವರನೇ, ಸಾಮವೇದೋಕ್ತವೂ, ಭಕ್ತಿಮುಕ್ತಿ ದಾಯಕವೂ ಆದ ಶ್ರೀ ಕೃಷ್ಣನ (ಸರ್ವೇಶ್ವರನಾದ) ಧ್ಯಾನಕ್ರಮವನ್ನು ನಾನು ಹೇಳುವೆನು. ಅವಧಾನದಿಂದ ಕೇಳು.

೮–೯. ನೀಲಮೇಘಶ್ಯಾಮನೂ, ಕನ್ನೈದಿಲೆಯಂತೆ ಕಣ್ಣುಳ್ಳವನೂ, ಶರತ್ಪೂರ್ಣಿಮಾಚಂದ್ರನಂತೆ ಮನೋಹರವಾದ ಸ್ಮಿತಮುಖವುಳ್ಳವನೂ, ಕೋಟಿ ಮನ್ಮಥರ ಲಾವಣ್ಯಕ್ಕೆ ಆಶ್ರಯನೂ, ಆಗಿ ರತ್ನಾಭರಣಗಳನ್ನು ತೊಟ್ಟು ರತ್ನ ಸಿಂಹಾಸನದಲ್ಲಿ ಕುಳಿತಿರುವ ಶ್ರೀಕೃಷ್ಣನನ್ನು ಭಜಿಸುವೆನು.

೧೦. ಸರ್ವಾಂಗಗಳಿಗೂ ಚಂದನಗಂಧವನ್ನು ಲೇಪಿಸಿಕೊಂಡು, ಪೀತಾಂಬರ ಧರನಾಗಿ, ಸ್ಮಿತಮುಖಿಯರಾದ ಗೋಪಿಯರ ಕಟಾಕ್ಷವೀಕ್ಷಣಕ್ಕೆ ಪಾತ್ರನಾದ ಪರಮಪುರುಷನನ್ನು ಭಜಿಸುವೆನು.

ಪ್ರಫುಲ್ಲಮಾಲತೀಮಾಲಾ ವನಮಾಲಾವಿಭೂಷಿತಂ ।
ದಧತಂ ಕುಂದಪುಷ್ಪಾಢ್ಯಾಂ ಚೂಡಾಂ ಚಂದ್ರಕಚರ್ಚಿತಾಂ ॥ ೧೧ ॥

ಪ್ರಭಾಂ ಕ್ಷಿಪಂತೀಂ ನಭಸಶ್ಚಂದ್ರತಾರಾನ್ವಿತಸ್ಯ ಚ ।
ರತ್ನಭೂಷಿತಸರ್ವಾಂಗಂ ರಾಧಾವಕ್ಷಃಸ್ಥಲಸ್ಥಿತಂ ॥ ೧೨ ॥

ಸಿದ್ಧೇಂದ್ರೈಶ್ಚ ಮುನೀಂದ್ರೈಶ್ಚ ದೇವೇಂದ್ರೈಃ ಪರಿಸೇವಿತಂ ।
ಬ್ರಹ್ಮವಿಷ್ಣುಮಹೇಶೈಶ್ಚ ಶ್ರುತಿಭಿಶ್ಚ ಸ್ತುತಂ ಭಜೇ ॥ ೧೩ ॥

ಧ್ಯಾನೇನಾನೇನ ತಂ ಧ್ಯಾತ್ವಾ ಚೋಪಚಾರಾಂಸ್ತು ಷೋಡಶ ।
ದತ್ವಾ ಭಕ್ತ್ಯಾ ಚ ಸಂಪೂಜ್ಯ ಸರ್ವಜ್ಞತ್ವಂ ಲಭೇತ್ಪುಮಾನ್ ॥ ೧೪ ॥

---

೧೧. ಚೆನ್ನಾಗಿ ಅರಳಿದ ಜಾಜೀಮಾಲೆಯನ್ನೂ, ತುಳಸೀವನಮಾಲೆಯನ್ನೂ, ಕಂಠದಲ್ಲಿ ಧರಿಸಿ, ನವಿಲುಗರಿಯ ಕಣ್ಣಿನಂತೆ ಮನೋಹರವಾದ, ಮೊಲ್ಲೆಹೂವಿನ ಗೊಂಚಲನ್ನು ಕೇಶಪಾಶದಲ್ಲಿ ಮುಡಿದಿರುವ ಮುಕುಂದನನ್ನು ಮುಕ್ತಿಗಾಗಿ ಭಜಿಸುವೆನು.

೧೨. ಧರಿಸಿರುವ ರತ್ನಾಭರಣಗಳ ಕಾಂತಿಯಿಂದ, ಚಂದ್ರ ಮತ್ತು ನಕ್ಷತ್ರಗಳಿಂದ ಪರಿಪೂರ್ಣವಾದ ಅಂತರಿಕ್ಷದ ಕಾಂತಿಯನ್ನು ಧಿಕ್ಕರಿಸುತ್ತ, ವಕ್ಷಃಸ್ಥಳದಲ್ಲಿ ರಾಧೆಯನ್ನು ಧರಿಸಿರುವ ರಾಧಾರಮಣನನ್ನು ಸ್ತುತಿಸುವೆನು.

೧೩. ಸಿದ್ಧರು, ಮುನಿಗಳು ಮತ್ತು ದೇವತೆಗಳಿಂದ ಸೇವಿತನಾಗಿ ಬ್ರಹ್ಮ ವಿಷ್ಣು ಮಹೇಶ್ವರರಿಂದಲೂ, ಚತುರ್ವೇದಗಳಿಂದಲೂ ಸ್ತುತನಾದ ಪರಮಾತ್ಮನನ್ನು ಭಜಿಸುವೆನು.

೧೪. ಈ ರೀತಿಯಾಗಿ ಶ್ರೀಕೃಷ್ಣನನ್ನು ಧ್ಯಾನಿಸಿ, ಷೋಡಶೋಪಚಾರಗಳನ್ನು ಭಕ್ತಿಯಿಂದ ಸಮರ್ಪಿಸಿ, ಪೂಜಿಸುವ ಪುರುಷನು ಸರ್ವಜ್ಞನಾಗುವುದರಲ್ಲಿ ಸಂಶಯವಿಲ್ಲ.

ಅರ್ಘ್ಯಂ ಪಾದ್ಯಂ ಚಾಸನಂ ಚ ವಸನಂ ಭೂಷಣಂ ತಥಾ ।
ಗಾಮರ್ಘ್ಯಂ ಮಧುಪರ್ಕಂ ಚ ಯಜ್ಞಸೂತ್ರಮನುತ್ತಮಂ ॥ ೧೫ ॥

ಧೂಪದೀಪೌ ಚ ನೈವೇದ್ಯಂ ಪುನರಾಚಮನೀಯಕಂ ।
ನಾನಾಪ್ರಕಾರಪುಷ್ಪಾಣಿ ತಾಂಬೂಲಂ ಚ ಸುವಾಸಿತಂ ॥ ೧೬ ॥

ಮನೋಹರಂ ದಿವ್ಯತಲ್ಪಂ ಕಸ್ತೂರ್ಯಗರುಚಂದನೈಃ ।
ಭಕ್ತ್ಯಾ ಭಗವತೇ ದೇಯಂ ಮಾಲ್ಯಂ ಪುಷ್ಪಾಂಜಲಿತ್ರಯಂ ॥ ೧೭ ॥

ತತಃ ಷಡಂಗಂ ಸಂಪೂಜ್ಯ ಪಶ್ಚಾತ್ಸಂಪೂಜಯೇದ್ಗಣಂ ।
ಶ್ರೀದಾಮಾನಂ ಸುದಾಮಾನಂ ವಸುದಾಮಾನಮೇವ ಚ ॥ ೧೮ ॥

ಹರಿಭಾನುಂ ಚಂದ್ರಭಾನುಂ ಸೂರ್ಯಭಾನುಂಸುಭಾನುಕಂ ।
ಪಾರ್ಷದಪ್ರವರಾನ್ಸಪ್ತ ಪೂಜಯೇದ್ಭಕ್ತಿಭಾವತಃ ॥ ೧೯ ॥

ಗೋಪೀಶ್ವರೀಂ ರಾಧಿಕಾಂ ಚ ಮೂಲಪ್ರಕೃತಿಮೀಶ್ವರೀಂ ।
ಕೃಷ್ಣಶಕ್ತಿಂ ಕೃಷ್ಣಪೂಜ್ಯಾಂ ಪೂಜಯೇದ್ಭಕ್ತಿಪೂರ್ವಕಂ ॥ ೨೦ ॥

೧೫-೧೭. ಆಸನವನ್ನೂ, ಅರ್ಘ್ಯಪಾದ್ಯಗಳನ್ನೂ, ಕ್ಷೀರಾಭಿಷೇಕವನ್ನೂ, ಮಧುಪರ್ಕವನ್ನೂ, ವಸ್ತ್ರ, ಉಪವೀತ ಮತ್ತು ಭೂಷಣಗಳನ್ನೂ, ಧೂಪ, ದೀಪ, ನೈವೇದ್ಯ ಮತ್ತು ಪುನರಾಚಮನಗಳನ್ನೂ, ನಾನಾ ವಿಧ ಪುಷ್ಪಗಳನ್ನೂ, ಕರ್ಪೂರಾದಿಗಳಿಂದ ಸುವಾಸಿತವಾದ ತಾಂಬೂಲವನ್ನೂ, ಕಸ್ತೂರಿ, ಅಗುರು, ಚಂದನಾದಿಗಳಿಂದ ಸುಸಂಸ್ಕೃತವಾದ ದಿವ್ಯಶಯನವನ್ನೂ, ಪುಷ್ಪಮಾಲೆಯನ್ನೂ ಭಕ್ತಿಯಿಂದ ಸಮರ್ಪಿಸಿ, ಮೂರು ಬೊಗಸೆ ಹೂವನ್ನೂ ಕಾಣಿಕೆಯಾಗಿ ಕೊಡಬೇಕು.

೧೮-೧೯. ಅನಂತರ ಗಣೇಶ ದಿನೇಶರನ್ನೂ, ವಹ್ನಿ ವಿಷ್ಣುಗಳನ್ನೂ, ಶಿವ ಪಾರ್ವತಿಯರನ್ನೂ ಪೂಜಿಸಿ, ಶ್ರೀದಾಮ, ಸುದಾಮ, ವಸುದಾಮ, ಹರಿಭಾನು, ಚಂದ್ರಭಾನು, ಸೂರ್ಯಭಾನು ಮತ್ತು ಸುಭಾನು ಎಂಬ ಏಳು ಜನ ಪಾರ್ಷದ ಶ್ರೇಷ್ಠರನ್ನೂ ಭಕ್ತಿಯಿಂದ ಪೂಜಿಸಬೇಕು.

೨೦. ಗೋಪೀಶ್ವರಿಯೂ, ಮೂಲಪ್ರಕೃತಿಯೂ, ಕೃಷ್ಣಶಕ್ತಿಸ್ವರೂಪಿಣಿಯೂ ಕೃಷ್ಣಪೂಜಿತಳೂ ಆದ ರಾಧಾದೇವಿಯನ್ನು ಅನಂತರ ಭಕ್ತಿಪೂರ್ವಕವಾಗಿ ಪೂಜಿಸಬೇಕು.

ಗೋಪಗೋಪೀಗಣಂ ಶಾಂತಂ ಮಾಂ ಬ್ರಹ್ಮಾಣಂ ಚ ಪಾರ್ವತೀಂ ।
ಲಕ್ಷ್ಮೀಂ ಸರಸ್ವತೀಂ ಪೃಥ್ವೀಂ ಸರ್ವದೇವಂ ಸಪಾರ್ಷದಂ ॥ ೨೦ ॥

ದೇವಷಟ್ಕಂ ಸಮಭ್ಯರ್ಚ್ಯ ಪುನಃ ಪಂಚೋಪಚಾರತಃ ।
ಪಶ್ಚಾದೇವಂ ಕ್ರಮೇಣೈವ ಶ್ರೀಕೃಷ್ಣಂ ಪೂಜಯೇತ್ಸುಧೀಃ ॥ ೨೨ ॥

ಗಣೇಶಂ ಚ ದಿನೇಶಂ ಚ ವಹ್ನಿಂ ವಿಷ್ಣುಂ ಶಿವಂ ಶಿವಾಂ ।
ದೇವಷಟ್ಕಂ ಸಮಭ್ಯರ್ಚ್ಯ ಚೇಷ್ಟದೇವಂ ಚ ಪೂಜಯೇತ್ ॥ ೨೩ ॥

ಗಣೇಶಂ ವಿಘ್ನನಾಶಾಯ ವ್ಯಾಧಿನಾಶಾಯ ಭಾಸ್ಕರಂ ।
ಆತ್ಮನಃ ಶುದ್ಧಯೇ ವಹ್ನಿಂ ಶ್ರೀ ವಿಷ್ಣುಂ ಮುಕ್ತಿಹೇತವೇ ॥ ೨೪ ॥

ಜ್ಞಾನಾಯ ಶಂಕರಂ ದುರ್ಗಾಂ ಪರಮೈಶ್ವರ್ಯಹೇತವೇ ।
ಸಂಪೂಜನೇ ಫಲಮಿದಂ ವಿಪರೀತಮಪೂಜನೇ ॥ ೨೫ ॥

೨೧–೨೨. ಗೋಪಗೋಪಿಯರ ಗುಂಪನ್ನೂ, ನನ್ನನ್ನೂ, ಬ್ರಹ್ಮನನ್ನೂ, ಪಾರ್ವತಿ, ಲಕ್ಷ್ಮಿ, ಸರಸ್ವತಿ ಮತ್ತು ಪೃಥ್ವೀದೇವಿಯರನ್ನೂ, ಸಕಲ ಪಾರ್ಷದರನ್ನೂ, ಪೂಜಿಸಿ, ಪುನಃ ಗಣೇಶನೇ ಮುಂತಾದ ಷಡ್ದೇವತೆಗಳನ್ನು ಪಂಚೋಪಚಾರದಿಂದ ಪೂಜಿಸಿ, ಇದೇ ರೀತಿಯಲ್ಲಿ ಪುನಃ ಶ್ರೀಕೃಷ್ಣನನ್ನು ಪೂಜಿಸಬೇಕು.

೨೩. ಯಾವಾಗಲೂ, ಗಣೇಶ, ದಿನೇಶ (ಸೂರ್ಯ) ವಹ್ನಿ (ಅಗ್ನಿ), ವಿಷ್ಣು, ಶಿವ, ಶಿವಾ (ಪಾರ್ವತಿ) ಈ ಆರು ದೇವತೆಗಳನ್ನೂ ಪೂಜಿಸಿ ಅನಂತರ ಇಷ್ಟದೇವತಾರಾಧನೆಯನ್ನು ಮಾಡಬೇಕು.

೨೪–೨೫. ವಿಘ್ನಪರಿಹಾರಕ್ಕಾಗಿ ಗಣೇಶನನ್ನೂ, ರೋಗನಾಶಕ್ಕಾಗಿ ಸೂರ್ಯದೇವನನ್ನೂ, ಆತ್ಮಶುದ್ಧಿಗಾಗಿ ಅಗ್ನಿಯನ್ನೂ, ಮುಕ್ತಿಗಾಗಿ ವಿಷ್ಣುವನ್ನೂ, ಜ್ಞಾನಕ್ಕಾಗಿ ಶಿವನನ್ನೂ, ಐಶ್ವರ್ಯಪ್ರಾಪ್ತಿಗಾಗಿ ಪಾರ್ವತಿಯನ್ನೂ ಪೂಜಿಸಬೇಕು. ಆ ದೇವತೆಗಳನ್ನು ಪೂಜಿಸಿದರೆ ಮೇಲ್ಕಂಡ ಫಲವೂ, ಪೂಜಿಸದಿದ್ದರೆ ಅದಕ್ಕೆ ವಿರುದ್ಧ ಫಲವೂ ಸಂಭವಿಸುವುದು.

ತತಃ ಕೃತ್ವಾ ಪರೀಹಾರಮಿಷ್ಟದೇವಂ ಚ ಭಕ್ತಿತಃ ।
ಸ್ತೋತ್ರಂ ಚ ಸಾಮವೇದೋಕ್ತಂ ಪಠೇದ್ಭಕ್ತ್ಯಾ ಚ ತಚ್ಛೃಣು ॥ ೨೬ ॥

॥ ಮಹಾದೇವ ಉವಾಚ ॥

ಪರಂ ಬ್ರಹ್ಮ ಪರಂಧಾಮ ಪರಂಜ್ಯೋತಿಃ ಸನಾತನಂ ।
ನಿರ್ಲಿಪ್ತಂ ಪರಮಾತ್ಮಾನಂ ನಮಾಮ್ಯಖಿಲಕಾರಣಂ ॥ ೨೭ ॥

ಸ್ಥೂಲಾತ್ಸ್ಥೂಲತಮಂ ದೇವಂ ಸೂಕ್ಷ್ಮಾತ್ಸೂಕ್ಷ್ಮತರಂ ಪರಂ ।
ಸರ್ವದೃಶ್ಯಮದೃಶ್ಯಂ ಚ ಸ್ವೇಚ್ಛಾಚಾರಂ ನಮಾಮ್ಯಹಂ ॥ ೨೮ ॥

ಸಾಕಾರಂ ಚ ನಿರಾಕಾರಂ ಸಗುಣಂ ನಿರ್ಗುಣಂ ಪ್ರಭುಂ ।
ಸರ್ವಾಧಾರಂ ಚ ಸರ್ವಂ ಚ ಸ್ವೇಚ್ಛಾರೂಪಂ ನಮಾಮ್ಯಹಂ ॥ ೨೯ ॥

---

೨೬. ಅನಂತರ ಇಷ್ಟದೇವತೆಗೆ ಭಕ್ತಿರೂಪವಾದ ಕಾಣಿಕೆಯನ್ನು ಸಮರ್ಪಿಸಿ, ಸಾಮವೇದೋಕ್ತವಾದ ಈ ಮುಂದಿನ ಸ್ತೋತ್ರವನ್ನು ಭಕ್ತಿಯಿಂದ ಪಠಿಸಬೇಕು.

೨೭. ಮಹಾದೇವ :—ಪರಂಧಾಮನೂ, ಪರಂಜ್ಯೋತಿಃಸ್ವರೂಪನೂ, ಅನಾದಿಯೂ, ಅಖಿಲಕಾರಣನೂ, ನಿರ್ಲಿಪ್ತನೂ ಆದ ಪರಮಾತ್ಮನಿಗೆ ನಮಸ್ಕರಿಸುವೆನು.

೨೮ ಸ್ವೇಚ್ಛಾಮಾತ್ರ ಪ್ರಭುವಾದುದರಿಂದ ಸ್ಥೂಲಕ್ಕಿಂತ ಸ್ಥೂಲನೂ, ಸೂಕ್ಷ್ಮಕ್ಕಿಂತ ಸೂಕ್ಷ್ಮನೂ ಆಗಿ ಸಕಲರ ದೃಷ್ಟಿಗೋಚರನೂ, ಅಗೋಚರನೂ ಆಗಬಲ್ಲ ಪರಬ್ರಹ್ಮನಿಗೆ ನಮಿಸುವೆನು.

೨೯. ಸ್ವೇಚ್ಛಾರೂಪನಾದುದರಿಂದ ಸಾಕಾರನೂ, ನಿರಾಕಾರನೂ, ಸಗುಣನೂ, ನಿರ್ಗುಣನೂ, ಸರ್ವಾಧಾರನೂ, ಸರ್ವಸ್ವರೂಪನೂ, ಆದ ಸರ್ವೇಶ್ವರನಿಗೆ ನಮಿಸುವೆನು.

ಅತೀವ ಕಮನೀಯಂ ಚ ರೂಪಂ ನಿರುಪಮಂ ವಿಭುಂ ।
ಕರಾಲರೂಪಮತ್ಯಂತಂ ಬಿಭ್ರತಂ ಪ್ರಣಮಾಮ್ಯಹಂ ॥ ೩೦ ॥

ಕರ್ಮಣಃ ಕರ್ಮರೂಪಂ ತಂ ಸಾಕ್ಷಿಣಂ ಸರ್ವಕರ್ಮಣಃ ।
ಫಲಂ ಚ ಫಲದಾತಾರಂ ಸರ್ವರೂಪಂ ಮನೋಹರಂ ॥ ೩೧ ॥

ಸ್ರಷ್ಟಾ ಪಾತಾ ಚ ಸಂಹರ್ತಾ ಕಲಯಾ ಮೂರ್ತಿಭೇದತಃ ।
ನಾನಾಮೂರ್ತಿಃ ಕಲಾಂಶೇನ ಯಃ ಪುಮಾಂಸ್ತಂ ನಮಾಮ್ಯಹಂ ॥ ೩೨ ॥

ಸ್ವಯಂ ಪ್ರಕೃತಿರೂಪಶ್ಚ ಮಾಯಯಾ ಚ ಸ್ವಯಂ ಪುಮಾನ್ ।
ತಯೋಃ ಪರಂ ಸ್ವಯಂ ಶಶ್ವತ್ತನ್ನಮಾಮಿ ಪರಾತ್ಪರಂ ॥ ೩೩ ॥

ಸ್ತ್ರೀಪುಂನ್ನಪುಂಸಕಂ ರೂಪಂ ಯೋ ಬಿಭರ್ತಿ ಸ್ವಮಾಯಯಾ ।
ಸ್ವಯಂ ಮಾಯಾ ಸ್ವಯಂ ಮಾಯೀ ಯೋ ದೇವಸ್ತಂ ನಮಾಮ್ಯಹಂ ೩೪

---

೩೦. ವಿಶ್ವವ್ಯಾಪಕನಾದುದರಿಂದ, ಒಮ್ಮೆ ನಿರುಪಮವಾದ ಸುಂದರ ರೂಪವನ್ನೂ, ಮತ್ತೊಮ್ಮೆ ಅತ್ಯಂತ ಭಯಂಕರಾಕಾರವನ್ನೂ ಧರಿಸಿರುವ ಪರಮಾತ್ಮನಿಗೆ ನಮಸ್ಕರಿಸುವೆನು.

೩೧. ಕರ್ಮಗಳಿಗೆ ಕರ್ಮಸ್ವರೂಪನೂ, ಸಕಲ ಕರ್ಮಗಳ ಸಾಕ್ಷಿರೂಪನೂ, ಕರ್ಮಫಲಸ್ವರೂಪನೂ, ಕರ್ಮಫಲದಾಯಕನೂ, ಆದ ಸರ್ವಾತ್ಮನಿಗೆ ಇದೋ ನಮಿಸುವೆನು.

೩೨. ಯಾವ ಪರಮಾತ್ಮನು ತನ್ನ ಕಲಾಭೇದದಿಂದ ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣನಾಗುವನೋ, ಯಾರು ತನ್ನ ಕಲಾಂಶದಿಂದ ನಾನಾಮೂರ್ತಿಗಳನ್ನು ಪಡೆಯುವನೋ ಆ ಪರಮಪುರುಷನಿಗೆ ಇದೋ ನನ್ನ ವಂದನೆಗಳು.

೩೩. ಯಾರು ತನ್ನ ಮಾಯಾಮಹಿಮೆಯಿಂದ ತಾನೇ ಪ್ರಕೃತಿ ಮತ್ತು ಪುರುಷರೂಪವನ್ನು ಧರಿಸಿದ್ದರೂ, ಮಾಯೆಗೆ ಸಿಲುಕದೆ, ರೂಪರಹಿತನಾಗಿರುವನೋ ಆ ಪರಾತ್ಪರನನ್ನು ನಮಸ್ಕರಿಸುವೆನು.

೩೪. ಯಾರು ತನ್ನ ಮಾಯಾಶಕ್ತಿಯಿಂದ, ಸ್ತ್ರೀಪುಂನಪುಂಸಕರೂಪಗಳನ್ನು ಧರಿಸುವುದಲ್ಲದೆ, ತಾನೇ ಮಾಯಾಸ್ವರೂಪನೂ ಮಾಯೆಗೆ ಆಶ್ರಯನೂ ಆಗಿರುವನೋ ಆ ಮಾಯಾಮಯನನ್ನು ವಂದಿಸುವೆನು.

ತಾರಕಂ ಸರ್ವದುಃಖಾನಾಂ ಸರ್ವಕಾರಣಕಾರಣಂ ।
ಧಾರಕಂ ಸರ್ವವಿಶ್ವಾನಾಂ ಸರ್ವಬೀಜಂ ನಮಾಮ್ಯಹಂ ॥ ೩೫ ॥

ತೇಜಸ್ವಿನಾಂ ರವಿರ್ಯೋ ಹಿ ಸರ್ವಜಾತಿಷು ವಾಡವಃ ।
ನಕ್ಷತ್ರಾಣಾಂ ಚ ಯಶ್ಚಂದ್ರಸ್ತಂ ನಮಾಮಿ ಜಗತ್ಪ್ರಭುಂ ॥ ೩೬ ॥

ರುದ್ರಾಣಾಂ ವೈಷ್ಣವಾನಾಂ ಚ ಜ್ಞಾನಿನಾಂ ಯೋ ಹಿ ಶಂಕರಃ ।
ನಾಗಾನಾಂ ಯೋ ಹಿ ಶೇಷಶ್ಚ ತಂ ನಮಾಮಿ ಜಗತ್ಪತಿಂ ॥ ೩೭ ॥

ಪ್ರಜಾಪತೀನಾಂ ಯೋ ಬ್ರಹ್ಮಾ ಸಿದ್ಧಾನಾಂ ಕಪಿಲಃ ಸ್ವಯಂ ।
ಸನತ್ಕುಮಾರೋ ಮುನಿಷು ತಂ ನಮಾಮಿ ಜಗದ್ಗುರುಂ ॥ ೩೮ ॥

---

೩೫. ಸಕಲ ದುಃಖನಿವಾರಕನೂ, ಕಾರಣಗಳಿಗೆಲ್ಲ ಆದಿಕಾರಣನೂ, ಸಕಲ ವಿಶ್ವಾಧಾರನೂ, ಆದ ಆದಿಮೂರುತಿಗೆ ಇದೋ ನನ್ನ ನಮಸ್ಕಾರಗಳು.

೩೬. ತೇಜಸ್ವಿಗಳಲ್ಲಿ ಸೂರ್ಯನಂತೆಯೂ, ಜಾತಿಗಳಲ್ಲಿ ಬ್ರಾಹ್ಮಣನಂತೆಯೂ, ನಕ್ಷತ್ರಗಳಲ್ಲಿ ಚಂದ್ರನಂತೆಯೂ, ದೇವತೆಗಳಲ್ಲಿ ಶ್ರೇಷ್ಠನಾದ ಜಗತ್ಪ್ರಭುವನ್ನು ವಂದಿಸುವೆನು.

೩೭. ರುದ್ರರು, ವಿಷ್ಣುಭಕ್ತರು ಮತ್ತು ಜ್ಞಾನಿಗಳಲ್ಲಿ ಶಂಕರನು ಹೇಗೋ ಸರ್ಪಗಳಲ್ಲಿ ಆದಿಶೇಷನು ಹೇಗೋ ಹಾಗೆ ಜಗತ್ತಿಗೆಲ್ಲ ಶ್ರೇಷ್ಠನಾದ ಜಗತ್ಪತಿಗೆ ಇದೋ ನನ್ನ ನಮಸ್ಕಾರಗಳು.

೩೮. ಪ್ರಜಾಪತಿಗಳಲ್ಲಿ ಬ್ರಹ್ಮನೂ, ಸಿದ್ಧರಲ್ಲಿ ಕಪಿಲನೂ, ಮುನಿಗಳಲ್ಲಿ ಸನತ್ಕುಮಾರನೂ ಗಣ್ಯನಾಗಿರುವಂತೆ ಜಗತ್ತಿಗೇ ಗಣ್ಯನಾದ ಜಗದ್ಗುರುವಿಗೆ ವಂದಿಸುವೆನು.

ಟಿಪ್ಪಣಿ—೩೬ನೇ ಶ್ಲೋಕದಿಂದ ೫೮ನೇ ಶ್ಲೋಕ ಪೂರ್ತಿ "ಯದ್ಯದ್ವಿಭೂತಿಮತ್ಸತ್ವಂ ಶ್ರೀಮದೂರ್ಜಿತಮೇವ ವಾ ತತ್ತದೇವಾವಗಚ್ಛ ತ್ವಂ ಮಮ ತೇಜೋಽಂಶ ಸಂಭವಂ ॥" ಎಂಬ ಭಗವದ್ಗೀತಾ ಶ್ಲೋಕದ ತಾತ್ಪರ್ಯವು ನಿಬದ್ಧವಾಗಿರುವುದು.

ದೇವಾನಾಂ ಯೋಹಿ ವಿಷ್ಣುಶ್ಚ ದೇವೀನಾಂ ಪ್ರಕೃತಿಃ ಸ್ವಯಂ।
ಸ್ವಾಯಂಭುವೋ ಮನೂನಾಂ ಯೋ ಮಾನವೇಷು ಚ ವೈಷ್ಣವಃ ॥
ನಾರೀಣಾಂ ಶತರೂಪಾ ಚ ಬಹುರೂಪಂ ನಮಾಮ್ಯಹಂ ॥ ೩೯ ॥

ಋತೂನಾಂ ಯೋ ವಸಂತಶ್ಚ ಮಾಸಾನಾಂ ಮಾರ್ಗಶೀರ್ಷಕಃ।
ಏಕಾದಶೀ ತಿಥೀನಾಂ ಚ ನಮಾಮ್ಯಖಿಲರೂಪಿಣಂ ॥ ೪೦ ॥

ಸಾಗರಃ ಸರಿತಾಂ ಯಶ್ಚ ಪರ್ವತಾನಾಂ ಹಿಮಾಲಯಃ।
ವಸುಂಧರಾ ಸಹಿಷ್ಣೂನಾಂ ತಂ ಸರ್ವಂ ಪ್ರಾಣಮಾಮ್ಯಹಂ ॥ ೪೧ ॥

ಪತ್ರಾಣಾಂ ತುಲಸೀಪತ್ರಂ ದಾರುರೂಪೇಷು ಚಂದನಂ।
ವೃಕ್ಷಣಾಂ ಕಲ್ಪವೃಕ್ಷೋಯಸ್ತಂ ನಮಾಮಿ ಜಗತ್ಪತಿಂ ॥ ೪೨ ॥

---

೩೯. ದೇವತೆಗಳಲ್ಲಿ ವಿಷ್ಣುವೂ, ದೇವಿಯರಲ್ಲಿ ಪ್ರಕೃತಿಯೂ, ಮನುಗಳಲ್ಲಿ ಸ್ವಾಯಂಭುವನೂ, ಮನುಜರಲ್ಲಿ ವಿಷ್ಣುಭಕ್ತನೂ, ಸ್ತ್ರೀಯರಲ್ಲಿ ಶತರೂಪೆಯೂ ಪ್ರಖ್ಯಾತವಾಗಿರುವಂತೆ, ನಾನಾ ರೂಪಧಾರಿಯೆಂದು ಪ್ರಖ್ಯಾತಿಗೊಂಡ ಪರಮಾತ್ಮನಿಗೆ ನಮಿಸುವೆನು.

೪೦. ವಸಂತವು ಋತುಗಳಲ್ಲಿಯೂ, ಮಾರ್ಗಶೀರ್ಷವು ಮಾಸಗಳಲ್ಲಿಯೂ. ಏಕಾದಶಿಯು ತಿಥಿಗಳಲ್ಲಿಯೂ, ಪ್ರಸಿದ್ಧವಾಗಿರುವಂತೆ ಬಹುರೂಪದಿಂದ ಪ್ರಸಿದ್ಧನಾದ ಪರಮಾತ್ಮನನ್ನು ವಂದಿಸುವೆನು.

೪೧. ಯಾರು ಹೊಳೆಗಳಿಗೆಲ್ಲ ಸಮುದ್ರರೂಪನೂ, ಪರ್ವತಗಳಿಗೆಲ್ಲ ಹಿಮಾಲಯರೂಪನೂ, ಸಹನಾವಂತರಲ್ಲಿ ವಸುಂಧರಾರೂಪನೂ ಆಗಿರುವನೋ ಸರ್ವಾತ್ಮಕನಾದ ಆ ಪರಮಾತ್ಮನನ್ನು ನಮಸ್ಕರಿಸುವೆನು.

೪೨. ಪತ್ರಗಳಲ್ಲಿ ತುಳಸಿಯೂ, ಮರಗಳಲ್ಲಿ, ಚಂದನವೂ, ವೃಕ್ಷಗಳಲ್ಲಿ ಕಲ್ಪವೃಕ್ಷವೂ ಯಾರ ಅಂಶಾತ್ಮಕವೋ ಆ ಜಗದೊಡೆಯನಿಗೆ ಇದೋ ನನ್ನ ಅನಂತ ವಂದನೆಗಳು.

ಪುಷ್ಪಾಣಾಂ ಪಾರಿಜಾತಶ್ಚ ಸಸ್ಯಾನಾಂ ಧಾನ್ಯಮೇವ ಚ ।
ಅಮೃತಂ ಭಕ್ಷ್ಯವಸ್ತೂನಾಂ ನಾನಾರೂಪಂ ನಮಾಮ್ಯಹಂ ॥ ೪೩ ॥

ಐರಾವತೋ ಗಜೇಂದ್ರಾಣಾಂ ವೈನತೇಯಶ್ಚ ಪಕ್ಷಿಣಾಂ ।
ಕಾಮಧೇನುಶ್ಚ ಧೇನೂನಾಂ ಸರ್ವರೂಪಂ ನಮಾಮ್ಯಹಂ ॥ ೪೪ ॥

ತೈಜಸಾನಾಂ ಸುವರ್ಣಂ ಚ ಧಾನ್ಯಾನಾಂ ಯವ ಏವ ಚ ।
ಯಃ ಕೇಸರೀ ಪಶೂನಾಂ ಚ ವರರೂಪಂ ನಮಾಮ್ಯಹಂ ॥ ೪೫ ॥

ಯಕ್ಷಾಣಾಂ ಚ ಕುಬೇರೋ ಯೋ ಗ್ರಹಾಣಾಂ ಚ ಬೃಹಸ್ಪತಿಃ ।
ದಿಕ್ಪಾಲಾನಾಂ ಮಹೇಂದ್ರಶ್ಚ ತಂ ನಮಾಮಿ ಪರಂ ವರಂ ॥ ೪೬ ॥

ವೇದಸಂಘಶ್ಚ ಶಾಸ್ತ್ರಾಣಾಂ ಪಂಡಿತಾನಾಂ ಸರಸ್ವತೀ ।
ಅಕ್ಷರಾಣಾಮಕಾರೋ ಯಸ್ತಂ ಪ್ರಧಾನಂ ನಮಾಮ್ಯಹಂ ॥ ೪೭ ॥

---

೪೩. ಪುಷ್ಪಗಳಲ್ಲಿ ಪಾರಿಜಾತರೂಪನೂ ಸಸ್ಯಗಳಿಗೆ ಧಾನ್ಯಸ್ವರೂಪನೂ, ಭಕ್ಷ್ಯಪದಾರ್ಥಗಳಲ್ಲಿ ಅಮೃತಸ್ವರೂಪನೂ ಆದ ನಾನಾರೂಪಧಾರಿಗೆ ಇದೋ ನನ್ನ ನಮಸ್ಕಾರಗಳು.

೪೪. ಆನೆಗಳೆಲ್ಲೆಲ್ಲ ಐರಾವತವೂ, ಪಕ್ಷಿಗಳಲ್ಲಿ ಗರುಡನೂ, ಹಸುಗಳಲ್ಲಿ ಕಾಮಧೇನುವೂ, ಯಾರ ತೇಜಸ್ಸಿನ ಅಂಶಗಳೋ ಆ ತೇಜೋಮಯನನ್ನು ವಂದಿಸುವೆನು.

೪೫. ತೈಜಸ ವಸ್ತುಗಳಲ್ಲಿ ಸುವರ್ಣವೂ, ಧಾನ್ಯಗಳಲ್ಲಿ ಅಕ್ಕಿ (ಗೋಧಿ)ಯೂ, ಪ್ರಾಣಿಗಳಲ್ಲಿ ಸಿಂಹವೂ ಯಾರ ಅಂಶದಿಂದ ಜನಿಸಿರುವುವೋ ಆ ವರರೂಪನನ್ನು ನಮಸ್ಕರಿಸುವೆನು.

೪೬. ಯಾರು ಯಕ್ಷರಿಗೆ ಕುಬೇರನೂ, ಗ್ರಹಗಳಿಗೆ ಬೃಹಸ್ಪತಿಯೂ, ದಿಕ್ಪಾಲಕರಿಗೆ ಮಹೇಂದ್ರನೂ ಆಗಿರುವನೋ ಆ ಪರಮಪುರುಷನಿಗೆ ವಂದಿಸುವೆನು.

೪೭. ಶಾಸ್ತ್ರಗಳಿಗೆ ಚತುರ್ವೇದಸ್ವರೂಪನೂ, ಪಂಡಿತರಿಗೆ ಸರಸ್ವತೀರೂಪನೂ, ಅಕ್ಷರಗಳಿಗೆ ಅಕಾರರೂಪನೂ ಆದ ಆ ಪ್ರಧಾನಪುರುಷನನ್ನು ನಮಸ್ಕರಿಸುವೆನು.

ಮಂತ್ರಾಣಾಂ ವಿಷ್ಣುಮಂತ್ರಶ್ಚ ತೀರ್ಥಾನಾಂ ಜಾಹ್ನವೀ ಸ್ವಯಂ ।
ಇಂದ್ರಿಯಾಣಾಂ ಮನೋ ಯೋಹಿ ಸರ್ವಶ್ರೇಷ್ಠಂ ನಮಾಮ್ಯಹಂ ॥ ೪೮ ॥

ಸುದರ್ಶನಂ ಚ ಶಸ್ತ್ರಾಣಾಂ ವ್ಯಾಧೀನಾಂ ವೈಷ್ಣವೋ ಜ್ವರಃ ।
ತೇಜಸಾಂ ಬ್ರಹ್ಮತೇಜಶ್ಚ ವರೇಣ್ಯಂ ತಂ ನಮಾಮ್ಯಹಂ ॥ ೪೯ ॥

ಬಲಂ ಯೋ ವೈ ಬಲವತಾಂ ಮನೋ ವೈ ಶೀಘ್ರಗಾಮಿನಾಂ ।
ಕಾಲಃ ಕಲಯತಾಂ ಯೋ ಹಿ ತಂ ನಮಾಮಿ ವಿಲಕ್ಷಣಂ ॥ ೫೦ ॥

ಜ್ಞಾನದಾತಾ ಗುರೂಣಾಂ ಚ ಮಾತೃರೂಪಶ್ಚ ಬಂಧುಷು ।
ಮಿತ್ರೇಷು ಜನ್ಮದಾತಾ ಯಸ್ತಂ ಸಾರಂ ಪ್ರಣಮಾಮ್ಯಹಂ ॥ ೫೧ ॥

ಶಿಲ್ಪಿನಾಂ ವಿಶ್ವಕರ್ಮಾ ಯಃ ಕಾಮದೇವಶ್ಚ ರೂಪಿಣಾಂ ।
ಪತಿವ್ರತಾ ಚ ಪತ್ನೀನಾಂ ನಮಸ್ಯಂ ತಂ ನಮಾಮ್ಯಹಂ ॥ ೫೨ ॥

---

೪೮. ಯಾರು ಮಂತ್ರಗಳಲ್ಲಿ ವಿಷ್ಣುಮಂತ್ರಸ್ವರೂಪನೂ, ತೀರ್ಥಗಳಲ್ಲಿ ಜಾಹ್ನವೀರೂಪನೂ. ಇಂದ್ರಿಯಗಳಲ್ಲಿ ಮನಃಸ್ವರೂಪನೂ ಆಗಿರುವನೋ ಸರ್ವ ಶ್ರೇಷ್ಠನಾದ ಆತನನ್ನು ವಂದಿಸುವೆನು.

೪೯. ಆಯುಧಗಳಲ್ಲಿ ಸುದರ್ಶನವೂ, ಜ್ವರಗಳಲ್ಲಿ ವೈಷ್ಣವಜ್ವರವೂ, ತೇಜಸ್ಸಿನಲ್ಲಿ ಬ್ರಹ್ಮತೇಜಸ್ಸೂ ಯಾವ ಪರಮಾತ್ಮನ ಅಂಶವೋ, ಆ ಸರ್ವಶ್ರೇಷ್ಠನನ್ನು ನಮಿಸುವೆನು.

೫೦. ಬಲಿಷ್ಠರಿಗೆ ಬಲಸ್ವರೂಪನೂ, ವೇಗಗಾಮಿಗಳಿಗೆ ಮನೋರೂಪನೂ, ಗಣಕರಿಗೆ ಕಾಲಸ್ವರೂಪನೂ ಆದ ವಿಲಕ್ಷಣರೂಪನನ್ನು ನಮಿಸುವೆನು.

೫೧. ಗುರುಗಳಿಗೆಲ್ಲ ಜ್ಞಾನದಾತೃವೂ, ಬಂಧುಗಳಲ್ಲಿ ಮಾತೃಸ್ವರೂಪನೂ, ಆಪ್ತರಲ್ಲಿ ಪಿತೃಸ್ವರೂಪನೂ, ಆದ ಸಾರರೂಪನಿಗೆ ಅನಂತ ವಂದನೆಗಳು.

೫೨. ಶಿಲ್ಪಿಗಳಲ್ಲಿ ವಿಶ್ವಕರ್ಮನೂ, ಸುರೂಪಿಗಳಲ್ಲಿ ಮನ್ಮಥನೂ, ಸ್ತ್ರೀಯರಲ್ಲಿ ಪತಿವ್ರತೆಯೂ ಯಾರ ಅಂಶದಿಂದ ಜನಿಸುವರೋ ಆ ಪರಮಾತ್ಮನಿಗೆ ವಂದಿಸುವೆನು.

ಪ್ರಿಯೇಷು ಪುತ್ರರೂಪೋ ಯೋ ನೃಪರೂಪೋ ನರೇಷು ಚ ।
ಶಾಲಗ್ರಾಮಶ್ಚ ಯಂತ್ರಾಣಾಂ ತಂ ವಿಶಿಷ್ಟಂ ನಮಾಮ್ಯಹಂ ॥ ೫೩ ॥

ಧರ್ಮಃ ಕಲ್ಯಾಣಬೀಜಾನಾಂ ವೇದಾನಾಂ ಸಾಮವೇದಕಃ ।
ಧರ್ಮಾಣಾಂ ಸತ್ಯರೂಪೋ ಯೋ ವಿಶಿಷ್ಟಂ ತಂ ನಮಾಮ್ಯಹಂ ॥ ೫೪ ॥

ಜಲೇ ಶೈತ್ಯಸ್ವರೂಪೋ ಯೋ ಗಂಧರೂಪಶ್ಚ ಭೂಮಿಷು ।
ಶಬ್ದರೂಪಶ್ಚ ಗಗನೇ ತಂ ಪ್ರಣಮ್ಯಂ ನಮಾಮ್ಯಹಂ ॥ ೫೫ ॥

ಕ್ರತೂನಾಂ ರಾಜಸೂಯೋ ಯೋ ಗಾಯತ್ರೀ ಛಂದಸಾಂ ಚ ಯಃ ।
ಗಂಧರ್ವಾಣಾಂ ಚಿತ್ರರಥಸ್ತಂ ಗರಿಷ್ಠಂ ನಮಾಮ್ಯಹಂ ॥ ೫೬ ॥

ಕ್ಷೀರಸ್ವರೂಪೋ ಗವ್ಯಾನಾಂ ಪವಿತ್ರಾಣಾಂ ಚ ಪಾವಕಃ ।
ಪುಣ್ಯದಾನಾಂ ಚ ಯಸ್ತೋತ್ರಂ ತಂ ನಮಾಮಿ ಶುಭಪ್ರದಂ ॥ ೫೭ ॥

---

೫೩. ಪ್ರೀತಿಪಾತ್ರರಲ್ಲಿ ಪುತ್ರರೂಪನಾಗಿಯೂ, ಮನುಷ್ಯರಲ್ಲಿ ರಾಜರೂಪನಾಗಿಯೂ, ಯಂತ್ರಗಳಲ್ಲಿ ಶಾಲಗ್ರಾಮರೂಪನಾಗಿಯೂ ಇರುವ ವಿಶಿಷ್ಟರೂಪಧಾರಿಯಾದ ಪರಮಾತ್ಮನಿಗೆ ವಂದಿಸುವೆನು.

೫೪. ಕಲ್ಯಾಣಕರಗಳಲ್ಲಿ ಧರ್ಮವೂ, ವೇದಗಳಲ್ಲಿ ಸಾಮವೇದವೂ, ಧರ್ಮಗಳಲ್ಲಿ ಸತ್ಯವೂ ಯಾರ ಅಂಶವೋ, ಆ ವಿರಾಡ್ರೂಪನನ್ನು ವಂದಿಸುವೆನು.

೫೫. ಯಾರು ನೀರಿನಲ್ಲಿ ಶೈತ್ಯಸ್ವರೂಪನಾಗಿಯೂ, ಭೂಮಿಯಲ್ಲಿ ಗಂಧರೂಪನಾಗಿಯೂ, ಆಕಾಶದಲ್ಲಿ ಶಬ್ದರೂಪನಾಗಿಯೂ, ವ್ಯಾಪಿಸಿರುವನೋ ಆ ಸರ್ವವ್ಯಾಪಕನಿಗೆ ಇದೋ ನಮಸ್ಕಾರಗಳು.

೫೬. ಯಾಗಗಳಲ್ಲಿ ರಾಜಸೂಯವೂ, ಛಂದಸ್ಸಿನಲ್ಲಿ ಗಾಯತ್ರಿಯೂ, ಗಂಧರ್ವರಲ್ಲಿ ಚಿತ್ರರಥನೂ, ಯಾರ ಅಂಶಸಂಭವರೋ ಆ ಸರ್ವಶ್ರೇಷ್ಠನಿಗೆ ನಾನು ನಮಿಸುವೆನು.

೫೭. ಹಾಲು ಪಂಚಗವ್ಯಗಳಲ್ಲಿಯೂ, ಅಗ್ನಿಯು ಪವಿತ್ರವಾದವುಗಳಲ್ಲಿಯೂ, ಸ್ತೋತ್ರವು ಪುಣ್ಯದಾಯಕಗಳಲ್ಲಿಯೂ, ಯಾರ ಅಂಶದಿಂದ ಶ್ರೇಷ್ಠವೆನಿಸಿರುವುದೋ ಆ ಮಂಗಳರೂಪನಿಗೆ ವಂದಿಸುವೆನು.

ತೃಣಾನಾಂ ಕುಶರೂಪೋ ಯೋ ವ್ಯಾಧಿರೂಪಶ್ಚ ವೈರಿಣಾಂ ।
ಗುಣಾನಾಂ ಶಾಂತರೂಪೋ ಯಶ್ಚಿತ್ರರೂಪಂ ನಮಾಮ್ಯಹಂ ॥ ೫೮ ॥

ತೇಜೋರೂಪೋ ಜ್ಞಾನರೂಪಃ ಸರ್ವರೂಪಶ್ಚ ಯೋ ಮಹಾನ್ ।
ಸರ್ವಾನಿರ್ವಚನೀಯಂ ಚ ತಂ ನಮಾಮಿ ಸ್ವಯಂ ವಿಭುಂ ॥ ೫೯ ॥

ಸರ್ವಾಧಾರೇಷು ಯೋ ವಾಯುರ್ಯಥಾತ್ಮಾ ನಿತ್ಯರೂಪಿಣಾಂ ।
ಆಕಾಶೋ ವ್ಯಾಪಕಾನಾಂ ಯೋ ವ್ಯಾಪಕಂ ತು ನಮಾಮ್ಯಹಂ ॥ ೬೦ ॥

ವೇದಾನಿರ್ವಚನೀಯಂ ಯನ್ನಸ್ತೋತುಂ ಪಂಡಿತಃ ಕ್ಷಮಃ ।
ಯದನಿರ್ವಚನೀಯಂ ಚ ಕೋವಾ ತತ್ಸ್ತೋತುಮೀಶ್ವರಃ ॥ ೬೧ ॥

---

೫೮. ಯಾರು ಹುಲ್ಲುಗಳಲ್ಲಿ ದರ್ಭೆಯ ರೂಪದಿಂದಲೂ, ಶತ್ರುಗಳಲ್ಲಿ ವ್ಯಾಧಿ ರೂಪದಿಂದಲೂ, ಗುಣಗಳಲ್ಲಿ ಶಾಂತರೂಪದಿಂದಲೂ, ಪ್ರಖ್ಯಾತನಾಗಿರುವನೋ ಆ ಚಿತ್ರರೂಪನಿಗೆ ಇದೋ ನಮಿಸುವೆನು.

೫೯. ತೇಜಸ್ಸು, ಜ್ಞಾನ ಮುಂತಾದ ಸಕಲರೂಪಗಳಿಂದ ಮಹಾತ್ಮನೆನಿಸಿ, 'ಇದಮಿತ್ಥಂ' ಎಂಬ ನಿಷ್ಕರ್ಷೆಗೆ ಸಿಲುಕದಿರುವ ಆ ವಿಶ್ವವ್ಯಾಪಕನಿಗೆ ಇದೋ ವಂದನೆಗಳು.

೬೦. ಆಧಾರಗಳಲ್ಲಿ ವಾಯುವೂ, ನಿತ್ಯರೂಪಿಗಳಲ್ಲಿ ಆತ್ಮನೂ, ವ್ಯಾಪಕ ವಾದವುಗಳಲ್ಲಿ ಆಕಾಶವೂ, ಯಾವ ಪರಮಾತ್ಮನ ಅಂಶವಾಗಿರುವುವೋ ಅವನಿಗೆ ಅನಂತ ನಮಸ್ಕಾರಗಳು.

೬೧. ವೇದಗಳೇ ವರ್ಣಿಸಲಾಗದಿರುವ ಆ ಪರಮಾತ್ಮನನ್ನು ಪಂಡಿತನು ಸ್ತುತಿಸಲಾರನು. 'ಇದಮಿತ್ಥಂ' ಎಂದು ನಿಷ್ಕರ್ಷೆಯಿಲ್ಲದ ಪರಮಾತ್ಮನನ್ನು ಯಾರುತಾನೆ ಸ್ತುತಿಸಿಯಾರು ?

ವೇದಾ ನ ಶಕ್ತಾ ಯಂ ಸ್ತೋತುಂ ಜಡೀಭೂತಾ ಸರಸ್ವತೀ ।
ತಂ ಚ ವಾಙ್ಮನಸಾಃಪಾರಂ ಕೋ ವಿದ್ವಾನ್ಸ್ತೋತುಮೀಶ್ವರಃ ॥ ೬೨ ॥

ಶುದ್ಧತೇಜಸ್ಸ್ವರೂಪಂ ಚ ಭಕ್ತಾನುಗ್ರಹವಿಗ್ರಹಂ ।
ಅತೀವ ಕಮನೀಯಂ ಚ ಶ್ಯಾಮರೂಪಂ ನಮಾಮ್ಯಹಂ ॥ ೬೩ ॥

ದ್ವಿಭುಜಂ ಮುರಲೀವಕ್ತ್ರಂ ಕಿಶೋರಂ ಸಸ್ಮಿತಂ ಮುದಾ ।
ಶಶ್ವದ್ಗೋಪಾಂಗನಾಭಿಶ್ಚ ವೀಕ್ಷ್ಯಮಾಣಂ ನಮಾಮ್ಯಹಂ ॥ ೬೪ ॥

ರಾಧಯಾ ದತ್ತತಾಂಬೂಲಂ ಭುಕ್ತವಂತಂ ಮನೋಹರಂ ।
ರತ್ನಸಿಂಹಾಸನಸ್ಥಂ ಚ ತಮೀಶಂ ಪ್ರಣಮಾಮ್ಯಹಂ ॥ ೬೫ ॥

ರತ್ನಭೂಷಣಭೂಷಾಢ್ಯಂ ಸೇವಿತಂ ಶ್ವೇತಚಾಮರೈಃ ।
ಪಾರ್ಷದಪ್ರವರೈರ್ಗೋಪಕುಮಾರೈಸ್ತಂ ನಮಾಮ್ಯಹಂ ॥ ೬೬ ॥

---

೬೨. ಯಾರನ್ನು ಸ್ತುತಿಸಲು ಬಯಸಿ, ವೇದಗಳು ದಣಿದವೋ, ಸರಸ್ವತಿಯು ಜಡಳಾದಳೋ, ವಾಙ್ಮನಸ್ಸುಗಳಿಗೆ ಅಗೋಚರನಾದ ಆ ಪರಮಾತ್ಮನನ್ನು ವಿದ್ವಾಂಸನು ಸ್ತುತಿಸಲು ಸಾಧ್ಯವೇ.

೬೩. ಶುದ್ಧತೇಜಃಸ್ವರೂಪನೂ, ಭಕ್ತಾನುಗ್ರಹವಿಗ್ರಹನೂ, ಮನೋಹರ ರೂಪನೂ ಆದ ಶ್ಯಾಮಸುಂದರನನ್ನು ವಂದಿಸುವೆನು.

೬೪. ಎರಡು ಕೈಗಳಿಂದಲೂ ಕೊಳಲನ್ನು ಹಿಡಿದು ಊದುತ್ತ ಗೋಪಸ್ತ್ರೀಯರ ಕಟಾಕ್ಷವೀಕ್ಷಣೆಗೆ ಪಾತ್ರನಾಗಿ, ಸಸುನಗುತ್ತಿರುವ ಗೋಪಬಾಲಕನಿಗೆ ಇದೋ ನಮಿಸುವೆನು.

೬೫. ರತ್ನಸಿಂಹಾಸನದಲ್ಲಿ ಕುಳಿತು, ರಾಧೆಯು ಹಸ್ತದಿಂದ ದಿವ್ಯತಾಂಬೂಲವನ್ನು ಸ್ವೀಕರಿಸಿ, ಮೆಲ್ಲುತ್ತಿರುವ ರಾಧಾರಮಣನಿಗೆ ವಂದಿಸುವೆನು.

೬೬. ರತ್ನಾಭರಣಭೂಷಿತನಾಗಿ ಪಾರ್ಷದರಿಂದಲೂ, ಗೋಪಬಾಲಕರಿಂದಲೂ, ಶ್ವೇತಚಾಮರ ಸೇವೆಯನ್ನು ಕೈಗೊಳ್ಳುತ್ತಿರುವ ಭಕ್ತವತ್ಸಲನಿಗೆ ಭಕ್ತಿಪೂರ್ವಕವಾಗಿ ನಮಿಸುವೆನು.

ವೃಂದಾವನಾಂತರೇ ರಮ್ಯೇ ರಾಸೋಲ್ಲಾಸಸಮುತ್ಸುಕಂ ।
ರಾಸಮಂಡಲಮಧ್ಯಸ್ಥಂ ನಮಾಮಿ ರಸಿಕೇಶ್ವರಂ ॥ ೬೭ ॥

ಶತಶೃಂಗೇ ಮಹಾಶೈಲೇ ಗೋಲೋಕೇ ರತ್ನಪರ್ವತೇ ।
ವಿರಜಾಪುಲಿನೇ ರಮ್ಯೇ ಪ್ರಣಮಾಮಿ ವಿಹಾರಿಣಂ ॥ ೬೮ ॥

ಪರಿಪೂರ್ಣತಮಂ ಶಾಂತಂ ರಾಧಾಕಾಂತಂ ಮನೋಹರಂ ।
ಸತ್ಯಂ ಬ್ರಹ್ಮಸ್ವರೂಪಂ ಚ ನಿತ್ಯಂ ಕೃಷ್ಣಂ ನಮಾಮ್ಯಹಂ ॥ ೬೯ ॥

ಶ್ರೀಕೃಷ್ಣಸ್ಯ ಸ್ತೋತ್ರಮಿದಂ ತ್ರಿಸಂಧ್ಯಂ ಯಃ ಪಠೇನ್ನರಃ ।
ಧರ್ಮಾರ್ಥಕಾಮಮೋಕ್ಷಾಣಾಂ ಸ ದಾತಾ ಭಾರತೇ ಭವೇತ್ ॥ ೭೦ ॥

ಹರಿದಾಸ್ಯಂ ಹರೌ ಭಕ್ತಿಂ ಲಭೇತ್ಸ್ತೋತ್ರ ಪ್ರಸಾದತಃ ।
ಇಹಲೋಕೇ ಜಗತ್ಪೂಜ್ಯೋ ವಿಷ್ಣುತುಲ್ಯೋ ಭವೇದ್ಧ್ರುವಂ ॥ ೭೧ ॥

---

೬೭. ರಮ್ಯವಾದ ವೃಂದಾವನಮಧ್ಯದ ರಾಸಮಂಡಲದಲ್ಲಿ ರಾಸೋಲ್ಲಾಸಪರನಾಗಿ ಕುಳಿತಿರುವ ರಸಿಕರಾಜನಿಗೆ ಇದೋ ನನ್ನ ವಂದನೆಗಳು.

೬೮. ಗೋಲೋಕದಲ್ಲಿ ಶತಶೃಂಗವೆಂಬ ರತ್ನನಿರ್ಮಿತವಾದ ಮಹಾಪರ್ವತದಲ್ಲಿಯೂ, ಮನೋಹರವಾದ ವಿರಜಾನದಿಯ ಮರಳಿನಲ್ಲಿಯೂ, ವಿಹಾರಪರನಾದ ಪರಮಾತ್ಮನಿಗೆ ಸಾಷ್ಟಾಂಗವೆರಗುವೆನು.

೬೯. ಪರಿಪೂರ್ಣಸ್ವರೂಪನೂ, ಶಾಂತಾಕಾರನೂ, ರಾಧಾಕಾಂತನೂ, ಮನೋಹರನೂ, ಸತ್ಯ, ನಿತ್ಯ ಮತ್ತು ಬ್ರಹ್ಮಸ್ವರೂಪನೂ ಆದ ಶ್ರೀಕೃಷ್ಣಪರಮಾತ್ಮನನ್ನು ವಂದಿಸುವೆನು

೭೦. ಶ್ರೀಕೃಷ್ಣಪರಮಾತ್ಮನ ಈ ಸ್ತೋತ್ರವನ್ನು ತ್ರಿಸಂಧ್ಯೆಯಲ್ಲೂ ಪಠಿಸುವ ಮನುಷ್ಯನು ಭಾರತದಲ್ಲಿ ಧರ್ಮಾರ್ಥಕಾಮಮೋಕ್ಷವೆಂಬ ಚತುರ್ವರ್ಗಫಲಗಳನ್ನು ಕೊಡಲು ಶಕ್ತನಾಗುವನು.

೭೧. ಈ ಸ್ತೋತ್ರದ ಮಹಿಮೆಯಿಂದ ಶ್ರೀಹರಿಯ ಸೇವೆ ಮತ್ತು ಭಕ್ತಿಯನ್ನು ಪಡೆದು, ವಿಷ್ಣುಸದೃಶನೂ, ಜಗತ್ಪೂಜ್ಯನೂ ಆಗುವುದರಲ್ಲಿ ಸಂದೇಹವಿಲ್ಲ.

ಸರ್ವಸಿದ್ಧೇಶ್ವರಃ ಶಾಂತೋಽಪ್ಯಂತೇ ಯಾತಿ ಹರೇಃ ಪದಂ ।
ತೇಜಸಾ ಯಶಸಾ ಭಾತಿ ಯಥಾ ಸೂರ್ಯೋ ಮಹೀತಲೇ ॥ ೭೨ ॥

ಜೀವನ್ಮುಕ್ತಃ ಕೃಷ್ಣಭಕ್ತಃ ಸ ಭವೇನ್ನಾತ್ರ ಸಂಶಯಃ ।
ಅರೋಗೀ ಗುಣವಾನ್ವಿದ್ವಾನ್ಪುತ್ರವಾನ್ಧನವಾನ್ಸದಾ ॥ ೭೩ ॥

ಷಡಭಿಜ್ಞೋ ದಶಬಲೋ ಮನೋಯಾಯೀ ಭವೇದ್ಧ್ರುವಂ ।
ಸರ್ವಜ್ಞಃ ಸರ್ವದಶ್ಚೈವ ಸ ದಾತಾ ಸರ್ವಸಂಪದಾಂ ।
ಕಲ್ಪವೃಕ್ಷಸಮಃ ಶಶ್ವದ್ಭವೇತ್ಕೃಷ್ಣಪ್ರಸಾದತಃ ॥ ೭೪ ॥

ಇತ್ಯೇವಂ ಕಥಿತಂ ಸ್ತೋತ್ರಂ ವತ್ಸ ತ್ವಂ ಗಚ್ಛ ಪುಷ್ಕರಂ ।
ತತ್ರ ಕೃತ್ವಾ ಮಂತ್ರಸಿದ್ಧಿಂ ಪಶ್ಚಾತ್ಪ್ರಾಪ್ಸ್ಯಸಿ ವಾಂಛಿತಂ ॥ ೭೫ ॥

---

೭೨. ಶಾಂತನೂ, ಸರ್ವಸಿದ್ಧೇಶ್ವರನೂ, ಆಗಿ, ಅಂತ್ಯಕಾಲದಲ್ಲಿ ಶ್ರೀಹರಿಯ ಸಾನ್ನಿಧ್ಯವನ್ನು ಪಡೆದು, ಭೂಮಂಡವನ್ನು ಸೂರ್ಯನಂತೆ ಕೀರ್ತಿ ಮತ್ತು ತೇಜಸ್ಸುಗಳಿಂದ ಬೆಳಗುತ್ತಾನೆ.

೭೩. ಕೃಷ್ಣಭಕ್ತನು. ರೋಗರಹಿತನೂ, ಗುಣವಂತನೂ, ವಿದ್ಯಾವಂತನೂ, ಪುತ್ರವಂತನೂ, ಧನವಂತನೂ, ಆಗುವುದಲ್ಲದೆ ಕೊನೆಗೆ ಜೀವನ್ಮುಕ್ತಿ ಪಡೆಯುವುದರಲ್ಲಿ ಸಂಶಯವಿಲ್ಲ.

೭೪. ಷಟ್‌ಶಾಸ್ತ್ರಗಳಲ್ಲಿ ಪಂಡಿತನೂ, ದಶಬಲನೂ, ಮನೋಗಾಮಿಯೂ, ಸರ್ವಜ್ಞನೂ ಆಗುವುದಲ್ಲದೆ, ಶ್ರೀಕೃಷ್ಣನ ಅನುಗ್ರಹದಿಂದ ಕಲ್ಪವೃಕ್ಷದಂತೆ ಬೇಡಿದ ಇಷ್ಟಾರ್ಥಗಳನ್ನು ಕೊಡಲು ಶಕ್ತನಾಗುವನು.

೭೫. ಈರೀತಿಯಾಗಿ ಶ್ರೀಕೃಷ್ಣನ ಸ್ತೋತ್ರವನ್ನು ವಿವರಿಸಿರುವೆನು. ವತ್ಸ ಪರಶುರಾಮನೇ, ನೀನು ಪುಷ್ಕರಕ್ಷೇತ್ರಕ್ಕೆ ಹೋಗಿ, ಮಂತ್ರಸಿದ್ಧಿಯನ್ನು ಪಡೆದು, ನಿನ್ನ ಅಭೀಷ್ಟಸಿದ್ಧಿಯನ್ನು ಹೊಂದು.

ತ್ರಿಸ್ಸಪ್ತಕೃತ್ವೋ ನಿರ್ಭೂಪಾಂ ಕುರು ಪೃಥ್ವೀಂ ಯಥಾ ಸುಖಂ ।
ಮಮಾಶಿಷಾ ಮುನಿಶ್ರೇಷ್ಠ ಶ್ರೀಕೃಷ್ಣಸ್ಯ ಪ್ರಸಾದತಃ ॥ ೭೬ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ತೃತೀಯೇ ಪ್ರಕೃತಿಖಂಡೇ
ನಾರದನಾರಾಯಣಸಂವಾದೇ ಸ್ತವಪ್ರದಾನಂ ನಾಮ
ದ್ವಾತ್ರಿಂಶತ್ತಮೋಽಧ್ಯಾಯಃ

---

೭೬. ಎಲೈ ಮುನಿಯೇ, ಶ್ರೀಕೃಷ್ಣನ ಅನುಗ್ರಹದಿಂದಲೂ, ನನ್ನ ಆಶೀರ್ವಾದದಿಂದಲೂ, ಭೂಮಂಡಲವನ್ನು ಇಪ್ಪತ್ತೊಂದು ಸಾರಿ ಸುತ್ತಿ ಕ್ಷತ್ರಿಯರನ್ನು ಸುಖವಾಗಿ ನಿರ್ಮೂಲಗೊಳಿಸು.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಗಣಪತಿಖಂಡದಲ್ಲಿ ಸ್ತೋತ್ರಪ್ರದಾನ ರೂಪವಾದ ಮುವತ್ತೆರಡನೆಯ ಅಧ್ಯಾಯವು ಮುಗಿದುದು.

ಮೂವತ್ತೆರಡನೆಯ ಅಧ್ಯಾಯದ ಸಾರಾಂಶ

ಮಹಾದೇವನು ಪರಶುರಾಮನಿಗೆ ಶ್ರೀಕೃಷ್ಣನ ಮಹಾಮಂತ್ರವನ್ನೂ, ಪೂಜಾ ವಿಧಾನವನ್ನೂ ಉಪದೇಶಿಸಿ, ವೇದಾಂತಸಾರಬೋಧಕವಾದ ಭಗವತ್‌ಸ್ತೋತ್ರವನ್ನು ವಿಸ್ತಾರವಾಗಿ ತಿಳುಹಿ, ಅದರ ಪಠನೆಯಿಂದ ಸಕಲೇಷ್ಟಾರ್ಥವು ಸಿದ್ಧಿಸುವುದೆಂದು ಹರಸಿ, ಕಳುಹಿಸಿದನು.

|| ಓಂ ||

|| ಶ್ರೀ ಗಣೇಶಾಯ ನಮಃ ||

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಗಣಪತಿಖಂಡೇ

|| ತ್ರಯಸ್ತ್ರಿಂಶತ್ತಮೋಽಧ್ಯಾಯಃ ||

|| ನಾರಾಯಣ ಉವಾಚ ||

ಶಿವಂ ಪ್ರಣಮ್ಯ ಸ ಭೃಗುರ್ದುರ್ಗಾಂ ಕಾಲೀಂ ಮುದಾನ್ವಿತಃ |
ಗತ್ವಾ ಪುಷ್ಕರತೀರ್ಥಂ ಚ ಮಂತ್ರಸಿದ್ಧಿಂ ಚಕಾರ ಹ || ೧ ||

ಸ ಬಭೂವ ನಿರಾಹಾರೋ ಮಾಸಂ ಭಕ್ತಿಸಮನ್ವಿತಃ |
ಧ್ಯಾಯನ್ಕೃಷ್ಣಪದಾಂಭೋಜಂ ವಾಯುರೋಧಂ ಚಕಾರ ಸಃ || ೨ ||

ದದರ್ಶ ಚಕ್ಷುರುನ್ಮೀಲ್ಯ ಗಗನಂ ತೇಜಸಾವೃತಂ |
ದಿಶೋ ದಶ ದ್ಯೋತಯಂತಂ ಸಮಾಚ್ಛನ್ನದಿವಾಕರಂ || ೩ ||

ಮೂವತ್ತಮೂರನೆಯ ಅಧ್ಯಾಯವು

೧. ನಾರಾಯಣಮಹರ್ಷಿ :—ಪರಶುರಾಮನು ಶಿವನಿಗೂ, ಕಾಳಿದುರ್ಗಿಯರಿಗೂ ವಂದಿಸಿ, ಸಂತೋಷದಿಂದ ಪುಷ್ಕರಕ್ಷೇತ್ರಕ್ಕೆ ಹೋಗಿ, ಮಂತ್ರಸಿದ್ಧಿಯನ್ನು ಪಡೆದುಕೊಂಡನು.

೨. ಒಂದು ತಿಂಗಳು ನಿರಾಹಾರನಾಗಿ, ಭಕ್ತಿಯಿಂದ ಶ್ರೀಕೃಷ್ಣನ ಪದಕಮಲಗಳನ್ನು ಧ್ಯಾನಿಸುತ್ತ, ನಿಶ್ವಾಸೋಚ್ಛ್ವಾಸಗಳನ್ನೂ ಬಿಗಿ ಹಿಡಿದನು.

೩. ಕಣ್ತೆರೆದು ಇದ್ದಕ್ಕಿದ್ದಂತೆಯೇ ತೇಜಸ್ಸಿನಿಂದ ಆಕಾಶವೂ ಹತ್ತು ದಿಕ್ಕುಗಳೂ ಬೆಳಗುತ್ತಿರುವುದನ್ನೂ, ಸೂರ್ಯಮಂಡಲವು ಮರೆಯಾಗಿರುವುದನ್ನೂ ಕಂಡನು.

ತೇಜೋಮಂಡಲಮಧ್ಯಸ್ಥಂ ರತ್ನಯಾನಂ ದದರ್ಶ ಹ ।
ದದರ್ಶ ತತ್ರ ಪುರುಷಮತ್ಯಂತಂ ಸುಂದರಂ ವರಂ ॥ ೪ ॥

ಈಷದ್ಧಾಸ್ಯಪ್ರಸನ್ನಾಸ್ಯಂ ಭಕ್ತಾನುಗ್ರಹಕಾರಕಂ ।
ಪ್ರಣಮ್ಯ ದಂಡವನ್ಮೂರ್ಧ್ನಾ ವರಂ ವವ್ರೇ ತಮೀಶ್ವರಂ ॥ ೫ ॥

ತ್ರಿಸ್ಸಪ್ತಕೃತ್ವೋ ನಿರ್ಭೂಪಾಂ ಕರಿಷ್ಯಾಮಿ ಮಹೀಮಿತಿ ।
ಪದಾರವಿಂದೇ ಸುದೃಢಾಂ ತಾಂ ಭಕ್ತಿಮನಪಾಯಿನೀಂ ॥ ೬ ॥

ದಾಸ್ಯಂ ಸುದುರ್ಲಭಂ ಶಶ್ವತ್ತ್ವತ್ಪದಾಬ್ಜೇ ಚ ದೇಹಿ ಮೇ ।
ಕೃಷ್ಣಸ್ತಸ್ಮೈ ವರಂ ದತ್ವಾ ತತ್ರೈವಾಂತರಧೀಯತ ॥ ೭ ॥

ಭೃಗುಃ ಪ್ರಣಮ್ಯ ಭವನಂ ತಜ್ಜಗಾಮ ಪರಾತ್ಪರಂ ।
ಪಸ್ಪಂದ ದಕ್ಷಿಣಾಂಗಂ ಚ ಪರಂ ಮಂಗಲಸೂಚಕಂ ॥ ೮ ॥

---

೪. ಆ ತೇಜೋಮಂಡಲದ ಮಧ್ಯಭಾಗದಲ್ಲಿ ರತ್ನನಿರ್ಮಿತವಾದ ದಿವ್ಯ ರಥವೊಂದನ್ನೂ, ಅದರೊಳಗೆ ಕುಳಿತಿರುವ ಸುಂದರ ಪುರುಷನನ್ನೂ ಪರಶುರಾಮನು ನೋಡಿದನು.

೫. ಸ್ಮಿತವದನನೂ, ಭಕ್ತಾನುಗ್ರಹದಾಯಕನೂ ಆದ ಆ ಸರ್ವೇಶ್ವರನಿಗೆ ದಂಡಪ್ರಣಾಮಮಾಡಿ, ತನಗಿಷ್ಟವಾದ ವರವನ್ನು ಬೇಡಿದನು.

೬-೭ ತಾನು ಇಪ್ಪತ್ತೊಂದು ಸಾರಿ ಭೂಮಂಡಲವನ್ನು ಸುತ್ತಿ ಕ್ಷತ್ರಿಯರನ್ನು ನಿರ್ಮೂಲಗೊಳಿಸುವಂತೆಯೂ, ಪರಮಾತ್ಮನ ಪಾದಾರವಿಂದಗಳಲ್ಲಿ ದೃಢವೂ ಶಾಶ್ವತವೂ ಆದ ಭಕ್ತಿಯು ನೆಲೆಸುವಂತೆಯೂ, ಪರಮಾತ್ಮನ ಪಾದಸೇವೆಯು ನಿತ್ಯವಾಗಿ ದೊರೆಯುವಂತೆಯೂ, ಪರಶುರಾಮನು ವರವನ್ನು ಬೇಡಲು ಶ್ರೀಕೃಷ್ಣನು ಅವನ ಇಷ್ಟಾರ್ಥವನ್ನಿತ್ತು ಅಂತರ್ಧಾನಹೊಂದಿದನು.

೮. ಪರಶುರಾಮನು ಪರಾತ್ಪರನಾದ ಪರಮಪುರುಷನಿಗೆ ಪ್ರಣಾಮಮಾಡಿ, ತನ್ನ ಮಂದಿರಕ್ಕೆ ಹಿಂತಿರುಗುತ್ತಿರಲು, ಅವನ ಬಲಭಾಗವು ಸ್ಫುರಿಸಿ ಶುಭ ಸೂಚನೆಯಾಯಿತು.

ವಾಂಛಾಪ್ರತೀತಿಜನನಂ ಸುಸ್ವಪ್ನಂ ಚ ದದರ್ಶ ಹ ।
ಮನಃ ಪ್ರಸನ್ನಂ ಸ್ಫೀತಂ ಚ ತದ್ಬಭೂವ ದಿವಾನಿಶಂ ।
ಸಂಭಾಷ್ಯ ಸ್ವಜನಂ ಸರ್ವಂ ಗೃಹೇ ತಸ್ಥೌ ಮುದಾನ್ವಿತಃ ॥ ೯ ॥

ಸ್ವಶಿಷ್ಯಾನ್ಪಿತೃಶಿಷ್ಯಾಂಶ್ಚ ಭ್ರಾತೃವರ್ಗಾಂಶ್ಚ ಬಾಂಧವಾನ್ ।
ಆನೀಯಾನೀಯ ವಿವಿಧಾನ್ಮಂತ್ರಾಂಶ್ಚ ಸ ಚಕಾರ ಹ ॥ ೧೦ ॥

ಪೌರ್ವಾಪರ್ಯಂ ಸ್ವವೃತ್ತಾಂತಂ ತಾನೇವೋಕ್ತ್ವಾ ಶುಭಕ್ಷಣೇ ।
ತೈರೇವ ಸಾರ್ಧಂ ಬಲವಾನ್ಬಭೂವ ಗಮನೋನ್ಮುಖಃ ॥ ೧೧ ॥

ದದರ್ಶ ಮಂಗಲಂ ರಾಮಃ ಶುಶ್ರಾವ ಜಯಸೂಚಕಂ ।
ಬುಬುಧೇ ಮನಸಾ ಸರ್ವಂ ಸ್ವಜಯಂ ವೈರಿಸಂಕ್ಷಯಂ ॥ ೧೨ ॥

ಯಾತ್ರಾಕಾಲೇ ಚ ಪುರತಃ ಶುಶ್ರಾವ ಸಹಸಾ ಮುನಿಃ ।
ಹರಿಶಬ್ದಂ ಸಿಂಹಶಬ್ದಂ ಘಂಟಾದುಂದುಬಿವಾದನಂ ॥ ೧೩ ॥

---

೯. ಮನೆಗೆ ಹೋಗಿ ಇಷ್ಟಸಿದ್ಧಿಯನ್ನು ಸೂಚಿಸುವ ಶುಭಸ್ವಪ್ನವನ್ನೂ ಕಂಡನು. ಅವನ ಮನಸ್ಸು ಪ್ರಸನ್ನವಾಗಿ ಹಗಲು ರಾತ್ರಿ ಕುತೂಹಲದಿಂದ ಕೂಡಿತು. ಸ್ವಜನರೆಲ್ಲರ ಕುಶಲಪ್ರಶ್ನೆಮಾಡಿ ಮನೆಯ ಲ್ಲಿ ಸಂತೋಷದಿಂದಿದ್ದನು.

೧೦. ತನ್ನ ಶಿಷ್ಯರನ್ನೂ, ತಂದೆಯ ಶಿಷ್ಯರನ್ನೂ, ಸಹೋದರ ಬಾಂಧವರನ್ನೂ, ಕರೆಸಿ ವಿವಿಧ ಮಂತ್ರಾಲೋಚನೆಗಳನ್ನು ಮಾಡಿದನು.

೧೧. ತನ್ನ ಪೂರ್ವಾಪರ ವೃತ್ತಾಂತಗಳೆಲ್ಲವನ್ನೂ ತಿಳಿಸಿ, ಪರಾಕ್ರಮಿಯಾದ ಪರಶುರಾಮನು, ಅವರೊಡನೆ, ತನ್ನ ವೈರಿಯ ಮೇಲೆ ಯುದ್ಧಕ್ಕೆ ಹೊರಡಲನುವಾದನು.

೧೨. ಪೂರ್ಣ ಕಲಶವೇ ಮುಂತಾದ ಮಂಗಳದ್ರವ್ಯಗಳನ್ನು ಕಂಡು, ಶುಭಸೂಚಕವಾದ ಧ್ವನಿಗಳನ್ನು ಕೇಳಿ, ಮನಸ್ಸಿನಲ್ಲಿಯೇ ತನ್ನ ಜಯವನ್ನೂ, ಶತ್ರುನಾಶವನ್ನೂ ನಿರ್ಣಯಿಸಿಕೊಂಡನು.

೧೩. ಪ್ರಯಾಣಕಾಲದಲ್ಲಿ ಪರಶುರಾಮನು ಮುಂದೆ ಕುದುರೆ ಮತ್ತು ಸಿಂಹದ ಧ್ವನಿಯನ್ನೂ, ಗಂಟೆ ಮತ್ತು ನಗಾರಿಗಳ ಶಬ್ದವನ್ನೂ ಕೇಳಿ ಆನಂದಿಸಿದನು

ಆಕಾಶವಾಣೀಸಂಗೀತಂ ಜಯಸ್ತೇ ಭವಿತೇತಿ ಚ ।
ನವೇಂಗಿತಂ ಚ ಕಲ್ಯಾಣಂ ಮೇಘಶಬ್ದಂ ಜಯಾವಹಂ　॥ ೧೪ ॥

ಚಕಾರ ಯಾತ್ರಾಂ ಭಗವಾಚ್ಛ್ರುತ್ವೈವಂ ವಿವಿಧಂ ಶುಭಂ ।
ದದರ್ಶ ಪುರತೋ ವಿಪ್ರಬಂದಿದೈವಜ್ಞಭಿಕ್ಷುಕಾನ್　॥ ೧೫ ॥

ಜ್ವಲತ್ಪ್ರದೀಪಂ ದಧತೀಂ ಪತಿಪುತ್ರವತೀಂ ಸತೀಂ ।
ಪುರೋ ದದರ್ಶ ಸ್ಮೇರಾಸ್ಯಾಂ ನಾನಾಭೂಷಣಭೂಷಿತಾಂ　॥ ೧೬ ॥

ಶವಂ ಶಿವಾಂ ಪೂರ್ಣಕುಂಭಂ ಚಾಷಂ ಚ ನಕುಲಂ ತಥಾ ।
ಗಚ್ಛನ್ದದರ್ಶ ರಾಮಶ್ಚ ಯಾತ್ರಾಮಂಗಲಸೂಚಕಂ　॥ ೧೭ ॥

---

೧೪. "ನಿನಗೆ ಜಯವಾಗುವುದು" ಎಂಬ ಆಕಾಶವಾಣಿಯ ಮನೋಹರವಾದ ಗೀತವನ್ನೂ ಕಲ್ಯಾಣಕರವಾದ ಮೇಘಧ್ವನಿಯನ್ನೂ ಕೇಳಿ ಇಂಗಿತಜ್ಞನಾದ ಆ ಮುನಿಯು ಸಂತೋಷಗೊಂಡನು.

೧೫. ಈ ರೀತಿ ವಿವಿಧ ಶುಭಧ್ವನಿಗಳನ್ನು ಕೇಳಿ ಪ್ರಯಾಣಮಾಡಿದ ಪರಶುರಾಮನು ಎದುರಿನಲ್ಲಿ ಬ್ರಾಹ್ಮಣರನ್ನೂ, ಹೊಗಳುಭಂಟರನ್ನೂ, ಜ್ಯೋತಿಷಿಕರನ್ನೂ, ಭಿಕ್ಷುಕರನ್ನೂ ಕಂಡನು.

೧೬. ಪತಿಪುತ್ರವತಿಯಾದ ಪತಿವ್ರತೆಯು ನಾನಾವಿಧವಾದ ವಸ್ತ್ರಾಲಂಕಾರಗಳಿಂದ ಭೂಷಿತಳಾಗಿ, ನಸುನಗುತ್ತ ಪ್ರದಕ್ಷಿಣಾಕಾರವಾಗಿ ಪ್ರಜ್ವಲಿಸುತ್ತಿರುವ ದೀಪಧಾರಣೆಮಾಡಿರುವುದನ್ನು ನೋಡಿದನು.

೧೭. ಯಾತ್ರಾಕಾಲದಲ್ಲಿ ಮಂಗಳಸೂಚಕವಾದ ಹೆಣ, ಗುಳ್ಳೆನರಿ, ಪೂರ್ಣಕಲಶ, ಗುಬ್ಬಚ್ಚಿ (ಚಾಷ) ಮತ್ತು ಮುಂಗಸಿಯನ್ನು ಪರಶುರಾಮನು ಮುಂದೆ ನೋಡಿದನು.

ಕೃಷ್ಣಸಾರಂ ಗಜಂ ಸಿಂಹಂ ತುರಗಂ ಗಂಡಕಂ ದ್ವಿಪಂ।
ಚಮರೀಂ ರಾಜಹಂಸಂ ಚ ಚಕ್ರವಾಕಂ ಶುಕಂ ಪಿಕಂ ॥ ೧೮ ॥

ಮಯೂರಂ ಖಂಜನಂ ಚೈವ ಶಂಖಚಿಲ್ಲಂ ಚಕೋರಕಂ।
ಪಾರಾವತಂ ಬಲಾಕಂ ಚ ಕಾರಂಡಂ ಚಾತಕಂ ಚಟಿಂ ॥ ೧೯ ॥

ಸೌದಾಮನೀಂ ಶಕ್ರಚಾಪಂ ಸೂರ್ಯಂ ಸೂರ್ಯಪ್ರಭಾಂ ಶುಭಾಂ।
ಸದ್ಯೋ ಮಾಂಸಂ ಸಜೀವಂ ಚ ಮತ್ಸ್ಯಂ ಶಂಖಂ ಸುವರ್ಣಕಂ ॥ ೨೦ ॥

ಮಾಣಿಕ್ಯಂ ರಜತಂ ಮುಕ್ತಾಂ ಮಣೀಂದ್ರಂ ಚ ಪ್ರವಾಲಕಂ।
ದಧಿಲಾಜಾಂಶ್ಚ ಶುಕ್ಲಧಾನ್ಯಂ ಶುಕ್ಲಪುಷ್ಪಂ ಚ ಕುಂಕುಮಂ ॥ ೨೧ ॥

ಪರ್ಣಂ ಪತಾಕಾಂ ಛತ್ರಂ ಚ ದರ್ಪಣಂ ಶ್ವೇತಚಾಮರಂ।
ಧೇನುಂ ವತ್ಸಪ್ರಯುಕ್ತಾಂ ಚ ರಥಸ್ಥಂ ಭೂಮಿಪಂ ತಥಾ ॥ ೨೨ ॥

೧೮–೧೯. ಜಿಂಕೆ, ಆನೆ, ಸಿಂಹ, ಕುದುರೆ, ಖಡ್ಗಮೃಗ, ಚಮರೀಮೃಗ, ಮುಂತಾದ ಪ್ರಾಣಿಗಳನ್ನೂ ರಾಜಹಂಸ, ಚಕ್ರವಾಕ, ಗಿಳಿ, ಕೋಗಿಲೆ, ನವಿಲು, ಖಂಜರೀಟ, ಶಂಖಚಿಲ್ಲ, ಚಕೋರ, ಪಾರಿವಾಳ, ಬೆಳ್ಳಕ್ಕಿ, ಬಾತು, ಚಾತಕ, ಗುಬ್ಬಚ್ಚಿ ಮುಂತಾದ ಪಕ್ಷಿಗಳನ್ನೂ ಪರಶುರಾಮನು ಪ್ರಯಾಣಕಾಲದಲ್ಲಿ ನೋಡಿ ಸಂತೋಷಪಟ್ಟನು.

೨೦–೨೧. ಮಿಂಚಿನಬಳ್ಳಿ ಮತ್ತು ಕಾಮನಬಿಲ್ಲುಗಳನ್ನೂ, ಸೂರ್ಯನನ್ನೂ, ಸೂರ್ಯಪ್ರಭೆಯನ್ನೂ, ಹೊಸದಾದ ಮಾಂಸವನ್ನೂ, ಜೀವಸಹಿತವಾದ ಮೀನನ್ನೂ, ಶಂಖ, ಚಿನ್ನ, ಮಾಣಿಕ್ಯ, ಬೆಳ್ಳಿ, ಮುತ್ತು, ಕೆಂಪು, ಹವಳ, ಮುಂತಾದ ಅನರ್ಘ ವಸ್ತುಗಳನ್ನೂ, ಮೊಸರು, ಅರಳು, ಶ್ವೇತಧಾನ್ಯ, ಶ್ವೇತಪುಷ್ಪ ಮತ್ತು ಕುಂಕುಮವನ್ನೂ ಪರಶುರಾಮನು ನೋಡಿ ಆನಂದಿಸಿದನು.

೨೨–೨೩. ಹಸರು ಎಲೆ, ಧ್ವಜಸ್ತಂಭ, ಛತ್ರಿ, ಕನ್ನಡಿ, ಶ್ವೇತಚಾಮರ, ಕರುಸಹಿತವಾದ ಹಸು, ರಥದಲ್ಲಿ ಕುಳಿತಿರುವ ರಾಜ, ಹಾಲು, ತುಪ್ಪ ಅಡಿಕೆ,

ದುಗ್ಧಮಾಜ್ಯಂ ತಥಾ ಪೂಗಮಮೃತಂ ಪಾಯಸಂ ತಥಾ ।
ಶಾಲಗ್ರಾಮಂ ಪಕ್ವಫಲಂ ಸ್ವಸ್ತಿಕಂ ಶರ್ಕರಾಂ ಮಧು ॥ ೨೩ ॥

ಮಾರ್ಜಾರಂ ಚ ವೃಷೇಂದ್ರಂ ಚ ಮೇಷಂ ಪರ್ವತಮೂಷಿಕಂ ।
ಮೇಘಾಚ್ಛನ್ನಸ್ಯ ಚ ರವೇರುದಯಂ ಚಂದ್ರಮಂಡಲಂ ॥ ೨೪ ॥

ಕಸ್ತೂರೀಂ ವ್ಯಜನಂ ತೋಯಂ ಹರಿದ್ರಾಂ ತೀರ್ಥಮೃತ್ತಿಕಾಂ ।
ಸಿದ್ಧಾರ್ಥಂ ಸರ್ಷಪಂ ದೂರ್ವಾಂ ವಿಪ್ರಬಾಲಂ ಚ ಬಾಲಿಕಾಂ ॥ ೨೫ ॥

ಮೃಗಂ ವೇಶ್ಯಾಂ ಷಟ್ಪದಂ ಚ ಕರ್ಪೂರಂ ಪೀತವಾಸಸಂ ।
ಗೋಮೂತ್ರಂ ಗೋಪುರೀಷಂ ಚ ಗೋಧೂಲಿಂ ಗೋಪದಾಂಕಿತಂ ॥ ೨೬ ॥

ಗೋಷ್ಠಂ ಗವಾಂವರ್ತ್ಮ ರಮ್ಯಾಂ ಗೋಶಾಲಾಂ ಗೋಗತಿಂ ಶುಭಾಂ ।
ಭೂಷಣಂ ದೇವಮೂರ್ತಿಂ ಚ ಜ್ವಲದಗ್ನಿಂ ಮಹೋತ್ಸವಂ ॥ ೨೭ ॥

ಅಮೃತ, ಪಾಯಸ, ಸಾಲಿಗ್ರಾಮ, ಪಕ್ವವಾದ ಫಲ, ಸ್ವಸ್ತಿಕವಾಯನ, ಸಕ್ಕರೆ, ಜೇನು ಇವೆಲ್ಲವೂ ಪ್ರಯಾಣಕಾಲವಲ್ಲಿ ಪರಶುರಾಮನ ದೃಷ್ಟಿಗೆ ಗೋಚರವಾದವು.

೨೪. ಬೆಕ್ಕು, ಬಸವ, ಟಗರು, ಬೆಟ್ಟದ ಇಲಿ ಮುಂತಾದ ಪ್ರಾಣಿಗಳನ್ನೂ, ಮೋಡಮುಚ್ಚಿದ ಸೂರ್ಯನ ಉದಯವನ್ನೂ, ಚಂದ್ರಮಂಡಲವನ್ನೂ, ಪರಶುರಾಮನು ಕಂಡನು.

೨೫. ಕಸ್ತೂರಿ, ಬೀಸಣಿಗೆ, ತಿಳಿನೀರು, ಅರಿಸಿನ, ಪುಣ್ಯತೀರ್ಥದ ಮೃತ್ತಿಕೆ, ಬಿಳುಪು ಮತ್ತು ಕಪ್ಪಾದ ಸಾಸಿವೆ, ಗರಿಕೆ, ಬ್ರಾಹ್ಮಣರ ಬಾಲಕಬಾಲಕಿಯರೂ ಕೂಡ ಪರಶುರಾಮನಿಗೆ ದೃಷ್ಟಿಗೋಚರರಾದರು.

೨೬-೨೭. ಜಿಂಕೆಯನ್ನೂ, ವೇಶ್ಯಾಸ್ತ್ರೀಯನ್ನೂ, ದುಂಬಿಯನ್ನೂ, ಕರ್ಪೂರ ಮತ್ತು ಪೀತಾಂಬರಗಳನ್ನೂ, ಹಸುವಿನ ಗಂಜಲ, ಸಗಣಿ ಮತ್ತು ಪಾದಧೂಳಿಗಳನ್ನೂ, ಗೋಪಾದಚಿಹ್ನೆಯನ್ನೂ, ಕೊಟ್ಟಿಗೆಯನ್ನೂ, ಗೋವುಗಳು ತಿರುಗಾಡುವ ಮಾರ್ಗವನ್ನೂ, ಗೋಶಾಲೆಯನ್ನೂ, ಗೋವುಗಳ ಮನೋಹರವಾದ ನಡಿಗೆಯನ್ನೂ, ಒಡವೆಗಳನ್ನೂ, ದೇವಪ್ರತಿಮೆಯನ್ನೂ, ಪ್ರದಕ್ಷಿಣಾಕಾರವಾಗಿ ಪ್ರಜ್ವಲಿಸುತ್ತಿರುವ ಅಗ್ನಿಯನ್ನೂ, ಮಹೋತ್ಸವವನ್ನೂ ಪರಶುರಾಮನು ಪ್ರಯಾಣಕಾಲದಲ್ಲಿ ನೋಡಿದನು.

ತಾಮ್ರಂ ಚ ಸ್ಫಟಿಕಂ ವಂದ್ಯಂ ಸಿಂದೂರಂ ಮಾಲ್ಯಚಂದನಂ।
ಗಂಧಂ ಚ ಹೀರಕಂ ರತ್ನಂ ದದರ್ಶ ದಕ್ಷಿಣೇ ಶುಭಂ ॥ ೨೮ ॥

ಸುಗಂಧಿವಾಯೋರಾಘ್ರಾಣಂ ಪ್ರಾಪ ವಿಪ್ರಾಶಿಷಂ ಶುಭಾಂ ॥ ೨೯ ॥

ಇತ್ಯೇವಂ ಮಂಗಲಂ ಜ್ಞಾತ್ವಾ ಪ್ರಯಯೌ ಸ ಮುದಾನ್ವಿತಃ ।
ಅಸ್ತಂಗತೇ ದಿನಕರೇ ನರ್ಮದಾತೀರಸನ್ನಿಧೌ ॥ ೩೦ ॥

ತತ್ರಾಕ್ಷಯವಟಂ ದಿವ್ಯಂ ದದರ್ಶ ಸುಮನೋಹರಂ ।
ಅತ್ಯೂರ್ಧ್ವಂ ವಿಸ್ತೃತಮತಿಪುಣ್ಯಾಶ್ರಮಪದಂ ಪರಂ ॥ ೩೧ ॥

ಪೌಲಸ್ತ್ಯತಪಸಃ ಸ್ಥಾನಂ ಸುಗಂಧಿಮರುದನ್ವಿತಂ ।
ಕಾರ್ತವೀರ್ಯಾರ್ಜುನಾಭ್ಯಾಶೇ ತತ್ರ ತಸ್ಥೌ ಗಣೈಃ ಸಹ ॥ ೩೨ ॥

---

೨೮. ತಾಮ್ರ, ಸ್ಫಟಿಕ, ಸಿಂದೂರ, ಹೂಮಾಲೆ, ಚಂದನಗಂಧ, ವಜ್ರ, ಮುತ್ತು ಮುಂತಾದ ಮಂಗಳದ್ರವ್ಯಗಳನ್ನು ಪರಶುರಾಮನು ಬಲಭಾಗದಲ್ಲಿ ಕಂಡನು. (ಶಕುನಶಾಸ್ತ್ರದ ನಿಯಮದಂತೆ ಪ್ರಯಾಣಕಾಲದಲ್ಲಿ ಪುರುಷನು ಬಲಭಾಗದಲ್ಲಿಯೂ, ಸ್ತ್ರೀಯು ಎಡಭಾಗದಲ್ಲಿಯೂ ಮೇಲ್ಕಂಡ ವಸ್ತುಗಳನ್ನು ನೋಡುವುದು ಮಂಗಳ ಸೂಚಕವಾದುದೆಂಬುದು ಇದರ ತಾತ್ಪರ್ಯವೇ ಹೊರತು ಪರಶುರಾಮನು ಇವುಗಳೆಲ್ಲ ವನ್ನೂ ಪ್ರಯಾಣಕಾಲದಲ್ಲಿ ನೋಡಿದನೆಂಬುದಲ್ಲ).

೨೯-೩೦. ಸುಗಂಧಿವಾಯುವನ್ನು ಸೇವಿಸುತ್ತ ಬ್ರಾಹ್ಮಣರ ಶುಭಕರವಾದ ಆಶೀರ್ವಾದವನ್ನು ಪಡೆದು, ಮೇಲೆ ಹೇಳಿದ ಮಂಗಳ ವಸ್ತುವನ್ನು ಕಂಡು ಸಂತುಷ್ಟನಾದ ಪರಶುರಾಮನು ಸೂರ್ಯಾಸ್ತ ಕಾಲಕ್ಕೆ ಸರಿಯಾಗಿ ನರ್ಮದಾ ನದಿಯ ತೀರಕ್ಕೆ ಬಂದನು.

೩೧. ಅಲ್ಲಿ ಅತ್ಯಂತ ಎತ್ತರ ಮತ್ತು ವಿಸ್ತಾರಗಳಿಂದ ಮನೋಹರವಾಗಿದ್ದ ಅಕ್ಷಯವಟ (ಆಲದ) ವೃಕ್ಷದ ಕೆಳಗೆ ಪುಣ್ಯಕರವಾದ ಆಶ್ರಮವೊಂದನ್ನು ಕಂಡನು.

೩೨. ಕುಬೇರನು ತಪಸ್ಸುಮಾಡಿದ, ಮತ್ತು ಸುಗಂಧಿವಾಯುವಿನಿಂದ ಮನೋಹರವಾದ ಆ ಆಶ್ರಮಕ್ಕೆ ಹೋಗಿ, ಕಾರ್ತವೀರ್ಯಾರ್ಜುನನ ಸಮೀಪದಲ್ಲಿ ತನ್ನ ಪರಿವಾರಸಮೇತ ನಿಂತನು

ಸುಷ್ವಾಪ ಪುಷ್ಪಶಯ್ಯಾಯಾಂ ಕಿಂಕರೈಃ ಪರಿಸೇವಿತಃ ।
ನಿದ್ರಾಂ ಯಯೌ ಪರಿಶ್ರಾಂತಃ ಪರಮಾನಂದಸಂಯುತಃ ॥ ೩೩ ॥

ನಿಶಾತೀಶೇ ಚ ಸ ಭೃಗುಶ್ಚಾರುಸ್ವಪ್ನಂ ದದರ್ಶ ಹ ।
ನ ಚಿಂತಿತಂ ಯನ್ಮನಸಾ ವಾಯುಪಿತ್ತಕಫಂ ವಿನಾ ॥ ೩೪ ॥

ಗಜಾಶ್ವ ಶೈಲ ಪ್ರಾಸಾದ ಗೋವೃಕ್ಷ ಫಲಿತೇಷು ಚ ।
ಆರುಹ್ಯಮಾಣಮಾತ್ಮಾನಂ ರುದಂತಂ ಕೃಮಿಭಕ್ಷಿತಂ ॥ ೩೫ ॥

ಆರುಹ್ಯಮಾಣಮಾತ್ಮಾನಂ ನೌಕಾಯಾಂ ಚಂದನೋಕ್ಷಿತಂ ।
ಧೃತವಂತಂ ಪುಷ್ಪಮಾಲಾಂ ಶೋಭಿತಂ ಪೀತವಾಸಸಾ ॥ ೩೬ ॥

---

೩೩. ಪ್ರಯಾಣದಿಂದ ಪರಿಶ್ರಾಂತನಾದ ಪರಶುರಾಮನು, ಪರಿವಾರದವರ ಪರಿಚರ್ಯೆಯನ್ನು ಕೈಗೊಳ್ಳುತ್ತ, ಪುಷ್ಪಶಯನದಲ್ಲಿ ಪವಡಿಸಿ ನಿದ್ರೆಯಿಂದ ಆನಂದ ಪರವಶನಾದನು.

೩೪. ರಾತ್ರಿಯ ಅಂತ್ಯಝಾವದಲ್ಲಿ ಪರಶುರಾಮನು, ಮೊದಲು ಮನಸ್ಸಿನಲ್ಲಿ ಯೋಚಿಸದಿರುವ, ವಾತಪಿತ್ತಶ್ಲೇಷ್ಮಗಳ ವ್ಯತ್ಯಾಸದಿಂದ ಉಂಟಾಗದಿರುವ, ಸುಂದರ ಸ್ವಪ್ನವನ್ನು ಕಂಡನು

೩೫. ತಾನು ಆನೆ, ಕುದುರೆ, ಪರ್ವತ, ಮಹಡಿ, ಗೋವು, ಫಲಿತವಾದ ಮರ ಮುಂತಾದುವುಗಳ ಮೇಲೆ ಹತ್ತಿ ಕುಳಿತು, ಅಳುತ್ತ, ಕ್ರಿಮಿಗಳಿಂದ ತಿನ್ನಲ್ಪಡುತ್ತಿರುವಂತೆ ಕನಸನ್ನು ಕಂಡನು.

೩೬. ಮೈಗೆಲ್ಲ ಚಂದನಗಂಧವನ್ನು ಲೇಪಿಸಿಕೊಂಡು ಪೀತಾಂಬರವನ್ನುಟ್ಟು, ಹೂಮಾಲೆಯನ್ನು ಧರಿಸಿ, ಹಡಗಿನಲ್ಲಿ ತಾನು ಹತ್ತುತ್ತಿರುವಂತೆ ಕನಸನ್ನು ಕಂಡನು.

ವಿಣ್ಮೂತ್ರೋಕ್ಷಿತಸರ್ವಾಂಗಂ ವಸಾಪೂಯಸಮನ್ವಿತಂ ।
ವೀಣಾಂ ವರಾಂ ವಾದಯಂತಮಾತ್ಮಾನಂ ಚ ದದರ್ಶ ಹ ॥ ೩೭ ॥

ವಿಸ್ತೀರ್ಣಪದ್ಮಪತ್ರೈಶ್ಚ ಸ್ವಂ ದದರ್ಶ ಸರಿತ್ತಟೇ ।
ದಧ್ಯಾಜ್ಯಮಧುಸಂಯುಕ್ತಂ ಭುಕ್ತವಂತಂ ಚ ಪಾಯಸಂ ॥ ೩೮ ॥

ಭುಕ್ತವಂತಂ ಚ ತಾಂಬೂಲಂ ಲಭಂತಂ ಬ್ರಾಹ್ಮಣಾಶಿಷಂ ।
ಫಲಪುಷ್ಪಪ್ರದೀಪಂ ಚ ಪಶ್ಯಂತಂ ಸ್ವಂ ದದರ್ಶ ಹ ॥ ೩೯ ॥

ಪರಿಪಕ್ವಫಲಂ ಕ್ಷೀರಮುಷ್ಣಾನ್ನಂ ಶರ್ಕರಾನ್ವಿತಂ ।
ಸ್ವಸ್ತಿಕಂ ಭುಕ್ತವಂತಂ ಸ್ವಂ ದದರ್ಶ ಚ ಪುನಃ ಪುನಃ ॥ ೪೦ ॥

ಜಲೌಕಸಾ ವೃಶ್ಚಿಕೇನ ಮೀನೇನ ಭುಜಗೇನ ಚ ।
ಭಕ್ಷಿತಂ ಭೀತಮಾತ್ಮಾನಂ ಪಲಾಯಂತಂ ದದರ್ಶ ಸಃ ॥ ೪೧ ॥

---

೩೭. ಶರೀರಕ್ಕೆಲ್ಲ ಮಲಮೂತ್ರಗಳನ್ನೂ, ಕೀವುಮಜ್ಜೆಗಳನ್ನೂ ಬಳಿದುಕೊಂಡು, ತಾನು ಮನೋಹರವಾದ ವೀಣೆಯನ್ನು ನುಡಿಸುತ್ತಿರುವಂತೆ ಪರಶುರಾಮನಿಗೆ ಕನಸಾಯಿತು.

೩೮. ಹೊಳೆಯ ದಡದಲ್ಲಿ ಕುಳಿತು, ಅಗಲವಾದ ತಾವರೆ ಎಲೆಯಲ್ಲಿ ಮೊಸರು, ತುಪ್ಪ ಮತ್ತು ಜೇನುತುಪ್ಪವನ್ನು ಬೆರೆಸಿರುವ ಪಾಯಸವನ್ನು ತಾನು ಕುಡಿಯುತ್ತಿರುವಂತೆ ಕನಸು ಕಂಡನು.

೩೯. ದಿವ್ಯ ತಾಂಬೂಲವನ್ನು ಸೇವಿಸಿ, ಬ್ರಾಹ್ಮಣರ ಆಶೀರ್ವಾದವನ್ನು ಸ್ವೀಕರಿಸುತ್ತ, ಹೂವು, ಹಣ್ಣು ಮತ್ತು ದೀಪಗಳನ್ನು ತಾನು ನೋಡುತ್ತಿರುವಂತೆ ಕನಸಾಯಿತು.

೪೦. ಚೆನ್ನಾಗಿ ಮಾಗಿದ ಹಣ್ಣನ್ನೂ, ಹಾಲನ್ನೂ, ಸಕ್ಕರೆ ಬೆರೆಸಿದ ಬಿಸಿಯನ್ನವನ್ನೂ, ಸ್ವಸ್ತಿಕವಾಯನವನ್ನೂ (ಹೋಳಿಗೆ) ತಾನು ತಿನ್ನುತ್ತಿರುವಂತೆ ಪರಶುರಾಮನಿಗೆ ಕನಸಾಯಿತು.

೪೧. ಜಿಗಣೆ, ಚೇಳು, ಮೊಸಳೆ, ಹಾವು ಮುಂತಾದ ದುಷ್ಟಪ್ರಾಣಿಗಳು ತನ್ನನ್ನು ಕಡಿಯುತ್ತಿರುವಂತೆಯೂ, ತಾನು ಭಯಗೊಂಡು ಓಡುತ್ತಿರುವಂತೆಯೂ, ಸ್ವಪ್ನವನ್ನು ಕಂಡನು.

ತತೋ ದದರ್ಶ ಚಾತ್ಮಾನಂ ಮಂಡಲಂ ಚಂದ್ರಸೂರ್ಯಯೋಃ ।
ಪತಿಪುತ್ರವತೀಂ ನಾರೀಂ ಪಶ್ಯಂತಂ ಸಸ್ಮಿತಂ ದ್ವಿಜಂ ॥ ೪೨ ॥

ಸುವೇಷಯಾ ಕನ್ಯಕಯಾ ಸಸ್ಮಿತೇನ ದ್ವಿಜೇನ ಚ ।
ದದರ್ಶ ಶ್ಲಿಷ್ಟಮಾತ್ಮಾನಂ ತುಷ್ಟೇನ ಪರಿತುಷ್ಟಯಾ ॥ ೪೩ ॥

ಫಲಿತಂ ಪುಷ್ಪಿತಂ ವೃಕ್ಷಂ ದೇವತಾಪ್ರತಿಮಾಂ ನೃಪಂ ।
ಗಜಸ್ಥಂ ಚ ರಥಸ್ಥಂ ಚ ಪಶ್ಯಂತಂ ಸ್ವಂ ದದರ್ಶ ಹ ॥ ೪೪ ॥

ಪೀತವಸ್ತ್ರಪರೀಧಾನಾಂ ರತ್ನಾಲಂಕಾರಭೂಷಿತಾಂ ।
ವಿಶಂತೀಂ ಬ್ರಾಹ್ಮಣೀಂ ಗೇಹಂ ಪಶ್ಯಂತಂ ಸ್ವಂ ದದರ್ಶ ಹ ॥ ೪೫ ॥

ಶಂಖಂ ಚ ಸ್ಫಟಿಕಂ ಶ್ವೇತಮಾಲಾಂ ಮುಕ್ತಾಂ ಚ ಚಂದನಂ ।
ಸುವರ್ಣಂ ರಜತಂ ರತ್ನಂ ಪಶ್ಯಂತಂ ಸ್ವಂ ದದರ್ಶ ಹ ॥ ೪೬ ॥

---

೪೨. ಸೂರ್ಯಚಂದ್ರರ ಮಂಡಲವನ್ನೂ, ಪತಿಪುತ್ರವತಿಯಾದ ಪತಿವ್ರತೆಯನ್ನೂ, ವಿಕಸಿತವದನನಾದ ವಿಪ್ರನನ್ನೂ ನೋಡಿದಂತೆ ಪರಶುರಾಮನಿಗೆ ಕನಸಾಯಿತು.

೪೩. ವಸ್ತ್ರಾಲಂಕಾರಭೂಷಿತಳಾದ ಕನ್ಯಕೆಯಿಂದಲೂ, ಹಸನ್ಮುಖನಾದ ಬ್ರಾಹ್ಮಣನಿಂದಲೂ, ಆಲಿಂಗಿತನಾಗಿ, ಸಂತೋಷದಿಂದಿರುವಂತೆ ಕನಸ್ಸಿನಲ್ಲಿ ಕಂಡನು.

೪೪. ಫಲಪುಷ್ಪಪೂರಿತವಾದ ಮರವನ್ನೂ, ಆನೆ ಮತ್ತು ರಥದಲ್ಲಿ ಕುಳಿತಿರುವ ದೇವತಾಪ್ರತಿಮೆ ಮತ್ತು ರಾಜನನ್ನೂ, ಪರಶುರಾಮನು ಕನಸ್ಸಿನಲ್ಲಿ ನೋಡಿದನು.

೪೫. ಪೀತಾಂಬರವನ್ನುಟ್ಟು. ರತ್ನಾಲಂಕಾರಗಳನ್ನು ತೊಟ್ಟು, ತನ್ನ ಮನೆಗೆ ಬ್ರಾಹ್ಮಣಸ್ತ್ರೀಯೊಬ್ಬಳು ಪ್ರವೇಶಿಸುತ್ತಿರುವಂತೆ ಕನಸು ಕಂಡನು

೪೬. ಶಂಖಸ್ಫಟಿಕಗಳನ್ನೂ, ಶ್ವೇತಪುಷ್ಪಮಾಲೆಯನ್ನೂ, ಚಿನ್ನ, ಬೆಳ್ಳಿ, ಮುತ್ತು, ರತ್ನ ಮುಂತಾದ ಅನರ್ಘ್ಯವಸ್ತುಗಳನ್ನೂ, ಚಂದನಗಂಧವನ್ನೂ ಪರಶುರಾಮನು ಕನಸಿನಲ್ಲಿ ಕಂಡನು.

ಗಜಂ ವೃಷಂ ಚ ಸರ್ಪಂ ಚ ಶ್ವೇತಂ ಚ ಶ್ವೇತಚಾಮರಂ ।
ನೀಲೋತ್ಪಲಂ ದರ್ಪಣಂ ಹಿ ಭಾರ್ಗವೋ ವೈ ದದರ್ಶ ಹ ॥ ೪೭ ॥

ರಥಸ್ಥಂ ನವರತ್ನಾಢ್ಯಂ ಮಾಲತೀಮಾಲ್ಯಭೂಷಿತಂ ।
ರತ್ನಸಿಂಹಾಸನಸ್ಥಂ ಸ್ವಂ ಭೃಗುಃ ಸ್ವಪ್ನೇ ದದರ್ಶ ಹ ॥ ೪೮ ॥

ಪದ್ಮಶ್ರೇಣೀಂ ಪೂರ್ಣಕುಂಭಂ ದಧಿಲಾಜಾನ್ಘೃತಂ ಮಧು ।
ಪರ್ಣಚ್ಛತ್ರಂ ಛತ್ರಿಣಂ ಚ ಭೃಗುಃ ಸ್ವಪ್ನೇ ದದರ್ಶ ಹ ॥ ೪೯ ॥

ಬಕಪಂಕ್ತಿಂ ಹಂಸಪಂಕ್ತಿಂ ಕನ್ಯಾಪಂಕ್ತಿಂ ವ್ರತಾನ್ವಿತಾಂ ।
ಪೂಜಯಂತೀಂ ಘಟಂ ಶುಭ್ರಂ ಭೃಗುಃ ಸ್ವಪ್ನೇ ದದರ್ಶ ಹ ॥ ೫೦ ॥

ಮಂಡಪಸ್ಥಂ ದ್ವಿಜಗಣಂ ಪೂಜಯಂತಂ ಹರಂ ಹರಿಂ ।
ಜಯೋಽಸ್ತ್ವಿತ್ಯುಕ್ತವಂತಂ ತಂ ಭೃಗುಃ ಸ್ವಪ್ನೇ ದದರ್ಶ ಹ ॥ ೫೧ ॥

---

೪೭. ಆನೆ, ವೃಷಭ, ಸರ್ಪ ಮತ್ತು ಶ್ವೇತಚಾಮರಗಳನ್ನೂ, ಕನ್ನೈದಿಲೆ ಮತ್ತು ಕನ್ನಡಿಯನ್ನೂ ಪರಶುರಾಮನು ಕನಸಿನಲ್ಲಿ ಕಂಡನು

೪೮. ತಾನು ನವರತ್ನಗಳಿಂದ ಅಲಂಕೃತನಾಗಿ, ಜಾಜಿಮಾಲೆಯನ್ನು ಧರಿಸಿ ರಥದೊಳಗೆ ರತ್ನಸಿಂಹಾಸನದಲ್ಲಿ ಕುಳಿತಿರುವಂತೆ ಭಾರ್ಗವರಾಮನಿಗೆ ಕನಸಾಯಿತು.

೪೯. ಕಮಲಗಳ ಪಙ್ತಿಯನ್ನೂ, ಪೂರ್ಣಕಲಶವನ್ನೂ, ಮೊಸರು, ಅರಳು, ತುಪ್ಪ ಮತ್ತು ಜೇನುತುಪ್ಪವನ್ನೂ; ತಾಳೆಗರಿಯ ಛತ್ರಿಯನ್ನೂ, ಛತ್ರಧಾರಣೆ ಮಾಡಿರುವವನನ್ನೂ ಭಾರ್ಗವನು ಕಂಡಂತೆ ಕನಸಾಯಿತು.

೫೦. ಬಕ ಮತ್ತು ಹಂಸಪಕ್ಷಿಗಳ ಸಾಲನ್ನೂ ವ್ರತಪರಾಯಣೆಯರಾಗಿ, ಪೂರ್ಣಕುಂಭಗಳನ್ನು ಪೂಜಿಸುತ್ತಿರುವ ಕನ್ಯೆಯರ ಸಾಲನ್ನೂ ಪರಶುರಾಮನು ಕನಸ್ಸಿನಲ್ಲಿ ಕಂಡನು.

೫೧. ಉತ್ತಮವಾದ ಮಂಟಪದಲ್ಲಿ ಕುಳಿತು ಹರಿಹರರನ್ನು ಪೂಜಿಸಿ, ಜಯಘೋಷಮಾಡುತ್ತಿದ್ದ ಬ್ರಾಹ್ಮಣರ ಗುಂಪೊಂದು ಪರಶುರಾಮನಿಗೆ ಸ್ವಪ್ನದಲ್ಲಿ ಗೋಚರವಾಯಿತು.

ಸುಧಾವೃಷ್ಟಿಂ ಪೂರ್ಣವೃಷ್ಟಿಂ ಫಲವೃಷ್ಟಿಂ ಚ ಶಾಶ್ವತೀಂ ।
ಪುಷ್ಪಚಂದನವೃಷ್ಟಿಂ ಚ ಭೃಗುಃ ಸ್ವಪ್ನೇ ದದರ್ಶ ಹ ॥ ೫೨ ॥

ಸದ್ಯೋ ಮಾಂಸಂ ಜೀವಮತ್ಸ್ಯಂ ಮಯೂರಂ ಶ್ವೇತಖಂಜನಂ ।
ಸರೋವರಂ ಚ ತೀರ್ಥಾನಿ ಭೃಗುಃ ಸ್ವಪ್ನೇ ದದರ್ಶ ಹ ॥ ೫೩ ॥

ಪಾರಾವತಂ ಶುಕಂ ಚಾಷಂ ಶಂಖಚಿಲ್ಲಂ ಚ ಚಾತಕಂ ।
ವ್ಯಾಘ್ರಂ ಸಿಂಹಂ ಚ ಸುರಭಿಂ ಭೃಗುಃ ಸ್ವಪ್ನೇ ದದರ್ಶ ಹ ॥ ೫೪ ॥

ಗೋರೋಚನಾಂ ಹರಿದ್ರಾಂ ಚ ಶುಕ್ಲಧಾನ್ಯಾಚಲಂ ವರಂ ।
ಜ್ವಲದಗ್ನಿಂ ತಥಾ ದೂರ್ವಾಂ ಭೃಗುಃ ಸ್ವಪ್ನೇ ದದರ್ಶ ಹ ॥ ೫೫ ॥

---

೫೨. ಅಮೃತವೃಷ್ಟಿಯನ್ನೂ, ಪೂರ್ಣವೃಷ್ಟಿಯನ್ನೂ, ಸಾರ್ವಕಾಲಿಕವಾದ ಫಲವೃಷ್ಟಿಯನ್ನೂ, ಪುಷ್ಪ ಚಂದನಗಳ ವೃಷ್ಟಿ (ಮಳೆ)ಯನ್ನೂ ಭಾರ್ಗವನು ಕನಸಿನಲ್ಲಿ ಕಂಡನು.

೫೩. ಹೊಸದಾದ ಮಾಂಸ, ಜೀವಿತವಾದ ಮೀನು, ಬಿಳುಪಾದ ಖಂಜರೀಟ ಮತ್ತು ನವಿಲುಗಳನ್ನೂ. ಸರೋವರ ಮತ್ತು ಪುಣ್ಯತೀರ್ಥಗಳನ್ನೂ ಪರಶುರಾಮನು ಕನಸಿನಲ್ಲಿ ಕಂಡನು.

೫೪. ಪಾರಿವಾಳ, ಗಿಳಿ, ಚಾಷ, ಶಂಖಚಿಲ್ಲ, ಚಾತಕ ಮುಂತಾದ ಪಕ್ಷಿಗಳೂ, ಹುಲಿ, ಸಿಂಹ, ಹಸು ಮುಂತಾದ ಪ್ರಾಣಿಗಳೂ ಭಾರ್ಗವನ ದೃಷ್ಟಿಗೋಚರವಾದವು.

೫೫. ಗೋರೋಚನ, ಅರಿಸಿನ, ಶ್ವೇತಧಾನ್ಯ, ಉನ್ನತವಾದ ಪರ್ವತ ಉರಿಯುತ್ತಿರುವ ಅಗ್ನಿ ಮತ್ತು ಗರಿಕೆ ಹುಲ್ಲುಗಳು ಪರಶುರಾಮನಿಗೆ ಕನಸ್ಸಿನಲ್ಲಿ ಕಾಣಿಸಿಕೊಂಡವು.

ದೇವಾಲಯಸಮೂಹಂ ಚ ಶಿವಲಿಂಗಂ ಚ ಪೂಜಿತಂ ।
ಅರ್ಚಿತಾಂ ಮೃಣ್ಮಯೀಂ ಶೈವಾಂ ಭೃಗುಃ ಸ್ವಪ್ನೇ ದದರ್ಶ ಹ ॥ ೫೬ ॥

ಯವಗೋಧೂಮಚೂರ್ಣಾನಾಂ ಭಕ್ಷ್ಯಾಣಿ ವಿವಿಧಾನಿ ಚ ।
ಭೃಗುರ್ದದರ್ಶ ಸ್ವಪ್ನೇ ಚ ಬುಭುಜೇ ಚ ಪುನಃ ಪುನಃ ॥ ೫೭ ॥

ದಿವ್ಯವಸ್ತ್ರಪರೀಧಾನಾ ರತ್ನಭೂಷಣಭೂಷಿತಾಃ ।
ಆಗಮ್ಯಾಗಮನಂ ಸ್ವಪ್ನೇ ಚಕಾರ ಭೃಗುನಂದನಃ ॥ ೫೮ ॥

ದದರ್ಶ ನರ್ತಕೀಂ ವೇಶ್ಯಾಂ ರುಧಿರಂ ಚ ಸುರಾಂ ಪಪೌ ।
ರುಧಿರೋಕ್ಷಿತಸರ್ವಾಂಗಃ ಸ್ವಪ್ನೇ ಚ ಭೃಗುನಂದನಃ ॥ ೫೯ ॥

ಪಕ್ಷಿಣಾಂ ಪೀತವರ್ಣಾನಾಂ ಮಾನುಷಾಣಾಂ ಚ ನಾರದ ।
ಮಾಂಸಾನಿ ಬುಭುಜೇ ರಾಮೋ ಹೃಷ್ಟಃ ಸ್ವಪ್ನೇಽರುಣೋದಯೇ ॥ ೬೦ ॥

---

೫೬. ದೇವಾಲಯಗಳ ಸಮೂಹವನ್ನೂ, ಪೂಜೆಮಾಡಿದ ಈಶ್ವರಲಿಂಗಗಳನ್ನೂ, ಪಾರ್ವತಿಯ ಪ್ರತಿಮೆ (ಮಣ್ಣಿನ)ಯನ್ನೂ ಭಾರ್ಗವನು ಸ್ವಪ್ನದಲ್ಲಿ ಕಂಡನು.

೫೭. ಅಕ್ಕಿ ಮತ್ತು ಗೋಧಿಹಿಟ್ಟಿನಿಂದ ಮಾಡಿದ ವಿಧವಿಧ ಭಕ್ಷ್ಯಗಳನ್ನೂ ಪರಶುರಾಮನು ಕನಸಿನಲ್ಲಿ ನೋಡಿ ಮತ್ತೆ ಮತ್ತೆ ತಿಂದನು.

೫೮. ಪರಶುರಾಮನಿಗೆ ಸ್ವಪ್ನದಲ್ಲಿ, ದಿವ್ಯವಾದ ಸೀರೆಯನ್ನುಟ್ಟು ರತ್ನಾಭರಣಾಲಂಕೃತರಾದ ಅಗಮ್ಯಸ್ತ್ರೀಯರೊಡನೆ ಸಂಗಮಾಡಿದಂತೆ ತೋರಿತು.

೫೯. ಸ್ವಪ್ನದಲ್ಲಿ ನರ್ತಕಿಯರನ್ನೂ ವೇಶ್ಯೆಯರನ್ನೂ ಕಂಡು ರಕ್ತ ಮತ್ತು ಮದ್ಯಗಳನ್ನು ಪಾನಮಾಡಿ, ಸರ್ವಾಂಗಗಳಿಗೂ ರಕ್ತವನ್ನು ಬಳಿದುಕೊಂಡಂತೆ ಭಾರ್ಗವನಿಗೆ ತೋರಿತು.

೬೦. ಎಲೈ ನಾರದನೇ, ಅರುಣೋದಯಕಾಲದ ಸ್ವಪ್ನದಲ್ಲಿ ಪರಶುರಾಮನಿಗೆ ಹಳದಿ ಬಣ್ಣದ ಪಕ್ಷಿಗಳ ಮತ್ತು ಮನುಷ್ಯರ ಮಾಂಸವನ್ನು ತಾನು ತಿಂದಂತೆ ತೋರಿತು.

ಅಕಸ್ಮಾನ್ನಿಗಡೈರ್ಬದ್ಧಂ ಕ್ಷತಂ ಶಸ್ತ್ರೇಣ ಸ್ವಂ ಪುನಃ ।
ದೃಷ್ಟ್ವಾ ಚ ಬುಬುಧೇ ಪ್ರಾತಃ ಸಮುತ್ತಸ್ಥೌ ಹರಿಂ ಸ್ಮರನ್ ॥ ೬೧ ॥

ಅತೀವ ಹೃಷ್ಟಃ ಸ್ವಪ್ನೇನ ಪ್ರಾತಃ ಕೃತ್ಯಂ ಚಕಾರ ಸಃ ।
ಮನಸಾ ಬುಬುಧೇ ಸರ್ವಂ ವಿಜೇಷ್ಯಾಮಿ ರಿಪುಂ ಧ್ರುವಂ ॥ ೬೨ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ತೃತೀಯೇ
ಗಣಪತಿಖಂಡೇ ನಾರದನಾರಾಯಣಸಂವಾದೇ
ತ್ರಯಸ್ತ್ರಿಂಶತ್ತಮೋಽಧ್ಯಾಯಃ

---

೬೧. ಇದ್ದಕ್ಕಿದ್ದಂತೆಯೇ ಸ್ವಪ್ನದಲ್ಲಿ ತಾನು ಸಂಕೋಲೆಗಳ ಬಂಧನಕ್ಕೆ ಸಿಲುಕಿ, ಆಯುಧಗಳ ಹೊಡೆತದಿಂದ ಗಾಯಗೊಂಡಂತೆ ತೋರಲು, ಪರಶುರಾಮನು ಶ್ರೀಹರಿಯನ್ನು ಸ್ಮರಿಸುತ್ತ ಹಾಸಿಗೆಯಿಂದೆದ್ದನು. (ಇಲ್ಲಿಯೂ ಕೂಡ ಪರಶುರಾಮನು ಮೇಲ್ಕಂಡ ಸ್ವಪ್ನಗಳನ್ನೆಲ್ಲ ಕಂಡನೆಂಬುದು ಮುಖ್ಯ ತಾತ್ಪರ್ಯವಲ್ಲ. ಯಾರಿಗಾದರೂ ಸ್ವಪ್ನದಲ್ಲಿ ಮೇಲ್ಕಂಡ ವಸ್ತುಗಳು ಕಾಣಿಸಿಕೊಂಡರೆ ಶುಭವಾಗುವುದೆಂಬುದೇ ಈ ಪದ್ಯಗಳ ತಾತ್ಪರ್ಯ).

೬೨. ಪರಶುರಾಮನು ತನ್ನ ಅನುಭವಕ್ಕೆ ಗೋಚರವಾದ ಸುಂದರ ಸ್ವಪ್ನವನ್ನು ಸ್ಮರಿಸಿಕೊಳ್ಳುತ್ತಲೇ ಪ್ರಾತಃಕಾಲದ ವಿಧಿಯನ್ನು ಪೂರೈಸಿದನು. ಶತ್ರುವನ್ನು ಖಂಡಿತವಾಗಿಯೂ ಗೆಲ್ಲುವೆನೆಂದು ಮನಸ್ಸಿನಲ್ಲಿಯೇ ನಿರ್ಧರಿಸಿಕೊಂಡನು.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಗಣಪತಿಖಂಡದಲ್ಲಿ ಭಾರ್ಗವನ
ಸ್ವಪ್ನಾನುಭವವೆಂಬ ಮೂವತ್ತಮೂರನೆಯ
ಅಧ್ಯಾಯವು ಮುಗಿದುದು.

ಮೂವತ್ತಮೂರನೆಯ ಅಧ್ಯಾಯದ ಸಾರಾಂಶ

ಪರಶುರಾಮನು ಶಿವಪಾರ್ವತಿಯರ ಅನುಜ್ಞೆಯನ್ನು ಪಡೆದು, ಪುಷ್ಕರ ಕ್ಷೇತ್ರದಲ್ಲಿ ಘೋರತಪಸ್ಸನ್ನಾಚರಿಸಿ, ಪರಮಾತ್ಮನ ಸಾಕ್ಷಾತ್ಕಾರದಿಂದ ಸಂತುಷ್ಟನಾಗಿ, ಇಷ್ಟಸಿದ್ಧಿಯಾಗುವಂತೆ ವರವನ್ನು ಪಡೆದು, ತನ್ನ ಆಶ್ರಮಕ್ಕೆ ಹಿಂತಿರುಗಿದನು. ಅಲ್ಲಿ ತನ್ನ ಇಷ್ಟಮಿತ್ರರೊಡನೆ ಪರ್ಯಾಲೋಚಿಸಿ, ಶುಭಮುಹೂರ್ತದಲ್ಲಿ ಶತ್ರುಜಯಕ್ಕಾಗಿ ಯುದ್ಧಕ್ಕೆ ಹೊರಟನು. ಪ್ರಯಾಣಕಾಲದಲ್ಲಿ ವಿಜಯಸೂಚಕವಾದ ಶುಭಶಕುನಗಳನ್ನೂ, ನರ್ಮದಾನದಿಯ ತೀರದಲ್ಲಿ ಬಿಡಾರಮಾಡಿ ಮಲಗಿದ್ದಾಗ ಶುಭಸ್ವಪ್ನವನ್ನೂ ಪರಶುರಾಮನು ಕಂಡು ಆನಂದಭರಿತನಾದನು.

—॥ ಓಂ ॥—

—॥ ಶ್ರೀ ಗಣೇಶಾಯ ನಮಃ ॥—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಗಣಪತಿಖಂಡೇ

॥ ಚತುಸ್ತ್ರಿಂಶತ್ತಮೋಽಧ್ಯಾಯಃ ॥

॥ ನಾರಾಯಣ ಉವಾಚ ॥

ಸ ಪ್ರಾತರಾಹ್ನಿಕಂ ಕೃತ್ವಾ ಸಮಾಲೋಚ್ಯ ಚ ತೈಃ ಸಹ ।
ದೂತಂ ಪ್ರಸ್ಥಾಪಯಾಮಾಸ ಕಾರ್ತವೀರ್ಯಾಶ್ರಮಂ ಭೃಗುಃ ॥ ೧ ॥

ಸ ದೂತಃ ಶೀಘ್ರಮಾಗತ್ಯ ವಸಂತಂ ರಾಜಸಂಸದಿ ।
ವೇಷ್ಟಿತಂ ಸಚಿವೈಃ ಸಾರ್ಧಮುವಾಚ ನೃಪತೀಶ್ವರಂ ॥ ೨ ॥

॥ ರಾಮದೂತ ಉವಾಚ ॥

ನರ್ಮದಾತೀರಸಾನ್ನಿಧ್ಯೇ ನ್ಯಗ್ರೋಧಾಕ್ಷಯಮೂಲಕೇ ।
ಸ ಭೃಗುರ್ಭ್ರಾತೃಭಿಃ ಸಾರ್ಧಂ ತತ್ರ ತ್ವಂ ಗಂತುಮರ್ಹಸಿ ॥ ೩ ॥

ಮೂವತ್ತನಾಲ್ಕನೆಯ ಅಧ್ಯಾಯವು

೧. ನಾರಾಯಣಮಹರ್ಷಿ :—ಪರಶುರಾಮನು ಪ್ರಾತಃಕಾಲದ ನಿತ್ಯವಿಧಿಯನ್ನಾಚರಿಸಿ ತನ್ನ ಪರಿವಾರದವರೊಡನೆ ಸಮಾಲೋಚಿಸಿ, ಕಾರ್ತವೀರ್ಯಾರ್ಜುನನ ಬಿಡಾರಕ್ಕೆ ದೂತನನ್ನು ಕಳುಹಿಸಿದನು.

೨. ದೂತನು ಜಾಗ್ರತೆಯಾಗಿ ಬಂದು ಸಭಾಮಧ್ಯದಲ್ಲಿ ಮಂತ್ರಿಗಳಿಂದ ಪರಿವೃತನಾಗಿ ಕುಳಿತಿದ್ದ ಕಾರ್ತವೀರ್ಯಾರ್ಜುನನನ್ನು ಕಂಡನು.

೩-೪. ದೂತ :—ನರ್ಮದಾನದಿಯ ತೀರದಲ್ಲಿರುವ ಅಕ್ಷಯವಟವೃಕ್ಷದ ಕೆಳಗೆ ಭಾರ್ಗವರಾಮನು ಸಹೋದರರೊಡನೆ ಬಂದು ಬಿಡಾರಮಾಡಿರುವನು. ಎಲೈ

ಯುದ್ಧಂ ಕುರು ಮಹಾರಾಜ ಜ್ಞಾತಿಭಿರ್ಜ್ಞಾತಿಭಿಃ ಸಹ ।
ತ್ರಿಸ್ಸಪ್ತಕೃತ್ವೋ ನಿಭೂರ್ಪಾಂ ಕರಿಷ್ಯತಿ ಮಹೀಮಿತಿ ॥ ೪ ॥

ಇತ್ಯುಕ್ತ್ವಾ ರಾಮದೂತಶ್ಚಾಪ್ಯಗಚ್ಛದ್ರಾಮಸನ್ನಿಧಿಂ ।
ರಾಜಾ ವಿಧಾಯ ಸನ್ನಾಹಂ ಸಮರಂ ಗಂತುಮುದ್ಯತಃ ॥ ೫ ॥

ಗಚ್ಛಂತಂ ಸಮರಂ ದೃಷ್ಟ್ವಾ ಪ್ರಾಣೇಶಂ ಸಾ ಮನೋರಮಾ ।
ತನೇವ ವಾರಯಾಮಾಸ ವಾಸಯಾಮಾಸ ಸನ್ನಿಧೌ ॥ ೬ ॥

ರಾಜಾ ಮನೋರಮಾಂ ದೃಷ್ಟ್ವಾ ಪ್ರಸನ್ನವದನೇಕ್ಷಣಃ ।
ತಾಮುವಾಚ ಸಭಾಮಧ್ಯೇ ವಾಕ್ಯಂ ಮಾನಸಿಕಂ ಮುನೇ ॥ ೭ ॥

॥ ಕಾರ್ತವೀರ್ಯಾರ್ಜುನ ಉವಾಚ ॥

ಮಾಮೇವಾಹ್ವಯತೇ ಕಾಂತೇ ಜಮದಗ್ನಿಸುತೋ ಮಹಾನ್ ।
ಸ ತಿಷ್ಠನ್ನರ್ಮದಾತೀರೇ ರಣಾಯ ಭ್ರಾತೃಭಿಃ ಸಹ ॥ ೮ ॥

ಮಹಾರಾಜನೇ, ನೀನು ನಿನ್ನ ಜ್ಞಾತಿಗಳೊಡನೆಯೂ ಜಾತಿಯವರೊಡನೆಯೂ, ಬಂದುಅವನೊಡನೆಯುದ್ಧ ಮಾಡು. ಇಪ್ಪತ್ತೊಂದುಸಾರಿ ಭೂಪ್ರದಕ್ಷಿಣೆಮಾಡಿ ಭೂಮಿಯಲ್ಲಿಕ್ಷತ್ರಿಯರಿಲ್ಲದಂತೆ ಮಾಡುವುದಾಗಿ ಪರಶುರಾಮನು ಪ್ರತಿಜ್ಞೆಮಾಡಿರುವನು.

೫. ರಾಮದೂತನು ಹೀಗೆ ಹೇಳಿ, ರಾಮನಸನ್ನಿಧಿಗೆ ಹೊರಟುಹೋಗಲು ಕಾರ್ತವೀರ್ಯಾರ್ಜುನನು ಯುದ್ಧ ಸನ್ನದ್ಧನಾಗಿ ಹೊರಡಲನುವಾದನು.

೬. ತನ್ನ ಪ್ರಾಣಕಾಂತನು ಯುದ್ಧಕ್ಕೆ ಪ್ರಯಾಣಮಾಡುತ್ತಿರುವುದನ್ನು ನೋಡಿ ಮನೋರಮೆಯು, ಅವನನ್ನು ತಡೆದು ತನ್ನ ಸಮೀಪದಲ್ಲಿ ಕುಳ್ಳಿರಿಸಿ ಕೊಂಡಳು.

೭. ಆಗ ರಾಜನು ತನ್ನ ಪತ್ನಿಯಾದ ಮನೋರಮೆಯನ್ನು ನೋಡಿ ಪ್ರಸನ್ನನಾಗಿ, ಸಭಾಮಧ್ಯದಲ್ಲಿ ಆಕೆಯನ್ನು ಕುರಿತು ತನ್ನ ಮನೋಗತವಾದ ಕೆಲವು ಮಾತುಗಳನ್ನಾಡಿದನು.

೮. ಕಾರ್ತವೀರ್ಯಾರ್ಜುನ :—ಎಲೌಪ್ರಿಯಳೇ, ಜಮದಗ್ನಿಯ ಪುತ್ರನಾದ ಪರಶುರಾಮನು ಸಹೋದರರೊಡನೆ ನರ್ಮದಾತೀರಕ್ಕೆ ಬಂದು, ನನ್ನೊಡನೆ ಯುದ್ಧ ಮಾಡಲು ಬಯಸಿ ಹೇಳಿಕಳುಹಿಸಿದ್ದಾನೆ.

ಸಂಪ್ರಾಪ್ಯ ಶಂಕರಾಚ್ಛಸ್ತ್ರಂ ಮಂತ್ರಂ ಚ ಕವಚಂ ಹರೇಃ ।
ತ್ರಿಸ್ಸಪ್ತಕೃತ್ವೋನಿರ್ಭೂಪಾಂ ಕರ್ತುಮಿಚ್ಛತಿ ಮೇದಿನೀಂ　　　॥ ೯ ॥

ಆಂದೋಲಯಂತಿ ಮೇ ಪ್ರಾಣಾ ಮನಃ ಸಂಕ್ಷುಭಿತಂ ಮುಹುಃ ।
ಶಶ್ವತ್ಸ್ಫುರಿತವಾಮಾಂಗಂ ದೃಷ್ಟಂ ಸ್ವಪ್ನಂ ಶೃಣು ಪ್ರಿಯೇ　　　॥ ೧೦ ॥

ತೈಲಾಭ್ಯಂಗಿತಮಾತ್ಮಾನಮುಪಶ್ಯಂ ಗರ್ದಭೋಪರಿ ।
ಔಢ್ರಪುಷ್ಪಸ್ಯ ಮಾಲ್ಯಂ ಚ ಬಿಭ್ರತಂ ರಕ್ತಚಂದನಂ　　　॥ ೧೧ ॥

ರಕ್ತವಸ್ತ್ರಪರೀಧಾನಂ ಲೋಹಾಲಂಕಾರಭೂಷಿತಂ ।
ಕ್ರೀಡಂತಂ ಚ ಹಸಂತಂ ಚ ನಿರ್ವಾಣಾಂಗಾರರಾಶಿನಾ　　　॥ ೧೨ ॥

---

೯. ಶಂಕರನ ವರದಿಂದ ಪಾಶುಪತಾಸ್ತ್ರವನ್ನೂ, ಶ್ರೀಹರಿಯ ಮಂತ್ರ ಕವಚಗಳನ್ನೂ ಪಡೆದು, ಇಪ್ಪತ್ತೊಂದುಸಾರಿ ಸುತ್ತಿ ಭೂಮಿಯಲ್ಲಿ ಕ್ಷತ್ರಿಯರಿಲ್ಲದಂತೆ ಮಾಡಬಯಸಿದ್ದಾನೆ.

೧೦. ಪ್ರಾಣಪ್ರಿಯಳೇ, ಈ ವಿಚಾರವನ್ನು ಕೇಳಿ ನನ್ನ ಪ್ರಾಣಗಳು ಚಂಚಲವಾಗಿವೆ. ಮನಸ್ಸು ಕದಡಿಹೋಗಿದೆ. ನನ್ನ ಎಡಭಾಗದ ಅವಯವಗಳು ಹಾರುತ್ತಿವೆ. ನನಗಾದ ದುಃಸ್ವಪ್ನವನ್ನು ಹೇಳುವೆನು ಕೇಳು.

೧೧. ತೈಲಾಭ್ಯಂಗನಮಾಡಿ ಮೈಗೆಲ್ಲ ರಕ್ತಚಂದನವನ್ನು ಬಳಿದುಕೊಂಡು ಕೆಂಪುದಾಸವಾಳಪುಷ್ಪದ ಮಾಲೆಯನ್ನು ಕಂಠದಲ್ಲಿ ಧರಿಸಿ, ಕತ್ತೆಯ ಮೇಲೆ ಕುಳಿತಿದ್ದಂತೆ ನನಗೆ ಕನಸಾಯಿತು.

೧೨. ಕೆಂಪುಬಟ್ಟೆಯನ್ನುಟ್ಟು, ಕಬ್ಬಿಣ ಮುಂತಾದ ಲೋಹದ ಆಭರಣಗಳನ್ನು ತೊಟ್ಟು, ಆರಿಹೋದ ಕೆಂಡದ (ಇಜ್ಜಲಿನ) ರಾಶಿಯ ಮೇಲೆ ನಾನು ನಗುತ್ತ ಆಟವಾಡುತ್ತಿರುವಂತೆ ಕನಸನ್ನು ಕಂಡೆನು.

ಭಸ್ಮಾಚ್ಛನ್ನಾಂ ಚ ಪೃಥಿವೀಂ ಜಪಾಪುಷ್ಪಾನ್ವಿತಾಂ ಸತಿ ।
ರಹಿತಂ ಚಂದ್ರಸೂರ್ಯಾಭ್ಯಾಂ ರಕ್ತಸಂಧ್ಯಾನ್ವಿತಂ ನಭಃ ॥ ೧೩ ॥

ಮುಕ್ತಕೇಶಾಂ ಚ ನೃತ್ಯಂತೀಂ ವಿಧವಾಂ ಛಿನ್ನನಾಸಿಕಾಂ ।
ರಕ್ತವಸ್ತ್ರ ಪರೀಧಾನಾಮಪಶ್ಯಂ ಚಾಟ್ಟಹಾಸಿನೀಂ ॥ ೧೪ ॥

ಸಶರಾಮಗ್ನಿರಹಿತಾಂ ಚಿತಾಂ ಭಸ್ಮಸಮನ್ವಿತಾಂ ।
ಭಸ್ಮವೃಷ್ಟಿಮಸೃಗ್‌ವೃಷ್ಟಿಮಗ್ನಿವೃಷ್ಟಿಮಪೀಶ್ವರಿ ॥ ೧೫ ॥

ಪಕ್ವತಾಲಫಲಾಕೀರ್ಣಾಂ ಪೃಥಿವೀಮಸ್ಥಿಸಂಯುತಾಂ ।
ಅಪಶ್ಯಂ ಕರ್ಪರೌಘಂ ಚ ಚ್ಛಿನ್ನಕೇಶನಖಾನ್ವಿತಂ ॥ ೧೬ ॥

---

೧೩. ಭೂಮಿಯ ಮೇಲೆ ಬೂದಿಯನ್ನು ಮುಚ್ಚಿದಂತೆಯೂ, ಕೆಂಪು ದಾಸವಾಳದ ಹೂಗಳು ತುಂಬಿರುವಂತೆಯೂ, ಆಕಾಶದಲ್ಲಿ ಸೂರ್ಯಚಂದ್ರರಿಲ್ಲದೆ ಸಂಧ್ಯಾರಾಗವು ವ್ಯಾಪಿಸಿರುವಂತೆಯೂ, ನನಗೆ ಕನಸಾಯಿತು.

೧೪. ಮೂಗುಕತ್ತರಿಸಿಹೋದ ವಿಧವೆಯೊಬ್ಬಳು ಕೆಂಪುವಸ್ತ್ರವನ್ನುಟ್ಟು ತಲೆಗೂದಲನ್ನು ಕೆದರಿಕೊಂಡು ಅಟ್ಟಹಾಸದಿಂದ ನರ್ತನಮಾಡುತ್ತಿರುವುದನ್ನು ನಾನು ಸ್ವಪ್ನದಲ್ಲಿ ಕಂಡೆನು.

೧೫. ಬಾಣಗಳಿಂದ ನಿರ್ಮಿತವಾಗಿ ಅಗ್ನಿಯಿಲ್ಲದೆ ಬೂದಿತುಂಬಿದ ಚಿತೆಯೊಂದನ್ನೂ, ಬೂದಿ, ರಕ್ತ ಮತ್ತು ಬೆಂಕಿಯ ಮಳೆಯನ್ನೂ ನಾನು ಕನಸಿನಲ್ಲಿ ಕಂಡೆನು.

೧೬. ಭೂಮಿಯಲ್ಲಿ ಮಾಗಿದ ತಾಳೆಯ ಹಣ್ಣುಗಳು ಮತ್ತು ಮೂಳೆಗಳು ತುಂಬಿರುವಂತೆಯೂ, ಬೆನ್ನುಮೂಳೆಗಳು ಕತ್ತರಿಸಿದ ತಲೆಗೂದಲು ಮತ್ತು ಉಗುರುಗಳು ರಾಶಿರಾಶಿಯಾಗಿರುವಂತೆಯೂ ನನಗೆ ಸ್ವಪ್ನವಾಯಿತು.

ಪರ್ವತಂ ಲವಣಾನಾಂ ಚ ರಾಶೀಭೂತಂ ಕಪರ್ದಕಂ ।
ಚೂರ್ಣಾನಾಂ ಚೈವ ತೈಲಾನಾಮುದ್ಯಶಂ ಕಂದರಂ ನಿಶಿ ॥ ೧೭ ॥

ಅದೃಶಂ ಪುಷ್ಪಿತಂ ವೃಕ್ಷಮಶೋಕಕರವೀರಯೋಃ ।
ತಾಲವೃಕ್ಷಂ ಚ ಫಲಿತಂ ತತ್ರ ಚೈವ ಪತತ್ಫಲಂ ॥ ೧೮ ॥

ಸ್ವಕರಾತ್ಪೂರ್ಣಕಲಶಃ ಪಪಾತ ಚ ಬಭಂಜ ಚ ।
ಇತ್ಯಪಶ್ಯಂ ಚ ಗಗನಾತ್ಸಂಪತಚ್ಚಂದ್ರಮಂಡಲಂ ॥ ೧೯ ॥

ಅಪಶ್ಯಮಂಬರಾತ್ಸೂರ್ಯಮಂಡಲಂ ಸಂಪತದ್ಭುವಿ ।
ಉಲ್ಕಾಪಾತಂ ಧೂಮಕೇತುಂ ಗ್ರಹಣಂ ಚಂದ್ರಸೂರ್ಯಯೋಃ ॥ ೨೦ ॥

ವಿಕೃತಾಕಾರಪುರುಷಂ ವಿಕಟಾಸ್ಯಂ ದಿಗಂಬರಂ ।
ಆಗಚ್ಛಂತಂ ಚಾಗ್ರತಸ್ತಮಪಶ್ಯಂ ಚ ಭಯಾನಕಂ ॥ ೨೧ ॥

---

೧೭. ಉಪ್ಪಿನಪರ್ವತವೂ, ಕವಡೆಯರಾಶಿಯೂ, ಹಿಟ್ಟು ಮತ್ತು ಎಣ್ಣೆಗಳ ಕಣಿವೆಯೂ ರಾತ್ರಿ ಕನಸಿನಲ್ಲಿ ನನಗೆ ಗೋಚರವಾಯಿತು.

೧೮. ಅಶೋಕ ಮತ್ತು ಕೆಂಪು ಕಣಿಗಲೆ ಮರಗಳು ಹೂಬಿಟ್ಟಿರುವುದನ್ನೂ, ತಾಳೆಯಮರವು ಫಲಿತವಾಗಿ ಅದರ ಹಣ್ಣು ಕೆಳಗೆ ಬೀಳುತ್ತಿರುವುದನ್ನೂ ನಾನು ಸ್ವಪ್ನದಲ್ಲಿ ಕಂಡೆನು.

೧೯. ನನ್ನ ಕೈಯಿಂದ ಪೂರ್ಣಕಲಶವು ಬಿದ್ದು ಒಡೆದುಹೋದಂತೆಯೂ, ಆಕಾಶದಿಂದ ಚಂದ್ರಮಂಡಲವು ಜಾರಿ ಬಿದ್ದಂತೆಯೂ ನನಗೆ ಕನಸಾಯಿತು.

೨೦. ಸೂರ್ಯಮಂಡಲವು ಆಕಾಶದಿಂದ ಕಳಚಿ ಭೂಮಿಗೆ ಬೀಳುವಂತೆಯೂ, ಉಲ್ಕಾಪಾತವಾದಂತೆಯೂ, ಧೂಮಕೇತು ಮತ್ತು ಚಂದ್ರಸೂರ್ಯಗ್ರಹಣ ಇವುಗಳನ್ನು ಕಂಡಂತೆಯೂ ನನಗೆ ಕನಸಾಯಿತು.

೨೧. ದೊಡ್ಡದಾದ ಬಾಯಿನಿಂದಲೂ, ವಿಕೃತಾಕಾರದಿಂದಲೂ ಭಯಂಕರನಾದ ಪುರುಷನೊಬ್ಬನು ದಿಗಂಬರನಾಗಿ ಎದುರಿನಲ್ಲಿ ಬರುತ್ತಿರುವುದನ್ನು ನೋಡಿದಂತೆ ಕನಸಾಯಿತು.

ಬಾಲಾ ದ್ವಾದಶವರ್ಷೀಯಾ ವಸ್ತ್ರಭೂಷಣಭೂಷಿತಾ ।
ಸಂರುಷ್ಟಾ ಯಾತಿ ಮದ್ಗೇಹಾದಿತ್ಯಪಶ್ಯ ಮಹಂ ನಿಶಿ ॥ ೨೨ ॥

ಆಜ್ಞಾಂ ತ್ವಂ ದೇಹಿ ರಾಜೇಂದ್ರ ತ್ವದ್ಗೇಹಾದ್ಯಾಮಿಕಾನನಂ ।
ವದಸಿ ತ್ವಂ ಮಾಮಿತಿ ಚ ನಿಶ್ಯಪಶ್ಯಮಹಂ ಶುಚಾ ॥ ೨೩ ॥

ರುಷ್ಟೋ ವಿಪ್ರೋ ಮಾಂ ಶಪತೇ ಸಂನ್ಯಾಸೀ ಚ ತಥಾ ಗುರುಃ ।
ಭಿತ್ತೌ ಪುತ್ತಲಿಕಾಶ್ಚಿತ್ರಾ ನೃತ್ಯಂತೀಶ್ಚ ದದರ್ಶ ಹ ॥ ೨೪ ॥

ಚಂಚಲಾನಾಂ ಚ ಗೃಧ್ರಾಣಾಂ ಕಾಕಾನಾಂ ನಿಕರೈಃ ಸದಾ ।
ಪೀಡಿತಂ ಮಹಿಷಾಣಾಂ ಚ ಸ್ವಮಪಶ್ಯಮಹಂ ನಿಶಿ ॥ ೨೫ ॥

ಪೀಡಿತಂ ತೈಲಯಂತ್ರೇಣ ಭ್ರಾಮಿತಂ ತೈಲಕಾರಿಣಾ ।
ದಿಗಂಬರಾನ್ಪಾಶಹಸ್ತಾನಪಶ್ಯಮಹಮೀಶ್ವರಿ ॥ ೨೬ ॥

---

೨೨. ವಸ್ತ್ರಾಲಂಕಾರಭೂಷಿತಳಾದ ಹನ್ನೆರಡು ವರುಷದ ಹುಡುಗಿಯೊಬ್ಬಳು ಕೋಪಗೊಂಡು ನನ್ನ ಮನೆಯಿಂದ ಹೊರಕ್ಕೆ ಹೋಗುತ್ತಿದ್ದಂತೆ ಕನಸಾಯಿತು.

೨೩. 'ಎಲೈ ರಾಜೇಂದ್ರನೇ, ನನಗೆ ಅನುಜ್ಞೆಯನ್ನು ಕೊಡು, ನಿನ್ನ ಮನೆಯನ್ನು ಬಿಟ್ಟು ಕಾಡಿಗೆ ಹೋಗುವೆನು' ಹೀಗೆಂದು ನೀನು ವ್ಯಥೆಯಿಂದ ನನಗೆ ಹೇಳುತ್ತಿರುವಂತೆ ರಾತ್ರಿ ಕನಸಾಯಿತು.

೨೪. ಬ್ರಾಹ್ಮಣ, ಗುರು ಮತ್ತು ಸನ್ಯಾಸಿಗಳು ಕೋಪಗೊಂಡು ನನಗೆ ಶಾಪಕೊಡುತ್ತಿರುವಂತೆಯೂ, ಗೋಡೆಯ ಮೇಲಿದ್ದ ಚಿತ್ರದ ಬೊಂಬೆಗಳು ಕುಣಿಯುತ್ತಿರುವಂತೆಯೂ, ಸ್ವಪ್ನದಲ್ಲಿ ಗೋಚರವಾಯಿತು.

೨೫. ಚಂಚಲವಾದ ಹದ್ದು ಮತ್ತು ಕಾಗೆಗಳೂ, ಕೋಣಗಳೂ ನನ್ನನ್ನು ಪೀಡಿಸುತ್ತಿರುವಂತೆ ರಾತ್ರಿ ಕನಸಿನಲ್ಲಿ ಅನುಭವವಾಯಿತು.

೨೬. ಎಣ್ಣೆಯ ಗಾಣದೊಳಕ್ಕೆ ಹಾಕಿ, ಗಾಣಿಗರವನು ನನ್ನನ್ನು ತಿರುಗಿಸುತ್ತಿದ್ದಂತೆಯೂ, ದಿಗಂಬರರೂ, ಪಾಶಾಯುಧಧರರೂ ನನ್ನ ದೃಷ್ಟಿಗೆ ಗೋಚರವಾದಂತೆಯೂ, ಕನಸಾಯಿತು.

ನೃತ್ಯಂತಿ ಗಾಯಕಾಃ ಸರ್ವೇ ಗಾನಂ ಗಾಯಂತಿ ಮೇ ಗೃಹೇ।
ವಿವಾಹಂ ಪರಮಾನಂದಮಿತ್ಯಪಶ್ಯ ಮಹಂ ನಿಶಿ　　॥ ೨೭ ॥

ರಮಣಂ ಕುರ್ವತೋ ಲೋಕಾನ್ಕೇಶಾಕೇಶಿ ಚ ಕುರ್ವತಃ।
ಅದೃಶಂ ಸಮರಂ ರಾತ್ರೌ ಕಾಕಾನಾಂ ಚ ಶುನಾಮಪಿ　　॥ ೨೮ ॥

ವೋಟಿಕಾನಿ ಚ ಪಿಂಡಾನಿ ಶ್ಮಶಾನಂ ಶವಸಂಯುತಂ।
ರಕ್ತವಸ್ತ್ರಂ ಶುಕ್ಲವಸ್ತ್ರಮಪಶ್ಯಂ ನಿಶಿ ಕಾಮಿನಿ　　॥ ೨೯ ॥

ಕೃಷ್ಣಾಂಬರಾ ಕೃಷ್ಣವರ್ಣಾ ನಗ್ನಾನ್ಯೈ ಮುಕ್ತಕೇಶಿನೀ।
ವಿಧವಾಶ್ಲಿಷ್ಯತಿ ಚ ಮಾಮಪಶ್ಯಂ ನಿಶಿ ಶೋಭನೇ　　॥ ೩೦ ॥

ನಾಪಿತೋ ಮುಂಡತೇ ಮುಂಡಂ ಶ್ಮಶ್ರುಶ್ರೇಣೀಂ ಚ ಮೇಪ್ರಿಯೇ।
ವಕ್ಷಃಸ್ಥಲಂ ಚ ನಖರಮಿತ್ಯಪಶ್ಯಮಹಂ ನಿಶಿ　　॥ ೩೧ ॥

---

೨೭. ಗಾಯಕರು ನಮ್ಮ ಮನೆಯಲ್ಲಿ ಸೇರಿ ಗಾಯನವಾಡುತ್ತಿದ್ದಂತೆಯೂ, ನರ್ತಕರು ನರ್ತನವಾಡುತ್ತಿದ್ದಂತೆಯೂ, ವಿವಾಹಮಹೋತ್ಸವವು ನಡೆಯುತ್ತಿದ್ದಂತೆಯೂ ಕನಸಿನಲ್ಲಿ ಕಂಡೆನು.

೨೮. ಜನರು ಆಟವಾಡುತ್ತಿದ್ದಂತೆಯೂ, ಪರಸ್ಪರವಾಗಿ ಕೂದಲುಗಳನ್ನು ಹಿಡಿದು ಜಗಳವಾಡುತ್ತಿದ್ದಂತೆಯೂ, ಕಾಗೆಗಳಿಗೂ ನಾಯಿಗಳಿಗೂ ಯುದ್ಧವಾಗುತ್ತಿದ್ದಂತೆಯೂ ಸ್ವಪ್ನದಲ್ಲಿ ಗೋಚರವಾಯಿತು.

೨೯. ಸೀಳಿದ ದರ್ಭಾಗ್ರಗಳಿಂದ ಕೂಡಿದ ಪಿಂಡಗಳನ್ನೂ, ಶವಸಹಿತವಾದ ಶ್ಮಶಾನವನ್ನೂ, ಕೆಂಪು ಮತ್ತು ಬಿಳುಪಾದ ಬಟ್ಟೆಗಳನ್ನೂ ರಾತ್ರಿ ಕನಸಿನಲ್ಲಿ ಕಂಡೆನು.

೩೦ ಎಲೌ ಶೋಭನಾಂಗಿಯೇ, ಕಪ್ಪಾದ ವಿಧವೆಯೊಬ್ಬಳು ಕಪ್ಪು ಬಟ್ಟೆಯನ್ನುಟ್ಟು, ತಲೆಗೂದಲುಗಳನ್ನು ಕೆದರಿಕೊಂಡು ನನ್ನನ್ನು ಆಲಿಂಗಿಸಿಕೊಳ್ಳುತ್ತಿದ್ದಂತೆ ಕನಸಾಯಿತು.

೩೧. ಪ್ರಾಣಪ್ರಿಯೆ, ಕನಸಿನಲ್ಲಿ ನಾಪಿತ (ಹಜಾಮ)ನು ಬಂದು ನನ್ನ ತಲೆಯನ್ನೂ, ಗಡ್ಡಮೀಸೆಗಳನ್ನೂ, ಎದೆಯ ಪ್ರದೇಶವನ್ನೂ, ಉಗುರುಗಳನ್ನೂ ಬೋಳಿಸಿದಂತೆ ಅನುಭವವಾಯಿತು.

ಪಾದುಕಾಚರ್ಮರಜ್ಜೂನಾಮಪಶ್ಯಂ ರಾಶಿ ಮುಲ್ಬಣಂ ।
ಚಕ್ರಂ ಭ್ರಮಂತಂ ಭೂಮೌ ಚ ಕುಲಾಲಸ್ಯೇತಿ ಸುಂದರಿ ॥ ೩೨ ॥

ವಾತ್ಯಯಾಘೂರ್ಣಮಾನಂ ಚ ಶುಷ್ಕವೃಕ್ಷಂ ತಮುತ್ಥಿತಂ ।
ಘೂರ್ಣಮಾನಂ ಕಬಂಧಂ ವೈ ಚಾಪಶ್ಯಂ ನಿಶಿ ಸುವ್ರತೇ ॥ ೩೩ ॥

ಗ್ರಥಿತಾಂ ಮುಂಡಮಾಲಾಂ ಚ ಚೂರ್ಣಮಾನಾಂ ಚ ವಾತ್ಯಯಾ ।
ಅತೀವಘೋರದಶನಾಮುಪ್ಯಪಶ್ಯಮಹಂ ವರೇ ॥ ೩೪ ॥

ಭೂತಪ್ರೇತಾ ಮುಕ್ತಕೇಶಾ ವಮಂತಶ್ಚ ಹುತಾಶನಂ ।
ಮಾಂ ಭೀಷಯಂತಿ ಸತತ ಮಿತ್ಯಪಶ್ಯಮಹಂ ನಿಶಿ ॥ ೩೫ ॥

ದಗ್ಧಜೀವಂ ದಗ್ಧವೃಕ್ಷಂ ವ್ಯಾಧಿಗ್ರಸ್ತಂ ನರಂ ಪರಂ ।
ಅಂಗಹೀನಂ ಚ ವೃಷಲಮುಪ್ಯಪಶ್ಯಮಹಂ ನಿಶಿ ॥ ೩೬ ॥

---

೩೨. ಎಲೌ ಸುಂದರಾಂಗಿಯೇ, ಪಾದುಕೆ (ಎಕ್ಕಡ) ಚರ್ಮ ಮತ್ತು ಹಗ್ಗಗಳ ರಾಶಿಯನ್ನೂ, ಭೂಮಿಯ ಮೇಲೆ ತಿರುಗುತ್ತಿರುವ ಕುಂಬಾರನ ಚಕ್ರವನ್ನೂ ಕನಸಿನಲ್ಲಿ ನೋಡಿದಂತಾಯಿತು.

೩೩. ಬಿರುಗಾಳಿಯಿಂದ ಬೇರುಸಹಿತ ಕಿತ್ತು ತಿರ್ರನೆ ತಿರುಗುತ್ತಿರುವ ಒಣಗಿದ ಮರವನ್ನೂ, ತಿರುಗುತ್ತಿರುವ ರುಂಡವನ್ನೂ ಕನಸಿನಲ್ಲಿ ಕಂಡೆನು.

೩೪. ಮುಂಡಗಳನ್ನು ಪೋಣಿಸಿರುವ ಮಾಲೆಯನ್ನೂ, ಅದು ಬಿರುಗಾಳಿಗೆ ಸಿಲುಕಿ ಚೂರುಚೂರಾಗುತ್ತಿರುವುದನ್ನೂ, ಅತಿಭಯಂಕರವಾದ ಹಲ್ಲುಗಳನ್ನೂ ನಾನು ಕನಸಿನಲ್ಲಿ ನೋಡಿದೆನು.

೩೫. ಭೂತಪ್ರೇತಗಳು ತಮ್ಮ ತಲೆಗೂದಲನ್ನು ಕೆದರಿಕೊಂಡು ಕೆಂಡಗಳನ್ನು ಉಗುಳುತ್ತ ನನ್ನನ್ನು ಹೆದರಿಸುತ್ತಿದ್ದಂತೆ ಸ್ವಪ್ನದಲ್ಲಿ ಭಾಸವಾಯಿತು.

೩೬. ಸುಟ್ಟಜೀವವನ್ನೂ, ಬೆಂದಮರವನ್ನೂ, ರೋಗಗ್ರಸ್ತನಾದ ಮನುಜನನ್ನೂ, ಅಂಗಹೀನನಾದ ಶೂದ್ರನನ್ನೂ, ರಾತ್ರಿ ಕನಸಿನಲ್ಲಿ ನಾನು ಕಂಡೆನು.

ಗೇಹಪರ್ವತವೃಕ್ಷಾಣಾಂ ಸಹಸಾ ಪತನಂ ಪರಂ ।
ಮುಹುರ್ಮುಹುರ್ವಜ್ರಪಾತಮಪ್ಯಪಶ್ಯಮಹಂ ನಿಶಿ ॥ ೩೭ ॥

ಕುಕ್ಕುರಾಣಾಂ ಸೃಗಾಲಾನಾಂ ರೋದನಂ ಚ ಮುಹುರ್ಮುಹುಃ ।
ಗೃಹೇ ಗೃಹೇ ಚ ನಿಯತಮಪಶ್ಯಂ ಸರ್ವತೋ ನಿಶಿ ॥ ೩೮ ॥

ಅಧಶ್ಶಿರಸ್ತ್ವೂರ್ಧ್ವಪಾದಂ ಮುಕ್ತಕೇಶಂ ದಿಗಂಬರಂ ।
ಭೂಮೌ ಭ್ರಮಂತಂ ಗಚ್ಛಂತಂ ಚಾಪ್ಯಪಶ್ಯಮಹಂ ನರಂ ॥ ೩೯ ॥

ವಿಕೃತಾಕಾರಶಬ್ದಂ ಚ ಗ್ರಾಮಾದೌ ದೇವರೋದನಂ ।
ಪ್ರಾತಃ ಶ್ರುತ್ವೈವಾವಬುದ್ಧಃ ಕ ಉಪಾಯೋ ವದಾಧುನಾ ॥ ೪೦ ॥

ನೃಪತೇರ್ವಚನಂ ಶ್ರುತ್ವಾ ಹೃದಯೇನ ವಿದೂಯತಾ ।
ಸಗದ್ಗದಂ ಚ ರುದತೀ ತಮುವಾಚ ನೃಪೇಶ್ವರಂ ॥ ೪೧ ॥

---

೩೭. ಮನೆ, ಪರ್ವತ ಮತ್ತು ಮರಗಳು ಇದ್ದಕ್ಕಿದ್ದಂತೆ ಬೀಳುವುದನ್ನೂ, ಪದೇ ಪದೇ ಸಿಡಿಲು ಬಡಿಯುತ್ತಿರುವುದನ್ನೂ ರಾತ್ರಿ ಕನಸಿನಲ್ಲಿ ನೋಡಿದೆನು.

೩೮. ಪ್ರತಿ ಮನೆಯಲ್ಲಿಯೂ ಅರ್ಧರಾತ್ರಿಯಲ್ಲಿ ತಪ್ಪದೆ ಪದೇ ಪದೇ ನಾಯಿ, ನರಿಗಳು ಅಳುತ್ತಿದ್ದಂತೆ ನನಗೆ ಸ್ವಪ್ನದಲ್ಲಿ ತೋರಿತು.

೩೯. ಕೆಳಕ್ಕೆ ತಲೆಯನ್ನೂ ಮೇಲಕ್ಕೆ ಕಾಲನ್ನೂ ಮಾಡಿಕೊಂಡು, ತಲೆ ಗೂದಲುಗಳನ್ನು ಕೆದರಿಕೊಂಡು ದಿಗಂಬರನಾಗಿರುವ ಮನುಷ್ಯನೊಬ್ಬನು ಭೂಮಿಯ ಮೇಲೆ ಅಲೆದಾಡುತ್ತಿರುವಂತೆ ನನಗೆ ಸ್ವಪ್ನವಾಯಿತು

೪೦. ಗ್ರಾಮದ ಮುಂಭಾಗದಲ್ಲಿ ವಿಕೃತಧ್ವನಿಯಿಂದ ಗ್ರಾಮದೇವತೆಯು ಅಳುತ್ತಿದ್ದುದನ್ನು ಕನಸ್ಸಿನಲ್ಲಿ ಕೇಳಿ ಈಗ ತಾನೆ ಎಚ್ಚರಗೊಂಡೆನು. ಈಗ ಈ ದುಃಸ್ವಪ್ನಗಳ ದೋಷಪರಿಹಾರಕ್ಕೆ ಮಾಡಬೇಕಾದ ಉಪಾಯವಾವುದು ?

೪೧. ರಾಜನ ಮಾತನ್ನು ಕೇಳಿ ಬಹಳ ದುಃಖಿತಳಾದ ಮನೋರಮೆಯು ಅಳುತ್ತ, ಗದ್ಗದ ಕಂಠದಿಂದ ರಾಜನನ್ನು ಕುರಿತಿಂತೆಂದಳು.

|| ಮನೋರಮೋವಾಚ ||

ಹೇ ನಾಥ ರಮಣಶ್ರೇಷ್ಠ ಶ್ರೇಷ್ಠಃ ಸರ್ವಮಹೀಭೃತಾಂ |
ಪ್ರಾಣಾತಿರೇಕ ಪ್ರಾಣೇಶ ಶೃಣು ವಾಕ್ಯಂ ಶುಭಾವಹಂ || ೪೨ ||

ನಾರಾಯಣಾಂಶೋ ಭಗವಾಞ್ಜಾಮದಗ್ನ್ಯೋ ಮಹಾಬಲೀ |
ಸೃಷ್ಟಿಂ ಸಂಹರ್ತುರೀಶಸ್ಯ ಶಿಷ್ಯೋಽಯಂ ಜಗತಃ ಪ್ರಭೋ || ೪೩ ||

ತ್ರಿಸ್ಸಪ್ತಕೃತ್ವೋ ನಿರ್ಭೂಪಾಂ ಕರಿಷ್ಯಾಮಿ ಮಹೀಮಿತಿ |
ಪ್ರತಿಜ್ಞಾ ಯಸ್ಯ ರಾಮಸ್ಯ ತೇನ ಸಾರ್ಧಂ ರಣಂ ತ್ಯಜ || ೪೪ ||

ಪಾಪಿನಂ ರಾವಣಂ ಜಿತ್ವಾ ಶೂರಂ ತ್ವಮಪಿ ಮನ್ಯಸೇ |
ಸ ತ್ವಯಾ ನ ಜಿತೋ ನಾಥ ಸ್ವಪಾಪೇನ ಪರಾಜಿತಃ || ೪೫ ||

---

೪೨. ಮನೋರಮೆ :—ಎಲೈ ಪ್ರಾಣನಾಥನೇ, ಎಲ್ಲ ರಾಜರಿಗಿಂತ ಶ್ರೇಷ್ಠನೂ, ನನ್ನ ಪ್ರಾಣಕ್ಕಿಂತ ಹೆಚ್ಚು ಪ್ರಿಯನೂ ಆದ ನೀನು ನಾನು ಹೇಳುವ ಶುಭಕರವಾದ ಮಾತುಗಳನ್ನು ಕೇಳು.

೪೩. ಜಮದಗ್ನಿಯ ಪುತ್ರನೂ ಮಹಾಪರಾಕ್ರಮಿಯೂ ಆದ ಪರಶುರಾಮನು ನಾರಾಯಣನ ಅಂಶಸಂಭೂತನು. ಅಲ್ಲದೆ ಜಗತ್ತಿನ ಸೃಷ್ಟಿಲಯಗಳಿಗೆ ಕಾರಣನೂ, ಜಗತ್ಪ್ರಭುವೂ ಆದ ಶಂಕರನ ಶಿಷ್ಯನು.

೪೪. ಯಾವ ಪರಶುರಾಮನು ಇಪ್ಪತ್ತೊಂದುಸಾರಿ ಭೂಪ್ರದಕ್ಷಿಣೆಮಾಡಿ ಕ್ಷತ್ರಿಯರನ್ನೆಲ್ಲ ನಿರ್ಮೂಲಗೊಳಿಸುವುದಾಗಿ ಪ್ರತಿಜ್ಞೆಮಾಡಿರುವನೋ ಆ ಮಹಾತ್ಮನೊಡನೆ ಯುದ್ಧ ಮಾಡಬೇಡ.

೪೫. ಪಾಪಿಯಾದ ರಾವಣನನ್ನು ಗೆದ್ದು ನೀನೂ ಪರಾಕ್ರಮಿಯೆಂದು ತಿಳಿದಿರುವೆ. ಆದರೆ, ಪ್ರಭುವೇ ನಿನ್ನ ಬಲದಿಂದ ಅವನನ್ನು ನೀನು ಗೆಲ್ಲಲಿಲ್ಲ. ಅವನು ತನ್ನ ಪಾಪದಿಂದ ಪರಾಜಿತ (ಸೋತ)ನಾದನು.

ಯೋ ನ ರಕ್ಷತಿ ಧರ್ಮಂ ಚ ತಸ್ಯ ಕೋ ರಕ್ಷಿತಾ ಭುವಿ ।
ಸ ನಶ್ಯತಿ ಸ್ವಯಂ ಮೂಢೋ ಜೀವನ್ನಪಿ ಮೃತೋ ಹಿ ಸಃ ॥ ೪೬ ॥

ಶುಭಾಶುಭಸ್ಯ ಸತತಂ ಸಾಕ್ಷೀ ಧರ್ಮಸ್ವಕರ್ಮಣಃ ।
ಆತ್ಮಾರಾಮಃ ಸ್ಥಿತಃ ಸ್ವಾಂತಃ ಮೂಢಸ್ತ್ವಂ ನ ಹಿ ಪಶ್ಯಸಿ ॥ ೪೭ ॥

ಪುತ್ರದಾರಾದಿಕಂ ಯದ್ಯತ್ಸರ್ವೈಶ್ವರ್ಯಂ ಸುಧರ್ಮಿಣಾಂ ।
ಜಲಬುದ್ಬುದವತ್ಸರ್ವಮನಿತ್ಯಂ ನಶ್ವರಂ ನೃಪ ॥ ೪೮ ॥

ಸಂಸಾರಂ ಸ್ವಪ್ನಸದೃಶಂ ಮತ್ವಾ ಸಂತೋಽತ್ರ ಭಾರತೇ ।
ಧ್ಯಾಯಂತಿ ಸತತಂ ಧರ್ಮಂ ತಪಃ ಕುರ್ವಂತಿ ಭಕ್ತಿತಃ ॥ ೪೯ ॥

ದತ್ತೇನ ದತ್ತಂ ಯಜ್ಜ್ಞಾನಂ ತತ್ಸರ್ವಂ ವಿಸ್ಮೃತಂ ತ್ವಯಾ ।
ಅಸ್ತಿ ಚೇದ್ವಿಪ್ರಹಿಂಸಾಯಾಂ ಕುಬುದ್ಧೇ ತ್ವನ್ಮನಃ ಕಥಂ ॥ ೫೦ ॥

---

೪೬. ತನ್ನ ಧರ್ಮವನ್ನು ಕಾಪಾಡಿಕೊಳ್ಳದವನನ್ನು ಭೂಮಿಯಲ್ಲಿ ಕಾಪಾಡುವರಾರು? ಆ ಮೂರ್ಖನು ತಾನಾಗಿಯೇ ನಾಶಹೊಂದುವನು ಒಂದುವೇಳೆ ಅವನು ಜೀವಿಸಿದ್ದರೂ ಸತ್ತಂತೆಯೇ.

೪೭. ತಾನು ಮಾಡುವ ಶುಭಾಶುಭಕರ್ಮಗಳಿಗೆ ಧರ್ಮವು ಸರ್ವದಾ ಸಾಕ್ಷಿಯಾಗಿರುವುದು. ಆದುದರಿಂದ ಆತ್ಮಾರಾಮನು ಅಂತಃಶುದ್ಧಿಯನ್ನು ಹೊಂದಿರುವನು. ಮೂಢನಾದ ನಿನಗೆ ಅದರ ಅರಿವುಂಟಾಗುವುದಿಲ್ಲ.

೪೮. ಎಲೈ ರಾಜೇಂದ್ರನೇ, ಧರ್ಮಪರಾಯಣರು ಪತ್ನೀಪುತ್ರಾದಿಗಳನ್ನೂ ಸಕಲ ಸಂಪತ್ತುಗಳನ್ನೂ, ನೀರಿನ ಗುಳ್ಳೆಯಂತೆ ಚಂಚಲವಾದುದೆಂದು ತಿಳಿಯುವರು

೪೯. ಆದುದರಿಂದ ಸತ್ಪುರುಷರು ಭರತಖಂಡದಲ್ಲಿ ಸಂಸಾರವು ಸ್ವಪ್ನದಂತೆ ನಶ್ವರವಾದುದೆಂದು ತಿಳಿದು, ಧರ್ಮಪರಾಯಣರಾಗಿ ಭಕ್ತಿಯಿಂದ ತಪವೆಸಗುವರು.

೫೦. ದತ್ತಾತ್ರೇಯನು ಬೋಧಿಸಿದ ದಿವ್ಯಜ್ಞಾನವನ್ನೆಲ್ಲ ನೀನು ಮರೆತಿರುವಂತೆ ಕಾಣುತ್ತದೆ. ಇಲ್ಲದಿದ್ದರೆ ನಿನ್ನ ಮನಸ್ಸು ಕುತ್ಸಿತ ಬುದ್ಧಿಯಿಂದ ಕೂಡಿ ಬ್ರಾಹ್ಮಣನ ಹಿಂಸೆಯಲ್ಲಿ ತೊಡಗುವುದು ಅಸಂಭವವಾದೀತು.

ಸುಖಾರ್ಥೇ ಮೃಗಯಾಂ ಗತ್ವಾ ತತ್ರೋಪೋಷ್ಯ ದ್ವಿಜಾಶ್ರಮೇ ।
ಭುಕ್ತ್ವಾ ಮಿಷ್ಟಮಪೂರ್ವಂ ಚ ಹತೋ ವಿಪ್ರೋ ನಿರರ್ಥಕಂ ॥ ೫೧ ॥

ಗುರುವಿಪ್ರಸುರಾಣಾಂ ಚ ಯಃ ಕರೋತಿ ಪರಾಭವಂ ।
ಅಭೀಷ್ಟದೇವಸ್ತಂ ರುಷ್ಟೋ ವಿಪತ್ತಿಸ್ತಸ್ಯ ಸನ್ನಿಧೌ ॥ ೫೨ ॥

ಸ್ಮರಣಂ ಕುರು ರಾಜೇಂದ್ರ ದತ್ತಾತ್ರೇಯಪದಾಂಬುಜಂ ।
ಗುರೌ ಭಕ್ತಿಶ್ಚ ಸರ್ವೇಷಾಂ ಸರ್ವವಿಘ್ನವಿನಾಶಿನೀ ॥ ೫೩ ॥

ಗುರುದೇವಂ ಸಮಭ್ಯರ್ಚ್ಯ ತಂ ಭೃಗುಂ ಶರಣಂ ವ್ರಜ ।
ವಿಪ್ರೇ ದೇವೇ ಪ್ರಸನ್ನೇ ಚ ಕ್ಷತ್ರಿಯಾಣಾಂ ನ ಹಿ ಕ್ಷತಿಃ ॥ ೫೪ ॥

---

೫೧. ಆತ್ಮಸುಖಕ್ಕಾಗಿ ಬೇಟೆಗೆ ಹೋಗಿ, ಬ್ರಾಹ್ಮಣನ ಆಶ್ರಮ ಸಮೀಪದಲ್ಲಿ ಉಪವಾಸವಿದ್ದಾಗ, ಆ ಬ್ರಾಹ್ಮಣನ ದಯೆಯಿಂದ ಅಪೂರ್ವವೂ ಮಿಷ್ಟವೂ ಆದ ಭೋಜನವನ್ನು ಪಡೆದು ನಿರರ್ಥಕವಾಗಿ ಅವನನ್ನೇ ಸಂಹರಿಸಿದೆ.

೫೨. ದೇವ, ಗುರು, ಬ್ರಾಹ್ಮಣರನ್ನು ತಿರಸ್ಕರಿಸಿದವನು ತನ್ನ ಇಷ್ಟದೇವತೆಯ ಕೋಪಕ್ಕೊಳಗಾಗುವುದಲ್ಲದೆ, ಅವನಿಗೆ ಯಾವಾಗಲೂ ವಿಪತ್ತು ಸನ್ನಿಹಿತವಾಗಿರುವುದು.

೫೩. ಆದುದರಿಂದ ಎಲೈ ನೃಪವರ್ಯನೇ, ಈಗ ದತ್ತಾತ್ರೇಯನ ಪಾದಪಂಕಜಗಳನ್ನು ಸ್ಮರಿಸಿಕೋ. ಗುರುವಿನಲ್ಲಿ ಭಕ್ತಿಯಿಟ್ಟಿರುವವರ ಸಕಲ ವಿಘ್ನಗಳೂ ವಿನಾಶಹೊಂದುವುವು.

೫೪. ಗುರುದೇವನನ್ನು ಪೂಜಿಸಿ, ವಿಪ್ರವರ್ಯನಾದ ಪರಶುರಾಮನನ್ನು ಶರಣುಹೊಂದು. ದೇವಬ್ರಾಹ್ಮಣರು ಪ್ರಸನ್ನರಾದರೆ ಕ್ಷತ್ರಿಯರಿಗೆ ಯಾವ ಹಾನಿಯೂ ಇಲ್ಲ.

ವಿಪ್ರಸ್ಯ ಕಿಂಕರೋ ಭೂಪೋ ವೈಶ್ಯೋ ಭೂಪಸ್ಯ ಭೂಮಿಪ ।
ಸರ್ವೇಷಾಂ ಕಿಂಕರಾಃ ಶೂದ್ರಾ ಬ್ರಾಹ್ಮಣಸ್ಯ ವಿಶೇಷತಃ ॥ ೫೫ ॥

ಅಯಶಃ ಶರಣಂ ಶಶ್ವತ್ಕ್ಷತ್ರಿಯಸ್ಯ ಚ ಕ್ಷತ್ರಿಯೇ ।
ಮಹದ್ಯಶಸ್ತಚ್ಛರಣಂ ಗುರುದೇವದ್ವಿಜೇಷು ಚ ॥ ೫೬ ॥

ಬ್ರಾಹ್ಮಣಂ ಭಜ ರಾಜೇಂದ್ರ ಗರೀಯಾಂಸಂ ಸುರಾದಪಿ ।
ಬ್ರಾಹ್ಮಣೇ ಪರಿತುಷ್ಟೇ ಚ ಸಂತುಷ್ಟಾಃ ಸರ್ವದೇವತಾಃ ॥ ೫೭ ॥

ಇತ್ಯೇವಮುಕ್ತ್ವಾ ರಾಜೇಂದ್ರಂ ಕ್ರೋಡೇ ಕೃತ್ವಾ ಮಹಾಸತೀ ।
ಮುಹುರ್ಮುಹುರ್ಮುಖಂ ದೃಷ್ಟ್ವಾ ವಿಲಲಾಪ ರುರೋದ ಚ ॥ ೫೮ ॥

ಕ್ಷಣಂ ತಿಷ್ಠ ಮಹಾರಾಜ ಪುನರೇವಮುವಾಚ ಸಾ ।
ಸ್ನಾನಂ ಕುರು ಮಹಾರಾಜ ಭೋಜಯಿಷ್ಯಾಮಿ ವಾಂಛಿತಂ ॥ ೫೯ ॥

---

೫೫. ಎಲೈ ರಾಜನೇ, ಕ್ಷತ್ರಿಯನು ಬ್ರಾಹ್ಮಣನಿಗೂ, ವೈಶ್ಯನು ಕ್ಷತ್ರಿಯನಿಗೂ, ಸೇವಕನೆನಿಸುವನು. ಶೂದ್ರರು ತ್ರಿವರ್ಣದವರಿಗೂ, ಅದರಲ್ಲಿಯೂ ವಿಶೇಷವಾಗಿ ಬ್ರಾಹ್ಮಣರಿಗೂ ಸೇವಕರೆನಿಸುವರು.

೫೬. ಕ್ಷತ್ರಿಯನು ಮತ್ತೊಬ್ಬ ಕ್ಷತ್ರಿಯನಿಗೆ ಶರಣಾಗತನಾಗುವುದು ಅಕೀರ್ತಿದಾಯಕವಾದುದು. ಆದರೆ ದೇವ, ಗುರು, ಬ್ರಾಹ್ಮಣರಿಗೆ ಕ್ಷತ್ರಿಯನು ಶರಣಾಗುವುದರಿಂದ ವಿಶೇಷಕೀರ್ತಿಯೇ ದೊರೆಯುವುದು.

೫೭. ಆದುದರಿಂದ ಎಲೈ ರಾಜೇಂದ್ರನೇ, ದೇವತೆಗಳಿಗಿಂತಲೂ ಶ್ರೇಷ್ಠನೆನಿಸಿದ ಬ್ರಾಹ್ಮಣನಿಗೆ ಶರಣಾಗತನಾಗು. ಬ್ರಾಹ್ಮಣನು ಸಂತುಷ್ಟನಾದರೆ ಸಕಲ ದೇವತೆಗಳೂ ಪ್ರಸನ್ನರಾಗುವರು.

೫೮. ಮಹಾಪತಿವ್ರತೆಯಾದ ಆ ಮನೋರಮೆಯು ತನ್ನ ಪ್ರಿಯನಿಗೆ ಇಂತು ಬುದ್ಧಿವಾದ ಹೇಳಿ, ಅವನನ್ನು ತನ್ನ ಎದೆಗೆ ಅಪ್ಪಿಕೊಂಡು ಮತ್ತೆ ಮತ್ತೆ ಅವನ ಮುಖವನ್ನು ನೋಡುತ್ತ, ಗಟ್ಟಿಯಾಗಿ ಅತ್ತು ಗೋಳಾಡಿದಳು.

೫೯. ಸ್ವಲ್ಪ ಹೊತ್ತಾದನಂತರ ಪುನಃ ತನ್ನ ಪತಿಗೆ ಇಂತೆಂದಳು. ಎಲೈ ಮಹಾರಾಜನೇ, ಕ್ಷಣಕಾಲ ನಿಲ್ಲು, ಸ್ನಾನಮಾಡು. ನಿನಗೆ ಇಷ್ಟವಾದ ಭೋಜನದಿಂದ ತೃಪ್ತಿಬಡಿಸುವೆನು.

ಚಂದನಾಗರುಕಸ್ತೂರೀಕರ್ಪೂರೈಃ ಕುಂಕುಮೈರ್ಯುತಂ ।
ಅನುಲೇಪಂ ಕರಿಷ್ಯಾಮಿ ಸರ್ವಾಂಗೇ ತವ ಸುಂದರ ॥ ೬೦ ॥

ಕ್ಷಣಂ ಸಿಂಹಾಸನೇ ತಿಷ್ಠ ಕ್ಷಣಂ ವಕ್ಷಸಿ ಮೇ ಪ್ರಭೋ ।
ಸಭಾಯಾಂ ಪುಷ್ಪರಚಿತೇ ತಲ್ಪೇ ಪಶ್ಯಾಮಿ ಶೋಭನಂ ॥ ೬೧ ॥

ಶತಪುತ್ರಾಧಿಕಃ ಪ್ರೇಮ್ಣಾ ಸತೀನಾಂ ವೈ ಪತಿರ್ನೃಪ ।
ನಿರೂಪಿತೋ ಭಗವತಾ ವೇದೇಷು ಹರಿಣಾ ಸ್ವಯಂ ॥ ೬೨ ॥

ಮನೋರಮಾವಚಃ ಶ್ರುತ್ವಾ ರಾಜಾ ಪರಮಪಂಡಿತಃ ।
ಬೋಧಯಾಮಾಸ ತಾಂ ರಾಜ್ಞೀಂ ದದೌ ಪ್ರತ್ಯುತ್ತರಂ ಪುನಃ ॥ ೬೩ ॥

॥ ಕಾರ್ತವೀರ್ಯಾರ್ಜುನ ಉವಾಚ ॥

ಶೃಣು ಕಾಂತೇ ಪ್ರವಕ್ಷ್ಯಾಮಿ ಶ್ರುತಂ ಸರ್ವಂ ತ್ವಯೇರಿತಂ ।
ಶೋಕಾರ್ತಾನಾಂ ಚ ವಚನಂ ನಪ್ರಶಂಸ್ಯಂ ಸಭಾಸು ಚ ॥ ೬೪ ॥

---

೬೦. ಎಲೈ ಸುಂದರಾಂಗನೇ, ಅಗುರು, ಕಸ್ತೂರಿ, ಪಚ್ಚಕರ್ಪೂರ ಮತ್ತು ಕುಂಕುಮಗಳಿಂದ ಮಿಶ್ರಿತವಾದ ದಿವ್ಯಚಂದನವನ್ನು ನಿನ್ನ ಅಂಗಾಂಗಗಳಿಗೆಲ್ಲ ಅನುಲೇಪನಮಾಡುವೆನು.

೬೧. ಎಲೈ ಪ್ರಭುವೇ, ಕ್ಷಣಕಾಲ ಸಿಂಹಾಸನದ ಮೇಲೂ, ಕ್ಷಣಕಾಲ ನನ್ನ ವಕ್ಷಃಸ್ಥಳದಲ್ಲಿಯೂ ಕುಳಿತುಕೋ. ಸಭಾಮಧ್ಯದಲ್ಲಿಯೂ ನಿನ್ನನ್ನೊಮ್ಮೆ ನೋಡ ಬಯಸುವೆನು.

೬೨. ಎಲೈ ರಾಜೇಂದ್ರನೇ, ಪತಿವ್ರತೆಯರಿಗೆ ತಮ್ಮ ಪತಿಯು ನೂರುಜನ ಮಕ್ಕಳಿಗಿಂತಲೂ ಹೆಚ್ಚು ಪ್ರೀತಿಪಾತ್ರನೆಂದು ಶ್ರೀಹರಿಯು ಸ್ವತಃ ವೇದದಲ್ಲಿ ಪ್ರತಿಪಾದಿಸಿರುವನು.

೬೩. ಮನೋರಮೆಯಾಡಿದ ಮಾತನ್ನು ಕೇಳಿ ಪರಮಜ್ಞಾನಿಯಾದ ಕಾರ್ತವೀರ್ಯನು ಅವಳನ್ನು ಸಮಾಧಾನಗೊಳಿಸಲು ಕೆಲವು ವಚನಗಳನ್ನಾಡಿದನು.

೬೪. ಕಾರ್ತವೀರ್ಯಾರ್ಜುನ :—ಎಲೌ ಪ್ರಾಣಕಾಂತೆಯೇ, ಹೇಳುವೆನು ಕೇಳು. ನೀನು ಹೇಳಿದುದನ್ನೆಲ್ಲ ಕೇಳಿದೆನು. ದುಃಖಿತರಾದವರು ಆಡುವ ಮಾತುಗಳಿಗೆ ಸಮಾಜದಲ್ಲಿ ಗೌರವವಿರುವುದಿಲ್ಲ.

ಸುಖಂ ದುಃಖಂ ಭಯಂ ಶೋಕಃ ಕಲಹಃ ಪ್ರೀತಿರೇವ ಚ ।
ಕರ್ಮಭೋಗಾರ್ಹಕಾಲೇನ ಸರ್ವಂ ಭವತಿ ಸುಂದರಿ || ೬೫ ||

ಕಾಲೋ ದದಾತಿ ರಾಜತ್ವಂ ಕಾಲೋ ಮೃತ್ಯುಂ ಪುನರ್ಭವಂ ।
ಕಾಲಃ ಸೃಜತಿ ಸಂಸಾರಂ ಕಾಲಃ ಸಂಹರತೇ ಪುನಃ || ೬೬ ||

ಕರೋತಿ ಪಾಲನಂ ಕಾಲಃ ಕಾಲರೂಪೀ ಜನಾರ್ದನಃ ।
ಕಾಲಸ್ಯ ಕಾಲಃ ಶ್ರೀಕೃಷ್ಣೋ ವಿಧಾತುರ್ವಿಧಿರೇವ ಚ || ೬೭ ||

ಸಂಹರ್ತುರ್ವಾಪಿ ಸಂಹರ್ತಾ ಪಾತುಃ ಪಾತಾ ಚ ಕರ್ಮಕೃತ್ ।
ಸ ಕರ್ಮಣಾಂ ಕರ್ಮರೂಪೀ ದದಾತಿ ತಪಸಾಂ ಫಲಂ ।
ಕಃ ಕೇನ ಹನ್ಯತೇ ಜಂತುಃ ಕರ್ಮಣಾ ವೈ ವಿನಾ ಸತಿ || ೬೮ ||

---

೬೫. ಸುಂದರಾಂಗಿಯೇ ಸುಖದುಃಖಗಳೂ, ಭಯಶೋಕಗಳೂ, ಕಲಹ ಪ್ರೇಮಗಳೂ, ಕರ್ಮಭೋಗಕ್ಕೆ ಅನುಗುಣವಾದ ಕಾಲದಲ್ಲಿ ತಾವಾಗಿಯೇ ಒದಗುವುವು.

೬೬. ರಾಜತ್ವವಾಗಲೀ, ಮೃತ್ಯುವಾಗಲೀ, ಪುನರ್ಜನ್ಮವಾಗಲೀ, ಕಾಲಾಧೀನ ವಾಗಿರುವುದು. ಕಾಲವೇ ಸಂಸಾರವನ್ನು ಸೃಜಿಸಿ, ಸಂಹರಿಸುವುದು.

೬೭. ಕಾಲರೂಪಿಯಾದ ಜನಾರ್ದನನೇ ಜಗತ್ತನ್ನು ಪರಿಪಾಲಿಸುವವನು. ಶ್ರೀಕೃಷ್ಣಪರಮಾತ್ಮನೇ ಕಾಲನಿಗೂ ಕಾಲನೆನಿಸಿ, ವಿಧಾತ (ಬ್ರಹ್ಮ) ನಿಗೂ ವಿಧಿ ಯೆನಿಸಿರುವನು.

೬೮. ಮೃತ್ಯುವಿಗೆ ಮೃತ್ಯುಸ್ವರೂಪನೂ, ಪಾಲಕನಿಗೆ ಪಾಲಕನೂ, ಕರ್ಮ ಗಳಿಗೆ ಕರ್ಮಸ್ವರೂಪನೂ ಆದ ಆ ಪರಮಾತ್ಮನು, ಅವರವರ ತಪಸ್ಸಿಗನುಗುಣವಾಗಿ ಫಲವನ್ನು ಕೊಡುವನು. ಕರ್ಮಾನುಗುಣವಾಗಿ ಜೀವಿಗಳಿಗೆ ಜನನಮರಣ ಗಳುಂಟಾಗುವುದೇ ಹೊರತು ಯಾಗೂ ಯಾರನ್ನೂ ಕೊಲ್ಲಲಾರರು.

ಸ್ರಷ್ಟಾ ಸೃಜತಿ ಸೃಷ್ಟಿಂ ಚ ಸಂಹರ್ತಾ ಸಂಹರೇತ್ಪುನಃ ।
ಪಾತಾ ಪಾತಿ ಚ ಭೂತಾನಿ ಯಸ್ಯಾಜ್ಞಾಂ ಪರಿಪಾಲಯೇತ್ ॥ ೬೯ ॥

ಯಸ್ಯಾಜ್ಞಯಾ ವಾತಿ ವಾತಃ ಸಂತತಂ ಭಯವಿಹ್ವಲಃ ।
ಶಶ್ವಸ್ಸಂಚರತೇ ಮೃತ್ಯುಃ ಸೂರ್ಯಸ್ತಪತಿ ಸಂತತಂ ॥ ೭೦ ॥

ವರ್ಷತೀಂದ್ರೋ ದಹತ್ಯಗ್ನಿಃ ಕಾಲೋ ಭ್ರಮತಿ ಭೀತವತ್ ।
ತಿಷ್ಠಂತಿ ಸ್ಥಾವರಾಃ ಸರ್ವೇ ಚರಂತಿ ಸತತಂ ಚರಾಃ ॥ ೭೧ ॥

ವೃಕ್ಷಾಶ್ಚ ಪುಷ್ಪಿತಾಃ ಕಾಲೇ ಫಲಿತಾಃ ಪಲ್ಲವಾನ್ವಿತಾಃ ।
ಶುಷ್ಯಂತಿ ಕಾಲತಃ ಕಾಲೇ ವರ್ಧಂತೇ ಚ ತದಾಜ್ಞಯಾ ॥ ೭೨ ॥

ಆವಿರ್ಭೂತಾ ತಿರೋಭೂತಾ ಸೃಷ್ಟಿರೇವ ತದಾಜ್ಞಯಾ ।
ತಸ್ಯಾಜ್ಞಯಾ ಭವೇತ್ಸರ್ವಂ ನ ಕಿಂಚಿತ್ಸ್ವೇಚ್ಛಯಾ ನೃಣಾಂ ॥ ೭೩ ॥

---

೬೯. ಪರಮಾತ್ಮನ ಆಜ್ಞಾನುವರ್ತನೆಗಾಗಿ, ಸೃಷ್ಟಿಕರ್ತನು ಸೃಷ್ಟಿಮಾಡುವನು. ಪಾಲಕನು ಪ್ರಾಣಿಗಳನ್ನು ಪರಿಪಾಲಿಸುವನು. ಸಂಹಾರಕನು ಸಂಹರಿಸುವನು.

೭೦. ಆ ಪರಮಾತ್ಮನ ಆಜ್ಞೆಯಿಂದಲೇ, ಭಯಚಕಿತನಾಗಿ ವಾಯುವು ಚಲಿಸುವನು. ಮೃತ್ಯುವು ಪ್ರಾಣಿಗಳಲ್ಲಿ ಸಂಚರಿಸುವುದು. ಸೂರ್ಯನು ಸರ್ವದಾ ತಪಿಸುವನು.

೭೧. ಇಂದ್ರನು ಮಳೆಗರೆಯುವುದೂ, ಅಗ್ನಿಯು ದಹಿಸುವುದೂ, ಕಾಲಪುರುಷನು ಭಯದಿಂದ ಭ್ರಮಣೆಮಾಡುವುದೂ, ಸ್ಥಾವರಗಳು ಚಲಿಸದಿರುವುದೂ, ಜಂಗಮಗಳು ಚಲಿಸುತ್ತಿರುವುದೂ ಆ ಪರಮಾತ್ಮನ ಆಜ್ಞೆಯಿಂದಲೇ.

೭೨. ಪರಮಾತ್ಮನ ಆಜ್ಞೆಯಿಂದ ಮರಗಳು ಕಾಲಾನುಗುಣವಾಗಿ ಚಿಗುರಿ,ಹೂ ಬಿಟ್ಟು, ಹಣ್ಣಾಗುವುದಲ್ಲದೆ, ಕಾಲದಲ್ಲಿ ಅಭಿವೃದ್ಧಿಹೊಂದಿ, ಒಣಗಿ ಹೋಗುವುದು.

೭೩. ಸೃಷ್ಟಿಯೂ ಕೂಡ ಪರಮಾತ್ಮನ ಆಜ್ಞೆಯಂತೆ ಕಾಲದಲ್ಲಿ ಆವಿರ್ಭವಿಸಿ, ಕಾಲಾನುಗುಣವಾಗಿ ಅಂತರ್ಧಾನಹೊಂದುವುದು, ಒಟ್ಟಿನಲ್ಲಿ ಎಲ್ಲವೂ ಅವನ ಅಪ್ಪಣೆಯಂತೆ ನಡೆಯುವುದೇ ಹೊರತು ಮನುಷ್ಯರ ಇಚ್ಛೆಯಂತೆ ಯಾವುದೂ ನಡೆಯುವುದಿಲ್ಲ.

ನಾರಾಯಣಾಂಶೋ ಭಗವಾಞ್ ಜಾಮದಗ್ನ್ಯೋ ಮಹಾಬಲಃ ।
ತ್ರಿಸ್ಸಪ್ತಕೃತ್ವೋ ನಿರ್ಭೂಪಾಂ ಕರಿಷ್ಯತಿ ಮಹೀಮಿತಿ ॥ ೭೪ ॥

ಪ್ರತಿಜ್ಞಾ ವಿಫಲಾ ತಸ್ಯ ನ ಭವೇತ್ತು ಕದಾಚನ ।
ನಿಶ್ಚಿತಂ ತಸ್ಯ ವಧ್ಯೋಽಹಮಿತಿ ಜಾನಾಮಿ ಸುವ್ರತೇ ॥ ೭೫ ॥

ಜ್ಞಾತ್ವಾ ಸರ್ವಂ ಭವಿಷ್ಯಂ ಚ ಶರಣಂ ಯಾಮಿ ತತ್ಕಥಂ ।
ಪ್ರತಿಷ್ಠಿತಾನಾಂ ಚಾಕೀರ್ತಿರ್ಮರಣಾದತಿರಿಚ್ಯತೇ ॥ ೭೬ ॥

ಇತ್ಯೇವಮುಕ್ತ್ವಾ ರಾಜೇಂದ್ರಃ ಸಮರಂ ಗಂತುಮುದ್ಯತಃ ।
ವಾದ್ಯಂ ಚ ವಾದಯಾಮಾಸ ಕಾರಯಾಮಾಸ ಮಂಗಲಂ ॥ ೭೭ ॥

ಶತಕೋಟಿರ್ನೃಪಾಣಾಂ ಚ ರಾಜೇಂದ್ರಾಣಾಂ ತ್ರಿಲಕ್ಷಕಂ ।
ಅಕ್ಷೌಹಿಣೀನಾಂ ಶತಕಂ ಮಹಾಬಲಪರಾಕ್ರಮಂ ॥ ೭೮ ॥

೭೪–೭೫. ನಾರಾಯಣಾಂಶ ಸಂಭೂತನೂ, ಪೂಜ್ಯನೂ, ಮಹಾಪರಾಕ್ರಮಿಯೂ ಆದ ಭಾರ್ಗವನು ಇಪ್ಪತ್ತೊಂದುಸಾರಿ ಭೂಪ್ರದಕ್ಷಿಣೆಮಾಡಿ ಕ್ಷತ್ರಿಯರನ್ನು ನಿರ್ಮೂಲಗೊಳಿಸುವುದಾಗಿ ಮಾಡಿರುವ ಪ್ರತಿಜ್ಞೆಯು ಎಂದೆಂದಿಗೂ ನಿಷ್ಫಲವಾಗದು. ಎಲೌ ಪತಿವ್ರತೆಯೇ, ಪರಶುರಾಮನು ನನ್ನನ್ನು ನಿಶ್ಚಿತವಾಗಿಯೂ ವಧೆಮಾಡುವನೆಂಬುದನ್ನು ನಾನು ತಿಳಿದಿರುವೆನು.

೭೬. ಮುಂದಾಗುವುದನ್ನೆಲ್ಲ ಚೆನ್ನಾಗಿ ಅರಿತು ನಾನು ಹೇಗೆ ಶರಣಾಗತನಾಗಲಿ ? ಸಮಾಜದಲ್ಲಿ ಗೌರವವಾದ ಸ್ಥಾನವನ್ನು ಪಡೆದಿರುವವರಿಗೆ ಅಪಕೀರ್ತಿಯು ಸಾವಿಗಿಂತಲೂ ಕೀಳಾದುದಲ್ಲವೇ ?

೭೭. ಕಾರ್ತವೀರ್ಯನು ಹೀಗೆ ಹೇಳಿ, ಮಂಗಳವಾದ್ಯ, ತೂರ್ಯಾದಿಗಳನ್ನು ಮೊಳಗಿಸಿ ಯುದ್ಧಕ್ಕೆ ಹೋಗಲುದ್ಯುಕ್ತನಾದನು.

೭೮. ನೂರುಕೋಟಿ ರಾಜರುಗಳೂ, ಮೂರುಲಕ್ಷ ಚಕ್ರವರ್ತಿಗಳೂ, ಮಹಾಪರಾಕ್ರಮವುಳ್ಳ ನೂರು ಅಕ್ಷೋಹಿಣೀ ಸೈನಿಕರೂ ಕಾರ್ತವೀರ್ಯನನ್ನು ಹಿಂಬಾಲಿಸಿದರು.

ಅಶ್ವಾನಾಂ ಚ ಗಜಾನಾಂ ಚ ಪದಾತೀನಾಂ ತಥೈವ ಚ ।
ಅಸಂಖ್ಯಕಂ ರಥಾನಾಂ ಚ ಗೃಹೀತ್ವಾ ಗಂತುಮುದ್ಯತಃ ॥ ೭೯ ॥

ಬಭೂವ ಸ್ತಿಮಿತಾ ಸಾಧ್ವೀ ದೃಷ್ಟ್ವಾ ತಂ ಗಮನೋನ್ಮುಖಂ ।
ಧೃತವಂತಂ ಚ ಸನ್ನಾಹಮಕ್ಷಯಂ ಸಶರಂ ಧನುಃ ॥ ೮೦ ॥

ಕ್ರೀಡಾಗಾರೇ ಕ್ಷಣಂ ತಸ್ಥೌ ಕೃತ್ವಾ ಕಾಂತಂ ಸ್ವವಕ್ಷಸಿ ।
ಪಶ್ಯಂತೀ ತನ್ಮುಖಾಂಭೋಜಂ ಚುಚುಂಬ ಚ ಮುಹುರ್ಮುಹುಃ ॥ ೮೧ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ತೃತೀಯೇ ಗಣಪತಿಖಂಡೇ
ನಾರದನಾರಾಯಣಸಂವಾದೇ
ಚತುಸ್ತ್ರಿಂಶತ್ತಮೋಽಧ್ಯಾಯಃ

---

೭೯. ಅಗಣಿತವಾದ ಆನೆ, ಕುದುರೆ, ರಥ ಮತ್ತು ಪದಾತಿಗಳ ಬಲವನ್ನು ತೆಗೆದುಕೊಂಡು ರಾಜನು ಯುದ್ಧಕ್ಕೆ ಹೊರಟನು.

೮೦. ಈ ರೀತಿ ಸೈನ್ಯಸಿದ್ಧತೆಗಳನ್ನು ಮಾಡಿಕೊಂಡು ಅಕ್ಷಯವಾದ ಧನುರ್ಬಾಣಗಳನ್ನು ಧರಿಸಿ, ಯುದ್ಧಕ್ಕೆ ಹೊರಡಲನುವಾದ ಪತಿಯನ್ನು ನೋಡಿ ಪತಿವ್ರತೆಯಾದ ಮನೋರಮೆಯು ಸುಮ್ಮನಾದಳು.

೮೧. ಪತಿಯನ್ನು ತನ್ನ ವಕ್ಷಃಸ್ಥಲದಲ್ಲಿ ಅಪ್ಪಿಕೊಂಡು ವಿಹಾರಮಂದಿರದಲ್ಲಿ ಕ್ಷಣಕಾಲವಿದ್ದು ಅವನ ಮುಖಕಮಲವನ್ನೇ ನೋಡುತ್ತ ಮತ್ತೆ ಮತ್ತೆ ಚುಂಬಿಸಿದಳು.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಗಣಪತಿಖಂಡದಲ್ಲಿ
ಮೂವತ್ತನಾಲ್ಕನೆಯ ಅಧ್ಯಾಯವು ಮುಗಿದುದು.

ಮೂವತ್ತನಾಲ್ಕನೆಯ ಅಧ್ಯಾಯದ ಸಾರಾಂಶ

ಪರಶುರಾಮನ ದೂತನಾಡಿದ ಮಾತುಗಳನ್ನು ಕೇಳಿ, ಕಾರ್ತವೀರ್ಯಾರ್ಜುನನು, ಯುದ್ಧಕ್ಕೆ ಸನ್ನದ್ಧನಾದುದನ್ನು ಕಂಡು ಅವನ ಪತ್ನಿಯಾದ ಮನೋರಮೆಯು ಅವನನ್ನು ತಡೆದಳು. ಆಗ ಕಾರ್ತವೀರ್ಯನು ರಾತ್ರಿ ತನಗಾದ ಕೆಟ್ಟಕನಸುಗಳನ್ನೆಲ್ಲ ಆಕೆಗೆ ವರ್ಣಿಸಿ ಹೇಳಿ ಅದರ ದುಷ್ಪರಿಣಾಮವೇನಾಗುವುದೋ ಎಂದು ವ್ಯಥೆಪಟ್ಟನು. ಮನೋರಮೆಯು ದೇವ, ಗುರು, ಬ್ರಾಹ್ಮಣರನ್ನು ತಿರಸ್ಕರಿಸುವುದರಿಂದ ಕ್ಷತ್ರಿಯನಿಗೆ ಕೆಡಕಾಗುವುದೆಂದು ಹೇಳಿ, ತನಗೆ ಮಿಷ್ಟಾನ್ನವುಣಿಸಿದ ಜಮದಗ್ನಿಯನ್ನು (ರಾಜನು) ಸಂಹರಿಸಿದುದೂ, ಅವನ ಪುತ್ರನೂ, ಶಂಕರನ ಶಿಷ್ಯನೂ ಆದ ಪರಶುರಾಮನ ಮೇಲೆ ಯುದ್ಧಮಾಡುವುದೂ ಮಹಾಪಾಪವೆಂದು ತಿಳಿಸಿದಳು. ಅದಕ್ಕೆ ಕಾರ್ತವೀರ್ಯನು ಸರ್ವವೂ ಕಾಲವಶವಾಗಿರುವುದರಿಂದ ಕಾಲಾನುಗುಣವಾಗಿ ನಡೆಯಬೇಕಾಗಿರುವುದು ನಡದೇ ತೀರುವುದೆಂದೂ, ಪರಶುರಾಮನಿಂದ ತನ್ನ ವಧೆಯಾಗಬೇಕೆಂದಿರುವಾಗ ಬ್ರಹ್ಮಾದಿದೇವತೆಗಳು ಬಂದು ಅದನ್ನು ತಪ್ಪಿಸಲಾರರೆಂದೂ ಆಕೆಗೆ ಪ್ರತ್ಯುತ್ತರಕೊಟ್ಟು ಅಗಣಿತವಾದ ಚತುರಂಗ ಬಲದೊಡನೆ ಯುದ್ಧಕ್ಕೆ ಹೊರಡಲನುವಾದನು. ಮನೋರಮೆಯು ಮರುಮಾತನಾಡದೆ, ದುಃಖಕಾತರಳಾಗಿ ಕಾಂತನನ್ನು ಅಪ್ಪಿಕೊಂಡು ಕೊನೆಯದಾಗಿ ಮುದ್ದಿಟ್ಟಳು.

॥ ಓಂ ॥

॥ ಶ್ರೀ ಗಣೇಶಾಯ ನಮಃ ॥

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಗಣಪತಿಖಂಡೇ

॥ ಪಂಚತ್ರಿಂಶೋಽಧ್ಯಾಯಃ ॥

॥ ನಾರಾಯಣ ಉವಾಚ ॥

ಮನೋರಮಾ ಪ್ರಾಣನಾಥಂ ಕ್ಷಣಂ ಕೃತ್ವಾ ಸ್ವವಕ್ಷಸಿ ।
ಭವಿಷ್ಯಂ ಮನಸಾ ಚಕ್ರೇ ಯದ್ಯತ್ಸ್ವಾಮಿ ಮುಖಾಚ್ಛ್ರುತಂ ॥ ೧ ॥

ಪುತ್ರಾಂಶ್ಚ ಪುರತಃ ಕೃತ್ವಾ ಬಾಂಧವಾಂಶ್ಚ ಸ್ವಕಿಂಕರಾನ್ ।
ಸಸ್ಮಾರ ಸಾ ಹರಿಪದಂ ಮೇನೇ ಸತ್ಯಂ ಭವೇನ್ಮನೇ ॥ ೨ ॥

ಯೋಗೇನ ಭಿತ್ವಾ ಷಟ್ಚಕ್ರಂ ವಾಯುಂ ಸಂಸ್ಥಾಪ್ಯ ಮೂರ್ಧನಿ ।
ಬ್ರಹ್ಮರಂಧ್ರಸ್ಥಕಮಲೇ ಸಹಸ್ರದಲಸಂಯುತೇ ॥ ೩ ॥

ಮೂವತ್ತೈದನೆಯ ಅಧ್ಯಾಯವು

೧. ನಾರಾಯಣಮಹರ್ಷಿ :—ಮನೋರಮೆಯು ತನ್ನ ಪ್ರಾಣಕಾಂತನನ್ನು ಕ್ಷಣಕಾಲ ವಕ್ಷಃಸ್ಥಲದಲ್ಲಿ ಅಪ್ಪಿಕೊಂಡಿದ್ದಂತೆಯೇ, ಅವನಾಡಿದ ಭವಿಷ್ಯನುಡಿಗಳನ್ನೆಲ್ಲ ಮನಸ್ಸಿನಲ್ಲಿಯೇ ಚಿತ್ರಿಸಿಕೊಂಡಳು.

೨. ಕೂಡಲೇ ತನ್ನ ಮಕ್ಕಳುಗಳನ್ನೂ, ಆಪ್ತವರ್ಗದವರನ್ನೂ, ಸೇವಕರನ್ನೂ, ಹತ್ತಿರಕ್ಕೆ ಕರೆಸಿಕೊಂಡು, ಅವರ ಎದುರಿನಲ್ಲಿ ಅಚಲವೂ, ಸತ್ಯವೂ ಆದ ಶ್ರೀಹರಿಯ ಪದವನ್ನು ಧ್ಯಾನಿಸಿದಳು.

೩. ಯೋಗಶಕ್ತಿಯಿಂದ ಮೂಲಾಧಾರವೇ ಮೊದಲಾದ ಷಟ್ಚಕ್ರಗಳನ್ನು ಭೇದಿಸಿ, ತಲೆಯ ಬ್ರಹ್ಮರಂಧ್ರಗಲ್ಲಿರುವ ಸಹಸ್ರಾರ ಕಮಲದಲ್ಲಿ ಪಂಚಪ್ರಾಣ ವಾಯುಗಳನ್ನು ಬಿಗಿಹಿಡಿದಳು

ಸ್ವಾಂತಮಾಕೃಷ್ಯ ವಿಷಯೋಜ್ಜಲಬುದ್ಬುದ ಸನ್ನಿಭಾತ್ ।
ಸಂಸ್ಥಾಪ್ಯ ಬದ್ಧ್ವಾ ಜ್ಞಾನೇನ ಲೋಲಂ ಬ್ರಹ್ಮಣಿ ನಿಷ್ಫಲೇ ॥ ೪ ॥

ದ್ವಿವಿಧಂ ಕರ್ಮ ಸಂನ್ಯಸ್ಯ ನಿರ್ಮೂಲಮಪುನರ್ಭವಂ ।
ತತ್ರ ಪ್ರಾಣಾಂಶ್ಚ ತತ್ಯಾಜ ನ ಚ ಪ್ರಾಣಾಧಿಕಂ ಪ್ರಿಯಂ ॥ ೫ ॥

ಸ ರಾಜಾ ತಾಂ ಮೃತಾಂ ದೃಷ್ಟ್ವಾ ವಿಲಲಾಪ ರುರೋದ ಚ ।
ಸನ್ನಾಹಂ ಸಂಪರಿತ್ಯಜ್ಯ ಕೃತ್ವಾ ವಕ್ಷಸ್ಯುವಾಚ ತಾಂ ॥ ೬ ॥

॥ ರಾಜೋವಾಚ ॥

ಮನೋರಮೇ ಸಮುತ್ತಿಷ್ಠ ನ ಯಾಸ್ಯಾಮಿ ರಣಾಜಿರಂ ।
ಸಚೇತನಾ ಮಾಂ ಪಶ್ಯೇತಿ ವಿಲಪಂತಂ ಮುಹುರ್ಮುಹುಃ ॥ ೭ ॥

---

೪. ನೀರಿನಗುಳ್ಳೆಯಂತೆ ಕ್ಷಣಿಕ ವಿಷಯಸುಖದಿಂದ ಚಂಚಲವಾದ ಮನಸ್ಸನ್ನಾಕರ್ಷಿಸಿ, ಜ್ಞಾನಮಾರ್ಗದಿಂದ ಪರಬ್ರಹ್ಮನಲ್ಲಿ ಆ ಮನಸ್ಸನ್ನು ನಿಲ್ಲಿಸಿದಳು.

೫. ಸಂಸಾರಬಂಧನಕ್ಕೆ ಕಾರಣವಾದ ನಿತ್ಯ ಮತ್ತು ಕಾಮ್ಯವೆಂಬ ಎರಡು ವಿಧ ಕರ್ಮಗಳನ್ನೂ ಬಿಟ್ಟು (ಅಂದರೆ ನಿಷ್ಕಾಮದಿಂದಲೂ, ಆತ್ಮಾರ್ಪಣ ಬುದ್ಧಿಯಿಂದಲೂ) ತನ್ನ ಪ್ರಾಣಗಳನ್ನು ತ್ಯಾಗಮಾಡಿದಳು. ತನ್ನ ಪ್ರಾಣಪ್ರಿಯನನ್ನು ಮಾತ್ರ ಬಿಡಲಿಲ್ಲ. ಎದೆಯಲ್ಲಿ ಅಪ್ಪಿಕೊಂಡೇ ಇದ್ದಳು.

೬. ಪತ್ನಿಯು ಮೃತಳಾದುದನ್ನು ನೋಡಿ ಅತ್ತು ಗೋಳಾಡಿದನು. ಕೂಡಲೆ ಯುದ್ಧೋದ್ಯಮವನ್ನು ಬಿಟ್ಟು ಆಕೆಯನ್ನು ಎದೆಯಲ್ಲಿ ಅಪ್ಪಿಕೊಂಡು ಹೀಗೆ ಹೇಳಿದನು.

೭. ರಾಜ :—ಎಲೌ ಮನೋರಮೆಯೇ, ಮೇಲಕ್ಕೆ ಏಳು. ನಾನು ಯುದ್ಧಾಂಕಣಕ್ಕೆ ಹೋಗುವುದಿಲ್ಲ. ಚೇತನವನ್ನು ಹೊಂದಿ ನನ್ನನ್ನೊಮ್ಮೆ ನೋಡು ಎಂದು ಪುನಃ ಪುನಃ ಗೋಳಾಡಿದನು.

ಮನೋರಮೇ ಸಮುತ್ತಿಷ್ಠ ಮಯಾ ಸಾರ್ಧಂ ಗೃಹಂ ವ್ರಜ ।
ನ ಕರಿಷ್ಯಾಮಿ ಸಮರಂ ಭೃಗುಣಾ ಸಹ ಭಾಮಿನಿ ॥ ೮ ॥

ಮನೋರಮೇ ಸಮುತ್ತಿಷ್ಠ ಶ್ರೀಶೈಲಂ ವ್ರಜ ಸುಂದರಿ ।
ತತ್ರ ಕ್ರೀಡಾಂ ಕರಿಷ್ಯಾಮಿ ತ್ವಯಾ ಸಾರ್ಧಂ ಯಥಾ ಪುರಾ ॥ ೯ ॥

ಮನೋರಮೇ ಸಮುತ್ತಿಷ್ಠ ವ್ರಜ ಗೋದಾವರೀಂ ಪ್ರಿಯೇ ।
ಜಲಕ್ರೀಡಾಂ ಕರಿಷ್ಯಾಮಿ ತ್ವಯಾ ಸಾರ್ಧಂ ಯಥಾ ಪುರಾ ॥ ೧೦ ॥

ಮನೋರಮೇ ಸಮುತ್ತಿಷ್ಠ ನಂದನಂ ವ್ರಜ ಸುಂದರಿ ।
ಪುಷ್ಪಭದ್ರಾನದೀತೀರೇ ವಿಹರಿಷ್ಯಾಮಿ ನಿರ್ಜನೇ ॥ ೧೧ ॥

ಮನೋರಮೇ ಸಮುತ್ತಿಷ್ಠ ಮಲಯಂ ವ್ರಜ ಸುಂದರಿ ।
ತ್ವಯಾ ಸಾರ್ಧಂ ರಮಿಷ್ಯೇಽಹಂ ತತ್ರ ಚಂದನಕಾನನೇ ॥ ೧೨ ॥

---

೮. ನಾನು ಭಾರ್ಗವನೊಡನೆ ಯುದ್ಧ ಮಾಡುವುದಿಲ್ಲ. ನೀನು ಮೇಲಕ್ಕೆ ಏಳು. ನಾವಿಬ್ಬರೂ ನಮ್ಮ ಮನೆಗೆ ಹಿಂತಿರುಗೋಣ.

೯. ಎಲೌ ಸುಂದರಾಂಗಿಯೇ, ನೀನು ಜೀವಿತಳಾಗು. ಶ್ರೀಶೈಲಕ್ಕೆ ಹೋಗೋಣ. ಅಲ್ಲಿ ಮೊದಲಿನಂತೆ ನಿನ್ನೊಡನೆ ಯಥೇಚ್ಛವಾಗಿ ಕ್ರೀಡಿಸುವೆನು.

೧೦. ಪ್ರಿಯೇ ಮನೋರಮೆ ಏಳು, ಗೋದಾವರೀನದಿಯ ತೀರಕ್ಕೆ ಹೋಗೋಣ. ಅಲ್ಲಿ ಹಿಂದಿನಂತೆ ನಿನ್ನೊಡನೆ ಜಲಕ್ರೀಡೆಯಾಡುವೆನು.

೧೧. ಸುಂದರಿ, ಮನೋರಮೆ ಎದ್ದು ನಂದನವನಕ್ಕೆ ಹೊರಡು. ನಿರ್ಜನವಾದ ಪುಷ್ಪಭದ್ರಾನದಿಯ ತೀರದಲ್ಲಿ ನಿನ್ನೊಡನೆ ಮನಬಂದಂತೆ ವಿಹರಿಸುವೆನು.

೧೨. ಮನೋರಮೆ, ಸುಂದರಾಂಗಿಯಾದ ನೀನು ಜೀವಸಹಿತ ಎದ್ದು ಮಲಯಪರ್ವತಕ್ಕೆ ಬಂದರೆ, ಚಂದನವೃಕ್ಷಗಳ ವನದಲ್ಲಿ ನಿನ್ನೊಡನೆ ರಮಿಸ ಬಯಸುವೆನು.

ಶೀತೇನ ಗಂಧಯುಕ್ತೇನ ವಾಯುನಾ ಸುರಭೀಕೃತೇ ।
ಭ್ರಮರಧ್ವನಿಸಂಯುಕ್ತೇ ಪುಂಸ್ಕೋಕಿಲರುತಶ್ರಿತೇ　　॥ ೧೩ ॥

ಚಂದನಾಗರುಕಸ್ತೂರೀ ಕುಂಕುಮಾಲೇಪನಂ ಕುರು ।
ಚಂದನೋಕ್ಷಿತಸರ್ವಾಂಗಂ ಪಶ್ಯ ಮಾಂ ಸಸ್ಮಿತೇ ಸತಿ　　॥ ೧೪ ॥

ಸುಧಾತುಲ್ಯಂ ಸುಮಧುರಂ ವಚನಂ ರಚಯ ಪ್ರಿಯೇ ।
ಕುಟಿಲಭ್ರೂವಿಕಾರಂ ಚ ಕಥಂ ನ ಕುರುಷೇಽಧುನಾ　　॥ ೧೫ ॥

ನೃಪಸ್ಯ ರೋದನಂ ಶ್ರುತ್ವಾ ವಾಗ್ಬಭೂವಾಶರೀರಿಣೀ ।
ಸ್ಥಿರೋ ಭವ ಮಹಾರಾಜ ರೋದನಂ ಕುರುಷೇ ಕಥಂ　　॥ ೧೬ ॥

ತ್ವಂ ಮಹಾಜ್ಞಾನಿನಾಂ ಶ್ರೇಷ್ಠೋ ದತ್ತಾತ್ರೇಯಪ್ರಸಾದತಃ ।
ಜಲಬುದ್ಬುದವತ್ಸರ್ವಂ ಸಂಸಾರಂ ಪಶ್ಯ ಶೋಭನಂ　　॥ ೧೭ ॥

೧೩-೧೪. ಶೈತ್ಯಸೌರಭ್ಯಮಾಂದ್ಯವಿಶಿಷ್ಟವಾದ ವಾಯುವಿನಿಂದ ಸುಖಶೀತಲವಾಗಿಯೂ, ದುಂಬಿ ಮತ್ತು ಕೋಗಿಲೆಗಳ ಇಂಚರದಿಂದ ಕರ್ಣಾನಂದ ಜನಕವಾಗಿಯೂ ಇರುವ ಉದ್ಯಾನಪ್ರದೇಶದಲ್ಲಿ, ಚಂದನ, ಅಗುರು, ಕಸ್ತೂರಿ ಮತ್ತು ಕುಂಕುಮಗಳನ್ನು ಲೇಪಿಸಿಕೊಂಡು, ಸಕಲಾವಯವಗಳಿಗೂ ಚಂದನವನ್ನು ಲೇಪಿಸಿಕೊಂಡಿರುವ ನನ್ನನ್ನು ಒಮ್ಮೆ ಸ್ಮಿತಸಹಿತವಾದ ಕಟಾಕ್ಷದಿಂದ ನೋಡು.

೧೫. ಎಲೌ ಪ್ರಿಯಳೇ ಅಮೃತದಂತೆ ಮಧುರವಾದ ಮಾತುಗಳನ್ನಾಡು. ಮೊದಲೇ ಬಿಲ್ಲಿನಂತೆ ಕುಟಿಲವಾದ ಹುಬ್ಬುಗಳನ್ನು ಈಗ ಇನ್ನೂ ವಕ್ರಗೊಳಿಸುವುದಿಲ್ಲವೇಕೆ ?

೧೬. ಈರೀತಿಯಾಗಿ ರಾಜನು ಗೋಳಾಡುತ್ತಿರಲು " ಎಲೈ ರಾಜೇಂದ್ರನೇ, ಧೈರ್ಯವನ್ನು ತಾಳು ನಿನ್ನಂಥವನು ಅಳುವುದೆಂದರೇನು " ಎಂದು ಮುಂತಾಗಿ ಅಶರೀರವಾಣಿಯಾಯಿತು.

೧೭. ' ನೀನು ದತ್ತಾತ್ರೇಯನ ಅನುಗ್ರಹದಿಂದ ಜ್ಞಾನಿಗಳಲ್ಲಿ ಶ್ರೇಷ್ಠನೆನಿಸಿರುವೆ. ಮಂಗಳಾತ್ಮಕವಾದ ಸಂಸಾರವೆಲ್ಲವೂ ನೀರಿನ ಗುಳ್ಳೆಯಂತೆ ಕ್ಷಣಿಕವಾದುದೆಂದು ತಿಳಿ.'

ಕಮಲಾಂಶಾ ಚ ಸಾ ಸಾಧ್ವೀ ಜಗಾಮ ಕಮಲಾಲಯಂ ।
ತ್ವಮೇವ ಗಚ್ಛ ವೈಕುಂಠಂ ರಣಂ ಕೃತ್ವಾ ರಣಾಜಿರೇ ॥ ೧೮ ॥

ಇತ್ಯೇವಂ ವಚನಂ ಶ್ರುತ್ವಾ ಜಹೌ ಶೋಕಂ ನರಾಧಿಪಃ ।
ತತಶ್ಚಂದನಕಾಷ್ಠೇನ ಚಿತಾಂ ದಿವ್ಯಾಂ ಚಕಾರ ಹ ॥ ೧೯ ॥

ಸಂಸ್ಕಾರಾಗ್ನಿಂ ಕಾರಯಿತ್ವಾ ಪುತ್ರದ್ವಾರಾ ದದಾಹ ತಾಂ ।
ನಾನಾವಿಧಾನಿ ರತ್ನಾನಿ ಬ್ರಾಹ್ಮಣೇಭ್ಯೋ ದದೌ ಮುದಾ ॥ ೨೦ ॥

ನಾನಾವಿಧಾನಿ ವಸ್ತ್ರಾಣಿ ದಾನಾನಿ ವಿವಿಧಾನಿ ಚ ।
ಮನೋರಮಾಯಾಃ ಪುಣ್ಯೇನ ಬ್ರಾಹ್ಮಣೇಭ್ಯೋ ದದೌ ಮುದಾ ॥ ೨೧ ॥

ಭುಜ್ಯತಾಂ ಭುಜ್ಯತಾಂ ಶಶ್ವದ್ದೀಯತಾಂ ದೀಯತಾಮಿತಿ ।
ಶಬ್ದೋ ಬಭೂವ ಸರ್ವತ್ರ ಕಾರ್ತವೀರ್ಯಾಶ್ರಮೇ ಮುನೇ ॥ ೨೨ ॥

---

೧೮. 'ಲಕ್ಷ್ಮೀದೇವಿಯ ಅಂಶಸಂಭೂತಳಾದ ಆ ಮನೋರಮೆಯು ಲಕ್ಷ್ಮಿಯ ಮಂದಿರಕ್ಕೇ ತೆರಳಿದಳು. ನೀನೂ ಕೂಡ ಕ್ಷತ್ರಿಯಧರ್ಮದಂತೆ ಯುದ್ಧಮಾಡಿ ವೈಕುಂಠಕ್ಕೆ ಹೋಗು.'

೧೯. ಈ ರೀತಿಯಾದ ಅಶರೀರವಾಣಿಯನ್ನು ಕೇಳಿ ರಾಜನು ದುಃಖವನ್ನು ದೂರಮಾಡಿ, ಚಂದನಕಾಷ್ಠಗಳನ್ನ ತರಿಸಿ ಮನೋರಮೆಗೆ ದಿವ್ಯವಾದ ಚಿತೆಯನ್ನು ರಚಿಸಿದನು.

೨೦. ಮಗನಿಂದ ಅಗ್ನಿಸಂಸ್ಕಾರಗೊಳಿಸಿ, ಆಕೆಗೆ ಮಂತ್ರಾಗ್ನಿಯನ್ನು ಸಮರ್ಪಿಸಿ, ಬ್ರಾಹ್ಮಣರಿಗೆ ವಿಧವಿಧ ರತ್ನಗಳನ್ನು ಸಂತೋಷದಿಂದ ದಾನ ಮಾಡಿದನು.

೨೧. ಷೋಡಶಮಹಾದಾನಗಳನ್ನೂ, ವಿವಿಧ ವಸ್ತ್ರಗಳನ್ನೂ ಮನೋರಮೆಯ ಪುಣ್ಯಾನುಗುಣವಾಗಿ ಬ್ರಾಹ್ಮಣರಿಗೆ ಸಂತೋಷದಿಂದ ದಾನಮಾಡಿದನು.

೨೨. ಎಲೈ ನಾರದ ಮುನಿಯೇ, ಆಗ ಕಾರ್ತವೀರ್ಯನಿದ್ದ ಆಶ್ರಮದಲ್ಲೆಲ್ಲೂ, "ಊಟಮಾಡಿ, ಊಟಮಾಡಿ, ದಾನಮಾಡಿ, ದಾನಮಾಡಿ," ಎಂಬ ಶಬ್ದವೇ ಕೇಳಿಸುತ್ತಿದ್ದಿತು.

ಕೋಶೇಷು ಸ್ವಾಧಿಕಾರೇಷು ಸ್ಥಿತಂ ಯದ್ಯದ್ಧನಂ ತದಾ ।
ಮನೋರಮಾಯಾಃ ಪುಣ್ಯೇನ ಬ್ರಾಹ್ಮಣೇಭ್ಯೋ ದದೌ ಮುದಾ ॥ ೨೩ ॥

ರಾಜಾ ಜಗಾಮ ಸಮರಂ ಹೃದಯೇನ ವಿದೂಯತಾ ।
ಸಾರ್ಧಂ ಸೈನ್ಯಸಮೂಹೈಶ್ಚ ವಾದ್ಯಭಾಂಡೈರಸಂಖ್ಯಕೈಃ ॥ ೨೪ ॥

ದದರ್ಶಾಮಂಗಲಂ ರಾಜಾ ಪುರೋ ವರ್ತ್ಮನಿ ವರ್ತ್ಮನಿ ।
ಯಯೌ ತಥಾಪಿ ಸಮರಂ ನಾಜಗಾಮ ಗೃಹಂ ಪುನಃ ॥ ೨೫ ॥

ಮುಕ್ತಕೇಶೀಂ ಛಿನ್ನನಾಸಾಂ ರುದತೀಂ ಚ ದಿಗಂಬರಾಂ ।
ಕೃಷ್ಣವಸ್ತ್ರಪರೀಧಾನಾಮಪರಾಂ ವಿಧವಾಮಪಿ ॥ ೨೬ ॥

ಮುಖದುಷ್ಟಾಂ ಯೋನಿದುಷ್ಟಾಂ ವ್ಯಾಧಿಯುಕ್ತಾಂ ಚ ಕುಟ್ಟನೀಂ ।
ಪತಿಪುತ್ರವಿಹೀನಾಂ ಚ ಡಾಕಿನೀಂ ಪುಂಶ್ಚಲೀಂ ತಥಾ ॥ ೨೭ ॥

---

೨೩. ತನ್ನ ಅಧಿಕಾರಕ್ಕೊಳಗಾದ ಬೊಕ್ಕಸದಲ್ಲಿ ತುಂಬಿದ್ದ ಎಲ್ಲ ಹಣವನ್ನೂ ಮನೋರಮೆಯ ಪುಣ್ಯಾನುಗುಣವಾಗಿ ಬ್ರಾಹ್ಮಣರಿಗೆ ದಾನಮಾಡಿದನು.

೨೪. ಅನಂತರ ರಾಜನು, ಅಸಂಖ್ಯವಾದ್ಯಗಳಿಂದ ಭೋರ್ಗರೆಯುತ್ತಿರುವ ವಿಸ್ತಾರವಾದ, ಸೈನ್ಯದೊಡಗೂಡಿ ದುಃಖಿತ ಮನಸ್ಕನಾಗಿಯೇ ಯುದ್ಧರಂಗಕ್ಕೆ ಹೋದನು.

೨೫ ಹೋಗುತ್ತ ದಾರಿಯಲ್ಲಿ ಹೆಜ್ಜೆ ಹೆಜ್ಜೆಗೂ ಅಪಶಕುನಗಳನ್ನು ಕಂಡರೂ, ಮನೆಗೆ ಹಿಂತಿರುಗಿ ಬರದೆ ಯುದ್ಧಕ್ಕೆ ಹೊರಟೇಹೋದನು.

೨೬. ಕತ್ತರಿಸಿದ ಮೂಗುಳ್ಳ ವಿಧವೆಯೊಬ್ಬಳು, ಕಪ್ಪು ಬಟ್ಟೆಯನ್ನುಟ್ಟು, ತಲೆಗೂದಲುಗಳನ್ನು ಕೆದರಿಕೊಂಡು, ಅಳುತ್ತ ತನ್ನ ಮುಂದೆ ಬಂದುದನ್ನು ರಾಜನು ನೋಡಿದನು.

೨೭. ದುಷ್ಟ ವಚನಗಳನ್ನಾಡುವವಳೂ, ದುಷ್ಟರ ಸಂಗಮಮಾಡುವವಳೂ, ರೋಗಗ್ರಸ್ತಳೂ ಆದ ಕುಲಟೆಯನ್ನೂ, ಪತಿಪುತ್ರರಹಿತಳಾದ ಡಾಕಿನಿಯನ್ನೂ ರಾಜನು ನೋಡಿದನು.

ಕುಂಭಕಾರಂ ತೈಲಕಾರಂ ವ್ಯಾಧಂ ಸರ್ಪೋಪಜೀವಿನಂ ।
ಕುಚೈಲಮತಿರೂಕ್ಷಾಂಗಂ ನಗ್ನಂ ಕಾಷಾಯವಾಸಿನಂ ॥ ೨೮ ॥

ಮಾಂಸವಿಕ್ರಯಿಣಂ ಚೈವ ಕನ್ಯಾವಿಕ್ರಯಿಣಂ ತಥಾ ।
ಚಿತಾದಗ್ಧಂ ಶವಂ ಭಸ್ಮ ನಿರ್ವಾಣಾಂಗಾರಮೇವ ಚ ॥ ೨೯ ॥

ಸರ್ಪಕ್ಷತಂ ನರಂ ಸರ್ಪಂ ಗೋಧಾಂ ಚ ಶಶಕಂ ವಿಷಂ ।
ಶ್ರಾದ್ಧಪಾಕಂ ಚ ಪಿಂಡಂ ಚ ಮೋಟಕಂ ಚ ತಿಲಾಂಸ್ತಥಾ ॥ ೩೦ ॥

ದೇವಲಂ ವೃಷವಾಹಂ ಚ ಶೂದ್ರಶ್ರಾದ್ಧಾನ್ನಭೋಜನಂ ।
ಶೂದ್ರಾನ್ನಪಾಚಕಂ ಶೂದ್ರಯಾಜಕಂ ಗ್ರಾಮಯಾಜಕಂ ॥ ೩೧ ॥

---

೨೮. ಕುಂಬಾರ, ಗಾಣಿಗ, ಬೇಡ ಮತ್ತು ಹಾವಾಡಿಗರನ್ನೂ, ಕೊಳಕು ಬಟ್ಟೆಯುಟ್ಟವನನ್ನೂ, ಸ್ನಾನವಿಲ್ಲದೆ ಒರಟಾದ ಶರೀರವುಳ್ಳವನನ್ನೂ, ಬೆತ್ತಲೆಯಾದವನನ್ನೂ. ಕಾಷಾಯವಸ್ತ್ರವನ್ನು ಧರಿಸಿರುವ ಕಪಟಯತಿಯನ್ನೂ ರಾಜನು ಮುಂದೆ ನೋಡಿದನು.

೨೯. ಶರೀರದ ಮಾಂಸಮಜ್ಜೆಗಳನ್ನೂ, ಹೊಟ್ಟೆಯಲ್ಲಿ ಹುಟ್ಟಿದ ಕನ್ಯೆಯನ್ನೂ, ಮಾರಿ ಜೀವಿಸುವವರು. ರಾಜನ ದೃಷ್ಟಿಗೋಚರರಾದರು. ಚಿತೆಯಲ್ಲಿ ಸುಟ್ಟ ಶವವನ್ನೂ ಬೂದಿಯಾಗಿ ಆರಿಹೋದ ಕೆಂಡವನ್ನೂ ರಾಜನು ನೋಡಿದನು.

೩೦. ಹಾವುಕಡಿದ ಮನುಷ್ಯನನ್ನೂ ಹಾವನ್ನೂ, ಹಲ್ಲಿ. ಮೊಲ, ಮತ್ತು ವಿಷವನ್ನೂ, ಶ್ರಾದ್ಧಕ್ಕಾಗಿ ಮಾಡಿದ ಅಡಿಗೆಯನ್ನೂ, ಪಿಂಡವನ್ನೂ, ಸೀಳಿದ ದರ್ಭೆಯನ್ನೂ, ಎಳ್ಳನ್ನೂ ಕೂಡ ರಾಜನು ಮಾರ್ಗಮಧ್ಯದಲ್ಲಿ ನೋಡಿದನು.

೩೧. ಪೂಜಾರಿಯನ್ನೂ, ಎತ್ತಿನಿಂದ ಜೀವಿಸುವ ಬ್ರಾಹ್ಮಣನನ್ನೂ, ಶೂದ್ರನ ಶ್ರಾದ್ಧಾನ್ನ ಭಕ್ಷಕನನ್ನೂ, ಶೂದ್ರನಿಗೆ ಅಡಿಗೆ ಮಾಡುವವನನ್ನೂ, ಶೂದ್ರನಿಂದ ಯಾಗಮಾಡಿಸುವವನನ್ನೂ, ಗ್ರಾಮಕ್ಕಾಗಿ ಯಾಗಮಾಡಿಸುವವನನ್ನೂ ರಾಜನು ನೋಡಿದನು.

ಕುಶಪುತ್ತಲಿಕಾಂ ಚೈವ ಶವದಾಹನಕಾರಿಣಂ ।
ಶೂನ್ಯಕುಂಭಂ ಭಗ್ನಕುಂಭಂ ತೈಲಂ ಲವಣಮಸ್ಥಿ ಚ ॥ ೩೨ ॥

ಕಾರ್ಪಾಸಂ ಕಚ್ಛಪಂ ಚೂರ್ಣಂ ಕುಕ್ಕುರಂ ಶಬ್ದಕಾರಿಣಂ ।
ದಕ್ಷಿಣೇ ಚ ಸೃಗಾಲಂ ಚ ಕುರ್ವಂತಂ ಭೈರವಂ ರವಂ ॥ ೩೩ ॥

ಕಪರ್ದಕಂ ಚ ಕ್ಷೌರಂ ಚ ಛಿನ್ನಕೇಶಂ ನಖಂ ಮಲಂ ।
ಕಲಹಂ ಚ ವಿಲಾಪಂ ಚ ತಥಾ ತತ್ಕಾರಿಣಂ ಜನಂ ॥ ೩೪ ॥

ಅಮಂಗಲಂ ರುದಂತಂ ಚ ರುದಂತಂ ಶೋಕಕಾರಿಣಂ ॥ ೩೫ ॥

ಮಿಥ್ಯಾಸಾಕ್ಷ್ಯಪ್ರದಾತಾರಂ ಚೌರಂ ಚ ನರಘಾತಿನಂ ।
ಪುಂಶ್ಚಲೀಪತಿಪುತ್ರೌ ಚ ಪುಂಶ್ಚಲ್ಯೋದನಭೋಜಿನಂ ॥ ೩೬ ॥

---

೩೨. ದರ್ಭೆಯಿಂದ ಮಾಡಿದ ಬೊಂಬೆಯೂ, ಶವದಾಹಮಾಡುವವನೂ, ಬರಿದಾದ ಮತ್ತು ಒಡೆದುಹೋದ ಗಡಿಗೆಗಳೂ, ಎಣ್ಣೆ, ಉಪ್ಪು ಮತ್ತು ಮೂಳೆಗಳೂ ರಾಜನ ಕಣ್ಣಿಗೆ ಗೋಚರಿಸಿದವು.

೩೩. ನೂಲಿನ ಬಟ್ಟೆ, ಆಮೆ, ಬೊಗಳುತ್ತಿರುವ ನಾಯಿ, ಬಲಭಾಗದಲ್ಲಿ ಭಯಂಕರವಾಗಿ ಕೂಗುತ್ತಿರುವ ನರಿ ಮುಂತಾದವುಗಳೂ ರಾಜನ ಎದುರಿನಲ್ಲಿ ಕಂಡವು.

೩೪. ಕವಡೆ, ಕ್ಷೌರೋಪಕರಣ, ಕತ್ತರಿಸಿದ ಕೂದಲು ಮತ್ತು ಉಗುರು ಅಮೇಧ್ಯ ಮುಂತಾದುವುಗಳೂ, ಜಗಳ ಮತ್ತು ಗೋಳಾಟವೂ, ಜಗಳವಾಡುವ ಜನರೂ ರಾಜನ ದೃಷ್ಟಿಗೆ ಗೋಚರವಾದರು.

೩೫. ಅಮಂಗಳಕರವಾಗಿ ಅಳುತ್ತಿರುವುದನ್ನೂ, ಅತ್ತುಅತ್ತು ಗೋಳಾಡುತ್ತಿರುವುದನ್ನೂ ರಾಜನು ನೋಡಿದನು.

೩೬. ಸುಳ್ಳುಸಾಕ್ಷಿ ಹೇಳುವವನೂ, ಕಳ್ಳನೂ, ನರಹಿಂಸಕನೂ, ವೇಶ್ಯೆಯ ಪತಿಪುತ್ರರೂ, ವೇಶ್ಯಾನ್ನಭೋಜಿಗಳೂ ಮಾರ್ಗದಲ್ಲಿ ರಾಜನ ದೃಷ್ಟಿಗೆ ಗೋಚರರಾದರು.

ದೇವತಾಗುರುವಿಪ್ರಾಣಾಂ ವಸ್ತುವಿತ್ತಾಪಹಾರಿಣಂ।
ದತ್ತಾಪಹಾರಿಣಂ ದಸ್ಯುಂ ಹಿಂಸಕಂ ಸೂಚಕಂ ಖಲಂ ॥ ೩೭ ॥

ಪಿತೃಮಾತೃವಿರಕ್ತಂಚ ದ್ವಿಜಾಶ್ವತ್ಥವಿಘಾತಿನಂ।
ಸತ್ಯಘ್ನಂ ಚ ಕೃತಘ್ನಂ ಚ ಸ್ಥಾಪ್ಯಸ್ಯಾಪ್ಯಪಹಾರಿಣಂ ॥ ೩೮ ॥

ವಿಪ್ರ ಮಿತ್ರದ್ರೋಹಮೇವಂ ಕ್ಷತಂ ವಿಶ್ವಾಸಘಾತಕಂ।
ಗುರುದೇವದ್ವಿಜಾನಾಂ ಚ ನಿಂದಕಂ ಸ್ವಾಂಗಘಾತಕಂ ॥ ೩೯ ॥

ಜೀವಾನಾಂ ಘಾತಕಂ ಚೈವ ಸ್ವಾಂಗಹೀನಂ ಚ ನಿರ್ದಯಂ।
ವ್ರತೋಪವಾಸಹೀನಂ ಚ ದೀಕ್ಷಾಹೀನಂ ನಪುಂಸಕಂ ॥ ೪೦ ॥

ಗಲಿತವ್ಯಾಧಿಗಾತ್ರಂ ಚ ಕಾಣಂ ಬಧಿರಮೇವ ಚ।
ಪುಲ್ಕಸಂಚ್ಛಿನ್ನಲಿಂಗಂ ಚ ಸುರಾಮತ್ತಂ ಸುರಾಂ ತಥಾ ॥ ೪೧ ॥

---

೩೭. ದೇವ, ಗುರು, ಬ್ರಾಹ್ಮಣರ ಆಸ್ತಿಯನ್ನು ಅಪಹರಿಸಿದವನೂ, ತಾನೇ ದಾನಮಾಡಿದ್ದನ್ನು ಆಪಹರಿಸಿದವನೂ, ದರೋಡೆಗಾರ, ಕಟುಕ, ಚಾಡಿಕೋರ, ಮತ್ತು ದುಷ್ಟನೂ ರಾಜನಿಗೆ ಕಾಣಿಸಿಕೊಂಡರು.

೩೮. ತಂದೆತಾಯಿಯರಲ್ಲಿ ಭಕ್ತಿಯಿಲ್ಲದವನನ್ನೂ, ಬ್ರಾಹ್ಮಣ ಮತ್ತು ಆಶ್ವತ್ಥವೃಕ್ಷಗಳ ನಾಶಕನನ್ನೂ, ಸುಳ್ಳುಗಾರ ಮತ್ತು ಉಪಕಾರಸ್ಮರಣೆಯಿಲ್ಲದವನನ್ನೂ, ಅಡುವಿಟ್ಟವಸ್ತುವಿನ ಅಪಹಾರಕನನ್ನೂ ರಾಜನು ಎದುರಿನಲ್ಲಿ ಕಂಡನು.

೩೯. ಬ್ರಾಹ್ಮಣ ಮತ್ತು ಮಿತ್ರರಿಗೆ ದ್ರೋಹವೆಸಗಿದವನನ್ನೂ, ನಂಬಿಸಿ ಮೋಸಗೊಳಿಸಿದವನನ್ನೂ, ಗುರು, ದೇವ, ದ್ವಿಜರ ನಿಂದಕನನ್ನೂ, ಆತ್ಮಘಾತಕನನ್ನೂ, ರಾಜನು ನೋಡಿದನು.

೪೦. ಪ್ರಾಣಿಹಿಂಸಕರು, ಅವಯವಹೀನರು, ನಿರ್ದಯರು, ವ್ರತ, ಉಪವಾಸ, ದೀಕ್ಷೆಗಳನ್ನು ಕೈಗೊಳ್ಳದವರೂ, ನಪುಂಸಕರೂ ರಾಜನ ಎದುರಿನಲ್ಲಿ ಕಾಣಿಸಿಕೊಂಡರು.

೪೧. ಕುಷ್ಠರೋಗದಿಂದ ನಷ್ಟಶರೀರನನ್ನೂ, ಕುರುಡಕಿವುಡರನ್ನೂ, ಚಂಡಾಲನನ್ನೂ, ಲಿಂಗರಹಿತನನ್ನೂ ಮದ್ಯಪಾನದಿಂದ ಮದಿಸಿದವನನ್ನೂ, ಮದ್ಯವನ್ನೂ ರಾಜನು ನೋಡಿದನು.

ಕ್ಷಿಪ್ತಂ ವಮಂತಂ ರುಧಿರಂ ಮಹಿಷಂ ಗರ್ದಭಂ ತಥಾ ।
ಮೂತ್ರಂ ಪುರೀಷಂ ಶ್ಲೇಷ್ಮಾಣಂ ರೂಕ್ಷಿಣಂ ನೃಕಪಾಲಕಂ ॥ ೪೨ ॥

ಚಂಡವಾತಂ ರಕ್ತವೃಷ್ಟಿಂ ವಾದ್ಯಂ ವೈ ವೃಕ್ಷಪಾತನಂ ।
ವೃಕಂ ಚ ಸೂಕರಂ ಗೃಧ್ರಂ ಶ್ಯೇನಃ ಕಂಕಂ ಚ ಭಲ್ಲುಕಂ ॥ ೪೩ ॥

ಪಾಶಂ ಚ ಶುಷ್ಕಕಾಷ್ಠಂ ಚ ವಾಯಸಂ ಗಂಧಕಂ ತಥಾ ॥ ೪೪ ॥

ಪ್ರತಿಗ್ರಾಹಿ ಬ್ರಾಹ್ಮಣಂ ಚ ತಂತ್ರಮಂತ್ರೋಪಜೀವಿನಂ ।
ವೈದ್ಯಂ ಚ ರಕ್ತಪುಷ್ಪಂ ಚಾಪ್ಯೌಷಧಂ ತುಷಮೇವ ಚ ॥ ೪೫ ॥

ಕುವಾರ್ತಾಂ ಮೃತವಾರ್ತಾಂ ಚ ವಿಪ್ರಶಾಪಂ ಚ ದಾರುಣಂ ।
ದುರ್ಗಂಧಿವಾತಂ ದುಶ್ಶಬ್ದಂ ರಾಜಾಪಶ್ಯತ್ಸವರ್ತ್ಮನಿ ॥ ೪೬ ॥

---

೪೨. ರಕ್ತಕಾರಿ ಬಿದ್ದಿರುವವನನ್ನೂ ಕೋಣ ಮತ್ತು ಕತ್ತೆಗಳನ್ನೂ, ಮಲ, ಮೂತ್ರ, ಶ್ಲೇಷ್ಮಗಳನ್ನು ಬಳಿದುಕೊಂಡಿರುವ ನರಕಪಾಲವನ್ನೂ ರಾಜನು ಮಾರ್ಗ ಮಧ್ಯದಲ್ಲಿ ನೋಡಿದನು.

೪೩. ಬಿರುಗಾಳಿ, ರಕ್ತದಮಳೆ, ಅಮಂಗಳವಾದ್ಯ, ಮರಗಳ ಬೀಳುವಿಕೆ, ತೋಳ, ಹಂದಿ, ಹದ್ದು, ಗಿಡಗ, ರಣಹದ್ದು, ಕರಡಿ ಇವೆಲ್ಲವೂ ರಾಜನಿಗೆ ಕಾಣಿಸಿಕೊಂಡವು.

೪೪-೪೫. ಪಾಶ ಮತ್ತು ಒಣಗಿದ ಮರವನ್ನೂ, ಕಾಗೆಯನ್ನೂ, ಗಂಧಕವನ್ನೂ, ಶೂದ್ರಾದಿಗಳಿಂದ ದಾನಪ್ರತಿಗ್ರಹಮಾಡುವ ಬ್ರಾಹ್ಮಣನನ್ನೂ, ಮಂತ್ರತಂತ್ರಗಳಿಂದ ಜೀವಿಸುವವನನ್ನೂ, ವೈದ್ಯನನ್ನೂ, ಕೆಂಪುಬಣ್ಣದ ಹೂವನ್ನೂ, ಔಷಧ ಮತ್ತು ಹೊಟ್ಟನ್ನೂ, ರಾಜನು ದಾರಿಯಲ್ಲಿ ನೋಡಿದನು.

೪೬. ಕೆಟ್ಟ ಮತ್ತು ಸತ್ತ ಸಮಾಚಾರಗಳೂ, ದಾರುಣವಾದ ಬ್ರಾಹ್ಮಣ ಶಾಪವೂ, ದುರ್ಗಂಧಿವಾಯುವೂ, ದುಷ್ಟಶಬ್ದವೂ ರಾಜನಿಗೆ ಮಾರ್ಗಮಧ್ಯದಲ್ಲಿ ಕೇಳಿಸಿತು.

ಮನಶ್ಚ ಕುತ್ಸಿತಂ ಪ್ರಾಣಾಃ ಕ್ಷುಭಿತಾಶ್ಚ ನಿರಂತರಂ ।
ವಾಮಾಂಗಸ್ಪಂದನಂ ದೇಹಜಾಡ್ಯಂ ರಾಜ್ಞೋ ಬಭೂವ ಹ ॥ ೪೭ ॥

ತಥಾಪಿ ರಾಜಾ ನಿಶ್ಶಂಕೋ ದದರ್ಶ ಸಮರಾಂಗಣಂ ।
ಸರ್ವಸೈನ್ಯಸಮಾಯುಕ್ತಃ ಪ್ರವಿವೇಶ ರಣಾಜಿರಂ ॥ ೪೮ ॥

ಅವರುಹ್ಯ ರಥಾತ್ತೂರ್ಣಂ ದೃಷ್ಟ್ವಾ ಚ ಪುರತೋ ಭೃಗುಂ ।
ನನಾಮ ದಂಡವದ್ಭೂಮೌ ರಾಜೇಂದ್ರೈಃ ಸಹ ಭಕ್ತಿತಃ ॥ ೪೯ ॥

ಆಶಿಷಂ ಯುಯುಜೇ ರಾಮಃ ಸ್ವರ್ಗಂ ಯಾಹೀತಿ ವಾಂಛಿತಂ ।
ತೇಷಾಂ ಸಹ್ಯಂ ತದ್ಬಭೂವುರ್ದುರ್ಲಂಘ್ಯಾ ಬ್ರಾಹ್ಮಣಾಶಿಷಃ ॥ ೫೦ ॥

ಭೃಗುಂ ಪ್ರಣಮ್ಯ ರಾಜೇಂದ್ರೋ ರಾಜೇಂದ್ರೈಃ ಸಹ ತತ್ಕ್ಷಣಾತ್ ।
ಆರುರೋಹ ರಥಂ ತೂರ್ಣಂ ನಾನಾಯುಧಸಮನ್ವಿತಂ ॥ ೫೧ ॥

---

೪೭. ಇದನ್ನೆಲ್ಲ ನೋಡಿದ ರಾಜನ ಮನಸ್ಸು ಕಲುಷಿತವಾಯಿತು. ಪ್ರಾಣಗಳು ಚಂಚಲವಾದವು. ಎಡಭಾಗದ ಅವಯವಗಳು ಅದುರಿದವು. ದೇಹವೆಲ್ಲ ಜಡವಾಯಿತು.

೪೮. ಇಷ್ಟಾದರೂ ರಾಜನು ನಿರ್ಭೀತನಾಗಿ ಹೋಗುತ್ತ ಮುಂದೆ ಯುದ್ಧಾಂಗಣವನ್ನು ಕಂಡನು. ಮತ್ತು ಸಕಲ ಸೈನ್ಯದೊಡನೆ ಯುದ್ಧರಂಗಕ್ಕೆ ಪ್ರವೇಶಿಸಿದನು.

೪೯. ಅಲ್ಲಿ ಪರಶುರಾಮನನ್ನು ನೋಡಿದಕೂಡಲೇ ಜಾಗ್ರತೆಯಾಗಿ ರಥದಿಂದಿಳಿದು. ಸಕಲ ಸಾಮಂತರಾಜರೊಡನೆ ಅವನಿಗೆ ಭಕ್ತಿಪೂರ್ವಕವಾಗಿ ದಂಡಪ್ರಣಾಮಮಾಡಿದನು.

೫೦. ಪರಶುರಾಮನೂ ಕೂಡ "ಸ್ವರ್ಗಕ್ಕೆ ಹೋಗು" ಎಂದು ಕಾರ್ತವೀರ್ಯನಿಗೆ ಅಭೀಪ್ಸಿತವಾದ ಆಶೀರ್ವಾದವನ್ನು ಮಾಡಿದನು. ಅವರೆಲ್ಲರಿಗೂ ಅದು ಹಿತವಾಗಿಯೇ ತೋರಿತು. ಬ್ರಾಹ್ಮಣರ ಆಶಿ ರ್ವಾದವನ್ನು ಮೀರಲಳವಲ್ಲ.

೫೧. ಈರೀತಿ ಕಾರ್ತವೀರ್ಯನು ಭಾರ್ಗವರಾಮನಿಗೆ ವಂದಿಸಿ ಸಮಸ್ತ ರಾಜರೊಡನೆ, ಸಕಲಾಯುಧ ಪರಿಪೂರ್ಣವಾದ ರಥವನ್ನು ಹತ್ತಿದನು.

ನಾನಾಪ್ರಕಾರವಾದ್ಯಂ ಚ ದುಂದುಭಿಂ ಮುರಜಾದಿಕಂ ।
ವಾದಯಾಮಾಸ ಸಹಸಾ ಬ್ರಾಹ್ಮಣೇಭ್ಯೋ ದದೌ ಧನಂ ॥ ೫೨ ॥

ಉವಾಚ ರಾಮೋ ರಾಜೇಂದ್ರಂ ರಾಜೇಂದ್ರಾಣಾಂ ಚ ಸಂಸದಿ ।
ಹಿತಂ ಸತ್ಯಂ ನೀತಿಸಾರಂ ವಾಕ್ಯಂ ವೇದವಿದಾಂ ವರಃ ॥ ೫೩ ॥

॥ ಪರಶುರಾಮ ಉವಾಚ ॥

ಶೃಣು ರಾಜೇಂದ್ರ ಧರ್ಮಿಷ್ಠ ಚಂದ್ರವಂಶಸಮುದ್ಭವ ।
ವಿಷ್ಣೋರಂಶಸ್ಯ ಶಿಷ್ಯಸ್ತ್ವಂ ದತ್ತಾತ್ರೇಯಸ್ಯ ಧೀಮತಃ ॥ ೫೪ ॥

ಸ್ವಯಂ ವಿದ್ವಾಂಶ್ಚ ವೇದಾಂಶ್ಚ ಶ್ರುತ್ವಾ ವೇದವಿದೋ ಮುಖಾತ್ ।
ಕಥಂ ದುರ್ಬುದ್ಧಿರಧುನಾ ಸಜ್ಜನಾನಾಂ ವಿಹಿಂಸನಾ ॥ ೫೫ ॥

ತ್ವಂ ಪೂರ್ವಮಹನೋ ಲೋಭಾನ್ನಿರೀಹಂ ಬ್ರಾಹ್ಮಣಂ ಕಥಂ ।
ಬ್ರಾಹ್ಮಣೀ ಶೋಕಸಂತಪ್ತಾ ಭರ್ತ್ರಾ ಸಾರ್ಧಂ ಗತಾ ಸತೀ ॥ ೫೬ ॥

---

೫೨. ನಗಾರಿ, ಮೃದಂಗ ಮುಂತಾದ ನಾನಾ ವಿಧ ವಾದ್ಯಗಳನ್ನು ಮೊಳಗಿಸಿ, ಬ್ರಾಹ್ಮಣರಿಗೆ ಯಥೇಚ್ಛವಾಗಿ ದ್ರವ್ಯದಾನಮಾಡಿದನು.

೫೩. ಅನಂತರ ವೇದವೇದಾಂಗಪಾರಂಗತನಾದ ಪರಶುರಾಮನು ರಾಜರ ಗುಂಪಿನಲ್ಲಿರುವ ಕಾರ್ತವೀರ್ಯನನ್ನು ಕುರಿತು, ಹಿತವೂ, ಸತ್ಯವೂ, ನೀತಿಬೋಧಕವೂ ಆದ ಕೆಲವು ನುಡಿಗಳನ್ನಾಡಿದನು.

೫೪. ಪರುಶುರಾಮ :—ಚಂದ್ರವಂಶೋತ್ಪನ್ನನೂ ಧರ್ಮಪರಾಯಣನೂ ಆದ ಎಲೈ ರಾಜೇಂದ್ರನೇ, ನಾನು ಹೇಳುವುದನ್ನು ಕೇಳು. ನೀನು ವಿಷ್ಣುವಿನ ಅಂಶೋದ್ಭವನೂ, ಜ್ಞಾನಿಯೂ ಆದ ದತ್ತಾತ್ರೇಯನ ಶಿಷ್ಯನಾಗಿರುವೆ.

೫೫. ವೇದಜ್ಞರಾದ ಗುರುಗಳ ಮುಖದಿಂದ ವೇದಾಧ್ಯಯನಮಾಡಿ ಸ್ವತಃ ವಿದ್ವಾಂಸನಾಗಿರುವ ನಿನಗೆ, ಸತ್ಪುರುಷರನ್ನು ಹಿಂಸಿಸುವ ಈ ದುರ್ಬುದ್ಧಿ ಏಕೆ ?

೫೬. ನೀನು ನಿಷ್ಕಾಮನಾದ ಬ್ರಾಹ್ಮಣನನ್ನು (ಜಮದಗ್ನಿಯನ್ನು) ಕಾಮಧೇನುವಿನ ಲೋಭದಿಂದ ಕೊಂದೆ. ಪತಿವ್ರತೆಯಾದ ಅವನ ಪತ್ನಿಯು ದುಃಖಸಂತಪ್ತಳಾಗಿ ಅವನೊಡನೆ ಅಗ್ನಿಪ್ರವೇಶಮಾಡಿದಳು.

ಕಿಂ ಭವಿಷ್ಯತಿ ತೇ ಭೂಪ ಪರತ್ರೈವಾನಯೋರ್ವಧಾತ್ ।
ಸರ್ವಂ ಮಿಥ್ಯೈವ ಸಂಸಾರಂ ಪದ್ಮಪತ್ರೇ ಯಥಾ ಜಲಂ ॥ ೫೭ ॥

ಸತ್ಕೀರ್ತಿಶ್ಚಾಥ ದುಷ್ಕೀರ್ತಿಃ ಕಥಾಮಾತ್ರಾವಶೇಷಿತಾ ।
ವಿಡಂಬನಾ ವಾ ಕಿಮತೋ ದುಷ್ಕೀರ್ತೇಶ್ಚ ಸತಾಮುಖೇ ॥ ೫೮ ॥

ಕ್ವ ಗತಾ ಕಪಿಲಾ ತ್ವಂ ಕ್ವ ಕ್ವ ವಿವಾದೋ ಮುನಿಃ ಕುತಃ ।
ಯತ್ಕೃತಂ ವಿದುಷಾ ರಾಜ್ಞಾ ನಕೃತಂ ಹಾಲಿಕೇನ ತತ್ ॥ ೫೯ ॥

ತ್ವಾಮುಪೋಷಿತಮಿಶಂ ಹಿ ದೃಷ್ಟ್ವಾ ತಾತೋ ಹಿ ಧಾರ್ಮಿಕಃ ।
ಪಾರಣಾಂ ಕಾರಯಾಮಾಸ ದತ್ತಂ ತಸ್ಯ ಫಲಂ ತ್ವಯಾ ॥ ೬೦ ॥

ಅಧೀತಂ ವಿಧಿವದ್ದತ್ತಂ ಬ್ರಾಹ್ಮಣೇಭ್ಯೋ ದಿನೇ ದಿನೇ ।
ಜಗತ್ತೇ ಯಶಸಾಪೂರ್ಣಮಯಶೋ ವಾರ್ಧಕೇ ಕಥಂ ॥ ೬೧ ॥

---

೫೭. ಇವರಿಬ್ಬರ ವಧೆಯಿಂದ ಪರಲೋಕದಲ್ಲಿ ನಿನಗೇನು ಸಂಭವಿಸುವುದೋ ಯೋಚಿಸಿನೋಡು. ಈ ಸಂಸಾರವೆಲ್ಲವೂ ತಾವರೆ ಎಲೆಯುಮ್ಮೇಲಿರುವ ನೀರಿನಂತೆ ಕ್ಷಣಿಕವಾದುದು.

೫೮. ನೀನು ಗಳಿಸಿದ ಸತ್ಕೀರ್ತಿ ಮತ್ತು ದುಷ್ಕೀರ್ತಿಗಳು ಹೆಸರಾಗಿ ಉಳಿದವು. ಈರೀತಿ ದುಷ್ಕೀರ್ತಿಗಳಿಸಿದ ನಿಮ್ಮಂಥವರಿಗೆ ಸತ್ಪುರುಷರ ವಿಡಂಬನೆ ಏಕೆ ?

೫೯. ಈಗ ಆ ಕಾಮಧೇನುವೆಲ್ಲಿ ? ನೀನೆಲ್ಲಿ ? ಆ ವಾದವಿವಾದವೆಲ್ಲಿ ? ಆ ಮುನಿ ಎಲ್ಲಿ? ರಾಜನೂ ವಿದ್ವಾಂಸನೂ ಆದ ನೀನು ಮಾಡಿದ ಕೆಲಸವನ್ನು ಅಜ್ಞನಾದ ರೈತನೂ ಮಾಡುವುದಿಲ್ಲ

೬೦. ರಾಜನಾದ ನಿ ನು ಉಪವಾಸವಿದ್ದುದನ್ನು ನೋಡಿ ಪರಮಧರ್ಮಿಷ್ಠನಾದ ನಮ್ಮ ತಂದೆಯು, ಆಶ್ರಮಕ್ಕೆ ಕರೆದೊಯ್ದು ಪಾರಣೆಮಾಡಿಸಿದನು. ಅದಕ್ಕೆ ಪ್ರತಿಫಲವನ್ನು ನೀನು ಕೊಟ್ಟಂತಾಯಿತಲ್ಲ.

೬೧. ಕಾಲದಲ್ಲಿ ವೇದಾಧ್ಯಯನಮಾಡಿ, ನಿತ್ಯವೂ ವಿಧಿಪೂರ್ವಕವಾಗಿ ಬ್ರಾಹ್ಮಣರಿಗೆ ದಾನಧರ್ಮಗಳನ್ನು ಮಾಡಿ ಜಗತ್ತಿನಲ್ಲೆಲ್ಲ ಕೀರ್ತಿಗಳಿಸಿರುವ ನಿನಗೆ, ಈ ವಧ್ಧಾಪ್ಯದಲ್ಲಿ ಅಪಕೀರ್ತಿಯುಂಟಾಗುವುದೆಂದರೇನು ?

ದಾತಾ ವರಿಷ್ಠೋ ಧರ್ಮಿಷ್ಠೋ ಯಶಸ್ವೀ ಪುಣ್ಯವಾನ್ಸುಧೀಃ ।
ಕಾರ್ತವೀರ್ಯಾರ್ಜುನಸಮೋ ನ ಭೂತೋ ನ ಭವಿಷ್ಯತಿ ॥ ೬೨ ॥

ಪುರಾತನಾ ವದಂತೀತಿ ಬಂದಿನೋ ಧರಣೀತಲೇ ।
ಯೋ ವಿಖ್ಯಾತಃ ಪುರಾಣೇಷು ತಸ್ಯ ದುಷ್ಕೀರ್ತಿರೀದೃಶೀ ॥ ೬೩ ॥

ದುರ್ವಾಕ್ಯಂ ದುಃಸಹಂ ರಾಜಂಸ್ತೀಕ್ಷ್ಣಾಸ್ತ್ರಾದಪಿ ಜೀವಿನಾಂ ।
ಸಂಕಟೇಽಪಿ ಸತಾಂ ವಕ್ತ್ರಾದ್ದ್ವಿರುಕ್ತಿರ್ನ ವಿನಿರ್ಗತಾ ॥ ೬೪ ॥

ನ ದದಾಮಿ ದ್ವಿರುಕ್ತಿಂ ತೇ ಪ್ರಕೃತಂ ಕಥಯಾಮ್ಯಹಂ ।
ಉತ್ತರಂ ದೇಹಿ ರಾಜೇಂದ್ರ ಮಹ್ಯಂ ರಾಜೇಂದ್ರಸಂಸದಿ ॥ ೬೫ ॥

ಸೂರ್ಯಚಂದ್ರಮನೂನಾಂ ಚ ವಂಶಜಾಃ ಸಂತಿ ಸಂಸದಿ ।
ಸತ್ಯಂ ವದ ಸಭಾಯಾಂ ಚ ಶೃಣ್ವಂತು ಪಿತರಃ ಸುರಾಃ ॥ ೬೬ ॥

---

೬೨. 'ದಾನಶೀಲನೂ, ಶ್ರೇಷ್ಠನೂ, ಧರ್ಮಿಷ್ಠನೂ, ಕೀರ್ತಿವಂತನೂ, ಪುಣ್ಯವಂತನೂ, ಮತ್ತು ಬುದ್ಧಿವಂತನೂ ಆದ ಕಾರ್ತವೀರ್ಯಾರ್ಜುನನಿಗೆ ಸಮನಾದವರು ಹಿಂದೂ ಜನಿಸಿರಲಿಲ್ಲ. ಮುಂದೂ ಜನಿಸುವುದಿಲ್ಲ.'

೬೩. ಹೀಗೆಂದು ಭೂಮಂಡಲದಲ್ಲೆಲ್ಲ ಹಿಂದಿನಕಾಲದ ಸ್ತುತಿಪಾಠಕರೆಲ್ಲ ಸ್ತುತಿಸುತ್ತಿದ್ದಾರೆ. ಪುರಾಣಗಳಲೆಲ್ಲ ಪ್ರಸಿದ್ಧನಾದ ನಿನಗೆ ಇಂಥ ಅಪಕೀರ್ತಿ ಸಂಭವಿಸಿತಲ್ಲ.

೬೪. ಎಲೈ ರಾಜನೇ, ಜೀವಿಗಳಿಗೆ ಹರಿತವಾದ ಆಯುಧಕ್ಕಿಂತಲೂ ನಿಂದಾಪವಾದವು ಸಹಿಸಲಸಾಧ್ಯವಾದುದು. ಕಷ್ಟಕಾಲದಲ್ಲಿಯೂ ಕೂಡ ಸತ್ಪುರುಷರ ಬಾಯಿನಿಂದ ಎರಡು ಬಗೆಯಾದ ಮಾತು ಹೊರಡುವುದಿಲ್ಲ.

೬೫. ನಾನು ಇಬ್ಬಗೆಯಾದ ಮಾತನಾಡುವುದಿಲ್ಲ. ಇದ್ದದ್ದು ಇದ್ದಂತೆಯೇ ನಿನಗೆ ಹೇಳುವೆನು. ಎಲೈ ರಾಜೇಂದ್ರನೇ, ಈ ರಾಜಸಭೆಯಲ್ಲಿ ನನಗೆ ಸರಿಯಾದ ಉತ್ತರವನ್ನು ಕೊಡು.

೬೬. ಈ ಸಭೆಯುಲ್ಲಿ ಸೂರ್ಯ, ಚಂದ್ರ ಮತ್ತು ಮನುವಿನ ವಂಶದವರೆಲ್ಲ ಇದ್ದಾರೆ. ಈ ಸಭೆಯಲ್ಲಿ ಸತ್ಯಾಂಶವನ್ನು ನುಡಿ, ದೇವತೆಗಳು ಪಿತೃಗಳು ಎಲ್ಲರೂ, ಕೇಳಲಿ.

ಶೃಣ್ವಂತು ಸರ್ವೇ ರಾಜೇಂದ್ರಾಃ ಸದಸದ್ವಕ್ತುಮೀಶ್ವರಾಃ ।
ಪಶ್ಯಂತೋ ಹಿ ಸಮಂ ಸಂತಃ ಪಾಕ್ಷಿಕಂ ನ ವದಂತಿ ಚ ॥ ೬೭ ॥

ಇತ್ಯುಕ್ತ್ವಾ ರೈಣುಕೇಯಶ್ಚ ವಿರರಾಮ ರಣಸ್ಥಲೇ ।
ರಾಜಾ ಬೃಹಸ್ಪತಿಸಮಃ ಪ್ರವಕ್ತುಮುಪಚಕ್ರಮೇ ॥ ೬೮ ॥

॥ ಕಾರ್ತವೀರ್ಯಾರ್ಜುನ ಉವಾಚ ॥

ಶೃಣು ರಾಮ ಹರೇರಂಶೋ ಹರಿಭಕ್ತೋ ಜಿತೇಂದ್ರಿಯಃ ।
ಶ್ರುತೋ ಧರ್ಮೋ ಮುಖಾದ್ಯೇಷಾಂ ತ್ವಂ ಚ ತೇಷಾಂ ಗುರೋರ್ಗುರುಃ ॥

ಕರ್ಮಣಾವಾಪ್ಯ ಸದ್ಬುದ್ಧಿಂ ಕರೋತಿ ಬ್ರಹ್ಮಭಾವನಾಂ ।
ಸ್ವಧರ್ಮನಿರತಃ ಶುದ್ಧಸ್ತಸ್ಮಾದ್ಬ್ರಾಹ್ಮಣ ಉಚ್ಯತೇ ॥ ೭೦ ॥

---

೬೭. ನ್ಯಾಯಾನ್ಯಾಯಗಳನ್ನು ತೀರ್ಮಾನಿಸಲು ಶಕ್ತರಾದ ಈ ರಾಜರೆಲ್ಲರೂ ನಿನ್ನ ನುಡಿಯನ್ನು ಕೇಳಲಿ. ಸತ್ಪುರುಷರು ಉಭಯ ಪಕ್ಷದಲ್ಲಿಯೂ ಸಮಾನದೃಷ್ಟಿಯುಳ್ಳವರಾದ್ದರಿಂದ ಪಕ್ಷಪಾತದ ನುಡಿಯಾಡುವುದಿಲ್ಲ.

೬೮. ರೇಣುಕಾಪುತ್ರನಾದ ಪರಶುರಾಮನು ಯುದ್ಧಾಂಗಣದಲ್ಲಿ ಹೀಗೆ ನುಡಿದು ಸುಮ್ಮನಾಗಲು, ಬೃಹಸ್ಪತಿಗೆ ಸಮಾನವಾದ ಬುದ್ಧಿಯುಳ್ಳ ಕಾರ್ತವೀರ್ಯಾರ್ಜುನನು ಮಾತನಾಡಲುಪಕ್ರಮಿಸಿದನು.

೬೯. ಎಲೈ ಪರಶುರಾಮನೇ, ಶ್ರೀಹರಿಯ ಅಂಶಸಂಭವನೂ, ಹರಿಭಕ್ತನೂ, ಜಿತೇಂದ್ರಿಯನೂ ಆದ ನೀನು, ನನಗೆ ಧರ್ಮೋಪದೇಶಕರಾದ ಗುರುಗಳಿಗೂ ಗುರುವಾಗಿರುವೆ.

೭೦. ಯಾರು ತಮ್ಮ ಕರ್ಮಾನುಗುಣವಾಗಿ ದಿವ್ಯಜ್ಞಾನವನ್ನು ಹೊಂದಿ "ಅಹಂ ಬ್ರಹ್ಮಾಸ್ಮಿ" ಎಂದು ಅನುಸಂಧಾನ ಮಾಡುವರೋ, ಸ್ವಧರ್ಮ ಪರಾಯಣರೂ, ಶುದ್ಧರೂ ಆದ ಅಂಥವರೇ ಬ್ರಾಹ್ಮಣರೆನಿಸುವರು.

ಅಂತರ್ಬಹಿಶ್ಚ ಮನನಾತ್ಕುರುತೇ ನಿತ್ಯಕರ್ಮಶಃ ।
ಮೌನೀ ಶಶ್ವದ್ವದೇತ್ಕಾಲೇ ಯೋ ವೈ ಸ ಮುನಿರುಚ್ಯತೇ　　|| ೭೧ ||

ಸ್ವರ್ಣೇ ಲೋಷ್ಟೇ ಗೃಹೇಽರಣ್ಯೇ ಪಂಕೇ ಸುಸ್ನಿಗ್ಧಚಂದನೇ ।
ಸಮತಾಭಾವನಾ ಯಸ್ಯ ಸ ಯೋಗೀ ಪರಿಕೀರ್ತಿತಃ　　|| ೭೨ ||

ಸರ್ವಜೀವೇಷು ಯೋ ವಿಷ್ಣುಂ ಭಾವಯೇತ್ ಸಮತಾಧಿಯಾ ।
ಹರೌ ಕರೋತಿ ಭಕ್ತಿಂ ಚ ಹರಿಭಕ್ತಃ ಸ ಚ ಸ್ಮೃತಃ　　|| ೭೩ ||

ತಪೋಧನಂ ಬ್ರಾಹ್ಮಣಾನಾಂ ತಪಃ ಕಲ್ಪತರುರ್ಯಥಾ ।
ತಪಸ್ಯಾ ಕಾಮಧೇನುಶ್ಚ ಸಂತತಂ ತಪಸಿ ಸ್ಪೃಹಾ　　|| ೭೪ ||

ಐಶ್ವರ್ಯೇ ಕ್ಷತ್ರಿಯಾಣಾಂ ಚ ವಾಣಿಜ್ಯೇ ಚ ತಥಾ ವಿಶಾಂ ।
ಕ್ಷತ್ರಿಯಾಣಾಂ ಚ ತಪಸಿ ಸ್ಪೃಹಾತೀವಾಽಪ್ರಶಂಸಿತಾ　　|| ೭೫ ||

---

೭೧. ಅಂತರಿಂದ್ರಿಯ ಮತ್ತು ಬಾಹ್ಯೇಂದ್ರಿಯಗಳಲ್ಲಿ ಮನನ ಮಾಡಿಕೊಂಡು ನಿತ್ಯಕರ್ಮವನ್ನು ಮಾಡುತ್ತ, ಯಾವಾಗಲೂ ಮೌನವಾಗಿದ್ದು ಕಾಲಾನುಗುಣವಾಗಿ ಮಾತನಾಡುವವನೇ ಮುನಿ ಎನಿಸಿಕೊಳ್ಳುವನು.

೭೨. ಚಿನ್ನ ಮತ್ತು ಮಣ್ಣಿನ ಹೆಂಟೆಯಲ್ಲಿಯೂ, ಮನೆ ಮತ್ತು ಅರಣ್ಯದಲ್ಲಿಯೂ, ಸುವಾಸಿತವಾದ ಚಂದನ ಮತ್ತು ಕೆಸರಿನಲ್ಲಿಯೂ ಯಾರಿಗೆ ಸಮತಾಬುದ್ಧಿಯುಂಟೋ ಅವರೇ ಯೋಗಿಯೆನಿಸಿಕೊಳ್ಳುವರು.

೭೩. ಸಕಲ ಪ್ರಾಣಿಗಳಲ್ಲೂ ಸಮತಾಬುದ್ಧಿಯಿಂದ ಶ್ರೀಹರಿಯನ್ನು ಕಾಣುತ್ತ, ಶ್ರೀಹರಿಯಲ್ಲಿ ದೃಢವಾದ ಭಕ್ತಿಯಿಟ್ಟಿರುವವನೇ 'ಹರಿಭಕ್ತ''ನೆನಿಸುವನು.

೭೪. ಬ್ರಾಹ್ಮಣರಿಗೆ ತಪಸ್ಸೇ ಧನ. ತಪಸ್ಸು ಕಲ್ಪವೃಕ್ಷವಿದ್ದಂತೆ. ಕಾಮಧೇನುವಿನಂತೆ ಬೇಡಿದ ಇಷ್ಟಾರ್ಥವನ್ನು ಕೊಡುವುದರಿಂದಲೇ, ಬ್ರಾಹ್ಮಣನಿಗೆ ತಪಸ್ಸಿನಲ್ಲಿ ಸರ್ವದಾ ಆಶೆಯಿರಬೇಕು.

೭೫. ಕ್ಷತ್ರಿಯರಿಗೆ ಐಶ್ವರ್ಯ (ಪ್ರಭುತ್ವ)ದಲ್ಲಿಯೂ, ವೈಶ್ಯರಿಗೆ ವ್ಯಾಪಾರದಲ್ಲಿಯೂ ಆಸಕ್ತಿಯಿರಬೇಕು. ಕ್ಷತ್ರಿಯರು ತಪಸ್ಸಿಗೆ ಮನಗೊಡುವುದು ನಿಂದ್ಯವಾದುದು.

ಬ್ರಾಹ್ಮಣಾನಾಂ ವಿವಾದೇ ಚ ಸ್ಪೃಹಾತೀವ ವಿನಿಂದಿತಾ ॥ ೭೬ ॥

ರಾಗೀ ರಾಜಸಿಕಂ ಕಾರ್ಯಂ ಕುರುತೇ ಕರ್ಮರಾಗತಃ ।
ರಾಗಾಂಧೋ ಯೋ ರಾಜಸಿಕಸ್ತೇನ ರಾಜಾ ಪ್ರಕೀರ್ತಿತಃ ॥ ೭೭ ॥

ರಾಗತಃ ಕಾಮಧೇನುಶ್ಚ ಮಯಾ ವೈ ಯಾಚಿತಾ ಮುನೇ ।
ಕೋ ದೋಷ ಏವ ಮೇ ಜಾತಃ ಕ್ಷತ್ರಿಯಸ್ಯಾನುರಾಗಿಣಃ ॥ ೭೮ ॥

ಕುತಃ ಕಸ್ಯ ಮುನೇರಸ್ತಿ ಕಾಮಧೇನುಸ್ತ್ವಯಾ ವಿನಾ ।
ಸ್ಪೃಹಾ ರಣೇ ವಾ ಭೋಗೇ ವಾ ಯುಷ್ಮಾಕಂ ಚ ವ್ಯತಿಕ್ರಮಃ ॥ ೭೯ ॥

ತ್ರಿಂಶದಕ್ಷೌಹಿಣೀಂ ಸೇನಾಂ ರಾಜೇಂದ್ರಾಣಾಂ ತ್ರಿಕೋಟಿಕಾಂ ।
ನಿಹತ್ಯಾಯೋಂತಮೇಕಂ ಮಾಂ ನ ಹಂತುಂ ಸಹನಂ ಮುನೇ ॥ ೮೦ ॥

---

೭೬. ಅಂತೆಯೇ ಬ್ರಾಹ್ಮಣರು ವಾದವಿವಾದಗಳಲ್ಲಿ ಆಸಕ್ತಿ ತೋರುವುದು ಬಹಳ ನಿಂದನೀಯವಾದುದು.

೭೭. ರಾಗಾಂಧನು ತನ್ನ ಆಶೆಗನುಗುಣವಾಗಿ ರಾಜಸಿಕವಾದ ಕಾರ್ಯಗಳನ್ನು ಮಾಡುತ್ತಾನೆ. ಆದುದರಿಂದ ರಾಗಾಂಧನೂ, ರಜೋಗುಣಪರಿಪೂರ್ಣನೂ ಆದವನೇ "ರಾಜ"ನೆನಿಸಿಕೊಳ್ಳುವನು.

೭೮. ಎಲೈ ಮುನಿಯೇ, ಆಶಾಪರನಾದ ನಾನು ಕಾಮಧೇನುವನ್ನು ಬೇಡಿದೆನು. ಅದರಲ್ಲಿ ಕ್ಷತ್ರಿಯನೂ ರಾಗಾಂಧನೂ ಆದ ನನ್ನ ದೋಷವಾವುದು ?

೭೯. ನಿನ್ನನ್ನು ಬಿಟ್ಟು ಎಲ್ಲಿ, ಯಾವ ಮುನಿಯ ಹತ್ತಿರ ಕಾಮಧೇನುವಿದೆ ? ಅಥವಾ ಯುದ್ಧದಲ್ಲಾಗಲೀ, ಭೋಗದಲ್ಲಾಗಲೀ, ನಿನ್ನಂತೆ ಯಾರಿಗೆ ಅಭಿಲಾಷೆಯಿದೆ ? ನಿನ್ನಲ್ಲಿ ಮಾತ್ರ ಈ ವಿರುದ್ಧಾಚರಣೆಗಳು ಕಾಣುವುವು.

೮೦. ಎಲೈ ಮುನಿವರ್ಯನೇ, ಮೂವತ್ತು ಅಕ್ಷೌಹಿಣೀ ಸೈನ್ಯವನ್ನೂ, ಮೂರುಕೋಟಿ ರಾಜರುಗಳನ್ನೂ ಕೊಂದು, ನನ್ನನ್ನೂ ಸಂಹರಿಸಲು ಬಂದ ಆ ಜಮದಗ್ನಿಯನ್ನು ನಾನು ಕೊಂದೆನು.

ಆತ್ಮಾನಂ ಹಂತುಮಾಯಾಂತಮಪಿ ವೇದಾಂಗ ಪಾರಗಂ ।
ನ ದೋಷೋ ಹನನೇ ತಸ್ಯ ನ ತೇನ ಬ್ರಹ್ಮಹಾಭವಂ ॥ ೮೧ ॥

ಪ್ರಾಯಶ್ಚಿತ್ತಂ ಹಿಂಸಕಾನಾಂ ನ ವೇದೇಷು ನಿರೂಪಿತಂ ।
ವಧಃ ಸಮುಚಿತಸ್ತೇಷಾಮಿತ್ಯಾಹ ಕಮಲೋದ್ಭವಃ ॥ ೮೨ ॥

ಪಿತ್ರಾ ತೇ ನಿಹತಾ ಭೂಪಾ ಮಹಾಬಲಪರಾಕ್ರಮಾಃ ।
ಇದಾನೀಂ ರಾಜಪುತ್ರಾಶ್ಚ ಶಿಶವೋಽತ್ರ ಸಮಾಗತಾಃ ॥ ೮೩ ॥

ತ್ರಿಃಸಪ್ತಕೃತ್ವೋ ನಿರ್ಭೂಪಾಂ ಕೃತ್ವಾಸ್ತ್ವಂ ಕರ್ತುಂ ಮಹೀಮಿತಿ ।
ತ್ವಯಾಕೃತಾ ಪ್ರತಿಜ್ಞಾ ಯಾ ತಸ್ಯಾಸ್ತ್ವಂ ಪಾಲನಂ ಕುರು ॥ ೮೪ ॥

ಕ್ಷತ್ರಿಯಾಣಾಂ ರಣೋ ಧರ್ಮೋ ರಣೇ ಮೃತ್ಯುರ್ನ ಗರ್ಹಿತಃ ।
ರಣೇಸ್ಪೃಹಾ ಬ್ರಾಹ್ಮಣಾನಾಂ ಲೋಕೇ ವೇದೇ ವಿಡಂಬನಾ ॥ ೮೫ ॥

---

೮೧. ನಮ್ಮನ್ನು ಕೊಲ್ಲಲು ಬಂದವನು ವೇದವೇದಾಂಗ ಪಾರಂಗತನಾದರೂ, ಅವನನ್ನು ಕೊಲ್ಲುವುದರಿಂದ ಯಾವ ದೋಷವೂ ಇಲ್ಲ. ಆದ್ದರಿಂದ ನಾನು ಬ್ರಹ್ಮಹತ್ಯೆಗೊಳಗಾಗಿಲ್ಲ.

೮೨. ಹಿಂಸಕರ ವಧೆಮಾಡಿದರೆ ಪ್ರಾಯಶ್ಚಿತ್ತಮಾಡಿಕೊಳ್ಳಬೇಕೆಂದು ವೇದದಲ್ಲಿ ಹೇಳಿಲ್ಲ. ಅಂಥವರ ವಧೆಮಾಡುವುದೇ ಉಚಿತವೆಂದು ಬ್ರಹ್ಮನು ಹೇಳಿದ್ದಾನೆ.

೮೩. ನಿನ್ನ ತಂದೆಯು ಮಹಾಪರಾಕ್ರಮಿಗಳಾದ ರಾಜರೆಲ್ಲರನ್ನೂ ಸಂಹರಿಸಿದನು. ಈಗ ಚಿಕ್ಕಚಿಕ್ಕ ರಾಜಪುತ್ರರೆಲ್ಲ ಇಲ್ಲಿ ಬಂದಿರುವರು.

೮೪. ಇಪ್ಪತ್ತೊಂದುಸಾರಿ ಭೂಪ್ರದಕ್ಷಿಣೆಮಾಡಿ ಕ್ಷತ್ರಿಯರನ್ನು ನಿರ್ಮೂಲಗೊಳಿಸುವೆನೆಂದು ನೀನು ಮಾಡಿರುವ ಪ್ರತಿಜ್ಞೆಯನ್ನು ಪರಿಪಾಲಿಸಿಕೋ.

೮೫. ಕ್ಷತ್ರಿಯರಿಗೆ ಯುದ್ಧಮಾಡುವುದೇ ಧರ್ಮವು. ಯುದ್ಧದಲ್ಲಿ ಸಾಯುವುದರಿಂದ ಅವರಿಗೆ ಯಾವ ಅವಮಾನವೂ ಇಲ್ಲ. ಆದರೆ ಬ್ರಾಹ್ಮಣರಿಗೆ ಯುದ್ಧಾಭಿಲಾಷೆಯಿರುವುದು, ವೇದ ಮತ್ತು ಲೋಕವಿರುದ್ಧವಾದುದು.

ತಪೋಧನಾನಾಂ ವಿಪ್ರಾಣಾಂ ವಾಗ್ಬಲಾನಾಂ ಯುಗೇ ಯುಗೇ ।
ಶಾಂತಿಃ ಸ್ವಸ್ತ್ಯಯನಂ ಕರ್ಮ ವಿಪ್ರಧರ್ಮೋ ನ ಸಂಗರಃ ॥ ೮೬ ॥

ಕ್ಷತ್ರಿಯಾಣಾಂ ಬಲಂ ಯುದ್ಧಂ ವ್ಯಾಪಾರಶ್ಚ ಬಲಂ ವಿಶಾಂ ।
ಭಿಕ್ಷಾಬಲಂ ಭಿಕ್ಷುಕಾಣಾಂ ಶೂದ್ರಾಣಾಂ ವಿಪ್ರಸೇವನಂ ॥ ೮೭ ॥

ಹರೌ ಭಕ್ತಿರ್ಹರೇರ್ದಾಸ್ಯಂ ವೈಷ್ಣವಾನಾಂ ಬಲಂ ಹರಿಃ ।
ಹಿಂಸಾಬಲಂ ಖಲಾನಾಂ ಚ ತಪಸ್ಯಾ ಚ ತಪಸ್ವಿನಾಂ ॥ ೮೮ ॥

ಬಲಂ ವೇಷಶ್ಚ ವೇಶ್ಯಾನಾಂ ಯೋಷಿತಾಂ ಯೌವನಂ ಬಲಂ ।
ಬಲಂ ಪ್ರತಾಪೋ ಭೂಪಾನಾಂ ಬಾಲಾನಾಂ ರೋದನಂ ಬಲಂ ॥ ೮೯ ॥

ಸತಾಂ ಸತ್ಯಂ ಬಲಂ ಮಿಥ್ಯಾ ಬಲಮೇವಾಸತಾಂ ಸದಾ ।
ಅನುಗಾನಾಮನುಗಮಃ ಸ್ವಲ್ಪಸ್ವಾನಾಂ ಚ ಸಂಚಯಃ ॥ ೯೦ ॥

---

೮೬. ತಪೋಧನರೂ, ವಾಗ್ಬಲಯುತರೂ, ಆದ ವಿಪ್ರರು ಪ್ರತಿ ಯುಗದಲ್ಲೂ, ಶಾಂತಗುಣಪ್ರಧಾನರಾಗಿ, ವೇದಾಧ್ಯಯನ ನಿರತರಾಗಿರುವುದು ವಿಪ್ರಧರ್ಮವೆನಿಸುವುದೇ ಹೊರತು, ಯುದ್ಧಮಾಡುವುದು ಬ್ರಾಹ್ಮಣಧರ್ಮವಲ್ಲ.

೮೭. ಕ್ಷತ್ರಿಯರಿಗೆ ಯುದ್ಧವೂ, ವೈಶ್ಯರಿಗೆ ವ್ಯಾಪಾರವೂ, ಭಿಕ್ಷುಕರಿಗೆ ಭಿಕ್ಷೆಯೂ, ಶೂದ್ರರಿಗೆ ಬ್ರಾಹ್ಮಣರ ಸೇವೆಯೂ ಬಲವೆನಿಸುವುದು.

೮೮. ವಿಷ್ಣುಭಕ್ತರಿಗೆ ಹರಿಭಕ್ತಿಯೂ, ಹರಿಸೇವೆಯೂ ಬಲವೆನಿಸುವುದು. ದುಷ್ಟರಿಗೆ ಹಿಂಸೆಯೂ, ತಪಸ್ವಿಗಳಿಗೆ ತಪಸ್ಸೂ ಬಲವೆನಿಸುವುದು.

೮೯. ವೇಶ್ಯೆಯರಿಗೆ ವೇಷಭೂಷಣಗಳೂ, ಸ್ತ್ರೀಯರಿಗೆ ಯೌವನವೂ, ರಾಜರಿಗೆ ಪ್ರತಾಪವೂ, ಹುಡುಗರಿಗೆ ಅಳುವಿಕೆಯೂ ಬಲವೆನಿಸುವುದು.

೯೦. ಸತ್ಪುರುಷರಿಗೆ ಸತ್ಯವೂ, ದುಷ್ಟರಿಗೆ ಅಸತ್ಯವೂ, ಸೇವಕರಿಗೆ ಅನುಸರಣೆಯೂ, ದರಿದ್ರರಿಗೆ ಧನಸಂಗ್ರಹವೂ ಬಲವೆನಿಸುವುದು.

ವಿದ್ಯಾಬಲಂ ಪಂಡಿತಾನಾಂ ಧೈರ್ಯಂ ಸಾಹಸಿನಾಂ ಬಲಂ || ೯೧ ||

ಧನಂ ಬಲಂ ಚ ಧನಾಂ ಶುಚೀನಾಂ ಚ ವಿಶೇಷತಃ ।
ಬಲಂ ವಿವೇಕಃ ಶಾಂತಾನಾಂ ಗುಣಿನಾಂ ಬಲಮೇಕತಾ || ೯೨ ||

ಗುಣೋ ಬಲಂ ಚ ಗುಣಿನಾಂ ಚೌರಾಣಾಂ ಚೌರ್ಯಮೇವ ಚ ।
ಪ್ರಿಯವಾಕ್ಯಂ ಚ ಕಾಪಟ್ಯಮಧರ್ಮಃ ಪುಂಶ್ಚಲೀಬಲಂ || ೯೩ ||

ಹಿಂಸಾ ಚ ಹಿಂಸ್ರಜಂತೂನಾಂ ಸತೀನಾಂ ಪತಿಸೇವನಂ ।
ವರಶಾಪೌ ಸುರಾಣಾಂ ಚ ಶಿಷ್ಯಾಣಾಂ ಗುರುಸೇವನಂ || ೯೪ ||

ಬಲಂ ಧರ್ಮೋ ಗೃಹಸ್ಥಾನಾಂ ಭೃತ್ಯಾನಾಂ ರಾಜಸೇವನಂ ।
ಬಲಂ ಸ್ತವಃ ಸ್ತಾವಕಾನಾಂ ಬ್ರಹ್ಮ ಚ ಬ್ರಹ್ಮಚಾರಿಣಾಂ || ೯೫ ||

ಯತೀನಾಂ ಚ ಸದಾಚಾರೋ ನ್ಯಾಸಃ ಸಂನ್ಯಾಸಿನಾಂ ಬಲಂ ।
ಪಾಪಂ ಬಲಂ ಪಾತಕಿನಾಮಶಕ್ತಾನಾಂ ಹರಿರ್ಬಲಂ || ೯೬ ||

---

೯೧. ಪಂಡಿತರಿಗೆ ವಿದ್ಯೆಯೂ, ಸಾಹಸಿಗಳಿಗೆ ಧೈರ್ಯವೂ ಬಲವೆನಿಸುವುದು.

೯೨. ಹಣವಂತರಿಗೆ ಹಣವೂ, ಶುಚಿವಂತರಿಗೆ ವಿವೇಕವೂ, ಶಾಂತರಿಗೂ, ಗುಣವಂತರಿಗೂ ಸಮತಾಭಾವನೆಯೂ ಬಲವೆನಿಸುವುದು.

೯೩. ಗುಣವಂತರಿಗೆ ಗುಣವೂ, ಕಳ್ಳರಿಗೆ ಕಳ್ಳತನವೂ, ವೇಶ್ಯೆಗೆ ಪ್ರಿಯ ವಚನ, ಕಪಟ ಮತ್ತು ಅಧರ್ಮವೂ ಬಲವೆನಿಸುವುದು.

೯೪. ದುಷ್ಟಜಂತುಗಳಿಗೆ ಹಿಂಸೆಯೂ, ಪತಿವ್ರತೆಯರಿಗೆ ಪತಿಸೇವೆಯೂ, ದೇವತೆಗಳಿಗೆ ವರ ಮತ್ತು ಶಾಪವೂ, ಶಿಷ್ಯರಿಗೆ ಗುರುಸೇವೆಯೂ ಬಲವೆನಿಸುವುದು.

೯೫. ಗೃಹಸ್ಥರಿಗೆ ಧರ್ಮಾಚರಣೆಯೂ, ಭೃತ್ಯರಿಗೆ ರಾಜಸೇವೆಯೂ, ಸ್ತುತಿಪಾಠಕರಿಗೆ ಸ್ತೋತ್ರವೂ, ಬ್ರಹ್ಮಚಾರಿಗಳಿಗೆ ಬ್ರಹ್ಮವೂ ಬಲವೆನಿಸುವುದು.

೯೬. ಯತಿಗಳಿಗೆ ಸದಾಚಾರವೂ, ಸನ್ಯಾಸಿಗಳಿಗೆ ಸರ್ವಕರ್ಮಸನ್ಯಾಸವೂ, ಪಾಪಿಗಳಿಗೆ ಪಾಪವೂ, ಅಶಕ್ತರಿಗೆ ಶ್ರೀಹರಿಯೂ ಬಲವೆನಿಸುವುದು.

ಪುಣ್ಯಂ ಬಲಂ ಪುಣ್ಯವತಾಂ ಪ್ರಜಾನಾಂ ನೃಪತಿರ್ಬಲಂ ।
ಫಲಂ ಬಲಂ ಚ ವೃಕ್ಷಾಣಾಂ ಜಲಜಾನಾಂ ಜಲಂ ಬಲಂ ॥ ೯೭ ॥

ಜಲಂ ಬಲಂ ಚ ಸಸ್ಯಾನಾಂ ಮತ್ಸ್ಯಾನಾಂ ಚ ಜಲಂ ಬಲಂ ।
ಶಾಂತಿರ್ಬಲಂ ಚ ಭೂಪಾನಾಂ ವಿಪ್ರಾಣಾಂ ಚ ವಿಶೇಷತಃ ॥ ೯೮ ॥

ವಿಪ್ರಃ ಶಾಂತೋ ರಣೋದ್ಯೋಗೀ ನೈವ ದೃಷ್ಟೋ ನ ಚ ಶ್ರುತಃ ।
ಸ್ಥಿತೇ ನಾರಾಯಣೇ ದೇವೇ ಬಭೂವಾನ್ಯವಿಪರ್ಯಯಃ ॥ ೯೯ ॥

ಇತ್ಯೇವಮುಕ್ತ್ವಾ ರಾಜೇಂದ್ರೋ ವಿರರಾಮ ರಣಾಜಿರೇ ।
ತಸ್ಯ ತದ್ವಚನಂ ಶ್ರುತ್ವಾ ಸದ್ಯಸ್ತೂಷ್ಣೀಂ ಬಭೂವ ಹ ॥ ೧೦೦ ॥

ರಾಮಸ್ಯ ಭ್ರಾತರಃ ಸರ್ವೇ ತೀಕ್ಷ್ಣಶಸ್ತ್ರಸಿಪಾಣಯಃ ।
ಆರೇಭಿರೇ ರಣಂ ಕರ್ತುಂ ಮಹಾವೀರಾಸ್ತದಾಜ್ಞಯಾ ॥ ೧೦೧ ॥

---

೯೭. ಪುಣ್ಯವಂತರಿಗೆ ಪುಣ್ಯವೂ, ಪ್ರಜೆಗಳಿಗೆ ರಾಜನೂ, ಮರಗಳಿಗೆ ಹಣ್ಣೂ, ಕಮಲಗಳಿಗೆ ನೀರೂ ಬಲವೆನಿಸುವುದು.

೯೮. ಜಲವು ಸಸ್ಯಗಳಿಗೂ, ಮೀನುಗಳಿಗೂ ಬಲವೆನಿಸುವುದು. ಶಾಂತ ಗುಣವು ರಾಜರಿಗೂ, ವಿಶೇಷವಾಗಿ ಬ್ರಾಹ್ಮಣರಿಗೂ ಬಲವೆನಿಸುವುದು.

೯೯. ಶಾಂತಿಗುಣಪ್ರಧಾನನಾದ ಬ್ರಾಹ್ಮಣನು ಯುದ್ಧರತನಾಗಿರುವುದನ್ನು ನಾವು ನೋಡಿಯೂ ಇಲ್ಲ. ಕೇಳಿ ಮೊದಲೇ ಇಲ್ಲ. ಶ್ರೀಮನ್ನಾರಾಯಣನಿರುವಾಗಲೇ ಈ ವಿಪರೀತವುಂಟಾಯಿತಲ್ಲ.

೧೦೦. ಕಾರ್ತವೀರ್ಯನು ಈ ರೀತಿಯಾಗಿ ನುಡಿದು ಯುದ್ಧರಂಗಲ್ಲಿ ಸುಮ್ಮನಾಗಲು, ಅವನ ಆ ಮಾತನ್ನು ಕೇಳಿ ಪರಶುರಾಮನು ಸ್ವಲ್ಪ ಹೊತ್ತು ಸುಮ್ಮನಾದನು

೧೦೧. ಇತ್ತ ಮಹಾವೀರರಾದ ಪರಶುರಾಮನ ಸಹೋದರರಾದರೋ, ಅಣ್ಣನ ಅಪ್ಪಣೆ ಪಡೆದು, ಕೈಯಲ್ಲಿ ಹರಿತವಾದ ಆಯುಧಗಳದ್ನು ಹಿಡಿದು ಯುದ್ಧ ಮಾಡಲಾರಂಭಿಸಿದರು.

ರಣೋನ್ಮುಖಾಂಶ್ಚ ತಾನ್ದೃಷ್ಟ್ವಾ ಮತ್ಸ್ಯರಾಜೋ ಮಹಾಬಲಃ ।
ಸಮಾರೇಭೇ ರಣಂ ಕರ್ತುಂ ಮಂಗಲೋ ಮಂಗಲಾಲಯಃ ॥ ೧೦೨ ॥

ಶರಜಾಲೇನ ರಾಜೇಂದ್ರೋ ವಾರಯಾಮಾಸ ತಾನಪಿ ।
ಚಿಚ್ಛಿದುಃ ಶರಜಾಲಂ ಚ ಜಮದಗ್ನಿಸುತಾಸ್ತದಾ ॥ ೧೦೩ ॥

ರಾಜಾ ಚಿಕ್ಷೇಪ ದಿವ್ಯಾಸ್ತ್ರಂ ಶತಸೂರ್ಯಪ್ರಭಂ ಮುನೇ ।
ಮಾಹೇಶ್ವರೇಣ ಮುನಯಶ್ಚಿಚ್ಛಿದುಶ್ಚೈವ ಲೀಲಯಾ ॥ ೧೦೪ ॥

ದಿವ್ಯಾಸ್ತ್ರೇಣೈವ ಮುನಯಶ್ಚಿಚ್ಛಿದುಃ ಸಶರಂ ಧನುಃ ।
ರಥಂ ಚ ಸಾರಥಿಂ ಚೈವ ರಾಜ್ಞಃ ಸನ್ನಾಹಮೇವ ಚ ॥ ೧೦೫ ॥

ನ್ಯಸ್ತಶಸ್ತ್ರಂ ನೃಪಂ ದೃಷ್ಟ್ವಾ ಮುನಯೋ ಹರ್ಷವಿಹ್ವಲಾಃ ।
ದಧಾರ ಶೂಲಿನಃ ಶೂಲಂ ಮತ್ಸ್ಯರಾಜಜಿಘಾಂಸಯಾ ॥ ೧೦೬ ॥

---

೧೦೨. ಅವರು ಯುದ್ಧಸಿದ್ಧರಾದುದನ್ನು ಕಂಡು ಮಹಾಪರಾಕ್ರಮಿಯೂ, ಮಂಗಳಾಕಾಂಕ್ಷಿಯೂ ಆದ ಮತ್ಸ್ಯರಾಜನು ಎದುರಿನಲ್ಲಿ ಯುದ್ಧಕ್ಕೆ ನಿಂತನು.

೧೦೩. ಅಲ್ಲದೆ ಆ ರಾಜನು ಬಾಣಗಳ ಸಮೂಹದಿಂದ ಅವರೆಲ್ಲರನ್ನೂ ತಡೆದನು. ಆಗ ಜಮದಗ್ನಿಯ ಮಕ್ಕಳೆಲ್ಲರೂ ಆ ಬಾಣಗಳ ಸಮೂಹವನ್ನು ಕತ್ತರಿಸಿದರು.

೧೦೪. ನಾರದಮುನಿಯೇ, ಆಗ ಮತ್ಸ್ಯರಾಜನು ನೂರು ಸೂರ್ಯರ ತೇಜಸ್ಸಿನಿಂದ ಪ್ರಕಾಶಿಸುವ ದಿವ್ಯಾಸ್ತ್ರವೊಂದನ್ನು ಬಿಡಲು ಮಹೇಶ್ವರಾಸ್ತ್ರವನ್ನು ಬಿಟ್ಟು ಆ ಮುನಿಗಳು ಅದನ್ನು ಕತ್ತರಿಸಿದರು.

೧೦೫. ಅಲ್ಲದೆ ಆ ಮುನಿಗಳು ದಿವ್ಯಾಸ್ತ್ರವೊಂದನ್ನು ಬಿಟ್ಟು ಆ ರಾಜನ ಧನುರ್ಬಾಣಗಳನ್ನೂ, ರಥ, ಸಾರಥಿ ಮತ್ತು ಪರಿವಾರದವರನ್ನೂ ಕತ್ತರಿಸಿ ಕೆಡಹಿದರು.

೧೦೬. ರಾಜನು ನಿರಾಯುಧನಾಗಿ ನಿಂತಿರುವುದನ್ನು ನೋಡಿ ಸಂತೋಷಗೊಂಡ ಆ ಮುನಿಗಳು ಆ ಮತ್ಸ್ಯರಾಜನನ್ನು ಸಂಹರಿಸಬೇಕೆಂದೆಣಿಸಿ, ಶಿವನ ಶೂಲಾಯುಧವನ್ನು ತೆಗೆದರು.

ಶೂಲನಿಕ್ಷೇಪಸಮಯೇ ವಾಗ್ಬಭೂವಾಶರೀರಿಣೀ ।
ಶೂಲಂ ತ್ಯಜತ ವಿಪ್ರೇಂದ್ರಾಃ ಶಿವಸ್ಯಾವ್ಯರ್ಥಮೇವ ಚ ॥ ೧೦೭ ॥

ಶಿವಸ್ಯ ಕವಚಂ ದಿವ್ಯಂ ದತ್ತಂ ದುರ್ವಾಸಸಾ ಪುರಾ ।
ಮತ್ಸ್ಯರಾಜಗಲೇಽಸ್ತ್ಯೇತತ್ಸರ್ವಾವಯವರಕ್ಷಣಂ ॥ ೧೦೮ ॥

ಪ್ರಾಣಾನಾಂ ಚ ಪ್ರದಾತಾರಂ ಕವಚಂ ಯಾಚತಂ ನೃಪಂ ।
ತದಾ ನಿಕ್ಷಿಪ್ತಶೂಲಂ ಚ ಜಘಾನ ನೃಪತಿಶ್ಚಿರಂ ॥ ೧೦೯ ॥

ತಚ್ಛೂಲಂ ತಂ ನೃಪಂ ಪ್ರಾಪ್ಯ ಶತಖಂಡಂ ಗತಂ ಮುನೇ ।
ಶ್ರುತ್ವೈವಾಕಾಶವಾಣೀಂ ಚ ಶೃಂಗೀ ಸಂನ್ಯಾಸವೇಷಕೃತ್ ॥ ೧೧೦ ॥

ಯಯಾಚೇ ಕವಚಂ ಭೂಪಂ ಜಮದಗ್ನಿಸುತೋ ಮಹಾನ್ ।
ರಾಜಾ ದದೌ ಚ ಕವಚಂ ಬ್ರಹ್ಮಾಂಡವಿಜಯಂ ಪರಂ ॥ ೧೧೧ ॥

---

೧೦೭. ಆ ಶೂಲಾಯುಧವನ್ನು ಪ್ರಯೋಗಿಸುವ ಸಮಯದಲ್ಲಿ 'ಎಲೈ ಬ್ರಾಹ್ಮಣೋತ್ತಮರೇ, ಶಿವನ ಅಮೋಘವಾದ ಈ ಶೂಲಾಯುಧವನ್ನು ಬಿಟ್ಟು ವ್ಯರ್ಥಗೊಳಿಸಬೇಡಿರಿ' ? ಎಂದು ಅಶರೀರವಾಣಿಯಾಯಿತು.

೧೦೮. ಪೂರ್ವದಲ್ಲಿ ದೂರ್ವಾಸಮುನಿಯು ಅನುಗ್ರಹಿಸಿ ಕೊಟ್ಟಿರುವ ಸರ್ವಾಂಗರಕ್ಷಕವಾದ ಶಿವಕವಚವು ಈ ಮತ್ಸ್ಯರಾಜನ ಕಂಠದಲ್ಲಿದೆ.

೧೦೯. 'ಪ್ರಾಣಗಳನ್ನೇ ಕೊಡುವಷ್ಟು ಉದಾರಿಯಾದ ಆ ರಾಜನಿಂದ ಕವಚವನ್ನು ಬೇಡಿ ತೆಗೆದುಕೊಳ್ಳಿ' ಎಂಬ ಆಕಾಶವಾಣಿಯು ಕೇಳುವುದಕ್ಕೆ ಮುಂಚೆಯೇ ಬಿಟ್ಟ ಶೂಲಾಯುಧವನ್ನು ಆ ಮತ್ಸ್ಯರಾಜನು ಕತ್ತರಿಸಿ ತುಂಡು ಮಾಡಿದನು.

೧೧೦-೧೧೧. ಆ ಶೂಲಾಯುಧವು ಆ ರಾಜನ ಹತ್ತಿರಹೋಗಿ ನೂರು ತುಂಡಾಗಿ ಬಿದ್ದಿತು. ಇತ್ತ ಆಕಾಶವಾಣಿಯನ್ನು ಕೇಳಿದ, ಜಮದಗ್ನಿಯ ಪುತ್ರನಾದ ಶೃಂಗಿಯೆಂಬುವನು ಸನ್ಯಾಸಿಯ ವೇಷವನ್ನು ಧರಿಸಿ ಮತ್ಸ್ಯರಾಜನೆಡೆಗೆ ಬಂದು ಕವಚವನ್ನು ಬೇಡಲು, ಆ ರಾಜನು ಬ್ರಹ್ಮಾಂಡವಿಜಯವೆಂಬ ಆ ಕವಚವನ್ನು ಅವನಿಗೆ ಕೊಟ್ಟುಬಿಟ್ಟನು.

ಗೃಹೀತ್ವಾ ಕವಚಂ ತಚ್ಚ ಶೂಲೇನೈವ ಜಘಾನ ಹ ।
ಪಪಾತ ಮತ್ಸ್ಯರಾಜಶ್ಚ ಶತಚಂದ್ರಸಮಾನನಃ ।
ಮಹಾಬಲಿಷ್ಠೋ ಗುಣವಾಂಶ್ಚಂದ್ರವಂಶಸಮುದ್ಭವಃ ॥ ೧೧೨ ॥

॥ ನಾರದ ಉವಾಚ ॥

ಶಿವಸ್ಯ ಕವಚಂ ಬ್ರೂಹಿ ಮತ್ಸ್ಯರಾಜೇನ ಯದ್ಧೃತಂ ।
ನಾರಾಯಣ ಮಹಾಭಾಗ ಶ್ರೋತುಂ ಕೌತೂಹಲಂ ಮಮ ॥ ೧೧೩ ॥

॥ ನಾರಾಯಣ ಉವಾಚ ॥

ಕವಚಂ ಶೃಣು ವಿಪ್ರೇಂದ್ರ ಶಂಕರಸ್ಯ ಮಹಾತ್ಮನಃ ।
ಬ್ರಹ್ಮಾಂಡವಿಜಯಂ ನಾಮ ಸರ್ವಾವಯವರಕ್ಷಣಂ ॥ ೧೧೪ ॥

ಪುರಾ ದುರ್ವಾಸಸಾ ದತ್ತಂ ಮತ್ಸ್ಯರಾಜಾಯ ಧೀಮತೇ ।
ದತ್ವಾ ಷಡಕ್ಷರಂ ಮಂತ್ರಂ ಸರ್ವಪಾಪಪ್ರಣಾಶನಂ ॥ ೧೧೫ ॥

---

೧೧೨. ಆ ಕವಚವನ್ನು ಸ್ವೀಕರಿಸಿದನಂತರ ಶೂಲಾಯುಧದಿಂದಲೇ ಆ ರಾಜನನ್ನು ಹೊಡೆಯಲು, ನೂರುಚಂದ್ರರಂತೆ ಕಾಂತಿಯುತನಾದ ಚಂದ್ರ ವಂಶೋದ್ಭವನೂ, ಮಹಾಪರಾಕ್ರಮಿಯೂ, ಗುಣವಂತನೂ ಆದ ಆ ಮತ್ಸ್ಯರಾಜನು ದೊಪ್ಪನೆ ಬಿದ್ದನು.

೧೧೩. ನಾರದ :—ಎಲೈ ಮಹಾಮಹಿಮನಾದ ನಾರಾಯಣಮಹರ್ಷಿಯೇ, ಮತ್ಸ್ಯರಾಜನು ಧರಿಸಿದ್ದ ಶಿವಕವಚದ ಮಹಾತ್ಮ್ಯೆಯನ್ನು ತಿಳಿಯಲು ಕುತೂಹಲ ವುಳ್ಳ ನನಗೆ ವಿಸ್ತರಿಸಿ ಹೇಳು.

೧೧೪. ನಾರಾಯಣಮಹರ್ಷಿ :—ಎಲೈ ವಿಪ್ರೋತ್ತಮನೇ, ಮಹಾತ್ಮನಾದ ಶಂಕರನ ಬ್ರಹಾಂಡವಿಜಯವೆಂಬ ಕವಚದ ಮಹಿಮೆಯನ್ನು ಹೇಳುವೆನು ಕೇಳು, ಈ ಕವಚವು ಸರ್ವಾವಯಗಳನ್ನೂ ಸಂರಕ್ಷಿಸುವುದು.

೧೧೫. ಪೂರ್ವದಲ್ಲಿ ದೂರ್ವಾಸಮಹರ್ಷಿಯು, ಸಕಲಪಾಪಪರಿಹಾರಕವಾದ ಷಡಕ್ಷರಮಂತ್ರವನ್ನೂ, ಈ ಕವಚವನ್ನೂ ಮತಿವಂತನಾದ ಮತ್ಸ್ಯರಾಜನಿಗೆ ಉಪದೇಶಿಸಿದನು.

ಸ್ಥಿತೇ ಚ ಕವಚೇ ದೇಹೇ ನಾಸ್ತಿಮೃತ್ಯುಶ್ಚ ಜೀವಿನಾಂ ।
ಅಸ್ತ್ರೇ ಶಸ್ತ್ರೇ ಜಲೇ ವಹ್ನೌ ಸಿದ್ಧಿಶ್ಚೇನ್ನಾಸ್ತಿ ಸಂಶಯಃ ॥ ೧೧೬ ॥

ಯದ್ಧೃತ್ವಾ ಪಠನಾದ್ಬಾಣಃ ಶಿವತ್ವಂ ಪ್ರಾಪ ಲೀಲಯಾ ।
ಬಭೂವ ಶಿವತುಲ್ಯಶ್ಚ ಯದ್ಧೃತ್ವಾ ನಂದಿಕೇಶ್ವರಃ ॥ ೧೧೭ ॥

ವೀರಶ್ರೇಷ್ಠೋ ವೀರಭದ್ರೋ ಸಾಂಬೋಽಭೂದ್ಧಾರಣಾದ್ಯತಃ ।
ತ್ರೈಲೋಕ್ಯವಿಜಯೀ ರಾಜಾ ಹಿರಣ್ಯಕಶಿಪುಃ ಸ್ವಯಂ ॥ ೧೧೮ ॥

ಹಿರಣ್ಯಾಕ್ಷಶ್ಚ ವಿಜಯೀ ಚಾಭವದ್ಧಾರಣಾದ್ಧಿ ಸಃ ।
ಯದ್ಧೃತ್ವಾ ಪಠನಾತ್ಸಿದ್ಧೋ ದುರ್ವಾಸಾ ವಿಶ್ವಪೂಜಿತಃ ॥ ೧೧೯ ॥

---

೧೧೬. ಈ ಕವಚವು ದೇಹದಲ್ಲಿರುವವರೆಗೆ ದೇಹಿಗಳಿಗೆ ಮರಣಭಯವಿಲ್ಲ. ಕವಚಸಿದ್ಧಿಯನ್ನು ಪಡೆದವರಿಗೆ ಅಸ್ತ್ರಶಸ್ತ್ರಗಳಿಂದಾಗಲೀ, ನೀರು ಬೆಂಕಿಗಳಿಂದಾಗಲೀ, ಪ್ರಾಣಭಯವಿಲ್ಲವೆಂಬುದು ನಿಶ್ಚಯ.

೧೧೭. ಈ ಕವಚಧಾರಣೆಯ ಮಹಿಮೆಯಿಂದಲೇ ಬಾಣಾಸುರನು ಲೀಲಾಜಾಲವಾಗಿ ಶಿವಸಾಯುಜ್ಯವನ್ನು ಪಡೆದನು. ನಂದಿಕೇಶ್ವರನೂ ಕೂಡ ಈ ಕವಚವನ್ನು ಧರಿಸಿ ಶಿವನಿಗೆ ಸಮಾನನೆನಿಸಿದನು.

೧೧೮. ವೀರಶ್ರೇಷ್ಠನಾದ ವೀರಭದ್ರನು ಇದನ್ನು ಧರಿಸಿದುದರಿಂದಲೇ ಸಾಂಬನಾದನು. ರಾಜನಾದ ಹಿರಣ್ಯಕಶಿಪುವು ತ್ರಿಲೋಕವಿಜಯಿಯಾದನು.

೧೧೯. ಹಿರಣ್ಯಾಕ್ಷನೂ ಈ ಕವಚಧಾರಣೆಮಾಡಿ ವಿಜಯಿಯಾದನು. ಇದನ್ನು ಧರಿಸಿ ಮಂತ್ರಪಠನೆಮಾಡಿದುದರಿಂದಲೇ ದೂರ್ವಾಸಮಹರ್ಷಿಯು ಸರ್ವಸಿದ್ಧನೂ, ವಿಶ್ವಪೂಜಿತನೂ ಆದನು.

ಜೈಗೀಷವ್ಯೋ ಮಹಾಯೋಗೀ ಪಠನಾದ್ಧಾರಣಾದ್ಯತಃ ।
ಯದ್ಧೃತ್ವಾ ವಾಮದೇವಶ್ಚ ದೇವಲಃ ಪವನಃ ಸ್ವಯಂ ।
ಅಗಸ್ತ್ಯಶ್ಚ ಪುಲಸ್ತ್ಯಶ್ಚಾಽಪ್ಯಭವದ್ವಿಶ್ವಪೂಜಿತಃ ॥ ೧೨೦ ॥

ಓಂ ನಮಃ ಶಿವಾಯೇತಿ ಚ ಮಸ್ತಕಂ ಮೇ ಸದಾವತು ।
ಓಂ ನಮಃ ಶಿವಾಯೇತಿ ಚ ಸ್ವಾಹಾ ಭಾಲಂ ಸದಾವತು ॥ ೧೨೧ ॥

ಓಂ ಹ್ರೀಂ ಶ್ರೀಂ ಕ್ಲೀಂ ಶಿವಾಯೇತಿ ಸ್ವಾಹಾ ನೇತ್ರೇ ಸದಾವತು ।
ಓಂ ಹ್ರೀಂ ಕ್ಲೀಂ ಹೂಂ ಶಿವಾಯೇತಿ ನಮೋ ಮೇ ಪಾತು ನಾಸಿಕಾಂ ॥ ೧೨೨ ॥

ಓಂ ನಮಃ ಶಿವಾಯ ಶಾಂತಾಯ ಸ್ವಾಹಾ ಕಂಠಂ ಸದಾವತು ।
ಓಂ ಹ್ರೀಂ ಶ್ರೀಂ ಹೂಂ ಸಂಹಾರಕರ್ತ್ರೇ ಸ್ವಾಹಾ ಕರ್ಣೌ ಸದಾವತು ॥೧೨೩॥

---

೧೨೦. ಈ ಕವಚವನ್ನು ಧರಿಸಿ ಮಂತ್ರಪಠನೆಮಾಡಿದ ಜೈಗೀಷವ್ಯನು ಮಹಾಯೋಗೀಶ್ವರನೆನಿಸಿದನು. ವಾಮದೇವ, ದೇವಲ, ಪವನ, ಅಗಸ್ತ್ಯ, ಪುಲಸ್ತ್ಯ ಮುಂತಾದವರೆಲ್ಲರೂ ಇದನ್ನು ಧರಿಸಿದುದರಿಂದಲೇ ವಿಶ್ವದಲ್ಲಿ ಪೂಜ್ಯರಾದರು.

೧೨೧. "ಓಂ ನಮಃ ಶಿವಾಯ" ಎಂಬ ಮಂತ್ರವು ನನ್ನ ಶಿರೋಭಾಗವನ್ನೂ. "ಓಂ ನಮಃ ಶಿವಾಯ ಸ್ವಾಹಾ" ಎಂಬುದು ನನ್ನ ಹಣೆಯ ಪ್ರದೇಶವನ್ನೂ ಸರ್ವದಾ ಕಾಪಾಡಲಿ.

೧೨೨. "ಓಂ ಹ್ರೀಂ, ಶ್ರೀಂ ಕ್ಲೀಂ ಶಿವಾಯ ಸ್ವಾಹಾ" ಎಂಬ ಮಂತ್ರವು ನನ್ನ ಎರಡು ಕಣ್ಣುಗಳನ್ನೂ, "ಓಂ ಹ್ರೀಂ ಕ್ಲೀಂ ಹೂಂ ಶಿವಾಯ ನಮಃ" ಎಂಬುದು ನನ್ನ ಮೂಗನ್ನೂ ರಕ್ಷಿಸಲಿ.

೧೨೩. "ಓಂ ನಮಃ ಶಿವಾಯ ಶಾಂತಾಯ ಸ್ವಾಹಾ" ಎಂಬ ಮಂತ್ರವು ನನ್ನ ಕಂಠಪ್ರದೇಶವನ್ನೂ, "ಓಂ ಹ್ರೀಂ ಶ್ರೀಂ ಹೂಂ ಸಂಹಾರಕರ್ತ್ರೇ ನಮಃ" ಎಂಬುದು ನನ್ನ ಕಿವಿಗಳನ್ನೂ ಸರ್ವದಾ ರಕ್ಷಿಸಲಿ.

ಓಂ ಹ್ರೀಂ ಶ್ರೀಂ ಪಂಚವಕ್ತ್ರಾಯ ಸ್ವಾಹಾ ದಂತಂ ಸದಾವತು ।
ಓಂ ಹ್ರೀಂ ಮಹೇಶಾಯ ಸ್ವಾಹಾ ಚಾಧರಂ ಪಾತು ಮೇ ಸದಾ ॥ ೧೨೪ ॥

ಓಂ ಹ್ರೀಂ ಶ್ರೀಂ ಕ್ಲೀಂ ತ್ರಿನೇತ್ರಾಯ ಸ್ವಾಹಾ ಕೇಶಾನ್ಸದಾವತು ।
ಓಂ ಹ್ರೀಂ ಐಂ ಮಹಾದೇವಾಯ ಸ್ವಾಹಾ ವಕ್ಷಃ ಸದಾವತು ॥ ೧೨೫ ॥

ಓಂ ಹ್ರೀಂ ಶ್ರೀಂ ಕ್ಲೀಂ ಪ್ಯೆಂ ರುದ್ರಾಯ ಸ್ವಾಹಾ ನಾಭಿಂ ಸದಾವತು ।
ಓಂ ಹ್ರೀಂ ಪ್ಯೆಂ ಶ್ರೀಮೀಶ್ವರಾಯ ಸ್ವಾಹಾ ಪೃಷ್ಠಂ ಸದಾವತು ॥ ೧೨೬ ॥

ಓಂ ಹ್ರೀಂ ಕ್ಲೀಂ ಮೃತ್ಯುಂಜಯಾಯ ಸ್ವಾಹಾ ಭ್ರುವೌ ಸದಾವತು ।
ಓಂ ಹ್ರೀಂ ಶ್ರೀಂ ಕ್ಲೀಮೀಶಾನಾಯ ಸ್ವಾಹಾ ಪಾರ್ಶ್ವಂ ಸದಾವತು ॥ ೧೨೭ ॥

ಓಂ ಹ್ರೀಮೀಶ್ವರಾಯ ಸ್ವಾಹಾ ಚೋದರಂ ಪಾತು ಮೇ ಸದಾ ।
ಓಂ ಶ್ರೀಂ ಹ್ರೀಂ ಮೃತ್ಯುಂಜಯಾಯ ಸ್ವಾಹಾ ಬಾಹೂ ಸದಾವತು ॥ ೧೨೮ ॥

---

೧೨೪. "ಓಂ ಹ್ರೀಂ ಶ್ರೀಂ ಪಂಚವಕ್ತ್ರಾಯ ಸ್ವಾಹಾ" ಎಂಬುದು ನನ್ನ ದಂತಪಂಕ್ತಿಗಳನ್ನೂ, "ಓಂ ಹ್ರೀಂ ಮಹೇಶಾಯ ಸ್ವಾಹಾ" ಎಂಬುದು ನನ್ನ ಕೆಳ ತುಟಿಯನ್ನೂ ಸರ್ವದಾ ಕಾಪಾಡಲಿ.

೧೨೫. "ಓಂ ಹ್ರೀಂ ಶ್ರೀಂ ಕ್ಲೀಂ ತ್ರಿನೇತ್ರಾಯ ಸ್ವಾಹಾ" ಎಂಬುದು ನನ್ನ ಕೂದಲುಗಳನ್ನೂ, "ಓಂ ಹ್ರೀಂ ಐಂ ಮಹಾದೇವಾಯ ಸ್ವಾಹಾ" ಎಂಬುದು ನನ್ನ ವಕ್ಷಃಸ್ಥಲವನ್ನೂ ಅನವರತ ರಕ್ಷಿಸಲಿ.

೧೨೬. "ಓಂ ಹ್ರೀಂ ಶ್ರೀಂ ಕ್ಲೀಂ ಪ್ಯೆಂ ರುದ್ರಾಯ ಸ್ವಾಹಾ" ಎಂಬುದು ನನ್ನ ನಾಭಿಪ್ರದೇಶವನ್ನೂ "ಓಂ ಹ್ರೀಂ ಪ್ಯೆಂ ಶ್ರೀಂ ಈಶ್ವರಾಯ ಸ್ವಾಹಾ" ಎಂಬ ಮಂತ್ರವು ನನ್ನ ಪೃಷ್ಠಭಾಗವನ್ನೂ, ಸರ್ವದಾ ಕಾಪಾಡಲಿ.

೧೨೭. "ಓಂ ಹ್ರೀಂ ಕ್ಲೀಂ ಮೃತ್ಯುಂಜಯಾಯ ಸ್ವಾಹಾ" ಎಂಬ ಮಂತ್ರವು ನನ್ನ ಎರಡು ಹುಬ್ಬುಗಳನ್ನೂ, "ಓಂ ಹ್ರೀಂ ಶ್ರೀಂ ಕ್ಲೀಂ ಈಶಾನಾಯ ಸ್ವಾಹಾ" ಎಂಬುದು ನನ್ನ ಪಾರ್ಶ್ವವನ್ನೂ ಸದಾ ರಕ್ಷಿಸಲಿ.

೧೨೮. "ಓಂ ಹ್ರೀಂ ಈಶ್ವರಾಯ ಸ್ವಾಹಾ" ಎಂಬುದು ನನ್ನ ಉದರ (ಹೊಟ್ಟೆ) ಪ್ರದೇಶವನ್ನೂ "ಓಂ ಶ್ರೀಂ ಹ್ರೀಂ ಮೃತ್ಯುಂಜಯಾಯ ಸ್ವಾಹಾ" ಎಂಬುದು ನನ್ನ ಬಾಹುದ್ವಯಗಳನ್ನೂ ಅನವರತ ರಕ್ಷಿಸಲಿ.

ಓಂ ಹ್ರೀಂ ಶ್ರೀಂ ಕ್ಲೀಮೀಶ್ವರಾಯ ಸ್ವಾಹಾ ಪಾತು ಕರೌ ಮಮ ।
ಓಂ ಮಹೇಶ್ವರಾಯ ರುದ್ರಾಯ ನಿತಂಬಂ ಪಾತು ಮೇ ಸದಾ ॥ ೧೨೯ ॥

ಓಂ ಹ್ರೀಂ ಶ್ರೀಂ ಭೂತನಾಥಾಯ ಸ್ವಾಹಾ ಪಾದೌ ಸದಾವತು ।
ಓಂ ಸರ್ವೇಶ್ವರಾಯ ಸರ್ವಾಯ ಸ್ವಾಹಾ ಪಾದೌ ಸದಾವತು ॥ ೧೩೦ ॥

ಪ್ರಾಚ್ಯಾಂ ಮಾಂ ಪಾತು ಭೂತೇಶ ಆಗ್ನೇಯ್ಯಾಂ ಪಾತು ಶಂಕರಃ ।
ದಕ್ಷಿಣೇ ಪಾತು ಮಾಂ ರುದ್ರೋ ನೈಋರ್ತ್ಯಾಂ ಸ್ಥಾಣುರೇವ ಚ ॥ ೧೩೧ ॥

ಪಶ್ಚಿಮೇ ಖಂಡಪರಶುರ್ವಾಯವ್ಯಾಂ ಚಂದ್ರಶೇಖರಃ ।
ಉತ್ತರೇ ಗಿರಿಶಃ ಪಾತು ಚೈಶಾನ್ಯಾಮೀಶ್ವರಃ ಸ್ವಯಂ ॥ ೧೩೨ ॥

---

೧೨೯. "ಓಂ ಹ್ರೀಂ ಶ್ರೀಂ ಕ್ಲೀಂ ಈಶ್ವರಾಯ ಸ್ವಾಹಾ" ಎಂಬುದು ನನ್ನ ಎರಡು ಕೈಗಳನ್ನೂ "ಓಂ ಮಹೇಶ್ವರಾಯ ರುದ್ರಾಯ" ಎಂಬುದು ನನ್ನ ನಿತಂಬ (ಪಿರ್ರೆ)ಗಳನ್ನೂ ಸದಾ ಕಾಪಾಡಲಿ.

೧೩೦. "ಓಂ ಹ್ರೀಂ ಶ್ರೀಂ ಭೂತನಾಥಾಯ ಸ್ವಾಹಾ" ಎಂಬುದು ನನ್ನ ಪಾದದ್ವಯಗಳನ್ನೂ, "ಓಂ ಸರ್ವೇಶ್ವರಾಯ ಸರ್ವಾಯ ಸ್ವಾಹಾ" ಎಂಬುದು ನನ್ನ ಅಂಗಾಲುಗಳನ್ನೂ ಸರ್ವದಾ ರಕ್ಷಿಸಲಿ.

೧೩೧. ಪೂರ್ವದಿಕ್ಕಿನಲ್ಲಿ ಭೂತೇಶ್ವರನೂ, ಆಗ್ನೇಯದಿಕ್ಕಿನಲ್ಲಿ ಶಂಕರನೂ, ದಕ್ಷಿಣದಿಕ್ಕಿನಲ್ಲಿ ರುದ್ರನೂ, ನೈಋತ್ಯದಲ್ಲಿ ಸ್ಥಾಣುವೂ ನನ್ನನ್ನು ಸರ್ವದಾ ಕಾಪಾಡಲಿ.

೧೩೨. ಪಶ್ಚಿಮದಲ್ಲಿ ಖಂಡಪರಶುವೂ, ವಾಯುವ್ಯದಲ್ಲಿ ಚಂದ್ರಶೇಖರನೂ, ಉತ್ತರದಲ್ಲಿ ಗಿರಿಶನೂ, ಈಶಾನ್ಯದಲ್ಲಿ ಈಶ್ವರನೂ ಸದಾ ಕಾಪಾಡಲಿ.

ಊರ್ಧ್ವೇ ಮೃಡಃ ಸದಾ ಪಾತು ಚಾಧೋ ಮೃತ್ಯುಂಜಯಃ ಸ್ವಯಂ ।
ಜಲೇ ಸ್ಥಲೇ ಚಾ ತರಿಕ್ಷೇ ಸ್ವಪ್ನೇ ಜಾಗರಣೇ ಸದಾ ॥ ೧೩೩ ॥

ಪಿನಾಕೀ ಪಾತು ಮಾಂ ಪ್ರೀತ್ಯಾ ಭಕ್ತಂ ವೈ ಭಕ್ತವತ್ಸಲಃ ।
ಇತಿ ತೇ ಕಥಿತಂ ವತ್ಸ ಕವಚಂ ಪರಮಾದ್ಭುತಂ ॥ ೧೩೪ ॥

ದಶಲಕ್ಷಜಪೇನೈವ ಸಿದ್ಧಿರ್ಭವತಿ ನಿಶ್ಚಿತಂ ।
ಯದಿ ಸ್ಯಾತ್ಸಿದ್ಧಕವಚೋ ರುದ್ರತುಲ್ಯೋ ಭವೇದ್ಧ್ರುವಂ ॥ ೧೩೫ ॥

ತವ ಸ್ನೇಹಾನ್ಮಯಾಖ್ಯಾತಂ ಪ್ರವಕ್ತವ್ಯಂ ನ ಕಸ್ಯಚಿತ್ ।
ಕವಚಂ ಕಾಣ್ವಶಾಖೋಕ್ತಮತಿಗೋಪ್ಯಂ ಸುದುರ್ಲಭಂ ॥ ೧೩೬ ॥

ಅಶ್ವಮೇಧಸಹಸ್ರಾಣಿ ರಾಜಸೂಯ ಶತಾನಿ ಚ ।
ಸರ್ವಾಣಿ ಕವಚಸ್ಯಾಸ್ಯ ಕಲಾಂ ನಾರ್ಹಂತಿ ಷೋಡಶೀಂ ॥ ೧೩೭ ॥

೧೩೩-೧೩೪. ಮೇಲುಭಾಗದಲ್ಲಿ ಮೃಡನೂ, ಕೆಳಭಾಗದಲ್ಲಿ ಮೃತ್ಯುಂಜಯನೂ, ನೀರು, ನೆಲ, ಅಂತರಿಕ್ಷಗಳಲ್ಲಿಯೂ, ಜಾಗ್ರತ್ಸ್ವಪ್ನಸುಷುಪ್ತಿಗಳಲ್ಲಿಯೂ ಭಕ್ತವತ್ಸಲನಾದ ಪಿನಾಕಿಯು ಭಕ್ತನಾದ ನನ್ನನ್ನು ಪ್ರೀತಿಯಿಂದ ಪಾಲಿಸಲಿ. (ಈ ರೀತಿಯಾಗಿ ಆತ್ಮರಕ್ಷೆಮಾಡಿಕೊಳ್ಳಬೇಕು) ವತ್ಸ ನಾರದನೇ, ಅತ್ಯದ್ಭುತವಾದ ಶಿವಕವಚವನ್ನು ನಿನಗೆ ತಿಳಿಸಿರುವೆನು.

೧೩೫. ಹತ್ತುಲಕ್ಷಬಾರಿ ಜಪಿಸುವುದರಿಂದ ಈ ಕವಚವು ಸಿದ್ಧಿಸುವುದು. ಈ ಕವಚಸಿದ್ಧಿಯನ್ನು ಪಡೆದವನು ರುದ್ರನಿಗೆ ಸಮನಾಗುವುದರಲ್ಲಿ ಸಂಶಯವಿಲ್ಲ.

೧೩೬. ನಿನ್ನಲ್ಲಿ ಅತ್ಯಂತ ವಾತ್ಸಲ್ಯದಿಂದ ನಾನು ಹೇಳಿದ ಈ ಕವಚವನ್ನು ಯಾರಿಗೂ ಹೇಳಬೇಡ. ಕಣ್ವಶಾಖೆಯಲ್ಲಿ ಪ್ರತಿಪಾದಿತವಾಗಿ ಅತ್ಯಂತ ದುರ್ಲಭವಾದ ಈ ಕವಚವನ್ನು ಗೋಪ್ಯವಾಗಿಟ್ಟಿರಬೇಕು.

೧೩೭. ಸಾವಿರ ಅಶ್ವಮೇಧಯಾಗಗಳೂ, ನೂರು ರಾಜಸೂಯಯಾಗಗಳೂ ಈ ಕವಚದ ಹದಿನಾರನೆಯ ಒಂದು ಭಾಗಕ್ಕೂ ಎಣೆಯಾಗಲಾರವು.

ಕವಚಸ್ಯ ಪ್ರಸಾದೇನ ಜೀವನ್ಮುಕ್ತೋ ಭವೇನ್ನರಃ ।
ಸರ್ವಜ್ಞಃ ಸರ್ವಸಿದ್ಧೀಶೋ ಮನೋಯಾಯೀ ಭವೇದ್ಧ್ರುವಂ ॥ ೧೩೮ ॥

ಇದಂ ಕವಚಮಜ್ಞಾತ್ವಾ ಭಜೇದ್ಯಃ ಶಂಕರಪ್ರಭುಂ ।
ಶತಲಕ್ಷಂ ಪ್ರಜಪ್ತೋಽಪಿ ನ ಮಂತ್ರಃ ಸಿದ್ಧಿದಾಯಕಃ ॥ ೧೩೯ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ತೃತೀಯೇ ಗಣಪತಿಖಂಡೇ ನಾರದನಾರಾಯಣಸಂವಾದೇ ಶಂಕರ ಕವಚಪ್ರಕಥನಂ ನಾಮ ಪಂಚತ್ರಿಂಶೋಽಧ್ಯಾಯಃ

---

೧೩೮. ಈ ಕವಚದ ಅನುಗ್ರಹವಾದರೆ ಮನುಜನು ಜೀವನ್ಮುಕ್ತನೂ, ಸರ್ವಜ್ಞನೂ, ಸರ್ವಸಿದ್ಧೀಶ್ವರನೂ, ಮನೋಗಾಮಿಯೂ ಆಗುವುದರಲ್ಲಿ ಸಂದೇಹವಿಲ್ಲ.

೧೩೯. ಈ ಕವಚದ ಉಪದೇಶವನ್ನು ಹೊಂದದೆ, ಸರ್ವೇಶ್ವರನಾದ ಶಂಕರನನ್ನು ಭಜಿಸುವವನು ನೂರುಲಕ್ಷಬಾರಿ ಜಪಿಸಿದರೂ ಮಂತ್ರಸಿದ್ಧಿಯನ್ನು ಪಡೆಯಲಾರನು.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಗಣಪತಿಖಂಡದಲ್ಲಿ ಶಂಕರನ ಕವಚವನ್ನು ತಿಳಿಸುವ ಮೂವತ್ತೈದನೆಯ ಅಧ್ಯಾಯವು ಮುಗಿದುದು.

ಮೂವತ್ತೈದನೆಯ ಅಧ್ಯಾಯದ ಸಾರಾಂಶ

ಮನೋರಮೆಯು ಪತಿಯನ್ನು ಎದೆಗೆ ಅಪ್ಪಿಕೊಂಡಿದ್ದಂತೆಯೇ, ಪುತ್ರಮಿತ್ರ ಬಾಂಧವರ ಸಮ್ಮುಖದಲ್ಲಿ ಯೋಗಬಲದಿಂದ ಆತ್ಮತ್ಯಾಗವಮಾಡಿದಳು. ಪತ್ನಿಯು ಮೃತಳಾದುದನ್ನು ಕಂಡು ಕಾರ್ತವೀರ್ಯನು ಬಹಳವಾಗಿ ಗೋಳಾಡುತ್ತಿರಲು ಅಶರೀರ ವಾಣಿಯು ಅವನನ್ನು ಸಮಾಧಾನಗೊಳಿಸಿತು. ಅನಂತರ ಅವಳನ್ನು ಚಿತೆಗೇರಿಸಿ, ಆಕೆಯ ಉತ್ತರಕ್ರಿಯೆಗಳನ್ನು ಸಾಂಗವಾಗಿ ಮಾಡಿಸಿ, ಬ್ರಾಹ್ಮಣರನ್ನು ಭೋಜನ ದಾನಗಳಿಂದ ತೃಪ್ತಿಪಡಿಸಿದನು. ದುಃಖಿತಮನಸ್ಕನಾಗಿಯೇ ಕಾರ್ತವೀರ್ಯನು ಸೈನ್ಯಸಮೇತನಾಗಿ ಪುನಃ ಯುದ್ಧಕ್ಕೆ ಹೊರಡಲು, ಮಾರ್ಗದಲ್ಲಿ ಅನೇಕ ಅಪಶಕುನಗಳು ಕಾಣಿಸಿಕೊಂಡವು. ಆದರೂ ಧೈರ್ಯಗೆಡದೆ ಯುದ್ಧರಂಗವನ್ನು ಸೇರಿ ಪರಶುರಾಮನಿಗೆ ವಂದಿಸಿ, ಆಶೀರ್ವಾದ ಪಡೆದು, ಯುದ್ಧಕ್ಕೆ ಸಿದ್ಧನಾದನು. ಆಗ ಪರಶುರಾಮನು ಕಾರ್ತವೀರ್ಯನಿಗೆ ಅವನ ಅವಿವೇಕವನ್ನೆಲ್ಲ ಮನಗಾಣಿಸಿ, ಪರಮ ಧಾರ್ಮಿಕನೂ, ಪರೋಪಕಾರಿಯೂ ಆದ ಜಮದಗ್ನಿಯನ್ನು ಕೊಂದು ಅಪಕೀರ್ತಿ ಗಳಿಸಿದುದಲ್ಲದೆ ನಿನ್ನ ಆಶೆ ಆಕಾಂಕ್ಷೆಗಳನ್ನು ಪೂರ್ತಿಗೊಳಿಸಿಕೊಳ್ಳಲಾಗಲಿಲ್ಲ ಎಂದು ಅಲ್ಲಗಳೆದನು.

ಪರಶುರಾಮನ ಹಿತೋಕ್ತಿಗಳನ್ನು ಕೇಳಿ ಕಾರ್ತವೀರ್ಯನು ವಿನೀತನಾಗಿ ಇಂತು ವಿಜ್ಞಾಪಿಸಿಕೊಂಡನು. 'ಎಲೈ ಮುನಿವರ್ಯನೇ, ಗುಣಕರ್ಮಾನುಗುಣವಾಗಿ ಸೃಷ್ಟವಾಗಿರುವ ಚಾತುರ್ವರ್ಣ್ಯಕ್ಕೆ ನಿಯತವಾದ ಧರ್ಮಗಳುಂಟು. ಸತ್ವಗುಣ ಪ್ರಧಾನನಾದ ಬ್ರಾಹ್ಮಣನಿಗೆ ತಪಸ್ಸಿನಲ್ಲಿ ಆಸಕ್ತಿಯೂ, ರಜೋಗುಣಪ್ರಧಾನನಾದ ಕ್ಷತ್ರಿಯನಿಗೆ ಕಾಮವೂ ಸಹಜಗುಣವಾದುದರಿಂದ ನಾನು ಕಾಮಧೇನುವಿಗೆ ಆಸೆಪಟ್ಟಿದ್ದು ತಪ್ಪಲ್ಲ. ಅದರ ಪರಿಣಾಮವಾಗಿ ನಾನು ಯುದ್ಧದಲ್ಲಿ ಮಡಿದರೂ ಕ್ಷತ್ರಿಯನಾದ ನನಗೆ ವೀರಸ್ವರ್ಗ ಲಭಿಸುವುದು. ಆದರೆ ಬ್ರಾಹ್ಮಣನೂ, ಶಾಂತಿಗುಣ ಪ್ರಧಾನನೂ ಆದ ನೀನು ಯುದ್ಧರತನಾಗಿರುವುದು ಅತ್ಯಾಶ್ಚರ್ಯವಾಗಿದೆ' ಈ ನುಡಿಗಳನ್ನು ಕೇಳುತ್ತಲೇ ಪರಶುರಾಮನ ಸಹೋದರರು ಸಹಿಸದೆ ಬಾಣ

ಪ್ರಯೋಗಮಾಡಲು, ಕಾರ್ತವೀರ್ಯನ ಕಡೆ ಮತ್ಸ್ಯರಾಜನು ಅವರೆಲ್ಲರನ್ನೂ ಕ್ಷಣ ಕಾಲ ಎದುರಿಸಿದನು. ಆಗ ಅಶರೀರವಾಣಿಯಾದುದನ್ನು ಕೇಳಿ ಜಮದಗ್ನಿಯ ಮಗನಾದ ಶೃಂಗಿಯೆಂಬುವನು ಆ ಮತ್ಸ್ಯರಾಜನ ಸಮೀಪಕ್ಕೆ ಹೋಗಿ ಅವನಿಂದ ಅಮೋಘವಾದ ಶಿವಕವಚವನ್ನು ಬೇಡಿ ತೆಗೆದುಕೊಂಡು, ಅನಂತರ ಅವನನ್ನು ಲೀಲಾಜಾಲವಾಗಿ ಸಂಹರಿಸಿದನು. ಶಿವಕವಚದ ಮಹಿಮೆಯು ವರ್ಣನಾತೀತ ವಾದುದು.

— ॥ ಓಂ ॥—

—॥ ಶ್ರೀ ಗಣೇಶಾಯ ನಮಃ ॥—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಗಣಪತಿಖಂಡೇ

॥ ಷಟ್‌ತ್ರಿಂಶತ್ತಮೋಽಧ್ಯಾಯಃ ॥

॥ ನಾರಾಯಣ ಉವಾಚ ॥

ಮತ್ಸ್ಯರಾಜೇ ನಿಪತಿತೇ ರಾಜಾ ಯುದ್ಧವಿಶಾರದಃ ।
ರಾಜೇಂದ್ರಾನ್ಪ್ರೇಷಯಾಮಾಸ ಯುದ್ಧೇ ಶಸ್ತ್ರವಿಶಾರದಾನ್ ॥ ೧ ॥

ಬೃಹದ್ಬಲಂ ಸೋಮದತ್ತಂ ವಿದರ್ಭಂ ಮಿಥಿಲೇಶ್ವರಂ ।
ನಿಷಧಾಧಿಪತಿಂ ಚೈವ ಮಗಧಾಧಿಪತಿಂ ತಥಾ ॥ ೨ ॥

ಆಯಯುಃ ಸಮರೇ ಯೋದ್ಧುಂ ಜಾಮದಗ್ನ್ಯಂ ಮಹಾರಥಾಃ ।
ತ್ರಿತಯಾಕ್ಷೌಹಿಣೀಭಿಶ್ಚ ಸೇನಾಭಿಃ ಸಹ ನಾರದ ॥ ೩ ॥

ಮೂವತ್ತಾರನೆಯ ಅಧ್ಯಾಯವು

೧. ಈ ರೀತಿ ಮತ್ಸ್ಯರಾಜನ ಪತನವಾದನಂತರ ಯುದ್ಧಕುಶಲಿಯಾದ ಕಾರ್ತವೀರ್ಯನು, ಶಸ್ತ್ರಪ್ರಯೋಗದಲ್ಲಿ ಚತುರರಾದ ಮತ್ತೆ ಕೆಲವು ರಾಜರನ್ನು ಯುದ್ಧಕ್ಕೆ ಕಳುಹಿಸಿದನು.

೨. ಬೃಹದ್ಬಲ ಮತ್ತು ಸೋಮದತ್ತರೂ, ವಿದರ್ಭ ಮತ್ತು ಮಿಥಿಲೆಯ ರಾಜರೂ, ನಿಷಧ ಮತ್ತು ಮಗಧದೇಶದ ಅಧಿಪತಿಗಳೂ ಕಾರ್ತವೀರ್ಯನ ಅಪ್ಪಣೆಯಂತೆ ಯುದ್ಧಕ್ಕೆ ಬಂದರು.

೩. ಎಲೈ ನಾರದನೇ, ಈ ಮಹಾರಥಿಕರೆಲ್ಲರೂ ಮೂರು ಅಕ್ಷೌಹಿಣೀ ಸೇನೆಯೊಡಗೂಡಿ, ಪರಶುರಾಮನೊಡನೆ ಯುದ್ಧಮಾಡಲು ಯುದ್ಧರಂಗಕ್ಕೆ ಬಂದರು.

ರಾಮಸ್ಯ ಭ್ರಾತರಃ ಸರ್ವೇ ವೀರಾಸ್ತೀಕ್ಷ್ಣಾಸ್ತ್ರಪಾಣಯಃ ।
ವಾರಯಾಮಾಸುರಸ್ತ್ರೈಶ್ಚ ತಾನೇವ ರಣಮೂರ್ಧನಿ ॥ ೪ ॥

ತೇ ವೀರಾಃ ಶರಜಾಲೇನ ದಿವ್ಯಾಸ್ತ್ರೇಣ ಪ್ರಯತ್ನತಃ ।
ವಾರಯಾಮಾಸುರೇಕೈಕಂ ಭ್ರಾತೃವರ್ಗಾನ್ಭೃಗೋಸ್ತಥಾ ॥ ೫ ॥

ಆಯಯೌ ಸಮರೇ ಶೀಘ್ರಂ ದೃಷ್ಟ್ವಾ ತಾಂಶ್ಚ ಪರಾಜಿತಾನ್ ।
ಪಿನಾಕಹಸ್ತಃ ಸ ಭೃಗುರ್ಜ್ವಲದಗ್ನಿಶಿಖೋಪಮಃ ॥ ೬ ॥

ಚಿಕ್ಷೇಪ ನಾಗಪಾಶಂ ಚ ಜಾಮದಗ್ನ್ಯೋ ಮಹಾಬಲಃ ।
ಚಿಚ್ಛೇದ ತಂ ಗಾರುಡೇನ ಸೋಮದತ್ತೋ ಮಹಾಬಲಃ ॥ ೭ ॥

---

೪. ತೀಕ್ಷ್ಣವಾದ ಆಯುಧಗಳನ್ನು ಧರಿಸಿದ್ದ ಪರಶುರಾಮನ ಸಹೋದರರೆಲ್ಲರೂ ಇವರೆಲ್ಲರನ್ನೂ ಯುದ್ಧಾಂಗಣದಲ್ಲಿ ಅಸ್ತ್ರಪ್ರಯೋಗದಿಂದ ತಡೆದು ನಿಲ್ಲಿಸಿದರು.

೫. ಆ ವೀರರೂ ಕೂಡ ಬಾಣದ ಸಮೂಹಗಳಿಂದಲೂ, ದಿವ್ಯಾಸ್ತ್ರಗಳಿಂದಲೂ ಪರಶುರಾಮನ ಒಬ್ಬೊಬ್ಬ ಸಹೋದರನನ್ನೂ ಪ್ರಯತ್ನಪೂರ್ವಕವಾಗಿ ತಡೆಗಟ್ಟಿದರು.

೬. ಆಗ ತನ್ನ ಸಹೋದರರೆಲ್ಲರೂ ಯುದ್ಧದಲ್ಲಿ ಸೋತುದನ್ನು ಕೇಳಿ ಅಗ್ನಿ ಜ್ವಾಲೆಯಂತೆ ತೇಜಸ್ವಿಯಾದ ಪರಶುರಾಮನು ಪಿನಾಕಪಾಣಿಯಾಗಿ ತಾನೇ ಯುದ್ಧಾಂಗಣಕ್ಕೆ ಬಂದನು.

೭ ಮಹಾಬಲಿಷ್ಠನಾದ ಪರಶುರಾಮನು ಪ್ರಯೋಗಿಸಿದ ಸರ್ಪಾಸ್ತ್ರವನ್ನು ಮಹಾಪರಾಕ್ರಮಿಯಾದ ಸೋಮದತ್ತನೆಂಬುವನು ಗಾರುಡಾಸ್ತ್ರದಿಂದ ಕತ್ತರಿಸಿ ಬಿಸುಡಿದನು.

ಭೃಗುಃ ಶಂಕರಶೂಲೇನ ಸೋಮದತ್ತಂ ಜಘಾನ ಹ ।
ಬೃಹದ್ಬಲಂ ಚ ಗದಯಾ ವಿದರ್ಭಂ ಮುಷ್ಟಿಭಿಸ್ತಥಾ ॥ ೮ ॥

ಮೈಥಿಲಂ ಮುದ್ಗರೇಣೈವ ಶಕ್ತ್ಯಾ ವೈ ನೈಷಧಂ ತಥಾ ।
ಮಾಗಧಂ ಚ ರಣೋದ್ಧ್ಯಾತ್ತೈರಸ್ತ್ರಜಾಲೇನ ಸೈನಿಕಾನ್ ॥ ೯ ॥

ನಿಹತ್ಯ ನಿಖಿಲಾನ್ಭೂಪಾನ್ಸಂಹಾರಾಗ್ನಿಸಮೋ ರಣೇ ।
ದುದ್ರಾವ ಕಾರ್ತವೀರ್ಯಂ ಚ ಜಾಮದಗ್ನ್ಯೋ ಮಹಾಬಲಃ ॥ ೧೦ ॥

ದೃಷ್ಟ್ವಾ ತಂ ಯೋದ್ಧುಮಾಯಾಂತಂ ರಾಜಾನಶ್ಚ ಮಹಾರಥಾಃ ।
ಆಯಯುಃ ಸಮರಂ ಕರ್ತುಂ ಕಾರ್ತವೀರ್ಯಂ ನಿವಾರ್ಯ ಚ ॥ ೧೧ ॥

ಕಾನ್ಯಕುಬ್ಜಾಶ್ಚ ಶತಶಃ ಸೌರಾಷ್ಟ್ರಾಃ ಶತಶಸ್ತಥಾ ।
ರಾಷ್ಟ್ರೀಯಾಃ ಶತಶಶ್ಚೈವ ವೀರೇಂದ್ರಾಃ ಶತಶಸ್ತಥಾ ॥ ೧೨ ॥

---

೮. ಆಗ ಕುಪಿತನಾದ ಪರಶುರಾಮನು ಶಂಕರನು ಕೊಟ್ಟ ಶೂಲಾಯುಧ ದಿಂದ ಸೋಮದತ್ತನನ್ನೂ, ಗದೆಯಿಂದ ಬೃಹದ್ಬಲನನ್ನೂ, ಮುಷ್ಟಿಘಾತದಿಂದ ವಿದರ್ಭರಾಜನನ್ನೂ ಸಂಹರಿಸಿದನು.

೯. ಮಿಥಿಲೆಯ ರಾಜನನ್ನು ಮುದ್ಗರಾಯುಧದಿಂದಲೂ, ನಿಷಧ ರಾಜ ನನ್ನು ಶಕ್ತ್ಯಾಯುಧದಿಂದಲೂ, ಮಗಧರಾಜನನ್ನು ಕಾಲಿನ ತುಳಿತದಿಂದಲೂ, ಇತರ ಸೈನಿಕರನ್ನು ಬಾಣಗಳ ಸುರಿಮಳೆಯಿಂದಲೂ ಸಂಹರಿಸಿದನು.

೧೦. ಕಾಲಾಗ್ನಿಯಂತೆ ಅತ್ಯುಗ್ರನಾದ ಆ ಪರುಶರಾಮನು ಈ ರೀತಿಯಾಗಿ ಸಕಲ ರಾಜರನ್ನೂ ಸಮರಾಂಗಣದಲ್ಲಿ ಸಂಹರಿಸಿ, ಕಾರ್ತವೀರ್ಯನ ಸಮೀಪಕ್ಕೆ ಓಡಿದನು.

೧೧. ಈ ರೀತಿ ಪರಶುರಾಮನೇ ಬಂದದ್ದನ್ನು ಕಂಡು ಮಹಾರಥಿಕರಾದ ಅನೇಕ ರಾಜರು ಕಾರ್ತವೀರ್ಯನನ್ನು ರಕ್ಷಣೆಮಾಡಿಕೊಂಡು ಪರಶುರಾಮನ ಮೇಲೆ ಯುದ್ಧಮಾಡಲು ನಿಂತರು.

೧೨. ಆ ರಾಜರುಗಳಲ್ಲಿ ನೂರಾರು ಮಂದಿ ಕನ್ಯಕುಬ್ಜದವರೂ, ನೂರಾರು ಮಂದಿ ಸೌರಾಷ್ಟ್ರದವರೂ, ನೂರಾರು ಮಂದಿ ರಾಷ್ಟ್ರಕೂಟದವರೂ ಇದ್ದುದಲ್ಲದೆ ವೀರಶಿರೋಮಣಿಗಳೂ ನೂರಾರು ಮಂದಿ ಇದ್ದರು.

ಸೌವರ್ಣ್ಯಾವಾಂಗಾಶ್ಚ ಶತಶೋ ಮಹಾರಾಷ್ಟ್ರಾಸ್ತಥಾ ದಶ ।
ತಥಾ ಗುರ್ಜರಜಾತೀಯಾಃ ಕಲಿಂಗಾಃ ಶತಶಸ್ತಥಾ ॥ ೧೩ ॥

ಕೃತ್ವಾ ತು ಶರಜಾಲಂ ಚ ಭೃಗುಶ್ಚಿಚ್ಛೇದ ತತ್ಕ್ಷಣಂ ।
ತಂ ಛಿತ್ವಾಭ್ಯುತ್ಥಿತೋ ರಾಮೋ ನೀಹಾರಮಿವ ಭಾಸ್ಕರಃ ॥ ೧೪ ॥

ತ್ರಿರಾತ್ರಂ ಯುಯುಧೇ ರಾಮಸ್ತೈಃ ಸಾರ್ಧಂ ಸಮರಾಜಿರೇ ।
ದ್ವಾದಶಾಕ್ಷೌಹಿಣೀಂ ಸೇನಾಂ ತಥಾ ಚಿಚ್ಛೇದ ಪರ್ಶುನಾ ॥ ೧೫ ॥

ರಂಭಾಸ್ತಂಭಸಮೂಹಂ ಚ ಯಥಾ ಖಡ್ಗೇನ ಲೀಲಯಾ ।
ಛಿತ್ವಾ ಸೇನಾಂ ಭೂಪವರ್ಗಂ ಜಘಾನ ಶಿವಶೂಲತಃ ॥ ೧೬ ॥

ಸರ್ವಾಂಸ್ತಾನ್ನಿಹತಾನ್ದೃಷ್ಟ್ವಾ ಸೂರ್ಯವಂಶಸಮುದ್ಭವಃ ।
ಆಜಗಾಮ ಸುಚಂದ್ರಶ್ಚ ಲಕ್ಷರಾಜೇಂದ್ರ ಸಂಯುತಃ ॥ ೧೭ ॥

---

೧೩. ನೂರಾರು ಮಂದಿ ಸೌವರ್ಣ್ಯರೂ, ವಂಗದೇಶದವರೂ, ಹತ್ತಾರು ಮಂದಿ ಮಹಾರಾಷ್ಟ್ರದವರೂ, ನೂರಾರು ಮಂದಿ ಗುರ್ಜರ ಮತ್ತು ಕಳಿಂಗದೇಶದ ರಾಜರೂ ಅಲ್ಲಿ ಸೇರಿದ್ದರು.

೧೪-೧೫. ಪರಶುರಾಮನಾದರೋ ಬಾಣಗಳ ಸಮೂಹದಿಂದ ಅವರೆಲ್ಲರ ಬಾಣಸಮೂಹವನ್ನೂ ಕತ್ತರಿಸಿದನು. ಸೂರ್ಯನು ಹಿಮಕಣಗಳನ್ನು ಕ್ಷಣಮಾತ್ರದಲ್ಲಿ ನಾಶಗೊಳಿಸುವಂತೆ, ಪರಶುರಾಮನು ಅವರ ಆಯುಧಗಳನ್ನು ಕ್ಷಣಮಾತ್ರದಲ್ಲಿ ಕತ್ತರಿಸಿ, ಮೂರು ರಾತ್ರಿ ಅವರೊಡನೆ ಯುದ್ಧಮಾಡಿ, ಹನ್ನೆರಡಕ್ಷೌಹಿಣೀ ಸೇನೆಯನ್ನು ತನ್ನ ಕೊಡಲಿಯಿಂದ ಕತ್ತರಿಸಿ ಬಿಸುಡಿದನು.

೧೬. ಕತ್ತಿಯಿಂದ ಬಾಳೆಕಂಭಗಳನ್ನು ಕತ್ತರಿಸುವಂತೆ ಸುಲಭವಾಗಿ ಸೈನಿಕರನ್ನೆಲ್ಲ ಕತ್ತರಿಸಿ, ಶಿವನು ಕೊಟ್ಟ ಶೂಲಾಯುಧದಿಂದ ಅಲ್ಲಿದ್ದ ರಾಜರ ಸಮೂಹವನ್ನೆಲ್ಲ ಸಂಹರಿಸಿದನು.

೧೭. ಆ ರಾಜರೆಲ್ಲರೂ ಹತರಾದುದನ್ನು ನೋಡಿ ಸೂರ್ಯವಂಶೋದ್ಭವನಾದ ಸುಚಂದ್ರನೆಂಬುವನು ಲಕ್ಷರಾಜರೊಡಗೂಡಿ ಯುದ್ಧಾಂಗಣಕ್ಕೆ ಬಂದನು.

ದ್ವಾದಶಾಕ್ಷೌಹಿಣೀಭಿಶ್ಚ ಸೇನಾಭಿಃ ಸಹ ಸಂಯುಗೇ ।
ಕೋಪೇನ ಯುಯುಧೇ ರಾಮಂ ಸಿಂಹಃಸಿಂಹೋ ಯಥಾ ರಣೇ ॥ ೧೮ ॥

ಭೃಗುಃ ಶಂಕರಶೂಲೇನ ನೃಪಲಕ್ಷಂ ನಿಹತ್ಯ ಚ ।
ದ್ವಾದಶಾಕ್ಷೌಹಿಣೀಂ ಸೇನಾಮಹನ್ಪ್ಯೈ ಪರ್ಶುನಾ ಬಲೀ ॥ ೧೯ ॥

ನಿಹತ್ಯ ಸರ್ವಾಃ ಸೇನಾಶ್ಚ ಸುಚಂದ್ರಂ ಯುಯುಧೇ ಬಲೀ ।
ನಾಗಾಸ್ತ್ರಂ ಪ್ರೇರಯಾಮಾಸ ನಿಹೃತಂ ತಂ ಭೃಗುಃ ಸ್ವಯಂ ॥ ೨೦ ॥

ನಾಗಪಾಶಂ ಚ ಚಿಚ್ಛೇದ ಗಾರುಡೇನ ನೃಪೇಶ್ವರಃ ।
ಜಹಾಸ ಚ ಭೃಗುಂ ರಾಜಾ ಸಮರೇ ಚ ಪುನಃ ಪುನಃ ॥ ೨೧ ॥

ಭೃಗುರ್ನಾರಾಯಣಾಸ್ತ್ರಂ ಚ ಚಿಕ್ಷೇಪ ರಣಮೂರ್ಧನಿ ।
ಅಸ್ತ್ರಂ ಯಯೌ ತಂ ನಿಹಂತುಂ ಶತಸೂರ್ಯಸಮಪ್ರಭಂ ॥ ೨೨ ॥

---

೧೮. ಜತೆಗೆ ಹನ್ನೆರಡಕ್ಷೌಹಿಣೀ ಸೈನ್ಯವನ್ನೂ ತೆಗೆದುಕೊಂಡು ಬಂದು. ಸಿಂಹವನ್ನು ಸಿಂಹವು ಎದುರಿಸಿ ಯುದ್ಧಮಾಡುವಂತೆ ಪರಶುರಾಮನನ್ನು ಎದುರಿಸಿ ಕಾದಾಡಿದನು.

೧೯. ಪರಾಕ್ರಮಿಯಾದ ಪರಶುರಾಮನು ಶಂಕರನ ಶೂಲಾಯುಧದಿಂದ ಆ ಲಕ್ಷ ರಾಜರುಗಳನ್ನೂ ಸಂಹರಿಸಿ, ತನ್ನ ಪರಶು (ಕೊಡಲಿ)ವಿನಿಂದ ಹನ್ನೆರಡ ಕ್ಷೌಹಿಣೀ ಸೇನೆಯನ್ನೂ, ನಾಶಗೊಳಿಸಿದನು.

೨೦. ಈರೀತಿ ಸಕಲ ಸೈನ್ಯವನ್ನೂ, ಸಂಹರಿಸಿದನಂತರ ಪರಶುರಾಮನು ಸುಚಂದ್ರನೊಡನೆ ಯುದ್ಧಮಾಡಲು ಬಂದು ಅವನ ಮೇಲೆ ಸರ್ಪಾಸ್ತ್ರವನ್ನು ಪ್ರಯೋಗಿಸಿದನು.

೨೧. ಆ ಸುಚಂದ್ರರಾಜನಾದರೋ ಗಾರುಡಾಸ್ತ್ರದಿಂದ ಆ ನಾಗಾಸ್ತ್ರವನ್ನು ಕತ್ತರಿಸಿ, ಪರಶುರಾಮನನ್ನು ಮತ್ತೆ ಮತ್ತೆ ಯುದ್ಧರಂಗದಲ್ಲಿ ಹಾಸ್ಯಮಾಡಿದನು.

೨೨. ಆಗ ಕೋಪದಿಂದ ಭಾರ್ಗವನು ನಾರಾಯಣಾಸ್ತ್ರವನ್ನು ಬಿಡಲು ನೂರುಸೂರ್ಯರಂತೆ ತೇಜಸ್ವಿಯಾದ ಆ ಅಸ್ತ್ರವು ಆ ರಾಜನನ್ನು ಕೊಲ್ಲಲು ಸಮಾಪಿಸಿತು.

ದೃಷ್ಟ್ವಾಽಸ್ತ್ರಂ ನೃಪಶಾರ್ದೂಲಶ್ಚಾವರುಹ್ಯ ರಥಾತ್ಕ್ಷಣಾತ್ ।
ನ್ಯಸ್ತಶಸ್ತ್ರಃ ಪ್ರಾಣಮಚ್ಚ ಸ್ತುತ್ವಾ ನಾರಾಯಣಂ ಶಿವಂ ॥ ೨೩ ॥

ತಮೇವ ಪ್ರಣತಂ ತ್ಯಕ್ತ್ವಾ ಯಯೌ ನಾರಾಯಣಾಂತಿಕಂ ।
ಅಸ್ತ್ರರಾಜೋ ಭಗವತೋ ರಾಮಃ ಸಂಪ್ರಾಪ ವಿಸ್ಮಯಂ ॥ ೨೪ ॥

ಭೃಗುಃ ಶಕ್ತಿಂ ಚ ಮುಸಲಂ ತೋಮರಂ ಪಟ್ಟಿಶಂ ತಥಾ ।
ಗದಾಂ ಪರ್ಶುಂ ಚ ಕೋಪೇನ ಚಿಕ್ಷಿಪೇ ತಜ್ಜಿಘಾಂಸಯಾ ॥ ೨೫ ॥

ಜಗ್ರಾಹ ಕಾಲೀ ತಾನ್ಸರ್ವಾನ್ಸುಚಂದ್ರಸ್ಯಂದನಸ್ಥಿತಾ ।
ಚಿಕ್ಷೇಪ ಶಿವಶೂಲಂ ಸ ನೃಪಮಾಲ್ಯಂ ಬಭೂವ ತತ್ ॥ ೨೬ ॥

ದದರ್ಶ ಪುರತೋ ರಾಮೋ ಭದ್ರಕಾಲೀಂ ಜಗತ್ಪ್ರಸೂಂ ।
ವಹಂತೀಂ ಮುಂಡಮಾಲಾಂ ಚ ವಿಕಟಾಸ್ಯಾಂ ಭಯಂಕರೀಂ ॥ ೨೭ ॥

---

೨೩. ಆ ಅಸ್ತ್ರವು ಬರುತ್ತಿದ್ದುದನ್ನು ಕಂಡು ಸುಚಂದ್ರರಾಜನು ಕೂಡಲೇ ರಥದಿಂದಿಳಿದು, ತನ್ನ ಅಸ್ತ್ರವನ್ನು ಕೆಳಗಿಟ್ಟು, ನಾರಾಯಣನನ್ನೂ, ಶಿವನನ್ನೂ, ಸ್ತುತಿಸುತ್ತ ಆ ನಾರಾಯಣಾಸ್ತ್ರಕ್ಕೆ ಸಾಷ್ಟಾಂಗವೆರಗಿದನು.

೨೪. ಆಗ ಆ ದಿವ್ಯಾಸ್ತ್ರವು ತನಗೆ ನಮಸ್ಕರಿಸಿ ಭಕ್ತನನ್ನು ಬಿಟ್ಟು ನಾರಾಯಣನ ಸಮೀಪಕ್ಕೆ ಹೊರಟುಹೋಗಲು ಪರಶುರಾಮನು ಆಶ್ಚರ್ಯಗೊಂಡನು.

೨೫. ಆಗ ಅತ್ಯಂತ ಕುಪಿತನಾದ ಭಾರ್ಗವನು ಆ ಸುಚಂದ್ರನನ್ನು ಸಂಹರಿಸಲಿಚ್ಛೆಯಿಂದ ಶಕ್ತಿ, ಮುಸಲ (ಒನಕೆ)ತೋಮರ, ಪಟ್ಟಿಶ, ಗದಾ, ಪರಶು ಮುಂತಾದ ಆಯುಧಗಳ ಸಮೂಹವನ್ನು ಏಕಕಾಲದಲ್ಲಿ ಪ್ರಯೋಗಿಸಿದನು

೨೬. ಸುಚಂದ್ರನ ರಥದಲ್ಲಿದ್ದ ಭದ್ರಕಾಳಿಯು ಆ ಆಯುಧವನ್ನೆಲ್ಲ ನುಂಗಿಬಿಟ್ಟಳು. ಅಲ್ಲದೆ ಭಾರ್ಗವನು ಪ್ರಯೋಗಿಸಿದ ಶೂಲಾಯುಧವೂ ಕೂಡ ಆ ರಾಜನ ಕಂಠದಲ್ಲಿ ಹಾರವಾಗಿ ಕುಳಿತಿತು.

೨೭. ಆಗ ಪರಶುರಾಮನು ಜಗನ್ಮಾತೆಯಾದ ಭದ್ರಕಾಳಿಯನ್ನು ಮುಂದೆ ನೋಡಿದನು. ವಿಕಟಾನನವುಳ್ಳ ಆ ದೇವಿಯು ಧರಿಸಿರುವ ಮುಂಡಮಾಲೆಗಳಿಂದ ಭಯಂಕರಳಾಗಿದ್ದಳು.

ವಿಹಾಯ ಶಸ್ತ್ರಮಸ್ತ್ರಂ ಚ ಪಿನಾಕಂ ಚ ಭೃಗುಸ್ತದಾ ।
ತುಷ್ಟಾವ ತಾಂ ಮಹಾಮಾಯಾಂ ಭಕ್ತಿನಮ್ರಾತ್ಮಕಂಧರಃ ॥ ೨೮ ॥

॥ ಪರಶುರಾಮ ಉವಾಚ ॥

ನಮಃ ಶಂಕರಕಾಂತಾಯೈ ಸಾರಾಯೈ ತೇ ನಮೋ ನಮಃ ।
ನಮೋ ದುರ್ಗತಿನಾಶಿನ್ಯೈ ಮಾಯಾಯೈ ತೇ ನಮೋ ನಮಃ ॥ ೨೯ ॥

ನಮೋ ನಮೋ ಜಗದ್ಧಾತ್ರ್ಯೈ ಜಗತ್ಕರ್ತ್ರ್ಯೈ ನಮೋ ನಮಃ ।
ನಮೋಽಸ್ತು ತೇ ಜಗನ್ಮಾತ್ರೇ ಕಾರಣಾಯೈ ನಮೋ ನಮಃ ॥ ೩೦ ॥

ಪ್ರಸೀದ ಜಗತಾಂ ಮಾತಃ ಸೃಷ್ಟಿಸಂಹಾರಕಾರಿಣಿ ।
ತ್ವತ್ಪಾದೌ ಶರಣಂ ಯಾಮಿ ಪ್ರತಿಜ್ಞಾಂ ಸಾರ್ಥಿಕಾಂ ಕುರು ॥ ೩೧ ॥

ತ್ವಯಿ ಮೇ ವಿಮುಖಾಯಾಂ ಚ ಕೋ ಮಾಂ ರಕ್ಷಿತುಮೀಶ್ವರಃ ।
ತ್ವಂ ಪ್ರಸನ್ನಾ ಭವ ಶುಭೇ ಮಾಂ ಭಕ್ತಂ ಭಕ್ತವತ್ಸಲೇ ॥ ೩೨ ॥

---

೨೮. ಕೂಡಲೆ ಪರಶುರಾಮನು ಶಸ್ತ್ರಾಸ್ತ್ರಗಳನ್ನೂ ಪಿನಾಕಧನುಸ್ಸನ್ನೂ ಕೆಳಗಿಟ್ಟು, ಭಕ್ತಿಯಿಂದ ವಿನಮ್ರಕಂಧರನಾಗಿ ಆ ಮಹಾಮಾಯೆಯನ್ನು ಸ್ತುತಿಸಿದನು.

೨೯. ಪರಶುರಾಮ :—ಶಂಕರನ ಕಾಂತೆಯೂ. ಸಾರಾತ್ಮಕಳೂ ಆದ ನಿನಗೆ ನಮಿಸುವೆನು. ದುರ್ಗತಿನಾಶಕಳೂ, ಮಾಯಾಸ್ವರೂಪಿಣಿಯೂ ಆದ ನಿನಗೆ ವಂದಿಸುವೆನು.

೩೦. ಜಗನ್ಮಾತೆಯೂ, ಜಗತ್ಕರ್ತ್ರಿಯೂ ಆದ ನಿನಗೆ ನಮಿಸುವೆನು. ಜಗತ್ತಿನ ಕಾರಣಗಳಿಗೆಲ್ಲ ಆದಿಕಾರಣಿಯಾದ ನಿನಗೆ ಸಾಷ್ಟಾಂಗವೆರಗುವೆನು.

೩೧. ಸೃಷ್ಟಿಸಂಹಾರಕಾರಣಿಯಾದ ಎಲೌ ಜಗನ್ಮಾತೆಯೇ, ನನ್ನಲ್ಲಿ ಪ್ರಸನ್ನಳಾಗು. ನಿನ್ನ ಪಾದಗಳನ್ನು ಮರೆಹೊಗುವೆನು. ನನ್ನ ಪ್ರತಿಜ್ಞೆಯನ್ನು ಸಾಫಲ್ಯಗೊಳಿಸು.

೩೨. ನನ್ನ ಪ್ರಾರ್ಥನೆಯು ನಿನ್ನಲ್ಲಿ ವ್ಯರ್ಥವಾದರೆ ನನ್ನನ್ನು ರಕ್ಷಿಸುವರಾರು? ಎಲೌ ಭಕ್ತವತ್ಸಲೆಯೇ, ಭಕ್ತನಾದ ನನ್ನಲ್ಲಿ ದಯೆತೋರಿ ಪ್ರಸನ್ನಳಾಗು.

ಯುಷ್ಮಾಭಿಃ ಶಿವಲೋಕೇ ಚ ಮಹ್ಯಂ ದತ್ತೋ ವರಃ ಪುರಾ ।
ತಂ ವರಂ ಸಫಲಂ ಕರ್ತುಂ ತ್ವಮರ್ಹಸಿ ವರಾನನೇ ॥ ೩೩ ॥

ರೇಣುಕೇಯಸ್ತವಂ ಶ್ರುತ್ವಾ ಪ್ರಸನ್ನಾಽಭೂಚ್ಚ ಚಂಡಿಕಾ ।
ಮಾ ಭೈರಿತ್ಯೇವಮುಕ್ತ್ವಾತು ತತ್ರೈವಾಂತರಧೀಯತ ॥ ೩೪ ॥

ಏತದ್ಭೃಗುಕೃತಂ ಸ್ತೋತ್ರಂ ಭಕ್ತಿಯುಕ್ತಶ್ಚ ಯಃ ಪಠೇತ್ ।
ಮಹಾಭಯಾತ್ಸಮುತ್ತೀರ್ಣಃ ಸ ಭವೇದೇವ ಲೀಲಯಾ ॥ ೩೫ ॥

ಸ ಪೂಜಿತಶ್ಚ ತ್ರೈಲೋಕ್ಯೇ ತತ್ರೈವ ವಿಜಯೀ ಭವೇತ್ ।
ಜ್ಞಾನಿಶ್ರೇಷ್ಠೋ ಭವೇಚ್ಚೈವ ವೈರಿಪಕ್ಷವಿಮರ್ದಕಃ ॥ ೩೬ ॥

ಏತಸ್ಮಿನ್ನಂತರೇ ಬ್ರಹ್ಮಾ ಭೃಗುಂ ಧರ್ಮಭೃತಾಂ ವರಂ ।
ಆಗತ್ಯ ಕಥಯಾಮಾಸ ರಹಸ್ಯಂ ರಾಮಮೇವ ಚ ॥ ೩೭ ॥

---

೩೩. ಪೂರ್ವದಲ್ಲಿ ನಾನು ಶಿವನೆಡೆಗೆ ಬಂದಿದ್ದಾಗ ನನಗೆ ನೀನೇ ವರವನ್ನು ಕೊಟ್ಟೆ. ಆ ವರವನ್ನು ಸಫಲಗೊಳಿಸಲು ವರದಳಾದ ನೀನಲ್ಲದೆ ಮತ್ತಾರು ಸಮರ್ಥರು ?

೩೪. ಈ ರೀತಿಯಾದ ಪರಶುರಾಮನ ಸ್ತೋತ್ರವನ್ನು ಕೇಳಿ ಪ್ರಸನ್ನಳಾದ ಜಗದಂಬಿಕೆಯು "ನೀನು ಹೆದರಬೇಡ" ಎಂದು ಆಶ್ವಾಸನೆಗೊಳಿಸಿ ಅಲ್ಲೇ ಕಣ್ಮರೆಯಾದಳು.

೩೫. ಭಾರ್ಗವರಾಮನು ಮಾಡಿದ ಈ ಸ್ತೋತ್ರವನ್ನು ಭಕ್ತಿಪೂರ್ವಕವಾಗಿ ಪಠಿಸುವವರು, ಲೀಲಾಜಾಲವಾಗಿ ಮಹಾಭಯದಿಂದಲೂ ಪಾರಾಗುವರು

೩೬. ಈ ಸ್ತೋತ್ರವನ್ನು ಪಠಿಸುವವನು ತ್ರಿಲೋಕಪೂಜಿತನೂ, ವಿಜಯಿಯೂ, ಜ್ಞಾನಿಗಳಲ್ಲಿ ಉತ್ತಮನೂ, ಶತ್ರುಪಕ್ಷನಾಶಕನೂ ಆಗುವುದರಲ್ಲಿ ಸಂಶಯವಿಲ್ಲ.

೩೭. ಈ ಮಧ್ಯದಲ್ಲಿ ಬ್ರಹ್ಮನು ಅಲ್ಲಿಗೆ ಬಂದು ಧರ್ಮಶ್ರೇಷ್ಠನಾದ ಪರಶುರಾಮನನ್ನು ಕುರಿತು ರಹಸ್ಯವಾಗಿ ಕೆಲವು ಮಾತುಗಳನ್ನು ಹೇಳಿದನು.

|| ಬ್ರಹ್ಮೋವಾಚ ||

ಶೃಣು ರಾಮ ಮಹಾಭಾಗ ರಹಸ್ಯಂ ಪೂರ್ವಮೇವ ಚ ।
ಸುಚಂದ್ರಜಯಹೇತುಂ ಚ ಪ್ರತಿಜ್ಞಾ ಫಲಮೇವ ಚ || ೩೮ ||

ದಶಾಕ್ಷರೀ ಮಹಾವಿದ್ಯಾ ದತ್ತಾ ದುರ್ವಾಸಸಾ ಪುರಾ ।
ಸುಚಂದ್ರಾಯೈವ ಕವಚಂ ಭದ್ರಕಾಲ್ಯಾಃ ಸುದುರ್ಲಭಂ || ೩೯ ||

ಕವಚಂ ಭದ್ರಕಾಲ್ಯಾಶ್ಚ ದೇವಾನಾಂ ಚ ಸುದುರ್ಲಭಂ ।
ಕವಚಂ ತದ್ಗಲೇ ಯಸ್ಯ ಸರ್ವಶತ್ರುವಿಮರ್ದಕಂ || ೪೦ ||

ಅತೀವ ಪೂಜ್ಯಂ ಶಸ್ತಂ ಚ ತ್ರೈಲೋಕ್ಯಜಯಕಾರಣಂ ।
ತಸ್ಮಿನ್ಸ್ಥಿತೇ ಚ ಕವಚೇ ಕಸ್ತ್ವಂ ಜೇತುಮಲಂ ಭುವಿ || ೪೧ ||

ಭೃಗೋ ಗಚ್ಛತು ಭಿಕ್ಷಾರ್ಥಂ ಕರೋತು ಪ್ರಾರ್ಥನಾಂ ನೃಪಂ ।
ಸೂರ್ಯವಂಶೋದ್ಭವೋ ರಾಜಾ ದಾತಾ ಪರಮಧಾರ್ಮಿಕಃ || ೪೨ ||

---

೩೮. ಬ್ರಹ್ಮ :—ಎಲೈ ಮಹಾಮಹಿಮನಾದ ರಾಮನೇ, ಸುಚಂದ್ರನ ಜಯಕ್ಕೆ ಕಾರಣವೂ, ನಿನ್ನ ಪ್ರತಿಜ್ಞಾಪೂರ್ತಿಗೆ ಸಾಧಕವೂ ಆದ ರಹಸ್ಯವನ್ನು ಹೇಳುವೆನು ಕೇಳು.

೩೯. ಪೂರ್ವದಲ್ಲಿ ದೂರ್ವಾಸಮಹರ್ಷಿಯು ಸುಚಂದ್ರನಿಗೆ ದಶಾಕ್ಷರೀ ಮಹಾವಿದ್ಯೆಯನ್ನೂ, ದುರ್ಲಭವಾದ ಭದ್ರಕಾಳಿಯ ಕವಚವನ್ನೂ ಉಪದೇಶಿಸಿದನು.

೪೦. ಭದ್ರಕಾಳಿಯ ಕವಚವು ದೇವತೆಗಳಿಗೂ ಸುಲಭಸಾಧ್ಯವಲ್ಲ. ಈ ಕವಚವನ್ನು ಕಂಠದಲ್ಲಿ ಧರಿಸುವವರು ಸಕಲ ಶತ್ರುಗಳನ್ನೂ ನಿರ್ಮೂಲಗೊಳಿಸಲು ಶಕ್ತರಾಗುವರು.

೪೧. ಅತ್ಯಂತ ಪೂಜ್ಯವೂ ಪ್ರಶಸ್ತವೂ ಆದ ಈ ಕವಚವು ತ್ರಿಲೋಕವಿಜಯಕ್ಕೂ ಕಾರಣವೆನಿಸುವುದು. ಸುಚಂದ್ರನು ಅಂಥ ಕವಚವನ್ನು ಧರಿಸಿರುವಾಗ ಅವನನ್ನು ಜಯಿಸಲು ನಿನ್ನಿಂದ ಸಾಧ್ಯವೇ ?

೪೨. ಆದುದರಿಂದ ಎಲೈ ಭಾರ್ಗವನೇ, ನೀನು ಆ ರಾಜನ ಸಮೀಪಕ್ಕೆ ಭಿಕ್ಷುಕನಂತೆ ಹೋಗಿ ಕವಚವನ್ನು ಯಾಚಿಸು. ಸೂರ್ಯವಂಶೋತ್ಪನ್ನನೂ, ಪರಮಧರ್ಮಿಷ್ಠನೂ ಆದ ಆ ರಾಜನು ದಾನಮಾಡುವನು.

ಸ್ಪ್ರಾಣಾಂಶ್ಚ ಕವಚಂ ಮಂತ್ರಂ ಸರ್ವಂ ದಾಸ್ಯತಿ ನಿಶ್ಚಿತಂ　　|| ೪೩ ||
ಭೃಗುಃ ಸಂನ್ಯಾಸಿವೇಷೇಣ ಗತ್ವಾ ರಾಜಾಂತಿಕಂ ಮುನೇ ।

ಭಿಕ್ಷಾಂ ಚಕಾರ ಮಂತ್ರಂ ಚ ಕವಚಂ ಪರಮಾದ್ಭುತಂ　　|| ೪೪ ||

ರಾಜಾ ದದೌ ಚ ತನ್ಮಂತ್ರಂ ಕವಚಂ ಪರಮಾದರಾತ್ ।
ತತಃ ಶಂಕರಶೂಲೇನ ತಂ ಜಘಾನ ನೃಪಂ ಭೃಗುಃ　　|| ೪೫ ||

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ತೃತೀಯೇ ಗಣಪತಿಖಂಡೇ ನಾರದನಾರಾಯಣಸಂವಾದೇ ಭೃಗುಕಾರ್ತವೀರ್ಯಯುದ್ಧ ವರ್ಣನಂ ನಾಮ ಷಟ್‌ತ್ರಿಂಶತ್ತಮೋಽಧ್ಯಾಯಃ

---

೪೩. ಆ ಕವಚ ಮತ್ತು ಮಂತ್ರಗಳನ್ನು ದಾನಮಾಡುವುದಲ್ಲದೆ ತನ್ನ ಪ್ರಾಣಗಳನ್ನೂ ನಿಶ್ಚಿತವಾಗಿ ದಾನಮಾಡುವನು.

೪೪. ಎಲೈ ನಾರದನೇ, ಬ್ರಹ್ಮನ ಮಾತನ್ನು ಕೇಳಿ ಭಾರ್ಗವನು ಸಂನ್ಯಾಸಿಯ ವೇಷವನ್ನು ಧರಿಸಿ, ರಾಜನ ಹತ್ತಿರಕ್ಕೆ ಹೋಗಿ, ಅತ್ಯದ್ಭುತವಾದ ಮಂತ್ರ ಕವಚಗಳನ್ನು ಯಾಚನೆ ಮಾಡಿದನು.

೪೫. ಆ ಸುಚಂದ್ರನೂ ಕೂಡ ಅತ್ಯಾದರದಿಂದ ಆ ಮಂತ್ರ ಕವಚಗಳನ್ನು ಪರಶುರಾಮನಿಗೆ ದಾನಮಾಡಿದನು. ಅನಂತರ ಪರಶುರಾಮನು ಶಂಕರನ ಶೂಲಾಯುಧದಿಂದ ಆ ರಾಜನನ್ನು ಸಂಹರಿಸಿದನು.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಗಣಪತಿ ಖಂಡದಲ್ಲಿ ಭಾರ್ಗವ ಕಾರ್ತವೀರ್ಯರ ಯುದ್ಧವರ್ಣನಾತ್ಮಕವಾದ ಮೂವತ್ತಾರನೆಯ ಅಧ್ಯಾಯವು ಮುಗಿದುದು.

ಮೂವತ್ತಾರನೆಯ ಅಧ್ಯಾಯದ ಸಾರಾಂಶ

ಮತ್ಸ್ಯರಾಜನ ಮರಣಾನಂತರ ಕಾರ್ತವೀರ್ಯನ ಪಕ್ಷದಿಂದ ಬೃಹದ್ಬಲನೇ ಮುಂತಾದ ಕೆಲವು ವೀರರು ಮುಂದೆ ಬಂದು ಪರಶುರಾಮನ ಸಹೋದರರನ್ನು ಸೋಲಿಸಿದರು. ಆಗ ಮಹಾಪರಾಕ್ರಮಿಯಾದ ಪರಶುರಾಮನು ಪಿನಾಕಧರನಾಗಿ ತಾನೇ ಯುದ್ಧರಂಗಕ್ಕೆ ಬಂದು ಆ ವೀರರನ್ನೆಲ್ಲ ಒಬ್ಬೊಬ್ಬರನ್ನಾಗಿ ತುಂಡರಿಸಿದನು. ಅವನ ಪರಾಕ್ರಮವನ್ನು ನೋಡಿ ಭೀತರಾದ ಅನೇಕ ಮಹಾರಥಿಕರು ಕಾರ್ತವೀರ್ಯನನ್ನು ರಕ್ಷಣೆ ಮಾಡಿಕೊಂಡು ಅವನೊಡನೆ ಯುದ್ಧಮಾಡಲುಪಕ್ರಮಿಸಿದರು. ಆಗ ಪರಶುರಾಮನು ಅವರೆಲ್ಲರನ್ನೂ ದಿವ್ಯಾಸ್ತ್ರಗಳಿಂದ ಸಂಹರಿಸಲು, ಸುಚಂದ್ರನೆಂಬ ಸೂರ್ಯವಂಶದ ವೀರನೊಬ್ಬನು, ಹನ್ನೆರಡಕ್ಷೌಹಿಣೀ ಸೈನ್ಯದೊಡನೆ ಬಂದು ಭಾರ್ಗವನನ್ನು ಎದುರಿಸಿದನು. ತಾನು ಪ್ರಯೋಗಿಸಿದ ಮಂತ್ರಾಸ್ತ್ರಗಳೆಲ್ಲವೂ ವ್ಯರ್ಥವಾದುದನ್ನು ಕಂಡು ಕುಪಿತನಾದ ಭಾರ್ಗವನು ನಾರಾಯಣಾಸ್ತ್ರವನ್ನು ಪ್ರಯೋಗಿಸಲು, ಆ ಅಸ್ತ್ರವು ಹರಿಭಕ್ತನಾದ ಸುಚಂದ್ರನನ್ನು ಸಂಹರಿಸಲಾಗದೆ ನಾರಾಯಣನ ಸಮೀಪಕ್ಕೆ ಹೊರಟುಹೋಯಿತು. ಆಗ ಅಚ್ಚರಿಗೊಂಡ ಭಾರ್ಗವನು ಶಕ್ತಿಯೇ ಮುಂತಾದ ಅನೇಕ ದಿವ್ಯಾಸ್ತ್ರಗಳನ್ನು ಆ ಸುಚಂದ್ರನಮೇಲೆ ಏಕಕಾಲದಲ್ಲಿಯೇ ಪ್ರಯೋಗಿಸಲು ಆ ಅಸ್ತ್ರಗಳನ್ನೆಲ್ಲ ಅವನ ರಥದಲ್ಲಿದ್ದ ಭದ್ರಕಾಳಿಯು ನುಂಗಿಬಿಟ್ಟಳು. ಆಗ ಪರಶುರಾಮನು ಭಯಭಕ್ತಿಯಿಂದ ಭದ್ರಕಾಳಿಯನ್ನು ಸ್ತುತಿಸಿ ಅವಳಿಂದ ಅಭಯದಾನ ಹೊಂದಿದನು. ಈ ಸಮಯಕ್ಕೆ ಸರಿಯಾಗಿ ಬ್ರಹ್ಮನು ಅಲ್ಲಿಗೆ ಬಂದು, ಸುಚಂದ್ರನು ಭದ್ರಕಾಳಿಯ ಕವಚವನ್ನು ಧರಿಸಿರುವವರೆಗೆ ಅವನನ್ನು ಸೋಲಿಸಲು ಸಾಧ್ಯವಿಲ್ಲವೆಂದು ಪರಶುರಾಮನಿಗೆ ತಿಳಿಸಲು, ಪರಶುರಾಮನು ಭಿಕ್ಷುಕನಂತೆ ಆ ರಾಜನಲ್ಲಿಗೆ ಹೋಗಿ ಆ ಕವಚವನ್ನು ಬೇಡಿ ತಂದುದಲ್ಲದೆ ಅವನನ್ನು ಲೀಲಾಜಾಲವಾಗಿ ಸಂಹರಿಸಿದನು.

—॥ ಓಂ ॥—

—॥ ಶ್ರೀ ಗಣೇಶಾಯ ನಮಃ ॥—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಗಣಪತಿಖಂಡೇ

ಸಪ್ತತ್ರಿಂಶತ್ತಮೋಽಧ್ಯಾಯಃ

॥ ನಾರದ ಉವಾಚ ॥

ಕವಚಂ ಶ್ರೋತುಮಿಚ್ಛಾಮಿ ತಾಂ ಚ ವಿದ್ಯಾಂ ದಶಾಕ್ಷರೀಂ ।
ಗೋಪನೀಯಂ ಚ ಕವಚಂ ॥ ೧ ॥

॥ ನಾರಾಯಣ ಉವಾಚ ॥

ಶೃಣು ನಾರದ ವಕ್ಷ್ಯಾಮಿ ಮಹಾವಿದ್ಯಾಂ ದಶಾಕ್ಷರೀಂ ।
ಗೋಪನೀಯಂ ಚ ಕವಚಂ ತ್ರಿಷು ಲೋಕೇಷು ದುರ್ಲಭಂ ॥ ೨ ॥

ಮೂವತ್ತೇಳನೆಯ ಅಧ್ಯಾಯವು

೧. ನಾರದ:—ಸರ್ವಜ್ಞನಾದ ಎಲೈ ನಾರಾಯಣ ಮಹರ್ಷಿಯೇ, ಈಗ ಭದ್ರಕಾಳಿಯ ಕವಚವನ್ನೂ ದಶಾಕ್ಷರೀವಿದ್ಯೆಯನ್ನೂ ನಿನ್ನಿಂದ ತಿಳಿಯ ಲಿಚ್ಛಿಸುತ್ತೇನೆ.

೨. ನಾರಾಯಣ ಮಹರ್ಷಿ:— ಎಲೈ ನಾರದನೇ, ದಶಾಕ್ಷರೀ ಮಹಾ ವಿದ್ಯೆಯನ್ನೂ, ಅತ್ಯಂತ ಗೋಪ್ಯವೂ, ತ್ರಿಲೋಕ ದುರ್ಲಭವೂ ಆದ ಭದ್ರಕಾಳಿಯ ಕವಚವನ್ನೂ ಹೇಳುವೆನು ಕೇಳು.

ಓಂ ಹ್ರೀಂ ಶ್ರೀಂ ಕ್ಲೀಂ ಕಾಲಿಕಾಯೈ ಸ್ವಾಹೇತಿ ಚ ದಶಾಕ್ಷರೀಂ ।
ದುರ್ವಾಸಾ ಹಿ ದದೌ ರಾಜ್ಞೇ ಪುಷ್ಕರೇ ಸೂರ್ಯಪರ್ವಣಿ ॥ ೩ ॥

ದಶಲಕ್ಷಜಪೇನೈವ ಮಂತ್ರಸಿದ್ಧಿಃ ಕೃತಾ ಪುರಾ ।
ಪಂಚಲಕ್ಷಜಪೇನೈವ ಪಠನ್ಕವಚಮುತ್ತಮಂ ॥ ೪ ॥

ಬಭೂವ ಸಿದ್ಧ ಕವಚೋಽಪ್ಯಯೋಧ್ಯಾಮಾಜಗಾಮ ಸಃ ।
ಕೃತ್ಸ್ನಾಂ ಹಿ ಪೃಥಿವೀಂ ಜಿಗ್ಯೇ ಕವಚಸ್ಯ ಪ್ರಸಾದತಃ ॥ ೫ ॥

॥ ನಾರದ ಉವಾಚ ॥

ಶ್ರುತಾ ದಶಾಕ್ಷರೀ ವಿದ್ಯಾ ತ್ರಿಷು ಲೋಕೇಷು ದುರ್ಲಭಾ ।
ಅಧುನಾ ಶ್ರೋತುಮಿಚ್ಛಾಮಿ ಕವಚಂ ಬ್ರೂಹಿ ಮೇ ಪ್ರಭೋ ॥ ೬ ॥

॥ ನಾರಾಯಣ ಉವಾಚ ॥

ಶೃಣು ವಕ್ಷ್ಯಾಮಿ ವಿಪ್ರೇಂದ್ರ ಕವಚಂ ಪರಮಾದ್ಭುತಂ ।
ನಾರಾಯಣೇನ ಯದ್ದತ್ತಂ ಕೃಪಯಾ ಶೂಲಿನೇ ಪುರಾ ॥ ೭ ॥

---

೩. 'ಓಂ ಹ್ರೀಂ ಶ್ರೀಂ ಕ್ಲೀಂ ಕಾಲಿಕಾಯೈ ಸ್ವಾಹಾ' ಎಂಬ ಹತ್ತಕ್ಷರದ ಮಹಾಮಂತ್ರವನ್ನು ದೂರ್ವಾಸಮಹರ್ಷಿಯು ಪುಷ್ಕರ ಕ್ಷೇತ್ರದಲ್ಲಿ ಸೂರ್ಯೋಪರಾಗ ಸಮಯದಲ್ಲಿ ಸುಚಂದ್ರನಿಗೆ ಉಪದೇಶಿಸಿದನು.

೪-೫. ಆ ರಾಜನು ಹತ್ತುಲಕ್ಷಬಾರಿ ಜಪಿಸಿ ಆ ಮಂತ್ರಸಿದ್ಧಿಹೊಂದಿದನು. ಅಲ್ಲದೆ ಐದು ಲಕ್ಷಬಾರಿ ಭದ್ರಕಾಳಿಯ ಕವಚವನ್ನು ಜಪಿಸಿ, ಸಿದ್ಧಿಪಡೆದು, ಅಯೋಧ್ಯೆಗೆ ಬಂದು ಆ ಕವಚದ ಅನುಗ್ರಹದಿಂದ ಸಮಸ್ತ ಭೂಮಂಡಲವನ್ನೂ ಜಯಿಸಿದನು.

೬. ನಾರದ :—ಎಲೈ ಪ್ರಭುವೇ, ತ್ರಿಲೋಕದುರ್ಲಭವಾದ ದಶಾಕ್ಷರೀ ವಿದ್ಯೆಯನ್ನು ಕೇಳಿದುದಾಯಿತು. ಈಗ ಭದ್ರಕಾಳಿಯ ಕವಚವನ್ನು ನನಗೆ ತಿಳಿಯ ಹೇಳು.

೭. ನಾರಾಯಣ :—ಎಲೈ ಬ್ರಾಹ್ಮಣೋತ್ತಮನೇ, ಪೂರ್ವದಲ್ಲಿ ಶ್ರೀಮನ್ನಾರಾಯಣನು ದಯೆಯಿಂದ ಶಂಕರನಿಗೆ ಉಪದೇಶಿಸಿದ, ಅತ್ಯದ್ಭುತವಾದ ಕವಚವನ್ನು ಹೇಳುವೆನು, ಕೇಳು

ತ್ರಿಪುರಸ್ಯ ವಧೇ ಘೋರೇ ಶಿವಸ್ಯ ವಿಜಯಾಯ ಚ ।
ತದೇವ ಶೂಲಿನಾ ದತ್ತಂ ಪುರಾ ದುರ್ವಾಸಸೇ ಮುನೇ ॥ ೮ ॥

ದುರ್ವಾಸಸಾ ಚ ಯದ್ದತ್ತಂ ಸುಚಂದ್ರಾಯ ಮಹಾತ್ಮನೇ ।
ಅತಿ ಗುಹ್ಯತರಂ ತತ್ವಂ ಸರ್ವಮಂತ್ರೌಘವಿಗ್ರಹಂ ॥ ೯ ॥

ಓಂ ಹ್ರೀಂ ಶ್ರೀಂ ಕ್ಲೀಂ ಕಾಲಿಕಾಯೈ ಸ್ವಾಹಾ ಮೇ ಪಾತು ಮಸ್ತಕಂ ।
ಕ್ಲೀಂ ಕಪಾಲಂ ಸದಾ ಪಾತು ಹ್ರೀಂ ಹ್ರೀಂ ಹ್ರೀಮಿತಿ ಲೋಚನೇ ॥ ೧೦ ॥

ಓಂ ಹ್ರೀಂ ತ್ರಿಲೋಚನೇ ಸ್ವಾಹಾ ನಾಸಿಕಾಂ ಮೇ ಸದಾವತು ।
ಕ್ಲೀಂ ಕಾಲಿಕೇ ರಕ್ಷ ರಕ್ಷ ಸ್ವಾಹಾ ದಂತಾನ್ಸದಾವತು ॥ ೧೧ ॥

---

೮. ಈ ಕವಚಧಾರಣೆಯ ಮಹಿಮೆಯಿಂದ ತ್ರಿಪುರಾಸುರನನ್ನು ಸಂಹರಿಸಿ ವಿಜಯಶಾಲಿಯಾದ ಶಿವನು, ದೂರ್ವಾಸಮಹರ್ಷಿಗೆ ಈ ಕವಚವನ್ನು ಉಪದೇಶಿಸಿದನು.

೯. ಅತ್ಯಂತಗೋಪ್ಯವೂ, ಸಕಲಮಂತ್ರಸಾರವೂ ಆದ ಈ ಕವಚವನ್ನು ಮಹಾತ್ಮನಾದ ಸುಚಂದ್ರನಿಗೆ ದೂರ್ವಾಸಮಹರ್ಷಿಯು ಉಪದೇಶಿಸಿದನು.

೧೦. 'ಓಂ ಹ್ರೀಂ ಶ್ರೀಂ ಕ್ಲೀಂ ಕಾಲಿಕಾಯೈ ಸ್ವಾಹಾ' ಎಂಬ ಮಂತ್ರವು ನನ್ನ ಶಿರಸ್ಸನ್ನೂ, 'ಕ್ಲೀಂ ಕಾಲಿಕಾಯೈ ಸ್ವಾಹಾ' ಎಂಬುದು ಕಪಾಲವನ್ನೂ 'ಹ್ರೀಂ ಹ್ರೀಂ ಹ್ರೀಂ ಕಾಲಿಕಾಯೈ ಸ್ವಾಹಾ' ಎಂಬುದು ನನ್ನ ಕಣ್ಣುಗಳನ್ನೂ ಕಾಪಾಡಲಿ.

೧೧. 'ಓಂ ಹ್ರೀಂ ತ್ರಿಲೋಚನೇ ಸ್ವಾಹಾ' ಎಂಬುದು ನನ್ನ ಮೂಗನ್ನೂ, 'ಕ್ಲೀಂ ಕಾಲಿಕೇ ರಕ್ಷ ರಕ್ಷ ಸ್ವಾಹಾ' ಎಂಬುದು ಹಲ್ಲುಗಳನ್ನೂ ಸರ್ವದಾ ಕಾಪಾಡಲಿ.

ಕ್ಲೀಂ ಭದ್ರಕಾಲಿಕೇ ಸ್ವಾಹಾ ಪಾತು ಮೇऽಧರಯುಗ್ಮಕಂ ।
ಓಂ ಹ್ರೀಂ ಹ್ರೀಂ ಕ್ಲೀಂ ಕಾಲಿಕಾಯೈ ಸ್ವಾಹಾ ಕಂಠಂ ಸದಾವತು ॥ ೧೨ ॥

ಓಂ ಹ್ರೀಂ ಕಾಲಿಕಾಯೈ ಸ್ವಾಹಾ ಕರ್ಣಯುಗ್ಮಂ ಸದಾವತು ।
ಓಂ ಕ್ರೀಂ ಕ್ರೀಂ ಕ್ಲೀಂ ಕಾಲ್ಯೈ ಸ್ವಾಹಾ ಸ್ಕಂಧಂ ಪಾತು ಸದಾ ಮಮ ॥ ೧೩ ॥

ಓಂ ಕ್ರೀಂ ಭದ್ರಕಾಲ್ಯೈ ಸ್ವಾಹಾ ಮಮ ವಕ್ಷಃ ಸದಾವತು ।
ಓಂ ಕ್ಲೀಂ ಕಾಲಿಕಾಯೈ ಸ್ವಾಹಾ ಮಮ ನಾಭಿಂ ಸದಾವತು ॥ ೧೪ ॥

ಓಂ ಹ್ರೀಂ ಕಾಲಿಕಾಯೈ ಸ್ವಾಹಾ ಮಮ ಪೃಷ್ಠಂ ಸದಾವತು ।
ರಕ್ತಬೀಜವಿನಾಶಿನ್ಯೈ ಸ್ವಾಹಾ ಹಸ್ತೌ ಸದಾವತು ॥ ೧೫ ॥

ಓಂ ಹ್ರೀಂ ಕ್ಲೀಂ ಮುಂಡಮಾಲಿನ್ಯೈ ಸ್ವಾಹಾ ಪಾದೌ ಸದಾವತು ।
ಓಂ ಹ್ರೀಂ ಚಾಮುಂಡಾಯೈ ಸ್ವಾಹಾ ಸರ್ವಾಂಗಂ ಮೇ ಸದಾವತು ॥ ೧೬ ॥

---

೧೨. 'ಕ್ಲೀಂ ಭದ್ರಕಾಲಿಕೆ ಸ್ವಾಹಾ' ಎಂಬ ಮಂತ್ರವು ನನ್ನ ಎರಡು ತುಟಿಗಳನ್ನೂ, "ಓಂ ಹ್ರೀಂ ಹ್ರೀಂ ಕ್ಲೀಂ ಕಾಲಿಕಾಯೈ ಸ್ವಾಹಾ" ಎಂಬುದು ನನ್ನ ಕಂಠವನ್ನೂ ಸದಾ ರಕ್ಷಿಸಲಿ.

೧೩. "ಓಂ ಹ್ರೀಂ ಕಾಲಿಕಾಯೈ ಸ್ವಾಹಾ" ಎಂಬ ಮಂತ್ರವು ನನ್ನ ಎರಡುಕಿವಿಗಳನ್ನೂ, "ಓಂ ಕ್ಲೀಂ ಕ್ಲೀಂ ಕ್ಲೀಂ ಕಾಲ್ಯೈ ಸ್ವಾಹಾ" ಎಂಬುದು ನನ್ನ ಹೆಗಲುಗಳನ್ನೂ ಸರ್ವದಾ ರಕ್ಷಿಸಲಿ.

೧೪. "ಓಂ ಕ್ಲೀಂ ಭದ್ರಕಾಲ್ಯೈ ಸ್ವಾಹಾ" ಎಂಬುದು ನನ್ನ ವಕ್ಷಃಸ್ಥಳವನ್ನೂ "ಓಂ ಕ್ಲೀಂ ಕಾಲಿಕಾಯೈ ಸ್ವಾಹಾ" ಎಂಬುದು ನನ್ನ ನಾಭಿಪ್ರದೇಶವನ್ನೂ ಅನವರತ ರಕ್ಷಿಸಲಿ.

೧೫. "ಓಂ ಹ್ರೀಂ ಕಾಲಿಕಾಯೈ ಸ್ವಾಹಾ" ಎಂಬುದು ನನ್ನ ಎರಡು ಪೃಷ್ಠಭಾಗವನ್ನೂ, "ರಕ್ತಬೀಜ ವಿನಾಶಿನ್ಯೈ ಸ್ವಾಹಾ" ಎಂಬುದು ನನ್ನ ಎರಡು ಕೈಗಳನ್ನೂ ಸದಾ ಕಾಪಾಡಲಿ.

೧೬. "ಓಂ ಹ್ರೀಂ ಕ್ಲೀಂ ಮುಂಡಮಾಲಿನ್ಯೈ ಸ್ವಾಹಾ" ಎಂಬುದು ನನ್ನ ಪಾದದ್ವಯಗಳನ್ನೂ, "ಓಂ ಹ್ರೀಂ ಚಾಮುಂಡಾಯೈ ಸ್ವಾಹಾ" ಎಂಬುದು ನನ್ನ ಸಕಲಾವಯವಗಳನ್ನೂ ಸರ್ವದಾ ರಕ್ಷಿಸಲಿ.

ಪ್ರಾಚ್ಯಾಂ ಪಾತು ಮಹಾಕಾಲೀ ಚಾಗ್ನೇಯ್ಯಾಂ ರಕ್ತದಂತಿಕಾ ।
ದಕ್ಷಿಣೇ ಪಾತು ಚಾಮುಂಡಾ ನೈಋತ್ಯಾಂ ಪಾತು ಕಾಲಿಕಾ ॥ ೧೭ ॥

ಶ್ಯಾಮಾ ಚ ವಾರುಣೇ ಪಾತು ವಾಯವ್ಯಾಂ ಪಾತು ಚಂಡಿಕಾ ।
ಉತ್ತರೇ ವಿಕಟಾಸ್ಯಾ ಚಾಪ್ಯೈಶಾನ್ಯಾಂ ಸಾಟ್ಟಹಾಸಿನೀ ॥ ೧೮ ॥

ಪಾತೂರ್ಧ್ವಂ ಲೋಲಜಿಹ್ವಾ ಸಾ ಮಾಯಾದ್ಯಾ ಪಾತ್ವಧಃ ಸದಾ ।
ಜಲೇ ಸ್ಥಲೇ ಚಾಂತರಿಕ್ಷೇ ಪಾತು ವಿಶ್ವಪ್ರಸೂಃ ಸದಾ ॥ ೧೯ ॥

ಇತಿ ತೇ ಕಥಿತಂ ವತ್ಸ ಸರ್ವಮಂತ್ರೌಘವಿಗ್ರಹಂ।
ಸರ್ವೇಷಾಂ ಕವಚಾನಾಂ ಚ ಸಾರಭೂತಂ ಪರಾತ್ಪರಂ ॥ ೨೦ ॥

ಸಪ್ತದ್ವೀಪೇಶ್ವರೋ ರಾಜಾ ಸುಚಂದ್ರೋಽಸ್ಯ ಪ್ರಸಾದತಃ ।
ಕವಚಸ್ಯ ಪ್ರಸಾದೇನ ಮಾಂಧಾತಾ ಪೃಥಿವೀಪತಿಃ ॥ ೨೧ ॥

---

೧೭. ಪೂರ್ವದಲ್ಲಿ ಮಹಾಕಾಳಿಯೂ, ಆಗ್ನೇಯ ದಿಕ್ಕಿನಲ್ಲಿ ರಕ್ತದಂತಳೂ, ದಕ್ಷಿಣದಲ್ಲಿ ಚಾಮುಂಡಿಯೂ, ನೈಋತ್ಯ ದಿಕ್ಕಿನಲ್ಲಿ ಕಾಲಿಕಾದೇವಿಯೂ ನನ್ನನ್ನು ಸರ್ವದಾ ರಕ್ಷಿಸಲಿ.

೧೮. ಶ್ಯಾಮಾದೇವಿಯು ಪಶ್ಚಿಮ ದಿಕ್ಕಿನಲ್ಲಿಯೂ, ಚಂಡಿಕಾದೇವಿಯು ವಾಯುವ್ಯ ದಿಕ್ಕಿನಲ್ಲಿಯೂ. ವಿಕಟಾಸ್ಯಳು ಉತ್ತರದಿಕ್ಕಿನಲ್ಲಿಯೂ, ಅಟ್ಟಹಾಸಿನಿಯು ಈಶಾನ್ಯದಿಕ್ಕಿನಲ್ಲಿಯೂ ನನ್ನನ್ನು ಕಾಪಾಡಲಿ.

೧೯. ಲೋಲಜಿಹ್ವೆಯು ಊರ್ಧ್ವಭಾಗದಲ್ಲಿಯೂ, ಆದಿಮಾಯೆಯು ಅಧೋಭಾಗದಲ್ಲಿಯೂ, ವಿಶ್ವಮಾತೆಯು ನೀರು, ನೆಲ, ಅಂತರಿಕ್ಷಗಳಲ್ಲಿಯೂ ನನ್ನನ್ನು ಅನವರತ ರಕ್ಷಿಸಲಿ.

೨೦. ವತ್ಸ ನಾರದನೇ, ಎಲ್ಲ ಮಂತ್ರಗಳ ಸಾರವೂ, ಕವಚಗಳಿಗೆಲ್ಲ ಶ್ರೇಷ್ಠವೂ, ಉತ್ತಮೋತ್ತಮವೂ ಆದ ಭದ್ರಕಾಳಿಯ ಕವಚವನ್ನು ನಿನಗೆ ಹೇಳಿರುವೆನು.

೨೧. ಈ ಕವಚದ ಅನುಗ್ರಹದಿಂದ ಸುಚಂದ್ರನು ಸಪ್ತದ್ವೀಪಾಧಿಪತಿಯೂ ಮಾಂಧಾತನು ನಿಖಿಲ ಭೂಮಂಡಲಾಧಿಪತಿಯೂ ಆದನು.

ಪ್ರಚೇತಾ ಲೋಮಶಶ್ಚೈವ ಯತಃ ಸಿದ್ಧೋ ಬಭೂವ ಹ ।
ಯತೋ ಹಿ ಯೋಗಿನಾಂ ಶ್ರೇಷ್ಠಃ ಸೌಭರಿಃ ಪಿಪ್ಪಲಾಯನಃ ॥ ೨೨ ॥

ಯದಿ ಸ್ಯಾತ್ಸಿದ್ಧ ಕವಚಃ ಸರ್ವಸಿದ್ಧೀಶ್ವರೋ ಭವೇತ್ ।
ಮಹಾದಾನಾನಿ ಸರ್ವಾಣಿ ತಪಾಂಸ್ಯೇವ ವ್ರತಾನಿ ಚ ।
ನಿಶ್ಚಿತಂ ಕವಚಸ್ಯಾಸ್ಯ ಕಲಾಂ ನಾರ್ಹಂತಿ ಷೋಡಶೀಂ ॥ ೨೩ ॥

ಇದಂ ಕವಚಮಜ್ಞಾತ್ವಾ ಭಜೇತ್ಕಾಲೀಂ ಜಗತ್ಪ್ರಸೂಂ ।
ಶತಲಕ್ಷಂ ಪ್ರಜಪ್ತೋಽಪಿ ನ ಮಂತ್ರಃ ಸಿದ್ಧಿದಾಯಕಃ ॥ ೨೪ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ತೃತೀಯೇ ಗಣಪತಿಖಂಡೇ ನಾರದನಾರಾಯಣ ಸಂವಾದೇ ಭದ್ರಕಾಲೀಕವಚನಿರೂಪಣಂ ನಾಮ ಸಪ್ತತ್ರಿಂಶತ್ತಮೋಽಧ್ಯಾಯಃ

---

೨೨. ಈ ಕವಚಧಾರಣೆಯ ಮಹಿಮೆಯಿಂದಲೇ ಪ್ರಚೇತಸನೂ, ಲೋಮಶನೂ ಸಿದ್ಧಪುರುಷನೆನಿಸಿದರು. ಸೌಭರಿ ಮತ್ತು ಪಿಪ್ಪಲಾಯನರು ಯೋಗಿಶ್ರೇಷ್ಠರೆನಿಸಿದುದೂ ಈ ಕವಚಧಾರಣೆಯ ಪ್ರಭಾವದಿಂದಲೇ.

೨೩. ಈ ಕವಚಸಿದ್ಧಿಯನ್ನು ಪಡೆದವರು ಸರ್ವಸಿದ್ಧೀಶ್ವರರೆನಿಸುವರು. ಸಕಲ ಮಹಾದಾನಗಳೂ, ತಪಸ್ಸು ಮತ್ತು ವ್ರತಗಳೂ ಈ ಕವಚದ ಹದಿನಾರನೆಯ ಅಂಶದ ಫಲವನ್ನೂ ಕೊಡಲಾರವೆಂಬುದು ನಿಶ್ಚಯ.

೨೪. ಈ ಕವಚೋಪದೇಶವನ್ನು ಹೊಂದದೆ ಜಗನ್ಮಾತೆಯಾದ ಕಾಳಿಯನ್ನು ಭಜಿಸುವವನು ನೂರುಲಕ್ಷಬಾರಿ ಜಪಿಸಿದರೂ ಮಂತ್ರಸಿದ್ಧಿಯನ್ನು ಪಡೆಯಲಾರನು.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಗಣಪತಿಖಂಡದಲ್ಲಿ ಭದ್ರಕಾಳೀ ಕವಚನಿರೂಪಣಾತ್ಮಕವಾದ ಮೂವತ್ತೇಳನೆಯ ಅಧ್ಯಾಯವು ಮುಗಿದುದು.

ಮೂವತ್ತೇಳನೆಯ ಅಧ್ಯಾಯದ ಸಾರಾಂಶವು

ನಾರದನ ಪ್ರಾರ್ಥನೆಯಂತೆ ನಾರಾಯಣಮಹರ್ಷಿಯು ದಶಾಕ್ಷರೀಮಹಾವಿದ್ಯೆಯನ್ನೂ, ಭದ್ರಕಾಳಿಯ ಕವಚವನ್ನೂ, ಅದು ಭೂಲೋಕಕ್ಕೆ ಬಂದ ಕ್ರಮವನ್ನೂ, ಅದರ ಮಹಿಮೆಯನ್ನೂ, ಅದನ್ನು ಧರಿಸಿ ಆತ್ಮರಕ್ಷಣೆಮಾಡಿಕೊಳ್ಳಬೇಕಾದ ಕ್ರಮವನ್ನೂ, ಅದನ್ನು ಧರಿಸಿದವರ ಪ್ರಭಾವವನ್ನೂ ವಿವರಿಸಿದನು.

॥ ಓಂ ॥

॥ ಶ್ರೀ ಗಣೇಶಾಯ ನಮಃ ॥

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಗಣಪತಿಖಂಡೇ

ಅಷ್ಟತ್ರಿಂಶತ್ತಮೋಽಧ್ಯಾಯಃ

॥ ನಾರಾಯಣ ಉವಾಚ ॥

ಸುಚಂದ್ರೇ ಪತಿತೇ ಬ್ರಹ್ಮನ್ರಾಜೇಂದ್ರಾಣಾಂ ಶಿರೋಮಣೌ ।
ಅಗಮತ್ಪುಷ್ಕರಾಕ್ಷಸ್ತು ಸೇನಾತ್ರ್ಯಕ್ಷೌಹಿಣೀಯುತಃ ॥ ೧ ॥

ಸೂರ್ಯವಂಶೋದ್ಭವೋ ರಾಜಾ ಸುಚಂದ್ರತನಯೋ ಮಹಾನ್ ।
ಮಹಾಲಕ್ಷ್ಮೀ ಸೇವಕಶ್ಚ ಲಕ್ಷ್ಮೀವಾನ್ಸೂರ್ಯಸನ್ನಿಭಃ ॥ ೨ ॥

ಮೂವತ್ತೆಂಟನೆಯ ಅಧ್ಯಾಯ.

೧. ನಾರಾಯಣ ಮಹರ್ಷಿ:—ಎಲೈ ನಾರದನೇ, ಇಂತು ರಾಜರಿಗೆಲ್ಲ ಶಿರೋಮಣಿಯಂತಿದ್ದ ಸುಚಂದ್ರನ ಪತನವಾಗಲು, ಪುಷ್ಕರಾಕ್ಷನೆಂಬ ಮಹೋಬ್ಬ ವೀರನು ಮೂರು ಅಕ್ಷೋಹಿಣೀ ಸೇನೆಯೊಡಗೂಡಿ ಪರಶುರಾಮನೊಡನೆ ಯುದ್ಧಕ್ಕೆ ಬಂದನು.

೨. ಸೂರ್ಯವಂಶೋತ್ಪನ್ನನೂ, ಸುಚಂದ್ರನ ಮಗನೂ ಆದ ಆ ಪುಷ್ಕರಾಕ್ಷನು ಸೂರ್ಯನಂತೆ ತೇಜಸ್ವಿಯಾಗಿದ್ದುದಲ್ಲದೆ ಮಹಾಲಕ್ಷ್ಮಿಯ ಸೇವಕನೂ, ಶಾಂತಿಯುತನೂ ಆಗಿದ್ದನು.

ಮಹಾಲಕ್ಷ್ಮ್ಯಾಶ್ಚ ಕವಚಂ ಗಲೇ ಯಸ್ಯ ಮನೋಹರಂ ।
ಪರಮೈಶ್ವರ್ಯಸಂಯುಕ್ತಸ್ತ್ರೈಲೋಕ್ಯವಿಜಯೀ ತತಃ ॥ ೩ ॥

ತಂ ದೃಷ್ಟ್ವಾ ಭ್ರಾತರಃ ಸರ್ವೇ ರೈಣುಕೇಯಸ್ಯ ಧೀಮತಃ ।
ಆಯಯುಃ ಸಮರಂ ಕರ್ತುಂ ನಾನಾಶಸ್ತ್ರಾಸ್ತ್ರಪಾಣಯಃ ॥ ೪ ॥

ರಾಜೇಂದ್ರಃ ಶರಜಾಲೇನ ಚ್ಛೇದಯಾಮಾಸ ತಾಂಸ್ತದಾ ।
ಚಿಚ್ಛಿದುಃ ಶರಜಾಲಂ ಚ ತೇ ವೀರಾಶ್ಚೈವ ಲೀಲಯಾ ॥ ೫ ॥

ಚಿಚ್ಛಿದುಃ ಸ್ಯಂದನಂ ರಾಜ್ಞಸ್ತೇ ವೀರಾಃ ಪಂಚಬಾಣತಃ ।
ಸಾರಥಿಂ ಪಂಚಬಾಣೇನ ರಥಾಶ್ವಂ ದಶಬಾಣತಃ ॥ ೬ ॥

ತದ್ಧನುಃ ಸಪ್ತಬಾಣೇನ ತೂಣಂ ವೈ ಪಂಚಬಾಣತಃ ।
ಚಿಚ್ಛಿದುಸ್ತದ್ಭ್ರಾತೃವರ್ಗಾನ್ವಿಪ್ರಾಃ ಶಂಕರಶೂಲತಃ ॥ ೭ ॥

---

೩. ಅವನ ಕುತ್ತಿಗೆಯಲ್ಲಿ ಮಹಾಲಕ್ಷ್ಮಿಯ ಮನೋಹರವಾದ ಕವಚವಿದ್ದುದರಿಂದಲೇ ಅವನು ಪರಮೈಶ್ವರ್ಯಯುತನೂ, ತ್ರಿಲೋಕವಿಜಯಿಯೂ ಆಗಿದ್ದನು.

೪. ಅವನನ್ನು ನೋಡಿದ ಕೂಡಲೇ ಪರಶುರಾಮನ ಸಹೋದರರೆಲ್ಲರೂ, ವಿಧವಿಧ ಶಸ್ತ್ರಾಸ್ತ್ರಗಳನ್ನು ಧರಿಸಿ ಅವನೊಡನೆ ಯುದ್ಧ ಮಾಡಲು ಬಂದರು.

೫. ಆಗ ಆ ರಾಜನು ಅವರ ಮೇಲೆಲ್ಲಾ ಬಾಣದ ಸುರಿಮಳೆಗರೆಯಲು, ಆ ವೀರರೂ ಕೂಡ ಲೀಲಾಜಾಲವಾಗಿಯೇ ಆ ಬಾಣಗಳನ್ನು ಕತ್ತರಿಸಿ ಬಿಸುಡಿದರು.

೬. ಅನಂತರ ಆ ವೀರರು ಐದು ಬಾಣಗಳಿಂದ ಆ ರಾಜನ ರಥವನ್ನೂ, ಐದು ಬಾಣದಿಂದ ಸಾರಥಿಯನ್ನೂ, ಹತ್ತು ಬಾಣಗಳಿಂದ ರಥಾಶ್ವಗಳನ್ನೂ ಕತ್ತರಿಸಿ ಕೆಡಹಿದರು

೭. ಹಾಗೆಯೇ ಏಳು ಬಾಣಗಳಿಂದ ಅವನ ಧನುಸ್ಸನ್ನೂ, ಐದು ಬಾಣಗಳಿಂದ ಬತ್ತಳಿಕೆಯನ್ನೂ, ನಾಶಗೊಳಿಸಿ ಆ ಬ್ರಾಹ್ಮಣರು ಶಂಕರನ ಶೂಲಾಯುಧದಿಂದ ಆ ರಾಜನ ಸಹೋದರ ವರ್ಗವನ್ನು ಸಂಹರಿಸಿದರು.

ತೇ ಚ ತ್ರ್ಯಕ್ಷೌಹಿಣೀಂ ಸೇನಾಂ ನಿಜಘ್ನುಶ್ಚಾಪಿ ಲೀಲಯಾ ।
ಹಂತುಂ ನೃಪೇಂದ್ರಂ ತೇ ವೀರಾಃ ಶಿವಶೂಲಂ ನಿಚಿಕ್ಷಿಪುಃ
ಗಲೇ ಬಭೂವ ತಚ್ಛೂಲಂ ರಾಜ್ಞಃ ಪುಷ್ಕರಮಾಲಿಕಾ ॥ ೮ ॥

ಶಕ್ತಿಂ ಚ ಪರಿಘಂ ಚೈವ ಭುಶುಂಡೀಂ ಮುದ್ಗರಂ ತಥಾ ।
ಗದಾಂ ಚ ಚಿಕ್ಷಿಪುರ್ವಿಪ್ರಾಃ ಕೋಪೇನ ಜ್ವಲದಗ್ನಯಃ ॥ ೯ ॥

ತಾನಿ ಶಸ್ತ್ರಾಣಿ ಚೂರ್ಣಾನಿ ಕೃತ್ವಾ ಭೃತೋ ದೇಹಯೋಗತಃ ।
ವಿಸ್ಮಿತಾ ಭ್ರಾತರಃ ಸರ್ವೇ ಭೃಗೋರೇವ ಮಹಾಮುನೇ ॥ ೧೦ ॥

ರಥಂ ಧನುಶ್ಚ ಶಸ್ತ್ರಾಣಿ ಚಾಸ್ತ್ರಾಣಿ ವಿವಿಧಾನಿ ಚ ।
ಸೇನಾಂ ಪ್ರಸ್ಥಾಪಯಾಮಾಸ ಕಾರ್ತವೀರ್ಯಾರ್ಜುನಃ ಸ್ವಯಂ ॥ ೧೧ ॥

ರಾಜಾ ಸ್ಯಂದನಮಾರುಹ್ಯ ಪುಷ್ಕರಾಕ್ಷೋ ಮಹಾಬಲಃ ।
ಚಕಾರ ಶರಜಾಲಂ ಚ ಮಹಾಘೋರತರಂ ಮುನೇ ॥ ೧೨ ॥

---

೮. ಅಲ್ಲದೆ ಲೀಲಾಮಾತ್ರದಿಂದ ಅವನು ಮೂರಕ್ಷೋಹಿಣೀ ಸೈನ್ಯವನ್ನೂ ನಾಶಗೊಳಿಸಿ ಅವನನ್ನು ಸಂಹರಿಸಲು ಶಿವನ ಶೂಲಾಯುಧವನ್ನು ಪ್ರಯೋಗಿಸಿದರು ಆದರೆ ಆ ಶೂಲವು ಆ ರಾಜನ ಕುತ್ತಿಗೆಯಲ್ಲಿ ತಾವರೆಯ ಮಾಲೆಯಾಯಿತು.

೯. ಆಗ ಕುಪಿತರಾದ ಆ ವಿಪ್ರರು ಅಗ್ನಿಜ್ವಾಲೆಯಂತೆ ಅತ್ಯುಗ್ರರಾಗಿ ಶಕ್ತಿ, ಪರಿಘ, ಭುಶುಂಡಿ, ಮುದ್ಗರ, ಗದೆ ಮುಂತಾದ ಆಯುಧಗಳನ್ನು ಆ ರಾಜನ ಮೇಲೆ ಏಕಕಾಲದಲ್ಲಿ ಪ್ರಯೋಗಿಸಿದರು.

೧೦. ಆ ಆಯುಧಗಳೆಲ್ಲವೂ ಆ ರಾಜನ ಅಂಗಸ್ಪರ್ಶಮಾತ್ರದಿಂದ ಪುಡಿಪುಡಿಯಾಗಲು ಭಾರ್ಗವನ ಸಹೋದರರೆಲ್ಲರೂ ಅದನ್ನು ನೋಡಿ ಆಶ್ಚರ್ಯಗೊಂಡರು.

೧೧. ಇತ್ತ ಕಾರ್ತವೀರ್ಯಾರ್ಜುನನು ಆ ಪುಷ್ಕರಾಕ್ಷನಿಗಾಗಿ ರಥವನ್ನೂ ಧನುರ್ಬಾಣಗಳನ್ನೂ ವಿಧವಿಧ ಅಸ್ತ್ರಶಸ್ತ್ರಗಳನ್ನೂ, ಅಸಂಖ್ಯಸೇನೆಯನ್ನೂ ಕಳುಹಿಸಿ ಕೊಟ್ಟನು.

೧೨. ಎಲೈ ನಾರದನೇ, ಅನಂತರ ಮಹಾಪರಾಕ್ರಮಿಯಾದ ಪುಷ್ಕರಾಕ್ಷನು ರಥವನ್ನು ಹತ್ತಿ ಧನುರ್ಬಾಣಗಳನ್ನು ಹಿಡಿದು ಭಯಂಕರವಾದ ಬಾಣದ ಮಳೆಗರೆದನು.

ಚಿಚ್ಛಿದುಃ ಶರಜಾಲಂ ಚ ತೇ ವೀರಾಃ ಶಸ್ತ್ರಪಾಣಯಃ ।
ರಾಜಾ ಪ್ರಸ್ವಾಪನೇನೈವ ನಿದ್ರಿತಾಂಸ್ತಾಂಶ್ಚಕಾರ ಹ ॥ ೧೩ ॥

ಭ್ರಾತೄಂಶ್ಚ ನಿದ್ರಿತಾನ್ದೃಷ್ಟ್ವಾ ಜಾಮದಗ್ನ್ಯೋ ಮಹಾಬಲಃ ।
ಕ್ಷತವಿಕ್ಷತಸರ್ವಾಂಗಾನ್ಬೋಧಯಾಮಾಸ ತತ್ಕ್ಷಣಃ ॥ ೧೪ ॥

ಬೋಧಯಿತ್ವಾ ತಾನ್ನಿವಾರ್ಯ ಜಗಾಮ ರಣಮೂರ್ಧನಿ ।
ಚಿಕ್ಷೇಪ ಪರ್ಶುಂ ಕೋಪೇನ ಶೀಘ್ರಂ ರಾಜಜಿಘಾಂಸಯಾ ॥ ೧೫ ॥

ಛಿತ್ವಾ ರಾಜ್ಞಃ ಕಿರೀಟಂ ಚ ಪರ್ಶುರ್ಭೂಮೌ ಪಪಾತ ಹ ।
ಜಗ್ರಾಹ ಪರಶುಂ ಶೀಘ್ರಂ ಜಾಮದಗ್ನ್ಯೋ ಮಹಾಬಲಃ ॥ ೧೬ ॥

ತದಾ ಶಂಕರಶೂಲಂ ಚ ಚಿಕ್ಷಿಪೇ ಮಂತ್ರಪೂರ್ವಕಂ ।
ನೃಪಸ್ಯ ಕುಂಡಲಂ ಛಿತ್ವಾ ಜಗಾಮ ಶಿವಸನ್ನಿಧಿಂ ॥ ೧೭ ॥

---

೧೩. ಶಸ್ತ್ರಪಾಣಿಗಳಾದ ಆ ವೀರರೆಲ್ಲರೂ ಇವನ ಬಾಣಗಳನ್ನು ತುಂಡರಿಸಲು, ಕುಪಿತನಾದ ರಾಜನು ಸಮ್ಮೋಹನಾಸ್ತ್ರದಿಂದ ಅವರೆಲ್ಲರನ್ನೂ ನಿದ್ರೆಗೊಳಿಸಿದನು.

೧೪. ಆಗ ಪರಾಕ್ರಮಿಯಾದ ಪರಶುರಾಮನು ಬಂದು ಸರ್ವಾಂಗದಲ್ಲಿಯೂ ಗಾಯಗೊಂಡು ನಿದ್ರೆಮಾಡುತ್ತ ಬಿದ್ದಿರುವ ತನ್ನ ಸಹೋದರರನ್ನೆಲ್ಲ ಎಚ್ಚರಗೊಳಿಸಿ ಸಮಾಧಾನಪಡಿಸಿದನು.

೧೫. ಎಚ್ಚರಗೊಂಡಮೇಲೆ ಅವರೆಲ್ಲರನ್ನೂ ಹಿಂತಿರುಗಿಸಿ, ತಾನೇ ಯುದ್ಧರಂಗಕ್ಕೆ ಹೋಗಿ ರಾಜನ ಸಂಹಾರಕ್ಕಾಗಿ ಜಾಗ್ರತೆ ತನ್ನ ಕೊಡಲಿಯನ್ನು ಪ್ರಯೋಗಿಸಿದನು.

೧೬. ಆ ಕೊಡಲಿಯು ರಾಜನ ಕಿರೀಟವನ್ನು ಕತ್ತರಿಸಿ ಭೂಮಿಯ ಮೇಲೆ ಬೀಳಲು, ಮಹಾಪರಾಕ್ರಮಿಯಾದ ಪರಶುರಾಮನು ಅದನ್ನು ಜಾಗ್ರತೆ ತೆಗೆದುಕೊಂಡನು

೧೭. ಅನಂತರ ಶಂಕರನ ಶೂಲಾಯುಧವನ್ನು ಮಂತ್ರಪೂರ್ವಕವಾಗಿ ಪ್ರಯೋಗಿಸಲು, ಆ ಶೂಲವು ರಾಜನ ಕರ್ಣಕುಂಡಲಗಳನ್ನು ಕತ್ತರಿಸಿ ಶಿವನ ಸನ್ನಿಧಿಗೆ ತೆರಳಿತು.

ರಾಜಾ ನಿಹಂತುಂ ತಂ ರಾಮಂ ಶರಜಾಲಂ ಚಕಾರ ಹ ।
ಚಿಚ್ಛೇದ ಶರಜಾಲಂ ಚ ರೈಣುಕೇಯಶ್ಚ ಲೀಲಯಾ ॥ ೧೮ ॥

ಕ್ರಮೇಣ ರಾಜಾ ನಾನಾಸ್ತ್ರಂ ಚಿಕ್ಷಿಪೇ ಮಂತ್ರಪೂರ್ವಕಂ ।
ತಚ್ಚಿಚ್ಛೇದ ಕ್ರಮೇಣೈವ ಭೃಗುಃ ಶಸ್ತ್ರಭೃತಾಂ ವರಃ ॥ ೧೯ ॥

ಭೃಗುಶ್ಚಿಕ್ಷೇಪ ನಾನಾಸ್ತ್ರಂ ಮಹಾಸಂಧಾನಪೂರ್ವಕಂ ।
ತಚ್ಚಿಚ್ಛೇದ ಮಹಾರಾಜಃ ಸಂಧಾನೇನೈವ ಲೀಲಯಾ ॥ ೨೦ ॥

ರಾಮಶ್ಚಿಕ್ಷೇಪ ಸಂಧಾಯ ಬ್ರಹ್ಮಾಸ್ತ್ರಂ ಮಂತ್ರಪೂರ್ವಕಂ ।
ರಾಜಾ ನಿರ್ವಾಪಣಂ ಚಕ್ರೇ ಸಂಧಾನೇನೈವ ಲೀಲಯಾ ॥ ೨೧ ॥

ಸರ್ವಾಣ್ಯಸ್ತ್ರಾಣಿ ಶಸ್ತ್ರಾಣಿ ರಾಮಃ ಪಾಶುಪತಂ ವಿನಾ ।
ಚಿಕ್ಷೇಪ ಕೋಪವಿಭ್ರಾಂತೋ ಭೂಪಶ್ಚಿಚ್ಛೇದ ತಾನಿ ಚ ॥ ೨೨ ॥

---

೧೮. ಆಗ ಪುಷ್ಕರಾಕ್ಷನು ಪರಶುರಾಮನನ್ನು ಸಂಹರಿಸುವೆನೆಂದು ಶರಜಾಲವನ್ನು ನಿರ್ಮಿಸಲು, ಪರಶುರಾಮನು ಲೀಲಾಮಾತ್ರದಿಂದ ಅದನ್ನು ಕತ್ತರಿಸಿ ಬಿಸುಡಿದನು.

೧೯. ಕ್ರಮವಾಗಿ ರಾಜನು ನಾನಾಶಸ್ತ್ರಾಸ್ತ್ರಗಳನ್ನು ಮಂತ್ರಪೂರ್ವಕವಾಗಿ ಪ್ರಯೋಗಿಸಲು, ಧನುರ್ಧಾರಿಗಳಲ್ಲಿ ಅಗ್ರಗಣ್ಯನಾದ ಭಾರ್ಗವನು ಅವೆಲ್ಲವನ್ನೂ ಕ್ರಮವಾಗಿ ಕತ್ತರಿಸಿದನು.

೨೦. ಈ ರೀತಿಯಾಗಿ ಭಾರ್ಗವನು ಸಂಧಾನಪೂರ್ವಕವಾಗಿ ಪ್ರಯೋಗಿಸಿದ ವಿವಿಧಾಸ್ತ್ರಗಳನ್ನೂ ಆ ರಾಜನು ಮಂತ್ರೋಕ್ತವಾಗಿಯೇ ಅತಿ ಸುಲಭವಾಗಿ ಕತ್ತರಿಸಿದನು.

೨೧. ಪರಶುರಾಮನು ಬ್ರಹ್ಮಾಸ್ತ್ರವನ್ನು ಮಂತ್ರಪೂರ್ವಕವಾಗಿ ಅನುಸಂಧಾನ ಮಾಡಿ ಬಿಡಲು ರಾಜನು ಸಂಧಾನಪೂರ್ವಕವಾಗಿಯೇ ಅದನ್ನು ಲೀಲೆಯಿಂದ ಕತ್ತರಿಸಿದನು.

೨೨. ಕಡೆಗೆ ಭಾರ್ಗವನು ಪಾಶುಪತಾಸ್ತ್ರವೊಂದನ್ನುಳಿದು, ಕೋಪದಿಂದ ಪ್ರಯೋಗಿಸಿದ ಎಲ್ಲ ಅಸ್ತ್ರಗಳನ್ನೂ, ರಾಜನು ಅತಿ ಸುಲಭವಾಗಿ ಕತ್ತರಿಸಿ ಎಸೆದನು.

ರಾಮಃ ಸ್ತುತ್ವಾ ಶಿವಂ ನತ್ವಾ ದದೇ ಪಾಶುಪತಂ ಮುನೇ ।
ನಾರಾಯಣಶ್ಚ ಭಗವಾನವೋಚದ್ವಿಪ್ರರೂಪಧೃಕ್ ॥ ೨೩ ॥

॥ ಬ್ರಾಹ್ಮಣ ಉವಾಚ ॥

ಕಿಂ ಕರೋಷಿ ಭೃಗೋ ವತ್ಸ ತ್ವಮೇವ ಜ್ಞಾನಿನಾಂ ವರಃ ।
ನರಂ ಹಂತುಂ ಪಾಶುಪತಂ ಕೋಪಾತ್ಕಿಂ ಕ್ಷಿಪಸಿ ಭ್ರಮಾತ್ ॥ ೨೪ ॥

ವಿಶ್ವಂ ಪಾಶುಪತೇನೈವ ಭವೇದ್ಭಸ್ಮ ಚ ಸತ್ವರಂ ।
ಸರ್ವಘ್ನಂ ಸ್ಯಾಚ್ಛಸ್ತ್ರಮಿದಂ ವಿನಾ ಶ್ರೀಕೃಷ್ಣಮೀಶ್ವರಂ ॥ ೨೫ ॥

ಅಹೋ ಪಾಶುಪತಂ ಜೇತುಂ ನಾಲಮೇವ ಸುದರ್ಶನಂ ।
ಹರೇಃ ಸುದರ್ಶನಂ ಚೈವ ಸರ್ವಾಸ್ತ್ರಪರಿಮರ್ದಕಂ ॥ ೨೬ ॥

ಖಟ್ವಾಂಗಿನಃ ಪಾಶುಪತಂ ಹರೇರೇವ ಸುದರ್ಶನಂ ।
ಏತೇ ಪ್ರಧಾನೇ ಸರ್ವೇಷಾಮಸ್ತ್ರಾಣಾಂ ಚ ಜಗತ್ತ್ರಯೇ ॥ ೨೭ ॥

---

೨೩. ಎಲೈ ನಾರದನೇ, ಆಗ ಪರಶುರಾಮನು ಶಿವನನ್ನು ಸ್ತುತಿಸಿ, ನಮಿಸಿ ಪಾಶುಪತಾಸ್ತ್ರವನ್ನು ಕೈಗೆ ತೆಗೆದುಕೊಳ್ಳಲು ಶ್ರೀಮನ್ನಾರಾಯಣನು ಬ್ರಾಹ್ಮಣ ವೇಷದಿಂದ ಅಲ್ಲಿಗೆ ಬಂದು ಹೀಗೆ ಹೇಳಿದನು.

೨೪. ಬ್ರಾಹ್ಮಣ:—ಎಲೈ ವತ್ಸ ಭಾರ್ಗವನೇ, ಜ್ಞಾನಿಶ್ರೇಷ್ಠನಾದ ನೀನು ಮಾಡುತ್ತಿರುವ ಕೆಲಸವೇನು? ಭ್ರಾಂತನಾಗಿ ನೀನು ಮನುಷ್ಯಮಾತ್ರನನ್ನು ಕೊಲ್ಲಲು ಪಾಶುಪತಾಸ್ತ್ರವನ್ನು ಪ್ರಯೋಗಿಸುತ್ತಿರುವೆಯಲ್ಲ.

೨೫. ಈ ಪಾಶುಪತಾಸ್ತ್ರದಿಂದ ನಿಖಿಲ ವಿಶ್ವವೂ ಜಾಗ್ರತೆಯಾಗಿ ಬೂದಿಯಾಗುವುದು. ಸರ್ವೇಶ್ವರನಾದ ಶ್ರೀಕೃಷ್ಣನನ್ನು ಬಿಟ್ಟು ಉಳಿದುದೆಲ್ಲವನ್ನೂ ಈ ಶಸ್ತ್ರವು ನಾಶಗೊಳಿಸುವುದು.

೨೬. ಸಕಲ ದಿವ್ಯಾಸ್ತ್ರಗಳ ಶಕ್ತಿಯನ್ನೂ ಉಡಗಿಸಬಲ್ಲ ಶ್ರೀಹರಿಯ ಸುದರ್ಶನ ಚಕ್ರವೂ ಕೂಡ ಈ ಪಾಶುಪತಾಸ್ತ್ರವನ್ನು ಜಯಿಸಲು ಅಸಮರ್ಥವಾಗಿರುವುದು.

೨೭. ಶಂಕರನ ಪಾಶುಪತಾಸ್ತ್ರವೂ, ಶ್ರೀಹರಿಯ ಸುದರ್ಶನವೂ, ತ್ರಿಲೋಕದ ಶಸ್ತ್ರಾಸ್ತ್ರಗಳಿಗೆಲ್ಲ ಪ್ರಧಾನವೆನಿಸುವುವು.

ತ್ಯಜ ಪಾಶುಪತಂ ಬ್ರಹ್ಮನ್ ಮದೀಯಂ ವಚನಂ ಶೃಣು ।
ಯಥಾ ಜೇಷ್ಯಸಿ ರಾಜಾನಂ ಪುಷ್ಕರಾಕ್ಷಂ ಮಹಾಬಲಂ ॥ ೨೮ ॥

ಕಾರ್ತವೀರ್ಯಮಜೇತಾರಂ ಯಥಾ ಜೇಷ್ಯಸಿ ಸಾಂಪ್ರತಂ ।
ಶ್ರೂಯತಾಂ ಸಾವಧಾನೇನ ತತ್ಸರ್ವಂ ಕಥಯಾಮಿ ತೇ ॥ ೨೯ ॥

ಮಹಾಲಕ್ಷ್ಮ್ಯಾಶ್ಚ ಕವಚಂ ತ್ರಿಷು ಲೋಕೇಷು ದುರ್ಲಭಂ ।
ಭಕ್ತ್ಯಾ ಚ ಪುಷ್ಕರಾಕ್ಷೇಣ ಧೃತಂ ಕಂಠೇ ವಿಧಾನತಃ ॥ ೩೦ ॥

ಪರಂ ದುರ್ಗತಿನಾಶಿನ್ಯಾಃ ಕವಚಂ ಪರಮಾದ್ಭುತಂ ।
ಧೃತಂ ಚ ದಕ್ಷಿಣೇ ಬಾಹೌ ಪುಷ್ಕರಾಕ್ಷಸುತೇನ ಚ ॥ ೩೧ ॥

ಕವಚಸ್ಯ ಪ್ರಸಾದೇನ ವಿಶ್ವಂ ಜೇತುಂ ಕ್ಷಮೌ ಚ ತೌ ।
ಕೋ ಜೇತಾ ಚ ತ್ರಿಭುವನೇ ದೇಹೇ ಚ ಕವಚೇ ಸ್ಥಿತೇ ॥ ೩೨ ॥

---

೨೮. ಆದುದರಿಂದ ಎಲೈ ವಿಪ್ರನೇ, ಪಾಶುಪತಾಸ್ತ್ರವನ್ನು ಕೆಳಗಿಡು. ಮಹಾಪರಾಕ್ರಮಿಯಾದ ಪುಷ್ಕರಾಕ್ಷನನ್ನು ನೀನು ಗೆಲ್ಲಲು ಮಾಡಬೇಕಾದ ಉಪಾಯವನ್ನು ಹೇಳುವೆನು ಕೇಳು.

೨೯, ಎಲ್ಲರಿಗೂ ಅಜೇಯನಾದ ಕಾರ್ತವೀರ್ಯನನ್ನೂ ಗೆಲ್ಲಲು ನಾನು ಹೇಳುವ ಉಪಾಯುವನ್ನು ಸಾವಧಾನದಿಂದ ಕೇಳು.

೩೦ ತ್ರಿಲೋಕದುರ್ಲಭವಾದ ಮಹಾಲಕ್ಷ್ಮಿಯ ಕವಚವನ್ನು ಪುಷ್ಕರಾಕ್ಷನ ವಿಧಿಪೂರ್ವಕವಾಗಿ ಕಂಠದಲ್ಲಿ ಧರಿಸಿರುವುದರಿಂದ ನೀನು ಅವನನ್ನು ಜಯಿಸಲಸಾಧ್ಯವಾಗಿರುವುದು.

೩೧. ಪಾಪನಾಶಿನಿಯಾದ ಪಾರ್ವತಿಯ ಅತ್ಯದ್ಭುತ ಕವಚವನ್ನು ಪುಷ್ಕರಾಕ್ಷನ ಪುತ್ರನೂ ಕೂಡ ಬಲಭುಜದಲ್ಲಿ ಧರಿಸಿ ಅಪ್ರತಿಮವೀರನಾಗಿದ್ದಾನೆ.

೩೨. ಈ ಕವಚದ ಮಹಿಮೆಯಿಂದ ಅವರಿಬ್ಬರೂ ಜಗತ್ತನ್ನೇ ಜಯಿಸಬಲ್ಲರು. ಅತ್ಯದ್ಭುತವಾದ ಆ ಕವಚವು ದೇಹದಲ್ಲಿರುವಾಗ ತ್ರಿಲೋಕದಲ್ಲಿಯೂ ಅವರನ್ನು ಜಯಿಸುವವರಿಲ್ಲ.

ಅಹಂ ಯಾಸ್ಯಾಮಿ ಭಿಕ್ಷಾರ್ಥಂ ಸನ್ನಿಧಾನೇ ತಯೋರ್ಮುನೇ ।
ಕರಿಷ್ಯಾಮಿ ಚ ತದ್ಭಿಕ್ಷಾಂ ಪ್ರತಿಜ್ಞಾ ಸಫಲಾಯ ತೇ ॥ ೩೩ ॥

ಬ್ರಾಹ್ಮಣಸ್ಯ ವಚಃ ಶ್ರುತ್ವಾ ರಾಮಃ ಸಂತ್ರಸ್ತಮಾನಸಃ ।
ಉವಾಚ ಬ್ರಾಹ್ಮಣಂ ವೃದ್ಧಂ ಹೃದಯೇನ ವಿದೂಯತಾ ॥ ೩೪ ॥

॥ ಪರಶುರಾಮ ಉವಾಚ ॥

ನ ಜಾನಾಮಿ ಮಹಾಪ್ರಾಜ್ಞ ಕಸ್ತ್ವಂ ಬ್ರಾಹ್ಮಣರೂಪಧೃಕ್ ।
ಶೀಘ್ರಂ ಚ ಬ್ರೂಹಿ ಮಾಂ ಮೂಢಂ ತದಾ ಗಚ್ಛ ನೃಪಾಂತಿಕಂ ॥ ೩೫ ॥

ಜಾಮದಗ್ನ್ಯವಚಃ ಶ್ರುತ್ವಾ ಪ್ರಹಸ್ಯ ಬ್ರಾಹ್ಮಣಃಸ್ವಯಂ ।
ಉಕ್ತ್ವಾ ಚಾಹಂ ವಿಷ್ಣುರಿತಿ ಯಯೌ ಭಿಕ್ಷಿತುಮೀಶ್ವರಃ ॥ ೩೬ ॥

---

೩೩. ಎಲೈ ಮುನಿಯೇ, ಆದುದರಿಂದ ನಾನು ಈಗ ಅವರಿಬ್ಬರ ಸಮೀಪಕ್ಕೆ ಯಾಚಕನಂತೆ ಹೋಗಿ. ನಿನ್ನ ಪ್ರತಿಜ್ಞಾಪೂರ್ತಿಗಾಗಿ ಅವರಿಂದ ಕವಚವನ್ನು ಯಾಚಿಸುತ್ತೇನೆ

೩೪. ಬ್ರಾಹ್ಮಣನಾಡಿದ ಮಾತುಗಳನ್ನು ಕೇಳಿ, ಪರಶುರಾಮನು ಮನಸ್ಸಿನಲ್ಲಿಯೇ ವ್ಯಥೆಪಡುತ್ತಾ, ಭಯದಿಂದ ಅವನನ್ನು ಕುರಿತಿಂತೆಂದನು.

೩೫. ಪರಶುರಾಮ:— ಎಲೈ ಮಹಾಜ್ಞಾನಿಯೇ, ಬ್ರಾಹ್ಮಣರೂಪಧರನಾದ ನೀನಾರೆಂಬುದನ್ನು ನಾನರಿಯೆ. ಅಜ್ಞನಾದ ನನಗೆ ಅದನ್ನು ಜಾಗ್ರತೆಯಾಗಿ ತಿಳಿಸಿ ಆ ರಾಜನ ಸಮೀಪಕ್ಕೆ ಹೋಗು.

೩೬. ಭಾರ್ಗವನ ಮಾತನ್ನು ಕೇಳಿ ಬ್ರಾಹ್ಮಣನು ನಸುನಕ್ಕು ತಾನು ಸರ್ವೇಶ್ವರನಾದ ವಿಷ್ಣುವೆಂಬುದನ್ನು ಅವನಿಗೆ ತಿಳಿಸಿ ಕವಚವನ್ನು ಬೇಡಲು ಆ ರಾಜನ ಸಮೀಪಕ್ಕೆ ಹೋದನು.

ಗತ್ವಾ ತಯೋಃ ಸನ್ನಿಧಾನಂ ಯುಯಾಚೇ ಕವಚೇ ಚ ತೌ ।
ದದತುಸ್ತೌ ಚ ಕವಚೇ ವಿಷ್ಣವೇ ವಿಷ್ಣುಮಾಯಯಾ ।
ಗೃಹೀತ್ವಾ ಕವಚೇ ವಿಷ್ಣುರ್ವೈಕುಂಠಂ ನಿರ್ಜಗಾಮ ಸಃ ॥ ೩೭ ॥

॥ ನಾರದ ಉವಾಚ ॥

ಮಹಾಲಕ್ಷ್ಮ್ಯಾಶ್ಚ ಕವಚಂ ಕೇನ ದತ್ತಂ ಮಹಾಮುನೇ ।
ಪುಷ್ಕರಾಕ್ಷಾಯ ಭೂಪಾಯ ಶ್ರೋತುಂ ಕೌತೂಹಲಂ ಮಮ ॥ ೩೮ ॥

ಕವಚಂ ಚಾಪಿ ದುರ್ಗಾಯಾಃ ಪುಷ್ಕರಾಕ್ಷಸುತಾಯ ಚ ।
ದುರ್ಲಭಂ ಕೇನ ವಾ ದತ್ತಂ ತದ್ಭವಾನ್ವಕ್ತುಮರ್ಹಸಿ ॥ ೩೯ ॥

ಕವಚಂ ಚಾಪಿ ಕಿಂಭೂತಂ ತಯೋರ್ವಾ ತಸ್ಯ ಕಿಂ ಫಲಂ ।
ಮಂತ್ರೌ ತು ಕಿಂ ಪ್ರಕಾರೌ ಚ ತನ್ಮೇ ಬ್ರೂಹಿ ಜಗದ್ಗುರೋ ॥ ೪೦ ॥

---

೩೭. ಅಲ್ಲಿಗೆ ಹೋಗಿ ಅವರಿಬ್ಬರನ್ನೂ ಕವಚಬೇಕೆಂದು ಬೇಡಿದನು. ವಿಷ್ಣುಮಾಯೆಗೊಳಗಾದ ಅವರಿಬ್ಬರೂ ತಾವು ಧರಿಸಿದ್ದ ಕವಚವನ್ನು ವಿಷ್ಣುವಿಗೆ ದಾನಮಾಡಿದರು ಆ ಕವಚಗಳನ್ನು ಸ್ವೀಕರಿಸಿ ವಿಷ್ಣುವು ವೈಕುಂಠಕ್ಕೆ ತೆರಳಿದನು.

೩೮. ನಾರದ:—ಎಲೈ ಮಹರ್ಷಿಯೇ, ರಾಜನಾದ ಪುಷ್ಕರಾಕ್ಷನಿಗೆ ಮಹಾ ಲಕ್ಷ್ಮಿಯ ಕವಚವನ್ನು ಅನುಗ್ರಹಿಸಿ ಕೊಟ್ಟವರಾರು? ಇದನ್ನು ಕೇಳಬೇಕೆಂದು ನನಗೆ ಬಹಳ ಕುತೂಹಲವಿದೆ.

೩೯. ಅಲ್ಲದೆ ದುರ್ಲಭವಾದ ದುರ್ಗಾಕವಚವನ್ನು ಪುಷ್ಕರಾಕ್ಷನ ಪುತ್ರನಿಗೆ ಅನುಗ್ರಹಿಸಿ ಕೊಟ್ಟವರಾರೆಂಬುದನ್ನೂ ನನಗೆ ವಿವರಿಸು.

೪೦. ಎಲೈ ಜಗದ್ಗುರುವೇ, ಆ ಕವಚಗಳ ಸ್ವರೂಪವೇನು? ಅವುಗಳ ಧಾರಣೆಯಿಂದ ಫಲವೇನು? ಅವುಗಳ ಧಾರಣೋಪಯೋಗವಾದ ಮಂತ್ರಗಳಾವುವು? ಇವೆಲ್ಲವನ್ನೂ ನನಗೆ ವಿವರಿಸಿ ಹೇಳು.

|| ನಾರಾಯಣ ಉವಾಚ ||

ದತ್ತಂ ಸನತ್ಕುಮಾರೇಣ ಪುಷ್ಕರಾಕ್ಷಾಯ ಧೀಮತೇ।
ಮಹಾಲಕ್ಷ್ಮ್ಯಾಶ್ಚ ಕವಚಂ ಮಂತ್ರಶ್ಚಾಪಿ ದಶಾಕ್ಷರಃ || ೪೧ ||

ಸ್ತವನಂ ಚಾಪಿ ಗೋಪ್ಯಂ ವೈ ಪ್ರೋಕ್ತಂ ತಚ್ಚರಿತಂ ಚ ಯತ್ ।
ಧ್ಯಾನಂ ಚ ಸಾಮವೇದೋಕ್ತಂ ಪೂಜಾಂ ಚೈವ ಮನೋಹರಾಂ || ೪೨ ||

ದುರ್ಗಾಯಾಶ್ಚಾಪಿ ಕವಚಂ ದತ್ತಂ ದುರ್ವಾಸಸಾ ಪುರಾ।
ಸ್ತವನಂ ಚಾಪಿ ಗೋಪ್ಯಂ ಚ ಮಂತ್ರಶ್ಚಾಪಿ ದಶಾಕ್ಷರಃ || ೪೩ ||

ಪಶ್ಚಾಚ್ಛ್ರೋಷ್ಯಸಿ ತತ್ಸರ್ವಂ ದೇವ್ಯಾಶ್ಚ ಪರಮಾದ್ಭುತಂ।
ಮಹಾಯುದ್ಧಸಮಾರಂಭೇ ದತ್ತಂ ಪ್ರಾರ್ಥನಯಾ ಚ ಯತ್ || ೪೪ ||

---

೪೧. ನಾರಾಯಣಮಹರ್ಷಿ :—ಸನತ್ಕುಮಾರನು ಬುದ್ಧಿವಂತನಾದ ಪುಷ್ಕರಾಕ್ಷನಿಗೆ ಮಹಾಲಕ್ಷ್ಮಿಯ ಕವಚವನ್ನೂ, ದಶಾಕ್ಷರೀ ಮಂತ್ರವನ್ನೂ ಉಪದೇಶಿಸಿದನು.

೪೨. ಅಲ್ಲದೆ ಗೋಪ್ಯವಾದ ಮಹಾಲಕ್ಷ್ಮಿಯ ಸ್ತುತಿಯನ್ನೂ, ಚರಿತ್ರೆಯನ್ನೂ, ಸಾಮವೇದೋಕ್ತವಾದ ಧ್ಯಾನವನ್ನೂ, ಮನೋಹರವಾದ ಆಕೆಯ ಪೂಜಾಕ್ರಮವನ್ನೂ ತಿಳುಹಿದನು.

೪೩. ಹಾಗೆಯೇ ಪೂರ್ವದಲ್ಲಿ ದೂರ್ವಾಸಮಹರ್ಷಿಯು ದುರ್ಗಾಕವಚವನ್ನೂ, ಗೋಪ್ಯವಾದ ಸ್ತೋತ್ರವನ್ನೂ, ದಶಾಕ್ಷರೀ ಮಂತ್ರವನ್ನೂ ಪುಷ್ಕರಾಕ್ಷನ ಮಗನಿಗೆ ಉಪದೇಶಿಸಿದನು.

೪೪. ಆ ದುರ್ಗಾದೇವಿಯ ಅತ್ಯದ್ಭುತಚರಿತ್ರೆಯನ್ನೂ, ಮಹಾಯುದ್ಧದ ಸಮಯದಲ್ಲಿ ಅವನ ಪ್ರಾರ್ಥನೆಯಂತೆ ಕೊಟ್ಟ ಕವಚದ ಮಹಿಮೆಯನ್ನೂ ಅನಂತರ ಕೇಳಿ ತಿಳಿಯುವೆ.

ಮಹಾಲಕ್ಷ್ಮ್ಯಾಶ್ಚ ಮಂತ್ರಂ ಚ ಶೃಣು ತಂ ಕಥಯಾಮಿ ತೇ ।
ಓಂ ಶ್ರೀಂಕಮಲವಾಸಿನ್ಯೈ ಸ್ವಾಹೇತಿ ಪರಮಾದ್ಭುತಂ ॥ ೪೫ ॥

ಧ್ಯಾನಂ ಚ ಸಾಮವೇದೋಕ್ತಂ ಶೃಣು ಪೂಜಾವಿಧಿಂ ಮುನೇ ।
ದತ್ತಂ ತಸ್ಮೈ ಕುಮಾರೇಣ ಪುಷ್ಕರಾಕ್ಷಾಯ ಧೀಮತೇ ॥ ೪೬ ॥

ಸಹಸ್ರದಲಪದ್ಮಸ್ಥಾಂ ಪದ್ಮನಾಭಪ್ರಿಯಾಂ ಸತೀಂ ।
ಪದ್ಮಾಲಯಾಂ ಪದ್ಮವಕ್ತ್ರಾಂ ಪದ್ಮಪತ್ರಾಭಲೋಚನಾಂ ॥ ೪೭ ॥

ಪದ್ಮಪುಷ್ಪಪ್ರಿಯಾಂ ಪದ್ಮಪುಷ್ಪತಲ್ಪಾಧಿಶಾಯಿನೀಂ ।
ಪದ್ಮಿನೀಂ ಪದ್ಮಹಸ್ತಾಂ ಚ ಪದ್ಮಮಾಲಾವಿಭೂಷಿತಾಂ ॥ ೪೮ ॥

ಪದ್ಮಭೂಷಣಭೂಷಾಢ್ಯಾಂ ಪದ್ಮಶೋಭಾವಿವರ್ಧಿನೀಂ ।
ಪದ್ಮಾಟವೀಂ ಪ್ರಪಶ್ಯಂತೀಂ ಸಸ್ಮಿತಾಂ ತಾಂ ಭಜೇ ಮುದಾ ॥ ೪೯ ॥

---

೪೫. ಈಗ ಮಹಾಲಕ್ಷ್ಮಿಯ ಮಂತ್ರವನ್ನು ಹೇಳುವೆನು ಕೇಳು. "ಓಂ ಶ್ರೀಂಕಮಲವಾಸಿನ್ಯೈ ಸ್ವಾಹಾ" ಎಂಬ ಹತ್ತಕ್ಷರದ ಮಂತ್ರವು ಅತ್ಯದ್ಭುತವಾದುದು.

೪೬. ಎಲೈ ನಾರದಮುನಿಯೇ, ಸನತ್ಕುಮಾರನು ಪುಷ್ಕರಾಕ್ಷನಿಗೆ ಉಪದೇಶಿಸಿದ ಸಾಮವೇದೋಕ್ತವಾದ ಧ್ಯಾನ ಮತ್ತು ಪೂಜಾವಿಧಿಯನ್ನು ಹೇಳುವೆನು ಕೇಳು.

೪೭. ಸಹಸ್ರದಳ ಪದ್ಮದಲ್ಲಿ ನೆಲೆಸಿ ಪದ್ಮನಿಲಯಳೂ, ಪದ್ಮಮುಖಿಯೂ, ಪದ್ಮದಳನೇತ್ರಳೂ ಆಗಿರುವ ಪದ್ಮನಾಭ (ವಿಷ್ಣು) ಪ್ರಿಯಳನ್ನು ಭಜಿಸುವೆನು.

೪೮. ಪದ್ಮಪುಷ್ಪದಲ್ಲಿ ಪ್ರೀತಿಯುಳ್ಳವಳೂ, ಪದ್ಮಪುಷ್ಪವನ್ನು ಹಾಸಿ ಪವಡಿಸುವವಳೂ, ಪದ್ಮಹಸ್ತಳೂ, ಪದ್ಮಮಾಲೆಯನ್ನು ಧರಿಸಿರುವವಳೂ ಆದ ಪದ್ಮಿನಿಯನ್ನು ಧ್ಯಾನಿಸುವೆನು.

೪೯. ಪದ್ಮಭೂಷಣ ಭೂಷಿತಳೂ, ಪದ್ಮದ ಕಾಂತಿಯನ್ನು ಹೆಚ್ಚಿಸುವವಳೂ, ಮಂದಹಾಸದಿಂದ ಪದ್ಮವನವನ್ನು ನೋಡುತ್ತಿರುವವಳೂ ಆದ ಪದ್ಮಾಕ್ಷಿಯನ್ನು ಸಂತೋಷದಿಂದ ಭಜಿಸುವೆನು.

ಚಂದನಾಷ್ಟದಲೇ ಪದ್ಮೇ ಪದ್ಮಪುಷ್ಪೇಣ ಪೂಜಯೇತ್ ।
ಗಣಂ ಸಂಪೂಜ್ಯ ದತ್ವಾ ಚೈವೋಪಚಾರಾಂಶ್ಚ ಷೋಡಶ ॥ ೫೦ ॥

ತತಃ ಸ್ತುತ್ವಾ ಚ ಪ್ರಣಮೇತ್ಸಾಧಕೋ ಭಕ್ತಿಪೂರ್ವಕಂ ।
ಕವಚಂ ಶ್ರೂಯತಾಂ ಬ್ರಹ್ಮನ್ ಸರ್ವಸಾರಂ ವದಾಮಿ ತೇ ॥ ೫೧ ॥

॥ ನಾರಾಯಣ ಉವಾಚ ॥

ಶೃಣು ವಿಪ್ರೇಂದ್ರ ಪದ್ಮಾಯಾಃ ಕವಚಂ ಪರಮಂ ಶುಭಂ ।
ಪದ್ಮನಾಭೇನ ಯದ್ದತ್ತಂ ಬ್ರಹ್ಮಣೇ ನಾಭಿಪದ್ಮಕೇ ॥ ೫೨ ॥

ಸಂಪ್ರಾಪ್ಯ ಕವಚಂ ಬ್ರಹ್ಮಾ ತತ್ಪದ್ಮೇ ಸಸೃಜೇ ಜಗತ್ ।
ಪದ್ಮಾಲಯಾಪ್ರಸಾದೇನ ಸ ಲಕ್ಷ್ಮೀಕೋ ಬಭೂವ ಸಃ ॥ ೫೩ ॥

ಪದ್ಮಾಲಯಾವರಂ ಪ್ರಾಪ್ಯ ಪಾದ್ಮಶ್ಚ ಜಗತಾಂ ಪ್ರಭುಃ ।
ಪಾದ್ಮೇನ ಪದ್ಮಕಲ್ಪೇ ಚ ಕವಚಂ ಪರಮಾದ್ಭುತಂ ॥ ೫೪ ॥

---

೫೦. ಇಂತು ಭಜಿಸಿ ಚಂದನದಿಂದ ಅಷ್ಟದಳಪದ್ಮವನ್ನು ರಚಿಸಿ, ದೇವಿಯನ್ನು ಅಲ್ಲಿ ಪ್ರತಿಷ್ಠೆಮಾಡಿ, ಪರಿವಾರದೇವತೆಗಳೊಡನೆ ಆಕೆಯನ್ನು ಷೋಡಶೋಪಚಾರಪೂರ್ವಕವಾಗಿ ಪದ್ಮಪುಷ್ಪಗಳಿಂದ ಪೂಜಿಸಬೇಕು.

೫೧. ಅನಂತರ ಭಕ್ತನು ಭಕ್ತಿಪೂರ್ವಕವಾಗಿ ಸ್ತುತಿಸಿ, ನಮಿಸಬೇಕು. ಎಲೈ ವಿಪ್ರೋತ್ತಮನೇ, ಈಗ ಸರ್ವಶ್ರೇಷ್ಠವಾದ ಕವಚವನ್ನು ಹೇಳುವೆನು ಕೇಳು

೫೨. ನಾರಾಯಣಮಹರ್ಷಿ:—ಎಲೈ ವಿಪ್ರವರ್ಯನೇ, ಪದ್ಮನಾಭನು ತನ್ನ ನಾಭಿಕಮಲದಲ್ಲಿದ್ದ ಬ್ರಹ್ಮನಿಗೆ ಉಪದೇಶಿಸಿದ ಪರಮಮಂಗಳಕರವಾದ ಮಹಾಲಕ್ಷ್ಮಿಯ ಕವಚದ ಮಹಿಮೆಯನ್ನು ಕೇಳುವವನಾಗು.

೫೩. ಆ ಕವಚವನ್ನು ಹೊಂದಿ ಅದರ ಅನುಗ್ರಹದಿಂದ ಬ್ರಹ್ಮನು ಆ ನಾಭಿಕಮಲದಲ್ಲಿಯೇ ಜಗತ್ತನ್ನು ಸೃಷ್ಟಿಮಾಡಿದನು ಮಹಾಲಕ್ಷ್ಮಿಯ ಪ್ರಸಾದದಿಂದ ಸಂಪದ್ಯುಕ್ತನಾದನು.

೫೪. ಪಾದ್ಮಕಲ್ಪದಲ್ಲಿ ಜಗದೊಡೆಯನು ಮಹಾಲಕ್ಷ್ಮಿಯ ವರದಿಂದ ಅತ್ಯದ್ಭುತವಾದ ಆ ಕವಚನ್ನು ಧರಿಸಿ ಜಗತ್ಸೃಷ್ಟಿಮಾಡಿದನು.

ದತ್ತಂ ಸನತ್ಕುಮಾರಾಯ ಪ್ರಿಯಪುತ್ರಾಯ ಧೀಮತೇ ।
ಕುಮಾರೇಣ ಚ ಯದ್ದತ್ತಂ ಪುಷ್ಕರಾಯ ಚ ನಾರದ ॥ ೫೫ ॥

ಯದ್ಧೃತ್ವಾ ಪಠನಾದ್ಬ್ರಹ್ಮಾ ಸರ್ವಸಿದ್ಧೇಶ್ವರೋ ಮಹಾನ್ ।
ಪರಮೈಶ್ವರ್ಯಸಂಯುಕ್ತಃ ಸರ್ವಸಂಪತ್ಸಮನ್ವಿತಃ ॥ ೫೬ ॥

ಯದ್ಧೃತ್ವಾ ಚ ಧನಾಧ್ಯಕ್ಷಃ ಕುಬೇರಶ್ಚ ಧನಾಧಿಪಃ ।
ಸ್ವಾಯಂಭುವೋ ಮನುಃ ಶ್ರೀಮಾನ್ಪಠನಾದ್ಧಾರಣಾದ್ಯತಃ ॥ ೫೭ ॥

ಪ್ರಿಯವ್ರತೋತ್ತಾನಪಾದೌ ಲಕ್ಷ್ಮೀವಂತೌ ಯತೋ ಮುನೇ ।
ಪೃಥುಃ ಪೃಥ್ವೀಪತಿಃ ಸದ್ಯೋ ಹ್ಯಭವದ್ಧಾರಣಾದ್ಯತಃ ॥ ೫೮ ॥

ಕವಚಸ್ಯ ಪ್ರಸಾದೇನ ಸ್ವಯಂ ದಕ್ಷಃ ಪ್ರಜಾಪತಿಃ ।
ಧರ್ಮಶ್ಚ ಕರ್ಮಣಾಂ ಸಾಕ್ಷೀ ಪಾತಾ ಯಸ್ಯ ಪ್ರಸಾದತಃ ॥ ೫೯ ॥

---

೫೫. ಬ್ರಹ್ಮನು ತನ್ನ ಪ್ರಿಯಪುತ್ರನಾದ ಸನತ್ಕುಮಾರನಿಗೂ ಸನತ್ಕುಮಾರನು ಪುಷ್ಕರನಿಗೂ ಈ ಕವಚವನ್ನು ಕ್ರಮವಾಗಿ ಅನುಗ್ರಹಿಸಿಕೊಟ್ಟರು.

೫೬. ಈ ಕವಚವನ್ನು ಧರಿಸಿ ಮಂತ್ರಪಠನೆಮಾಡಿ ಬ್ರಹ್ಮನು ಸರ್ವಸಿದ್ಧೇಶ್ವರನೂ, ಸಕಲ ಸಂಪದ್ಭರಿತನೂ ಸರ್ವಶಕ್ತನೂ ಆದನು.

೫೭ ಈ ಕವಚವನ್ನು ಧರಿಸಿಯೇ ಕುಬೇರನು ಧನಪತಿಯಾದನು. ಇದನ್ನು ಧರಿಸಿ ಮಂತ್ರಪಠನೆಮಾಡಿದುದರಿಂದಲೇ ಸ್ವಾಯಂಭುವಮನುವು ಶ್ರೀಮಂತನಾದನು.

೫೮. ಪ್ರಿಯವ್ರತ ಮತ್ತು ಉತ್ತಾನಪಾದರು ಸಂಪದ್ಯುತರಾದುದೂ, ಪೃಥುಚಕ್ರವರ್ತಿಯು ಪೃಥ್ವೀಪತಿಯಾದುದೂ ಈ ಕವಚಧಾರಣೆಯ ಪ್ರಭಾವದಿಂದಲೇ.

೫೯. ಈ ಕವಚದ ಅನುಗ್ರಹದಿಂದ ದಕ್ಷಬ್ರಹ್ಮನು ಪ್ರಜಾಪತಿಯೆನಿಸಿದನು. ಧರ್ಮಪುರುಷನು ಕರ್ಮಸಾಕ್ಷಿಯಾದನು.

ಯದ್ಧೃತ್ವಾ ದಕ್ಷಿಣೇ ಬಾಹೌ ವಿಷ್ಣುಃ ಕ್ಷೀರೋದಶಾಯಿತಃ ।
ಭಕ್ತ್ಯಾ ವಿಧತ್ತೇ ಕಂಠೇ ಚ ಶೇಷೋ ನಾರಾಯಣಾಂಶಕಃ ॥ ೬೦ ॥

ಯದ್ಧೃತ್ವಾ ವಾಮನಂ ಲೇಭೇ ಕಶ್ಯಪಶ್ಚ ಪ್ರಜಾಪತಿಃ ।
ಸರ್ವದೇವಾಧಿಪಃ ಶ್ರೀಮಾನ್ ಮಹೇಂದ್ರೋ ಧಾರಣಾದ್ಯತಃ ॥ ೬೧ ॥

ರಾಜಾ ಮರುತ್ತೋ ಭಗವಾನಭವದ್ಧಾರಣಾದ್ಯತಃ ।
ತ್ರೈಲೋಕ್ಯಾಧಿಪತಿಃ ಶ್ರೀಮಾನ್ನಹುಷೋ ಯಸ್ಯ ಧಾರಣಾತ್ ॥ ೬೨ ॥

ವಿಶ್ವಂ ವಿಜಿಗ್ಯೇ ಖಟ್ವಾಂಗಃ ಪಠನಾದ್ಧಾರಣಾದ್ಯತಃ ।
ಮುಚುಕುಂದೋ ಯತಃ ಶ್ರೀಮಾನ್ಮಾಂಧಾತೃತನಯೋ ಮಹಾನ್ ॥ ೬೩ ॥

ಸರ್ವಸಂಪತ್ಪ್ರದಸ್ಯಾಸ್ಯ ಕವಚಸ್ಯ ಪ್ರಜಾಪತಿಃ ।
ಋಷಿಶ್ಛಂದಶ್ಚ ಬೃಹತೀ ದೇವೀ ಪದ್ಮಾಲಯಾ ಸ್ವಯಂ ॥ ೬೪ ॥

---

೬೦. ಈ ಕವಚವನ್ನು ಬಲಭುಜದಲ್ಲಿ ಧರಿಸಿದುದರಿಂದಲೇ ವಿಷ್ಣುವು ಕ್ಷೀರಸಾಗರದಲ್ಲಿ ಪವಡಿಸಿದನು. ನಾರಾಯಣಾಂಶಸಂಭೂತನಾದ ಆದಿಶೇಷನೂ ಈ ಕವಚವನ್ನು ಭಕ್ತಿಪೂರ್ವಕವಾಗಿ ಕಂಠದಲ್ಲಿ ಧರಿಸಿರುವನು.

೬೧ ಕಶ್ಯಪಪ್ರಜಾಪತಿಯು ಈ ಕವಚವನ್ನು ಧರಿಸಿದುದರಿಂದ ವಾಮನನನ್ನು ಪುತ್ರನನ್ನಾಗಿ ಪಡೆದನು. ಮಹೇಂದ್ರನು ಎಲ್ಲ ದೇವತೆಗಳಿಗೂ ಅಧಿಪತಿಯೆನಿಸಿದನು

೬೨. ಪೂಜ್ಯನಾದ ಮರುತ್ತನು ರಾಜನಾದುದೂ, ನಹುಷನು ತ್ರಿಲೋಕಾಧಿಪತಿಯಾದುದೂ ಈ ಕವಚಧಾರಣೆಯ ಪ್ರಭಾವದಿಂದಲೇ.

೬೩. ಖಟ್ವಾಂಗನು ಈ ಕವಚವನ್ನು ಧರಿಸಿ ಮಂತ್ರಪಠನೆಮಾಡಿದುದರಿಂದ ವಿಶ್ವವಿಜಯಿಯಾದನು. ಮುಚುಕುಂದನು ಮಾಂಧಾತೃಚಕ್ರವರ್ತಿಯ ಪುತ್ರನಾದುದೂ ಈ ಕವಚದ ಮಹಿಮೆಯಿಂದಲೇ.

೬೪. ಸಕಲಸಂಪತ್ಪ್ರದಾತೃವಾದ ಈ ಕವಚಕ್ಕೆ ಪ್ರಜಾಪತಿಯೇ ಋಷಿಯು. ಬೃಹತೀಛಂದಸ್ಸು, ಸ್ವಯಂ ಪದ್ಮಾಲಯಳೇ ದೇವತೆಯು.

ಧರ್ಮಾರ್ಥಕಾಮಮೋಕ್ಷೇಷು ವಿನಿಯೋಗಃ ಪ್ರಕೀರ್ತಿತಃ ।
ಪುಣ್ಯಬೀಜಂ ಚ ಮಹತಾಂ ಕವಚಂ ಪರಮಾದ್ಭುತಂ ॥ ೬೫ ॥

ಓಂ ಹ್ರೀಂ ಕಮಲವಾಸಿನ್ಯೈ ಸ್ವಾಹಾ ಮೇ ಪಾತು ಮಸ್ತಕಂ ।
ಶ್ರೀಂ ಮೇ ಪಾತು ಕಪಾಲಂ ಚ ಲೋಚನೇ ಶ್ರೀಂ ಶ್ರಿಯೈ ನಮಃ ॥ ೬೬ ॥

ಓಂ ಶ್ರೀಂ ಶ್ರಿಯೈ ಸ್ವಾಹೇತಿ ಚ ಕರ್ಣಯುಗ್ಮಂ ಸದಾವತು ।
ಓಂ ಶ್ರೀಂ ಕ್ಲೀಂ ಮಹಾಲಕ್ಷ್ಮ್ಯೈ ಸ್ವಾಹಾ ಮೇ ಪಾತು ನಾಸಿಕಾಂ ॥ ೬೭ ॥

ಓಂ ಶ್ರೀಂ ಪದ್ಮಾಲಯಾಯೈ ಚ ಸ್ವಾಹಾ ದಂತಾನ್ಸದಾವತು ।
ಓಂ ಶ್ರೀಂ ಕೃಷ್ಣಪ್ರಿಯಾಯೈ ಚ ದಂತರಂಧ್ರಂ ಸದಾವತು ॥ ೬೮ ॥

---

೬೫. ಧರ್ಮಾರ್ಥಕಾಮಮೋಕ್ಷಗಳಲ್ಲಿ ಈ ಕವಚದ ವಿನಿಯೋಗ. ಅತ್ಯದ್ಭುತವಾದ ಈ ಕವಚವು ಮಹಾಪುಣ್ಯಗಳಿಗೆಲ್ಲ ಬೀಜಭೂತವಾಗಿರುವುದು.

೬೬. "ಓಂ ಹ್ರೀಂ ಕಮಲವಾಸಿನ್ಯೈ ಸ್ವಾಹಾ" ಎಂಬುದು ನನ್ನ ಶಿರೋಭಾಗವನ್ನೂ, 'ಓಂ ಶ್ರೀಂ ಕಮಲವಾಸಿನ್ಯೈ ಸ್ವಾಹಾ' ಎಂಬುದು ನನ್ನ ಕಪಾಲವನ್ನೂ 'ಓಂ ಶ್ರೀಂ ಶ್ರಿಯೈ ನಮಃ' ಎಂಬುದು ನನ್ನ ಎರಡು ಕಣ್ಣುಗಳನ್ನೂ ಕಾಪಾಡಲಿ.

೬೭. 'ಓಂ ಶ್ರೀಂ ಶ್ರಿಯೈ ಸ್ವಾಹಾ' ಎಂಬುದುನನ್ನ ಎರಡು ಕಿವಿಗಳನ್ನೂ 'ಓಂ ಶ್ರೀಂ ಕ್ಲೀಂ ಮಹಾಲಕ್ಷ್ಮ್ಯೈ ಸ್ವಾಹಾ' ಎಂಬುದು ನನ್ನ ನಾಸಿಕವನ್ನೂ ಸರ್ವದಾ ಕಾಪಾಡಲಿ.

೬೮. 'ಓಂ ಶ್ರೀಂ ಪದ್ಮಾಲಯಾಯೈ ಸ್ವಾಹಾ' ಎಂಬ ಮಂತ್ರವು ನನ್ನ ಹಲ್ಲುಗಳನ್ನೂ, 'ಓಂ ಶ್ರೀಂ ಕೃಷ್ಣಪ್ರಿಯಾಯೈ ಸ್ವಾಹಾ' ಎಂಬುದು ನನ್ನ ಹಲ್ಲುಸಂದಿಗಳನ್ನೂ ಕಾಪಾಡಲಿ.

ಓಂ ಶ್ರೀಂ ನಾರಾಯಣೇಶಾಯೈ ಮಮ ಕಂಠಂ ಸದಾವತು ।
ಓಂ ಶ್ರೀಂ ಕೇಶವಕಾಂತಾಯೈ ಮಮ ಸ್ಕಂಧಂ ಸದಾವತು ॥ ೧೯ ॥

ಓಂ ಶ್ರೀಂ ಪದ್ಮನಿವಾಸಿನ್ಯೈ ಸ್ವಾಹಾ ನಾಭಿಂ ಸದಾವತು ।
ಓಂ ಹ್ರೀಂ ಶ್ರೀಂ ಸಂಸಾರಮಾತ್ರೇ ಮಮ ವಕ್ಷಃ ಸದಾವತು ॥ ೨೦ ॥

ಓಂ ಶ್ರೀಂ ಓಂ ಕೃಷ್ಣಕಾಂತಾಯೈ ಸ್ವಾಹಾ ಪೃಷ್ಠಂ ಸದಾವತು ।
ಓಂ ಹ್ರೀಂ ಶ್ರೀಂ ಶ್ರಿಯೈ ಸ್ವಾಹಾ ಚ ಮಮಹಸ್ತೌ ಸದಾವತು ॥ ೨೧ ॥

ಓಂ ಶ್ರೀನಿವಾಸಕಾಂತಾಯೈ ಮಮ ಪಾದೌ ಸದಾವತು ।
ಓಂಹ್ರೀಂಶ್ರೀಂಕ್ಲೀಂ ಶ್ರಿಯೈಸ್ವಾಹಾ ಸರ್ವಾಂಗಂ ಮೇ ಸದಾವತು ॥ ೨೨ ॥

ಪ್ರಾಚ್ಯಾಂ ಪಾತು ಮಹಾಲಕ್ಷ್ಮೀರಾಗ್ನೇಯ್ಯಾಂ ಕಮಲಾಲಯಾ ।
ಪದ್ಮಾ ಮಾಂ ದಕ್ಷಿಣೇ ಪಾತು ನೈಋತ್ಯಾಂ ಶ್ರೀಹರಿಪ್ರಿಯಾ ॥ ೨೩ ॥

---

೧೯. 'ಓಂ ಶ್ರೀಂ ನಾರಾಯಣೇಶಾಯೈ ಸ್ವಾಹಾ' ಎಂಬುದು ನನ್ನ ಕಂಠಪ್ರದೇಶವನ್ನೂ 'ಓಂ ಶ್ರೀಂ ಕೇಶವಕಾಂತಾಯೈ ಸ್ವಾಹಾ' ಎಂಬುದು ನನ್ನ ಹೆಗಲುಗಳನ್ನೂ ರಕ್ಷಿಸಲಿ.

೨೦. 'ಓಂ ಶ್ರೀಂ ಪದ್ಮನಿವಾಸಿನ್ಯೈ ಸ್ವಾಹಾ' ಎಂಬುದು ನನ್ನ ನಾಭಿಪ್ರದೇಶವನ್ನೂ. 'ಓಂ ಹ್ರೀಂ ಶ್ರೀಂ ಸಂಸಾರಮಾತ್ರೇ ಸ್ವಾಹಾ' ಎಂಬುದು ನನ್ನ ವಕ್ಷಃಸ್ಥಳವನ್ನೂ ಸರ್ವದಾ ರಕ್ಷಿಸಲಿ.

೨೧. 'ಓಂ ಶ್ರೀಂ ಓಂ ಕೃಷ್ಣಕಾಂತಾಯೈ ಸ್ವಾಹಾ' ಎಂಬುದು ನನ್ನ ಪೃಷ್ಠಭಾಗವನ್ನೂ, 'ಓಂ ಹ್ರೀಂ ಶ್ರೀಂ ಶ್ರಿಯೈ ಸ್ವಾಹಾ' ಎಂಬುದು ನನ್ನ ಹಸ್ತಗಳನ್ನೂ ಸರ್ವದಾ ಕಾಪಾಡಲಿ.

೨೨. 'ಓಂ ಶ್ರೀನಿವಾಸ ಕಾಂತಾಯೈ ಸ್ವಾಹಾ' ಎಂಬುದು ನನ್ನ ಕಾಲುಗಳನ್ನೂ, 'ಓಂ ಹ್ರೀಂ ಶ್ರೀಂ ಕ್ಲೀಂ ಶ್ರಿಯೈ ಸ್ವಾಹಾ' ಎಂಬ ಮಂತ್ರವು ನನ್ನ ಸರ್ವಾಂಗಗಳನ್ನೂ ಸರ್ವದಾ ಕಾಪಾಡಲಿ.

೨೩. ಪೂರ್ವದಿಕ್ಕಿನಲ್ಲಿ ಮಹಾಲಕ್ಷ್ಮಿಯೂ, ಆಗ್ನೇಯದಲ್ಲಿ ಕಮಲಾಲಯಳೂ, ದಕ್ಷಿಣದಲ್ಲಿ ಪದ್ಮೆಯೂ, ನೈಋತ್ಯದಲ್ಲಿ ಶ್ರೀಹರಿಪ್ರಿಯಳೂ ನನ್ನನ್ನು ಯಾವಾಗಲೂ ರಕ್ಷಿಸಲಿ.

ಪದ್ಮಾಲಯಾ ಪಶ್ಚಿಮೇ ಮಾಂ ವಾಯವ್ಯಾಂ ಪಾತು ಸಾ ಸ್ವಯಂ।
ಉತ್ತರೇ ಕಮಲಾ ಪಾತು ಚೈಶಾನ್ಯಾಂ ಸಿಂಧುಕನ್ಯಕಾ ॥ ೭೪ ॥

ನಾರಾಯಣೀ ಚ ಪಾತೂರ್ಧ್ವಮಧೋ ವಿಷ್ಣುಪ್ರಿಯಾಽವತು।
ಸಂತತಂ ಸರ್ವತಃ ಪಾತು ವಿಷ್ಣುಪ್ರಾಣಾಧಿಕಾ ಮಮ ॥ ೭೫ ॥

ಇತಿ ತೇ ಕಥಿತಂ ವತ್ಸ ಸರ್ವಮಂತ್ರೌಘವಿಗ್ರಹಂ।
ಸರ್ವೈಶ್ವರ್ಯಪ್ರದಂ ನಾಮ ಕವಚಂ ಪರಮಾದ್ಭುತಂ ॥ ೭೬ ॥

ಸುವರ್ಣಪರ್ವತಂ ದತ್ವಾ ಮೇರುತುಲ್ಯಂ ದ್ವಿಜಾತಯೇ।
ಯತ್ಫಲಂ ಲಭತೇ ಧರ್ಮಿ ಕವಚೇನ ತತೋಽಧಿಕಂ ॥ ೭೭ ॥

ಗುರುಮಭ್ಯರ್ಚ್ಯ ವಿಧಿವತ್ಕವಚಂ ಧಾರಯೇತ್ತು ಯಃ।
ಕಂಠೇ ವಾ ದಕ್ಷಿಣೇ ಬಾಹೌ ಸ ಶ್ರೀಮಾನ್ಪ್ರತಿಜನ್ಮನಿ ॥ ೭೮ ॥

---

೭೪. ಪದ್ಮಾಲಯಳು ಪಶ್ಚಿಮದಲ್ಲಿಯೂ, ಸ್ವಯಂ ಮಹಾಲಕ್ಷ್ಮಿಯು ವಾಯುವ್ಯದಲ್ಲಿಯೂ, ಕಮಲೆಯು ಉತ್ತರದಲ್ಲಿಯೂ, ಸಿಂಧುಕನ್ಯೆಯು ಈಶಾನ್ಯದಲ್ಲಿಯೂ ನನ್ನನ್ನು ರಕ್ಷಿಸಲಿ.

೭೫. ಮೇಲುಭಾಗದಲ್ಲಿ ನಾರಾಯಣಿಯೂ, ಕೆಳಭಾಗದಲ್ಲಿ ವಿಷ್ಣುಪ್ರಿಯಳೂ ಎಲ್ಲದಿಕ್ಕಿನಲ್ಲಿ ವಿಷ್ಣುಪ್ರಾಣಾಧಿಕಳೂ ಸರ್ವದಾ ನನ್ನನ್ನು ಕಾಪಾಡಲಿ.

೭೬. ವತ್ಸ ನಾರದನೇ, ಸಕಲಮಂತ್ರಗಳಸಾರವೂ, ಅತ್ಯದ್ಭುತವೂ ಆದ ಸರ್ವೈಶ್ವರ್ಯಪ್ರದವೆಂಬ ಕವಚದ ಮಹಿಮೆಯನ್ನೂ ನಿನಗೆ ವಿವರಿಸಿದೆನು.

೭೭. ಧರ್ಮಪರಾಯಣನು ಬ್ರಾಹ್ಮಣನಿಗೆ ಮೇರುಪರ್ವತದಷ್ಟು ಸುವರ್ಣರಾಶಿಯನ್ನು ದಾನಮಾಡುವುದರಿಂದ ಯಾವ ಫಲ ಲಭಿಸುವುದೋ ಅದಕ್ಕಿಂತಲೂ ಅಧಿಕವಾಗಿ ಈ ಕವಚದಿಂದ ಲಭಿಸುವುದು.

೭೮. ವಿಧಿಪೂರ್ವಕವಾಗಿ ಗುರುವನ್ನು ಪೂಜಿಸಿ ಈ ಕವಚವನ್ನು ಕಂಠದಲ್ಲಾಗಲೀ, ದಕ್ಷಿಣಭುಜದಲ್ಲಾಗಲೀ, ಧರಿಸುವವರು ಪ್ರತಿಜನ್ಮದಲ್ಲಿಯೂ ಶ್ರೀಮಂತರಾಗುವರು.

ಅಸ್ತಿ ಲಕ್ಷ್ಮೀರ್ಗೃಹೇ ತಸ್ಯ ನಿಶ್ಚಲಾ ಶತಪೂರುಷಂ ।
ದೇವೇಂದ್ರೈಶ್ಚಾಸುರೇಂದ್ರೈಶ್ಚ ಸೋಽವಧ್ಯೋ ನಿಶ್ಚಿತಂ ಭವೇತ್ ॥ ೭೯ ॥

ಸ ಸರ್ವಪುಣ್ಯವಾನ್ಧೀಮಾನ್ಸರ್ವಯಜ್ಞೇಷು ದೀಕ್ಷಿತಃ ।
ಸ ಸ್ನಾತಃ ಸರ್ವತೀರ್ಥೇಷು ಯಸ್ಯೇದಂ ಕವಚಂ ಗಲೇ ॥ ೮೦ ॥

ಯಸ್ಮೈ ಕಸ್ಮೈ ನ ದಾತವ್ಯಂ ಲೋಭಮೋಹಭಯೈರಪಿ ।
ಗುರುಭಕ್ತಾಯ ಶಿಷ್ಯಾಯ ಶರಣಾಯ ಪ್ರಕಾಶಯೇತ್ ॥ ೮೧ ॥

ಇದಂ ಕವಚಮಜ್ಞಾತ್ವಾ ಜಪೇಲ್ಲಕ್ಷ್ಮೀಂ ಜಗತ್ಪ್ರಸೂಂ ।
ಕೋಟಿಸಂಖ್ಯಂ ಪ್ರಜಪ್ತೋಽಪಿ ನ ಮಂತ್ರಃ ಸಿದ್ಧಿದಾಯಕಃ ॥ ೮೨ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ತೃತೀಯೇ ಗಣಪತಿಖಂಡೇ ನಾರದ–ನಾರಾಯಣ ಸಂವಾದೇ ಶ್ರೀ ಲಕ್ಷ್ಮೀಕವಚವರ್ಣನಂ ನಾಮ ಅಷ್ಟತ್ರಿಂಶತ್ತಮೋಽಧ್ಯಾಯಃ

---

೭೯. ಅವರ ಮನೆಯಲ್ಲಿ ನೂರು ತಲೆ ಕಳೆಯುವವರೆಗೆ ಲಕ್ಷ್ಮಿಯು ನಿಶ್ಚಿಲಳಾಗಿರುವಳು. ಅವರನ್ನು ದೇವತೆಗಳಾಗಲೀ, ರಾಕ್ಷಸರಾಗಲೀ, ನಿಶ್ಚಯವಾಗಿಯೂ ವಧೆಮಾಡಲಾಗುವುದಿಲ್ಲ.

೮೦. ಯಾರ ಕಂಠದಲ್ಲಿ ಈ ಕವಚವಿರುವುದೋ ಅವರು ಸಕಲ ಪುಣ್ಯಗಳಿಗೂ ಭಾಗಿಯಾಗುವರು. ಸಕಲ ಯಜ್ಞದೀಕ್ಷೆಗಳ ಫಲವನ್ನೂ, ಸರ್ವಪುಣ್ಯತೀರ್ಥಗಳಲ್ಲಿ ಸ್ನಾನಮಾಡಿದ ಫಲವನ್ನೂ ಅವರು ಹೊಂದುವರು.

೮೧. ಲೋಭ, ಮೋಹ, ಭಯಕ್ಕೊಳಗಾಗಿ ಅಯೋಗ್ಯರಿಗೆ ಈ ಕವಚವನ್ನು ಉಪದೇಶಿಸಕೂಡದು. ಗುರುಭಕ್ತನೂ, ಶರಣಾಗತನೂ ಆದ ಶಿಷ್ಯನಿಗೆ ಮಾತ್ರ ಉಪದೇಶಿಸಬೇಕು.

೮೨. ಈ ಕವಚವನ್ನು ತಿಳಿಯದೆ ಜಗನ್ಮಾತೆಯಾದ ಲಕ್ಷ್ಮಿಯನ್ನು ಕುರಿತು ಕೋಟಿಬಾರಿ ಜಪಿಸಿದರೂ ಅವರಿಗೆ ಮಂತ್ರಸಿದ್ಧಿಯುಂಟಾಗುವುದಿಲ್ಲ.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಗಣಪತಿ ಖಂಡದಲ್ಲಿ ಶ್ರೀ ಲಕ್ಷ್ಮೀ ಕವಚ ವರ್ಣನಾತ್ಮಕವಾದ ಮೂವತ್ತೆಂಟನೆಯ ಅಧ್ಯಾಯವು ಮುಗಿದುದು.

ಮೂವತ್ತೆಂಟನೆಯ ಅಧ್ಯಾಯದ ಸಾರಾಂಶ

ಸುಚಂದ್ರನ ಪತನವಾದನಂತರ ಅವನ ಪುತ್ರನಾದ ಪುಷ್ಕರಾಕ್ಷನು ಮೂರು ಅಕ್ಷೌಹಿಣೀ ಸೇನೆಯೊಡನೆ ಯುದ್ಧಕ್ಕೆ ಬರಲು, ಭಾರ್ಗವನ ಸಹೋದರರು ಅವನೊಡನೆ ಬಹಳ ಹೊತ್ತು ಕಾದಾಡಿ ಅವನ ಸಾರಥಿ ಕುದುರೆ, ರಥ, ಬಾಣ, ಬತ್ತಳಿಕೆ ಮುಂತಾದವುಗಳನ್ನೆಲ್ಲ ಕತ್ತರಿಸಿ ಕೆಡಹಿದರು. ಅಲ್ಲದೆ ಅವನ ಸಹೋದರ ವರ್ಗವನ್ನೂ ಮೂರು ಅಕ್ಷೌಹಿಣೀ ಸೇನೆಯನ್ನೂ ನಾಶಗೊಳಿಸಿ, ಅವನ ಮೇಲೆ ಶೂಲಾಯುಧವನ್ನು ಪ್ರಯೋಗಿಸಿದರು. ಅವನು ಮಹಾಲಕ್ಷ್ಮಿಯ ಕವಚವನ್ನು ಕಂಠದಲ್ಲಿ ಧರಿಸಿದ್ದುದರಿಂದ ಶಿವನ ಶೂಲವು ಅವನಿಗೆ ಏನೂ ಮಾಡಲಾಗಲಿಲ್ಲ. ಆಗ ಕಾರ್ತವೀರ್ಯನು ಕಳುಹಿಸಿದ ಬೇರೆ ರಥವನ್ನೇರಿ ಪುಷ್ಕರಾಕ್ಷನು ಅತ್ಯುಗ್ರವಾಗಿ ಕಾದಾಡಿ ಭಾರ್ಗವನ ಸೋದರವರ್ಗವನ್ನು ಸಮ್ಮೋಹನಾಸ್ತ್ರದಿಂದ ಮೋಹಗೊಳಿಸಿದನು. ಆಗ ಭಾರ್ಗವನೇ ರಣಾಂಗಣಕ್ಕೆ ಬಂದು ತನ್ನ ಸಹೋದರರನ್ನೆಲ್ಲ ಚೇತನಗೊಳಿಸಿ, ಹಿಂತಿರುಗಿಸಿ ತಾನೇ ಪುಷ್ಕರಾಕ್ಷನೊಡನೆ ಯುದ್ಧಕ್ಕೆ ನಿಂತನು. ಪರಶುರಾಮನು ಪ್ರಯೋಗಿಸಿದ ದಿವ್ಯಾಸ್ತ್ರಗಳನ್ನೆಲ್ಲ ಪುಷ್ಕರಾಕ್ಷನು ಬರುತ್ತಿರುವಾಗಲೇ ತುಂಡರಿಸಲು ಕುಪಿತನಾದ ಪರಶುರಾಮನು ಪಾಶುಪತಾಸ್ತ್ರವನ್ನು ಪ್ರಯೋಗಿಸಲು ಹಿಡಿದಾಗ ಶ್ರೀಮನ್ನಾರಾಯಣನು ಬ್ರಾಹ್ಮಣವೇಷದಿಂದ ಬಂದು, ಪಾಶುಪತಾಸ್ತ್ರದ ಮಹಿಮೆಯನ್ನು ವರ್ಣಿಸಿ, ಪುಷ್ಕರಾಕ್ಷನ ಕಂಠದಲ್ಲಿರುವ ಮಹಾಲಕ್ಷ್ಮಿಯ ಕವಚವನ್ನೂ ಅವನ ಪುತ್ರನ ಕಂಠದಲ್ಲಿರುವ ದುರ್ಗಾಕವಚವನ್ನೂ ಬೇಡಿ ತೆಗೆದುಕೊಂಡ ಹೊರತೂ ಅವರಿಬ್ಬರನ್ನೂ ಸಂಹರಿಸಲಸಾಧ್ಯವೆಂದು ಹೇಳಿ, ತಾನು ಅದನ್ನು ಬೇಡಿತರಲು ಹೊರಟುಹೋದನು. ದಾನಶೀಲರಾದ ಆ ರಾಜರಿಬ್ಬರೂ ಬಂದ ಬ್ರಾಹ್ಮಣನಿಗೆ ತಾವು ಧರಿಸಿದ್ದ ಅಮೋಘ ಕವಚಗಳನ್ನು ದಾನಮಾಡಿದರು. ಅದರಲ್ಲಿ ಮಹಾಲಕ್ಷ್ಮಿಯ ಕವಚವು ಬ್ರಹ್ಮನಿಂದ ಸನತ್ಕುಮಾರನಿಗೂ, ಸನತ್ಕುಮಾರನಿಂದ ಪುಷ್ಕರಾಕ್ಷನಿಗೂ ಬಂದು ಭೂಮಿಯಲ್ಲಿ ಖ್ಯಾತಿಗೊಂಡಿತು. ದುರ್ಗಾಕವಚವು ದೂರ್ವಾಸಮಹರ್ಷಿಯಿಂದ ಪುಷ್ಕರಾಕ್ಷನ ಪುತ್ರನಿಗೆ ಲಭಿಸಿ ಭೂಮಂಡಲದಲ್ಲಿ ಪ್ರಖ್ಯಾತವಾಯಿತು.

ಈ ಅಧ್ಯಾಯದಲ್ಲಿ ವಿವರಿಸಿರುವ ಮಹಾಲಕ್ಷ್ಮಿಯ ಕವಚವನ್ನು ವಿಧಿಪೂರ್ವಕವಾಗಿ ಧರಿಸಿ, ಮಂತ್ರವನ್ನು ಜಪಿಸುವವರಿಗೆ ಸಕಲ ಇಷ್ಟಾರ್ಥವೂ ಸಿದ್ಧಿಸುವುದು. ಈ ಕವಚವನ್ನು ಉತ್ತಮರಿಗೆ ಮಾತ್ರ ಉಪದೇಶಿಸಬೇಕು. ಇದರ ಮಹಿಮೆಯನ್ನರಿಯದೆ ಎಷ್ಟು ಲಕ್ಷ ಜಪಮಾಡಿದರೂ ಮಂತ್ರಸಿದ್ಧಿಯುಂಟಾಗುವುದಿಲ್ಲ.

—॥ ಓಂ ॥—

—॥ ಶ್ರೀ ಗಣೇಶಾಯ ನಮಃ ॥—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಗಣಪತಿಖಂಡೇ

॥ ಏಕೋನಚತ್ವಾರಿಂಶತ್ತಮೋಽಧ್ಯಾಯಃ ॥

॥ ನಾರದ ಉವಾಚ ॥

ಕವಚಂ ಕಥಿತಂ ಬ್ರಹ್ಮನ್ ಪದ್ಮಾಯಾಶ್ಚ ಮನೋಹರಂ।
ಪರಂ ದುರ್ಗತಿನಾಶಿನ್ಯಾಃ ಕವಚಂ ಕಥಯ ಪ್ರಭೋ ॥ ೧ ॥

ಪದ್ಮಾಕ್ಷಪ್ರಾಣತುಲ್ಯಂ ಚ ಜೀವನಂ ಬಲಕಾರಣಂ ।
ಕವಚಾನಾಂ ಚ ಯತ್ಸಾರಂ ದುರ್ಗಾಸೇವನಕಾರಣಂ ॥ ೨ ॥

ಮೂವತ್ತೊಂಭತ್ತನೆಯ ಅಧ್ಯಾಯ

೧. ನಾರದ :—ಎಲೈ ಋಷಿವರ್ಯನೇ, ಮಹಾಲಕ್ಷ್ಮಿಯ ಮನೋಹರವಾದ ಕವಚವನ್ನು ಹೇಳಿದೆ, ಈಗ ದುರ್ಗತಿನಾಶಕಳಾದ ದುರ್ಗಿಯ ಕವಚವನ್ನು ದಯವಿಟ್ಟು ಹೇಳು.

೨. ಪದ್ಮಾಕ್ಷನ ಪ್ರಾಣಕ್ಕೆ ಸಮಾನವೂ, ಜೀವನರೂಪವೂ, ಬಲಕ್ಕೆ ಕಾರಣವೂ, ಕವಚಗಳಿಗೆಲ್ಲ ಸಾರಭೂತವೂ, ದುರ್ಗಿಯ ಸೇವೆಗೆ ಸಾಧನವೂ, ಆದ ಆ ಕವಚವನ್ನು ತಿಳಿಯಲಿಚ್ಛಿಸುತ್ತೇನೆ.

|| ನಾರಾಯಣ ಉವಾಚ ||

ಶೃಣು ನಾರದ ವಕ್ಷ್ಯಾಮಿ ದುರ್ಗಾಯೋಃ ಕವಚಂ ಶುಭಂ |
ಶ್ರೀಕೃಷ್ಣೇನೈವ ಯದ್ದತ್ತಂ ಗೋಲೋಕೇ ಬ್ರಹ್ಮಣೇ ಪುರಾ || ೩ ||

ಬ್ರಹ್ಮಾ ತ್ರಿಪುರಸಂಗ್ರಾಮೇ ಶಂಕರಾಯ ದದೌ ಪುರಾ |
ಜಘಾನ ತ್ರಿಪುರಂ ರುದ್ರೋ ಯದ್ಧೃತ್ವಾ ಭಕ್ತಿಪೂರ್ವಕಂ || ೪ ||

ಹರೋ ದದೌ ಗೌತಮಾಯ ಪದ್ಮಾಕ್ಷಾಯ ಚ ಗೌತಮಃ |
ಯತೋ ಬಭೂವ ಪದ್ಮಾಕ್ಷಃ ಸಪ್ತದ್ವೀಪೇಶ್ವರೋ ಜಯೀ || ೫ ||

ಯದ್ಧೃತ್ವಾ ಪಠನಾದ್ಬ್ರಹ್ಮಾ ಜ್ಞಾನವಾಞ್ಛಕ್ತಿಮಾನ್ಭುವಿ |
ಶಿವೋ ಬಭೂವ ಸರ್ವಜ್ಞೋ ಯೋಗಿನಾಂ ಚ ಗುರುರ್ಯತಃ |
ಶಿವತುಲ್ಯೋ ಗೌತಮಶ್ಚ ಬಭೂವ ಮುನಿಸತ್ತಮಃ || ೬ ||

---

೩. ನಾರಾಯಣಮಹರ್ಷಿ:—ಎಲೈ ನಾರದನೇ, ದುರ್ಗೆಯ ಶುಭಕರವಾದ ಕವಚವನ್ನು ಹೇಳುವೆನು. ಕೇಳು. ಪೂರ್ವದಲ್ಲಿ ಇದನ್ನು ಶ್ರೀಕೃಷ್ಣಪರಮಾತ್ಮನು ಗೋಲೋಕದಲ್ಲಿ ಬ್ರಹ್ಮನಿಗೆ ಅನುಗ್ರಹಿಸಿದನು.

೪. ಬ್ರಹ್ಮನು ತ್ರಿಪುರಸಂಹಾರಕಾಲದಲ್ಲಿ ಶಂಕರನಿಗೆ ಕೊಡಲು, ಶಂಕರನು ಭಕ್ತಿಪೂರ್ವಕವಾಗಿ ಇದನ್ನು ಧರಿಸಿ ತ್ರಿಪುರಸಂಹಾರ ಮಾಡಿದನು.

೫. ಶಿವನು ಗೌತಮುನಿಗೂ, ಗೌತಮನು ಪುಷ್ಕರಾಕ್ಷನ ಮಗನಾದ ಪದ್ಮಾಕ್ಷನಿಗೂ ಈ ಕವಚವನ್ನು ಉಪದೇಶಿಸಿದಗು. ಇದನ್ನು ಧರಿಸಿದ ಪದ್ಮಾಕ್ಷನು ಸಪ್ತದ್ವೀಪವನ್ನೂ ಜಯಿಸಿ ಚಕ್ರವರ್ತಿಯಾದನು.

೬. ಇದನ್ನು ಧರಿಸಿ ಮಂತ್ರಪಠನೆಮಾಡಿದ ಬ್ರಹ್ಮನು ದಿವ್ಯಜ್ಞಾನಿಯೂ, ಅತುಲಪರಾಕ್ರಮಿಯೂ ಆದನು. ಶಿವನು ಸರ್ವಜ್ಞನೂ, ಯೋಗಿಶ್ರೇಷ್ಠನೂ ಆದನು. ಗೌತಮಮುನಿಯೂ ಕೂಡ ಶಿವನಿಗೆ ಸಮಾನನೆನಿಸಿದನು

ಬ್ರಹ್ಮಾಂಡವಿಜಯಸ್ಯಾಸ್ಯ ಕವಚಸ್ಯ ಪ್ರಜಾಪತಿಃ ।
ಋಷಿಶ್ಛಂದಶ್ಚ ಗಾಯತ್ರೀ ದೇವೀ ದುರ್ಗತಿನಾಶಿನೀ ॥ ೭ ॥

ಬ್ರಹ್ಮಾಂಡವಿಜಯೇ ಚೈವ ವಿನಿಯೋಗಃ ಪ್ರಕೀರ್ತಿತಃ ।
ಪುಣ್ಯತೀರ್ಥಂ ಚ ಮಹತಾಂ ಕವಚಂ ಪರಮಾದ್ಭುತಂ ॥ ೮ ॥

ಓಂ ಹ್ರೀಂ ದುರ್ಗತಿನಾಶಿನ್ಯೈ ಸ್ವಾಹಾ ಮೇ ಪಾತು ಮಸ್ತಕಂ ।
ಓಂ ಹ್ರೀಂ ಮೇ ಪಾತು ಕಪಾಲಂ ಚಾಪ್ಯೋಂಹ್ರೀಂಶ್ರೀಂ ಪಾತುಲೋಚನೇ॥

ಪಾತು ಮೇ ಕರ್ಣಯುಗ್ಮಂ ಚಾಪ್ಯೋಂ ದುರ್ಗಾಯೈ ನಮಃ ಸದಾ ।
ಓಂ ಹ್ರೀಂ ಶ್ರೀಮಿತಿ ನಾಸಾಂ ಮೇ ಸದಾ ಪಾತು ಚ ಸರ್ವತಃ ॥ ೧೦ ॥

ಹ್ರೀಂ ಶ್ರೀಂ ಹೂಮಿತಿ ದಂತಾಂಶ್ಚ ಪಾತು ಕ್ಲೀಮೋಷ್ಠಯುಗ್ಮಕಂ ।
ಕ್ಲೀಂ ಕ್ಲೀಂ ಕ್ಲೀಂ ಪಾತು ಕಂಠಂ ಚ ದುರ್ಗೇ ರಕ್ಷತು ಗಂಡಕೇ ॥ ೧೧ ॥

---

೭. ಬ್ರಹ್ಮಾಂಡವಿಜಯವೆಂಬ ಈ ಕವಚಕ್ಕೆ ಪ್ರಜಾಪತಿಯೇ ಋಷಿಯು. ಗಾಯತ್ರಿಯೇ ಛಂದಸ್ಸು. ದುರ್ಗತಿನಾಶಕಳಾದ ದುರ್ಗಿಯೇ ದೇವಿಯು.

೮. ಬ್ರಹ್ಮಾಂಡವಿಜಯದಲ್ಲಿ ಈ ಕವಚದ ವಿನಿಯೋಗವು ಸುಪ್ರಸಿದ್ಧವಾಗಿರುವುದು. ಅತ್ಯದ್ಭುತವಾದ ಈ ಕವಚವೇ ಮಹಾತ್ಮರಿಗೆ ಪುಣ್ಯತೀರ್ಥವೆನಿಸುವುದು.

೯. 'ಓಂ ಹ್ರೀಂ ದುರ್ಗತಿನಾಶಿನ್ಯೈ ಸ್ವಾಹಾ' ಎಂಬ ಮಂತ್ರವು ನನ್ನ ತಲೆಯನ್ನೂ, 'ಓಂ ಹ್ರೀಂ' ಎಂಬುದು ನನ್ನ ಕಪಾಲವನ್ನೂ, 'ಓಂ ಹ್ರೀಂ ಶ್ರೀಂ ಎಂಬುದು ನನ್ನ ಕಣ್ಣುಗಳನ್ನೂ ಕಾಪಾಡಲಿ.

೧೦ 'ಓಂ ದುರ್ಗಾಯೈ ನಮಃ' ಎಂಬುದು ನನ್ನ ಎರಡು ಕಿವಿಗಳನ್ನೂ, 'ಓಂ ಹ್ರೀಂ ಶ್ರೀಂ ದುರ್ಗಾಯೈ ನಮಃ' ಎಂಬುದು ನನ್ನ ಮೂಗನ್ನೂ ಸರ್ವದಾ ಕಾಪಾಡಲಿ.

೧೧. "ಓಂ ಶ್ರೀಂ ಹ್ರೂಂ" ಎಂಬುದು ನನ್ನ ಹಲ್ಲುಗಳನ್ನೂ, 'ಕ್ಲೀಂ' ಎಂಬುದು ಎರಡು ತುಟಿಗಳನ್ನೂ 'ಕ್ಲೀಂ ಕ್ಲೀಂ ಕ್ಲೀಂ' ಎಂಬುದು ಕಂಠವನ್ನೂ, 'ದುರ್ಗೇ ರಕ್ಷತು' ಎಂಬುದು ಕೆನ್ನೆಗಳನ್ನೂ ಕಾಪಾಡಲಿ.

ಸ್ಕಂಧಂ ಮಹಾಕಾಲಿದುರ್ಗೇ ಸ್ವಾಹಾ ಪಾತು ನಿರಂತರಂ ।
ವಕ್ಷೋ ವಿಪದ್ವಿನಾಶಿನ್ಯೈ ಸ್ವಾಹಾ ಮೇ ಪಾತು ಸರ್ವತಃ ॥ ೧೨ ॥

ದುರ್ಗೇ ದುರ್ಗೇ ರಕ್ಷ ಪಾರ್ಶ್ವೌ ಸ್ವಾಹಾ ನಾಭಿಂ ಸದಾವತು ।
ದುರ್ಗೇ ದುರ್ಗೇ ದೇಹಿ ರಕ್ಷಾಂ ಪೃಷ್ಠಂ ಮೇ ಪಾತು ಸರ್ವತಃ ॥ ೧೩ ॥

ಓಂ ಹ್ರೀಂ ದುರ್ಗಾಯೈ ಸ್ವಾಹಾ ಚ ಹಸ್ತೌ ಪಾದೌ ಸದಾವತು ।
ಓಂ ಹ್ರೀಂ ದುರ್ಗಾಯೈ ಸ್ವಾಹಾ ಚ ಸರ್ವಾಂಗಂ ಮೇ ಸದಾವತು ॥ ೧೪ ॥

ಪ್ರಾಚ್ಯಾಂ ಪಾತು ಮಹಾಮಾಯಾ ಚಾಗ್ನೇಯ್ಯಾಂ ಪಾತು ಕಾಲಿಕಾ ।
ದಕ್ಷಿಣೇ ದಕ್ಷಕನ್ಯಾ ಚ ನೈಋರ್ತ್ಯಾಂ ಶಿವಸುಂದರೀ ॥ ೧೫ ॥

ಪಶ್ಚಿಮೇ ಪಾರ್ವತೀ ಪಾತು ವಾರಾಹೀ ವಾರುಣೇ ಸದಾ ।
ಕುಬೇರಮಾತಾ ಕೌಬೇರ್ಯಾಮೈಶಾನ್ಯಾಮೀಶ್ವರೀ ಸದಾ ॥ ೧೬ ॥

---

೧೨. 'ಮಹಾಕಾಳಿ ದುರ್ಗೇ ಸ್ವಾಹಾ' ಎಂಬುದು ನನ್ನ ಹೆಗಲುಗಳನ್ನೂ, 'ವಿಪದ್ವಿನಾಶಿನ್ಯೈ ಸ್ವಾಹಾ' ಎಂಬುದು ನನ್ನ ವಕ್ಷಃಸ್ಥಳವನ್ನೂ ಸರ್ವದಾ ಕಾಪಾಡಲಿ.

೧೩. "ದುರ್ಗೇದುರ್ಗೇ ರಕ್ಷ" ಎಂಬುದು ಪಾರ್ಶ್ವಯುಗ್ಮವನ್ನೂ, 'ದುರ್ಗೇ ದುರ್ಗೇ ಸ್ವಾಹಾ' ಎಂಬುದು ನಾಭಿಪ್ರದೇಶವನ್ನೂ "ದುರ್ಗೇ ದುರ್ಗೇ ದೇಹಿ ರಕ್ಷಾಂ" ಎಂಬುದು ನನ್ನ ಪೃಷ್ಠಭಾಗವನ್ನೂ ಅನವರತ ರಕ್ಷಿಸಲಿ.

೧೪. "ಓಂ ಹ್ರೀಂ ದುರ್ಗಾಯೈ ಸ್ವಾಹಾ" ಎಂಬುದು ನನ್ನ ಕೈಕಾಲುಗಳನ್ನೂ, "ಓಂ ಹ್ರೀಂ ದುರ್ಗಾಯೈ ಸ್ವಾಹಾ" ಎಂಬುದು ನನ್ನ ಸರ್ವಾವಯವಗಳನ್ನೂ ಸರ್ವದಾ ಕಾಪಾಡಲಿ.

೧೫. ಪೂರ್ವದಿಕ್ಕಿನಲ್ಲಿ ಮಹಾಮಾಯೆಯೂ, ಆಗ್ನೇಯದಿಕ್ಕಿನಲ್ಲಿ ಕಾಳಿಕೆಯೂ ದಕ್ಷಿಣದಲ್ಲಿ ದಕ್ಷಕನ್ಯೆಯೂ, ನೈಋತ್ಯದಲ್ಲಿ ಶಿವನಸುಂದರಿಯೂ ನನ್ನನ್ನು ಕಾಪಾಡಲಿ.

೧೬. ಪಶ್ಚಿಮದಲ್ಲಿ ಪಾರ್ವತಿಯೂ, ವಾಯುವ್ಯದಲ್ಲಿ ವಾರಾಹಿಯೂ, ಉತ್ತರದಲ್ಲಿ ಕುಬೇರನ ಮಾತೆಯೂ, ಈಶಾನ್ಯದಲ್ಲಿ ಈಶ್ವರಿಯೂ ಸದಾ ನನ್ನನ್ನು ರಕ್ಷಿಸಲಿ

ಊರ್ಧ್ವೇ ನಾರಾಯಣೀ ಪಾತು ತ್ವಂಬಿಕಾಧಃ ಸದಾವತು ।
ಜ್ಞಾನೇ ಜ್ಞಾನಪ್ರದಾ ಪಾತು ಸ್ವಪ್ನೇ ನಿದ್ರಾ ಸದಾವತು ॥ ೧೭ ॥

ಇತಿ ತೇ ಕಥಿತಂ ವತ್ಸ ಸರ್ವಮಂತ್ರೌಘವಿಗ್ರಹಂ ।
ಬ್ರಹ್ಮಾಂಡವಿಜಯಂ ನಾಮ ಕವಚಂ ಪರಮಾದ್ಭುತಂ ॥ ೧೮ ॥

ಸುಸ್ನಾತಃ ಸರ್ವತೀರ್ಥೇಷು ಸರ್ವಯಜ್ಞೇಷು ಯತ್ಫಲಂ ।
ಸರ್ವವ್ರತೋಪವಾಸೇ ಚ ತತ್ಫಲಂ ಲಭತೇ ನರಃ ॥ ೧೯ ॥

ಗುರುಮಭ್ಯರ್ಚ್ಯ ವಿಧಿವದ್ವಸ್ತ್ರಾಲಂಕಾರಚಂದನೈಃ ।
ಕಂಠೇ ವಾ ದಕ್ಷಿಣೇ ಬಾಹೌ ಕವಚಂ ಧಾರಯೇತ್ತು ಯಃ ॥ ೨೦ ॥

ಸ ಚ ತ್ರೈಲೋಕ್ಯವಿಜಯೀ ಸರ್ವಶತ್ರುಪ್ರಮರ್ದಕಃ ।
ಇದಂ ಕವಚಮಜ್ಞಾತ್ವಾ ಭಜೇದ್ದುರ್ಗತಿನಾಶಿನೀಂ ॥ ೨೧ ॥

ಶತಲಕ್ಷಂ ಪ್ರಜಪ್ತೋಽಪಿ ನ ಮಂತ್ರಃ ಸಿದ್ಧಿದಾಯಕಃ ॥ ೨೨ ॥

---

೧೭. ಮೇಲುಭಾಗದಲ್ಲಿ ನಾರಾಯಣಿಯೂ, ಅಧೋಭಾಗದಲ್ಲಿ ಅಂಬಿಕೆಯೂ ಜಾಗ್ರದವಸ್ಥೆಯಲ್ಲಿ ಜ್ಞಾನಪ್ರದಳೂ, ಸ್ವಪ್ನಕಾಲದಲ್ಲಿ ನಿದ್ರಾದೇವಿಯೂ, ಸರ್ವದಾ ನನ್ನನ್ನು ಕಾಪಾಡಲಿ.

೧೮. ವತ್ಸ ನಾರದನೇ, ಮಂತ್ರಗಳಿಗೆಲ್ಲ ಸಾರಭೂತವೂ, ಅತ್ಯದ್ಭುತವೂ ಆದ ಬ್ರಹ್ಮಾಂಡವಿಜಯವೆಂಬ ಕವಚವನ್ನು ನಿನಗೆ ಹೇಳಿದೆನು.

೧೯. ಈ ಕವಚವನ್ನು ಧರಿಸಿದವನು ಸಕಲಪುಣ್ಯತೀರ್ಥಗಳಲ್ಲಿ ಸ್ನಾನಮಾಡಿ ಸರ್ವಯಜ್ಞಗಳಲ್ಲೂ ದೀಕ್ಷೆಗೊಂಡು, ಸಕಲವ್ರತೋಪವಾಸಗಳನ್ನಾಚರಿಸುವುದರಿಂದ ಲಭಿಸುವ ಫಲವನ್ನು ಹೊಂದುವನು.

೨೦–೨೨. ಗುರುವನ್ನು ವಸ್ತ್ರಾಲಂಕಾರಚಂದನಗಳಿಂದ ವಿಧಿಪೂರ್ವಕವಾಗಿ ಪೂಜಿಸಿ, ಈ ಕವಚವನ್ನು ಕಂಠದಲ್ಲಾಗಲೀ ಬಲಭುಜದಲ್ಲಾಗಲೀ ಧರಿಸುವವನು ಸರ್ವಶತ್ರುವಿನಾಶಕನೂ, ತ್ರಿಲೋಕವಿಜಯಿಯೂ ಆಗುವನು. ಈ ಕವಚವನ್ನು ತಿಳಿಯದೆ ದುರ್ಗಾಂಬಿಕೆಯನ್ನು ಭಜಿಸುವವನು, ನೂರು ಲಕ್ಷಬಾರಿ ಜಪಿಸಿದರೂ ಮಂತ್ರಸಿದ್ಧಿಯನ್ನು ಪಡೆಯಲಾರನು.

ಕವಚಂ ಕಾಣ್ವಶಾಖೋಕ್ತಮುಕ್ತಂ ನಾರದ ಸಿದ್ಧಿದಂ ।
ಯಸ್ಮೈ ಕಸ್ಮೈ ನದಾತವ್ಯಂ ಗೋಪನೀಯಂ ಸುದುರ್ಲಭಂ ॥ ೨೩ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ತೃತೀಯೇ ಗಣಪತಿಖಂಡೇ
ನಾರದ–ನಾರಾಯಣ ಸಂವಾದೇ ದುರ್ಗತಿನಾಶಿನೀಕವಚಂ
ನಾಮ ಏಕೋನಚತ್ವಾರಿಂಶತ್ತಮೋಽಧ್ಯಾಯಃ

---

೨೩. ಎಲೈ ನಾರದನೇ, ಸರ್ವಸಿದ್ಧಿದಾಯಕವೂ, ಕಾಣ್ವಶಾಖೋಕ್ತವೂ ಆದ ಕವಚವನ್ನು ತಿಳಿಸಿದೆನು. ಸುದುರ್ಲಭವಾದ ಈ ಕವಚವನ್ನು ಅಯೋಗ್ಯರಿಗೆ ಉಪದೇಶಿಸದೆ ಗೋಪ್ಯವಾಗಿಟ್ಟಿರಬೇಕು.

ಇಲ್ಲಿಗೆ ಬ್ರಹ್ಮವೈವರ್ತಮಹಾಪುರಾಣದ ಗಣಪತಿಖಂಡದಲ್ಲಿ ದುರ್ಗತಿನಾಶಿನೀ
ಕವಚವನ್ನು ತಿಳಿಸುವ ಮೂವತ್ತೊಂಭತ್ತನೆಯ
ಅಧ್ಯಾಯವು ಮುಗಿದುದು.

ಮೂವತ್ತೊಂಭತ್ತನೆಯ ಅಧ್ಯಾಯದ ಸಾರಾಂಶ

ನಾರದನ ಪ್ರಾರ್ಥನೆಯಂತೆ ನಾರಾಯಣಮಹರ್ಷಿಯು ದುರ್ಗಾಕವಚದ ಪ್ರಭಾವವನ್ನು ವಿವರಿಸಿದನು. ಈ ಕವಚವನ್ನು ಪೂರ್ವದಲ್ಲಿ ಶ್ರೀಕೃಷ್ಣಪರಮಾತ್ಮನು ಬ್ರಹ್ಮನಿಗೂ, ಬ್ರಹ್ಮನು ಶಂಕರನಿಗೂ, ಶಂಕರನು ಗೌತಮುನಿಗೂ, ಗೌತಮನು ಪುಷ್ಕರಾಕ್ಷನ ಮಗನಾದ ಪದ್ಮಾಕ್ಷನಿಗೂ ಕ್ರಮವಾಗಿ ಉಪದೇಶಿಸಿದರು. ಇದನ್ನು ಧರಿಸಿದ ಎಲ್ಲ ದೇವತೆಗಳೂ ತಮ್ಮ ಇಷ್ಟಸಿದ್ಧಿಯನ್ನು ಪಡೆದರು. ಈ ಅಧ್ಯಾಯದಲ್ಲಿ ಹೇಳಿರುವಂತೆ ಮಂತ್ರೋಚ್ಚಾರಣೆಪೂರ್ವಕವಾಗಿ ಆತ್ಮರಕ್ಷಣೆಮಾಡಿಕೊಂಡು ಈ ಕವಚವನ್ನು ಧರಿಸಿ ಜಪಿಸುವವರು ತ್ರಿಲೋಕವಿಜಯಿಗಳಾಗುವರು.

|| ಓಂ ||

|| ಶ್ರೀ ಗಣೇಶಾಯ ನಮಃ ||

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಗಣಪತಿಖಂಡೇ

|| ಚತ್ವಾರಿಂಶತ್ತಮೋಽಧ್ಯಾಯಃ ||

|| ನಾರಾಯಣ ಉವಾಚ ||

ತಂ ಗೃಹೀತ್ವಾ ತದಾ ವಿಷ್ಣೌ ವೈಕುಂಠಂ ಚ ಗತೇ ಸತಿ |
ಸಪುತ್ರಂ ಚ ಸಹಸ್ರಾಕ್ಷಂ ಜಘಾನ ಭೃಗುನಂದನಃ || ೧ ||

ಕೃತ್ವಾ ಯುದ್ಧಂ ತು ಸಪ್ತಾಹಂ ಬ್ರಹ್ಮಾಸ್ತ್ರೇಣ ಪ್ರಯತ್ನತಃ |
ರಾಜಾ ಕವಚಹೀನೋಽಪಿ ಸಪುತ್ರಶ್ಚ ಪಪಾತ ಹ || ೨ ||

ನಲವತ್ತನೆಯ ಅಧ್ಯಾಯವು

೧. ನಾರಾಯಣಮಹರ್ಷಿ :—ವಿಪ್ರರೂಪಿಯಾದ ಜನಾರ್ದನನು ಪುಷ್ಕರಾಕ್ಷ ಮತ್ತು ಪದ್ಮಾಕ್ಷರಿಂದ ಕವಚವನ್ನು ದಾನ ತೆಗೆದುಕೊಂಡು ವೈಕುಂಠಕ್ಕೆ ತೆರಳಲು, ಭಾರ್ಗವನು ಪುಷ್ಕರಾಕ್ಷನನ್ನೂ ಅವನ ಮಗನನ್ನೂ, ಲೀಲಾಜಾಲವಾಗಿ ಸಂಹರಿಸಿದನು.

೨. ಪುಷ್ಕರಾಕ್ಷನು ಕವಚಹೀನನಾದರೂ, ಬ್ರಹ್ಮಾಸ್ತ್ರದಿಂದ ಪ್ರಯತ್ನಪೂರ್ವಕವಾಗಿ ಏಳುದಿನ ಯುದ್ಧಮಾಡಿ, ಕಡೆಗೆ ಮಗನೊಡನೆ ಮಡಿದುಬಿದ್ದನು

ಪತಿತೇ ತು ಸಹಸ್ರಾಕ್ಷೇ ಕಾರ್ತವೀರ್ಯಾರ್ಜುನಃ ಸ್ವಯಂ ।
ಆಜಗಾಮ ಮಹಾವೀರೋ ದ್ವಿಲಕ್ಷಾಕ್ಷೌಹಿಣೀಯುತಃ　　॥ ೩ ॥

ಸುವರ್ಣರಥಮಾರುಹ್ಯ ರತ್ನಸಾರಪರಿಚ್ಛದಂ ।
ನಾನಾಸ್ತ್ರಂ ಪರಿತಃ ಕೃತ್ವಾ ತಸ್ಥೌ ಸಮರಮೂರ್ಧನಿ　　॥ ೪ ॥

ಸಮರೇ ತಂ ಪರಶುರಾಮೋ ರಾಜೇಂದ್ರಂ ಚ ದದರ್ಶ ಹ ।
ರತ್ನಾಲಂಕಾರಭೂಷಾಢ್ಯೈ ರಾಜೇಂದ್ರಾಣಾಂ ಚ ಕೋಟಿಭಿಃ　　॥ ೫ ॥

ರತ್ನಾತಪತ್ರಭೂಷಾಢ್ಯಂ ರತ್ನಾಲಂಕಾರಭೂಷಿತಂ ।
ಚಂದನೋಕ್ಷಿತಸರ್ವಾಂಗಂ ಸಸ್ಮಿತಂ ಸುಮನೋಹರಂ　　॥ ೬ ॥

ರಾಜಾ ದೃಷ್ಟ್ವಾ ಮುನೀಂದ್ರಂ ತಮವರುಹ್ಯ ರಥಾದಹೋ ।
ಪ್ರಣಮ್ಯ ರಥಮಾರುಹ್ಯ ತಸ್ಥೌ ನೃಪಗಣೈಃ ಸಹ　　॥ ೭ ॥

---

೩. ಪುಷ್ಕರಾಕ್ಷನ ಪತನವಾದನಂತರ ಮಹಾಪರಾಕ್ರಮಿಯಾದ ಕಾರ್ತವೀರ್ಯಾರ್ಜುನನು ಎರಡುಲಕ್ಷ ಅಕ್ಷೌಹಿಣೀ ಸೇನೆಯೊಡನೆ ಯುದ್ಧರಂಗಕ್ಕೆ ತಾನೇ ಬಂದನು.

೪. ಶ್ರೇಷ್ಠರತ್ನಗಳನ್ನು ಮೆಟ್ಟಿರುವ ಚಿನ್ನದ ರಥವನ್ನು ಹತ್ತಿ ಸುತ್ತಲೂ ವಿಧವಿಧ ಅಸ್ತ್ರಗಳನ್ನಿಟ್ಟುಕೊಂಡು ಯುದ್ಧದಲ್ಲಿ ಮುಂದಾಗಿ ನಿಂತನು.

೫. ರತ್ನಾಲಂಕಾರ ಭೂಷಿತರಾದ ಕೋಟ್ಯಂತರ ರಾಜರುಗಳಿಂದ ಪರಿವೃತನಾಗಿ ನಿಂತಿರುವ ಆ ಕಾರ್ತವೀರ್ಯನನ್ನು ಪರಶುರಾಮನು ಯುದ್ಧರಂಗದಲ್ಲಿ ಕಂಡನು.

೬. ಆ ಕಾರ್ತವೀರ್ಯನು ರತ್ನಾಭರಣಗಳನ್ನು ತೊಟ್ಟು, ಸರ್ವಾಂಗಗಳಿಗೂ ಚಂದನವನ್ನು ಲೇಪಿಸಿಕೊಂಡು, ಮನೋಹರನಾಗಿ ರತ್ನಮಾಲೆಯಿಂದ ಕೂಡಿರುವ ಶ್ವೇತಛತ್ರವನ್ನು ಧರಿಸಿ ನಗುಮುಖದಿಂದ ನಿಂತಿದ್ದನು.

೭. ಕಾರ್ತವೀರ್ಯನು ಎದುರಿನಲ್ಲಿ ಪರಶುರಾಮನನ್ನು ನೋಡಿ ರಥದಿಂದಿಳಿದು ನಮಸ್ಕರಿಸಿ ಪುನಃ ರಥವನ್ನೇರಿ ರಾಜಪರಿವಾರದೊಡನೆ ನಿಂತನು.

ದದೌ ಶುಭಾಶಿಷಂ ತಸ್ಮೈ ರಾಮಶ್ಚ ಸಮಯೋಚಿತಂ ।
ಪ್ರೋವಾಚ ಚ ಗತಾರ್ಥಂ ತಂ ಸ್ವರ್ಗಂ ಗಚ್ಛೇತಿ ಸಾನುಗಃ ॥ ೮ ॥

ಉಭಯೋಃ ಸೇನಯೋರ್ಯುದ್ಧಮಭವತ್ತತ್ರ ನಾರದ ।
ಪಲಾಯಿತಾ ರಾಮಶಿಷ್ಯಾ ಭ್ರಾತರಶ್ಚ ಮಹಾಬಲಾಃ ।
ಕ್ಷತವಿಕ್ಷತಸರ್ವಾಂಗಾಃ ಕಾರ್ತವೀರ್ಯಪ್ರಪೀಡಿತಾಃ ॥ ೯ ॥

ನೃಪಸ್ಯ ಶರಜಾಲೇನ ರಾಮಃ ಶಸ್ತ್ರಭೃತಾಂ ವರಃ ।
ನ ದದರ್ಶ ಸ್ವಸೈನ್ಯಂ ಚ ರಾಜಸೈನ್ಯಂ ತಥೈವ ಚ ॥ ೧೦ ॥

ಚಿಕ್ಷೇಪ ರಾಮಶ್ಚಾಗ್ನೇಯಂ ಬಭೂವಾಗ್ನಿಮಯಂ ರಣೇ ।
ನಿರ್ವಾಪಯಾಮಾಸ ರಾಜಾ ವಾರುಣೇನೈವ ಲೀಲಯಾ ॥ ೧೧ ॥

---

೮. ಪರಶುರಾಮನು ಕಾಲಾನುಗುಣವಾಗಿ ಅವನಿಗೆ ಶುಭಕರವಾದ ಆಶೀರ್ವಾದ ಮಾಡಿದನು. ಮತ್ತು "ಸಪರಿವಾರನಾಗಿ ಸ್ವರ್ಗಕ್ಕೆ ಹೋಗು" ಎಂದು ಇದ್ದದ್ದು ಇದ್ದಂತೆಯೇ ಆಶೀರ್ವದಿಸಿದನು.

೯. ಎಲೈ ನಾರದನೇ, ಅನಂತರ ಉಭಯ ಸೈನ್ಯಗಳಿಗೂ ಯುದ್ಧವಾರಂಭವಾಯಿತು. ಪರಶುರಾಮನ ಪರಾಕ್ರಮಿಗಳಾದ ಸಹೋದರರೂ, ಶಿಷ್ಯರೂ ಕೂಡ ಕಾರ್ತವೀರ್ಯನಿಂದ ಏಟುತಿಂದು, ಅಂಗಾಂಗಗಳಲ್ಲಿ ಗಾಯಗೊಂಡು ಪಲಾಯನ ಮಾಡಿದರು

೧೦. ಶಸ್ತ್ರಪ್ರಯೋಗದಲ್ಲಿ ಕುಶಲಿಯಾದ ಪರಶುರಾಮನೂ ಕೂಡ ರಾಜನು ನಿರ್ಮಿಸಿದ ಶರಜಾಲದಿಂದ ತನ್ನ ಸೈನ್ಯವನ್ನಾಗಲೀ ರಾಜ್ಯಸೈನ್ಯವನ್ನಾಗಲೀ ಕಾಣದಂತಾದನು.

೧೧. ಆಗ ಪರಶುರಾಮನು ಆಗ್ನೇಯಾಸ್ತ್ರವನ್ನು ಪ್ರಯೋಗಿಸಲು ರಣರಂಗವೆಲ್ಲವೂ ಅಗ್ನಿಮಯವಾಯಿತು, ಕೂಡಲೇ ಕಾರ್ತವೀರ್ಯನು ವಾರುಣಾಸ್ತ್ರವನ್ನು ಪ್ರಯೋಗಿಸಿ ಅದನ್ನು ಶಾಂತಗೊಳಿಸಿದನು.

ಚಿಕ್ಷೇಪ ರಾಮೋ ಗಾಂಧರ್ವಂ ಶೈಲಸರ್ಪ ಸಮನ್ವಿತಂ ।
ವಾಯವ್ಯೇನ ಮಹಾರಾಜಃ ಪ್ರೇರಯಾಮಾಸ ಲೀಲಯಾ ॥ ೧೨ ॥

ಚಿಕ್ಷೇಪ ರಾಮೋ ನಾಗಾಸ್ತ್ರಂ ದುರ್ನಿವಾರ್ಯಂ ಭಯಂಕರಂ ।
ಗಾರುಡೇನ ಮಹಾರಾಜಃ ಪ್ರೇರಯಾಮಾಸ ಲೀಲಯಾ ॥ ೧೩ ॥

ಮಾಹೇಶ್ವರಂ ಚ ಭಗವಾಂಚಿಕ್ಷೇಪ ಭೃಗುನಂದನಃ ।
ನಿರ್ವಾಪಯಾಮಾಸ ರಾಜಾ ವೈಷ್ಣವಾಸ್ತ್ರೇಣ ಲೀಲಯಾ ॥ ೧೪ ॥

ಬ್ರಹ್ಮಾಸ್ತ್ರಂ ಚಿಕ್ಷಿಪೇ ರಾಮೋ ನೃಪನಾಶಾಯ ನಾರದ ।
ಬ್ರಹ್ಮಾಸ್ತ್ರೇಣ ಚ ಶಾಂತಂ ತತ್ಪ್ರಾಣನಿರ್ವಾಪಣಂ ರಣೇ ॥ ೧೫ ॥

ದತ್ತದತ್ತಂ ಚ ಯಚ್ಛೂಲಮವ್ಯರ್ಥಂ ಮಂತ್ರಪೂರ್ವಕಂ ।
ಜಗ್ರಾಹ ರಾಜಾ ಪರಶುರಾಮನಾಶಾಯ ಸಂಯುಗೇ ॥ ೧೬ ॥

---

೧೨. ಪರ್ವತ ಹಾವು ಮುಂತಾದುವುಗಳಿಂದ ಕೂಡಿದ ಗಾಂಧರ್ವಾಸ್ತ್ರವನ್ನು ಭಾರ್ಗವನು ಬಿಡಲು, ಮಹಾರಾಜನು ವಾಯವ್ಯಾಸ್ತ್ರದಿಂದ ಅದನ್ನು ಲೀಲಾಜಾಲವಾಗಿ ಪ್ರಶಮನಗೊಳಿಸಿದನು.

೧೩. ತಡೆಯಲಸಾಧ್ಯವೂ, ಭಯಂಕರವೂ ಆದ ಸರ್ಪಾಸ್ತ್ರವನ್ನು ಪರಶುರಾಮನು ಬಿಡಲು, ಅದನ್ನು ಮಹಾರಾಜನು ಗಾರುಡಾಸ್ತ್ರದಿಂದ ದೂರಮಾಡಿದನು.

೧೪. ವೀರನಾದ ಭಾರ್ಗವನು ಪ್ರಯೋಗಿಸಿದ ಮಾಹೇಶ್ವರಾಸ್ತ್ರವನ್ನು ಕಾರ್ತವೀರ್ಯನು ವೈಷ್ಣವಾಸ್ತ್ರದಿಂದ ಅತಿಸುಲಭವಾಗಿ ಶಾಂತಗೊಳಿಸಿದನು.

೧೫. ಎಲೈ ನಾರದನೇ, ಆಗ ಕಾರ್ತವೀರ್ಯನ ನಾಶಕ್ಕಾಗಿ ಪರಶುರಾಮನು ಪ್ರಯೋಗಿಸಿದ ಪ್ರಾಣನಾಶಕವಾದ ಬ್ರಹ್ಮಾಸ್ತ್ರವನ್ನು ರಾಜನು ಬ್ರಹ್ಮಾಸ್ತ್ರದಿಂದಲೇ ಪ್ರಶಮನಗೊಳಿಸಿದನು.

೧೬. ಅನಂತರ ಕಾರ್ತವೀರ್ಯನು ಪರಶುರಾಮನ ನಾಶಕ್ಕಾಗಿ ದತ್ತಾತ್ರೇಯನು ಕೊಟ್ಟ ಅಮೋಘವಾದ ಶೂಲಾಯುಧವನ್ನು ಮಂತ್ರಪೂರ್ವಕವಾಗಿ ಕೈಗೆ ತೆಗೆದುಕೊಂಡನು.

ಶೂಲಂ ದದರ್ಶ ರಾಮಶ್ಚ ಶತಸೂರ್ಯಸಮಪ್ರಭಂ ।
ಪ್ರಲಯಾಗ್ನಿಶಿಖೋದ್ರಿಕ್ತಂ ದುರ್ನಿವಾರ್ಯಂ ಸುರೈರಪಿ ॥ ೧೭ ॥

ಪಪಾತ ಶೂಲಂ ಸಮರೇ ರಾಮಸ್ಯೋಪರಿ ನಾರದ ।
ಮೂರ್ಛಾಮವಾಪ ಸ ಭೃಗುಃ ಪಪಾತ ಚ ಹರಿಂ ಸ್ಮರನ್ ॥ ೧೮ ॥

ಪತಿತೇ ತು ತದಾ ರಾಮೇ ಸರ್ವೇ ದೇವಾ ಭಯಾಕುಲಾಃ ।
ಆಜಗ್ಮುಃ ಸಮರಂ ತತ್ರ ಬ್ರಹ್ಮವಿಷ್ಣುಮಹೇಶ್ವರಾಃ ॥ ೧೯ ॥

ಶಂಕರಶ್ಚ ಮಹಾಜ್ಞಾನೀ ಮಹಾಜ್ಞಾನೇನ ಲೀಲಯಾ ।
ಬ್ರಾಹ್ಮಣಂ ಜೀವಯಾಮಾಸ ತೂರ್ಣಂ ನಾರಾಯಣಾಜ್ಞಯಾ ॥ ೨೦ ॥

ಭೃಗುಶ್ಚ ಚೇತನಾಂ ಪ್ರಾಪ್ಯ ದದರ್ಶ ಪುರತಃ ಸುರಾನ್ ।
ಪ್ರಣನಾಮ ಪರಂ ಭಕ್ತ್ಯಾ ಲಜ್ಜಾನಮ್ರಾತ್ಮಕಂಧರಃ ॥ ೨೧ ॥

---

೧೭. ಏಕಕಾಲದಲ್ಲಿ ಉದಯಿಸಿದ ಶತಸೂರ್ಯರ ತೇಜಸ್ಸಿನಂತೆ ಪ್ರಚಂಡವೂ, ಪ್ರಲಯಾಗ್ನಿಜ್ವಾಲೆಯಂತೆ ತಾಪಕರವೂ, ದೇವತೆಗಳಿಗೆ ತಡೆಯಲಸಾಧ್ಯವೂ ಆದ ಆ ಶೂಲಾಯುಧವನ್ನು ಪರಶುರಾಮನು ನೋಡಿದನು.

೧೮. ಎಲೈ ನಾರದನೇ, ಆ ಶೂಲಾಯುಧವು ಪರಶುರಾಮನ ಮೇಲೆ ಬೀಳಲು, ಅವನು ಶ್ರೀಹರಿಯನ್ನು ಸ್ಮರಿಸುತ್ತ ಮೂರ್ಛೆಗೊಂಡು ಬಿದ್ದನು.

೧೯. ಈರೀತಿಯಾಗಿ ಪರಶುರಾಮನು ಮೂರ್ಛೆಗೊಂಡುದನ್ನು ನೋಡಿ ಭಯಚಕಿತರಾದ ಬ್ರಹ್ಮ ವಿಷ್ಣು ಮಹೇಶ್ವರಾದಿ ದೇವತೆಗಳೆಲ್ಲರೂ ಆ ರಣರಂಗಕ್ಕೆ ಬಂದರು.

೨೦. ಮಹಾಜ್ಞಾನಿಯಾದ ಶಂಕರನು ಆಗ ನಾರಾಯಣನ ಅನುಜ್ಞೆಪಡೆದು ತನ್ನ ದಿವ್ಯಜ್ಞಾನದ ಮಹಿಮೆಯಿಂದ ಪರಶುರಾಮನನ್ನು ಪುನರ್ಜೀವಗೊಳಿಸಿದನು.

೨೧. ಚೇತನಹೊಂದಿದ ಭಾರ್ಗವನು ಮುಂದೆ ದೇವತೆಗಳನ್ನೆಲ್ಲ ನೋಡಿ. ಲಜ್ಜೆಯಿಂದ ತಲೆಬಾಗಿ ಪರಮಭಕ್ತಿಯಿಂದ ನಮಸ್ಕರಿಸಿದನು.

ರಾಜಾ ದೃಷ್ಟ್ವಾ ಸುರೇಶಾಂಶ್ಚ ಭಕ್ತಿನಮ್ರಾತ್ಮಕಂಧರಃ ।
ಪ್ರಣಮ್ಯ ಶಿರಸಾ ಮೂರ್ಧ್ನಾ ತುಷ್ಟಾವ ಚ ಸುರೇಶ್ವರಾನ್ ॥ ೨೨ ॥

ತತ್ರಾಜಗಾಮ ಭಗವಾನ್ದತ್ತಾತ್ರೇಯೋ ರಣಸ್ಥಲಂ ।
ಶಿಷ್ಯರಕ್ಷಾನಿಮಿತ್ತೇನ ಕೃಪಾಲುರ್ಭಕ್ತವತ್ಸಲಃ ॥ ೨೩ ॥

ಭೃಗುಃ ಪಾಶುಪತಾಸ್ತ್ರಂ ಚ ಸೋಽಗ್ರಹೀತ್ಕೋಪಸಂಯುತಃ ।
ದತ್ತದತ್ತೇನ ದೃಷ್ಟೇನ ಬಭೂವಸ್ತಂಭಿತೋ ಭೃಗುಃ ॥ ೨೪ ॥

ದದರ್ಶಸ್ತಂಭಿತೋ ರಾಮೋ ರಾಜಾನಂ ರಣಮೂರ್ಧನಿ ।
ನಾನಾ ಪಾರ್ಷದಯುಕ್ತೇನ ಕೃಷ್ಣೇನಾಽಽರಕ್ಷಿತಂ ರಣೇ ॥ ೨೫ ॥

ಸುದರ್ಶನಂ ಪ್ರಜ್ವಲಂತಂ ಭ್ರಮಣಂ ಕುರ್ವತಾ ಸದಾ ।
ಸಸ್ಮಿತೇನ ಸ್ತುತೇನ್ನೈವ ಬ್ರಹ್ಮವಿಷ್ಣುಮಹೇಶ್ವರೈಃ ॥ ೨೬ ॥

---

೨೨. ಇತ್ತ ಕಾರ್ತವೀರ್ಯನೂ ಕೂಡ ದೇವತೆಗಳನ್ನು ನೋಡಿ ಭಕ್ತಿಯಿಂದ ತಲೆಬಾಗಿ, ಸಾಷ್ಟಾಂಗವೆರಗಿ ಬ್ರಹ್ಮಾದಿದೇವತೆಗಳನ್ನೆಲ್ಲ ಸ್ತುತಿಸಿದನು.

೨೩. ಆಗ ದಯಾಮಯನೂ ಭಕ್ತವತ್ಸಲನೂ, ಷಡ್ಗುಣೈಶ್ವರ್ಯಸಂಪನ್ನನೂ ಆದ ದತ್ತಾತ್ರೇಯನು ಶಿಷ್ಯನ ರಕ್ಷಣೆಗಾಗಿ ರಣರಂಗಕ್ಕೆ ಬಂದನು.

೨೪. ಅವಮಾನದಿಂದ ಕೋಪಗೊಂಡ ಭಾರ್ಗವನು ಪಾಶುಪತಾಸ್ತ್ರವನ್ನು ಪ್ರಯೋಗಿಸಬೇಕೆಂದು ಕೈಯ್ಯಲ್ಲಿ ಹಿಡಿದು ದತ್ತಾತ್ರೇಯನ ದೃಷ್ಟಿ ಬಿದ್ದಮಾತ್ರದಿಂದ ಸ್ತಂಭೀಭೂತನಾದನು.

೨೫. ಇಂತು ಕಂಭದಂತೆ ಅಚಲನಾದ ಭಾರ್ಗವನು ರಣರಂಗದಲ್ಲಿ ಪಾರ್ಷದರೊಡಗೂಡಿದ ಶ್ರೀಕೃಷ್ಣನಿಂದ ಕಾರ್ತವೀರ್ಯನು ರಕ್ಷಿತನಾಗಿರುವುದನ್ನು ನೋಡಿದನು.

೨೬. ಸುದರ್ಶನ ಚಕ್ರವು ಪ್ರಜ್ವಲಿಸುತ್ತ ಆ ರಾಜನ ಸುತ್ತಲೂ ತಿರುಗುತ್ತಿದ್ದಿತು. ಬ್ರಹ್ಮವಿಷ್ಣು ಮಹೇಶ್ವರರು ಸ್ಮಿತವದನರಾಗಿ ಆ ಚಕ್ರವನ್ನು ಸ್ತುತಿಸುತ್ತಿದ್ದರು.

ಗೋಪಾಲ ಶತಯುಕ್ತೇನ ಗೋಪವೇಷವಿಧಾರಿಣಾ ।
ನವೀನ ಜಲದಾಭೇನ ವಂಶೀಹಸ್ತೇನ ಗಾಯತಾ ॥ ೨೭ ॥

ಏತಸ್ಮಿನ್ನಂತರೇ ತತ್ರ ವಾಗ್ಬಭೂವಾಶರೀರಿಣೀ ।
ದತ್ತೇನ ದತ್ತಂ ಕವಚಂ ಕೃಷ್ಣಸ್ಯ ಪರಮಾತ್ಮನಃ ॥ ೨೮ ॥

ರಾಜ್ಞೋಽಸ್ತಿ ದಕ್ಷಿಣೇ ಬಾಹೌ ಸದ್ರತ್ನಗುಟಿಕಾನ್ವಿತಂ ।
ಗೃಹೀತಕವಚೇ ಶಂಭೌ ಭಿಕ್ಷಯಾ ಯೋಗಿನಾಂ ಗುರೌ ॥ ೨೯ ॥

ತದಾ ಹಂತುಂ ನೃಪಂ ಶಕ್ತೋ ಭೃಗುಶ್ಚೇತಿ ಚ ನಾರದ ।
ಶ್ರುತ್ವಾಽಶರೀರಿಣೀಂ ವಾಣೀಂ ಶಂಕರೋ ದ್ವಿಜರೂಪಧೃಕ್ ॥ ೩೦ ॥

ಭಿಕ್ಷಾಂ ಕೃತ್ವಾ ತು ಕವಚಮಾನೀಯ ಚ ನೃಪಸ್ಯ ಚ ।
ಶಂಭುನಾ ಭೃಗವೇ ದತ್ತಂ ಕೃಷ್ಣಸ್ಯ ಕವಚಂ ಚ ಯತ್ ॥ ೩೧ ॥

---

೨೭. ಗೋಪವೇಷವನ್ನು ಧರಿಸಿರುವ ನವಮೇಘಶ್ಯಾಮರಾದ ನೂರಾರು ಗೋಪಾಲಕರು ಕೈಯಲ್ಲಿ ಕೊಳಲನ್ನು ಧರಿಸಿ ಮನೋಹರವಾಗಿ ಹಾಡುತ್ತಿದ್ದರು.

೨೮. ಈ ಮಧ್ಯದಲ್ಲಿ ಅಶರೀರವಾಣಿಯೊಂದು ಪರಶುರಾಮನನ್ನು ಕುರಿತು ಇಂತೆಂದಿತು. "ಕಾರ್ತವೀರ್ಯನಿಗೆ ಕೃಷ್ಣಪರಮಾತ್ಮನ ಕವಚವನ್ನು ದತ್ತಾತ್ರೇಯನು ಅನುಗ್ರಹಿಸಿದ್ದಾನೆ.

೨೯. ರತ್ನದ ಮಣಿಗಳನ್ನು ಪೋಣಿಸಿರುವ ಆ ಕವಚವು ರಾಜನ ಬಲಭುಜದಲ್ಲಿದೆ. ಯೋಗಿಗಳ ಗುರುವೆನಿಸಿದ ಶಂಕರನು ಭಿಕ್ಷೆಬೇಡಿ ಆ ಕವಚವನ್ನು ತೆಗೆದುಕೊಳ್ಳಲಿ.

೩೦. ಆಗ ಭಾರ್ಗವನು ರಾಜನನ್ನು ಸಂಹರಿಸಲು ಶಕ್ತನಾಗುವನು ? ಎಲೈ ನಾರದನೇ ಈರೀತಿಯಾದ ಅಶರೀರವಾಣಿಯನ್ನುಕೇಳಿ ಶಂಕರನು ಬ್ರಾಹ್ಮಣ ವೇಷವನ್ನು ಧರಿಸಿದನು.

೩೧. ಮತ್ತು ರಾಜನ ಸಮೀಪಕ್ಕೆ ಹೋಗಿ, ಭಿಕ್ಷೆಬೇಡಿ ಶ್ರೀಕೃಷ್ಣನ ಕವಚವನ್ನು ತಂದು ಶಿವನು ಪರಶುರಾಮನಿಗೆ ಕೊಟ್ಟನು.

ಏತಸ್ಮಿನ್ನಂತರೇ ದೇವಾ ಜಗ್ಮುಃ ಸ್ವಸ್ಥಾನಮುತ್ತಮಂ ।
ಪ್ರತ್ಯುವಾಚಾಪಿ ಪರಶುರಾಮೋ ವೈ ಸಮರೇ ನೃಪಂ ॥ ೩೨ ॥

॥ ಪರಶುರಾಮ ಉವಾಚ ॥

ರಾಜೇಂದ್ರೋತ್ತಿಷ್ಠ ಸಮರಂ ಕುರು ಸಾಹಸ ಪೂರ್ವಕಂ ।
ಕಾಲಭೇದೇ ಜಯೋ ನೃಣಾಂ ಕಾಲಭೇದೇ ಪರಾಜಯಃ ॥ ೩೩ ॥

ಅಧೀತಂ ವಿಧಿವದ್ದತ್ತಂ ಕೃತಾಸ್ನ ಪೃಥ್ವೀ ಸುಶಾಸಿತಾ ।
ಸಮ್ಯಕ್ಕೃತಶ್ಚ ಸಂಗ್ರಾಮೋ ತ್ವಯಾಽಹಂ ಮೂರ್ಛಿತೋಽಧುನಾ ॥ ೩೪ ॥

ಜಿತಾಃ ಸರ್ವೇ ಚ ರಾಜೇಂದ್ರಾ ಲೀಲಯಾ ರಾವಣೋ ಜಿತಃ ।
ಜಿತೋಽಹಂ ದತ್ತಶೂಲೇನ ಶಂಭುನಾ ಜೀವಿತಃ ಪುನಃ ॥ ೩೫ ॥

---

೩೨. ಅಷ್ಟುಹೊತ್ತಿಗೆ ದೇವತೆಗಳೆಲ್ಲ ತಮ್ಮ ತಮ್ಮ ಸ್ಥಾನಕ್ಕೆ ತೆರಳಲು, ಪರಶುರಾಮನು ಯುದ್ಧಾಂಕಣದಲ್ಲಿ ರಾಜನನ್ನು ಕುರಿತಿಂತೆಂದನು.

೩೩. ಪರಶುರಾಮ:—ಎಲೈ ನೃಪೋತ್ತಮನೇ, ಮೇಲಕ್ಕೆ ಏಳು ಮತ್ತೊಮ್ಮೆ ಪ್ರಯತ್ನಪೂರ್ವಕವಾಗಿ ಯುದ್ಧಮಾಡು. ಮನುಜರಿಗೆ ಕಾಲಾನುಗುಣವಾಗಿ ಜಯಪರಾಜಯಗಳು ಸಂಭವಿಸುವುವು.

೩೪. ನೀನು ವೇದಾಧ್ಯಯನಮಾಡಿ ವಿಧಿಪೂರ್ವಕವಾಗಿ ದಾನಧರ್ಮ ಮಾಡಿದೆ. ಚತುಸ್ಸಮುದ್ರಮುದ್ರಿತವಾದ ಭೂಮಂಡಲವನ್ನು ಚೆನ್ನಾಗಿ ಆಳಿ ಕೀರ್ತಿಗಳಿಸಿದೆ. ಯುದ್ಧದಲ್ಲಿ ನಿನ್ನ ಪೌರುಷವನ್ನು ತೋರಿ ನನ್ನನ್ನೂ ಮೂರ್ಛೆಗೊಳಿಸಿದೆ.

೩೫. ಭೂಮಂಡಲದ ಸಕಲ ರಾಜರನ್ನೂ, ಲಂಕಾಧಿಪತಿಯಾದ ರಾವಣನನ್ನೂ ಲೀಲಾಮಾತ್ರದಿಂದ ಸೋಲಿಸಿದೆ. ದತ್ತಾತ್ರೇಯನು ಕೊಟ್ಟ ಶೂಲಾಯುಧದಿಂದ ನನ್ನನ್ನೂ ಸೋಲಿಸಿದೆ. ನಾನಾದರೋ ಈಶ್ವರನ ದಯದಿಂದ ಪುನರ್ಜೀವಿತನಾದೆ.

ರಾಮಸ್ಯ ವಚನಂ ಶ್ರುತ್ವಾ ರಾಜಾ ಪರಮಧಾರ್ಮಿಕಃ ।
ಮೂರ್ಧ್ನಾ ಪ್ರಣಮ್ಯ ತಂ ಭಕ್ತ್ಯಾ ಯಥಾರ್ಥೋಕ್ತಿಮುವಾಚ ಹ ।। ೩೬ ।।

।। ರಾಜೋವಾಚ ।।

ಕಿಮಧೀತಂ ತಥಾ ದತ್ತಂ ಕಾ ವಾ ಪೃಥ್ವೀ ಸುಶಾಸಿತಾ ।
ಗತಾಃ ಕತಿವಿಧಾಭೂಪಾ ಮಾದೃಶಾ ಧರಣೀತಲೇ ।। ೩೭ ।।

ಬುದ್ಧಿಸ್ತೇಜೋ ವಿಕ್ರಮಶ್ಚ ವಿವಿಧಾ ರಣಮಂತ್ರಣಾ ।
ಶ್ರೀರೈಶ್ವರ್ಯಂ ತಥಾ ಜ್ಞಾನಂ ದಾನಶಕ್ತಿಶ್ಚ ಲೌಕಿಕಂ ।। ೩೮ ।।

ಆಚಾರೋ ವಿನಯೋ ವಿದ್ಯಾ ಪ್ರತಿಷ್ಠಾ ಪರಮಂ ತಪಃ ।
ಸರ್ವಂ ಮನೋರಮಾಸಂಗೇ ಗತಮೇವ ಮಮ ಪ್ರಭೋ ।। ೩೯ ।।

ಸಾ ಚ ಸ್ತ್ರೀ ಪ್ರಾಣತುಲ್ಯಾ ಮೇ ಸಾಧ್ವೀ ಪದ್ಮಾಂಶಸಂಭವಾ ।
ಯಜ್ಞೇಷು ಪತ್ನೀ ಮಾತೇವ ಸ್ನೇಹೇ ಕ್ರೀಡತಿ ಸಂಗಿನೀ ।। ೪೦ ।।

---

೩೬. ಇಂತಾಡಿದ ರಾಮನ ಮಾತನ್ನು ಕೇಳಿ ಪರಮ ಧರ್ಮಿಷ್ಠನಾದ ಕಾರ್ತವೀರ್ಯನು, ಅವನಿಗೆ ಭಕ್ತಿಪೂರ್ವಕವಾಗಿ ತಲೆಬಾಗಿ, ನಮಿಸಿ ಸತ್ಯಾರ್ಥವನ್ನು ನುಡಿದನು.

೩೭. ಕಾರ್ತವೀರ್ಯಾರ್ಜುನ:—ಎಲೈ ಮುನಿವರ್ಯನೇ, ನಾನು ಮಾಡಿದ ಅಧ್ಯಯನ, ದಾನಗಳಲ್ಲಾಗಲೀ, ಪೃಥ್ವೀಪರಿಪಾಲನೆಯಲ್ಲಾಗಲೀ ವಿಶೇಷವೇನು ? ಭೂಮಂಡಲದಲ್ಲಿ ನನ್ನಂಥ ರಾಜರುಗಳು ಎಷ್ಟೋ ಮಂದಿ ಗತಿಸಿಹೋದರು.

೩೮–೩೯. ಎಲೈ ಪ್ರಭುವೇ, ನನ್ನ ಬುದ್ಧಿ ತೇಜಸ್ಸು ಪರಾಕ್ರಮಗಳೂ, ವಿವಿಧ ರಣಕುಶಲತೆಯೂ, ಸಂಪದಭಿವೃದ್ಧಿಯೂ, ದಿವ್ಯಜ್ಞಾನವೂ, ದಾನಶಕ್ತಿಯೂ, ವ್ಯವಹಾರನೈಪುಣ್ಯವೂ, ಸದಾಚಾರಸದ್ವಿನಯಗಳೂ, ವಿದ್ಯಾಪ್ರತಿಷ್ಠೆಗಳೂ, ಪರಮ ತಪಸ್ಸೂ ಎಲ್ಲವೂ ಮನೋರಮೆಯ ಸಂಗದಿಂದ ವ್ಯರ್ಥವಾಗಿ ಹೋಯಿತು.

೪೦. ಮಹಾಲಕ್ಷ್ಮಿಯ ಅಂಶಸಂಭವಳೂ, ಪರಮ ಪತಿವ್ರತೆಯೂ ಆದ ಆ ಮನೋರಮೆಯಾದರೋ ನನಗೆ ಪ್ರಾಣಸಮಾನಳಾಗಿದ್ದುದಲ್ಲದೆ ಯಜ್ಞಕಾಲದಲ್ಲಿ ಪತ್ನಿಯೂ ಸ್ನೇಹ ತೋರುವಾಗ ತಾಯಿಯೂ, ಕ್ರೀಡಾಕಾಲದಲ್ಲಿ ಗೆಳತಿಯೂ ಆಗಿದ್ದಳು.

ಆಬಾಲ್ಯಾತ್ಸಂಗಿನೀ ಶಶ್ವಚ್ಛಯನೇ ಭೋಜನೇ ರಣೇ ।
ತಾಂ ವಿನಾ ಪ್ರಾಣಹೀನೋಽಹಂ ವಿಷಹೀನೋ ಯಥೋರಗಃ ॥ ೪೧ ॥

ತ್ವಯಾ ನ ದೃಷ್ಟಂ ಯುದ್ಧಂ ಮೇ ಪುರೇ ಯಂ ಶೋಚನಾಸ್ಥಿತಾ ।
ದ್ವಿತೀಯಾ ಶೋಚನಾ ವಿಪ್ರ ಹತೋಽಹಂ ಬ್ರಾಹ್ಮಣೇನ ಚ ॥ ೪೨ ॥

ಕಾಲೇ ಸಿಂಹಃ ಸೃಗಾಲಂ ಚ ಸೃಗಾಲಃ ಸಿಂಹಮೇವ ಚ ।
ಕಾಲೇ ವ್ಯಾಘ್ರಂ ಹಂತಿ ಮೃಗೋ ಗಜೇಂದ್ರಂ ಹರಿಣಸ್ತಥಾ ॥ ೪೩ ॥

ಮಹಿಷಂ ಮಕ್ಷಿಕಾ ಕಾಲೇ ಗರುಡಂ ಚ ತಥೋರಗಃ ।
ಕಿಂಕರಃ ಸ್ತೌತಿ ರಾಜೇಂದ್ರಂ ಕಾಲೇ ರಾಜಾ ಚ ಕಿಂಕರಂ ॥ ೪೪ ॥

---

೪೧. ಬಾಲ್ಯದಿಂದಲೂ ಶಯನಭೋಜನಗಳಲ್ಲಿಯೂ, ಯುದ್ಧದಲ್ಲಿಯೂ ಗೆಳತಿಯಾಗಿದ್ದ ಆ ಮನೋರಮೆಯ ವಿರಹದಿಂದ ನಾನು ವಿಷವಿಲ್ಲದ ಹಾವಿನಂತೆ ಜೀವಚ್ಛವ (ಬದುಕಿದ್ದರೂ ಸತ್ತಂತೆ)ವಾಗಿದ್ದೇನೆ.

೪೨. ನೀನು ನನ್ನ ಯುದ್ಧಕೌಶಲ್ಯವನ್ನು ನೋಡಲಿಲ್ಲವಲ್ಲ ಎಂಬುದೊಂದು ಕೊರತೆ ಮೊದಲಿತ್ತು. ಈಗ ಬ್ರಾಹ್ಮಣನೊಬ್ಬನಿಂದ ಹತನಾಗುವ ಸ್ಥಿತಿ ಬಂದಿತಲ್ಲ ಎಂಬುದು ಮತ್ತೊಂದು ಕೊರತೆಯಾಯಿತು.

೪೩. ಕಾಲ ಒದಗಿದರೆ ಸಿಂಹವು ನರಿಯನ್ನೂ, ನರಿಯು ಸಿಂಹವನ್ನೂ ಕೊಲ್ಲುವುದು. ಅಂತೆಯೇ, ಜಿಂಕೆಯು ಹುಲಿಯನ್ನೂ, ಆನೆಯನ್ನೂ ಒಂದಾನೊಂದು ಕಾಲದಲ್ಲಿ ಕೊಲ್ಲಬಹುದು.

೪೪. ನೊಣಗಳು ಕೋಣನನ್ನೂ, ಹಾವು ಗರುಡನನ್ನೂ ಕೊಲ್ಲುವ ಕಾಲವೂ ಬರುವುದು, ಸೇವಕನು ರಾಜನನ್ನು ಹೊಗಳುವಂತೆ ರಾಜನು ಸೇವಕನನ್ನೂ ಹೊಗಳುವ ಕಾಲ ಬರುವುದು.

ಇಂದ್ರಂ ಚ ಮಾನವಃ ಕಾಲೇ ಕಾಲೇ ಬ್ರಹ್ಮಾ ಮರಿಷ್ಯತಿ ।
ಶಿರೋಭೂತ್ವಾ ಸಾ ಪ್ರಕೃತಿಃ ಕಾಲೇ ಶ್ರೀಕೃಷ್ಣವಿಗ್ರಹೇ ॥ ೪೫ ॥

ಮರಿಷ್ಯಂತಿ ಸುರಾಃ ಸರ್ವೇ ತ್ರಿಲೋಕಸ್ಥಾಶ್ಚರಾಚರಾಃ ।
ಸರ್ವೇ ಕಾಲೇ ಲಯಂ ಯಾಂತಿ ಕಾಲೋ ಹಿ ದುರತಿಕ್ರಮಃ ॥ ೪೬ ॥

ಕಾಲಸ್ಯ ಕಾಲಃ ಶ್ರೀಕೃಷ್ಣಃ ಸ್ರಷ್ಟುಃ ಸ್ರಷ್ಟಾ ಯಥೇಚ್ಛಯಾ ।
ಸಂಹರ್ತಾ ಚೈವ ಸಂಹರ್ತುಃ ಪಾತುಃ ಪಾತಾ ಪರಾತ್ಪರಃ ॥ ೪೭ ॥

ಮಹಾಸ್ಥೂಲಾತ್ಸ್ಥೂಲತಮಃ ಸೂಕ್ಷ್ಮಾತ್ಸೂಕ್ಷ್ಮತಮಃ ಕೃಶಃ ।
ಪರಮಾಣುಃ ಪರಃ ಕಾಲಃ ಕಾಲಸ್ಯಾತ್ಕಾಲಭೇದಕಃ ॥ ೪೮ ॥

ಯಸ್ಯ ಲೋಮಾನಿ ವಿಶ್ವಾನಿ ಸ ಪುಮಾಂಶ್ಚ ಮಹಾವಿರಾಟ್ ।
ತೇಜಸಾ ಷೋಡಶಾಂಶಶ್ಚ ಕೃಷ್ಣಸ್ಯ ಪರಮಾತ್ಮನಃ ॥ ೪೯ ॥

---

೪೫. ಮನುಷ್ಯನು ಇಂದ್ರನನ್ನೂ ಕೊಲ್ಲುವ ಕಾಲ ಒದಗುವುದು. ಬ್ರಹ್ಮನೂ ಕಾಲಾನುಗುಣವಾಗಿ ಲಯವಾಗುವನು. ಪ್ರಕೃತಿಯೂ ಕೂಡ ಕಾಲವಶಳಾಗಿ ಶ್ರೀಕೃಷ್ಣನ ವಿಗ್ರಹದಲ್ಲಿ ಐಕ್ಯಳಾಗುವಳು.

೪೬. ತ್ರಿಲೋಕದಲ್ಲಿರುವ ದೇವತೆಗಳೂ, ಚರಾಚರ ಪ್ರಾಣಿಗಳೂ ಕಾಲಾನುಗುಣವಾಗಿ ಲಯಹೊಂದುವರು. ಕಾಲವನ್ನು ಮೀರಲಾರಿಗೂ ಅಳವಲ್ಲ.

೪೭. ಸೃಷ್ಟಿಕರ್ತನನ್ನು ಸೃಜಿಸುವವನೂ, ಜಗತ್ಪಾಲಕನನ್ನು ಪಾಲಿಸುವವನೂ, ಸಂಹಾರಕನನ್ನು ಸಂಹರಿಸುವವನೂ ಪರಾತ್ಪರನೂ ಆದ ಶ್ರೀಕೃಷ್ಣ ಪರಮಾತ್ಮನೊಬ್ಬನೇ ಕಾಲಕಾಲನೆನಿಸುವನು.

೪೮. ಸ್ಥೂಲವಸ್ತುಗಳಿಗೆಲ್ಲ ಅತಿ ಸ್ಥೂಲನೂ, ಸೂಕ್ಷ್ಮ ವಸ್ತುಗಳಿಗಿಂತ ಅತಿ ಸೂಕ್ಷ್ಮನೂ, ಅತಿ ಪುರಾತನನೂ, ಆದ ಆ ಪರಮಾತ್ಮನೊಬ್ಬನೇ ಕಾಲಭೇದಕನಾಗಿರುವನು

೪೯. ಯಾರ ರೋಮಕೂಪಗಳಲ್ಲಿ ನಿಖಿಲ ವಿಶ್ವವೂ ಅಡಗಿರುವುದೋ ಆ ಮಹಾವಿರಾಟ್ಪುರುಷನೂ ಕೂಡ ಶ್ರೀಕೃಷ್ಣ ಪರಮಾತ್ಮನ ಹದಿನಾರನೆಯ ಒಂದು ಭಾಗ ತೇಜಸ್ಸಿನಿಂದ ವ್ಯಕ್ತನಾಗಿರುವನು.

ತತಃ ಕ್ಷುದ್ರವಿರಾಡ್ ಜಾತಃ ಸರ್ವೇಷಾಂ ಕಾರಣಂ ಪರಂ ।
ಯಃ ಸ್ರಷ್ಟಾ ಚ ಸ್ವಯಂ ಬ್ರಹ್ಮಾ ಯೆನ್ನಾಭಿಕಮಲೋದ್ಭವಃ ॥ ೫೦ ॥

ನಾಭೇಃ ಕಮಲದಂಡಸ್ಯ ಯೋಽಂತಂ ನ ಪ್ರಾಪ ಯತ್ನತಃ ।
ಭ್ರಮಣಾಲ್ಲಕ್ಷವರ್ಷಂ ಚ ತತಃ ಸ್ವಸ್ಥಾನಸಂಸ್ಥಿತಃ ॥ ೫೧ ॥

ತಪಶ್ಚಕ್ರೇ ತತಸ್ತತ್ರ ಲಕ್ಷವರ್ಷಂ ಚ ವಾಯುಭುಕ್ ।
ತತೋ ದದರ್ಶ ಗೋಲೋಕಂ ಶ್ರೀಕೃಷ್ಣಂ ಚ ಸಪಾರ್ಷದಂ ॥ ೫೨ ॥

ಗೋಪಗೋಪೀಪರಿವೃತಂ ದ್ವಿಭುಜಂ ಮುರಲೀಧರಂ ।
ರತ್ನಸಿಂಹಾಸನಸ್ಥಂ ಚ ರಾಧಾವಕ್ಷಃಸ್ಥಲಸ್ಥಿತಂ ॥ ೫೩ ॥

---

೫೦. ಅವನಿಂದಲೇ ಎಲ್ಲಕ್ಕೂ ಪರಮಕಾರಣನಾದ ಕ್ಷುದ್ರವಿರಾಟನು (ವಿಷ್ಣು) ಅವತರಿಸಿದನು. ಅವನ ನಾಭಿಕಮಲದಿಂದಲೇ ಸೃಷ್ಟಿಕರ್ತನಾದ ಚತುರ್ಮುಖ ಬ್ರಹ್ಮನು ವ್ಯಕ್ತನಾದನು.

೫೧. ಅವನು ಲಕ್ಷವರ್ಷ ಪ್ರಯತ್ನಪೂರ್ವಕವಾಗಿ ಭ್ರಮಣಮಾಡಿದರೂ ನಾಭಿಯ ಕಮಲನಾಳದ ಕೊನೆಯನ್ನು ಕಾಣಲಾಗದೆ ತನ್ನ ಜನ್ಮಸ್ಥಾನದಲ್ಲಿಯೇ ಕುಳಿತನು.

೫೨. ಆಗ ಬ್ರಹ್ಮನು ಲಕ್ಷವರ್ಷಗಳ ಕಾಲ ವಾಯುಸೇವೆ ಮಾಡಿಕೊಂಡು, ತಪಸ್ಸುಮಾಡಿ, ಅನಂತರ ಗೋಲೋಕವನ್ನೂ, ಪಾರ್ಷದರೊಡಗೊಂಡ ಶ್ರೀಕೃಷ್ಣ ಪರಮಾತ್ಮನನ್ನೂ, ಕಂಡನು.

೫೩. ಭುಜದ್ವಯಗಳಿಂದ ಶೋಭಿತನಾದ ಆ ಪರಮಾತ್ಮನು ಮುರಳೀಧರನಾಗಿ, ಗೋಪಗೋಪಿಯರ ಪರಿವಾರದಿಂದ ಸೇವೆಗೊಂಡು ರತ್ನಸಿಂಹಾಸನಕ್ಕೆಣೆಯಾದ ರಾಧೆಯ ವಕ್ಷಃಸ್ಥಳದಲ್ಲಿ ಮಂಡಿಸಿದ್ದನು.

ದೃಷ್ಟ್ವಾನುಜ್ಞಾಂ ಗೃಹೀತ್ವಾ ಚ ಪ್ರಣಮ್ಯ ಚ ಪುನಃಪುನಃ ।
ಈಶ್ವರೇಚ್ಛಾಂ ಚ ವಿಜ್ಞಾಯ ಸ್ರಷ್ಟುಂ ಸೃಷ್ಟಿಂ ಮನೋ ದಧೇ ॥ ೫೪ ॥

ಯಃ ಶಿವಃ ಸೃಷ್ಟಿಸಂಹರ್ತಾ ಸ ಚ ಸ್ರಷ್ಟುರ್ಲಲಾಟಜಃ ।
ವಿಷ್ಣುಃ ಪಾತಾ ಕ್ಷುದ್ರವಿರಾಟ್ ಶ್ವೇತದ್ವೀಪನಿವಾಸಕೃತ್ ॥ ೫೫ ॥

ಸೃಷ್ಟಿಕಾರಣಭೂತಾಶ್ಚ ಬ್ರಹ್ಮವಿಷ್ಣುಮಹೇಶ್ವರಾಃ ।
ಸಂತಿ ವಿಶ್ವೇಷು ಸರ್ವೇಷು ಶ್ರೀಕೃಷ್ಣಸ್ಯ ಕಲೋದ್ಭವಾಃ ॥ ೫೬ ॥

ತೇಽಪಿ ದೇವಾಃ ಪ್ರಾಕೃತಿಕಾಃ ಪ್ರಾಕೃತಶ್ಚ ಮಹಾವಿರಾಟ್ ।
ಸರ್ವಪ್ರಸೂತಿಪ್ರಕೃತಿಃ ಶ್ರೀಕೃಷ್ಣಃ ಪ್ರಕೃತೇಃ ಪರಃ ॥ ೫೭ ॥

ನ ಶಕ್ತಃ ಪರಮೇಶೋಽಪಿ ತಾಂ ಶಕ್ತಿಂ ಪ್ರಕೃತಿಂ ವಿನಾ ।
ಸೃಷ್ಟಿಂ ವಿಧಾತುಂ ಮಾಯೇಶೋ ನ ಸೃಷ್ಟಿರ್ಮಾಯಯಾ ವಿನಾ ॥ ೫೮ ॥

---

೫೪. ಬ್ರಹ್ಮನು ಪರಮಾತ್ಮನಿಗೆ ಪುನಃ ಪುನಃ ನಮಸ್ಕರಿಸಿ, ಅವನ ಅನುಜ್ಞೆಯನ್ನು ಪಡೆದು, ಅವನ ಇಚ್ಛೆಯಂತೆ ಜಗತ್ಸೃಷ್ಟಿಮಾಡಲು ಮನಸ್ಸು ಮಾಡಿದನು.

೫೫. ಸೃಷ್ಟಿಸಂಹಾರಕಾರಕನಾದ ಶಿವನೂ, ಬ್ರಹ್ಮನ ಲಲಾಟದಿಂದ ಅವತರಿಸಿದನು. ಜಗತ್ಪರಿಪಾಲಕನೂ, ಕ್ಷುದ್ರವಿರಾಟನೂ ಆದ ವಿಷ್ಣುವು ಶ್ವೇತ ದ್ವೀಪದಲ್ಲಿ ನೆಲೆಸಿರುವನು.

೫೬. ಸೃಷ್ಟಿಸ್ಥಿತಿಲಯಗಳಿಗೆ ಕಾರಣರಾದ ಬ್ರಹ್ಮವಿಷ್ಣುಮಹೇಶ್ವರರು ಶ್ರೀಕೃಷ್ಣನ ಕಲೆಯಿಂದ ಆವಿರ್ಭವಿಸಿ ನಿಖಿಲವಿಶ್ವದಲ್ಲಿಯೂ ನೆಲೆಸಿರುವರು.

೫೭. ಬ್ರಹ್ಮಾದಿದೇವತೆಗಳೆಲ್ಲರೂ ಪ್ರಕೃತಿಸಂಭವರು. ಮಹಾವಿರಾಟ್ಪುರುಷನೂ ಪ್ರಾಕೃತನು, ಪ್ರಕೃತಿಯು ಎಲ್ಲಕ್ಕೂ ಕಾರಣ. ಶ್ರೀಕೃಷ್ಣನೊಬ್ಬನೇ ಪ್ರಕೃತಿಯನ್ನು ಮೀರಿದವನು.

೫೮. ಮಾಯೆಗೊಡೆಯನಾದ ಆ ಸರ್ವೇಶ್ವರನು ಶಕ್ತಿರೂಪಿಣಿಯಾದ ಆ ಪ್ರಕೃತಿಯನ್ನುಳಿದು ಏಕಾಕಿಯಾಗಿ ಸೃಷ್ಟಿಮಾಡಲಾರನು. ಮಾಯೆಯಿಲ್ಲದ ಸೃಷ್ಟಿಯಿಲ್ಲ.

ಸಾ ಚ ಕೃಷ್ಣೇ ತಿರೋ ಭೂತ್ವಾ ಸೃಷ್ಟಿಸಂಹಾರಕಾರಕೇ ।
ಸಾವಿರ್ಭೂತಾ ಸೃಷ್ಟಿಕಾಲೇ ಸಾ ಚ ನಿತ್ಯಾ ಮಹೇಶ್ವರೀ ॥ ೫೯ ॥

ಕುಲಾಲಶ್ಚ ಘಟಂ ಕರ್ತುಂ ಯಥಾಽಶಕ್ತೋ ಮೃದಂ ವಿನಾ ।
ಸ್ವರ್ಣಂ ವಿನಾ ಸ್ವರ್ಣಕಾರಃ ಕುಂಡಲಂ ಕರ್ತುಮಕ್ಷಮಃ ॥ ೬೦ ॥

ಸಾ ಚ ಶಕ್ತಿಃ ಸೃಷ್ಟಿಕಾಲೇ ಪಂಚಧಾ ಚೇಶ್ವರೇಚ್ಛಯಾ ।
ರಾಧಾ ಪದ್ಮಾ ಚ ಸಾವಿತ್ರೀ ದುರ್ಗಾದೇವೀ ಸರಸ್ವತೀ ॥ ೬೧ ॥

ಪ್ರಾಣಾಧಿಷ್ಠಾತೃದೇವೀ ಯಾ ಕೃಷ್ಣಸ್ಯ ಪರಮಾತ್ಮನಃ ।
ಪ್ರಾಣಾಧಿಕಪ್ರಿಯತಮಾ ಸಾ ರಾಧಾ ಪರಿಕೀರ್ತಿತಾ ॥ ೬೨ ॥

ಐಶ್ವರ್ಯಾಧಿಷ್ಠಾತೃದೇವೀ ಸರ್ವಮಂಗಲಕಾರಿಣೀ ।
ಪರಮಾನಂದರೂಪಾ ಚ ಸಾ ಲಕ್ಷ್ಮೀಃ ಪರಿಕೀರ್ತಿತಾ ॥ ೬೩ ॥

---

೫೯. ನಿತ್ಯಳೂ, ಮಹೇಶ್ವರಿಯೂ ಆದ ಆ ಪ್ರಕೃತಿಯು ಸೃಷ್ಟಿಸಂಹಾರ ಕಾರಣನಾದ ಶ್ರೀಕೃಷ್ಣಪರಮಾತ್ಮನಲ್ಲಿ ಅಡಗಿಕೊಂಡಿದ್ದು ಅವನು ಸೃಷ್ಟ್ಯುನ್ಮುಖನಾದಾಗ ವ್ಯಕ್ತಳಾಗುವಳು.

೬೦. ಕುಂಬಾರನು ಮಣ್ಣಿಲ್ಲದೆ ಎಂತು ಘಟವನ್ನು ಮಾಡಲಾರನೋ, ಅಕ್ಕಸಾಲೆಯು ಚಿನ್ನವಿಲ್ಲದೆ ಕರ್ಣಕುಂಡಲವನ್ನು ಮಾಡಲಾರನೋ ಅಂತೆಯೇ ಪರಮಾತ್ಮನು ಪ್ರಕೃತಿಯಿಲ್ಲದೆ ಸೃಷ್ಟಿಮಾಡಲಾರನು.

೬೧. ಆತ್ಮಶಕ್ತಿಸ್ವರೂಪಳಾದ ಪ್ರಕೃತಿಯು ಸೃಷ್ಟಿಕಾಲದಲ್ಲಿ ಈಶ್ವರೇಚ್ಛೆಯಂತೆ ರಾಧೆ, ಲಕ್ಷ್ಮಿ, ಸಾವಿತ್ರಿ, ದುರ್ಗಾ, ಸರಸ್ವತಿಯೆಂದು ಐದುಬಗೆಯಾದಳು.

೬೨. ಶ್ರೀಕೃಷ್ಣಪರಮಾತ್ಮನ ಪ್ರಾಣಾಧಿಷ್ಠಾತೃದೇವಿಯೂ, ಪ್ರಾಣಕ್ಕಿಂತ ಅಧಿಕ ಪ್ರಿಯಳೂ ಆದವಳೇ ರಾಧೆಯೆಂದು ಹೆಸರಾಂತಳು.

೬೩. ಸಂಪತ್ತಿನ ಅಭಿಮಾನಿದೇವತೆಯೂ, ಸರ್ವಮಂಗಳ ಕಾರಿಣಿಯೂ, ಪರಮಾನಂದಸ್ವರೂಪಳೂ ಆದವಳೇ ಮಹಾಲಕ್ಷ್ಮಿಯೆಂದು ಪ್ರಖ್ಯಾತಳಾದಳು.

ವಿದ್ಯಾಧಿಷ್ಠಾತೃದೇವೀ ಯಾ ಪರಮೇಶಸ್ಯ ದುರ್ಲಭಾ ।
ಯಾ ಮಾತಾ ವೇದಶಾಸ್ತ್ರಾಣಾಂ ಸಾ ಸಾವಿತ್ರೀ ಪ್ರಕೀರ್ತಿತಾ ॥ ೬೪ ॥

ಬುದ್ಧ್ಯಧಿಷ್ಠಾತೃದೇವೀ ಯಾ ಸರ್ವಶಕ್ತಿಸ್ವರೂಪಿಣೀ ।
ಸರ್ವಜ್ಞಾನಾತ್ಮಿಕಾ ಸರ್ವಾ ಸಾ ದುರ್ಗಾ ದುರ್ಗನಾಶಿನೀ ॥ ೬೫ ॥

ವಾಗಧಿಷ್ಠಾತೃದೇವೀ ಯಾ ಶಾಸ್ತ್ರಜ್ಞಾನಪ್ರದಾ ಸದಾ ।
ಕೃಷ್ಣಕಂಠೋದ್ಭವಾ ಸಾ ಸ್ಯಾದ್ಯಾ ಚ ದೇವೀ ಸರಸ್ವತೀ ॥ ೬೬ ॥

ಪಂಚಧಾದೌ ಸ್ವಯಂ ದೇವೀ ಮೂಲಪ್ರಕೃತಿರೀಶ್ವರೀ ।
ತತಃ ಸೃಷ್ಟಿಕ್ರಮೇಣೈವ ಬಹುಧಾ ಕಲಯಾ ಚ ಸಾ ॥ ೬೭ ॥

ಯೋಷಿತಃ ಪ್ರಕೃತೇರಂಶಾಃ ಪುಮಾಂಸಃ ಪುರುಷಸ್ಯ ಚ ।
ಮಾಯಯಾ ಸೃಷ್ಟಿಕಾಲೇ ಚ ತದ್ವಿನಾ ನ ಭವೇದ್ಭವಃ ॥ ೬೮ ॥

---

೬೪. ಪರಮೇಶನ ವಿದ್ಯಾಧಿಷ್ಠಾತೃದೇವಿಯೂ, ವೇದಶಾಸ್ತ್ರಗಳ ಮಾತೆಯೂ ಆದವಳೇ ಸಾವಿತ್ರಿಯೆಂದು ಪ್ರಸಿದ್ಧಳಾದಳು.

೬೫. ಬುದ್ಧಿಗೆ ಅಧಿಷ್ಠಾತೃದೇವಿಯೂ, ಸರ್ವಶಕ್ತಿಸ್ವರೂಪಿಣಿಯೂ, ಸರ್ವಜ್ಞಾನಾತ್ಮಳೂ, ಪಾಪನಾಶಕಳೂ ಆದ ದೇವಿಯನ್ನೇ ದುರ್ಗಿಯೆಂದು ಕರೆದರು.

೬೬. ಮಾತಿಗೆ ಅಭಿಮಾನಿದೇವತೆಯೂ, ಸಕಲ ಶಾಸ್ತ್ರದಜ್ಞಾನದಾಯಕಳೂ, ಶ್ರೀಕೃಷ್ಣನ ಕಂಠದಿಂದ ಉತ್ಪನ್ನಳೂ ಆದ ದೇವಿಯೇ ಸರಸ್ವತಿಯೆಂದು ವಿಖ್ಯಾತಳಾದಳು.

೬೭. ಈ ರೀತಿಯಾಗಿ ಸರ್ವೇಶ್ವರಿಯಾದ ಮೂಲಪ್ರಕೃತಿಯು ಸೃಷ್ಟಿಯ ಆದಿಯಲ್ಲಿ ಪಂಚವಿಧಳಾದರೂ, ಸೃಷ್ಟಿಕ್ರಮದಲ್ಲಿ ತನ್ನ ಕಲೆಯಿಂದ ಅನೇಕ ರೂಪಳಾದಳು.

೬೮. ಸ್ತ್ರೀಯರೆಲ್ಲರೂ ಪ್ರಕೃತಿಯ ಅಂಶದಿಂದಲೂ, ಪುರುಷರೆಲ್ಲರೂ ಪರಮಾತ್ಮನ ಅಂಶದಿಂದಲೂ ಜನಿಸಿರುವರು. ಸೃಷ್ಟಿಕಾಲದಲ್ಲಿ ಮಾಯಾರೂಪಿಣಿಯಾದ ಪ್ರಕೃತಿಯಿಲ್ಲದಿದ್ದರೆ ಸಂಸಾರವೇ ಇಲ್ಲದಂತಾಗುತ್ತಿತ್ತು.

ಸೃಷ್ಟಿಶ್ಚ ಪ್ರತಿ ವಿಶ್ವೇಷು ಬ್ರಹ್ಮನ್ ಬ್ರಹ್ಮೋದ್ಭವಾ ಸದಾ ।
ಪಾತಾ ವಿಷ್ಣುಶ್ಚ ಸಂಹರ್ತಾ ಶಿವಃ ಶಶ್ವಚ್ಛಿವಪ್ರದಃ ॥ ೬೯ ॥

ದತ್ತದತ್ತಂ ಜ್ಞಾನಮಿದಂ ಸಾಮ ಮಹ್ಯಂ ಚ ಪುಷ್ಕರೇ ।
ದೀಕ್ಷಾಕಾಲೇ ಚ ಮಾಘ್ಯಾಂ ಚ ಮುನಿಪ್ರವರಸನ್ನಿಧೌ ॥ ೭೦ ॥

ಇತ್ಯುಕ್ತ್ವಾ ಕಾರ್ತವೀರ್ಯಶ್ಚ ರಾಮಂ ನತ್ವಾ ಚ ಸಸ್ಮಿತಃ ।
ಆರುರೋಹ ರಥಂ ಶೀಘ್ರಂ ಗೃಹೀತ್ವಾ ಸಶರಂ ಧನುಃ ॥ ೭೧ ॥

ರಾಮಸ್ತತೋ ರಾಜಸೈನ್ಯಂ ಬ್ರಹ್ಮಾಸ್ತ್ರೇಣ ಜಘಾನ ಹ ।
ನೃಪಂ ಪಾಶುಪತೇನೈವ ಲೀಲಯಾ ಶ್ರೀಹರಿಂ ಸ್ಮರನ್ ॥ ೭೨ ॥

ಏವಂ ತ್ರಿಸಪ್ತಕೃತ್ವಶ್ಚ ಕ್ರಮೇಣ ಚ ವಸುಂಧರಾಂ ।
ರಾಮಶ್ಚಕಾರ ನಿರ್ಭೂಪಾಂ ಲೀಲಯಾ ಚ ಶಿವಂ ಸ್ಮರನ್ ॥ ೭೩ ॥

---

೬೯. ಎಲೈ ವಿಪ್ರನೇ. ಪ್ರತಿ ವಿಶ್ವದಲ್ಲಿಯೂ, ಬೇರೆ ಬೇರೆ ಬ್ರಹ್ಮನು ಸೃಷ್ಟಿಯನ್ನೂ, ವಿಷ್ಣುವು ರಕ್ಷಣೆಯನ್ನೂ, ಮಂಗಳಕರನಾದ ಶಿವನು ಸಂಹಾರ ಕಾರ್ಯವನ್ನೂ ಮಾಡುವರು.

೭೦. ಎಲೈ ಪರಶುರಾಮನೇ, ದತ್ತಾತ್ರೇಯನು ನನಗೆ ಈ ದಿವ್ಯಜ್ಞಾನವನ್ನು ಪುಷ್ಕರಕ್ಷೇತ್ರದಲ್ಲಿ, ದೀಕ್ಷಾಕಾಲದಲ್ಲಿ (ಮಾಘ್ಯಾಂ) ಮುನಿವರ್ಯರ ಎದುರಿನಲ್ಲಿ ಉಪದೇಶಮಾಡಿದನು.

೭೧. ಕಾರ್ತವೀರ್ಯನು ಹೀಗೆಂದು ಹೇಳಿ ಪರಶುರಾಮನಿಗೆ ವಂದಿಸಿ, ಸ್ಮಿತಮುಖನಾಗಿ ಧನುರ್ಬಾಣಗಳನ್ನು ತೆಗೆದುಕೊಂಡು ಜಾಗ್ರತೆಯಾಗಿ ರಥವನ್ನೇರಿದನು.

೭೨. ಅನಂತರ ಪರಶುರಾಮನು ಶ್ರೀಹರಿಯನ್ನು ಸ್ಮರಿಸುತ್ತ ಬ್ರಹ್ಮಾಸ್ತ್ರದಿಂದ ಆ ಕಾರ್ತವೀರ್ಯನ ಸೈನ್ಯವನ್ನೂ, ಪಾಶುಪತಾಸ್ತ್ರದಿಂದ ಕಾರ್ತವೀರ್ಯನನ್ನೂ ಲೀಲಾಜಾಲವಾಗಿ ಸಂಹರಿಸಿದನು.

೭೩. ಅಲ್ಲದೆ ಇಪ್ಪತ್ತೊಂದುಸಾರಿ ಕ್ರಮವಾಗಿ ಭೂಪ್ರದಕ್ಷಿಣೆಮಾಡಿ ಶಿವನನ್ನು ಸ್ಮರಿಸುತ್ತ, ಭೂಮಂಡಲದ ರಾಜರನ್ನೆಲ್ಲ ನಿರ್ಮೂಲಗೊಳಿಸಿದನು.

ಗರ್ಭಸ್ಥಂ ಮಾತುರಙ್ಕಸ್ಥಂ ಶಿಶುಂ ವೃದ್ಧಂ ಚ ಮಧ್ಯಮಂ ।
ಜಘಾನ ಕ್ಷತ್ರಿಯಂ ರಾಮಃ ಪ್ರತಿಜ್ಞಾ ಪಾಲನಾಯ ವೈ ॥ ೭೪ ॥

ಕಾರ್ತವೀರ್ಯಶ್ಚ ಗೋಲೋಕಂ ಜಗಮ ಕೃಷ್ಣಸನ್ನಿಧಿಂ ।
ಜಗಾಮ ತೋಷಾತ್ಪರಶುರಾಮಶ್ಚ ಶ್ರೀಹರಿಂ ಸ್ಮರನ್ ॥ ೭೫ ॥

ತ್ರಿಸ್ಸಪ್ತಕೃತ್ವೋ ನಿರ್ಭೂಪಾಂ ಮಹೀಂ ದೃಷ್ಟ್ವಾ ಮಹೇಶ್ವರಃ ।
ರಮಣಂ ತೇನ ಪರಶುರಾಮಂ ದೃಷ್ಟ್ವಾ ಚ ಕಾತರಂ ॥ ೭೬ ॥

ದೇವಾಶ್ಚ ಮುನಯೋ ದೇವ್ಯಃ ಸಿದ್ಧಗಂಧರ್ವಕಿನ್ನರಾಃ ।
ಸರ್ವೇ ಚಕ್ರುಃ ಪುಷ್ಪವೃಷ್ಟಿಂ ರಾಮ ಮೂರ್ಧ್ನಿ ಚ ನಾರದ ॥ ೭೭ ॥

ಸ್ವರ್ಗೇ ದುಂದುಭಯೋ ನೇದುರ್ಹರ್ಷಶಬ್ದೋ ಬಭೂವ ಹ ।
ಯಶಸಾ ಚೈವ ಪರಶುರಾಮಸ್ಯಾಪೂರಿತಂ ಜಗತ್ ॥ ೭೮ ॥

---

೭೪. ಪರಶುರಾಮನು ತನ್ನ ಪ್ರತಿಜ್ಞಾಪೂರ್ತಿಗಾಗಿ, ಗರ್ಭದಲ್ಲಿರುವ ಮತ್ತು ತಾಯಿಯ ತೊಡೆಯ ಮೇಲೆ ಆಡುವ ಕ್ಷತ್ರಿಯ ಶಿಶುಗಳನ್ನೂ, ಬಾಲಕ, ತರುಣ ಮತ್ತು ವೃದ್ಧ ಕ್ಷತ್ರಿಯರನ್ನೂ ಬಿಡದೆ ನಾಶಗೊಳಿಸಿದನು.

೭೫ ಇತ್ತ ಕಾರ್ತವೀರ್ಯನು ಮೃತನಾಗಿ, ಗೋಲೋಕದಲ್ಲಿ ಶ್ರೀಕೃಷ್ಣನ ಸನ್ನಿಧಿಗೆ ಹೋದನು ಪರಶುರಾಮನೂ ಕೂಡ ಸಂತುಷ್ಟನಾಗಿ ಶ್ರೀಹರಿಯನ್ನು ಸ್ಮರಿಸುತ್ತ ಹಿಂತಿರುಗಿದನು.

೭೬. ಇಂತು ಪರಶುರಾಮನು ಇಪ್ಪತ್ತೊಂದು ಸಾರಿ ಭೂಪ್ರದಕ್ಷಿಣೆಮಾಡಿ, ಕ್ಷತ್ರಿಯರೆಲ್ಲರನ್ನೂ ನಾಶಗೊಳಿಸಿ, ವ್ಯಾಕುಲಚಿತ್ತನಾಗಿರುವುದನ್ನು ಮಹೇಶ್ವರನು ನೋಡಿ ಶಾಂತಚಿತ್ತನಾಗುವಂತೆ ಅವನಿಗೆ ಆಶೀರ್ವದಿಸಿದನು

೭೭. ದೇವದೇವಿಯರೂ, ಮುನಿಗಳೂ, ಸಿದ್ಧಗಂಧರ್ವ ಕಿನ್ನರರೂ, ಪರಶುರಾಮನ ತಲೆಯ ಮೇಲೆ ಹೂಮಳೆಗರೆದರು.

೭೮. ಸ್ವರ್ಗದಲ್ಲಿ ನಗಾರಿಧ್ವನಿಯೂ, ಜಯ ಜಯ ಮುಂತಾದ ಹರ್ಷಧ್ವನಿಗಳೂ ಕೇಳಿಸಿದವು. ಪರಶುರಾಮನ ಕೀರ್ತಿಯಿಂದ ಜಗತ್ತೆಲ್ಲವೂ ಪರಿಪೂರ್ಣವಾಯಿತು.

ಬ್ರಹ್ಮಾ ಭೃಗುಶ್ಚ ಶುಕ್ರಶ್ಚ ವಾಲ್ಮೀಕಿಶ್ಚ್ಯವನಸ್ತಥಾ ।
ಜಮದಗ್ನಿರ್ಬ್ರಹ್ಮಲೋಕಾದಾಜಗಾಮ ಪ್ರಹರ್ಷಿತಃ ॥ ೭೯ ॥

ಪುಲಕಾಂಚಿತಸರ್ವಾಂಗಾಃ ಸಾನಂದಾಶ್ಚ ಸಮನ್ವಿತಾಃ ।
ದೂರ್ವಾಪುಷ್ಪಕರಾಃ ಸರ್ವೇ ಕುರ್ವಂತೋ ಮಂಗಲಾಶಿಷಃ ॥ ೮೦ ॥

ಪ್ರಣನಾಮ ಚ ತಾನ್ರಾಮೋ ದಂಡವತ್ಪತಿತೋ ಭುವಿ ।
ಕ್ರೋಡೇ ಚಕಾರ ಬ್ರಹ್ಮಾದೌ ಕ್ರಮಾತ್ತಾತೇತಿ ಸಂವದನ್ ॥ ೮೧ ॥

ತಮುವಾಚಾಥ ಪರಶುರಾಮಂ ಬ್ರಹ್ಮಾ ಜಗದ್ಗುರುಃ ।
ವೇದಸಾರಂ ನೀತಿಯುತಂ ಪರಿಣಾಮಸುಖಾವಹಂ ॥ ೮೨ ॥

॥ ಬ್ರಹ್ಮೋವಾಚ ॥

ಶೃಣು ರಾಮ ಪ್ರವಕ್ಷ್ಯಾಮಿ ಸರ್ವಸಂಪತ್ಕರಂ ಪರಂ ।
ಕಾಣ್ವಶಾಖೋಕ್ತವಚನಂ ಸತ್ಯಂ ವೈ ಸರ್ವಸಂಮತಂ ॥ ೮೩ ॥

---

೭೯. ಬ್ರಹ್ಮ, ಭೃಗು, ಶುಕ್ರ, ವಾಲ್ಮೀಕಿ, ಚ್ಯವನ, ಜಮದಗ್ನಿ ಮುಂತಾದವರೆಲ್ಲರೂ ಸಂತುಷ್ಟರಾಗಿ ಬ್ರಹ್ಮಲೋಕದಿಂದ ಪರಶುರಾಮನಿದ್ದಲ್ಲಿಗೆ ಬಂದರು.

೮೦. ಎಲ್ಲರೂ ರೋಮಾಂಚಿತಶರೀರರೂ, ಆನಂದಭರಿತರೂ ಆಗಿ ಕೈಯಲ್ಲಿ ದೂರ್ವಾ (ಗರಿಕೆ) ಪುಷ್ಪಾಕ್ಷತೆಗಳನ್ನು ಹಿಡಿದು ಪರಶುರಾಮನಿಗೆ ಮಂಗಳಾಶೀರ್ವಾದ ಮಾಡಿದರು.

೮೧. ಪರಶುರಾಮನು ಅವರೆಲ್ಲರಿಗೂ ಭೂಮಿಯ ಮೇಲೆ ಸಾಷ್ಟಾಂಗ ನಮಸ್ಕಾರಮಾಡಿದನು. ಆಗ ಬ್ರಹ್ಮನೇ ಮೊದಲಾದವರು ಕ್ರಮವಾಗಿ 'ವತ್ಸನೇ' ಎಂಬ ವಿಶ್ವಾಸದ ನುಡಿಯಾಡುತ್ತ ಕ್ರಮವಾಗಿ ಎದೆಗಪ್ಪಿಕೊಂಡರು.

೮೨ ಅನಂತರ ಜಗದ್ಗುರುವಾದ ಬ್ರಹ್ಮನು ಪರಶುರಾಮನನ್ನು ಕುರಿತು ವೇದಸಾರವೂ, ನೀತಿಬೋಧಕವೂ, ಪರಿಣಾಮದಲ್ಲಿ ಸುಖಕರವೂ ಆದ ಕೆಲವು ನುಡಿಗಳನ್ನಾಡಿದನು.

೮೩. ಬ್ರಹ್ಮ:—ಎಲೈ ಪರಶುರಾಮನೇ. ಕಾಣ್ವಶಾಖೋಕ್ತವೂ, ಸಕಲ ಸಂಪತ್ಕರವೂ, ಸರ್ವಸಮ್ಮತವೂ ಆದ ಸತ್ಯವಚನವನ್ನಾಡುವೆನು ಕೇಳು.

ಪೂಜ್ಯಾನಾಮೇವ ಸರ್ವೇಷಾಮಿಷ್ಟಃ ಪೂಜ್ಯತಮಃ ಪರಃ ।
ಜನಕೋ ಜನ್ಮದಾನಾಚ್ಚ ಪಾಲನಾಚ್ಚ ಪಿತಾ ಸ್ಮೃತಃ ॥ ೮೪ ॥

ಗರೀಯಾಂಜನ್ಮದಾತುಶ್ಚ ಸೋಽನ್ನದಾತಾ ಪಿತಾ ಮುನೇ ।
ವಿನಾನ್ನಂ ನಶ್ವರೋ ದೇಹೋ ನಿತ್ಯಂ ಚ ಪಿತುರುದ್ಭವಃ ॥ ೮೫ ॥

ತಯೋಃ ಶತಗುಣಂ ಮಾತಾ ಪೂಜ್ಯಾ ಮಾನ್ಯಾ ಚ ವಂದಿತಾ ।
ಗರ್ಭಧಾರಣಪೋಷಾಭ್ಯಾಂ ಸೈವ ಪ್ರೋಕ್ತಾ ಗರೀಯಸೀ ॥ ೮೬ ॥

ತೇಭ್ಯಃ ಶತಗುಣಂ ಪೂಜ್ಯೋಽಭೀಷ್ಟದೇವಃ ಶ್ರುತೌ ಶ್ರುತಃ ।
ಜ್ಞಾನವಿದ್ಯಾಮಂತ್ರದಾತಾಽಭೀಷ್ಟದೇವಾತ್ಪರೋ ಗುರುಃ ॥ ೮೭ ॥

---

೮೪. ಪೂಜ್ಯರಲ್ಲೆಲ್ಲ ನಮಗೆ ಆಪ್ತನಾದವನೇ ಅತ್ಯಂತ ಪೂಜ್ಯನೆನಿಸುವನು. ಜನ್ಮಕೊಡುವುದರಿಂದ ಜನಕನೂ, ಪಾಲನೆಮಾಡುವುದರಿಂದ ಪಿತನೂ ಎನಿಸುವವನೇ ಸರ್ವಪೂಜ್ಯನು.

೮೫. ಕೇವಲ ಜನ್ಮವನ್ನು ಕೊಡುವವನಿಗಿಂತ ಅನ್ನದಾತೃವಾದ ತಂದೆಯು ಶ್ರೇಷ್ಠನೆನಿಸುವನು. ತಂದೆಯಿಂದ ಹುಟ್ಟಿಬಂದ ದೇಹವು ಅನ್ನವಿಲ್ಲದಿದ್ದರೆ ಅನಿತ್ಯವೂ ನಶ್ವರವೂ ಆಗುವುದು.

೮೬. ಜನ್ಮದಾತೃ ಮತ್ತು ಅನ್ನದಾತೃಗಳಾದ ಪಿತೃಗಳಿಗಿಂತಲೂ, ತಾಯಿ ನೂರರಷ್ಟು ಪೂಜ್ಯಳೂ, ಮಾನ್ಯಳೂ, ವಂದ್ಯಳೂ ಆಗಿರುವಳು. ಗರ್ಭದಲ್ಲಿ ಧರಿಸಿ ಪೋಷಣೆಮಾಡುವುದರಿಂದ ತಾಯಿಯೇ ಶ್ರೇಷ್ಠಳೆನಿಸುವಳು.

೮೭. ತಂದೆತಾಯಿಯರಿಗಿಂತಲೂ, ಇಷ್ಟದೇವತೆಯು ನೂರರಷ್ಟು ಪೂಜ್ಯವಾದುದೆಂದು ವೇದೋಕ್ತವಾಗಿದೆ. ಆ ಇಷ್ಟದೇವತೆಗಿಂತಲೂ, ಜ್ಞಾನ, ವಿದ್ಯಾ ಮತ್ತು ಮಂತ್ರಗಳನ್ನು ಉಪದೇಶಿಸುವ ಗುರುವೇ ಸರ್ವೋತ್ತಮನೆನಿಸುವನು,

ಗುರುವದ್ಗುರುಪುತ್ರಶ್ಚ ಗುರುಪತ್ನೀ ತತೋಽಧಿಕಾ ।
ದೇವೇ ರುಷ್ಟೇ ಗುರೂ ರಕ್ಷೇದ್ಗುರೌ ರುಷ್ಟೇ ನ ಕಶ್ಚನ ॥ ೮೮ ॥

ಗುರುರ್ಬ್ರಹ್ಮಾ ಗುರುರ್ವಿಷ್ಣುರ್ಗುರುರ್ದೇವೋ ಮಹೇಶ್ವರಃ ।
ಗುರುರೇವ ಪರಂ ಬ್ರಹ್ಮಾ ಬ್ರಾಹ್ಮಣೇಭ್ಯಃ ಪ್ರಿಯಃ ಪರಃ ॥ ೮೯ ॥

ಗುರುರ್ಜ್ಞಾನಂ ದದಾತ್ಯೇವ ಜ್ಞಾನಂ ಚ ಹರಿಭಕ್ತಿದಂ ।
ಹರಿಭಕ್ತಿಪ್ರದಾತಾ ಯಃ ಸೈವ ವಂದ್ಯಸ್ತತೋಧಿಕಃ ॥ ೯೦ ॥

ಅಜ್ಞಾನತಿಮಿರಾಚ್ಛನ್ನೋ ಜ್ಞಾನದೀಪಂ ಯತೋ ಲಭೇತ್ ।
ಲಬ್ಧ್ವಾ ಚ ನಿರ್ಮಲಂ ಪಶ್ಯೇತ್ಕೋವಾ ಬಂಧುಸ್ತತಃ ಪರಃ ॥ ೯೧ ॥

ಗುರುದತ್ತಂ ಸುಮಂತ್ರಂ ಚ ಜಪ್ತ್ವಾ ಜ್ಞಾನಂ ತತೋ ಲಭೇತ್ ।
ಸರ್ವಜ್ಞತ್ವಾಚ್ಚ ಸಿದ್ಧಿಂ ಚ ಕೋ ವಾ ಬಂಧುಸ್ತತೋಽಧಿಕಃ ॥ ೯೨ ॥

---

೮೮. ಗುರುವಿನಂತೆ ಗುರು ಪುತ್ರನೂ, ಅದಕ್ಕಿಂತ ಹೆಚ್ಚಾಗಿ ಗುರುಪತ್ನಿಯೂ ಪೂಜ್ಯರೆನಿಸುವರು. ದೇವರು ಕೋಪಗೊಂಡರೆ ಗುರುವು ರಕ್ಷಿಸಬಲ್ಲನು. ಗುರುವು ಕುಪಿತನಾದರೆ ರಕ್ಷಿಸುವವರಾರನ್ನೂ ಕಾಣೆವು.

೮೯. ಗುರುವೇ ಬ್ರಹ್ಮನು, ಗುರುವೇ ವಿಷ್ಣುವು, ಗುರುವೇ ಮಹೇಶ್ವರನು, ಗುರುವೇ ಪರಬ್ರಹ್ಮನು. ಅದರಲ್ಲೂ ಬ್ರಾಹ್ಮಣರಿಗೆ ಗುರುವು ಪ್ರೀತ್ಯಾಸ್ಪದನು.

೯೦. ಗುರುವು ಜ್ಞಾನವನ್ನು ದಯಪಾಲಿಸುವನು, ಜ್ಞಾನದಿಂದಲೇ ಹರಿಭಕ್ತಿಯುಂಟಾಗುವುದು. ಹರಿಭಕ್ತಿಯನ್ನುಂಟುಮಾಡಿಕೊಡುವವನಿಗಿಂತಲೂ ಉತ್ತಮನಾದ ಬಂಧುವಾರು?

೯೧. ಅಜ್ಞಾನವೆಂಬ ಕತ್ತಲೆಯಿಂದ ಅಂಧನಾಗಿ, ಯಾರಿಂದ ಜ್ಞಾನದೀಪವನ್ನು ಹೊಂದುವನೋ ಮತ್ತು ಎಲ್ಲವನ್ನೂ ನಿರ್ಮಲವಾಗಿ ಕಾಣುವನೋ, ಅಂಥ ಗುರುವಿಗಿಂತಲೂ ಶ್ರೇಷ್ಠ ಬಂಧುವಾವನಿರುವನು?

೯೨. ಗುರುವು ಉಪದೇಶಿಸಿದ ದಿವ್ಯಮಂತ್ರವನ್ನು ಜಪಿಸಿಯೇ ದಿವ್ಯ ಜ್ಞಾನವನ್ನು ಪಡೆಯುವರು. ಅದರಿಂದಲೇ ಸರ್ವಜ್ಞತ್ವವೂ, ಇಷ್ಟಸಿದ್ಧಿಯೂ ಲಭಿಸುವುದು. ಆ ಗುರುವಿಗಿಂತ ಅಧಿಕನಾದ ಆಪ್ತನಾವನಿರುವನು?

ಸುಖಂ ಜಯತಿ ಸರ್ವತ್ರ ವಿದ್ಯಯಾ ಗುರುದತ್ತಯಾ ।
ಯಥಾ ಪೂಜ್ಯೋಽಪಿ ಜಗತಿ ಕೋ ವಾ ಬಂಧುಸ್ತತೋಽಧಿಕಃ ॥ ೯೩ ॥

ವಿದ್ಯಾಂಧೋ ವಾ ಧನಾಂಧೋ ವಾ ಯೋ ಮೂಢೋ ನ ಯಜೇದ್ಗುರುಂ ।
ಬ್ರಹ್ಮಹತ್ಯಾದಿಕಂ ಪಾಪಂ ಲಭತೇ ನಾತ್ರ ಸಂಶಯಃ ॥ ೯೪ ॥

ದರಿದ್ರಂ ಪತಿತಂ ಕ್ಷುದ್ರಂ ನರಂ ಬುದ್ಧ್ಯಾ ಭಜೇದ್ಗುರುಂ ।
ತೀರ್ಥಸ್ನಾತೋಽಪಿ ನ ಶುಚಿರ್ನಾಧಿಕಾರೀ ಚ ಕರ್ಮಸು ॥ ೯೫ ॥

ಅಭೀಷ್ಟದೇವಃ ಶ್ರೀಕೃಷ್ಣೋ ಗುರುಸ್ತೇ ಶಂಕರಃ ಸ್ವಯಂ ।
ಶರಣಂ ಗಚ್ಛ ಹೇ ಪುತ್ರ ದೇವ ಪೂಜ್ಯತಮಂ ಗುರುಂ ॥ ೯೬ ॥

---

೯೩. ಮನುಜನು ಗುರುವು ಉಪದೇಶಿಸಿದ ವಿದ್ಯೆಯಿಂದ ಎಲ್ಲೆಲ್ಲಿಯೂ ಜಯಶೀಲನಾಗಿ ಸುಖವಾಗಿರುವನು. ಆ ವಿದ್ಯೆಯಿಂದಲೇ ಜಗತ್ಪೂಜ್ಯನಾಗುವನು. ಹೀಗಿರುವಾಗ ಗುರುವಿಗಿಂತ ಅಧಿಕ ಪೂಜ್ಯನಾವನಿರುವನು ?

೯೪. ಯಾವನಾದರೂ ವಿದ್ಯಾಮದದಿಂದಾಗಲೀ, ಧನಮದದಿಂದಾಗಲೀ, ಗುರುವನ್ನು ಪೂಜಿಸುವುದಿಲ್ಲವೋ ಆ ಮೂರ್ಖನು ಬ್ರಹ್ಮಹತ್ಯಾದಿ ಮಹಾಪಾಪಕ್ಕೆ ಗುರಿಯಾಗುವುದರಲ್ಲಿ ಸಂಶಯವಿಲ್ಲ

೯೫. ಗುರುವಾದವನು ದರಿದ್ರನಾಗಲೀ, ಪತಿತನಾಗಲೀ, ನೀಚನಾಗಲೀ, ಗುರುಬುದ್ಧಿಯಿಂದ ಅವನನ್ನು ಭಜಿಸಬೇಕು. ಗುರುವನ್ನು ಭಜಿಸದಿರುವವನು ಪುಣ್ಯತೀರ್ಥಗಳಲ್ಲಿ ಸ್ನಾನಮಾಡಿದರೂ ಶುದ್ಧನಾಗುವುದಿಲ್ಲ. ಅಲ್ಲದೆ ಯಾವ ಸತ್ಕರ್ಮಗಳಿಗೂ ಅಧಿಕಾರಿಯೆನಿಸುವುದಿಲ್ಲ.

೯೬. ಆದುದರಿಂದ ಎಲೈ ಭಾರ್ಗವನೇ ನಿನ್ನ ಇಷ್ಟದೇವತೆಯು ಶ್ರೀಕೃಷ್ಣನು. ಸ್ವಯಂ ಶಂಕರನೇ ನಿನಗೆ ಗುರುವು. ಎಲೈ ಪುತ್ರನೇ ಪೂಜ್ಯತಮನಾದ ಆ ಗುರುವನ್ನು ಶರಣುಹೊಂದು.

ತ್ರಿಸ್ಸಪ್ತಕೃತ್ವೋ ನಿರ್ಭೂಪಾ ತ್ವಯಾ ಪೃಥ್ವೀ ಕೃತಾ ಯತಃ ।
ಪ್ರಾಪ್ತಾಚಲಾ ಹರೇರ್ಭಕ್ತಿಸ್ತಂ ಶಿವಂ ಶರಣಂ ವ್ರಜ ॥ ೯೭ ॥

ಶಿವಾಂ ಚ ಶಿವರೂಪಂ ಚ ಶಿವದಂ ಶಿವಕಾರಣಂ ।
ಶಿವಾರಾಧ್ಯಂ ಶಿವಂ ಶಾಂತಂ ಗುರುಂ ತ್ವಂ ಶರಣಂ ವ್ರಜ ॥ ೯೮ ॥

ಗೋಲೋಕನಾಥೋ ಭಗವಾನಂಶೇನ ಶಿವರೂಪಧೃಕ್ ।
ಯ ಇಷ್ಟದೇವಃ ಸ ಗುರುಸ್ತಮೇವ ಶರಣಂ ವ್ರಜ ॥ ೯೯ ॥

ಆತ್ಮಾ ಕೃಷ್ಣಃ ಶಿವೋ ಜ್ಞಾನಂ ಮನೋಽಹಂ ಸರ್ವಜೀವಿಷು ।
ಪ್ರಾಣಾ ವಿಷ್ಣೋಸ್ತ್ವಪ್ರಕೃತಿಸ್ಸರ್ವಶಕ್ತಿಯುತಾ ಸುತೆ ॥ ೧೦೦ ॥

ಜ್ಞಾನದಂ ಜ್ಞಾನರೂಪಂ ಚ ಜ್ಞಾನಬೀಜಂ ಸನಾತನಂ ।
ಮೃತ್ಯುಂಜಯಂ ಕಾಲಕಾಲಂ ತಂ ಗುರುಂ ಶರಣಂ ವ್ರಜ ॥ ೧೦೧ ॥

---

೯೭. ಯಾರ ಅನುಗ್ರಹದಿಂದ ನೀನು ಇಪ್ಪತ್ತೊಂದುಸಾರಿ ಭೂಪ್ರದಕ್ಷಿಣೆ ಮಾಡಿ ಕ್ಷತ್ರಿಯರನ್ನು ನಿರ್ಮೂಲಗೊಳಿಸಿದೆಯೋ, ಯಾರಿಂದ ನೀನು ಶ್ರೀಹರಿಯಲ್ಲಿ ಭಕ್ತಿಹೊಂದಿದೆಯೋ ಆ ಶಿವನಿಗೆ ಶರಣಾಗತನಾಗು.

೯೮. ಜಗತ್ತಿನ ಮಾತಾಪಿತೃಸ್ವರೂಪನೂ, ಮಂಗಳದಾಯಕನೂ, ಪಾರ್ವತಿಗೆ ಪೂಜ್ಯನೂ, ಶಾಂತನೂ, ನಿನ್ನ ಗುರುವೂ ಆದ ಶಂಕರನಿಗೆ ಶರಣಾಗತನಾಗು.

೯೯. ಗೋಲೋಕಾಧಿಪತಿಯಾದ ಪರಮಾತ್ಮನೇ ತನ್ನದೊಂದಂಶದಿಂದ ಶಿವನ ರೂಪವನ್ನು ಧರಿಸಿರುವನು ಯಾರು ಇಷ್ಟದೇವತೆಯೋ ಅವನೇ ಗುರುವಾದುದರಿಂದ ಆ ಗುರುವನ್ನು ಶರಣುಹೊಂದು.

೧೦೦. ಸಕಲ ಜೀವಿಗಳಲ್ಲೂ ಶ್ರೀಕೃಷ್ಣನು ಆತ್ಮರೂಪದಿಂದಲೂ, ಶಿವನು ಜ್ಞಾನರೂಪದಿಂದಲೂ ನಾನು (ಬ್ರಹ್ಮ) ಮನೋರೂಪದಿಂದಲೂ ಇರುವೆವು. ಎಲೈ ಪುತ್ರನೇ, ವಿಷ್ಣುವು ಪ್ರಾಣರೂಪದಿಂದಲೂ, ಪ್ರಕೃತಿಯು ಸರ್ವಶಕ್ತಿರೂಪದಿಂದಲೂ ಜೀವಿಗಳಲ್ಲಿರುವರು.

೧೦೧. ಆದುದರಿಂದ ಜ್ಞಾನಸ್ವರೂಪನೂ, ಜ್ಞಾನದಾತೃವೂ, ಜ್ಞಾನಕ್ಕೆ ಕಾರಣನೂ, ಅನಾದಿಯೂ, ಮೃತ್ಯುಂಜಯನೂ, ಕಾಲಕಾಲನೂ ಆದ ಆ ಗುರುವಿಗೆ ಶರಣಾಗತನಾಗು

ಬ್ರಹ್ಮಜ್ಯೋತಿಸ್ವರೂಪಂ ತಂ ಭಕ್ತಾನುಗ್ರಹವಿಗ್ರಹಂ ।
ಶರಣಂ ವ್ರಜ ಸರ್ವಜ್ಞಂ ಭಗವಂತಂ ಸನಾತನಂ ॥ ೧೦೨ ॥

ಪ್ರಕೃತಿರ್ಲಕ್ಷವರ್ಷಂ ಚ ತಪಸ್ತಪ್ತ್ವಾ ಯಮೀಶ್ವರಂ ।
ಕಾಂತಂ ಪ್ರಿಯಪತಿಂ ಲೇಭೇ ತಂ ಗುರುಂ ಶರಣಂ ವ್ರಜ ॥ ೧೦೩ ॥

ಇತ್ಯುಕ್ತ್ವಾ ಮುನಿಭಿಃ ಸಾರ್ಧಂ ಜಗಾಮ ಕಮಲೋದ್ಭವಃ ।
ರಾಮಶ್ಚ ಗಂತುಂ ಕೈಲಾಸಂ ಮನಶ್ಚಕ್ರೇ ಚ ನಾರದ ॥ ೧೦೪ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ತೃತೀಯೇ ಗಣಪತಿಖಂಡೇ ನಾರಾಯಣ ನಾರದಸಂವಾದೇ ಭೃಗೋಃ ಕೈಲಾಸಗಮನೋಪದೇಶೋ ನಾಮ ಚತ್ವಾರಿಂಶತ್ತಮೋಽಧ್ಯಾಯಃ

---

೧೦೨. ಬ್ರಹ್ಮಜ್ಯೋತಿಸ್ವರೂಪನೂ, ಭಕ್ತಾನುಗ್ರಹಕ್ಕಾಗಿ ವಿಗ್ರಹಧಾರಿಯೂ, ಸರ್ವಜ್ಞನೂ, ಸನಾತನನೂ ಆದ ಆ ಶಂಕರನಿಗೆ ಶರಣಾಗತನಾಗು.

೧೦೩. ಪ್ರಕೃತಿಯು ಲಕ್ಷವರ್ಷಗಳಕಾಲ ತಪಸ್ಸುಮಾಡಿ ಯಾವ ಈಶ್ವರನನ್ನು ಪತಿಯಾಗಿ ಪಡೆದಳೋ ಅಂಥ ಗುರುವಿಗೆ ನೀನು ಶರಣುಹೋಗು.

೧೦೪. ಹೀಗೆಂದು ಹೇಳಿ ಬ್ರಹ್ಮನು ಸಕಲ ಮುನಿಗಳೊಡನೆ ಹೊರಟು ಹೋದನು. ಎಲೈ ನಾರದನೆ ಆಗ ಪರಶುರಾಮನೂ ಕೂಡ ಕೈಲಾಸಕ್ಕೆ ಹೋಗಬೇಕೆಂದು ಮನಸ್ಸುಮಾಡಿದನು.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಗಣಪತಿಖಂಡದಲ್ಲಿ ಪರಶುರಾಮನನ್ನು ಕುರಿತು ಕೈಲಾಸಕ್ಕೆ ಹೋಗೆಂದು ಬ್ರಹ್ಮನು ಉಪದೇಶಿಸಿದುದನ್ನು ತಿಳಿಸುವ ನಲವತ್ತನೆಯ ಅಧ್ಯಾಯವು ಮುಗಿದುದು.

ನಲವತ್ತನೆಯ ಅಧ್ಯಾಯದ ಸಾರಾಂಶ

ವಿಷ್ಣುವು ಬ್ರಾಹ್ಮಣರೂಪವನ್ನು ಧರಿಸಿ, ಪುಷ್ಕರಾಕ್ಷ ಮತ್ತು ಪದ್ಮಾಕ್ಷರ ಕವಚವನ್ನು ದಾನ ತೆಗೆದುಕೊಂಡ ಮೇಲೆ ಪರಶುರಾಮನು ಅವರಿಬ್ಬರನ್ನೂ ಲೀಲಾಜಾಲವಾಗಿ ಸಂಹರಿಸಿದನು. ಅನಂತರ ಕಾರ್ತವೀರ್ಯನು ಎರಡುಲಕ್ಷ ಅಕ್ಷೌಹಿಣೀ ಸೇನೆಯೊಡನೆ ತಾನೇ ಯುದ್ಧರಂಗಕ್ಕೆ ಬಂದನು. ಇಬ್ಬರಿಗೂ ಬಹಳ ಹೊತ್ತು ಘನಘೋರಯುದ್ಧವಾಯಿತು. ಪರಶುರಾಮನು ಬಿಟ್ಟ ಮಂತ್ರಾಸ್ತ್ರಗಳನ್ನೆಲ್ಲ ಕಾರ್ತವೀರ್ಯನು ಪ್ರತ್ಯಸ್ತ್ರಗಳಿಂದ ಕತ್ತರಿಸಿ, ಕೊನೆಗೆ ದತ್ತಾತ್ರೇಯನು ಕೊಟ್ಟಿದ್ದ ಶೂಲಾಯುಧವನ್ನು ಪ್ರಯೋಗಿಸಿ ಪರಶುರಾಮನನ್ನು ಮೂರ್ಛೆಗೊಳಿಸಿದನು. ಆಗ ಬ್ರಹ್ಮಾದಿ ದೇವತೆಗಳೆಲ್ಲರೂ ಅಲ್ಲಿಗೆ ಬಂದರು. ಶಂಕರನ ಅನುಗ್ರಹದಿಂದ ಚೇತನಗೊಂಡು ಭಾರ್ಗವನು ಅಪಮಾನಿತನಾಗಿ ಕಾರ್ತವೀರ್ಯನ ಮೇಲೆ ಪಾಶುಪತಾಸ್ತ್ರವನ್ನು ಪ್ರಯೋಗಿಸಬೇಕೆಂದು ನೋಡಿದಾಗ ಕಾರ್ತವೀರ್ಯನ ಪಕ್ಕದಲ್ಲಿ ಶ್ರೀಕೃಷ್ಣಪರಮಾತ್ಮನು ಪಾರ್ಷದರೊಡನೆ ನಿಂತಿರುವುದನ್ನು ಕಂಡನು. ಆ ಸಮಯಕ್ಕೆ ಸರಿಯಾಗಿ "ಕಾರ್ತವೀರ್ಯನಿಗೆ ದತ್ತಾತ್ರೇಯನು ಶ್ರೀಕೃಷ್ಣನ ಕವಚವನ್ನು ಅನುಗ್ರಹಿಸಿರುವುದಾಗಿಯೂ, ಅವನ ಬಲಭುಜದಲ್ಲಿರುವ ಆ ಕವಚವನ್ನು ಶಿವನು ಬೇಡಿ ತೆಗೆದುಕೊಳ್ಳುವವರೆಗೆ ಅವನನ್ನು ಕೊಲ್ಲಲಸಾಧ್ಯವೆಂದೂ" ಅಶರೀರವಾಣಿಯಾಯಿತು. ಅದರಂತೆ ಶಿವನು ಬ್ರಾಹ್ಮಣರೂಪದಿಂದ ಕಾರ್ತವೀರ್ಯನ ಬಳಿಗೆ ಹೋಗಿ ಕವಚವನ್ನು ಬೇಡಿ ತಂದು ಪರಶುರಾಮನಿಗೆ ಕೊಟ್ಟು ಅಂತರ್ಧಾನನಾಗಲು, ಭಾರ್ಗವನು ಕಾರ್ತವೀರ್ಯನನ್ನು ಪುನಃ ಯುದ್ಧಕ್ಕೆ ಕರೆದು ಮುಖಸ್ತುತಿ ಮಾಡಿದನು. ಕಾರ್ತವೀರ್ಯನೂ ಕೂಡ ದತ್ತಾತ್ರೇಯನ ಅನುಗ್ರಹದಿಂದ ತಾನು ಪಡೆದ ದಿವ್ಯಜ್ಞಾನವನ್ನು ಪರಶುರಾಮನ ಮುಂದೆ ವ್ಯಕ್ತಪಡಿಸಿ ಯುದ್ಧಕ್ಕೆ ಸಿದ್ಧನಾಗಲು ಪರಶುರಾಮನು ಅವನನ್ನು ಲೀಲಾಮಾತ್ರದಿಂದ ಸಂಹರಿಸಿದನು. ಅನಂತರ ಭಾರ್ಗವನು ತನ್ನ ಪ್ರತಿಜ್ಞೆಯಂತೆ ಭೂಲೋಕವನ್ನು ಇಪ್ಪತ್ತೊಂದುಸಾರಿ ಸುತ್ತಿ ಕ್ಷತ್ರಿಯರನ್ನೆಲ್ಲ ನಿರ್ಮೂಲಗೊಳಿಸಿದನು. ಆಗ ದೇವತೆಗಳೆಲ್ಲ ಭಾರ್ಗವನ ಮೇಲೆ ಹೂಮಳೆಗರೆದರು. ಅನಂತರ ಬ್ರಹ್ಮನು ಬಂದು ಜ್ಞಾನಿಯೂ ಪರಮಗುರುವೂ ಆದ ಶಿವನಿಗೆ ಶರಣಾಗತನಾಗೆಂದು ಪರಶುರಾಮನಿಗೆ ಬೋಧಿಸಿ ಅಂತರ್ಧಾನನಾದನು.

॥ ಓಂ ॥

॥ ಶ್ರೀ ಗಣೇಶಾಯ ನಮಃ ॥—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಗಣಪತಿಖಂಡೇ

ಏಕಚತ್ವಾರಿಂಶತ್ತಮೋಽಧ್ಯಾಯಃ

॥ ನಾರಾಯಣ ಉವಾಚ ॥

ಹರೇಶ್ಚ ಕವಚಂ ಧೃತ್ವಾ ಕೃತ್ವಾ ನಿಃಕ್ಷತ್ರಿಯಾಂ ಮಹೀಂ ।
ರಾಮೋ ಜಗಾಮ ಕೈಲಾಸಂ ನಮಸ್ಕರ್ತುಂ ಶಿವಂ ಗುರುಂ ॥ ೧ ॥

ಗುರುಪತ್ನೀಂ ಶಿವಾಮಂಬಾಂ ದ್ರಷ್ಟುಂ ಗುರುಸುತೌ ಚ ತೌ ।
ಗುಣೈರ್ನಾರಾಯಣಸಮೌ ಕಾರ್ತಿಕೇಯಗಣೇಶ್ವರೌ ॥ ೨ ॥

ಮನೋಯಾಯೀ ಮಹಾತ್ಮಾ ಸ ಭೃಗುಃ ಸಂಪ್ರಾಪ್ಯ ತತ್ಕ್ಷಣಂ ।
ದದರ್ಶ ಪರ್ವತಂ ರಮ್ಯಮತೀವ ಸುಮನೋಹರಂ ॥ ೩ ॥

ನಲವತ್ತೊಂದನೆಯ ಅಧ್ಯಾಯವು

೧. ನಾರಾಯಣಮಹರ್ಷಿ :—ಪರಶುರಾಮನು ಶ್ರೀಹರಿಯ ಕವಚವನ್ನು ಧರಿಸಿ, ಭೂಮಿಯಲ್ಲಿ ಕ್ಷತ್ರಿಯ-ರನ್ನು ನಿರ್ಮೂಲಗೊಳಿಸಿ, ಪರಮಗುರುವಾದ ಶಿವನಿಗೆ ವಂದಿಸಲು ಕೈಲಾಸಕ್ಕೆ ತೆರಳಿದನು.

೨. ಅಲ್ಲದೆ ಗುರುಪತ್ನಿಯೂ, ಮಂಗಳಕರಳೂ ಆದ ಪಾರ್ವತಿಯನ್ನೂ, ನಾರಾಯಣನಿಗೆ ಸಮಾನಗುಣರೂ ಗುರುಪುತ್ರರೂ ಆದ ಷಣ್ಮುಖ ಮತ್ತು ಗಣಪತಿಯನ್ನೂ ನೋಡಿ ಆನಂದಿಸಲು ಹೋದನು.

೩. ಮನೋವೇಗದಲ್ಲಿ ಹೋಗಬಲ್ಲ ಮಹಾತ್ಮನಾದ ಆ ಭಾರ್ಗವನು ಕೂಡಲೆ ಹೊರಟು ಅತ್ಯಂತ ಮನೋಹರವಾದ ಕೈಲಾಸಪರ್ವತವನ್ನು ಮುಂದೆ ನೋಡಿದನು.

ಶುದ್ಧಸ್ಫಟಿಕಸಂಕಾಶೈರ್ಮಣಿಭಿಃ ಸುಮನೋಹರೈಃ ।
ಸುವರ್ಣಭೂಮಿಸದೃಶೈ ರಾಜಮಾರ್ಗೈರ್ವಿರಾಜಿತಂ ॥ ೪ ॥

ಸಿಂದೂರಾರುಣವರ್ಣೈಶ್ಚ ವೇಷ್ಟಿತಂ ಮಣಿವೇದಿಭಿಃ ।
ಸಂಯುಕ್ತಮುಕ್ತಾನಿಕರೈಃ ಪೂರಿತಂ ಮಣಿಮಂಡಪೈಃ ॥ ೫ ॥

ಯಕ್ಷಾಣಾಮಾಲಯೈರ್ದಿವ್ಯೈಃ ಸಂಯುಕ್ತಂ ಶತಕೋಟಿಭಿಃ ।
ಕಪಾಟಸ್ತಂಭಸೋಪಾನೈಃ ಶೋಭಿತೈರ್ಮಣಿನಿರ್ಮಿತೈಃ ॥ ೬ ॥

ಸುವರ್ಣಕಲಶೈರ್ದಿವ್ಯೈ ರಾಜತೈಃ ಶ್ವೇತಚಾಮರೈಃ ।
ರತ್ನಕಾಂಚನಪೂರ್ಣೈಶ್ಚ ಯಕ್ಷೇಂದ್ರಗಣವೇಷ್ಟಿತೈಃ ॥ ೭ ॥

ರತ್ನಭೂಷಣಭೂಷಾಢ್ಯೈರ್ದೀಪಿತೈಃ ಸುಂದರೀಗಣೈಃ ।
ಬಾಲಿಕಾಭಿರ್ಬಾಲಕೈಶ್ಚ ಚಿತ್ರಪುತ್ತಲಿಕಾಕರೈಃ ॥ ೮ ॥

---

೪. ಶುದ್ಧಸ್ಫಟಿಕದಂತೆ ಶುಭ್ರವೂ, ಮನೋಹರವೂ ಆದ ಮಣಿಗಳಿಂದ ಲಂಕೃತವಾದ -ರಾಜಮಾರ್ಗವು ಆ ಪರ್ವತದಲ್ಲಿ ಸುವರ್ಣದಂತಿರುವ ನೆಲದಿಂದ ಶೋಭಿಸುತ್ತಿತ್ತು.

೫. ಸಿಂದೂರದಂತೆ ಅರುಣವರ್ಣವಾದ ಮಣಿವೇದಿಕೆ (ಜಗಲಿ) ಗಳಿಂದಲೂ, ಮುತ್ತಿನಹಾರಗಳಿಂದಲಂಕೃತವಾದ ಮಣಿಮಂಡಪಗಳಿಂದಲೂ, ಮನೋಹರವಾಗಿದ್ದಿತು.

೬. ರತ್ನನಿರ್ಮಿತವಾದ ಬಾಗಿಲು, ಕಂಬ, ಸೋಪಾನ ಮುಂತಾದವುಗಳಿಂದ ಶೋಭಿತವಾದ ಯಕ್ಷರ ನೂರುಕೋಟಿ ಮನೆಗಳು ಆ ಪರ್ವತದಲ್ಲಿದ್ದವು.

೭. ಚಿನ್ನ ಮತ್ತು ಬೆಳ್ಳಿಯ ಕಲಶಗಳಿಂದಲೂ, ಶ್ವೇತಚಾಮರಗಳಿಂದಲೂ ಶೋಭಿತವಾದ ಆ ಮಂದಿರಗಳಲ್ಲಿ ರತ್ನ, ಮುತ್ತು ಮಾಣಿಕ್ಯಗಳನ್ನು ತುಂಬಿಕೊಂಡು ಯಕ್ಷರು ನೆಲೆಸಿದ್ದರು.

೮. ರತ್ನಭೂಷಣಭೂಷಿತರಾದ ಸುಂದರಿಯರೂ, ವಿಚಿತ್ರವಾದ ಬೊಂಬೆಗಳನ್ನು ಹಿಡಿದಿರುವ ಬಾಲಕಬಾಲಕಿಯರೂ ಅಲ್ಲಿದ್ದರು.

ಕ್ರೀಡದ್ಭಿಃ ಸಸ್ಮಿತೈಃ ಶಶ್ವತ್ಸ್ವಚ್ಛಂದಂ ಚ ವಿರಾಜಿತೈಃ ।
ಪಾರಿಜಾತದ್ರುಮಗಣೈಃ ಸ್ವರ್ಣದೀತೀರನೀರಜೈಃ ॥ ೯ ॥

ಆಕೀರ್ಣಂ ಪುಷ್ಪಜಾಲೈಶ್ಚ ಪುಷ್ಪಿತೈಶ್ಚ ಸುಗಂಧಿಭಿಃ ।
ಕಲ್ಪವೃಕ್ಷಾಶ್ರಿತೈಃ ಸಿದ್ಧೈಃ ಕಾಮಧೇನುಪುರಸ್ಕೃತೈಃ ॥ ೧೦ ॥

ಸಿದ್ಧವಿದ್ಯಾಸು ನಿಪುಣೈಃ ಪುಣ್ಯವದ್ಭಿರ್ನಿಷೇವಿತಂ ।
ತ್ರಿಲಕ್ಷಯೋಜನೋಚ್ಛ್ರಾಯೈರ್ವಟವೃಕ್ಷೈರಥಾಕ್ಷಯೈಃ ॥ ೧೧ ॥

ಶತಯೋಜನವಿಸ್ತೀರ್ಣೈಃ ಶತಸ್ಕಂಧಸಮನ್ವಿತೈಃ ।
ಅಸಂಖ್ಯಶಾಖಾನಿಕರೈರಸಂಖ್ಯಫಲಸಂಯುತೈಃ ॥ ೧೨ ॥

ನಾನಾಪಕ್ಷಿಗಣಾಕೀರ್ಣೈಃ ಸುಮನೋಹರಶಬ್ದಿತೈಃ ।
ಕಂಪಿತೈಃ ಶೀತವಾತೇನ ಮಂಡಿತಂ ಚ ಸುಗಂಧಿನಾ ॥ ೧೩ ॥

---

೯. ಅವರೆಲ್ಲರೂ ಸ್ವರ್ಗಂಗಾನದಿಯ ತೀರದಲ್ಲಿರುವ ಪಾರಿಜಾತವನದಲ್ಲಿ ತಾವರೆ ಮುಂತಾದ ಪುಷ್ಪಗಳಿಂದ ಸ್ವಚ್ಛಂದವಾಗಿ ಕ್ರೀಡಿಸುತ್ತ ಮಂದಸ್ಮಿತವದನರಾಗಿದ್ದರು.

೧೦. ಕಲ್ಪವೃಕ್ಷದ ಸುಗಂಧಪುಷ್ಪಗಳಿಂದಲೂ, ಬೇಡಿದ ಇಷ್ಟಾರ್ಥವನ್ನು ಪೂರ್ಣಗೊಳಿಸುವ ಕಾಮಧೇನುಗಳಿಂದಲೂ ಆ ಪ್ರದೇಶವು ವ್ಯಾಪ್ತವಾಗಿದ್ದಿತು.

೧೧. ಸಿದ್ಧವಿದ್ಯೆಯಲ್ಲಿ ನಿಪುಣರಾದ ಪುಣ್ಯಾತ್ಮರು, ಮೂರುಲಕ್ಷಯೋಜನ ಉನ್ನತವಾದ ಅಕ್ಷಯ ವಟವೃಕ್ಷದ ಕೆಳಗೆ ನೆಲೆಸಿದ್ದರು.

೧೨. ನೂರುಯೋಜನ ವಿಸ್ತೀರ್ಣವಾದ ಆ ವಟವೃಕ್ಷವು ನೂರಾರು ದಪ್ಪ ಕೊಂಬೆಗಳಿಂದಲೂ, ಅಸಂಖ್ಯ ಶಾಖೆಗಳಿಂದಲೂ, ಕೂಡಿ ಫಲಪರಿಪೂರ್ಣವಾಗಿದ್ದಿತು.

೧೩. ಆ ಮರಗಳಲ್ಲಿ ವಿಧ ವಿಧ ಪಕ್ಷಿಗಳು ನೆಲಸಿ ಮನೋಹರವಾಗಿ ಧ್ವನಿಗೈಯ್ಯುತ್ತಿದ್ದವು. ಶೀತವಾದ ಮಂದಮಾರುತದಿಂದ ಅಲ್ಲಾಡುತ್ತಿದ್ದ ಆ ಪುಷ್ಪಿತ ವೃಕ್ಷಗಳ ಸುವಾಸನೆಯು ಎಲ್ಲೆಡೆಯಲ್ಲೂ ವ್ಯಾಪಿಸುತ್ತಿತ್ತು.

ಪುಷ್ಪೋದ್ಯಾನಸಹಸ್ರೇಣ ಸರಸಾಂ ಚ ಶತೇನ ಚ ।
ಸಿದ್ಧೇಂದ್ರಾಲಯಲಕ್ಷೈಶ್ಚ ಮಣಿರತ್ನವಿಕಾರಜೈಃ ॥ ೧೪ ॥

ರಾಮಶ್ಚ ದೃಷ್ಟ್ವಾ ನಗರಮತಿಸಂಹೃಷ್ಟಮಾನಸಃ ।
ದದರ್ಶ ಪುರತೋ ರಮ್ಯಂ ಶ್ರೀಯುಕ್ತಂ ಶಂಕರಾಲಯಂ ॥ ೧೫ ॥

ಸುವರ್ಣಮೂಲ್ಯಶತಕೈರ್ಮಣಿಭಿಃ ಸ್ವರ್ಣವರ್ಣಕೈಃ ।
ಖಚಿತಂ ರತ್ನಸಾರೈಶ್ಚ ರಚಿತಂ ವಿಶ್ವಕರ್ಮಣಾ ॥ ೧೬ ॥

ತ್ರಿಪಂಚಯೋಜನೋಚ್ಛ್ರಾಯಂ ಚತುರ್ಯೋಜನವಿಸ್ತೃತಂ ।
ಚತುರಸ್ರಂ ಚತುಷ್ಕೋಣಂ ಪ್ರಾಕಾರಂ ಸುಮನೋಹರಂ ॥ ೧೭ ॥

ದ್ವಾರಂ ರತ್ನಕಪಾಟೇನ ನಾನಾಚಿತ್ರಾನ್ವಿತೇನ ಚ ।
ಮಣೀಂದ್ರವೇದಿಭಿರ್ಯುಕ್ತಂ ಮಣಿಸ್ತಂಭವಿರಾಜಿತೈಃ ॥ ೧೮ ॥

---

೧೪. ಸಾವಿರಾರು ಹೂದೋಟಗಳಿಂದಲೂ, ನೂರಾರು ಕೊಳಗಳಿಂದಲೂ, ಸಿದ್ಧಪುರುಷರ ಲಕ್ಷಾಂತರ ಮಣಿಮಂದಿರಗಳಿಂದಲೂ ಆ ಪರ್ವತವು ಶೋಭಿಸುತ್ತಿದ್ದಿತು.

೧೫. ಪರಶುರಾಮನು ಆ ಕೈಲಾಸಪುರಿಯನ್ನು ನೋಡಿ ಸಂತುಷ್ಟಮನಸ್ಕನಾಗಿ, ಮುಂದೆ ಸುಂದರವಾದ ಶಂಕರನ ಮಂದಿರವನ್ನು ಕಂಡನು.

೧೬. ವಿಶ್ವಕರ್ಮನಿಂದ ರಚಿತವಾದ ಆ ಮಂದಿರವು ನೂರಾರು ಸುವರ್ಣನಾಣ್ಯಗಳ ಬೆಲೆ ಬಾಳುವ ಸ್ವರ್ಣಮಣಿಗಳಿಂದಲೂ, ಶ್ರೇಷ್ಠರತ್ನಗಳಿಂದಲೂ ಖಚಿತವಾಗಿದ್ದಿತು.

೧೭. ಎಂಟುಯೋಜನ ಉನ್ನತವಾಗಿಯೂ, ನಾಲ್ಕುಯೋಜನ ವಿಸ್ತೀರ್ಣವಾಗಿಯೂ, ನಾಲ್ಕು ಮೂಲೆಗಳಿಂದ ಚಚ್ಚೌಕವಾಗಿಯೂ ಇದ್ದ ಪ್ರಾಕಾರದಿಂದ ಆ ಮಂದಿರವು ಪರಿವೃತವಾಗಿದ್ದಿತು.

೧೮. ಆ ಮಂದಿರದ ದ್ವಾರದಲ್ಲಿ ಚಿತ್ರವಿಚಿತ್ರವಾದ ರತ್ನದ ಬಾಗಿಲೂ, ಉಭಯಪಾರ್ಶ್ವದಲ್ಲಿ ರತ್ನಸ್ತಂಭಗಳೂ, ರತ್ನದ ಜಗುಲಿಗಳೂ ಮನೋಹರವಾಗಿದ್ದುವು.

ತದ್ದಕ್ಷಿಣೇ ವೃಷೇಂದ್ರಂ ಚ ವಾಮೇ ಸಿಂಹಂ ಚ ನಾರದ ।
ನಂದೀಶ್ವರಂ ಮಹಾಕಾಲಂ ಪಿಂಗಲಾಕ್ಷಂ ಭಯಂಕರಂ ॥ ೧೯ ॥

ವಿಶಾಲಾಕ್ಷಂ ಚ ಬಾಣಂ ಚ ವಿರೂಪಾಕ್ಷಂ ಮಹಾಬಲಂ ।
ವಿಕಟಾಕ್ಷಂ ಭಾಸ್ಕರಾಕ್ಷಂ ರಕ್ತಾಕ್ಷಂ ವಿಕಟೋದರಂ ॥ ೨೦ ॥

ಸಂಹಾರಭೈರವಂ ಕಾಲಭೈರವಂ ಚ ಭಯಂಕರಂ ।
ರುರುಭೈರವಮೀಶಾನಂ ಮಹಾಭೈರವಮೇವ ಚ ॥ ೨೧ ॥

ಕೃಷ್ಣಾಂಗಭೈರವಂ ಚೈವ ಕ್ರೋಧಭೈರವಮುಲ್ಬಣಂ ।
ಕಪಾಲಭೈರವಂ ಚೈವ ರುದ್ರಭೈರವಮೇವ ಚ ॥ ೨೨ ॥

ಸಿದ್ಧೇಂದ್ರಾದೀನ್ರುದ್ರಗಣಾನ್ವಿದ್ಯಾಧರಸುಗುಹ್ಯಕಾನ್ ।
ಭೂತಾನ್ಪ್ರೇತಾನ್ಪಿಶಾಚಾಂಶ್ಚ ಕೂಷ್ಮಾಂಡಾನ್ಬ್ರಹ್ಮರಾಕ್ಷಸಾನ್ ॥ ೨೩ ॥

---

೧೯. ಪರಶುರಾಮನು ಅಲ್ಲಿಗೆ ಹೋಗಿ ಈಶ್ವರನ ಬಲಭಾಗದಲ್ಲಿ ವೃಷಭ ರಾಜನನ್ನೂ, ಎಡಭಾಗದಲ್ಲಿ ಸಿಂಹವನ್ನೂ, ಮುಂಭಾಗದಲ್ಲಿ ನಂದೀಶ್ವರ, ಮಹಾ ಕಾಲ, ಪಿಂಗಳಾಕ್ಷ ಮುಂತಾದವರನ್ನು ಕಂಡನು.

೨೦. ವಿಶಾಲಾಕ್ಷ, ಬಾಣಾಸುರ, ವಿರೂಪಾಕ್ಷ, ಮಹಾಬಲ, ವಿಕಟಾಕ್ಷ, ಭಾಸ್ಕರಾಕ್ಷ, ರಕ್ತಾಕ್ಷ, ವಿಕಟೋದರ ಮುಂತಾದವರೂ ಅಲ್ಲಿದ್ದರು

೨೧-೨೨. ಭಯಂಕರರಾದ ಸಂಹಾರಭೈರವ, ಕಾಲಭೈರವ, ರುರ ಭೈರವ, ಈಶಾನಭೈರವ ಮಹಾಭೈರವ, ಕೃಷ್ಣಾಂಗಭೈರವ, ಕ್ರೋಧಭೈರವ, ಕಪಾಲ ಭೈರವ, ರುದ್ರಭೈರವ ಮುಂತಾದ ಭೈರವರೆಲ್ಲರೂ ಅಲ್ಲಿದ್ದರು.

೨೩. ಸಿದ್ಧಶ್ರೇಷ್ಠರೂ, ಏಕಾದಶರುದ್ರರೂ, ವಿದ್ಯಾಧರರೂ, ಗುಹ್ಯಕರೂ, ಭೂತಪ್ರೇತಪಿಶಾಚಿಗಳೂ, ಕೂಷ್ಮಾಂಡ ಬ್ರಹ್ಮರಾಕ್ಷಸರೂ ಶಿವನ ಮುಂದೆ ಇದ್ದರು.

ವೇತಾಲಾನ್ದಾನವಾಂಶ್ಚೈವ ಯೋಗೀಂದ್ರಾಂಶ್ಚ ಜಟಾಧರಾನ್ ।
ಯಕ್ಷಾನ್ಕಿಂಪುರುಷಾಂಶ್ಚೈವ ಕಿನ್ನರಾಂಶ್ಚ ದದರ್ಶ ಹ ॥ ೨೪ ॥

ತಾನ್ದೃಷ್ಟ್ವಾ ನಂದಿಕೇಶಾಜ್ಞಾಂ ಗೃಹೀತ್ವಾ ಭೃಗುನಂದನಃ ।
ತಾನ್ಸಂಭಾಷ್ಯಾಭ್ಯಂತರಂ ಚ ಜಗಾಮಾನಂದಸಂಪ್ಲುತಃ ॥ ೨೫ ॥

ರತ್ನೇಂದ್ರಸಾರರಚಿತಂ ದದರ್ಶ ಶತಮಂದಿರಂ ।
ಅಮೂಲ್ಯರತ್ನಕಲಶೈರ್ಜ್ವಲದ್ಭಿಶ್ಚ ವಿರಾಜಿತಂ ॥ ೨೬ ॥

ಅಮೂಲ್ಯರತ್ನರಚಿತೈರ್ಮುಕ್ತಾನಿರ್ಮಲದರ್ಪಣೈಃ ।
ಹೀರಸಾರವಿಕಾರೈಶ್ಚ ಕಪಾಟೈಶ್ಚ ವಿರಾಜಿತಂ ॥ ೨೭ ॥

ಗೋರೋಚನಾಭಿರ್ಮಣಿಭಿರ್ಯುತಂ ಸ್ತಂಭಸಹಸ್ರಕೈಃ ।
ಮಣಿಸಾರವಿಕಾರೈಶ್ಚ ಸೋಪಾನೈಃ ಪರಿಶೋಭಿತಂ ॥ ೨೮ ॥

---

೨೪. ವೇತಾಲರೂ, ದಾನವರೂ, ಯೋಗೀಂದ್ರರೂ, ಜಟಾಧರರೂ, ಯಕ್ಷ ಕಿನ್ನರಕಿಂಪುರುಷಾದಿಗಳೂ ಅಲ್ಲಿದ್ದುದನ್ನು ಪರಶುರಾಮನು ಕಂಡನು.

೨೫. ಅವರೆಲ್ಲರನ್ನೂ ನೋಡಿದ ಭಾರ್ಗವನು ನಂದಿಕೇಶ್ವರನ ಅನುಜ್ಞೆ ಪಡೆದು ಎಲ್ಲರನ್ನೂ ಮಾತನಾಡಿಸಿ, ಆನಂದ ತುಂದಿಲನಾಗಿ ಒಳಕ್ಕೆ ಪ್ರವೇಶಿಸಿದನು.

೨೬. ಅಲ್ಲಿ ಶ್ರೇಷ್ಠರತ್ನಗಳಿಂದ ಖಚಿತವಾಗಿ ಅಮೂಲ್ಯವಾದ ರತ್ನಕಲಶಗಳಿಂದ ಪ್ರಜ್ವಲಿಸುತ್ತಿರುವ ನೂರಾರು ಕೊಠಡಿಗಳನ್ನು ನೋಡಿದನು.

೨೭. ಅಮೂಲ್ಯವೂ, ಮುತ್ತಿನಂತೆ ನಿರ್ಮಲವೂ ಆದ ರತ್ನಗನ್ನಡಿಗಳಿಂದಲೂ, ಶ್ರೇಷ್ಠವಾದ ವಜ್ರದ ಬಾಗಿಲುಗಳಿಂದಲೂ, ವಿರಾಜಿಸುತ್ತಿರುವ ಆ ಮಂದಿರಗಳನ್ನು ನೋಡಿದನು.

೨೮. ಗೋರೋಚನದಂತೆ ಹೊಂಬಣ್ಣವಾದ ಸಾವಿರಾರು ಮಣಿಸ್ತಂಭಗಳೂ, ಶ್ರೇಷ್ಠಮಣಿಗಳಿಂದ ನಿರ್ಮಿತವಾದ ಸೋಪಾನಗಳೂ ಅಲ್ಲಿ ಮನೋಹರವಾಗಿದ್ದವು.

ದದರ್ಶಾಭ್ಯಂತರಂ ದ್ವಾರಂ ನಾನಾಚಿತ್ರೈಶ್ಚ ಚಿತ್ರಿತಂ ।
ಮಾಣಿಕ್ಯಮುಕ್ತಾಗ್ರಥಿತೈರ್ಮಾಲಾಜಾಲೈರ್ವಿರಾಜಿತಂ ॥ ೨೯ ॥

ದದರ್ಶ ಕಾರ್ತಿಕೇಯಂ ಚ ವಾಮೇ ದಕ್ಷೇ ಗಣೇಶ್ವರಂ ।
ವೀರಭದ್ರಂ ಮಹಾಕಾಯಂ ಶಿವತುಲ್ಯಪರಾಕ್ರಮಂ ॥ ೩೦ ॥

ಪ್ರಧಾನಪಾರ್ಷದಗಣಾನ್ಕ್ಷೇತ್ರಪಾಲಾಂಶ್ಚ ನಾರದ ।
ರತ್ನಸಿಂಹಾಸನಸ್ಥಾಂ ಚ ರತ್ನಭೂಷಣಭೂಷಿತಾನ್ ॥ ೩೧ ॥

ತಾನ್ಸಂಭಾಷ್ಯ ಭೃಗುಃ ಶೀಘ್ರಂ ಮಹಾಬಲಪರಾಕ್ರಮಃ ।
ಪರ್ಶುಹಸ್ತಸ್ಸ ಪರಶುರಾಮೋ ಹಂತುಂ ಸಮುದ್ಯತಃ ॥ ೩೨ ॥

ಗಚ್ಛಂತಂ ತಂ ಗಣೇಶಶ್ಚ ಕ್ಷಣಂ ತಿಷ್ಠೇತ್ಯುವಾಚ ಹ ।
ನಿದ್ರಿತೋ ನಿದ್ರಯಾ ಯುಕ್ತೋ ಮಹಾದೇವೋಽಧುನೇತಿ ಚ ॥ ೩೩ ॥

---

೨೯. ಅಲ್ಲಿ ನಾನಾ ಚಿತ್ರಗಳಿಂದ ಚಿತ್ರಿತವಾಗಿ, ಮುತ್ತುಮಾಣಿಕ್ಯ ಮುಂತಾದ ನವರತ್ನಗಳ ತೋರಣಗಳಿಂದ ವಿರಾಜಿಸುತ್ತಿರುವ ಒಳಬಾಗಿಲನ್ನು ಕಂಡನು

೩೦. ಅಲ್ಲಿ ಶಿವನ ಎಡಭಾಗದಲ್ಲಿ ಷಣ್ಮುಖನನ್ನೂ, ಬಲಭಾಗದಲ್ಲಿ ಗಣಪತಿಯನ್ನೂ, ಶಿವನಂತೆ ಪರಾಕ್ರಮಿಯೂ, ದೀರ್ಘಕಾಯನೂ ಆದ ವೀರಭದ್ರನನ್ನೂ ನೋಡಿದನು.

೩೧. ಎಲೈ ನಾರದನೇ, ರತ್ನಾಲಂಕಾರಭೂಷಿತರಾಗಿ ರತ್ನಸಿಂಹಾಸನದಲ್ಲಿ ಕುಳಿತಿರುವ ಪ್ರಧಾನರಾದ ಶಿವನ ಪಾರ್ಷದರನ್ನೂ, ಕ್ಷೇತ್ರಪಾಲರನ್ನೂ ಭಾರ್ಗವನು ನೋಡಿದನು.

೩೨. ಮಹಾಪರಾಕ್ರಮಿಯಾದ ಪರಶುರಾಮನು ಅವರೆಲ್ಲರನ್ನೂ ಮಾತನಾಡಿಸಿ, ಒಳಗೆ ಹೋಗಲು ಅನುಮತಿ ದೊರೆಯದಿರಲು, ಕೈಯ್ಯಲ್ಲಿರುವ ಕೊಡಲಿಯಿಂದ ಅವರೆಲ್ಲರನ್ನೂ ಸಂಹರಿಸಲುದ್ಯುಕ್ತನಾದನು.

೩೩. ಆಗ ಗಣಪತಿಯು ಮುಂದೆ ಬಂದು "ಮಹೇಶ್ವರನು ಈಗ ನಿದ್ರೆ ಮಾಡುತ್ತಿದ್ದಾನೆ. ಕ್ಷಣಕಾಲ ನಿಲ್ಲು" ಎಂದು ಸಮಾಧಾನಗೊಳಿಸಿದನು.

ಈಶ್ವರಾಜ್ಞಾಂ ಗೃಹೀತ್ವಾಹಮತ್ರಾಗತ್ಯ ಕ್ಷಣಾಂತರೇ ।
ತ್ವಯಾ ಸಾರ್ಧಂ ಗಮಿಷ್ಯಾಮಿ ಭ್ರಾತಸ್ತಿಷ್ಠಾತ್ರ ಸಾಂಪ್ರತಂ ॥ ೩೪ ॥

ಗಣೇಶವಾಕ್ಯಂ ಪರಶುರಾಮಶ್ಶ್ರುತ್ವಾ ಮಹಾಬಲಃ ।
ಬೃಹಸ್ಪತಿಸಮೋ ವಕ್ತಾ ಪ್ರವಕ್ತುಮುಪಚಕ್ರಮೇ ॥ ೩೫ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ತೃತೀಯೇ ಗಣಪತಿಖಂಡೇ
ನಾರದನಾರಾಯಣಸಂವಾದೇ ಕೈಲಾಸವರ್ಣನಂ ನಾಮ
ಏಕಚತ್ವಾರಿಂಶತ್ತಮೋಽಧ್ಯಾಯಃ

---

೩೪. "ಈಶ್ವರನ ಆಜ್ಞೆಯನ್ನು ಪಡೆದು, ಕ್ಷಣಾಂತರದಲ್ಲಿಯೇ ನಾನು ಬಂದು ನಿನ್ನನ್ನು ಕರೆದೊಯ್ಯುವೆನು, ಅಲ್ಲಿಯವರೆಗೆ ಇಲ್ಲಿಯೇ ಇರು" ಎಂದು ಗಣಪತಿಯು ನುಡಿದನು.

೩೫. ಮಹಾಬಲಿಷ್ಠನಾದ ಪರಶುರಾಮನು ಗಣಪತಿಯ ಮಾತನ್ನು ಕೇಳಿ ಮಾತಿನಲ್ಲಿ ಬೃಹಸ್ಪತಿಯಂತೆ ಚತುರನಾದುದರಿಂದ ಇಂತು ನುಡಿಯಲಾರಂಭಿಸಿದನು.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಗಣಪತಿಖಂಡದಲ್ಲಿ ಕೈಲಾಸವರ್ಣನಾತ್ಮಕವಾದ ನಲವತ್ತೊಂದನೆಯ ಅಧ್ಯಾಯವು ಮುಗಿದುದು.

ನಲವತ್ತೊಂದನೆಯ ಅಧ್ಯಾಯದ ಸಾರಾಂಶ

ಪರಶುರಾಮನು, ಮನೋಹರವಾದ ಕೈಲಾಸಪರ್ವತವನ್ನೂ, ಅಲ್ಲಿರುವ ದಿವ್ಯ ಮಂದಿರಗಳ ಸೊಬಗನ್ನೂ ಮನದಣಿಯುವಂತೆ ನೋಡಿ, ಶಂಕರನ ಮಂದಿರವನ್ನು ಪ್ರವೇಶಿಸಲು ತಡೆಮಾಡಿದ ನಂದಿಕೇಶ್ವರ ಮುಂತಾದವರನ್ನು ನಿಗ್ರಹಿಸಲು ಹೊರಟಾಗ ಗಣಪತಿಯು ಅವನನ್ನು ಶಾಂತಗೊಳಿಸಿ, ಶಿವನ ಅನುಜ್ಞೆಯನ್ನು ಪಡೆದು ಬಂದು ಒಳಕ್ಕೆ ಕರೆದೊಯ್ಯುವುದಾಗಿ ಹೇಳಿಹೋದನು.

—॥ ಓಂ ॥—

— ॥ ಶ್ರೀ ಗಣೇಶಾಯ ನಮಃ ॥—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಗಣಪತಿಖಂಡೇ

॥ ದ್ವಿಚತ್ವಾರಿಂಶತ್ತಮೋಽಧ್ಯಾಯಃ ॥

॥ ಪರಶುರಾಮೋವಾಚ ॥

ಯಾಸ್ಯಾಮ್ಯಂತಃಪುರಂ ಭ್ರಾತಃ ಪ್ರಣಾಮಂ ಕರ್ತುಮೀಶ್ವರಂ ।
ಪ್ರಣಮ್ಯ ಮಾತರಂ ಭಕ್ತ್ಯಾ ಯಾಸ್ಯಾಮಿ ತ್ವರಿತಂ ಗೃಹಂ ॥ ೧ ॥

ತ್ರಿಸ್ಸಪ್ತಕೃತ್ವೋ ನಿರ್ಭೂಪಾಂ ಕೃತ್ವಾ ಪೃಥ್ವೀಂ ಚ ಲೀಲಯಾ ।
ಕಾರ್ತವೀರ್ಯಸ್ಸುಚಂದ್ರಶ್ಚ ಹತೋ ಯಸ್ಯ ಪ್ರಸಾದತಃ ॥ ೨ ॥

ನಲವತ್ತೆರಡನೆಯ ಅಧ್ಯಾಯ

೧. ಪರಶುರಾಮನು :—ಎಲೈ ಸಹೋದರ ಸದೃಶನಾದ ಗಣಪತಿಯೇ, ಈಶ್ವರನಿಗೆ ವಂದಿಸುವುದಕ್ಕಾಗಿ ಅಂತಃಪುರಕ್ಕೆ ಹೋಗಲಿಚ್ಛಿಸುತ್ತೇನೆ. ಅಲ್ಲಿ ಮಾತೆಯಾದ ಪಾರ್ವತಿಗೂ ಭಕ್ತಿಯಿಂದ ವಂದಿಸಿ ನನ್ನ ಮಂದಿರಕ್ಕೆ ಹಿಂತಿರುಗುತ್ತೇನೆ.

೨. ಯಾವ ಈಶ್ವರನ ಅನುಗ್ರಹದಿಂದ ನಾನು ಇಪ್ಪತ್ತೊಂದು ಸಾರಿ ಭೂಪ್ರದಕ್ಷಿಣೆಮಾಡಿ ಕ್ಷತ್ರಿಯರನ್ನೆಲ್ಲ ನಿರ್ಮೂಲಗೊಳಿಸಿದುದಲ್ಲದೆ, ಮಹಾ ಪರಾಕ್ರಮಿಗಳಾದ ಕಾರ್ತವೀರ್ಯ ಮತ್ತು ಸುಚಂದ್ರನನ್ನೂ ಕೂಡ ಲೀಲೆಯಿಂದ ಸಂಹರಿಸಿದೆನು.

ನಾನಾವಿದ್ಯಾ ಯತೋ ಲಬ್ಧಾ ನಾನಾಶಾಸ್ತ್ರಂ ಸುದುರ್ಲಭಂ ।
ತಂ ಗುರುಂ ಜಗತಾಂ ನಾಥಂ ದ್ರಷ್ಟುಮಿಚ್ಛಾಮಿ ಸಾಂಪ್ರತಂ ॥ ೩ ॥

ಸಗುಣಂ ನಿರ್ಗುಣಂ ಚೈವ ಭಕ್ತಾನುಗ್ರಹವಿಗ್ರಹಂ ।
ಸತ್ಯಂ ಸತ್ಯಸ್ವರೂಪಂ ಚ ಬ್ರಹ್ಮಜ್ಯೋತಿಃಸನಾತನಂ ॥ ೪ ॥

ಸ್ವೇಚ್ಛಾಮಯಂ ದಯಾಸಿಂಧುಂ ದೀನಬಂಧುಂ ಮುನೀಶ್ವರಂ ।
ಆತ್ಮಾರಾಮಂ ಪೂರ್ಣಕಾಮಂ ವ್ಯಕ್ತಾವ್ಯಕ್ತಂ ಪರಾತ್ಪರಂ ॥ ೫ ॥

ಪರಾಪರಾಣಾಂ ಸ್ರಷ್ಟಾರಂ ಪುರುಹೂತಂ ಪುರಸ್ಕೃತಂ ।
ಪುರಾಣಂ ಪರಮಾತ್ಮಾನಮೀಶಾನಂ ತ್ವಾದಿಮವ್ಯಯಂ ॥ ೬ ॥

ಸರ್ವಮಂಗಲಮಾಂಗಲ್ಯಂ ಸರ್ವಮಂಗಲಕಾರಣಂ ।
ಸರ್ವಮಂಗಲದಂ ಶಾಂತಂ ಸರ್ವೈಶ್ವರ್ಯಪ್ರದಂ ವರಂ ॥ ೭ ॥

---

೩. ಯಾವ ಪರಮೇಶ್ವರನಿಂದ ದುರ್ಲಭವಾದ ನಾನಾ ವಿದ್ಯೆಗಳನ್ನೂ, ವಿವಿಧಶಾಸ್ತ್ರಗಳನ್ನೂ, ಪಡೆದೆನೋ ಜಗದೊಡೆಯನಾದ ಆ ಗುರುವನ್ನು ನಾನು ಈಗ ನೋಡಬಯಸುತ್ತೇನೆ.

೪ ನಿರ್ಗುಣನೂ ನಿರಾಕಾರನೂ, ಅನಾದಿಯೂ, ಜ್ಯೋತಿರ್ಮಯನೂ, ಸತ್ಯಸ್ವರೂಪನೂ ಆದ ಆ ಪರಶಿವನು ಭಕ್ತರ ಅನುಗ್ರಹಕ್ಕಾಗಿ ಸಗುಣನೂ ಸಾಕಾರನೂ ಆಗಿರುವನು.

೫. ಸ್ವೇಚ್ಛಾಮಯನೂ, ದಯಾಸಮುದ್ರನೂ, ದೀನಬಂಧುವೂ, ಆತ್ಮಾರಾಮನೂ, ಪೂರ್ಣಕಾಮನೂ ಆದ ಆ ಪರಶಿವನು ವಸ್ತುತಃ ಅವ್ಯಕ್ತನಾದರೂ ಭಕ್ತರ ಕಣ್ಣಿಗೆ ವ್ಯಕ್ತನಾಗಿ ಪರಾತ್ಪರನೆನಿಸಿರುವನು.

೬. ಅತ್ಯುತ್ತಮ ವಸ್ತುಗಳ ಸೃಷ್ಟಿಕರ್ತನೂ, ಅನೇಕ ಭಕ್ತರಿಂದ ಆಹ್ವಾನಿತನೂ, ಪೂಜಿತನೂ ಆದ ಆ ಪರಮೇಶ್ವರನು ಪುರಾಣಪುರುಷನೂ, ಅನಾದಿಯೂ, ಅವ್ಯಯನೂ ಎನಿಸಿರುವನು.

೭ ಮಂಗಳಕ್ಕೆಲ್ಲ ಮಂಗಳಸ್ವರೂಪನೂ, ಮಂಗಳಕಾರಣನೂ, ಮಂಗಳದಾಯಕನೂ ಆದ ಆ ಪರಮೇಶ್ವರನೇ ಭಕ್ತರಿಗೆ ಸಕಲೈಶ್ವರ್ಯವನ್ನೂ ಕೊಡುವನು.

ಆಶುತೋಷಂ ಪ್ರಸನ್ನಾಸ್ಯಂ ಶರಣಾಗತವತ್ಸಲಂ ।
ಭಕ್ತಾಭಯಪ್ರದಂ ಭಕ್ತವತ್ಸಲಂ ಸಮದರ್ಶನಂ　　॥ ೮ ॥

ಇತ್ಥಂ ಪರಶುರಾಮೋಽಸ್ತಾದುಕ್ತ್ವಾ ಗಣಪತೇಃ ಪುರಃ ।
ವಾಚಾ ಮಧುರಯಾ ತತ್ರ ಸಮುವಾಚ ಗಣೇಶ್ವರಃ　　॥ ೯ ॥

ಕ್ಷಣಂ ತಿಷ್ಠ ಕ್ಷಣಂ ತಿಷ್ಠ ಶೃಣು ಭ್ರಾತರಿದಂ ವಚಃ ।
ರಹಃಸ್ಥಲಸ್ಥಿತೋ ನೈವ ದ್ರಷ್ಟವ್ಯಃ ಸ್ತ್ರೀಯುತಃ ಪುಮಾನ್　　॥ ೧೦ ॥

ಸ್ತ್ರೀಸಂಯುಕ್ತಂ ಚ ಪುರುಷಂ ಯಃ ಪಶ್ಯತಿ ನರಾಧಮಃ ।
ಕರೋತಿ ರಸಭಂಗಂ ವಾ ಕಾಲಸೂತ್ರಂ ವ್ರಜೇದ್ಧ್ರುವಂ　　॥ ೧೧ ॥

೮　ಸರ್ವದಾ ಪ್ರಸನ್ನಮುಖನಾದುದರಿಂದ, ಆಶುತೋಷನೂ (ಅತ್ಯಲ್ಪದಿಂದ ತೃಪ್ತಿಪಡುವವನು) ಶರಣಾಗತವತ್ಸಲನೂ ಆದ ಆ ಪರಮೇಶ್ವರನು ಭಕ್ತರಲ್ಲಿಲ್ಲಿ ಸಮದೃಷ್ಟಿಯುಳ್ಳವನಾಗಿ ಅವರನ್ನು ಉದ್ಧರಿಸುವನು.

೯.　ಪರಶುರಾಮನು ಗಣಪತಿಯ ಮುಂದೆ ಈ ರೀತಿಯಾಗಿ ಪರಶಿವನನ್ನು ಸ್ತುತಿಸಿ ನಿಂತುಕೊಳ್ಳಲು, ಗಣಪತಿಯೂ ಕೂಡ ಅವನನ್ನು ಕುರಿತು ಮಧುರ ವಚನಗಳನ್ನಾಡಿದನು.

೧೦.　ಗಣಪತಿ:—ಎಲೈ ಸಹೋದರನೇ, ಕ್ಷಣಕಾಲ ನಿಲ್ಲು, ಆತುರ ಪಡಬೇಡ. ನನ್ನ ಮಾತನ್ನು ಕೇಳು. ಏಕಾಂತದಲ್ಲಿರುವ ಸ್ತ್ರೀಪುರುಷರನ್ನು ಯಾವಾಗಲೂ ನೋಡಬಾರದು.

೧೧.　ಸ್ತ್ರೀಯೊಡಗೂಡಿದ ಪುರುಷನನ್ನು ನೋಡಿ, ಅವನ ಶೃಂಗಾರಭಂಗವನ್ನು ಮಾಡುವ ನೀಚಮನುಜನು ಕಾಲಸೂತ್ರವೆಂಬ ನರಕಕ್ಕೆ ನಿಶ್ಚಯವಾಗಿಯೂ ಹೋಗುವನು.

ತತ್ರ ತಿಷ್ಠತಿ ಪಾಪೀಯಾನ್ಯಾವಚ್ಚಂದ್ರದಿವಾಕರಂ ।
ವಿಶೇಷತಶ್ಚ ಪಿತರಂ ಗುರುಂ ಭೂತಪತಿಂ ದ್ವಿಜ ॥ ೧೨ ॥

ರಹಃ ಸುರತಸಂಸಕ್ತಂ ನಹಿ ಪಶ್ಯೇದ್ವಿಚಕ್ಷಣಃ ।
ಕಾಮತಃ ಕೋಪತೋ ವಾಪಿ ಯಃ ಪಶ್ಯೇತ್ಸುರತೋನ್ಮುಖಂ ॥ ೧೩ ॥

ಸ್ತ್ರೀವಿಚ್ಛೇದೋ ಭವೇತ್ತಸ್ಯ ಧ್ರುವಂ ಸಪ್ತಸು ಜನ್ಮಸು ।
ಶ್ರೋಣೀ ವಕ್ಷಃಸ್ಥಲಂ ವಕ್ತ್ರಂ ಯಃ ಪಶ್ಯತಿ ಪರಸ್ತ್ರಿಯಃ ।
ಕಾಮತೋಽಪಿ ವಿಮೂಢಶ್ಚ ಸೋಽನ್ಧೋ ಭವತಿ ನಿಶ್ಚಿತಂ । ೧೪ ॥

ಗಣೇಶಸ್ಯ ವಚಃ ಶ್ರುತ್ವಾ ಪ್ರಹಸ್ಯ ಭೃಗುನಂದನಃ ।
ತಮುವಾಚ ಮಹಾಕೋಪಾನ್ನಿಷ್ಠುರಂ ವಚನಂ ಮುನೇ ॥ ೧೫ ॥

॥ ಪರಶುರಾಮ ಉವಾಚ ॥

ಅಹೋ ಶ್ರುತಂ ಕಿಂ ವಚನಮಪೂರ್ವಂ ನೀತಿಸಂಯುತಂ ।
ಇದಮೇವಮಹೋ ನೈವಂ ಶ್ರುತಮೀಶ್ವರವಕ್ತ್ರತಃ ॥ ೧೬ ॥

---

೧೨. ಚಂದ್ರಸೂರ್ಯರಿರುವವರೆಗೂ ಆ ನರಕದಲ್ಲಿ ನರಳುವನು. ಅದರಲ್ಲಿಯೂ, ತಂದೆ, ಗುರು, ದೇವ ಮುಂತಾದವರ ಏಕಾಂತಕ್ಕೆ ಭಂಗತಂದವರು ಇನ್ನೂ ಹೆಚ್ಚುಕಾಲ ನರಳುವರು.

೧೩–೧೪. ಕುಶಲಿಯಾದವನು ಏಕಾಂತದಲ್ಲಿ ಸುರತಸುಖಾಸಕ್ತವಾದವರನ್ನು ಎಂದಿಗೂ ನೋಡಬಾರದು. ಯಾರು ಇಚ್ಛಾಪೂರ್ವಕವಾಗಿಯಾಗಲೀ, ಕೋಪತಾಪಗಳಿಂದಾಗಲೀ, ಸುರತಾಸಕ್ತರಾದವರನ್ನು ನೋಡುವರೋ, ಅವರಿಗೆ ಏಳು ಜನ್ಮಗಳವರೆಗೂ ಪತ್ನೀವಿರಹವುಂಟಾಗುವುದು. ಪರಸ್ತ್ರೀಯರ ಮುಖವನ್ನೂ, ಸ್ತನಪ್ರದೇಶವನ್ನೂ ನಿತಂಬ ಬಿಂಬವನ್ನೂ ಇಚ್ಛಾಪೂರ್ವಕವಾಗಿ ನೋಡುವವರು ಜನ್ಮಾಂತರದಲ್ಲಿ ಮೂಢರೂ, ಕುರುಡರೂ, ಆಗುವರು.

೧೫. ಗಣಪತಿಯಾಡಿದ ಮಾತನ್ನು ಕೇಳಿ ಭಾರ್ಗವನು ನಸುನಕ್ಕು, ಕುಪಿತನಾಗಿ ಅವನನ್ನು ಕುರಿತು ನಿಷ್ಠುರವಾದ ನುಡಿಗಳನ್ನಾಡಿದನು.

೧೬. ಪರಶುರಾಮ:—ಆಹಾ, ಅಪೂರ್ವವೂ ನೀತಿಯುತವೂ ಆದ ಉಪದೇಶವನ್ನು ನಿನ್ನ ಬಾಯಿಂದ ಕೇಳಿದೆನಲ್ಲ. ಈಶ್ವರನ ಬಾಯಿನಿಂದ ಈ ರೀತಿಯಾದ ಉಪದೇಶವನ್ನು ಎಂದಿಗೂ ಕೇಳಲಿಲ್ಲ.

ಶ್ರುತಂ ಶ್ರುತೌ ವಾಕ್ಯಮಿದಂ ಕಾಮಿನಾಂ ಚ ವಿಕಾರಿಣಾಂ ।
ನಿರ್ವಿಕಾರಸ್ಯ ಚ ಶಿಶೋರ್ನ ದೋಷಃ ಕಶ್ಚಿದೇವ ಹಿ ।
ಯಾಸ್ಯಾಮ್ಯಂತಃ ಪುರಂ ಭ್ರಾತಸ್ತವ ಕಿಂ ತಿಷ್ಠ ಬಾಲಕ ॥ ೧೭ ॥

ಯಥಾ ದೃಷ್ಟಿ ಕರಿಷ್ಯಾಮಿ ಮತ್ಕಾರ್ಯಂ ಸಮಯೋಚಿತಂ ।
ತವೈವ ತಾತೋ ಮಾತಾ ಚೇತ್ಯೇವಂ ನೈವ ನಿರೂಪಿತಂ ॥ ೧೮ ॥

ಜಗತಾಂ ಪಿತರೌ ತೌ ಚ ಪಾರ್ವತೀಪರಮೇಶ್ವರೌ ।
ಪಾರ್ವತೀ ಸ್ತ್ರೀ ಪುಮಾಚ್ಛಂಭುರಿತಿ ಕೈರ್ನ ನಿರೂಪಿತಃ ॥ ೧೯ ॥

ಸರ್ವರೂಪಃ ಶಂಕರಶ್ಚ ಸರ್ವರೂಪಾ ಚ ಪಾರ್ವತೀ ।
ಗುಣಾತೀತಸ್ಯ ಕಾ ಕ್ರೀಡಾ ತದ್ಭಂಗೋ ವಾ ಕುತೋ ವಿಭೋ ॥ ೨೦ ॥

---

೧೭. ಕಾಮವಿಕಾರವುಳ್ಳವರು ಪರಸ್ತ್ರೀಯರ ಅಂಗಗಳನ್ನು ನೋಡಿದರೆ ಪಾಪಿಗಳಾಗ ವರೆಂದು ಶ್ರುತ್ಯುಕ್ತವಾಗಿದೆ. ವಿಕಾರರಹಿತನಾದ ಶಿಶುವಿಗೆ ಸ್ತ್ರೀಯರ ಅಂಗದರ್ಶನದಿಂದ ಯಾವ ಪಾಪವೂ ಇಲ್ಲ. ಆದುದರಿಂದ ಶಿವಪಾರ್ವತಿಯರಿಗೆ ಶಿಶುಸಮಾನನಾದ ನಾನು ಅಂತಃಪುರಕ್ಕೆ ಹೋಗುವೆನು. ನಿನಗೇನು ತೊಂದರೆ? ಸುಮ್ಮನಿರು.

೧೮. ನನಗೆ ತಿಳಿದಂತೆ ನನ್ನ ಕಾರ್ಯವನ್ನು ಸಮಯೋಚಿತವಾಗಿ ನಡೆಸುವೆನು. ಪಾರ್ವತಿಪರಮೇಶ್ವರರು ನಿನಗೊಬ್ಬನಿಗೇ ತಾಯಿತಂದೆಗಳೆಂದು ಎಲ್ಲಿಯೂ ಹೇಳಿಲ್ಲ.

೧೯. ಅವರಿಬ್ಬರೂ ಜಗತ್ತಿಗೇ ತಾಯಿತಂದೆಗಳು. ಪಾರ್ವತಿಯು ಹೆಂಗು ಸೆಂದೂ, ಪರಮೇಶ್ವರನು ಗಂಡಸೆಂದೂ ಯಾರಿಗೆ ತಾನೆ ಗೊತ್ತಿಲ್ಲ?

೨೦ ಶಂಕರನು ಎಲ್ಲ ರೂಪದಿಂದಲೂ ಇರುವನು. ಪಾರ್ವತಿಯೂ ಎಲ್ಲಾ ರೂಪದಿಂದಿರುವಳು. ತ್ರಿಗುಣಾತೀತರಾದ ಅವರಿಗೆ ರತಿಕ್ರೀಡೆಯೆಂದರೇನು? ಅದರ ಭಂಗವೆಲ್ಲಿ ಬಂತು?

ಕ್ರೀಡಾ ಲಜ್ಜಾ ಭೀತಿ ಭಂಗೋ ಗ್ರಾಮ್ಯಸ್ಯೈವ ನ ಚೇಶಿತುಃ ।
ಸ್ತನಂಧಯಂ ಚ ಮಾಂ ದೃಷ್ಟ್ವಾ ಪಿತ್ರೋರ್ಲಜ್ಜಾ ಕುತೋ ಭವೇತ್ ॥

ಲಜ್ಜಾಯಾಶ್ಚ ಕುತೋ ಲಜ್ಜಾ ಲಜ್ಜೇಶಸ್ಯ ಚ ಸಾ ಕುತಃ ।
ಲಜ್ಜಾ ಲಜ್ಜಾಂ ಕಿಮಾಪ್ನೋತಿ ತಾಪಂ ಕಿಂ ವಾ ಹುತಾಶನಃ ॥ ೨೨ ॥

ಶೀತಂ ಶೈತ್ಯಮಹೋಭ್ರಾತರ್ನಿದಾಘೋ ದಾಹಮೇವ ಚ ।
ಭೀತಿರ್ಭೀತಿಮವಾಪ್ನೋತಿ ಮೃತ್ಯೋರ್ಮೃತ್ಯುರ್ಬಿಭೇತಿ ಕಿಂ ॥ ೨೩ ॥

ಕುತೋ ಜ್ವರೋ ಜ್ವರಂ ಹಂತಿ ವ್ಯಾಧಿಂ ವ್ಯಾಧಿಶ್ಚ ಜೀರ್ಯತಿ ।
ಸಂಹರ್ತಾ ನಾಪಿ ಸಂಹರ್ತುಃ ಕಾಲಃ ಕಾಲಾದ್ಬಿಭೇತಿ ಕಿಂ ॥ ೨೪ ॥

---

೨೧. ಕ್ರೀಡೆಯಾಗಲೀ, ಲಜ್ಜೆಯಾಗಲೀ, ಭೀತಿಯಾಗಲೀ, ರತಿಭಂಗವಾಗಲೀ, ಪ್ರಾಕೃತಪುರುಷನಿಗೇ ಹೊರತು ಈಶ್ವರನಿಗಲ್ಲ. ಮೊಲೆಹಾಲು ಕುಡಿಯುವ ಶಿಶುವಿನಂತಿರುವ ನನ್ನನ್ನು ನೋಡಿ ತಾಯಿತಂದೆಗಳಿಗೆ ಲಜ್ಜೆಯೆಂದರೇನು ?

೨೨. ಲಜ್ಜಾಸ್ವರೂಪಳಾದ ಪಾರ್ವತಿಗಾಗಲೀ, ಲಜ್ಜಾಪತಿಯಾಗಿರುವ ಶಿವನಿಗಾಗಲೀ ಲಜ್ಜೆಯೆಂದರೇನು ? ಲಜ್ಜೆಗೆ ಲಜ್ಜೆ ಬರುವುದುಂಟೇ ? ಅಗ್ನಿಗೆ ತಾಪವಾಗುವುದುಂಟೇ ?

೨೩. ಎಲೈ ಸಹೋದರನೇ, ಶೀತಕ್ಕೆ ಶೈತ್ಯವೂ, ಬೇಸಿಗೆಗೆ ತಾಪವೂ, ಭಯಕ್ಕೆ ಭಯವೂ, ಆಗುವುದುಂಟೇ ? ಮೃತ್ಯುವು ಮೃತ್ಯುವಿಗೆ ಹೆದರುವುದೆಂದರೇನು ?

೨೪. ಜ್ವರವು ಜ್ವರವನ್ನು ಎಲ್ಲಾದರೂ ನಾಶಗೊಳಿಸುವುದೇ ? ವ್ಯಾಧಿಯು ವ್ಯಾಧಿಯನ್ನು ಜೀರ್ಣಮಾಡುವುದೇ ? ಸಂಹಾರಕನು ಸಂಹಾರಕನಿಗೂ. ಕಾಲವು ಕಾಲಕ್ಕೂ ಹೆದರುವುದೆಂದರೇನು ?

ಸ್ರಷ್ಟಾರಂ ಸೃಜತೇ ಸ್ರಷ್ಟಾ ಪಾತಾ ಕಿಂ ಪಾತಿ ತೇ ಮತೌ ।
ಕ್ಷುತ್ಕ್ಷುಧಂ ಸಮವಾಪ್ನೋತಿ ತೃಷ್ಣಾ ತೃಷ್ಣಾಂ ಪ್ರಯಾತಿ ಕಿಂ ॥ ೨೫ ॥

ನಿದ್ರಾ ನಿದ್ರಾಂ ಚ ಶೋಭಾಂ ಶ್ರೀಃ ಶಾಂತಿಃ ಶಾಂತಿಂ ಚ ತೇ ಮತೌ ।
ಪುಷ್ಟಿಃ ಪುಷ್ಟಿಂ ಕಿಮಾಪ್ನೋತಿ ತುಷ್ಟಿಸ್ತುಷ್ಟಿಂ ಕ್ಷಮಾ ಕ್ಷಮಾಂ ।
ಆತ್ಮನಃ ಪರಮಾತ್ಮಾಸ್ತಿ ಶಕ್ತಿಃ ಶಕ್ತ್ಯಾ ಬಿಭೇತಿ ಕಿಂ ॥ ೨೬ ॥

ಕಾಮಕ್ರೋಧೌ ಲೋಭಮೋಹೌ ಸ್ವಾತ್ಮನ್ಯೈತೇನ ಬಾಧಿತಾಃ ।
ದಯಾ ನ ಬದ್ಧಾ ದಯಯಾ ನೇಚ್ಛಾ ಬದ್ಧೇಚ್ಛಯಾ ಪ್ರಭೋ ॥ ೨೭ ॥

ಜ್ಞಾನಬುದ್ಧ್ಯೋಃ ಕೋ ವಿಕಾರೋ ಜರಾಂ ನೋ ಬಾಧತೇ ಜರಾ ।
ಚಿಂತಾ ನ ಚಿಂತಯಾ ಗ್ರಸ್ತಾ ಚಕ್ಷುಶ್ಚಕ್ಷುರ್ನ ಪಶ್ಯತಿ ॥ ೨೮ ॥

---

೨೫. ಸೃಷ್ಟಿಕರ್ತನು ಸೃಷ್ಟಿಕರ್ತನನ್ನು ಸೃಜಿಸುವನೆ? ಪಾಲಕನು ತನ್ನನ್ನು ಪಾಲಿಸಿಕೊಳ್ಳಬೇಕೆ? ಹಸಿವಿಗೆ ಹಸಿವುಂಟಾಗುವುದೆಂದರೇನು? ಬಾಯಾರಿಕೆಗೆ ಬಾಯಾರಿಕೆಯಾಗುವುದೇ?

೨೬. ನಿದ್ರೆಯನ್ನು ನಿದ್ರೆಯೂ, ಕಾಂತಿಯನ್ನು ಕಾಂತಿಯೂ, ಶಾಂತಿಯನ್ನು ಶಾಂತಿಯೂ ಪಡೆಯುವುದೇ? ಪುಷ್ಟಿಗೆ ಪುಷ್ಟಿಯೂ, ತುಷ್ಟಿಗೆ ತುಷ್ಟಿಯೂ, ಕ್ಷಮೆಗೆ ಕ್ಷಮೆಯೂ, ಬೇರೆ ಉಂಟೇ? ಆತ್ಮನಿಗೊಬ್ಬ ಆತ್ಮನಿರುವನೇ? ಶಕ್ತಿಯು ಶಕ್ತಿಗೆ ಹೆದರುವುದೇ?

೨೭. ಕಾಮಕ್ರೋಧಲೋಭಮೋಹಗಳು ತಮಗೆ ತಾವೇ ಬಾಧಕವಾಗುವುದಿಲ್ಲ. ದಯೆಯು ದಯೆಯಿಂದಲೂ ಇಚ್ಛೆಯು ಇಚ್ಛೆಯಿಂದಲೂ ಬದ್ಧವಾಗಿಲ್ಲ.

೨೮. ಜ್ಞಾನ ಬುದ್ಧಿಗಳಿಗೆ ವಿಕಾರವೆಂದರೇನು? ಮುಪ್ಪು ಮುಪ್ಪನ್ನು ಬಾಧಿಸುವುದೇ? ಚಿಂತೆಯು ಚಿಂತೆಗೊಳಗಾಗುವುದೇ? ಕಣ್ಣು ಕಣ್ಣನ್ನು ನೋಡಲಾರದು.

ಹರ್ಷೋ ಮುದಂ ಕಿಂ ಪ್ರಾಪ್ನೋತಿ ಶೋಕಂ ಶೋಕೋ ನ ಬಾಧತೇ ।
ಕಾ ವಿಪತ್ತಿರ್ವಿಪತ್ತೇಶ್ಚ ಸಂಪತ್ತಿಃ ಸಂಪದಃ ಕುತಃ ॥ ೨೯ ॥

ಮೇಧಾಯಾ ಧಾರಣಾಶಕ್ತಿಃ ಸ್ಮೃತೇರ್ವಾ ಸ್ಮರಣಂ ಕುತಃ ।
ನ ದಗ್ಧಃ ಸ್ವಪ್ರತಾಪೇನ ವಿವಸ್ವಾನಿತಿ ಸಮ್ಮತಃ ॥ ೩೦ ॥

ವಿಪರೀತಮತೋ ಭ್ರಾತಸ್ತ್ವಯೈವಾಚರಿತೋಽಧುನಾ ।
ನ ಶ್ರುತೋಽಯಂ ಗುರುಮುಖಾನ್ನ ದೃಷ್ಟೋ ನ ಶ್ರುತೌ ಶ್ರುತಃ ॥ ೩೧ ॥

ಇತ್ಯುಕ್ತ್ವಾ ಚಾಪಿ ಪರಶುರಾಮಶ್ಚಪ್ರಹಸ್ಯ ಸಃ ।
ಶೀಘ್ರಂ ಗಂತುಂ ಮನಶ್ಚಕ್ರೇ ತದ್ಗೃಹಾಭ್ಯಂತರಂ ಮುದಾ ॥ ೩೨ ॥

ತಚ್ಚ ರಾಮವಚಃ ಶ್ರುತ್ವಾ ಜಿತಕ್ರೋಧೋ ಗಣೇಶ್ವರಃ ।
ಶುದ್ಧಸತ್ವಸ್ವರೂಪಶ್ಚ ಪ್ರಹಸ್ಯ ತಮುವಾಚ ಹ ॥ ೩೩ ॥

---

೨೯. ಹರ್ಷಕ್ಕೆ ಹರ್ಷವುಂಟಾಗುವುದೇ ? ಶೋಕವನ್ನು ಶೋಕವು ಬಾಧಿಸುವುದೇ ? ವಿಪತ್ತಿಗೆ ವಿಪತ್ತೂ ಸಂಪತ್ತಿಗೆ ಸಂಪತ್ತೂ ಬರುವುದೆಂದರೇನು ?

೩೦. ಮೇಧೆಗೆ ಧಾರಣಶಕ್ತಿಯಾಗಲೀ, ಸ್ಮೃತಿಗೆ ಸ್ಮರಣಶಕ್ತಿಯಾಗಲೀ, ಬೇರಾವುದು ? ಸೂರ್ಯನು ತನ್ನ ಪ್ರತಾಪದಿಂದಲೇ ತಾನು ಸುಡುವುದಿಲ್ಲವೆಂಬುದು ಸರ್ವಸಂಮತವಲ್ಲವೇ ?

೩೧. ಆದ್ದರಿಂದ ಎಲೈ ಸಹೋದರನೇ, ಈಗ ನೀನು ನನ್ನನ್ನು ತಡೆದುದು ವಿಪರೀತವಾಯಿತು. ಈ ವಿಚಾರವನ್ನು ನಾನು ಗುರು ಮುಖದಿಂದ ಕೇಳಿಲ್ಲ. ವೇದದಲ್ಲೂ ಓದಿಲ್ಲ.

೩೨. ಪರಶುರಾಮನು ಹೀಗೆ ಹೇಳಿ ನಸುನಕ್ಕು ಶಿವನ ಏಕಾಂತಮಂದಿರದೊಳಕ್ಕೆ ಜಾಗ್ರತೆಯಾಗಿ ಹೋಗಲು ಮನಸ್ಸು ಮಾಡಿದನು.

೩೩. ಕೋಪವನ್ನು ಜಯಿಸಿ ಶುದ್ಧ ಸತ್ವಗುಣಸಂಪನ್ನನಾಗಿದ್ದ ಗಣಪತಿಯೂ ಕೂಡ ಪರಶುರಾಮನ ಮಾತನ್ನು ಕೇಳಿ ಹೀಗೆಂದನು.

|| ಗಣಪತಿರುವಾಚ ||

ಅಜ್ಞಾನತಿಮಿರಾಚ್ಛನ್ನೋ ಜ್ಞಾನಂ ಪ್ರಾಪ್ನೋತಿ ತದ್ವಿದಃ |
ಪಿತುರ್ಭ್ರಾತುರ್ಮುಖಾಜ್ಜ್ಞಾನಂ ದುರ್ಲಭಂ ಭಾಗ್ಯವಾಂಲ್ಲಭೇತ್|| ೩೪ ||

ಶ್ರುತಂ ಜ್ಞಾನಂ ವಿಶಿಷ್ಟಂ ಚ ಜ್ಞಾನಿನಾಮಪಿ ದುರ್ಲಭಂ |
ಕಿಂಚಿನ್ಮೇ ತ್ವಂ ಮಂದಬುದ್ಧೇಃ ಶೃಣು ಭ್ರಾತರ್ನಿವೇದನಂ || ೩೫ ||

ಯೋ ನಿರ್ಗುಣಃ ಸ ನಿರ್ಲಿಪ್ತಃ ಶಕ್ತಿಭಿರ್ನಹಿ ಸಂಯುತಃ|
ಸಿಸೃಕ್ಷುರಾಶ್ರಿತಶ್ಶಕ್ತ್ಯಾ ನಿರ್ಗುಣಃ ಸಗುಣೋ ಭವೇತ್ || ೩೬ ||

ಯಾವಂತಿ ಚ ಶರೀರಾಣಿ ಭೋಗಾರ್ಹಾಣಿ ಮಹಾಮುನೇ |
ಪ್ರಾಕೃತಾನಿ ಚ ಸರ್ವಾಣಿ ವಿನಾ ಶ್ರೀಕೃಷ್ಣವಿಗ್ರಹಂ || ೩೭ ||

---

೩೪. ಗಣಪತಿ:—ಅಜ್ಞಾನವೆಂಬ ಅಂಧಕಾರಕ್ಕೆ ಸಿಲುಕಿದವನು ಜ್ಞಾನಿಯಿಂದ ಜ್ಞಾನಜ್ಯೋತಿಯನ್ನು ಪಡೆಯುವನು. ಆದರೆ ತಂದೆ ಮತ್ತು ಸಹೋದರರ ಮುಖದಿಂದ ಜ್ಞಾನವು ಲಭಿಸುವುದು ದುರ್ಲಭವಾದುದು. ಅದು ಭಾಗ್ಯವಂತರಿಗೆ ಮಾತ್ರ ದೊರೆಯುವುದು.

೩೫. ಎಲೈ ಸಹೋದರನೇ. ಜ್ಞಾನಿಗಳಿಗೂ ದುರ್ಲಭವಾದ ವಿಶಿಷ್ಟ ಜ್ಞಾನವನ್ನು ನಾನು ನಿನ್ನ ಮುಖದಿಂದ ಕೇಳಿದೆನು. ಈಗ ಮಂದಮತಿಯಾದ ನನ್ನ ವಿಜ್ಞಾಪನೆಯನ್ನು ನೀನೂ ಸ್ವಲ್ಪ ಕೇಳು.

೩೬. ನಿರ್ಗುಣನೂ ನಿರ್ಲಿಪ್ತನೂ ಆದ ಪುರುಷನು ಪ್ರಕೃತ್ಯಾದಿಶಕ್ತಿಗಳಿಂದ ಕೂಡಿರುವುದಿಲ್ಲ. ನಿರ್ಗುಣನಾದ ಪುರುಷನು ಸೃಷ್ಟಿಮಾಡಲಿಚ್ಛಿಸಿದಾಗ ಶಕ್ತಿಯಿಂದ ಆಶ್ರಿತನಾಗಿ ಸಗುಣನಾಗುವನು.

೩೭. ಎಲೈ ಮಹರ್ಷಿಯೇ, ಭೋಗಾರ್ಹವಾದ ಶರೀರಗಳೆಲ್ಲವೂ ಪ್ರಾಕೃತ ಸೃಷ್ಟಿಗೊಳಗಾದುವು. ಶ್ರೀಕೃಷ್ಣನ ಶರೀರವು ಮಾತ್ರ ಅಪ್ರಾಕೃತವಾದುದು.

ಧ್ಯಾಯಂತಿ ಯೋಗಿನಸ್ತಂ ಚ ಶುದ್ಧಜ್ಯೋತಿಸ್ಸ್ವರೂಪಿಣಂ ।
ಹಸ್ತಪಾದಾದಿರಹಿತಂ ನಿರ್ಗುಣಂ ಪ್ರಕೃತೇಃ ಪರಂ ॥ ೩೮ ॥

ವೈಷ್ಣವಾಸ್ತಂ ನಮಸ್ಯಂತಿ ಭಕ್ತ್ಯಾನುಗ್ರಹಕಾರಕಂ ।
ಕುತೋ ಬಭೂವ ತಜ್ಜ್ಯೋತಿರಹೋ ತೇಜಸ್ವಿನೋ ವಿನಾ ॥ ೩೯ ॥

ಜ್ಯೋತಿರಭ್ಯಂತರೇ ನಿತ್ಯಂ ಶರೀರಂ ಶ್ಯಾಮಸುಂದರಂ ।
ದ್ವಿಭುಜಂ ಮುರಲೀಹಸ್ತಂ ಸಸ್ಮಿತಂ ಪೀತವಾಸಸಂ ॥ ೪೦ ॥

ಅತೀವಮೂಲ್ಯಸದ್ರತ್ನಭೂಷಣೈಶ್ಚ ವಿಭೂಷಿತಂ ।
ಜ್ಯೋತಿರಭ್ಯಂತರೇ ಮೂರ್ತಿಂ ಪಶ್ಯಂತಿ ಕೃಪಯಾ ವಿಭೋಃ ॥ ೪೧ ॥

ತದಾ ದಾಸ್ಯೇ ನಿಯುಕ್ತಾಸ್ತೇ ಭವನ್ತ್ಯೇವೇಶ್ವರೇಚ್ಛಯಾ ।
ಯೋಗಸ್ತಪೋ ವಾ ದಾಸ್ಯಸ್ಯ ಕಲಾಂ ನಾರ್ಹಂತಿ ಷೋಡಶೀಂ ॥ ೪೨ ॥

---

೩೮. ಯೋಗಿಗಳು ಶ್ರೀಕೃಷ್ಣಪರಮಾತ್ಮನನ್ನು ಹಸ್ತಪಾದಾದಿ ಅವಯವಗಳಿಲ್ಲದ ಶುದ್ಧಜ್ಯೋತಿಃಸ್ವರೂಪನೆಂದೂ, ನಿರ್ಗುಣ ಮತ್ತು ಪ್ರಕೃತಿಗೆ ಪರನೆಂದೂ ತಿಳಿದು ಧ್ಯಾನಿಸುವರು.

೩೯. ಭಕ್ತಾನುಗ್ರಹಕಾರಕನಾದ ಪರಮಾತ್ಮನನ್ನು ಸಗುಣನೆಂದು ವಿಷ್ಣುಭಕ್ತರು ತಿಳಿಯುವರು. ತೇಜಸ್ವಿಯಾದ ಪುರುಷನಿಲ್ಲದೆ ತೇಜಸ್ಸೆಲ್ಲಿಯದು? ಎಂಬುದೇ ಅವರ ಆಕ್ಷೇಪ

೪೦, ಆದುದರಿಂದ ಆ ಜ್ಯೋತಿಯೊಳಗಡೆ ಶ್ಯಾಮಸುಂದರಶರೀರನೂ, ಪೀತಾಂಬರಧರನೂ, ದ್ವಿಭುಜನೂ, ಮುರಳೀಧರನೂ ಆದ ಪರಮಾತ್ಮನ ಸಗುಣ ರೂಪವನ್ನು ಕಾಣುವರು.

೪೧. ಪರಮಾತ್ಮನ ಅನುಗ್ರಹದಿಂದ ವಿಷ್ಣುಭಕ್ತರಿಗೆ, ಜ್ಯೋತಿಯೊಳಗಡೆ ಅಮೂಲ್ಯರತ್ನಭೂಷಣಗಳಿಂದ ಭೂಷಿತವಾದ ದಿವ್ಯಸುಂದರಮೂರ್ತಿಯು ಕಾಣಿಸುವುದು.

೪೨. ಆಗ ಈಶ್ವರೇಚ್ಛೆಯಂತೆ ಅವರೆಲ್ಲರೂ ಪರಮಾತ್ಮನ ಸೇವೆಯಲ್ಲಿ ನಿರತರಾಗುವರು. ಯೋಗಾಭ್ಯಾಸವಾಗಲೀ, ತಪಸ್ಸಾಗಲೀ ಪರಮಾತ್ಮನ ಸೇವೆಯ ಷೋಡಶಾಂಶಕ್ಕೂ ಎಣೆಯಾಗಲಾರದು.

ಯದಾ ಸೃಷ್ಟ್ಯುನ್ಮುಖಃ ಕೃಷ್ಣಃ ಸಸೃಜೇ ಪ್ರಕೃತಿಂ ಮುದಾ ।
ತದ್ಯೋನೌ ಹ್ಯರ್ಪಿತಂ ವೀರ್ಯಂ ವೀರ್ಯಾದ್ಡಿಂಭೋ ಬಭೂವ ಹ ॥ ೪೩ ॥

ದಿವ್ಯೇನ ಲಕ್ಷವರ್ಷೇಣ ಗರ್ಭಾಡ್ಡಿಂಭೋ ವಿನಿರ್ಗತಃ ।
ತದಾ ಬಭೂವ ನಿಶ್ವಾಸಸ್ತತೋ ವಾಯುರ್ಬಭೂವ ಹ ॥ ೪೪ ॥

ನಿಶ್ವಾಸೇನ ಸಮಂ ಭ್ರಾತ ಮುಖಬಿಂದುರ್ವಿನಿರ್ಗತಃ ।
ತತೋ ಬಭೂವ ಸಹಸಾ ಜಲರಾಶಿರ್ಹರೇಃ ಪುರಃ ॥ ೪೫ ॥

ತಜ್ಜಲೇ ಚ ಸ್ಥಿತೋ ಡಿಂಭೋ ದಿವ್ಯವರ್ಷಾಣಿ ಲಕ್ಷಕಂ ।
ತತೋ ಬಭೂವ ಸಹಸಾ ವಿಶ್ವಾಧಾರೋ ಮಹಾವಿರಾಟ್ ॥ ೪೬ ॥

ಯಾವಂತಿ ಗಾತ್ರಲೋಮಾನಿ ತಸ್ಯ ಸಂತಿ ಮಹಾತ್ಮನಃ ।
ಬ್ರಹ್ಮಾಂಡಾನಿ ಚ ತಾವಂತಿ ವಿದ್ಯಮಾನಾನಿ ನಿಶ್ಚಿತಂ ॥ ೪೭ ॥

---

೪೩. ಶ್ರೀಕೃಷ್ಣಪರಮಾತ್ಮನು ಸೃಷ್ಟಿಮಾಡಲಿಚ್ಛಿಸಿದಾಗ ಮೊಟ್ಟಮೊದಲು ಪ್ರಕೃತಿಯನ್ನು ಸೃಜಿಸಿ ಆಕೆಯ ಯೋನಿಯಲ್ಲಿ ವೀರ್ಯವನ್ನಿಡಲು, ಆ ವೀರ್ಯದಿಂದ ಒಂದು ಶಿಶುವಾಯಿತು.

೪೪. ಆ ಶಿಶುವು ದಿವ್ಯಲಕ್ಷ ವರ್ಷಗಳು ಕಳೆದನಂತರ ಗರ್ಭದಿಂದ ಹೊರಬಂದಿತು. ಸುರತಾಯಾಸಶ್ರಾಂತಳಾದ ಪ್ರಕೃತಿಯ ಮುಖದಿಂದ ಹೊರಬಂದ ನಿಃಶ್ವಾಸವಾಯುವೇ ಮಹಾವಾಯುವೆನಿಸಿತು.

೪೫. ಆ ನಿಃಶ್ವಾಸದೊಡನೆ ಪ್ರಕೃತಿಯ ಮುಖದಿಂದ ಜಲಕಣವು ಹೊರಕ್ಕೆ ಬಂದಿತು. ಅದೇ ಶ್ರೀಹರಿಯ ಮುಂದೆ ಮಹಾ ಜಲರಾಶಿಯಾಗಿ ಪರಿಣಮಿಸಿತು.

೪೬. ಆ ಮಹಾಜಲದಲ್ಲಿ ಆ ಶಿಶುವು ದಿವ್ಯಲಕ್ಷ ವರ್ಷಗಳಕಾಲವಿದ್ದು ಅನಂತರ ಇದ್ದಕ್ಕಿದ್ದಂತೆಯೇ ವಿಶ್ವಾಧಾರನಾದ ಮಹಾವಿರಾಟ್ಪುರುಷನಾಯಿತು.

೪೭. ಆ ಮಹಾವಿರಾಟ್ಪುರುಷನಿಗೆ ಎಷ್ಟು ರೋಮಕೂಪಗಳಿವೆಯೋ, ಅಷ್ಟರಲ್ಲಿಯೂ ಒಂದೊಂದು ಬ್ರಹ್ಮಾಂಡವಿರುವುದೆಂದು ನಿಶ್ಚಿತವಾಗಿದೆ.

ತತ್ರೈವ ಪ್ರತಿ ವಿಶ್ವಂಡೇ ಬ್ರಹ್ಮಾವಿಷ್ಣುಮಹೇಶ್ವರಾಃ ।
ದೇವಾಶ್ಚ ಮುನಯಶ್ಚೈವ ವಿಶ್ವಮಾನಾಶ್ಚ ರಾಚರಾಃ ॥ ೪೮ ॥

ಮಹಾವಿರಾಡಾಶ್ರಯಶ್ಚ ಸರ್ವಸ್ಯ ಚ ಜನಸ್ಯ ಚ ।
ನಿಶ್ವಾಸವಾಯುರ್ಭಗವನ್ಸ್ವಭೂವ ಶ್ರೀಹರೇರ್ಮುನೇ ॥ ೪೯ ॥

ಮಹಾವಿಷ್ಣುಶ್ಚ ಕಲಯಾ ತತಃ ಕ್ಷುದ್ರವಿರಾಡಭೂತ್ ।
ತನ್ನಾಭಿಕಮಲೇ ಬ್ರಹ್ಮಾ ಶಂಕರಸ್ತಲ್ಲಲಾಟಜಃ ॥ ೫೦ ॥

ವಿಷ್ಣುಸ್ತದಂಶಃ ಪಾತಾ ಯಃ ಶ್ವೇತದ್ವೀಪನಿವಾಸಕೃತ್ ।
ಏವಂ ತೇ ಪ್ರತಿವಿಶ್ವಂಡೇ ಬ್ರಹ್ಮವಿಷ್ಣುಮಹೇಶ್ವರಾಃ ॥ ೫೧ ॥

ಸ್ವಯಂ ಚ ಸ್ವಾಂಶಕಲಯಾ ನಾನಾಮೂರ್ತಿಧರೋ ಹರಿಃ ।
ತದಾಭವಚ್ಚ ಸಗುಣಃ ಸರ್ವಶಕ್ತಿಯುತಸ್ತದಾ ॥ ೫೨ ॥

---

೪೮. ಆ ಪ್ರತಿಯೊಂದು ಬ್ರಹ್ಮಾಂಡದಲ್ಲಿಯೂ, ಬ್ರಹ್ಮ ವಿಷ್ಣು ಮಹೇಶ್ವರರೂ, ದೇವತೆಗಳೂ, ಮುನಿಗಳೂ, ಚರಾಚರಾತ್ಮಕವಾದ ನಿಖಿಲ ವಿಶ್ವವೂ ಇರುವುದು.

೪೯. ಸಕಲಕ್ಕೂ ಮಹಾವಿರಾಟ್ಪುರುಷನೇ ಆಶ್ರಯನು ಶ್ರೀಹರಿಯು ನಿಃಶ್ವಾಸದಿಂದ ಹೊರಬಂದ ಮಹಾವಾಯುವೂ ಸರ್ವಾಧಾರವೆನಿಸಿತು.

೫೦. ಶ್ರೀಹರಿಯ ಕಲೋದ್ಭವನಾದ ಮಹಾವಿಷ್ಣುವಿನಿಂದ ಕ್ಷುದ್ರವಿರಾಟನ ಆವಿರ್ಭಾವವಾಯಿತು. ಆ ಕ್ಷುದ್ರವಿರಾಟನ (ವಿಷ್ಣು) ನಾಭಿಕಮಲದಿಂದ ಬ್ರಹ್ಮನೂ, ಬ್ರಹ್ಮನ ಹಣೆಯಿಂದ ಶಂಕರನೂ ಆವಿರ್ಭವಿಸಿದರು.

೫೧. ಶ್ವೇತದ್ವೀಪನಿವಾಸಿಯೂ, ಜಗತ್ಪಾಲಕನೂ ಆದ ವಿಷ್ಣುವು ಅವನ ಅಂಶದಿಂದ ಆವಿರ್ಭವಿಸಿದನು. ಹೀಗೆ ಪ್ರತಿಯೊಂದು ಬ್ರಹ್ಮಾಂಡದಲ್ಲಿಯೂ ಬ್ರಹ್ಮ ವಿಷ್ಣು ಮಹೇಶ್ವರರಿರುವರು.

೫೨. ಶ್ರೀಹರಿಯು ಸ್ವತಃ ಸಾಕಾರನಾದುದಲ್ಲದೆ ತನ್ನ ಅಂಶ ಮತ್ತು ಕಲೆಯಿಂದ ನಾನಾರೂಪವನ್ನು ಧರಿಸಿದನು. ಆಗಲೇ ಸಕಲ ಶಕ್ತಿಸಮನ್ವಿತನೂ ಸಗುಣನೂ ಆದನು.

ಕಥಂ ಲಜ್ಜಾದಿರಹಿತಃ ಸ ಚ ಸ್ವೇಚ್ಛಾಮಯೋ ಮಹಾನ್ ।
ಸರ್ವದಾ ಸರ್ವಭೋಗಾರ್ಹಃ ಸರ್ವಶಕ್ತಿಸಮನ್ವಿತಃ ॥ ೫೩ ॥

ಲಜ್ಜಾ ನಾಸ್ತ್ಯೇವ ಲಜ್ಜಾಯಾಮಿತೋಽಯಂ ಸರ್ವಸಂಮತಃ ।
ಯಾ ಚ ಲಜ್ಜಾವತೀ ದೇವೀ ತಸ್ಯ ಲಜ್ಜಾ ಕುತೋ ಗತಾ ॥ ೫೪ ॥

ಸರ್ವಶಕ್ತಿಮತೀ ದುರ್ಗಾ ಪ್ರಕೃತ್ಯಾ ಸಾ ಚ ಶೈಲಜಾ ।
ತಸ್ಯಾ ಲಜ್ಜಾದಯಃ ಸಂತಿ ಸರ್ವದಾ ಸರ್ವಸಮ್ಮತಾಃ ॥ ೫೫ ॥

ಪಂಚಧಾ ಪ್ರಕೃತಿರ್ಯಾ ಚ ಶ್ರೀಕೃಷ್ಣಸ್ಯ ಬಭೂವ ಹ ।
ರಾಧಾ ಪದ್ಮಾ ಚ ಸಾವಿತ್ರೀ ದುರ್ಗಾದೇವೀ ಸರಸ್ವತೀ ॥ ೫೬ ॥

ಪ್ರಾಣಾಧಿಷ್ಠಾತೃದೇವೀ ಯಾ ಕೃಷ್ಣಸ್ಯ ಪರಮಾತ್ಮನಃ ।
ಪ್ರಾಣಾಧಿಕಾ ಪ್ರಿಯಾ ಸಾ ಚ ರಾಧಾಽಽಸ್ತೇ ತಸ್ಯ ವಕ್ಷಸಿ ॥ ೫೭ ॥

---

೫೩. ಸಕಲ ಭೋಗಗಳಿಗೆ ಅರ್ಹನೂ, ಸಕಲ ಶಕ್ತಿಯುತನೂ, ಸ್ವೇಚ್ಛಾಮಯನೂ ಆದ ಆ ಮಹಾತ್ಮನಿಗೆ ಲಜ್ಜೆ ಮುಂತಾದವುಗಳಿಲ್ಲವೆಂಬುದರೇನು?

೫೪. ಲಜ್ಜೆಯಲ್ಲಿ ಲಜ್ಜೆಯಿಲ್ಲವೆಂಬುದು ಸರ್ವಸಮ್ಮತವಾದುದು. ಯಾವ ಪ್ರಕೃತಿದೇವಿಯು ಲಜ್ಜೆಗೆ ಆಶ್ರಯಳೆನಿಸಿರುವಳೋ ಅವಳ ಲಜ್ಜೆ ಎಲ್ಲಿಗೆ ಹೋಯಿತು?

೫೫. ಶೈಲರಾಜಪುತ್ರಿಯಾದ ದುರ್ಗೆಯು ಲಜ್ಜಾದಿಸಕಲಶಕ್ತಿಸಮನ್ವಿತಳು. ಅವಳಿಗೆ ಯಾವಾಗಲೂ ಲಜ್ಜೆಯೇ ಮುಂತಾದ ಸಕಲ ಶಕ್ತಿಗಳುಂಟೆಂಬುದು ಸರ್ವಸಮ್ಮತವಾದುದು.

೫೬. ಪ್ರಕೃತಿಯು ಶ್ರೀಕೃಷ್ಣನಿಂದ, ರಾಧೆ, ಲಕ್ಷ್ಮಿ, ಸಾವಿತ್ರಿ, ದುರ್ಗೆ ಮತ್ತು ಸರಸ್ವತಿಯೆಂದು ಐದು ಬಗೆಯಾಗಿ ವ್ಯಕ್ತಳಾದಳು.

೫೭ ಶ್ರೀಕೃಷ್ಣಪರಮಾತ್ಮನ ಪ್ರಾಣಗಳಿಗೆ ಅಧಿಷ್ಠಾತೃದೇವಿಯೂ, ಪ್ರಾಣಕ್ಕಿಂತ ಅಧಿಕ ಪ್ರೀತಿಪಾತ್ರಳೂ ಆದ ರಾಧೆಯು ಅವನ ವಕ್ಷಸ್ಥಲದಲ್ಲಿಯೇ ನೆಲಸಿರುವಳು.

ವಿದ್ಯಾಧಿಷ್ಠಾತೃದೇವೀ ಯಾ ಸಾವಿತ್ರೀ ಬ್ರಹ್ಮಣಃ ಪ್ರಿಯಾ ।
ಲಕ್ಷ್ಮೀರ್ನಾರಾಯಣಸ್ಯೈವ ಸರ್ವಸಂಪತ್ಸ್ವರೂಪಿಣೀ ॥ ೫೮ ॥

ಸರಸ್ವತೀ ದ್ವಿಧಾ ಭೂತ್ವಾ ಕೃಷ್ಣಸ್ಯ ಮುಖನಿರ್ಗತಾ ।
ಸಾವಿತ್ರೀ ಬ್ರಹ್ಮಣಃ ಕಾಂತಾ ಸ್ವಯಂ ನಾರಾಯಣಸ್ಯ ಚ ॥ ೫೯ ॥

ಬುದ್ಧ್ಯಧಿಷ್ಠಾತೃದೇವೀ ಯಾ ಜ್ಞಾನಸೂಃ ಶಕ್ತಿಸಂಯುತಾ ।
ಸಾ ದುರ್ಗಾ ಶೂಲಿನಃ ಕಾಂತಾ ತಸ್ಯಾ ಲಜ್ಜಾ ಕುತೋ ಗತಾ ॥ ೬೦ ॥

ಪ್ರಕೃತಿಃ ಪಂಚಧಾ ಭ್ರಾತರ್ಗೋಲೋಕೇ ಚ ಬಭೂವ ಹ ।
ಇಮಾಃ ಪ್ರಧಾನಾಃ ಕಲಯಾ ಬಭೂವುರ್ನೈಕಧಾ ಯತಃ ॥ ೬೧ ॥

---

೫೮. ವಿದ್ಯೆಗೆ ಅಧಿಷ್ಠಾತೃದೇವಿಯೆನಿಸಿದ ಸಾವಿತ್ರಿಯು ಬ್ರಹ್ಮನಿಗೆ ಪ್ರಿಯಳಾದಳು. ಸಕಲಸಂಪತ್ಸ್ವರೂಪಿಣಿಯಾದ ಲಕ್ಷ್ಮಿಯು ನಾರಾಯಣನಿಗೆ ಪ್ರಿಯಳಾದಳು.

೫೯. ಸರಸ್ವತಿಯು ಶ್ರೀಕೃಷ್ಣನ ಮುಖದಿಂದ ಎರಡು ರೂಪದಿಂದ ಹೊರಕ್ಕೆ ಬಂದಳು. ಸಾವಿತ್ರಿಯೆಂಬ ಹೆಸರಿನಿಂದ ಬ್ರಹ್ಮನ ಪ್ರಿಯಳಾಗಿಯೂ, ಸರಸ್ವತಿಯೆಂಬ ಹೆಸರಿನಿಂದ ನಾರಾಯಣನಿಗೆ ಪ್ರಿಯಳಾಗಿಯೂ, ವಿಖ್ಯಾತಳಾದಳು.

೬೦. ಬುದ್ಧಿಗೆ ಅಧಿಷ್ಠಾತೃದೇವಿಯೂ, ಜ್ಞಾನಕ್ಕೆ ಮಾತೆಯೂ, ಶಕ್ತಿಗೆ ಆಶ್ರಯಳೂ ಆದ ದುರ್ಗಿಯು ಶಂಕರನಿಗೆ ಪ್ರಿಯಳಾದವಳು. ಆ ದುರ್ಗಿಗೆ ಲಜ್ಜಾದಿಗಳು ಎಲ್ಲಿಯೋಯಿತು.

೬೧. ಎಲೈ ಸಹೋದರನೇ, ಹೀಗೆ ಗೋಲೋಕದಲ್ಲಿ ಪ್ರಕೃತಿಯು ಮುಖ್ಯವಾಗಿ ಐದು ಬಗೆಯಾದಳು. ಪ್ರಕೃತಿಯ ಕಲೆಯಿಂದ ಅಸಂಖ್ಯದೇವಿಯರ ಉತ್ಪತ್ತಿಯಾಯಿತು.

ವಿಪ್ರೇಂದ್ರ ನಿತ್ಯಂ ವೈಕುಂಠಂ ಬ್ರಹ್ಮಾಂಡಾತ್ಪರಮುಚ್ಯತೇ ।
ಅವಿನಾಶಿಸ್ಥಲಂ ಶಶ್ವಲ್ಲಯೇ ಪ್ರಾಕೃತಿಕೇ ಧ್ರುವಂ ॥ ೬೨ ॥

ತತ್ರ ನಾರಾಯಣೋ ದೇವಃ ಕೃಷ್ಣಾರ್ಧಾಂಶಶ್ಚತುರ್ಭುಜಃ ।
ವನಮಾಲೀ ಪೀತವಾಸಾಃ ಶಕ್ತ್ಯಾ ವೈ ಪದ್ಮಯಾ ಸಹ ॥ ೬೩ ॥

ಸ್ವಯಂ ಕೃಷ್ಣಶ್ಚ ಗೋಲೋಕೇ ದ್ವಿಭುಜಃ ಶ್ಯಾಮಸುಂದರಃ ।
ಸಸ್ಮಿತೋ ಮುರಲೀಹಸ್ತೋ ರಾಧಾವಕ್ಷಸ್ಥಲಸ್ಥಿತಃ ॥ ೬೪ ॥

ಶಶ್ವದ್ಗೋಪಗೋಪೀಭಿಃ ಸಂಯುಕ್ತೋ ಗೋಪರೂಪಧೃಕ್ ।
ಪರಿಪೂರ್ಣತಮಃ ಶ್ರೀಮಾನ್ನಿರ್ಗುಣಃ ಪ್ರಕೃತೇಃ ಪರಃ ॥ ೬೫ ॥

ಸ್ವೇಚ್ಛಾಮಯಸ್ಸ್ವತಂತ್ರಸ್ತು ಪರಮಾನಂದರೂಪಧೃಕ್ ।
ಸುರಾಃ ಕಲೋದ್ಭವಾ ಯಸ್ಯ ಷೋಡಶಾಂಶೋ ಮಹಾವಿರಾಟ್ ॥ ೬೬ ॥

---

೬೨. ವಿಪ್ರೋತ್ತಮನೇ, ಬ್ರಹ್ಮಾಂಡದಿಂದಾಚೆಗೆ ನಿತ್ಯವಾದ ವೈಕುಂಠವಿರುವುದು. ಪ್ರಾಕೃತಿಕ ಪ್ರಳಯದಲ್ಲಿ ಆ ಲೋಕವು ನಾಶವಾಗುವುದಿಲ್ಲ.

೬೩. ಅಲ್ಲಿ ಶ್ರೀಕೃಷ್ಣನ ಅರ್ಧಾಂಶನೂ, ಚತುರ್ಭುಜನೂ ಆದ ನಾರಾಯಣನು, ವನಮಾಲೆಯನ್ನು ಧರಿಸಿ, ಪೀತಾಂಬರವನ್ನುಟ್ಟು ತನ್ನ ಶಕ್ತಿಸ್ವರೂಪಿಣಿಯಾದ ಲಕ್ಷ್ಮಿಯೊಡನಿರುವನು.

೬೪. ನೀಲಮೇಘಶ್ಯಾಮನೂ, ದ್ವಿಭುಜನೂ ಆದ ಶ್ರೀಕೃಷ್ಣನು ಗೋಲೋಕದಲ್ಲಿ ಮುರಳೀಧರನಾಗಿ, ನಗುಮುಖದಿಂದ ರಾಧೆಯ ವಕ್ಷಃಸ್ಥಳದಲ್ಲಿರುವನು.

೬೫. ಒಮ್ಮೊಮ್ಮೆ ಗೋಪರೂಪಧರನಾಗಿ ಗೋವುಗಳೊಡನೆಯೂ, ಗೋಪಗೋಪಿಯರೊಡನೆಯೂ ವಿಹರಿಸುವನು, ಆದರೂ ಪರಿಪೂರ್ಣಸ್ವರೂಪನಾದ ಅವನು ನಿರ್ಗುಣನೂ ಪ್ರಕೃತಿಗಿಂತ ಶ್ರೇಷ್ಠನೂ ಆಗಿರುವನು.

೬೬. ಸ್ವೇಚ್ಛಾಮಯನೂ, ಸ್ವತಂತ್ರನೂ ಆದುದರಿಂದ ಪರಮಾನಂದ ರೂಪವನ್ನು ಧರಿಸುವನು. ಯಾವ ಪರಮಾತ್ಮನ ಹದಿನಾರನೆಯ ಒಂದಂಶದಿಂದ ಮಹಾವಿರಾಟ್ಪುರುಷನ ಅವತಾರವಾಯಿತೋ ಅವನ ಕಲೆಯಿಂದಲೇ ದೇವತೆಗಳೆಲ್ಲ ಉತ್ಪನ್ನರಾದರು.

ಯತೋ ಭವಂತಿ ವಿಶ್ವಾನಿ ಸ್ಥೂಲಸೂಕ್ಷ್ಮಾದಿಕಾನಿ ಚ ।
ಪುನಸ್ತತ್ರ ಪ್ರಲೀಯನ್ತ ಏವಮೇವ ಮುಹುರ್ಮುಹುಃ ॥ ೬೭ ॥

ಗೋಲೋಕ ಊರ್ಧ್ವಂ ವೈಕುಂಠಾತ್ಪಂಚಾಶತ್ಕೋಟಿಯೋಜನೈಃ ।
ನಾಸ್ತಿ ಲೋಕಸ್ತದೂರ್ಧ್ವಂ ಚ ನಾಸ್ತಿ ಕೃಷ್ಣಾತ್ಪರಃ ಪ್ರಭುಃ ॥ ೬೮ ॥

ಇದಂ ಶ್ರುತಂ ಶಂಭುವಕ್ತ್ರಾನ್ಮಯಾ ತೇ ಕಥಿತಂ ದ್ವಿಜ ।
ಕ್ಷಣಂ ತಿಷ್ಠಾಧುನಾ ಭ್ರಾತರೀಶ್ವರಃ ಸುರತೋನ್ಮುಖಃ ॥ ೬೯ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ತೃತೀಯೇ ಗಣಪತಿಖಂಡೇ
ನಾರದನಾರಾಯಣಸಂವಾದೇ ಗಣೇಶ ಪರಶುರಾಮಸಂವಾದೋ
ನಾಮ ದ್ವಿಚತ್ವಾರಿಂಶತ್ತಮೋಽಧ್ಯಾಯಃ

---

೬೭. ಆ ಪರಮಾತ್ಮನಿಂದಲೇ ಸ್ಥೂಲ ಸೂಕ್ಷ್ಮಾದಿ ನಿಖಿಲ ವಿಶ್ವವೂ ಪುನ ಪುನಃ ವ್ಯಕ್ತವಾಗಿ ಅವನಲ್ಲಿಯೇ ಲಯವಾಗುವುದು.

೬೮. ಗೋಲೋಕವು ವೈಕುಂಠಕ್ಕಿಂತ ಐವತ್ತುಕೋಟಿಯೋಜನ ಮೇಲು ಭಾಗದಲ್ಲಿದೆ. ಅದಕ್ಕಿಂತ ಮೇಲೆ ಬೇರೆ ಲೋಕವಿಲ್ಲ. ಶ್ರೀಕೃಷ್ಣನಿಗಿಂತ ಅಧಿಕ ವಾದ ದೈವ ಬೇರೆಯಿಲ್ಲ.

೬೯. ಎಲೈ ಬ್ರಾಹ್ಮಣನೇ, ಈಶ್ವರನ ಮುಖದಿಂದ ಕೇಳಿದ ತತ್ವಾಂಶ ವನ್ನು ನಿನಗೆ ಹೇಳಿರುವೆನು. ಸಹೋದರನೇ ಈಗಲಾದರೂ ಕ್ಷಣಕಾಲ ನಿಲ್ಲು. ಈಶ್ವರನು ರತ್ಯಾಸಕ್ತನಾಗಿರುವನು.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಗಣಪತಿಖಂಡದಲ್ಲಿ ಪರಶುರಾಮ
ಮತ್ತು ಗಣಪತಿಯ ಸಂವಾದರೂಪವಾದ ನಲವತ್ತೆರಡನೆಯ
ಅಧ್ಯಾಯವು ಮುಗಿದುದು.

ನಲವತ್ತೆರಡನೆಯ ಅಧ್ಯಾಯದ ಸಾರಾಂಶ

'ಪಾರ್ವತಿಪರಮೇಶ್ವರರು ರತಿಸುಖಾಸಕ್ತರಾಗಿರುವುದರಿಂದ ಒಳಗೆ ಹೋಗಕೂಡದೆಂದು' ಗಣಪತಿಯು ಪರಶುರಾಮನನ್ನು ತಡೆಯಲು, ಪರಶುರಾಮನು 'ತ್ರಿಗುಣಾತೀತರೂ, ನಿರ್ವಿಕಲ್ಪರೂ, ನಿಷ್ಕಾಮರೂ, ಆದ ಪ್ರಕೃತಿಪುರುಷರಿಗೆ ರತಿಸುಖದಲ್ಲಿ ಆಸಕ್ತಿಯೆಂದರೇನು? ಪುತ್ರಸದೃಶನಾದ ತಾನು ಆ ಮಾತಾಪಿತೃಗಳನ್ನು ಆ ಸಮಯದಲ್ಲಿ ನೋಡುವುದರಿಂದ ಅವರಿಗೆ ಲಜ್ಜೆಯಾಗುವುದೆಂದರೇನು? ಎಂದು ಆಕ್ಷೇಪಮಾಡಿದನು. ಅದಕ್ಕೆ ಗಣಪತಿಯು 'ತ್ರಿಗುಣಾತೀತರಾದ ಪ್ರಕೃತಿಪುರುಷರಿಗೆ ಕಾಮಾದಿ ವಿಕಾರಗಳಿಲ್ಲದಿದ್ದರೂ ಸೃಷ್ಟ್ಯುನ್ಮುಖರಾದ ಅವರು ಸಗುಣರಾಗುವುದರಿಂದ ಸಕಲ ವಿಕಾರಗಳಿಗೂ ಆಶ್ರಯರಾಗುವರು. ಆದುದರಿಂದ ಪ್ರಕೃತಿಪುರುಷರಿಗೆ ಅಭಿನ್ನರಾದ ಪಾರ್ವತಿಪರಮೇಶ್ವರರಿಗೂ ಲಜ್ಜಾದಿ ವಿಕಾರಗಳಿರುವುದರಿಂದ ಅವರ ಏಕಾಂತ ಸುಖವನ್ನು ಭಂಗಗೊಳಿಸಬೇಡ' ಎಂದು ಹೇಳಿ ಪರಶುರಾಮನಿಗೆ ಸೃಷ್ಟಿತತ್ತ್ವವನ್ನು ತಿಳಿಸಿದನು

॥ ಓಂ ॥

॥ ಶ್ರೀ ಗಣೇಶಾಯ ನಮಃ ॥

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಗಣಪತಿಖಂಡೇ

॥ ತ್ರಿಚತ್ವಾರಿಂಶತ್ತಮೋಽಧ್ಯಾಯಃ ॥

॥ ನಾರಾಯಣ ಉವಾಚ ॥

ಗಣೇಶವಚನಂ ಶ್ರುತ್ವಾ ಸ ತದಾ ರಾಗತಃ ಸುಧೀಃ ।
ಪರ್ಶುಹಸ್ತಸ್ಸ ವೈ ರಾಮೋ ನಿರ್ಭಯೋ ಗಂತುಮುದ್ಯತಃ ॥ ೧ ॥

ಗಣೇಶ್ವರಸ್ತದಾ ದೃಷ್ಟ್ವಾ ಶೀಘ್ರಮುತ್ಥಾಯ ಯತ್ನತಃ ।
ವಾರಯಾಮಾಸ ಸ ಪ್ರೀತ್ಯಾ ಚಕಾರ ವಿನಯಂ ಪುನಃ ॥ ೨ ॥

ರಾಮಸ್ತಂ ಪ್ರೇರಯಾಮಾಸ ಹುಂ ಕೃತ್ವಾತು ಪುನಃ ಪುನಃ ।
ಬಭೂವ ಚ ತತಸ್ತತ್ರ ವಾಗ್ಯುದ್ಧಂ ಹಸ್ತಕರ್ಷಣೈಃ ॥ ೩ ॥

ನಲವತ್ತಮೂರನೆಯ ಅಧ್ಯಾಯವು

೧. ನಾರಾಯಣ :— ಶಿವನ ದರ್ಶನಾಕಾಂಕ್ಷಿಯಾದ ಪರಶುರಾಮನು ಗಣೇಶನ ಮಾತನ್ನು ಕೇಳಿ ಕೈಯ್ಯಲ್ಲಿ ಕೊಡಲಿಯನ್ನು ಹಿಡಿದು ನಿರ್ಭಯನಾಗಿ ಒಳಗೆ ಹೋಗಲಾರಂಭಿಸಿದನು.

೨. ಆಗ ಗಣಪತಿಯು ಜಾಗ್ರತೆಯಾಗಿ ಮೇಲಕ್ಕೆದ್ದು, ಪರಶುರಾಮನನ್ನು ಹೋಗಬೇಡವೆಂದು ತಡೆದು ಮತ್ತೊಮ್ಮೆ ವಿನಯಪೂರ್ವಕವಾಗಿ ವಿಜ್ಞಾಪಿಸಿಕೊಂಡನು

೩. ಪರಶುರಾಮನಾದರೋ ಮತ್ತೆ ಮತ್ತೆ ಹುಂಕಾರಮಾಡಿ ಅವನನ್ನು ಬೆದರಿಸಿದನು. ಆಗ ಅವರಿಬ್ಬರಿಗೂ ಮಾತಿಗೆ ಮಾತು ಬೆಳೆದು ಒಬ್ಬರ ಕೈಯ್ಯನ್ನು ಮತ್ತೊಬ್ಬರು ಹಿಡಿದೆಳೆಯಲಾರಂಭಿಸಿದರು.

ಪರ್ಶುನಿಕ್ಷೇಪಣಂ ಕರ್ತುಂ ಮನಶ್ಚಕ್ರೇ ಭೃಗುಸ್ತದಾ ।
ಹಾಹಾಕೃತ್ವಾ ಕಾರ್ತಿಕೇಯೋ ಬೋಧಯಾಮಾಸ ಸಂಸದಿ ॥ ೪ ॥

ಅವ್ಯರ್ಥಮಸ್ತ್ರಂ ಹೇ ಭ್ರಾತರ್ಗುರುಪುತ್ರೇ ಕಥಂ ಕ್ಷಿಪೇಃ ।
ಗುರುವದ್ಗುರುಪುತ್ರಂ ಚ ಮಾ ಭವಾನ್ಹಂತುಮರ್ಹತಿ ॥ ೫ ॥

ಪರ್ಶುಂ ಕ್ಷಿಪಂತಂ ಕುಪಿತಂ ರಕ್ತಪದ್ಮದಲೇಕ್ಷಣಂ ।
ಗಣೇಶೋ ರೋಧಯಾಮಾಸ ನಿವರ್ತಸ್ವೇತ್ಯುವಾಚ ತಂ ॥ ೬ ॥

ಪುನರ್ಗಣೇಶಂ ರಾಮಶ್ಚ ಪ್ರೇರಯಾಮಾಸ ಕೋಪತಃ ।
ಪಪಾತ ಪುರತೋ ವೇಗಾನ್ಮಾನಹೀನೋ ಗಜಾನನಃ ॥ ೭ ॥

ಗಜಾನನಃ ಸಮುತ್ಥಾಯ ಧರ್ಮಂ ಕೃತ್ವಾತು ಸಾಕ್ಷಿಣಂ ।
ಪುನಸ್ತಂ ಬೋಧಯಾಮಾಸ ಜಿತಕ್ರೋಧಃ ಶಿವಾತ್ಮಜಃ ॥ ೮ ॥

---

೪. ಆಗ ಭಾರ್ಗವನು ಗಣಪತಿಯನ್ನು ಕೊಡಲಿಯಿಂದ ಹೊಡೆಯಲು ಮೇಲಕ್ಕೆತ್ತಿದಾಗ, ಷಣ್ಮುಖನು "ಹೋ ಹೋ ನಿಲ್ಲಿಸು, ನಿಲ್ಲಿಸು" ಎಂದು ಪರಶುರಾಮನನ್ನು ಸಾಂತ್ವನಗೊಳಿಸಿದನು.

೫. ಎಲೈ ಸಹೋದರನೇ, ನಿನ್ನ ಗುರುವಿನ ಮಗನಾದ ಗಣಪತಿಯ ಮೇಲೆ ವ್ಯರ್ಥವಾಗಿ ಅಸ್ತ್ರಪ್ರಯೋಗವನ್ನೇಕೆ ಮಾಡುವೆ? ಗುರುವಿನಂತೆ ಗುರುಪುತ್ರನನ್ನೂ ಕೂಡ ವಧೆಮಾಡುವುದುಚಿತವಲ್ಲ.

೬. ಷಡಾನನನು ಹೀಗೆ ಹೇಳಿದರೂ, ಕೋಪದಿಂದ ಕೆಂದಾವರೆಯಂತಿರುವ ಕಣ್ಣುಳ್ಳ ಪರಶುರಾಮನು ಕೊಡಲಿಯನ್ನು ಪುನಃ ಮೇಲಕ್ಕೆತ್ತಲು, ಗಣೇಶನು ಒಳಗೆ ಹೋಗಬೇಡ ನಿಲ್ಲು, ಎಂದು ಪುನಃ ಹೇಳಿದನು.

೭. ಆಗ ಪರಶುರಾಮನು ಕೋಪದಿಂದ ಗಣಪತಿಯನ್ನು ನೂಕಲು, ಅವನು ಎಲ್ಲರೆದುರಿನಲ್ಲಿ ವೇಗದಿಂದ ಕೆಳಕ್ಕೆ ಬಿದ್ದು ಮಾನ ಕಳೆದುಕೊಂಡನು.

೮. ಆದರೂ, ಜಿತೇಂದ್ರಿಯನೂ, ಶಿವನಪುತ್ರನೂ ಆದ ಗಣಪತಿಯು ಮೇಲಕ್ಕೆದ್ದು ಧರ್ಮಪುರುಷನ ಸಾಕ್ಷಿಯಾಗಿ, ಪರಶುರಾಮನನ್ನು ಕುರಿತಿಂತೆಂದನು.

ನಿವರ್ತಸ್ವ ನಿವರ್ತಸ್ವೇತ್ಯುಚ್ಚಾರ್ಯ ಚ ಪುನಃ ಪುನಃ ।
ಪ್ರವೇಶನೇ ತೇ ಕಾ ಶಕ್ತಿರೀಶ್ವರಾಜ್ಞಾಂ ವಿನಾ ಪ್ರಭೋ ॥ ೯ ॥

ಮಮ ಭ್ರಾತಾ ತ್ವಮತಿಥಿರ್ವಿದ್ಯಾಸಂಬಂಧತೋ ಧ್ರುವಂ ।
ಈಶ್ವರಪ್ರಿಯಶಿಷ್ಯಶ್ಚ ಸೋಽಥಂ ವೈ ತೇನ ಹೇತುನಾ ॥ ೧೦ ॥

ನಹ್ಯಹಂ ಕಾರ್ತವೀರ್ಯಶ್ಚ ಭೂಪಾಸ್ತೇ ಕ್ಷುದ್ರಜಂತವಃ ।
ಅತೋ ವಿಪ್ರ ನ ಜಾನಾಸಿ ಮಾಂ ಚ ವಿಶ್ವೇಶ್ವರಾತ್ಮಜಂ ॥ ೧೧ ॥

ಕ್ಷಣಂ ತಿಷ್ಠ ನಿವರ್ತಸ್ವ ಸಮರೇ ಬ್ರಾಹ್ಮಣಾತಿಥೇ ।
ಕ್ಷಣಾಂತರೇ ತ್ವಯಾ ಸಾರ್ಧಂ ಯಾಸ್ಯಾಮೀಶ್ವರಸನ್ನಿಧಿಂ ॥ ೧೨ ॥

॥ ನಾರಾಯಣ ಉವಾಚ ॥

ಹೇರಂಬವಚನಂ ಶ್ರುತ್ವಾ ಪ್ರಜಹಾಸ ಪುನಃ ಪುನಃ ।
ಪರ್ಶುಂ ಕ್ಷೇಪ್ತುಂ ಮನಶ್ಚಕ್ರೇ ಪ್ರಣಮ್ಯ ಹರಿಶಂಕರೌ ॥ ೧೩ ॥

---

೯. ಎಲೈ ಬ್ರಾಹ್ಮಣನೇ, "ಈಶ್ವರನ ಅಪ್ಪಣೆಯಿಲ್ಲದೆ ಒಳಕ್ಕೆ ಹೋಗಲು ನಿನಗೆ ಯಾವ ಯೋಗ್ಯತೆಯಿದೆ. ಹಿಂತಿರುಗು ಹಿಂತಿರುಗು" ಎಂದು ಮತ್ತೆ ಮತ್ತೆ ತಡೆದನು.

೧೦. ನೀನು ವಿದ್ಯಾಸಂಬಂಧದಿಂದ ನನ್ನ ಸಹೋದರನೂ, ಅತಿಥಿಯೂ, ಈಶ್ವರನ ಪ್ರಿಯಶಿಷ್ಯನೂ ಆದುದರಿಂದ ನಿನ್ನ ಈ ಅತಿಕ್ರಮವನ್ನು ಸಹಿಸಿದೆ.

೧೧. ನನ್ನನ್ನು ಕಾರ್ತವೀರ್ಯನೆಂದಾಗಲೀ, ಕ್ಷುದ್ರರಾದ ಕ್ಷತ್ರಿಯರೆಂದಾಗಲೀ ತಿಳಿಯಬೇಡ. ಎಲೈ ಬ್ರಾಹ್ಮಣನೇ. ನಾನು ವಿಶ್ವೇಶ್ವರನ ಸುತನಾದ ಗಣಪತಿ ಯೆಂಬುದನ್ನರಿಯೆಯಾ ?

೧೨. ಆದುದರಿಂದ ಎಲೈ ಅತಿಥಿಯಾದ ಬ್ರಾಹ್ಮಣನೇ ಹಿಂತಿರುಗಿ ಕ್ಷಣಕಾಲ ನಿಲ್ಲು, ಇನ್ನೊಂದು ಕ್ಷಣದಲ್ಲಿ ನಾನು ಬಂದು ನಿನ್ನನ್ನು ಈಶ್ವರನ ಸನ್ನಿಧಿಗೆ ಕರೆದೊಯ್ಯುವೆನು.

೧೩. ನಾರಾಯಣ :—ವಿಘ್ನೇಶ್ವರನ ಮಾತನ್ನು ಕೇಳಿ ಪರಶುರಾಮನು ಮತ್ತೆ ಮತ್ತೆ ಅವನನ್ನು ಹಾಸ್ಯಮಾಡುತ್ತ, ಶ್ರೀಹರಿಹರರಿಗೆ ವಂದಿಸಿ, ಕೊಡಲಿ ಯನ್ನು ಅವನ ಮೇಲೆ ಪ್ರಯೋಗಿಸಲು ಮತ್ತೊಮ್ಮೆ ಮನಸ್ಸು ಮಾಡಿದನು.

ಪರ್ಶುಂ ಕ್ಷಿಪಂತಂ ಕೋಪೇನ ತಂ ಚ ರಾಮಂ ಗಜಾನನಃ ।
ದೃಷ್ಟ್ವಾ ಮುಮೂರ್ಷುಂ ದೇವೇಶೋ ಧರ್ಮಂ ಕೃತ್ವಾತು ಸಾಕ್ಷಿಣಂ ॥

ಯೋಗೇನ ವರ್ಧಯಾಮಾಸ ಶುಂಡಾಂ ತಾಂ ಕೋಟಿಯೋಜನಾಂ ।
ಯೋಗೀಂದ್ರಸ್ತತ್ರ ಸಂಶಿಷ್ಟ್ವಾ ಭ್ರಾಮಯಿತ್ವಾ ಪುನಃ ಪುನಃ ॥ ೧೫ ॥

ಶತಧಾ ವೇಷ್ಟಯಿತ್ವಾ ತು ಭ್ರಾಮಯಿತ್ವಾತು ತತ್ರ ವೈ ।
ಊರ್ಧ್ವಮುತ್ತೋಲ್ಯ ವೇಗೇನ ಕ್ಷುದ್ರಾಹಿಂ ಗರುಡೋ ಯಥಾ ॥ ೧೬ ॥

ಸಪ್ತದ್ವೀಪಾಂಶ್ಚ ಶೈಲಾಂಶ್ಚ ಮೇರುಂ ಚಾಖಿಲಸಾಗರಾನ್ ।
ಕ್ಷಣೇನ ದರ್ಶಯಾಮಾಸ ರಾಮಂ ಯೋಗಪರಾಹತಂ ॥ ೧೭ ॥

ಹಸ್ತಪಾದಾದ್ಯನಾಥಂ ತಂ ಜಡಂ ಸರ್ವಾಂಗಕಂಪಿತಂ ।
ಪುನಸ್ತಂ ಭ್ರಾಮಯಾಮಾಸ ದರ್ಪಿತಂ ದರ್ಪನಾಶನಃ ॥ ೧೮ ॥

೧೪-೧೫. ಆಗ ದೇವದೇವನಾದ ಗಜಾನನನು, ಧರ್ಮಪುರುಷನ ಸಾಕ್ಷಿಯಾಗಿ ಕೋಪದಿಂದ ತನ್ನ ಮೇಲೆ ಕೊಡಲಿಯನ್ನು ಎತ್ತಿ ಸಾಯಲು ಸಿದ್ಧನಾಗಿರುವ ಪರಶುರಾಮನನ್ನು ನೋಡಿ, ಯೋಗಶಕ್ತಿಯಿಂದ ತನ್ನ ಸೊಂಡಿಲನ್ನು ಕೋಟಿಯೋಜನ ದೀರ್ಘವಾಗಿ ಬೆಳಸಿ, ಅದರಿಂದ ಪರಶುರಾಮನನ್ನು ಸುತ್ತಿ ಮತ್ತೆ ಮತ್ತೆ ತಿರುಗಿಸಿದನು.

೧೬. ನೂರು ಸುತ್ತು ಸುತ್ತಿ, ಎಲ್ಲ ಕಡೆಯಲ್ಲೂ ತಿರುಗಿಸಿ, ಗರುಡನು ಕ್ಷುದ್ರವಾದ ಸರ್ಪವೊಂದನ್ನು ಮೇಲಕ್ಕೆತ್ತಿ ಬಿಸುಡುವಂತೆ ಪರಶುರಾಮನನ್ನು ಗಣಪತಿಯು ವೇಗದಿಂದ ಮೇಲಕ್ಕೆಸೆದನು.

೧೭. ಪರಶುರಾಮನಿಗೆ ತನ್ನ ಯೋಗಬಲದಿಂದ ಸಪ್ತದ್ವೀಪಗಳನ್ನೂ, ಸಪ್ತಕುಲಪರ್ವತಗಳನ್ನೂ, ಸಪ್ತಸಮುದ್ರಗಳನ್ನೂ, ಮೇರುಪರ್ವತವನ್ನು ಕ್ಷಣಕಾಲದಲ್ಲಿಯೇ ಗಣಪತಿಯು ತೋರಿಸಿದನು

೧೮. ಗರ್ವಾಂಧನಾದ ಆ ಪರಶುರಾಮನ ಹಸ್ತಪಾದಾದ್ಯವಯವಗಳನ್ನು ತನ್ನ ಸೊಂಡಿಲಿನಿಂದ ಬಿಗಿದು, ಚಲಿಸದಂತೆ ಮಾಡಿ, ಗಡಗಡನೆ ನಡುಗುತ್ತಿರುವ ಅವನನ್ನು ದರ್ಪನಾಶಕನಾದ ಗಜಾನನನು ಗಿರ್ರನೆ ತಿರುಗಿಸಿದನು.

ಭೂರ್ಲೋಕಂ ಚ ಭುವರ್ಲೋಕಂ ಸ್ವರ್ಲೋಕಂ ಚ ಸುರೇಶ್ವರಃ ।
ಜನೋಲೋಕಂ ತಪೋಲೋಕಂ ಧ್ರುವಲೋಕಂ ಚ ತತ್ಪರಂ ॥ ೧೯ ॥

ಗೌರೀಲೋಕಂ ಶಂಭುಲೋಕಂ ದರ್ಶಯಾಮಾಸ ನಾರದ ।
ದರ್ಶಯಿತ್ವಾ ತು ಬ್ರಹ್ಮಾಂಡಂ ಸ ಪಪೌ ಸಪ್ತಸಾಗರಾನ್ ॥ ೨೦ ॥

ಪುನರುದ್ಗಿರಣಂ ಚಕ್ರೇ ಸ ನಕ್ರಮಕರೋದಕಂ ।
ತತ್ರ ತಂ ಪಾತಯಾಮಾಸ ಗಂಭೀರೇ ಸಾಗರೋದಕೇ ॥ ೨೧ ॥

ಮುಮೂರ್ಷುಂ ತಂ ಸಂತರಂತಂ ಪುನರ್ಜಗ್ರಾಹ ಲೀಲಯಾ ।
ಪುನಸ್ತತ್ರ ಭ್ರಾಮಯಿತ್ವಾ ಬ್ರಹ್ಮಾಂಡಾದೂರ್ಧ್ವಮುಚ್ಚಕಂ ॥ ೨೨ ॥

ವೈಕುಂಠಂ ದರ್ಶಯಾಮಾಸ ಸ ಲಕ್ಷ್ಮೀಕಂ ಚತುರ್ಭುಜಂ ।
ಕ್ಷಣಂ ತತ್ರ ಭ್ರಾಮಯಿತ್ವಾ ಯೋಗೀಂದ್ರೋ ಯೋಗಮಾಯಯಾ ॥ ೨೩ ॥

೧೯–೨೦. ಎಲೈ ನಾರದನೇ, ಗಣಪತಿಯು ಪರಶುರಾಮನಿಗೆ ಭೂಲೋಕ, ಭುವರ್ಲೋಕ, ಸ್ವರ್ಲೋಕ, ಜನೋಲೋಕ, ತಪೋಲೋಕ, ಧ್ರುವಲೋಕ, ಗೌರೀ ಲೋಕ, ಮತ್ತು ಶಂಭುಲೋಕಗಳನ್ನು ತೋರಿಸಿ, ಬ್ರಹ್ಮಾಂಡವನ್ನೇ ತಿರುಗಿಸಿ ತಾನು ಸಪ್ತಸಮುದ್ರಗಳ ನೀರನ್ನೂ ಪಾನಮಾಡಿದನು.

೨೧. ಮಾನು ಮೊಸಳೆಗಳಿಂದ ಪರಿಪೂರ್ಣವಾದ ಆ ಸಾಗರದ ಜಲವನ್ನು ಪುನಃ ಕಕ್ಕಿ ಅತಿ ಗಂಭೀರವಾದ ಆ ನೀರಿನಲ್ಲಿ ಪರಶುರಾಮನನ್ನು ಮುಳುಗಿಸಿದನು.

೨೨. ಸಾಯುವಸ್ಥಿತಿಗೆ ಬಂದು, ಸಮುದ್ರವನ್ನು ದಾಟುತ್ತಿದ್ದ ಆ ಭಾರ್ಗವ ನನ್ನು ಪುನಃ ಲೀಲಾಜಾಲವಾಗಿ ಸೊಂಡಿಲಿನಿಂದ ಬಂಧಿಸಿ ಬ್ರಹ್ಮಾಂಡದ ಮೇಲು ಭಾಗದಲ್ಲೆಲ್ಲ ಅವನನ್ನು ಸುತ್ತಾಡಿಸಿದನು.

೨೩. ಯೋಗಿಶ್ರೇಷ್ಠನಾದ ಗಣಪತಿಯು ಯೋಗಮಾಯೆಯಿಂದ ಪರಶು ರಾಮನಿಗೆ ವೈಕುಂಠವನ್ನೂ, ಅಲ್ಲಿ ಲಕ್ಷ್ಮೀಸಹಿತನೂ, ಚತುರ್ಭುಜನೂ ಆದ ನಾರಾಯಣನನ್ನೂ ತೋರಿಸಿದನು.

ಪುನಃ ಕರಂ ಚ ಯೋಗೇನ ವರ್ಧಯಾಮಾಸ ಲೀಲಯಾ ।
ಗೋಲೋಕಂ ದರ್ಶಯಾಮಾಸ ವಿರಜಾಂ ಚ ನದೀಶ್ವರೀಂ ॥ ೨೪ ॥

ವೃಂದಾವನಂ ಶೃಂಗಶತಂ ಶೈಲೇಂದ್ರಂ ರಾಸಮಂಡಲಂ ।
ಗೋಪೀಗೋಪಾದಿಭಿಃ ಸಾರ್ಧಂ ಶ್ರೀಕೃಷ್ಣಂ ಶ್ಯಾಮಸುಂದರಂ ॥ ೨೫ ॥

ದ್ವಿಭುಜಂ ಮುರಲೀಹಸ್ತಂ ಸಸ್ಮಿತಂ ಸುಮನೋಹರಂ ।
ರತ್ನಸಿಂಹಾಸನಸ್ಥಂ ಚ ರತ್ನಭೂಷಣಭೂಷಿತಂ ॥ ೨೬ ॥

ತೇಜಸಾ ಕೋಟಿಸೂರ್ಯಾಭಂ ರಾಧಾವಕ್ಷಸ್ಥಲಸ್ಥಿತಂ ।
ಏವಂ ಕೃಷ್ಣಂ ದರ್ಶಯಿತ್ವಾ ಪ್ರಣಮ್ಯ ಚ ಪುನಃ ಪುನಃ ॥ ೨೭ ॥

ಕ್ಷಣೇನ ಲಂಬಮಾನಂ ಚ ಭ್ರಾಮಯಿತ್ವಾ ಪುನಃ ಪುನಃ ।
ದೃಷ್ಟ್ವಾ ಕೃಷ್ಣಂ ಚೇಷ್ಟದೇವಂ ಸರ್ವಪಾಪಪ್ರಣಾಶನಂ ॥ ೨೮ ॥

---

೨೪. ಪುನಃ ಲೀಲಾಮಾತ್ರದಿಂದ ಸೊಂಡಿಲನ್ನು ಇನ್ನೂ ದೀರ್ಘವಾಗಿ ಬೆಳೆಸಿ, ಗೋಲೋಕವನ್ನೂ, ವಿರಜಾನದಿಯನ್ನೂ ಪರಶುರಾಮನಿಗೆ ತೋರಿಸಿದನು.

೨೫. ವೃಂದಾವನವನ್ನೂ, ಶತಶೃಂಗಪರ್ವತವನ್ನೂ, ರಾಸಮಂಡಲವನ್ನೂ, ಗೋಪಗೋಪಿಯರೊಡಗೂಡಿದ ಶ್ರೀಕೃಷ್ಣನ ಶ್ಯಾಮಸುಂದರಮೂರ್ತಿಯನ್ನೂ ಪರಶುರಾಮನು ನೋಡಿದನು.

೨೬. ಹಸ್ತದ್ವಯಗಳಲ್ಲಿ ಕೊಳಲನ್ನು ಹಿಡಿದು, ಮನೋಹರವಾದ ರತ್ನಾಭರಣಗಳನ್ನು ತೊಟ್ಟು, ಸ್ಮಿತವದನನಾಗಿ ಶ್ರೀಕೃಷ್ಣನು ರತ್ನಸಿಂಹಾಸನವಲ್ಲಿ ಕುಳಿತಿದ್ದನು.

೨೭. ಕೋಟಿಸೂರ್ಯರಂತೆ ತೇಜಸ್ವಿಯಾಗಿ ರಾಧೆಯ ವಕ್ಷಃಸ್ಥಲದಲ್ಲಿ ಕುಳಿತಿದ್ದ ಶ್ರೀಕೃಷ್ಣಪರಮಾತ್ಮನನ್ನು ಪರಶುರಾಮನಿಗೆ ತೋರಿಸಿ ಮತ್ತೆ ಮತ್ತೆ ನಮಸ್ಕಾರಮಾಡಿದನು.

೨೮. ಕ್ಷಣಕಾಲ ಸುಮ್ಮನಿದ್ದು ಪುನಃ ಸುತ್ತಾಡಿಸಿ, ಇಷ್ಟದೇವತೆಯೂ, ಸರ್ವಪಾಪಹರನೂ ಆದ ಶ್ರೀಕೃಷ್ಣನನ್ನು ಮತ್ತೊಮ್ಮೆ ತೋರಿಸಿ ಪರಶುರಾಮನ ಭ್ರೂಣಹತ್ಯಾದಿ ಮಹಾಪಾಪಗಳನ್ನೆಲ್ಲ ದೂರಗೊಳಿಸಿದನು.

ನ ಭವೇದ್ಯಾತನಾ ನಷ್ಟಾ ವಿನಾ ಭೋಗೇನ ಪಾಪಜಾ ।
ಸ್ವಲ್ಪಾಂ ಚ ಬುಭುಜೇ ರಾಮೋ ಗತಾಽನ್ಯಾ ಕೃಷ್ಣದರ್ಶನಾತ್ ॥ ೨೯ ॥

ಕ್ಷಣೇನ ಚೇತನಾಂ ಪ್ರಾಪ್ಯ ಭುವಿ ವೇಗಾತ್ಪಪಾತ ಹ ।
ಬಭೂವ ದೂರೀಭೂತಂ ಚ ಗಣೇಶಸ್ತಂಭನಂ ಭೃಗೋಃ ॥ ೩೦ ॥

ಸಸ್ಮಾರ ಕವಚಂ ಸ್ತೋತ್ರಂ ಗುರುದತ್ತಂ ಸುದುರ್ಲಭಂ ।
ಅಭೀಷ್ಟದೇವಂ ಶ್ರೀಕೃಷ್ಣಂ ಗುರುಂ ಶಂಭುಂ ಜಗದ್ಗುರುಂ ॥ ೩೧ ॥

ಚಿಕ್ಷೇಪ ಪರ್ಶುಮವ್ಯರ್ಥಂ ಶಿವತುಲ್ಯಂ ಚ ತೇಜಸಾ ।
ಗ್ರೀಷ್ಮಮಧ್ಯಾಹ್ನಮಾರ್ತಂಡಪ್ರಭಾ ಶತಗುಣಂ ಮುನೇ ॥ ೩೨ ॥

---

೨೯. ಪಾಪದಿಂದ ಉತ್ಪನ್ನವಾದ ಯಾತನೆಯು ಭೋಗಿಸಿದ ಹೊರತು ಪರಿಹಾರವಾಗುವುದಿಲ್ಲ. ಪರಶುರಾಮನೂ ಕೂಡ ಸ್ವಲ್ಪವನ್ನನುಭವಿಸಿ, ಉಳಿದ ಪಾಪವನ್ನು ಶ್ರೀಕೃಷ್ಣನ ದರ್ಶನದಿಂದ ಕಳೆದುಕೊಂಡನು.

೩೦. ಶ್ರೀಕೃಷ್ಣನ ದರ್ಶನವಾದನಂತರ ಪರಶುರಾಮನು ಕ್ಷಣಮಾತ್ರದಲ್ಲಿಯೇ ಚೇತನವನ್ನು ಹೊಂದಿ ಭೂಮಿಯ ಮೇಲೆ ವೇಗದಿಂದ ಬಿದ್ದನು. ಆಗ ಭಾರ್ಗವನಿಗೆ ಗಣೇಶನ ಬಂಧನವೆಲ್ಲ ದೂರವಾಯಿತು.

೩೧. ಪರಶುರಾಮನು, ಗುರುವು ತನಗೆ ಉಪದೇಶಿಸಿದ, ದುರ್ಲಭವಾದ ಕವಚಸ್ತೋತ್ರಗಳನ್ನು ಸ್ಮರಿಸಿಕೊಂಡು, ಇಷ್ಟದೇವನಾದ ಶ್ರೀಕೃಷ್ಣನನ್ನೂ, ಜಗದ್ಗುರುವಾದ ಶಂಕರನನ್ನೂ ಪುನಃ ಪುನಃ ಧ್ಯಾನಿಸಿದನು.

೩೨. ಅನಂತರ ತೇಜಸ್ಸಿನಲ್ಲಿ ಶಿವನಿಗೆ ಸದೃಶವಾಗಿಯೂ, ಗ್ರೀಷ್ಮಋತುವಿನ ಮಧ್ಯಾಹ್ನದ ಸೂರ್ಯನಿಗಿಂತ ನೂರರಷ್ಟು ಪ್ರಚಂಡವಾಗಿಯೂ, ಇರುವ ತನ್ನ ಅಮೋಘವಾದ ಕೊಡಲಿಯನ್ನು ಪರಶುರಾಮನು ಗಣಪತಿಯ ಮೇಲೆ ಪ್ರಯೋಗಿಸಿದನು.

ಪಿತುರವ್ಯರ್ಥಮಸ್ತ್ರಂ ಚ ದೃಷ್ಟ್ವಾ ಗಣಪತಿಃ ಸ್ವಯಂ ।
ಜಗ್ರಾಹ ವಾಮದಂತೇನ ನಾಸ್ತ್ರಂ ವ್ಯರ್ಥಂ ಚಕಾರ ಹ ॥ ೩೩ ॥

ನಿಪಾತ್ಯ ಪರ್ಶುರ್ವೇಗೇನ ಛಿತ್ವಾ ದಂತಂ ಸಮೂಲಕಂ ।
ಜಗಾಮ ರಾಮಹಸ್ತಂ ಚ ಮಹಾದೇವಬಲೇನ ಚ ॥ ೩೪ ॥

ಹಾಹೇತಿ ಶಬ್ದಮಾಕಾಶೇ ದೇವಾಶ್ಚಕ್ರುರ್ಮಹಾಭಿಯಾ ।
ವೀರಭದ್ರಃ ಕಾರ್ತಿಕೇಯಃ ಕ್ಷೇತ್ರಪಾಲಾಶ್ಚ ಪಾರ್ಷದಾಃ ॥ ೩೫ ॥

ಪಪಾತ ಭೂಮೌ ದಂತಶ್ಚ ಸರಕ್ತಃ ಶಬ್ದಯಂಸ್ತದಾ ।
ಪಪಾತ ಗೈರಿಕಾಯುಕ್ತೋ ಯಥಾ ಸ್ಫಟಿಕಪರ್ವತಃ ॥ ೩೬ ॥

---

೩೩. ತನ್ನ ತಂದೆಯ ಅನುಗ್ರಹದಿಂದ ಅಮೋಘವಾದ ಆ ಪರಶುವನ್ನು ಗಣಪತಿಯು ತನ್ನ ವಾಮದಂತದಿಂದ ಸ್ವಾಗತಿಸಿದನು. ಆ ಅಸ್ತ್ರವನ್ನು ವ್ಯರ್ಥಗೊಳಿಸಲಿಲ್ಲ.

೩೪. ಆ ಕೊಡಲಿಯಾದರೋ ಅತಿವೇಗದಿಂದ ಆ ಗಣಪತಿಯ ಒಂದು ದಂತವನ್ನು ಕತ್ತರಿಸಿ, ಮಹಾದೇವನ ಅನುಗ್ರಹದಿಂದ ಪುನಃ ಪರಶುರಾಮನ ಕೈಸೇರಿತು.

೩೫. ಆಗ ಆಕಾಶದಲ್ಲಿ ದೇವತೆಗಳೂ, ಶಂಕರನ ಮಂದಿರದಲ್ಲಿ ವೀರಭದ್ರ, ಕಾರ್ತಿಕೇಯ, ಕ್ಷೇತ್ರಪಾಲ ಮತ್ತು ಪಾರ್ಷದರೂ ಭೀತರಾಗಿ 'ಹೋ ಹೋ' ಎಂದು ಕೂಗಿಕೊಂಡರು.

೩೬. ಇತ್ತ ಗಣಪತಿಯ ರಕ್ತಮಯವಾದ ದಂತವು, ಸ್ಫಟಿಕ ಪರ್ವತದ ಗೈರಿಕಾದಿಧಾತುಮಿಶ್ರಿತಶಿಖರವು ಬೀಳುವಂತೆ, ಭೂಮಿಯ ಮೇಲೆ ದೊಪ್ಪನೆ ಬಿದ್ದಿತು.

ಶಬ್ದೇನ ಮಹತಾ ವಿಪ್ರ ಚಕಂಪೇ ಪೃಥಿವೀ ಭಿಯಾ ।
ಕೈಲಾಸಸ್ಥಾ ಜನಾಃ ಸರ್ವೇ ಮೂರ್ಛಾಮಾಪುಃ ಕ್ಷಣಂ ಭಿಯಾ ॥ ೩೭ ॥

ನಿದ್ರಾ ಬಭಂಜ ತತ್ಕಾಲೇ ನಿದ್ರೇಶಸ್ಯ ಜಗತ್ಪ್ರಭೋಃ ।
ಆಜಗಾಮ ಬಹಿಃ ಶಂಭುಃ ಪಾರ್ವತ್ಯಾ ಸಹ ಸಂಭ್ರಮಾತ್ ॥ ೩೮ ॥

ಪುರೋ ದದರ್ಶ ಹೇರಂಬಂ ಲೋಹಿತಾಸ್ಯಂ ಕ್ಷತೇನ ತಂ ।
ಭಗ್ನದಂತಂ ಜಿತಕ್ರೋಧಂ ಸಸ್ಮಿತಂ ಲಜ್ಜಿತಂ ಮುನೇ ॥ ೩೯ ॥

ಪಪ್ರಚ್ಛ ಪಾರ್ವತೀ ಶೀಘ್ರಂ ಸ್ಕಂದಂ ಕಿಮಿತಿ ಪುತ್ರಕ ।
ಸ ಚ ತಾಂ ಕಥಯಾಮಾಸ ವಾರ್ತಾಂ ಪೌರ್ವಾಪರೀಂ ಭಿಯಾ ॥ ೪೦ ॥

ಚುಕೋಪ ದುರ್ಗಾ ಕೃಪಯಾ ರುರೋದ ಚ ಮುಹುರ್ಮುಹುಃ ।
ಉವಾಚ ಶಂಭೋಃ ಪುರತಃ ಪುತ್ರಂ ಕೃತ್ವಾ ಸ್ವವಕ್ಷಸಿ ॥ ೪೧ ॥

---

೩೭. ಎಲೈ ನಾರದನೇ, ಆ ಮಹಾಶಬ್ದಕ್ಕೆ ಹೆದರಿ ಭೂಮಿಯು ನಡುಗಿ ಹೋಯಿತು. ಕೈಲಾಸದಲ್ಲಿದ್ದವರೆಲ್ಲರೂ ಕ್ಷಣಕಾಲ ಭಯದಿಂದ ಮೂರ್ಛೆಗೊಂಡರು.

೩೮. ಈ ಕೋಲಾಹಲದಿಂದ ನಿದ್ರೆಗೊಡೆಯನೂ ಜಗತ್ಪ್ರಭುವೂ ಆದ ಶಿವನ ನಿದ್ರಾಭಂಗವಾಯಿತು. ಆಗ ಶಿವನು ಪಾರ್ವತಿಯೊಡನೆ ಸಂಭ್ರಮದಿಂದ ಹೊರಕ್ಕೆ ಬಂದನು

೩೯. ಅಲ್ಲಿ ದಂತಭಂಗದಿಂದ ರಕ್ತಸುರಿದು, ಮುಖವೆಲ್ಲ ಕೆಂಪಾಗಿ, ನಾಚಿಕೆಯಿಂದ ತಲೆತಗ್ಗಿಸಿಕೊಂಡಿರುವ ಜಿತೇಂದ್ರಿಯನಾದ ಗಣಪತಿಯನ್ನು ನೋಡಿದನು.

೪೦. ಕೂಡಲೇ ಪಾರ್ವತಿಯು ಷಣ್ಮುಖನನ್ನು ಕುರಿತು ನಡೆದ ಸಮಾಚಾರವೇನೆಂದು ಕೇಳಲು, ಅವನು ಪೂರ್ವಾಪರ ಸಮಾಚಾರವನ್ನೆಲ್ಲ ವಿಸ್ತಾರವಾಗಿ ತಿಳಿಸಿದನು.

೪೧. ಆಗ ಪಾರ್ವತಿಯು ಪರಶುರಾಮನ ಮೇಲೆ ಕೋಪಗೊಂಡು, ಗಣಪತಿಯ ವಿಷಯದಲ್ಲಿ ಕರುಣೆದೋರಿ ಅಳುತ್ತ, ಅವನನ್ನು ತನ್ನ ವಕ್ಷಃಸ್ಥಲದಲ್ಲಿ ಅಪ್ಪಿಕೊಂಡು ಈಶ್ವರನನ್ನು ಕುರಿತಿಂತೆಂದಳು.

ಸಂಬೋಧ್ಯ ಶಂಭುಂ ಶೋಕೇನ ಭಿಯಾ ವಿನಯಪೂರ್ವಕಂ ।
ಉವಾಚ ಪ್ರಣತಾ ಸಾಧ್ವೀ ಪ್ರಣತಾರ್ತಿಹರಂ ಪತಿಂ ॥ ೪೨ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ತೃತೀಯೇ ಗಣಪತಿಖಂಡೇ ನಾರದನಾರಾಯಣಸಂವಾದೇ ಗಣೇಶದಂತಭಂಗಕಾರಣವರ್ಣನಂ ನಾಮ ತ್ರಿಚತ್ವಾರಿಂಶತ್ತಮೋಽಧ್ಯಾಯಃ

---

೪೨. ಸಾಧ್ವೀಶಿರೋಮಣಿಯಾದ ಪಾರ್ವತಿಯು, ಶರಣಾಗತ ರಕ್ಷಕನಾದ ಶಂಕರನನ್ನು ಕುರಿತು ಭಯವಿನಯಗಳಿಂದ, ಸಾಷ್ಟಾಂಗಪೂರ್ವಕವಾಗಿ ಇಂತು ವಿಜ್ಞಾಪಿಸಿಕೊಂಡಳು.

ಇಲ್ಲಿಗೆ ಬ್ರಹ್ಮವೈವರ್ತಮಹಾಪುರಾಣದ ಗಣಪತಿಖಂಡದಲ್ಲಿ ಗಣೇಶನ ದಂತಭಂಗಕ್ಕೆ ಕಾರಣವನ್ನು ತಿಳಿಸುವ ನಲವತ್ತಮೂರನೆಯ ಅಧ್ಯಾಯವು ಮುಗಿದುದು.

ನಲವತ್ತಮೂರನೆಯ ಅಧ್ಯಾಯದ ಸಾರಾಂಶ

ಗಣಪತಿಯು ಪರಶುರಾಮನನ್ನು ಎಷ್ಟು ತಡೆದರೂ, ಅವನು ಕೇಳದೆ ಮುನ್ನುಗ್ಗುತ್ತಿರಲು, ಅವನ ಕೈಹಿಡಿದು ನಿಲ್ಲಿಸಿದನು. ಆಗ ಕುಪಿತನಾದ ಪರಶುರಾಮನು ಗಣಪತಿಯನ್ನು ಹೊಡೆಯುವೆನೆಂದು ಕೊಡಲಿಯನ್ನು ಮೇಲಕ್ಕೆತ್ತಲು ಅಷ್ಟರಲ್ಲಿಯೇ ಷಣ್ಮುಖನು ಬಂದು ಅವನನ್ನು ಸಮಾಧಾನಗೊಳಿಸಿದನು. ಅದುವರೆಗೂ ಶಾಂತನಾಗಿದ್ದ ಗಣಪತಿಯು ಪರಶುರಾಮನ ದರ್ಪವನ್ನು ಶಮನಗೊಳಿಸಬೇಕೆಂದು, ತನ್ನ ಸೊಂಡಿಲನ್ನು ಯೋಗಶಕ್ತಿಯಿಂದ ಉದ್ದವಾಗಿ ಬೆಳೆಸಿ, ಅದರಿಂದ ಪರಶುರಾಮನನ್ನು ಹಿಂಗಟ್ಟು ಮುಂಗಟ್ಟು ಕಟ್ಟಿ, ಸಪ್ತಸಮುದ್ರಗಳಲ್ಲೂ ಅವನನ್ನು ಮುಳುಗಿಸಿ, ಭೂಮಿಗಿಂತ ಮೇಲೆ ಏಳು ಲೋಕಗಳಲ್ಲಿಯೂ ಗಿರ್ರನೆ ತಿರುಗಿಸಿ ಕೊನೆಗೆ ಭೂಮಿಯ ಮೇಲೆ ಬಿಸಾಡಿದನು. ಸ್ವಲ್ಪಹೊತ್ತಿನ ಮೇಲೆ ಚೇತನಗೊಂಡ ಪರಶುರಾಮನು ಶ್ರೀಕೃಷ್ಣನ ಕವಚವನ್ನು ಸ್ಮರಿಸಿಕೊಂಡು, ಶಂಕರನನ್ನು ಧ್ಯಾನಿಸಿ, ಗಣಪತಿಯ ಮೇಲೆ ತನ್ನ ಪರಶುವನ್ನು ಪ್ರಯೋಗಿಸಲು, ಅದರ ಏಟಿನಿಂದ ಗಣಪತಿಯ ಒಂದು ದಂತವು ಭಗ್ನವಾಯಿತು. ಆ ಮಹಾಧ್ವನಿಯಿಂದ ಈಶ್ವರನಿಗೆ ರತಿಭಂಗವಾಗಿ ಪಾರ್ವತಿಯೊಡನೆ ಹೊರಕ್ಕೆ ಬಂದು, ಷಣ್ಮುಖನಿಂದ ನಡೆದ ಸಮಾಚಾರವನ್ನೆಲ್ಲ ವಿಶದವಾಗಿ ತಿಳಿದನು. ಪಾರ್ವತಿಯು ಪುತ್ರನನ್ನು ಅಪ್ಪಿಕೊಂಡು ಕರುಣೆಯಿಂದ ಗೋಳಾಡತೊಡಗಿದಳು.

॥ ಓಂ ॥

॥ ಶ್ರೀ ಗಣೇಶಾಯ ನಮಃ ॥

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಗಣಪತಿಖಂಡೇ

॥ ಚತುಶ್ಚತ್ವಾರಿಂಶತ್ತಮೋಽಧ್ಯಾಯಃ ॥

॥ ಪಾರ್ವತ್ಯುವಾಚ ॥

ಸರ್ವೇ ಜಾನಂತಿ ಜಗತಿ ದುರ್ಗಾಂ ಶಂಕರಕಿಂಕರೀಂ ।
ಅಪೇಕ್ಷಾರಹಿತಾ ದಾಸೀ ತಸ್ಯಾ ವೈ ಜೀವನಂ ವೃಥಾ ॥ ೧ ॥

ಈಶ್ವರಸ್ಯ ಸಮಾಃ ಸರ್ವಾಸ್ತೃಣಪರ್ವತಜಾತಯಃ ।
ದಾಸೀ ಪುತ್ರಸ್ಯ ಶಿಷ್ಯಸ್ಯ ದೋಷಃ ಕಸ್ಯೇತಿ ಚ ಪ್ರಭೋ ॥ ೨ ॥

ವಿಚಾರಂ ಕರ್ತುಮುಚಿತಂ ತ್ವಂ ಚ ಧರ್ಮವಿದಾಂ ವರಃ ।
ವೀರಭದ್ರಃ ಕಾರ್ತಿಕೇಯಃ ಪಾರ್ಷದಾಃ ಸಂತಿ ಸಾಕ್ಷಿಣಃ ॥ ೩ ॥

ನಲವತ್ತನಾಲ್ಕನೆಯ ಅಧ್ಯಾಯವು

೧. ಪಾರ್ವತಿ :—ಎಲೈ ಪರಶಿವನೇ, ಜಗತ್ತಿನಲ್ಲೆಲ್ಲರೂ ದುರ್ಗೆಯು ಶಂಕರನ ಕಿಂಕರಳೆಂಬುದನ್ನು ತಿಳಿದಿರುವರು. ನಿಷ್ಕಾಮಳಾದ ಆ ದಾಸಿಯ ಜೀವನವು ಈಗ ವ್ಯರ್ಥವಾಯಿತಲ್ಲ.

೨. ಈಶ್ವರನಾದ ನಿನಗೆ ತೃಣ, ಪರ್ವತ ಮತ್ತು ಪ್ರಾಣಿಗಳೆಲ್ಲರೂ ಒಂದೇ ಸಮನಲ್ಲವೇ ? ಈಗ ನಿನ್ನ ದಾಸಿಯಪುತ್ರನಾದ ಗಣಪತಿಯ ದೋಷವೇ? ಶಿಷ್ಯನಾದ ಪರಶುರಾಮನ ದೋಷವೇ?

೩. ಧರ್ಮಜ್ಞಾನಿಯಾದ ನೀನು ಇದನ್ನು ಪರ್ಯಾಲೋಚಿಸುವುದುಚಿತ. ವೀರಭದ್ರ, ಕಾರ್ತಿಕೇಯ, ಮತ್ತು ಪಾರ್ಷದರೆಲ್ಲರೂ ಸಾಕ್ಷಿಯಾಗಿರುವರು.

ಸಾಕ್ಷ್ಯೇ ಮಿಥ್ಯಾಂ ಕೋ ವದೇದ್ವಾದ್ಯಾವೇಷಾಂ ಭ್ರಾತರೌ ಸಮೌ ।
ಸಾಕ್ಷ್ಯೇ ಸಮೋ ಶತ್ರುಮಿತ್ರೇ ಸತಾಂ ಧರ್ಮನಿರೂಪಣೇ ॥ ೪ ॥

ಸಾಕ್ಷೀ ಸಭಾಯಾಂ ಯತ್ಸಾಕ್ಷ್ಯಂ ಜಾನನ್ನಪ್ಯನ್ಯಥಾ ವದೇತ್ ।
ಕಾಮತಃ ಕ್ರೋಧತೋ ವಾಪಿ ಲೋಭೇನ ಚ ಭಯೇನ ಚ ॥ ೫ ॥

ಸ ಯಾತಿ ಕುಂಭೀಪಾಕಂ ಚ ನಿಪಾತ್ಯ ಶತಪೂರುಷಂ ।
ತೈಶ್ಚ ಸಾರ್ಧಂ ವಸೇತ್ತತ್ರ ಯಾವಚ್ಚಂದ್ರದಿವಾಕರಂ ॥ ೬ ॥

ಅಹಂ ವಿಬೋಧಿತುಂ ಶಕ್ತಾ ನಿರ್ಣೇತ್ರೀ ಚ ದ್ವಯೋರಪಿ ।
ತಥಾಪಿ ತವ ಸಾಕ್ಷಾತ್ತು ಮಮಾಜ್ಞಾ ನಿಂದಿತಾ ಶ್ರುತೌ ॥ ೭ ॥

ಕಿಂಕರಾಣಾಂ ಪ್ರಭಾ ತತ್ರ ನೃಪೇ ವಸತಿ ಸಂಸದಿ ।
ಉದಿತೇ ಭಾಸ್ಕರೇ ಪೃಥ್ವ್ಯಾಂ ಖದ್ಯೋತೋ ಹಿ ಯಥಾ ಪ್ರಭೋ ॥ ೮ ॥

---

೪. ಎಲ್ಲರಿಗೂ ಇವರಿಬ್ಬರು ಸಹೋದರರೂ ಒಂದೇ ಆಗಿರುವಾಗ ಯಾರು ತಾನೆ ಸುಳ್ಳುಸಾಕ್ಷ್ಯವಿತ್ತಾರು? ಶತ್ರುಮಿತ್ರರಲ್ಲಿ ಸಮಾನವಾದ ಸಾಕ್ಷಿ ನುಡಿಯುವುದೇ ಸದ್ಧರ್ಮವೆನಿಸುವುದು.

೫-೬. ನಡೆದ ಸಮಾಚಾರವನ್ನು ಚೆನ್ನಾಗಿ ತಿಳಿದಿದ್ದರೂ ಕಾಮಕ್ರೋಧ ದಿಂದಾಗಲೀ, ಲೋಭ ಭಯದಿಂದಾಗಲಿ ಸಭೆಯಲ್ಲಿ ಸುಳ್ಳುಸಾಕ್ಷ್ಯ ಹೇಳುವವರು ಕುಂಭೀಪಾಕವೆಂಬ ನರಕದಲ್ಲಿ ತನ್ನ ವಂಶದ ನೂರು ಪುರುಷರೊಡನೆ, ಬಿದ್ದು ಚಂದ್ರಸೂರ್ಯರಿರುವ ತನಕ ನರಳುವರು.

೭. ಇವರಿಬ್ಬರಲ್ಲಿ ಯಾರು ತಪ್ಪೆಂದು ನಿರ್ಣಯಿಸಿ ಬುದ್ಧಿಹೇಳಲು ನಾನು ಶಕ್ತಳಾಗಿದ್ದೇನೆ. ಆದರೂ ನಿನ್ನ ಎದುರಿನಲ್ಲಿ ನಾನು ನಿರ್ಣಯಿಸುವುದು ಶ್ರುತಿ ವಿರುದ್ಧವಾದದು.

೮. ರಾಜನು ಸಭೆಯಲ್ಲಿರುವಾಗ ಸೇವಕರ ಪ್ರಭಾವವು, ಭೂಮಂಡಲದಲ್ಲಿ ಸೂರ್ಯನು ಉದಯಿಸಿರುವಾಗ ಮಿಣುಕು ಹುಳುಗಳ ಪ್ರಭೆಯಂತೆ ನಿಸ್ತೇಜ ವಾಗಿರುವುದು.

ಸುಚಿರಂ ತಪಸಾ ಪ್ರಾಪ್ತಂ ತ್ವದೀಯಂ ಚರಣಾಂಬುಜಂ ।
ಪರಿತ್ಯಾಗಭಯೇನೈವ ಸಂತತಂ ಭೀತಯಾ ಮಯಾ　　॥ ೯ ॥

ಯತ್ಕಿಂಚಿತ್ಕೋಪಶೋಕಾಭ್ಯಾಮುಕ್ತಂ ಮೋಹೇನ ತತ್ಪರಂ ।
ತತ್ಕ್ಷಮಸ್ವ ಜಗನ್ನಾಥ ಪುತ್ರಸ್ನೇಹಾಚ್ಚ ದಾರುಣಾತ್　　॥ ೧೦ ॥

ತ್ವಯಾ ಯದಿ ಪರಿತ್ಯಕ್ತಾ ತದಾ ಪುತ್ರೇಣ ತೇನ ಕಿಂ ।
ಸಾಧ್ವ್ಯಾಃ ಸದ್ವಂಶಜಾಯಾಶ್ಚ ಶತಪುತ್ರಾಧಿಕಃ ಪತಿಃ　　॥ ೧೧ ॥

ಅಸದ್ವಂಶಪ್ರಸೂತಾ ಯಾ ದುಶ್ಶೀಲಾ ಜ್ಞಾನವರ್ಜಿತಾ ।
ಸ್ವಾಮಿನಂ ಮನ್ಯತೇ ನಾಸೌ ಪಿತ್ರೋರ್ದೋಷೇಣ ಕುತ್ಸಿತಾ　　॥ ೧೨ ॥

---

೯. ಬಹಳ ಕಾಲ ತಪಸ್ಸುಮಾಡಿ ನಿನ್ನ ಚರಣಕಮಲಗಳ ಸೇವಕಿಯಾಗಿದ್ದೇನೆ. ಎಲ್ಲಿ ನನ್ನನ್ನು ನೀನು ತ್ಯಜಿಸುವೆಯೋ ಎಂದು ಯಾವಾಗಲೂ ಕಾತರಳಾಗಿದ್ದೇನೆ.

೧೦. ಎಲೈ ಜಗನ್ನಾಥನೇ, ಕೋಪಶೋಕದಿಂದಾಗಲೀ, ದಾರುಣವಾದ ಪುತ್ರಸ್ನೇಹದಿಂದಾಗಲೀ, ಮೂಢಳಾಗಿ ನಾನೇನಾದರೂ ಆಡಿದ್ದರೆ ಅದೆಲ್ಲವನ್ನೂ, ದಯವಿಟ್ಟು ಕ್ಷಮಿಸು

೧೧. ನೀನು ನನ್ನನ್ನು ತ್ಯಜಿಸಿದೆಯಾದರೆ, ನನಗೆ ಆ ಪುತ್ರನಿಂದಾಗ ಬೇಕಾದುದೇನು? ಸದ್ವಂಶದಲ್ಲಿ ಹುಟ್ಟಿದ ಸಾಧ್ವೀಶಿರೋಮಣಿಗೆ ಪತಿಯು ನೂರು ಮಕ್ಕಳಿಗಿಂತಲೂ ಮೇಲೆನಿಸುವನು.

೧೨. ದುಷ್ಟಕುಲದಲ್ಲಿ ಹುಟ್ಟಿ, ಜ್ಞಾನಹೀನಳಾಗಿ, ದುರಾಚಾರಪರಳಾದ ಸ್ತ್ರೀಯು, ತಾಯಿತಂದೆಯರ ದೋಷದಿಂದ ತನ್ನ ಪತಿಯನ್ನು ಗೌರವಿಸದೆ ಕುತ್ಸಿತಳೆನಿಸುವಳು.

ಕುತ್ಸಿತಂ ಪತಿತಂ ಮೂಢಂ ದರಿದ್ರಂ ರೋಗಿಣಂ ಜಡಂ ।
ಕುಲಜಾ ವಿಷ್ಣು ತುಲ್ಯಂ ಚ ಕಾಂತಂ ಪಶ್ಯತಿ ಸಂತತಂ ॥ ೧೩ ॥

ಹುತಾಶನೋ ವಾ ಸೂರ್ಯೋ ವಾ ಸರ್ವತೇಜಸ್ವಿನಾಂ ವರಃ ।
ಪತಿವ್ರತಾತೇಜಸಶ್ಚ ಕಲಾಂ ನಾರ್ಹಂತಿ ಷೋಡಶೀಂ ॥ ೧೪ ॥

ಮಹಾದಾನಾನಿ ಪುಣ್ಯಾನಿ ವ್ರತಾನ್ಯನಶನಾನಿ ಚ ।
ತಪಾಂಸಿ ಪತಿಸೇವಾಯಾಃ ಕಲಾಂ ನಾರ್ಹಂತಿ ಷೋಡಶೀಂ ॥ ೧೫ ॥

ಪುತ್ರೋ ವಾಪಿ ಪಿತಾ ವಾಪಿ ಬಂಧವೋsಥ ಸಹೋದರಃ ।
ಯೋಷಿತಾಂ ಕುಲಜಾತಾನಾಂ ನ ಕಶ್ಚಿತ್ಸ್ವಾಮಿನಃ ಸಮಃ ॥ ೧೬ ॥

ಇತ್ಯುಕ್ತ್ವಾ ಸ್ವಾಮಿನಂ ದುರ್ಗಾ ದದರ್ಶ ಪುರತೋ ಭೃಗುಂ ।
ಶಂಭೋಃ ಪದಾಬ್ಜಂ ಸೇವಂತಂ ನಿರ್ಭಯಂ ತಮುವಾಚ ಹ ॥ ೧೭ ॥

---

೧೩. ಪತಿಯು ಕುತ್ಸಿತನಾಗಲೀ, ಪತಿತನಾಗಲೀ, ಮೂಢನಾಗಲೀ, ದರಿದ್ರನಾಗಲೀ, ರೋಗಿಯಾಗಲೀ, ಜಡನಾಗಲೀ, ಕುಲಸ್ತ್ರೀಯು ಆ ಪತಿಯನ್ನು ವಿಷ್ಣುವಿಗೆ ಸಮಾನನೆಂದು ತಿಳಿಯುವಳು.

೧೪. ತೇಜಸ್ವಿಗಳಲ್ಲಿ ಶ್ರೇಷ್ಠನೆನಿಸಿದ ಅಗ್ನಿದೇವನಾಗಲೀ, ಸೂರ್ಯದೇವನಾಗಲೀ, ಪತಿವ್ರತೆಯ ತೇಜಸ್ಸಿನ ಹದಿನಾರನೆಯ ಒಂದಂಶಕ್ಕೂ ಸಮಾನರಾಗುವುದಿಲ್ಲ.

೧೫. ಷೋಡಶಮಹಾದಾನಗಳೂ, ಅನಶನಾದಿ ಪುಣ್ಯವ್ರತಗಳೂ ತಪಸ್ಸುಗಳೂ ಕೂಡ ಹೆಂಗಸಿಗೆ, ಪತಿಸೇವೆಯ ಹದಿನಾರನೆಯ ಒಂದು ಭಾಗ ಫಲವನ್ನೂ ಕೊಡಲಾರವು

೧೬. ಕುಲಸ್ತ್ರೀಯರಿಗೆ ಮಗನಾಗಲೀ, ತಂದೆಯಾಗಲೀ, ಬಂಧುವಾಗಲೀ ಸಹೋದರನಾಗಲೀ ಯಾರೂ ತನ್ನ ಪತಿಗೆ ಸಮರೆನಿಸುವುದಿಲ್ಲ.

೧೭. ಪಾರ್ವತಿಯು ತನ್ನ ಪತಿಯನ್ನು ಕುರಿತಿಂತೆಂದು, ಅನಂತರ ಆವನ ಪಾದಕಮಲಗಳನ್ನು ಸೇವಿಸುತ್ತಿದ್ದ ಭಾರ್ಗವನನ್ನು ಕುರಿತು ಈ ರೀತಿ ಹೇಳಲಾರಂಭಿಸಿದಳು.

|| ಪಾರ್ವತ್ಯುವಾಚ ||

ಅಹೋ ರಾಮ ಮಹಾಭಾಗ ಬ್ರಹ್ಮವಂಶ್ಯೋಽಸಿ ಪಂಡಿತಃ ।
ಪುತ್ರೋಽಸಿ ಜಮದಗ್ನೇಶ್ಚ ಶಿಷ್ಯೋ ವೈ ಯೋಗಿನಾಂ ಗುರೋಃ || ೧೮ ||

ಮಾತಾ ತೇ ರೇಣುಕಾ ಸಾಧ್ವೀ ಪದ್ಮಾಂಶಾ ಸತ್ಕುಲೋದ್ಭವಾ ।
ಮಾತಾಮಹೋ ವೈಷ್ಣವಶ್ಚ ಮಾತುಲಶ್ಚ ತತೋಽಧಿಕಃ || ೧೯ ||

ತ್ವಂ ಚ ರೇಣುಕಭೂಪಸ್ಯ ಮನುವಂಶೋದ್ಭವಸ್ಯ ಚ ।
ದೌಹಿತ್ರೋ ಮಾತುಲಃ ಸಾಧುಃ ಶೂರೋ ವಿಷ್ಣುಪದಾಶ್ರಯಃ || ೨೦ ||

ಕಸ್ಯ ದೋಷೇಣ ದುರ್ಧರ್ಷಸ್ತ್ವಂ ನ ಜಾನೇಽಪ್ಯಶುದ್ಧಧೀಃ ।
ಯೇಷಾಂ ದೋಷೈರ್ಜನೋ ದುಷ್ಟಸ್ತನ್ಮೃತೇ ಶುದ್ಧಮಾನಸಃ || ೨೧ ||

---

೧೮. ಪಾರ್ವತಿ :—ಎಲೈ ಮಹಾತ್ಮನಾದ ಪರಶುರಾಮನೇ, ನೀನು ಬ್ರಹ್ಮನ ವಂಶದಲ್ಲಿ ಹುಟ್ಟಿ, ಒಳ್ಳೆಯ ಪಂಡಿತನೂ, ಜಮದಗ್ನಿಯ ಪುತ್ರನೂ, ಯೋಗಿಗಳ ಗುರುವಾದ ಶಂಕರನ ಶಿಷ್ಯನೂ ಆಗಿದ್ದೀಯೆ.

೧೯. ನಿನ್ನ ತಾಯಿಯಾದ ರೇಣುಕೆಯು ಪದ್ಮಾಂಶಸಂಭೂತಳೂ, ಸತ್ಕುಲಪ್ರಸೂತಳೂ, ಪತಿವ್ರತಾಶಿರೋಮಣಿಯೂ ಆಗಿ ಕೀರ್ತಿಗಳಿಸಿದ್ದಾಳೆ. ನಿನ್ನ ತಾಯಿಯ ತಂದೆಯು ವಿಷ್ಣುಭಕ್ತನೂ, ಸೋದರಮಾವನು ಇನ್ನೂ ಅತಿಶಯವಾದ ಭಕ್ತನೂ ಆಗಿ ಪ್ರಸಿದ್ಧಿಪಡೆದಿದ್ದಾರೆ.

೨೦. ನೀನು ಮನುವಂಶದಲ್ಲಿ ಹುಟ್ಟಿದ ರೇಣುಕನೆಂಬ ರಾಜನ ಮಗಳ ಮಗನಾಗಿದ್ದೀಯೆ. ನಿನ್ನ ಸೋದರಮಾವನಾದರೋ ಸಾಧುಶಿರೋಮಣಿಯೂ, ಶೂರಾಗ್ರೇಸರನೂ, ಪರಮವೈಷ್ಣವನೂ ಆಗಿದ್ದಾನೆ.

೨೧. ಹೀಗಿರುವಾಗ ನೀನು ಯಾರ ದೋಷದಿಂದ ಅತ್ಯಂತ ಕ್ರೂರಿಯೂ, ದುರ್ಬುದ್ಧಿಯುಳ್ಳವನೂ ಆಗಿರುವೆಯೋ ನಾನರಿಯೆ. ಮೇಲೆ ಹೇಳಿದ ಹಿರಿಯರ ದೋಷದಿಂದ ಮನುಜನು ದುಷ್ಟನಾಗುವನು. ಅವರಲ್ಲಿ ದೋಷವಿಲ್ಲದಿದ್ದರೆ ಸದ್ಬುದ್ಧಿಯುತನಾಗುವನು.

ಅಮೋಘಂ ಪ್ರಾಪ್ಯ ಪರ್ಶುಂ ಚ ಗುರುಂ ಚ ಕರುಣಾನಿಧಿಂ ।
ಪರೀಕ್ಷಾಂ ಕ್ಷತ್ರಿಯೇ ಕೃತ್ವಾ ಬಭೂವಾಸ್ಯ ಸುತೇ ಪುನಃ ॥ ೨೨ ॥

ಗುರವೇ ದಕ್ಷಿಣಾ ದಾನಮುಚಿತಂ ಚ ಶ್ರುತೌ ಶ್ರುತಂ।
ಭಗ್ನೋ ದಂತಸ್ತತ್ಸುತಸ್ಯ ಛಿನ್ಧಿ ಮಸ್ತಕಮಪ್ಯಹೋ ॥ ೨೩ ॥

ಗಣೇಶ್ವರಂ ರಣೇ ಜಿತ್ವಾ ಸ್ಥಿತಶ್ಚೇದಾವಯೋಃ ಪುರಃ ।
ಸ ತ್ವಂ ಲಬ್ಧ್ವಾಶಿಷೋ ಲೋಕೇ ಪೂಜಿತೋಽಭೂರ್ಜಗತ್ತ್ರಯೇ ॥ ೨೪ ॥

ಪರ್ಶುನಾಽಮೋಘವೀರ್ಯೇಣ ಶಂಕರಸ್ಯ ವರೇಣ ಚ ।
ಹಂತುಂ ಶಕ್ತಃ ಸೃಗಾಲಶ್ಚ ಸಿಂಹಂ ಶಾರ್ದೂಲಮಾಖುಭುಕ್ ॥ ೨೫ ॥

---

೨೨. ಅಮೋಘಾಸ್ತ್ರವಾದ ಪರಶು(ಕೊಡಲಿ)ವನ್ನೂ, ಕರುಣಾನಿಧಿಯಾದ ಗುರುವನ್ನೂ ಪಡೆದು ಕ್ಷತ್ರಿಯರ ಸಂಹಾರದಿಂದ ಆ ಅಸ್ತ್ರಬಲವನ್ನು ಪರೀಕ್ಷಿಸಿ ಈಗ ಪುನಃ ಗುರುಪುತ್ರನಲ್ಲಿ ಆ ಅಸ್ತ್ರವನ್ನು ಪ್ರಯೋಗಿಸಿದೆಯಾ ?

೨೩. ಗುರುವಿಗೆ ಉಚಿತವಾದ ದಕ್ಷಿಣೆಯನ್ನು ಕೊಡಬೇಕೆಂದು ವೇದೋಕ್ತವಾಗಿದೆ. ಅದಕ್ಕೆ ಪ್ರತಿಯಾಗಿ ಗುರುಪುತ್ರನ ದಂತಭಂಗಮಾಡಿದೆ. ಹೋಗಲಿ ಅವನ ತಲೆಯನ್ನೂ ಕತ್ತರಿಸಿ ಬಿಡು.

೨೪. ನೀನು ಯುದ್ಧದಲ್ಲಿ ಗಣಪತಿಯನ್ನು ಗೆದ್ದು ನಮ್ಮಿಬ್ಬರ ಮುಂದೆ ನಿಂತೆಯಾದರೆ, ಎಲ್ಲರಿಂದಲೂ ಆಶೀರ್ವಾದ ಪಡೆದು ಮೂರುಲೋಕದಲ್ಲಿಯೂ ಪೂಜ್ಯನೆನಿಸುವೆ.

೨೫. ಶಂಕರನ ವರವನ್ನು ಪಡೆದು, ಅಮೋಘಶಕ್ತಿಯುಳ್ಳ ಪರಶುವನ್ನು ಹಿಡಿದರೆ, ನರಿಯು ಸಿಂಹವನ್ನೂ, ಬೆಕ್ಕು ಹುಲಿಯನ್ನೂ ಕೊಲ್ಲಲು ಸಮರ್ಥವಾಗುವುದು.

ತ್ವದ್ವಿಧಂ ಲಕ್ಷಕೋಟಿಂ ಚ ಹಂತುಂ ಶಕ್ತೋ ಗಣೇಶ್ವರಃ ।
ಜಿತೇಂದ್ರಿಯಾಣಾಂ ಪ್ರವರೋ ನ ಹಿ ಹಂತಿ ಚ ಮಕ್ಷಿಕಾಂ ॥ ೨೬ ॥

ತೇಜಸಾ ಕೃಷ್ಣ ತುಲ್ಯೋಽಯಂ ಕೃಷ್ಣಾಂಶಶ್ಚ ಗಣೇಶ್ವರಃ ।
ದೇವಾಶ್ಚಾನ್ಯೇ ಕೃಷ್ಣ ಕಲಾಃ ಪೂಜಾಸ್ಯ ಪುರತಸ್ತತಃ ॥ ೨೭ ॥

ವ್ರತಪ್ರಭಾವತಃ ಪ್ರಾಪ್ತಃ ಶಂಕರಸ್ಯ ವರೇಣ ಚ ।
ಶೋಕೇನಾತಿ ಕಠೋರೇಣ ನ ಹಿ ಸಂಪದ್ವಿನಾಪದಂ ॥ ೨೮ ॥

ಇತ್ಯುಕ್ತ್ವಾ ಪಾರ್ವತೀ ರೋಷಾತ್ತಂ ರಾಮಂ ಹಂತುಮುದ್ಯತಾ ।
ರಾಮಃ ಸಸ್ಮಾರ ತಂ ಕೃಷ್ಣಂ ಪ್ರಣಮ್ಯ ಮನಸಾ ಗುರುಂ ॥ ೨೯ ॥

ಏತಸ್ಮಿನ್ನಂತರೇ ದುರ್ಗಾ ದದರ್ಶ ಪುರತೋ ದ್ವಿಜಂ ।
ಅತೀವ ವಾಮನಂ ಬಾಲಂ ಸೂರ್ಯಕೋಟಿಸಮಪ್ರಭಂ ॥ ೩೦ ॥

---

೨೬. ನಿನ್ನಂಥ ಲಕ್ಷಕೋಟಿ ವೀರರನ್ನು ಗಣಪತಿಯು ಸಂಹರಿಸಲು ಶಕ್ತನಾಗಿದ್ದಾನೆ. ಆದರೆ ಜಿತೇಂದ್ರಿಯರಲ್ಲಿ ಅಗ್ರಗಣ್ಯನಾದ ಅವನು ಒಂದು ನೊಣವನ್ನೂ ಕೊಲ್ಲುವುದಿಲ್ಲ.

೨೭. ಶ್ರೀಕೃಷ್ಣನ ಅಂಶದಿಂದ ಅವತರಿಸಿರುವ ಈ ಗಣಪತಿಯು ತೇಜಸ್ಸಿನಲ್ಲಿ ಕೃಷ್ಣನಿಗೆ ಎಣೆಯಾಗಿದ್ದಾನೆ. ಎಲ್ಲ ದೇವತೆಗಳೂ ಶ್ರೀಕೃಷ್ಣನ ಕಲೆಯಿಂದ ಅವತರಿಸಿರುವುದರಿಂದ ಎಲ್ಲರಿಗೂ ಮೊದಲು ಈ ಗಣಪತಿಗೆ ಪೂಜೆ ಸಲ್ಲುವುದು.

೨೮. ಅತ್ಯಂತ ಕಷ್ಟಕರವಾದ ವ್ರತವನ್ನು ಮಾಡಿ, ಅದರ ಪ್ರಭಾವದಿಂದಲೂ ಶಂಕರನ ವರದಿಂದಲೂ ಈ ಪುತ್ರನನ್ನು ಪಡೆದೆ. ಕಷ್ಟಬರದೆ ಯಾರಿಗೂ ಸುಖ ದೊರೆಯದು.

೨೯. ಹೀಗೆ ಹೇಳುತ್ತ ಪಾರ್ವತಿಯು ಪರಶುರಾಮನನ್ನು ಕೊಲ್ಲಲು ಸಿದ್ಧಳಾದಳು. ಆಗ ಪರಶುರಾಮನು ಶ್ರೀಕೃಷ್ಣಪರಮಾತ್ಮನನ್ನು ನೆನೆಸಿಕೊಳ್ಳುತ್ತ ಮನಸ್ಸಿನಲ್ಲಿಯೇ ಗುರುವಿಗೆ ವಂದಿಸಿದನು.

೩೦. ಈ ಮಧ್ಯದಲ್ಲಿ ದುರ್ಗಾದೇವಿಯು ತನ್ನ ಮುಂದೆ ಕೋಟಿಸೂರ್ಯರಂತೆ ತೇಜಸ್ವಿಯಾದ ಬ್ರಾಹ್ಮಣವಟುವೊಬ್ಬನನ್ನು ನೋಡಿದಳು.

ಶುಕ್ಲದಂತಂ ಶುಕ್ಲವಸ್ತ್ರಂ ಶುಕ್ಲಯಜ್ಞೋಪವೀತಿನಂ ।
ದಂಡಿನಂ ಛತ್ರಿಣಂ ಚೈವ ಸುಪ್ರಭಂ ತಿಲಕೋಜ್ಜ್ವಲಂ ॥ ೩೧ ॥

ದಧತಂ ತುಲಸೀಮಾಲಾಂ ಸಸ್ಮಿತಂ ಸುಮನೋಹರಂ ।
ರತ್ನಕೇಯೂರವಲಯಂ ರತ್ನಮಾಲಾವಿಭೂಷಿತಂ ॥ ೩೨ ॥

ರತ್ನನೂಪುರ ಪಾದಂ ಚ ಸದ್ರತ್ನಮುಕುಟೋಜ್ಜ್ವಲಂ ।
ರತ್ನಕುಂಡಲಯುಗ್ಮಾಢ್ಯಗಂಡಸ್ಥಲವಿರಾಜಿತಂ ॥ ೩೩ ॥

ಸ್ಥಿರಮುದ್ರಾಂ ದರ್ಶಯಂತಂ ಭಕ್ತವಾಮಕರೇಣ ಚ ।
ದಕ್ಷಿಣೇಽಭಯಮುದ್ರಾಂ ಚ ಭಕ್ತೇಶಂ ಭಕ್ತವತ್ಸಲಂ ॥ ೩೪ ॥

ಬಾಲಿಕಾಬಾಲಕಗಣೈರ್ನಾಗರೈಃ ಸಸ್ಮಿತೈರ್ಯುತಂ ।
ಕೈಲಾಸವಾಸಿಭಿಃ ಸರ್ವೈರಾವೃದ್ಧೈರೀಕ್ಷಿತಂ ಮುದಾ ॥ ೩೫ ॥

---

೩೧. ಬಿಳುಪಾದ ಹಲ್ಲುಗಳುಳ್ಳ ಆ ಬಾಲಕನು ಧವಳಯಜ್ಞೋಪವೀತಧರನಾಗಿ, ಶುಭ್ರವಸ್ತ್ರವನ್ನುಟ್ಟು, ಕೈಯ್ಯಲ್ಲಿ ಛತ್ರಿ ಮತ್ತು ದಂಡವನ್ನು ಹಿಡಿದು, ಹಣೆಯಲ್ಲಿ ಉಜ್ಜ್ವಲವಾದ ತಿಲಕವನ್ನು ಧರಿಸಿ, ಶೋಭಿಸುತ್ತಿದ್ದನು.

೩೨. ರತ್ನದ ಬಾಹುಪುರಿಗಳನ್ನೂ, ರತ್ನವಲಯಗಳನ್ನೂ ತೊಟ್ಟು ಕಂಠದಲ್ಲಿರುವ ತುಲಸೀ ವನಮಾಲೆಯಿಂದಲೂ, ರತ್ನಹಾರದಿಂದಲೂ ಶೋಭಿತನಾಗಿ ನಗುಮುಖದಿಂದ ನಿಂತಿದ್ದನು.

೩೩. ಕಾಲುಗಳಲ್ಲಿ ರತ್ನದ ಗೊಲಸುಗಳನ್ನೂ, ತಲೆಯಲ್ಲಿ ರತ್ನದ ಕಿರೀಟವನ್ನೂ, ಧರಿಸಿದ್ದ ಆ ಬ್ರಹ್ಮಚಾರಿಯ ಕಪೋಲಗಳು ರತ್ನಕುಂಡಲಗಳಿಂದ ಶೋಭಿಸುತ್ತಿದ್ದವು.

೩೪. ಭಕ್ತರಿಗೊಡೆಯನೂ, ಭಕ್ತವತ್ಸಲನೂ, ಆದ ಆ ವಟುವು ವಾಮಹಸ್ತದಲ್ಲಿ ಸ್ಥಿರಮುದ್ರೆಯನ್ನೂ, ದಕ್ಷಿಣಹಸ್ತದಲ್ಲಿ ಅಭಯ ಮುದ್ರೆಯನ್ನೂ ಧರಿಸಿದ್ದನು.

೩೫. ಕೈಲಾಸವಾಸಿಗಳಾದ ಬಾಲಕರಾದಿಯಾಗಿ ವಯಸ್ಕರವರೆವಿಗೆ ಎಲ್ಲರೂ ನಗುಮುಖದಿಂದ ಆ ಬ್ರಹ್ಮಚಾರಿಯನ್ನು ಅನುಸರಿಸಿ ಬಂದು ನಿಂತಿದ್ದರು.

ತಂ ದೃಷ್ಟ್ವಾ ಸಂಭ್ರಮಾಚ್ಛಂಭುಃ ಸಭೃತ್ಯಃ ಸಹ ಪುತ್ರಕೈಃ ।
ಮೂರ್ಧ್ನಾ ಭಕ್ತ್ಯಾ ಪ್ರಾಣಮಚ್ಚ ದುರ್ಗಾಯೈ ದಂಡವದ್ಭುವಿ ॥ ೩೬ ॥

ಆಶಿಷಂ ಪ್ರದದೌ ಬಾಲಃ ಸರ್ವೇಭ್ಯೋ ವಾಂಛಿತಪ್ರದಾಂ ।
ತಂ ದೃಷ್ಟ್ವಾ ಬಾಲಿಕಾಃ ಸರ್ವೇ ಮಹಾಶ್ಚರ್ಯಂ ಯಯುರ್ಭಿಯಾ ॥ ೩೭ ॥

ದತ್ವಾ ತಸ್ಮೈ ಶಿವೋ ಭಕ್ತ್ಯಾ ತೂಪಚಾರಾಂಸ್ತು ಷೋಡಶ ।
ಪೂಜಾಂ ಚಕಾರ ಶ್ರುತ್ಯುಕ್ತಾಂ ಪರಿಪೂರ್ಣತಮಸ್ಯ ಚ ॥ ೩೮ ॥

ತುಷ್ಟಾವ ಕಾಣ್ವಶಾಖೋಕ್ತ ಸ್ತೋತ್ರೇಣ ನತಕಂಧರಃ ।
ಪುಲಕಾಂಕಿತಸರ್ವಾಂಗೋ ಭಗವಂತಂ ಸನಾತನಂ ॥ ೩೯ ॥

ರತ್ನಸಿಂಹಾಸನಸ್ಥಂ ಚ ಪ್ರಾವೋಚಚ್ಛಂಕರಃ ಸ್ವಯಂ ।
ಅತೀವ ತೇಜಸಾತ್ಯಂತಂ ಪ್ರಚ್ಛನ್ನಾಕೃತಿಮೇವ ಚ ॥ ೪೦ ॥

---

೩೬. ಅವನನ್ನು ನೋಡಿ ಶಂಕರನು ಪುತ್ರಪರಿವಾರದೊಡನೆ, ಭಕ್ತಿಯಿಂದ ತಲೆಬಾಗಿ ಭೂಮಿಯಮೇಲೆ ದಂಡಪ್ರಣಾಮಮಾಡಿದನು.

೩೭. ಅನಂತರ ಆ ಬ್ರಹ್ಮಚಾರಿಯು ಎಲ್ಲರಿಗೂ ಇಷ್ಟಾರ್ಥದಾಯಕವಾದ ಆಶೀರ್ವಾದಮಾಡಿದನು. ಆಗ ಅಲ್ಲಿದ್ದ ಬಾಲಕರೆಲ್ಲರೂ ಅತ್ಯಾಶ್ಚರ್ಯಗೊಂಡರು.

೩೮. ಪರಿಪೂರ್ಣಸ್ವರೂಪನಾದ ಆ ಬ್ರಹ್ಮಚಾರಿಗೆ ಶಿವನು ಭಕ್ತಿ ಪೂರ್ವಕವಾಗಿ ಷೋಡಶೋಪಚಾರಗಳನ್ನು ಸಮರ್ಪಿಸಿ, ವೇದೋಕ್ತವಾದ ಪೂಜೆ ಮಾಡಿದನು.

೩೯. ರೋಮಾಂಚಿತ ಶರೀರನಾದ ಶಂಕರನು ವಿನಯದಿಂದ ತಲೆಬಾಗಿ ಕಣ್ವಶಾಖೋಕ್ತವಾದ ಸ್ತೋತ್ರದಿಂದ ಅನಾದಿಯಾದ ಭಗವಂತನನ್ನು ಸ್ತುತಿಸಿದನು.

೪೦. ರತ್ನಸಿಂಹಾಸನದಲ್ಲಿ ಕುಳಿತಿರುವ, ತೇಜಃಪುಂಜದಿಂದ ಆವೃತವಾದ ದಿವ್ಯಾಕಾರವುಳ್ಳ ಪರಮಾತ್ಮನನ್ನು ಕುರಿತು ಶಂಕರನು ಇಂತು ನುಡಿದನು.

|| ಶಂಕರ ಉವಾಚ ||

ಆತ್ಮಾರಾಮೇಷು ಕುಶಲಪ್ರಶ್ನೋಽತೀವ ವಿಡಂಬನಂ |
ತೇ ಶಶ್ವತ್ಕುಶಲಾಧಾರಾಃ ಕುಶಲಾಃ ಕುಶಲಪ್ರದಾಃ || ೪೧ ||

ಅದ್ಯ ಮೇ ಸಫಲಂ ಜನ್ಮ ಜೀವಿತಂ ಚ ಸುಜೀವಿತಂ |
ಪ್ರಾಪ್ತಸ್ತ್ವಮತಿಥಿರ್ಬ್ರಹ್ಮನ್ ಕೃಷ್ಣಸೇವಾಫಲೋದಯಾತ್ || ೪೨ ||

ಪರಿಪೂರ್ಣತಮಃ ಕೃಷ್ಣೋ ಲೋಕನಿಸ್ತಾರಹೇತವೇ |
ಪುಣ್ಯಕ್ಷೇತ್ರೇ ಹಿ ಕಲಯಾ ಭಾರತೇ ಚ ಕೃಪಾನಿಧಿಃ || ೪೩ ||

ಅತಿಥಿಃ ಪೂಜಿತೋ ಯೇನ ಪೂಜಿತಾಃ ಸರ್ವದೇವತಾಃ |
ಅತಿಥಿರ್ಯಸ್ಯ ಸಂತುಷ್ಟಸ್ತಸ್ಯ ತುಷ್ಟೋ ಹರಿಃ ಸ್ವಯಂ || ೪೪ ||

---

೪೧ ಶಂಕರ:—ಸರ್ವದಾ ಆತ್ಮನಿರತರಾದವರನ್ನು ಕುಶಲವೇ ಎಂದು ಕೇಳುವುದು ಹಾಸ್ಯಾಸ್ಪದವಾಗುವುದು. ಮಂಗಳಕ್ಕೆ ಆಧಾರರಾದ ಅವರು ಸ್ವಯಂ ಮಂಗಳಸ್ವರೂಪರಾಗಿರುವುದಲ್ಲದೆ ಎಲ್ಲರಿಗೂ ಮಂಗಳದಾಯಕರಾಗಿರುವರು.

೪೨. ಇಂದು ನನ್ನ ಜನ್ಮವು ಸಾರ್ಥಕವಾಯಿತು. ಜೀವನವು ಸಫಲವೆನಿಸಿತು. ಎಲೈ ಬ್ರಾಹ್ಮಣೋತ್ತಮನೇ, ನಾನು ಶ್ರೀಕೃಷ್ಣನ ಸೇವೆಮಾಡಿದುದರ ಫಲವಾಗಿ, ಅತಿಥಿಯಾದ ನಿನ್ನನ್ನು ಪೂಜಿಸುವ ಪುಣ್ಯವು ಲಭಿಸಿತು.

೪೩. ಪರಿಪೂರ್ಣಸ್ವರೂಪನೂ, ದಯಾಮಯನೂ, ಆದ ಶ್ರೀಕೃಷ್ಣ ಪರಮಾತ್ಮನು ಲೋಕೋದ್ಧಾರಕ್ಕಾಗಿ ಪುಣ್ಯಕ್ಷೇತ್ರವಾದ ಭರತಖಂಡದಲ್ಲಿ ತನ್ನ ಕಲೆಯಿಂದ ~~ಅತಿಥಿಯಾಗಿ ಬರುವನು.~~

೪೪. ಯಾರು ಭಕ್ತಿವಿಶ್ವಾಸಗಳಿಂದ ಅತಿಥಿಯನ್ನು ಆದರಿಸುವರೋ ಅವರು ಎಲ್ಲ ದೇವತೆಗಳನ್ನೂ ಪೂಜಿಸಿದಂತಾಗುವುದು. ಯಾರ ವಿಷಯದಲ್ಲಿ ಅತಿಥಿಯು ಸಂತುಷ್ಟನಾಗುವನೋ ಅವರಲ್ಲಿ ಶ್ರೀಹರಿಯು ಸುಪ್ರೀತನಾಗುವನು.

ಸ್ನಾನೇನ ಸರ್ವತೀರ್ಥೇಷು ಸರ್ವದಾನೇನ ಯತ್ಫಲಂ ।
ಸರ್ವವ್ರತೋಪವಾಸೇನ ಸರ್ವಯಜ್ಞೇಷು ದೀಕ್ಷಯಾ ॥ ೪೫ ॥

ಸರ್ವೈಸ್ತಪೋಭಿರ್ವಿವಿಧೈರ್ನಿತ್ಯೈರ್ನೈಮಿತ್ತಿಕಾದಿಭಿಃ ।
ತದೇವಾತಿಥಿಸೇವಾಯಾಃ ಕಲಾಂ ನಾರ್ಹಂತಿ ಷೋಡಶೀಂ ॥ ೪೬ ॥

ಅತಿಥಿರ್ಯಸ್ಯ ಭಗ್ನಾಶೋ ಯಾತಿ ರುಷ್ಟಶ್ಚ ಮಂದಿರಾತ್ ।
ಕೋಟಿಜನ್ಮಾರ್ಜಿತಂ ಪುಣ್ಯಂ ತಸ್ಯ ನಶ್ಯತಿ ನಿಶ್ಚಿತಂ ॥ ೪೭ ॥

ಸ್ತ್ರೀಗೋಘ್ನಶ್ಚ ಕೃತಘ್ನಶ್ಚ ಬ್ರಹ್ಮಘ್ನೋ ಗುರುತಲ್ಪಗಃ ।
ಪಿತೃಮಾತೃಗುರೂಣಾಂ ಚ ನಿಂದಕೋ ನರಘಾತಕಃ ॥ ೪೮ ॥

---

೪೫. ಸಕಲ ಪುಣ್ಯತೀರ್ಥಗಳಲ್ಲಿ ಸ್ನಾನಮಾಡುವುದರಿಂದಲೂ, ಸಕಲ ವಸ್ತುಗಳನ್ನು ದಾನಮಾಡುವುದರಿಂದಲೂ, ಸಕಲವ್ರತೋಪವಾಸಗಳನ್ನಾಚರಿಸುವುದರಿಂದಲೂ, ಸಕಲ ಯಜ್ಞದೀಕ್ಷೆಯನ್ನು ಕೈಗೊಳ್ಳುವುದರಿಂದಲೂ ಲಭಿಸುವ ಪುಣ್ಯಫಲವು ಒಬ್ಬ ಅತಿಥಿಯನ್ನು ಸತ್ಕರಿಸಿದ ಮಾತ್ರದಿಂದ ಲಭಿಸುವುದು.

೪೬. ಸಕಲತಪಸ್ಸುಗಳಿಂದಲೂ, ನಿತ್ಯನೈಮಿತ್ತಿಕಾದಿ ವಿವಿಧಕರ್ಮಗಳಿಂದಲೂ ದೊರಕುವ ಪುಣ್ಯವು ಅತಿಥಿಸತ್ಕಾರಮಾಡಿ ಪಡೆದ ಪುಣ್ಯದ ಹದಿನಾರನೆಯ ಒಂದು ಭಾಗಕ್ಕೂ ಎಣೆಯಾಗುವುದಿಲ್ಲ.

೪೭. ಅತಿಥಿಯು ನಿರಾಶನಾಗಿ ಯಾರ ಮನೆಯಿಂದ ಹಿಂತಿರುಗುವನೋ ಅವನ ಕೋಟಿಜನ್ಮಾರ್ಜಿತವಾದ ಪುಣ್ಯವೂ ನಿಶ್ಚಯವಾಗಿ ನಾಶವಾಗುವುದು

೪೮. ಸ್ತ್ರೀಹತ್ಯೆ, ಗೋಹತ್ಯೆ ಮತ್ತು ಬ್ರಹ್ಮಹತ್ಯೆಗಳನ್ನು ಮಾಡಿದವನೂ, ಉಪಕಾರಸ್ಮರಣೆಯಿಲ್ಲದವನೂ, ಗುರುಪತ್ನೀಗಮನಮಾಡುವವನೂ, ತಂದೆ ತಾಯಿ ಮತ್ತು ಗುರುಗಳನ್ನು ನಿಂದಿಸುವವನೂ, ನರಹಿಂಸಕನೂ, ಮಹಾಪಾಪಿಗಳೆನಿಸುವರು

ಸಂಧ್ಯಾಹೀನೋ ಸ್ವಘಾತೀ ಚ ಸತ್ಯಘ್ನೋ ಹರಿನಿಂದಕಃ ।
ಬ್ರಹ್ಮಸ್ವಸ್ಥಾಪ್ಯಹಾರೀ ಚ ಮಿಥ್ಯಾಸಾಕ್ಷ್ಯಪ್ರದಾಯಕಃ ॥ ೪೯ ॥

ಮಿತ್ರದ್ರೋಹೀ ಕೃತಘ್ನಶ್ಚ ವೃಷವಾಹಶ್ಚ ಸೂಪಕೃತ್ ।
ಶವದಾಹೀ ಗ್ರಾಮಯಾಜೀ ಬ್ರಾಹ್ಮಣೋ ವೃಷಲೀಪತಿಃ ॥ ೫೦ ॥

ಶೂದ್ರಶ್ರಾದ್ಧಾನ್ನಭೋಜೀ ಚ ಶೂದ್ರಶ್ರಾದ್ಧೇಷು ಭೋಜಕಃ ।
ಕನ್ಯಾ ವಿಕ್ರಯಕಾರೀ ಚ ಶ್ರೀಹರೇರ್ನಾಮವಿಕ್ರಯೀ ॥ ೫೧ ॥

ಲಾಕ್ಷಾಮಾಂಸತಿಲಾನಾಂ ಚ ಲವಣಸ್ಯ ತಿಲಸ್ಯ ಚ ।
ವಿಕ್ರೇತಾ ಬ್ರಾಹ್ಮಣಶ್ಚೈವ ತುರಗಾಣಾಂ ಗವಾಂ ತಥಾ ॥ ೫೨ ॥

---

೪೯. ಸಂಧ್ಯಾವಂದನೆ ಮಾಡದವರೂ, ಆತ್ಮಹತ್ಯೆಮಾಡಿಕೊಳ್ಳುವವರೂ. ಅಸತ್ಯವಾಡುವವರೂ, ಹರಿನಿಂದಕರೂ, ಬ್ರಹ್ಮಸ್ವತ್ತು ಮತ್ತು ಅಡುವಿಟ್ಟ ವಸ್ತುಗಳನ್ನು ಅಪಹರಿಸುವವರೂ, ಸುಳ್ಳುಸಾಕ್ಷಿ ನುಡಿಯುವವರೂ ಮಹಾಪಾತಕಿಗಳೆನಿಸುವರು.

೫೦. ಮಿತ್ರದ್ರೋಹಮಾಡುವವನೂ, ಬ್ರಾಹ್ಮಣನಾಗಿ ಎತ್ತಿನಿಂದ ಜೀವಿಸುವವನೂ, ಪರಿಚಾರಿಕೆಮಾಡುವವನೂ, ಮತ್ತೊಬ್ಬರ ಶವವನ್ನು ದಹನಮಾಡಿ ಜೀವಿಸುವವನೂ, ಗ್ರಾಮಶಾಂತಿಮಾಡಿಸುವವನೂ, ಶೂದ್ರಸ್ತ್ರೀಸಂಗಮಾಡುವವನೂ ಮಹಾಪಾಪಿಯಾಗುವನು.

೫೧. ಶೂದ್ರರ ಮನೆಯಲ್ಲಿ ಶ್ರಾದ್ಧಮಾಡಿಸಿ ಊಟಮಾಡುವವನೂ, ಹೊಟ್ಟೆಯಲ್ಲಿ ಹುಟ್ಟಿದ ಮಗಳನ್ನೂ, ಶ್ರೀಹರಿಯ ನಾಮವನ್ನೂ ಮಾರಿ ಜೀವಿಸುವವನೂ ಮಹಾ ಪಾತಕಿಯೆನಿಸುವನು

೫೨. ಅರಗು, ಮಾಂಸ, ಎಳ್ಳು, ಉಪ್ಪು ಮುಂತಾದ ದ್ರವ್ಯಗಳನ್ನೂ, ಕುದುರೆ, ಗೋವು ಮುಂತಾದ ಸಾಧುಪ್ರಾಣಿಗಳನ್ನೂ ಮಾರಿ ಜೀವಿಸುವ ಬ್ರಾಹ್ಮಣನು ಮಹಾಪಾಪಿಯೆನಿಸುವನು.

ಏಕಾದಶೀ ಕೃಷ್ಣಸೇವಾಹೀನೋ ವಿಪ್ರಶ್ಚ ಭಾರತೇ ।
ಏತೇ ಮಹಾಪಾತಕಿನಸ್ತ್ರಿಷು ಲೋಕೇಷು ನಿಂದಿತಾಃ ॥ ೩೩ ॥

ಕಾಲಸೂತ್ರೇ ಚ ನರಕೇ ಪತಂತಿ ಬ್ರಹ್ಮಣಾಂ ಶತಂ ।
ಏತೇಭ್ಯೋಽಪ್ಯಧಿಕಃ ಸೋಽಪಿ ಯಶ್ಚಾತಿಥಿಪರಾಙ್ಮುಖಃ ॥ ೩೪ ॥

॥ ನಾರಾಯಣ ಉವಾಚ ॥

ಶಂಕರಸ್ಯ ವಚಃ ಶ್ರುತ್ವಾ ಸಂತುಷ್ಟಃ ಶ್ರೀಹರಿಃ ಸ್ವಯಂ ।
ಮೇಘಗಂಭೀರಯಾ ವಾಚಾ ತಮುವಾಚ ಜಗತ್ಪತಿಃ ॥ ೩೫ ॥

॥ ವಿಷ್ಣುರುವಾಚ ॥

ಶ್ವೇತದ್ವೀಪಾದಾಗತೋಽಹಂ ಜ್ಞಾತ್ವಾ ಕೋಲಾಹಲಂ ಚ ವಃ ।
ಅಸ್ಯ ರಾಮಸ್ಯ ರಕ್ಷಾರ್ಥಂ ಕೃಷ್ಣಭಕ್ತಸ್ಯ ಸಾಂಪ್ರತಂ ॥ ೩೬ ॥

---

೩೩. ಭರತಖಂಡದಲ್ಲಿ ಏಕಾದಶೀವ್ರತವನ್ನೂ, ಶ್ರೀಕೃಷ್ಣನ ಸೇವೆಯನ್ನೂ ಮಾಡದ ಬ್ರಾಹ್ಮಣನು ಮಹಾಪಾಪಿಯೆನಿಸುವನು. ಈ ಮಹಾಪಾಪಿಗಳೆಲ್ಲರೂ ತ್ರಿಲೋಕದಲ್ಲಿಯೂ ನಿಂದಿತರಾಗುವರು.

೩೪. ಇವರೆಲ್ಲರೂ, ನೂರು ಚತುರ್ಮುಖಬ್ರಹ್ಮರ ಜೀವಿತಕಾಲಪರ್ಯಂತ ಕಾಲಸೂತ್ರವೆಂಬ ನರಕದಲ್ಲಿ ತೊಳಲುವರು. ಅತಿಥಿಸತ್ಕಾರಮಾಡದೆ ಉದಾಸೀನ ಮಾಡುವವನು ಇವರೆಲ್ಲರಿಗಿಂತಲೂ ಅಧಿಕಶಿಕ್ಷೆಗೊಳಗಾಗುವನು.

೩೫ ನಾರಾಯಣಮಹರ್ಷಿ:—ಈ ರೀತಿಯಾಡಿದ ಶಂಕರನ ನುಡಿಯನ್ನು ಕೇಳಿ ಜಗದೊಡೆಯನಾದ ಶ್ರೀಹರಿಯು (ಬ್ರಹ್ಮಚಾರಿ) ಮೇಘನಾದದಂತೆ ಗಂಭೀರವಾದ ಧ್ವನಿಯಿಂದ ಪ್ರತ್ಯುತ್ತರವಿತ್ತನು.

೩೬. ವಿಷ್ಣು:—ನಾನು ನಿಮ್ಮೆಲ್ಲರ ಕೋಲಾಹಲವನ್ನು ಕೇಳಿ, ಕೃಷ್ಣಭಕ್ತನಾದ ಪರಶುರಾಮನ ರಕ್ಷಣೆಗಾಗಿ ಶ್ವೇತದ್ವೀಪದಿಂದ ಇಲ್ಲಿಗೆ ಬಂದೆ.

ನೈತೇಷಾಂ ಕೃಷ್ಣಭಕ್ತಾನಾಮಶುಭಂ ವಿದ್ಯತೇ ಕ್ವಚಿತ್ ।
ರಕ್ಷಾಮಿ ತಾಂಶ್ಚ ಕ್ರಹಸ್ತೋ ಗುರುಮನ್ಯಂ ವಿನಾ ಶಿವ ॥ ೫೭ ॥

ನಾಹಂ ಪಾತಾ ಗುರೌ ರುಷ್ಟೇ ಬಲವದ್ಗುರುಹೇಲನಂ ।
ತತ್ಪರಃ ಪಾತಕೀ ನಾಸ್ತಿ ಸೇವಾಹೀನೋ ಗುರೋಶ್ಚ ಯಃ ॥ ೫೮ ॥

ಮಾನ್ಯಃ ಪೂಜ್ಯಶ್ಚ ಸರ್ವೇಭ್ಯಃ ಸರ್ವೇಷಾಂ ಜನಕೋ ಭವೇತ್ ।
ಅಹೋ ಯಸ್ಯ ಪ್ರಸಾದೇನ ಸರ್ವಾನ್ಪಶ್ಯತಿ ಮಾನವಃ ॥ ೫೯ ॥

ಜನಕೋ ಜನ್ಮದಾನಾಚ್ಚ ರಕ್ಷಣಾಚ್ಚ ಪಿತಾ ನೃಣಾಂ ।
ತತೋ ವಿಸ್ತಾರಕರಣಾತ್ಕಲಯಾ ಸ ಪ್ರಜಾಪತಿಃ ॥ ೬೦ ॥

ಪಿತುಃ ಶತಗುಣಂ ಮಾತಾ ಪೋಷಣಾದ್ಗರ್ಭಧಾರಣಾತ್ ।
ವಂದ್ಯಾ ಪೂಜ್ಯಾ ಚ ಮಾನ್ಯಾ ಚ ಪ್ರಸೂಸ್ಸ್ಯಾದ್ಧೈ ವಸುಂಧರಾ ॥ ೬೧ ॥

---

೫೭. ಎಲೈ ಶಂಕರನೇ, ಶ್ರೀಕೃಷ್ಣನ ಭಕ್ತರು ಎಲ್ಲಿದ್ದರೂ ಅವರಿಗೆ ಎಂದಿಗೂ ಅಮಂಗಳವಾಗುವುದಿಲ್ಲ. ಗುರುವಿನ ಅನುಗ್ರಹಕ್ಕೆ ಪಾತ್ರರಾದ ಭಕ್ತರನ್ನು ನಾನು ಚಕ್ರಧರನಾಗಿ ಸಂರಕ್ಷಿಸುವೆನು.

೫೮. ಆದರೆ ಗುರುವಿನ ಆಗ್ರಹಕ್ಕೆ ಒಳಗಾದವನನ್ನು ನಾನು ರಕ್ಷಿಸಲಾರೆ. ಗುರುನಿಂದೆಯು ಗುರುತರವಾದ ಪಾಪವೆನಿಸುವುದು. ಗುರುಸೇವೆಮಾಡದಿರುವವನಿಗಿಂತ ಹೆಚ್ಚು ಪಾಪಿಯು ಮತ್ತೆ ಯಾರೂ ಇಲ್ಲ.

೫೯. ಹೆತ್ತ ತಂದೆಯು ಎಲ್ಲರಿಗೂ, ಎಲ್ಲರಿಗಿಂತಲೂ ಪೂಜ್ಯನೆನಿಸುವನು. ಅವನ ಅನುಗ್ರಹದಿಂದ ಜಂತುವು ಮಾನವನಾಗಿ ಸಕಲ ಅನುಭವವನ್ನೂ ಪಡೆಯುವನು.

೬೦. ತಂದೆಯನ್ನು ಜನ್ಮದಾತನಾದುದರಿಂದ ಜನಕನೆಂದೂ, ಪಾಲನೆ ಮಾಡುವುದರಿಂದ ಪಿತನೆಂದೂ ಕರೆಯುವರು. ಹಾಗೆಯೇ ಪೋಷಿಸಿ ಅಭಿವೃದ್ಧಿಗೊಳಿಸುವುದರಿಂದ ಚತುರ್ಮುಖಬ್ರಹ್ಮನ ಒಂದು ಕಲೆಯೆನಿಸುವನು.

೬೧. ಗರ್ಭದಲ್ಲಿ ಧರಿಸಿ, ಪೋಷಿಸುವುದರಿಂದ ತಾಯಿಯು ತಂದೆಗಿಂತ ನೂರರಷ್ಟು ಅಧಿಕಪೂಜ್ಯಳೆನಿಸುವಳು. ಜನ್ಮದಾತಳಾದ ಮಾತೆಯು ಭೂಮಾತೆಯಂತೆ ವಂದ್ಯಳೂ, ಪೂಜ್ಯಳೂ ಆಗಿರುವಳು.

ಮಾತುಃ ಶತಗುಣಂ ವಂದ್ಯಃ ಪೂಜ್ಯೋ ಮಾನ್ಯೋಽನ್ನದಾಯಕಃ ।
ಯದ್ವಿನಾ ನಶ್ವರೋ ದೇಹೋ ವಿಷ್ಣುಶ್ಚ ಕಲಯಾನ್ನದಃ ॥ ೬೨ ॥

ಅನ್ನದಾತುಃ ಶತಗುಣೋಽಭೀಷ್ಟದೇವಃ ಪರಃ ಸ್ಮೃತಃ ।
ಗುರುಸ್ತಸ್ಮಾಚ್ಛತಗುಣೋ ವಿದ್ಯಾಮಂತ್ರಪ್ರದಾಯಕಃ ॥ ೬೩ ॥

ಅಜ್ಞಾನತಿಮಿರಾಚ್ಛನ್ನಂ ಜ್ಞಾನದೀಪೇನ ಚಕ್ಷುಷಾ ।
ಯಃ ಸರ್ವಾರ್ಥಂ ದರ್ಶಯತಿ ತತ್ಪರೋ ನೈವ ಬಾಂಧವಃ ॥ ೬೪ ॥

ಗುರುದತ್ತೇನ ಮಂತ್ರೇಣ ತಪಸೇಷ್ಟಸುಖಂ ಲಭೇತ್ ।
ಸರ್ವಜ್ಞತ್ವಂ ಸರ್ವಸಿದ್ಧಿಂ ತತ್ಪರೋ ನೈವ ಬಾಂಧವಃ ॥ ೬೫ ॥

ಸರ್ವಂ ಜಯತಿ ಸರ್ವತ್ರ ವಿದ್ಯಯಾ ಗುರುದತ್ತಯಾ ।
ತಸ್ಮಾತ್ಪೂಜ್ಯೋ ಹಿ ಜಗತಿ ಕೋ ವಾ ಬಂಧುಸ್ತತೋಽಧಿಕಃ ॥ ೬೬ ॥

---

೬೨. ಅನ್ನದಾನಿಯು ತಾಯಿಗಿಂತಲೂ ನೂರರಷ್ಟು ಅಧಿಕಪೂಜ್ಯನೆನಿಸುವನು. ಅವನಿಲ್ಲದಿದ್ದರೆ ಈ ಶರೀರವೇ ನಾಶವಾಗುತ್ತಿತ್ತು. ವಿಷ್ಣುವೇ ತನ್ನ ಕಲೆಯಿಂದ ಅನ್ನದಾತನಾಗುವನು.

೬೩. ಅನ್ನದಾನಿಗಿಂತಲೂ, ಇಷ್ಟದೇವತೆಯು ನೂರರಷ್ಟು ಅಧಿಕವೆನಿಸುವುದು. ವಿದ್ಯೆಯನ್ನೂ, ಮಂತ್ರವನ್ನೂ ಉಪದೇಶಿಸುವ ಗುರುವು ಇಷ್ಟದೇವತೆಗಿಂತಲೂ ನೂರರಷ್ಟು ಪೂಜ್ಯನೆನಿಸುವನು.

೬೪. ಅಜ್ಞಾನವೆಂಬ ಅಂಧಕಾರದಿಂದ ಕಣ್ಮರೆಯಾದ ಆತ್ಮತತ್ವವನ್ನು ಜ್ಞಾನದೀಪದಿಂದ ಬೆಳಗಿಸಿ ಸಕಲಾರ್ಥವನ್ನೂ ಮನಗಾಣಿಸುವ ಗುರುವಿಗಿಂತ ಶ್ರೇಷ್ಠನಾದ ಬಂಧುವಾವನಿರುವನು?

೬೫. ಗುರುವು ಉಪದೇಶಿಸಿದ ಮಂತ್ರಪಠನಪೂರ್ವಕವಾಗಿ ತಪಸ್ಸನ್ನಾಚರಿಸಿ, ಇಷ್ಟಸುಖವನ್ನೂ, ಸರ್ವಜ್ಞತ್ವವನ್ನೂ, ಸರ್ವಸಿದ್ಧಿಯನ್ನೂ ಪಡೆಯಬಹುದು. ಆದುದರಿಂದ ಗುರುವಿಗಿಂತ ಅಧಿಕನಾದ ಬಂಧುವಿಲ್ಲ.

೬೬. ಗುರುವು ಉಪದೇಶಿಸಿದ ವಿದ್ಯೆಯ ಬಲದಿಂದ ಜಗತ್ತಿನಲ್ಲಿ ಎಲ್ಲಿಗೆ ಹೋದರೂ ಜಯಿಸಿಕೊಂಡು ಬರಬಹುದು. ಆದುದರಿಂದ ಜಗತ್ತಿನಲ್ಲಿ ಗುರುವು ಸರ್ವರಿಗೂ ಪೂಜ್ಯನೆನಿಸುವನು. ಅವನಿಗಿಂತ ಅಧಿಕನಾದ ಆಪ್ತನಿಲ್ಲ.

ವಿದ್ಯಾಂಧೋ ವಾ ಧನಾಂಧೋ ವಾ ಯೋ ಮೂಢೋ ನ ಭಜೇದ್ಗುರುಂ ।
ಬ್ರಹ್ಮಹತ್ಯಾದಿಭಿಃ ಪಾಪೈಃ ಸ ಲಿಪ್ತೋ ನಾತ್ರ ಸಂಶಯಃ ॥ ೬೭ ॥

ದರಿದ್ರಂ ಪತಿತಂ ಕ್ಷುದ್ರಂ ನರಂ ಬುದ್ಧ್ಯಾ ಚರೇದ್ಗುರುಂ ।
ತೀರ್ಥಸ್ನಾತೋಽಪಿ ನ ಶುಚಿರ್ನಾಧಿಕಾರೀ ಚ ಕರ್ಮಸು ॥ ೬೮ ॥

ಪಿತರಂ ಮಾತರಂ ಭಾರ್ಯಾಂ ಗುರುಪತ್ನೀಂ ಗುರುಂ ಪರಂ ।
ಯೋ ನ ಪುಷ್ಣಾತಿ ಕಾಪಟ್ಯಾತ್ಸ ಮಹಾ ಪಾತಕೀ ಶಿವ ॥ ೬೯ ॥

ಗುರುರ್ಬ್ರಹ್ಮಾ ಗುರುರ್ವಿಷ್ಣುರ್ಗುರುರ್ದೇವೋ ಮಹೇಶ್ವರಃ ।
ಗುರುರೇವ ಪರಂಬ್ರಹ್ಮ ಗುರುರ್ಭಾಸ್ಕರರೂಪಕಃ ॥ ೭೦ ॥

ಗುರುಶ್ಚಂದ್ರಸ್ತಥೇಂದ್ರಶ್ಚ ವಾಯುಶ್ಚ ವರುಣೋಽನಲಃ ।
ಸರ್ವರೂಪೋ ಹಿ ಭಗವಾನ್ಪರಮಾತ್ಮಾ ಸ್ವಯಂ ಗುರುಃ ॥ ೭೧ ॥

---

೬೭. ವಿದ್ಯಾಮದದಿಂದಾಗಲೀ, ಧನಮದದಿಂದಾಗಲೀ, ಯಾವ ಮೂಢನು ಗುರುಸೇವೆಮಾಡುವುದಿಲ್ಲವೋ, ಅವನಿಗೆ ಬ್ರಹ್ಮಹತ್ಯಾದಿ ಮಹಾಪಾಪಗಳು ಸಂಘಟಿಸುವುದರಲ್ಲಿ ಸಂದೇಹವಿಲ್ಲ.

೬೮. ಗುರುವು ದರಿದ್ರನಾಗಲಿ, ಪತಿತನಾಗಲೀ, ಕ್ಷುದ್ರನಾಗಲೀ, ಅವನನ್ನು ಸಾಮಾನ್ಯಮನುಜನಂತೆ ತಿಳಿಯುವವನು ಪುಣ್ಯತೀರ್ಥಗಳಲ್ಲಿ ಮಿಂದರೂ ಶುಚಿಯಾಗುವುದಿಲ್ಲ. ಅಲ್ಲದೆ ಅವನು ಯಾವ ಕರ್ಮಾಚರಣೆಗೂ ಅರ್ಹನಾಗುವುದಿಲ್ಲ.

೬೯. ಎಲೈ ಶಂಕರನೇ, ತಂದೆತಾಯಿಯರನ್ನೂ ಹೆಂಡತಿಯನ್ನೂ ಗುರು ಮತ್ತು ಅವನ ಪತ್ನಿಯನ್ನೂ ಕಾಲವರಿತು ಪೋಷಿಸದ ಕಪಟಿಯು ಮಹಾ ಪಾಪಿಯೆನಿಸುವನು.

೭೦. ಗುರುವೇ ಬ್ರಹ್ಮನು, ಗುರುವೇ ವಿಷ್ಣುವು, ಗುರುವೇ ಸಾಕ್ಷಾತ್ ಶಂಕರನು ಗುರುವೇ ಪರಮಾತ್ಮನು. ಗುರುವೇ ತೇಜೋಮಯನಾದ ಭಾಸ್ಕರನು (ಸೂರ್ಯ).

೭೧. ಗುರುವೇ ಚಂದ್ರ, ಇಂದ್ರ, ವಾಯು, ವರುಣ, ಅಗ್ನಿ ಮುಂತಾದ ಎಲ್ಲ ದೇವತೆಗಳ ರೂಪದಿಂದಿರುವನು. ಆದುದರಿಂದ ಸರ್ವವ್ಯಾಪಕನಾದ ಪರಮಾತ್ಮನಿಗಿಂತ ಗುರುವು ಬೇರೆಯಲ್ಲ

ನಾಸ್ತಿ ವೇದಾತ್ಪರಂ ಶಾಸ್ತ್ರಂ ನ ಹಿ ಕೃಷ್ಣಾತ್ಪರಃ ಸುರಃ ।
ನಾಸ್ತಿ ಗಂಗಾಸಮಂ ತೀರ್ಥಂ ನ ಪುಷ್ಪಂ ತುಲಸೀದಲಾತ್ ॥ ೭೨ ॥

ನಾಸ್ತಿ ಕ್ಷಮಾವತೀ ಭೂಮೇಃ ಪುತ್ರಾನ್ನಾಸ್ತ್ಯಪರಃ ಪ್ರಿಯಃ ।
ನ ಚ ದೈವಾತ್ಪರಾ ಶಕ್ತಿರ್ನೈಕಾದಶ್ಯಾಃ ಪರಂ ವ್ರತಂ ॥ ೭೩ ॥

ಶಾಲಗ್ರಾಮಾತ್ಪರೋ ಯಂತ್ರೋ ನ ಕ್ಷೇತ್ರಂ ಭಾರತಾತ್ಪರಂ ।
ಪರಂ ಪುಣ್ಯಸ್ಥಲಾನಾಂ ಚ ಪುಣ್ಯಂ ವೃಂದಾವನಂ ಯಥಾ ॥ ೭೪ ॥

ಮೋಕ್ಷದಾನಾಂ ಯಥಾ ಕಾಶೀ ವೈಷ್ಣವಾನಾಂ ಯಥಾ ಶಿವಃ ।
ನ ಪಾರ್ವತ್ಯಾಃ ಪರಾ ಸಾಧ್ವೀ ನ ಗಣೇಶಾತ್ಪರೋ ವಶೀ ॥ ೭೫ ॥

---

೭೨ ವೇದಕ್ಕಿಂತ ಶ್ರೇಷ್ಠವಾದ ಬೇರೆ ಶಾಸ್ತ್ರವಿಲ್ಲ. ಶ್ರೀಕೃಷ್ಣನಿಗಿಂತ ಉತ್ತಮದೇವತೆಯಿಲ್ಲ. ಗಂಗೆಗೆ ಸಮವಾದ ಪವಿತ್ರತೀರ್ಥ ಬೇರಿಲ್ಲ. ತುಳಸೀ ದಳಕ್ಕಿಂತ ಶ್ರೇಷ್ಠವಾದ ಪುಷ್ಪವೊಂದಿಲ್ಲ.

೭೩. ಸಹನೆಯಲ್ಲಿ ಭೂಮಿಗೂ, ಪ್ರೀತಿಪಾತ್ರರಲ್ಲಿ ಪುತ್ರನಿಗೂ ಸಮಾನರು ಮತ್ತೊಬ್ಬರಿಲ್ಲ. ದೈವಶಕ್ತಿಗೆ ಮಿಗಿಲಾದುದು ಯಾವುದೂ ಇಲ್ಲ. ಏಕಾದಶಿಗಿಂತ ಉತ್ತಮವಾದ ವ್ರತ ಬೇರೆಯಿಲ್ಲ.

೭೪. ಶಾಲಗ್ರಾಮಕ್ಕಿಂತ ಉತ್ತಮವಾದ ಯಂತ್ರವೂ, ಭಾರತಕ್ಕಿಂತ ಪವಿತ್ರವಾದ ಕ್ಷೇತ್ರವೂ ಬೇರೊಂದಿಲ್ಲ ಪುಣ್ಯಸ್ಥಳಗಳಲ್ಲೆಲ್ಲ ಬೃಂದಾವನವೇ ಪುಣ್ಯತಮವಾದುದು.

೭೫. ಮೋಕ್ಷಕೊಡುವುದರಲ್ಲಿ ಕಾಶಿಯೂ, ವಿಷ್ಣುಭಕ್ತರಲ್ಲಿ ಶಿವನೂ, ಅಸದೃಶರೆನಿಸಿರುವರು. ಪಾರ್ವತಿಗಿಂತ ಉತ್ತಮಳೆನಿಸಿದ ಪತಿವ್ರತೆಯೂ, ಗಣೇಶನಿಗಿಂತ ಶ್ರೇಷ್ಠನಾದ ಜಿತೇಂದ್ರಿಯನೂ ಬೇರೊಬ್ಬರಿಲ್ಲ.

ನ ಚ ವಿದ್ಯಾಸಮೋ ಬಂಧುರ್ನಾಸ್ತಿ ಕಶ್ಚಿದ್ಗುರೋಃ ಪರಃ ।
ವಿದ್ಯಾದಾತುಃ ಪುತ್ರದಾರಾ ತತ್ಸಮಾ ನಾತ್ರ ಸಂಶಯಃ ॥ ೭೬ ॥

ಗುರುಸ್ತ್ರಿಯಾಂ ಚ ಪುತ್ರೇ ಚಾಪ್ಯಭವದ್ರಾಮಹೇಲನಂ ।
ಪರಂ ಸಂಮಾರ್ಜನಂ ಕರ್ತುಮಾಗತೋಽಹಂ ತವಾಲಯಂ ॥ ೭೭ ॥

॥ ನಾರಾಯಣ ಉವಾಚ ॥

ಇತ್ಯೇವಮುಕ್ತ್ವಾ ಶಂಭುಂ ಚ ದುರ್ಗಾಂ ಸಂಬೋಧ್ಯ ನಾರದ ।
ಉವಾಚ ಭಗವಾಂಸ್ತತ್ರ ಸತ್ಯಸಾರಂ ಪರಂ ವಚಃ ॥ ೭೮ ॥

॥ ಶ್ರೀವಿಷ್ಣುರುವಾಚ ॥

ಶೃಣು ದೇವಿ ಪ್ರವಕ್ಷ್ಯಾಮಿ ಮದೀಯಂ ವಚನಂ ಶುಭಂ ।
ನೀತಿಯುಕ್ತಂ ವೇದಸಾರಂ ಪರಿಣಾಮಸುಖಾವಹಂ ॥ ೭೯ ॥

---

೭೬. ವಿದ್ಯೆಗೆ ಸಮನಾದ ಬಂಧುವಿಲ್ಲ. ಗುರುವಿಗಿಂತ ಶ್ರೇಷ್ಠನಾದವನು ಮತ್ತೊಬ್ಬನಿಲ್ಲ. ಗುರುವಿನ ಪತ್ನೀಪುತ್ರರೂ ಗುರುವಿಗೆ ಸಮಾನರೆಂಬುವುದರಲ್ಲಿ ಸಂಶಯವಿಲ್ಲ.

೭೭. ಪ್ರಕೃತದಲ್ಲಿ ಪರಶುರಾಮನು ಗುರುಪತ್ನಿಯಾದ ಪಾರ್ವತಿಯನ್ನೂ, ಗುರುಪುತ್ರನಾದ ಗಣಪತಿಯನ್ನೂ ತಿರಸ್ಕಾರಮಾಡಿದನು. ಅದನ್ನು ಪರಿಹರಿಸುವುದಕ್ಕಾಗಿ ನಾನು ನಿನ್ನ ಮಂದಿರಕ್ಕೆ ಬಂದೆನು.

೭೮. ನಾರಾಯಣಮಹರ್ಷಿ:—ಎಲೈ ನಾರದನೇ, ವಿಷ್ಣುವು ಶಂಕರನಿಗೆ ಹೀಗೆ ಹೇಳಿದನಂತರ ಪಾರ್ವತಿಯನ್ನು ಕುರಿತು ಪರಮಸಾರಭೂತವಾದ ಕೆಲವು ನುಡಿಗಳನ್ನಾಡಿದನು.

೭೯. ಶ್ರೀವಿಷ್ಣು:—ಎಲೌ ದೇವಿಯೇ, ನಾನು ಹೇಳುವ ಶುಭಕರವೂ, ನೀತಿಯುತವೂ, ವೇದಸಾರವೂ, ಪರಿಣಾಮದಲ್ಲಿ ಸುಖದಾಯಕವೂ ಆದ ಹಿತನುಡಿಗಳನ್ನಾಲಿಸು.

ಯಥಾ ತೇ ಗಜವಕ್ತ್ರಶ್ಚ ಕಾರ್ತಿಕೇಯಶ್ಚ ಪಾರ್ವತಿ ।
ತಥಾ ಪರಶುರಾಮಶ್ಚ ಭಾರ್ಗವೋ ನಾತ್ರ ಸಂಶಯಃ ॥ ೮೦ ॥

ನಾಸ್ತ್ಯೇಷು ಸ್ನೇಹಭೇದಶ್ಚ ತವ ವಾ ಶಂಕರಸ್ಯ ಚ ।
ವಿಚಾರ್ಯ ಸರ್ವಂ ಸರ್ವಜ್ಞೇ ಕುರು ಮಾತರ್ಯಥೋಚಿತಂ ॥ ೮೧ ॥

ಪುತ್ರೇಣ ಸಾರ್ಧಂ ಪುತ್ರಸ್ಯ ವಿವಾದೋ ದೈವದೋಷತಃ ।
ದೈವಂ ಹಂತುಂ ಕೋ ಹಿ ಶಕ್ತೋ ದೈವಂ ಚ ಬಲವತ್ತರಂ ॥ ೮೨ ॥

ಪುತ್ರಾಭಿಧಾನಂ ವೇದೇಷು ಪಶ್ಯ ವತ್ಸೇ ವರಾನನೇ ।
ಏಕದಂತ ಇತಿ ಖ್ಯಾತಂ ಸರ್ವದೇವ ನಮಸ್ಕೃತಂ ॥ ೮೩ ॥

ಪುತ್ರನಾಮಾಷ್ಟಕಂ ಸ್ತೋತ್ರಂ ಸಾಮವೇದೋಕ್ತಮೀಶ್ವರಿ ।
ಶೃಣುಷ್ವಾವಹಿತಂ ಮಾತಃ ಸರ್ವವಿಘ್ನಹರಂ ಪರಂ ॥ ೮೪ ॥

---

೮೦. ಎಲೌ ಪಾರ್ವತಿಯೇ, ನಿನಗೆ ಗಣಪತಿಯೂ, ಷಣ್ಮುಖನೂ, ಹೇಗೋ ಹಾಗೆಯೇ ಭೃಗುಪುತ್ರನಾದ ಪರಶುರಾಮನೂ ಪ್ರೀತಿಪಾತ್ರನೆಂಬುವುದರಲ್ಲಿ ಸಂಶಯವಿಲ್ಲ.

೮೧. ನಿನಗಾಗಲೀ, ಶಂಕರನಿಗಾಗಲೀ, ಇವರುಗಳ ಸ್ನೇಹದಲ್ಲಿ ಪಕ್ಷಪಾತವಿಲ್ಲ. ಎಲೌ ಸರ್ವಜ್ಞಳಾದ ಮಾತೆಯೇ, ಈಗ ನೀನು ಸಾವಧಾನದಿಂದ ಉಚಿತವಾದುದನ್ನು ಆಚರಿಸು.

೮೨ ನಿನ್ನ ಪುತ್ರನಾದ ಗಣಪತಿಗೂ, ಪುತ್ರಸದೃಶನಾದ ಪರಶುರಾಮನಿಗೂ ದುರ್ದೈವದಿಂದ ವಿವಾದವುಂಟಾಯಿತು. ದೈವವನ್ನು ಮೀರಲಾರಿಗೂ ಅಳವಲ್ಲ. ದೈವವು ಎಲ್ಲಕ್ಕಿಂತಲೂ ಬಲಿಷ್ಠವಾದುದು.

೮೩. ಎಲೌ ಸುಂದರಿಯೇ, ವೇದದಲ್ಲಿ ನಿರೂಪಿಸಿರುವಂತೆ ನಿನ್ನ ಮಗನ ಹೆಸರುಗಳನ್ನು ಹೇಳುವೆನು ಕೇಳು. ಸರ್ವದೇವತೆಗಳಿಂದ ವಂದಿಸಲ್ಪಡುವ ಗಣಪತಿಯು ಪರಶುರಾಮನು ದಂತಭಂಗಮಾಡಿದುದರಿಂದ ಏಕದಂತನೆನಿಸಿಕೊಂಡನು.

೮೪. ಎಲೌ ಸರ್ವೇಶ್ವರಿಯಾದ ಮಾತೆಯೇ, ಸಾಮವೇದೋಕ್ತವೂ, ಸಕಲ ವಿಘ್ನನಾಶಕವೂ ಆದ (ನಿನ್ನ ಪುತ್ರನ) ಎಂಟು ದಿವ್ಯನಾಮಗಳನ್ನು ಸಾವಧಾನದಿಂದ ಕೇಳುವವಳಾಗು

|| ವಿಷ್ಣುರುವಾಚ ||

ಗಣೇಶಮೇಕದಂತಂ ಚ ಹೇರಂಬಂ ವಿಘ್ನನಾಯಕಂ |
ಲಂಬೋದರಂ ಶೂರ್ಪಕರ್ಣಂ ಗಜವಕ್ತ್ರಂ ಗುಹಾಗ್ರಜಂ || ೮೫ ||

ಅಷ್ಟಾಖ್ಯಾರ್ಥಂ ಚ ಪುತ್ರಸ್ಯ ಶೃಣು ಮಾತರ್ಹರಪ್ರಿಯೇ |
ಸ್ತೋತ್ರಾಣಾಂ ಸಾರಭೂತಂ ಚ ಸರ್ವವಿಘ್ನಹರಂ ಪರಂ || ೮೬ ||

ಜ್ಞಾನಾರ್ಥವಾಚಕೋ ಗಶ್ಚ ಣಶ್ಚ ನಿರ್ವಾಣವಾಚಕಃ |
ತಯೋರೀಶಂ ಪರಂ ಬ್ರಹ್ಮ ಗಣೇಶಂ ಪ್ರಣಮಾಮ್ಯಹಂ || ೮೭ ||

ಏಕಶಬ್ದಃ ಪ್ರಧಾನಾರ್ಥೋ ದಂತಶ್ಚ ಬಲವಾಚಕಃ |
ಬಲಂ ಪ್ರಧಾನಂ ಸರ್ವಸ್ಮಾದೇಕದಂತಂ ನಮಾಮ್ಯಹಂ || ೮೮ ||

---

೮೫. ವಿಷ್ಣು :—'ಗಣೇಶ, ಏಕದಂತ, ಹೇರಂಬ, ವಿಘ್ನನಾಯಕ, ಲಂಬೋದರ, ಶೂರ್ಪಕರ್ಣ, ಗಜವಕ್ತ್ರ, ಗುಹಾಗ್ರಜ, ಎಂದು ಗಣಪತಿಗೆ ಎಂಟು ದಿವ್ಯನಾಮಗಳುಂಟು.

೮೬. ಹರನ ಅರ್ಧಾಂಗಿಯೇ, ಸ್ತೋತ್ರಗಳಿಗೆಲ್ಲ ಸಾರಭೂತವೂ, ಸಕಲ ವಿಘ್ನಪರಿಹಾರಕವೂ, ಆದ ನಿನ್ನ ಪುತ್ರನ ದಿವ್ಯನಾಮಗಳ ಅರ್ಥವನ್ನು ಹೇಳುವೆನು ಕೇಳು.

೮೭. "ಗ" ಎಂದರೆ ಜ್ಞಾನವೆಂದರ್ಥವಾಗುವುದು, "ಣ" ಎಂದರೆ ಮುಕ್ತಿಯೆಂದರ್ಥವಾಗುವುದು. ಆದುದರಿಂದ ಜ್ಞಾನಮುಕ್ತಿಗಳಿಗೊಡೆಯನಾದವನೇ "ಗಣೇಶ"ನೆನಿಸುವನು. ಪರಬ್ರಹ್ಮಸ್ವರೂಪನಾದ ಆ ಗಣೇಶನನ್ನು ನಾನು ವಂದಿಸುವೆನು.

೮೮. "ಏಕ" ಎಂದರೆ ಪ್ರಧಾನವೆಂದೂ "ದಂತ" ಎಂದರೆ ಬಲವೆಂದೂ ಅರ್ಥವಾಗುವುದರಿಂದ, ಪ್ರಧಾನ ಬಲರೂಪನೇ ಏಕದಂತನೆನಿಸುವನು ಆ ಏಕದಂತನಿಗೆ ನಮಸ್ಕರಿಸುವೆನು.

ದೀನಾರ್ಥವಾಚಕೋ ಹೇಶ್ಚ ರಮ್ಬಃ ಪಾಲನವಾಚಕಃ ।
ಪಾಲಕಂ ದೀನಲೋಕಾನಾಂ ಹೇರಂಬಂ ಪ್ರಣಮಾಮ್ಯಹಂ ॥ ೮೯ ॥

ವಿಪತ್ತಿವಾಚಕೋ ವಿಘ್ನೋ ನಾಯಕಃ ಖಂಡನಾರ್ಥಕಃ ।
ವಿಪತ್ಖಂಡನಕಾರಂ ತಂ ಪ್ರಣಮೇ ವಿಘ್ನನಾಯಕಂ ॥ ೯೦ ॥

ವಿಷ್ಣುದತ್ತೈಶ್ಚ ನೈವೇದ್ಯೈರ್ಯಸ್ಯ ಲಂಬಂ ಪುರೋದರಂ ।
ಪಿತ್ರಾದತ್ತೈಶ್ಚ ವಿವಿಧೈರ್ವಂದೇ ಲಂಬೋದರಂ ಚ ತಂ ॥ ೯೧ ॥

ಶೂರ್ಪಾಕಾರೌ ಚ ಯತ್ಕರ್ಣೌ ವಿಘ್ನವಾರಣಕಾರಕೌ ।
ಸಂಪದ್ದೌ ಜ್ಞಾನರೂಪೌ ಚ ಶೂರ್ಪಕರ್ಣಂ ನಮಾಮ್ಯಹಂ ॥ ೯೨ ॥

ವಿಷ್ಣುಪ್ರಸಾದಂ ಮುನಿನಾ ದತ್ತಂ ಯನ್ಮೂರ್ಧ್ನಿ ಪುಷ್ಪಕಂ ।
ತದ್ಗಜೇಂದ್ರಮುಖಂ ಕಾಂತಂ ಗಜವಕ್ತ್ರಂ ನಮಾಮ್ಯಹಂ ॥ ೯೩ ॥

---

೮೯. "ಹೇ" ಎಂದರೆ ದೀನನೆಂದೂ, "ರಂಭ" ಎಂದರೆ ರಕ್ಷಕನೆಂದೂ ಅರ್ಥವಾಗುವುದು. ದೀನಜನರಕ್ಷಕನಾದ ಆ ಹೇರಂಬನಿಗೆ ನಾನು ವಂದಿಸುವೆನು.

೯೦. "ವಿಘ್ನ"ವೆಂದರೆ ವಿಪತ್ತೆಂದೂ, "ನಾಯಕ"ನೆಂದರೆ ಖಂಡಿಸುವವನೆಂದೂ ಅರ್ಥವಾಗುವುದು. ವಿಪತ್ಪರಿಹಾರಕನಾದ ಆ ವಿಘ್ನನಾಯಕನಿಗೆ ಸಾಷ್ಟಾಂಗ ವೆರಗುವೆನು

೯೧. ವಿಷ್ಣು ಮತ್ತು ತಂದೆಯಾದ ಶಿವನು ಕೊಟ್ಟ ವಿವಿಧ ನೈವೇದ್ಯಗಳಿಂದ ಯಾರ ಮುಂದಿನ ಹೊಟ್ಟೆಯು ನೇತಾಡುತ್ತಿರುವುದೋ ಆ ಲಂಬೋದರನಿಗೆ ನಮಿಸುವೆನು.

೯೨. ಯಾರ ಕಿವಿಗಳು ಮೊರದ ಆಕಾರದಿಂದಿದ್ದು, ವಿಘ್ನನಾಶಕವಾಗಿ, ಸಂಪತ್ಪ್ರದವೂ, ಜ್ಞಾನರೂಪವೂ ಆಗಿರುವವೋ, ಆ ಶೂರ್ಪಕರ್ಣನಿಗೆ ನಾನು ಸಾಷ್ಟಾಂಗ ನಮಿಸುವೆನು

೯೩. ದೂರ್ವಾಸಮಹರ್ಷಿಯು ಕೊಟ್ಟ ವಿಷ್ಣುವಿನ ಪ್ರಸಾದಪುಷ್ಪವು ಯಾವ ಗಜೇಂದ್ರನ ತಲೆಯಮೇಲಿದ್ದಿತೋ, ಆ ತಲೆಯಿಂದ ಕೂಡಿದ ಗಜವಕ್ತ್ರನಿಗೆ ನಾನು ವಂದಿಸುವೆನು.

ಗುಹಸ್ಯಾಗ್ರೇ ಚ ಜಾತೋಽಯಮಾವಿರ್ಭೂತೋ ಹರಾಲಯೇ ।
ವಂದೇ ಗುಹಾಗ್ರಜಂ ದೇವಂ ಸರ್ವದೇವಾಗ್ರಪೂಜಿತಂ ॥ ೯೪ ॥

ಏತನ್ನಾಮಾಷ್ಟಕಂ ದುರ್ಗೇ ನಾನಾಶಕ್ತಿಯುತಂ ಪರಂ ।
ಏತನ್ನಾಮಾಷ್ಟಕಂ ಸ್ತೋತ್ರಂ ನಾನಾರ್ಥಸಹಿತಂ ಶುಭಂ ॥ ೯೫ ॥

ತ್ರಿಸಂಧ್ಯಂ ಯಃ ಪಠೇನ್ನಿತ್ಯಂ ಸ ಸುಖೀ ಸರ್ವತೋ ಜಯೀ ।
ತತೋ ವಿಘ್ನಾಃ ಪಲಾಯಂತೇ ವೈನತೇಯಾದ್ಯಥೋರಗಾಃ ॥ ೯೬ ॥

ಗಣೇಶ್ವರಪ್ರಸಾದೇನ ಮಹಾಜ್ಞಾನೀ ಭವೇದ್ಧ್ರುವಂ ।
ಪುತ್ರಾರ್ಥೀ ಲಭತೇ ಪುತ್ರಂ ಭಾರ್ಯಾರ್ಥೀ ಕುಶಲಾಂ ಸ್ತ್ರಿಯಂ ॥ ೯೭ ॥

---

೯೪. ಗುಹ (ಷಣ್ಮುಖ)ನಿಗಿಂತ ಮೊದಲು ಹುಟ್ಟಿ, ಹರನ ಮಂದಿರದಲ್ಲಿ ಆವಿರ್ಭವಿಸಿ ಎಲ್ಲರಿಗಿಂತಲೂ ಮೊದಲು ಪೂಜೆಗೊಳ್ಳುವ ಗುಹಾಗ್ರಜನಿಗೆ ನಮಿಸುವೆನು.

೯೫. ಎಲೌ ದುರ್ಗೆಯೇ, ಗಣಪತಿಯ ಈ ಎಂಟು ದಿವ್ಯನಾಮಗಳು ನಾನಾಶಕ್ತಿಯಿಂದ ಕೂಡಿರುವುವು. ಎಂಟು ದಿವ್ಯನಾಮವುಳ್ಳ ಈ ಸ್ತೋತ್ರವು ನಾನಾರ್ಥಸಹಿತವೂ ಶುಭಕರವೂ ಆಗಿರುವುದು.

೯೬. ಮೂರು ಸಂಧ್ಯಾಕಾಲದಲ್ಲೂ ಇದನ್ನು ಪಠಿಸುವವನು ಸರ್ವದಾ ಸುಖಿಯೂ, ಜಯಶಾಲಿಯೂ ಆಗುವನು. ಗರುಡನನ್ನು ಕಂಡ ಹಾವುಗಳು ದೂರ ಓಡುವಂತೆ ಅವನನ್ನು ಕಂಡು ವಿಘ್ನಗಳು ದೂರಹೋಗುವುವು.

೯೭. ಗಣೇಶ್ವರನ ಅನುಗ್ರಹದಿಂದ ಖಂಡಿತವಾಗಿಯೂ ಮಹಾಜ್ಞಾನಿಯಾಗುವನು. ಪುತ್ರಾಭಿಲಾಷಿಯು ಪುತ್ರನನ್ನೂ, ಭಾರ್ಯಾರ್ಥಿಯು ಸುಂದರಳಾದ ಭಾರ್ಯೆಯನ್ನೂ ಪಡೆಯುವನು.

ಮಹಾಜಡಃ ಕವೀಂದ್ರಶ್ಚ ವಿದ್ಯಾವಾಂಶ್ಚ ಭವೇದ್ಧ್ರುವಂ |
ಪುತ್ರಸ್ತ್ವಂ ಪಶ್ಯ ವೇದೇ ಚ ತಥಾ ಕೋಪಂ ಚ ನೋ ಕುರು　　|| ೯೮ ||

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ತೃತೀಯೇ ಗಣಪತಿಖಂಡೇ ನಾರಾಯಣನಾರದಸಂವಾದೇ ಗಣೇಶಸ್ತೋತ್ರಕಥನಂ ನಾಮ ಚತುಶ್ಚತ್ವಾರಿಂಶತ್ತಮೋಽಧ್ಯಾಯಃ

---

೯೮. ಗಣಪತಿಯ ಅನುಗ್ರಹ ದೊರೆತರೆ ಮಹಾಮೂರ್ಖನೂ ಕೂಡ ವಿದ್ಯಾವಂತನಾಗುವುದಲ್ಲದೆ ಕವಿಶ್ರೇಷ್ಠನೆನಿಸುವನು. ಎಲೌ ಪಾರ್ವತಿಯೇ, ಪುತ್ರ ಸದೃಶನಾದ ಪರಶುರಾಮನಲ್ಲಿ ನೀನು ಕೋಪಮಾಡಬೇಡ.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಗಣಪತಿ ಖಂಡದಲ್ಲಿ ಗಣೇಶಸ್ತೋತ್ರ ಕಥನವೆಂಬ ನಲವತ್ತನಾಲ್ಕನೆಯ ಅಧ್ಯಾಯವು ಮುಗಿದುದು.

ನಲವತ್ತನಾಲ್ಕನೆಯ ಅಧ್ಯಾಯದ ಸಾರಾಂಶ

ಪಾರ್ವತಿಯು ತನ್ನ ಪುತ್ರನಿಗೆ ದಂತಭಂಗವಾದುದನ್ನು ಕಂಡು ವ್ಯಥೆಗೊಂಡು, ತಾನು ಸರ್ವಶಕ್ತಳಾದರೂ ಪತಿಯು ಎದುರಿನಲ್ಲಿ ಸ್ವತಂತ್ರ ವಹಿಸಲಿಚ್ಛಿಸದೆ. ಗಣಪತಿ ಮತ್ತು ಭಾರ್ಗವನ ತಪ್ಪುನೆಪ್ಪುಗಳನ್ನು ವಿಚಾರಿಸಬೇಕೆಂದು ಶಿವನಲ್ಲಿ ವಿಜ್ಞಾಪಿಸಿದಳು. ಮತ್ತು ಅವನ ಅನುಜ್ಞೆಪಡೆದು ಪರಶುರಾಮನನ್ನು ಕುರಿತು ಇಂತೆಂದಳು. ನೀನು ಸದ್ವಂಶದಲ್ಲಿ ಹುಟ್ಟಿ, ಶಿವನ ಅನುಗ್ರಹದಿಂದ ಅಮೋಘವಾದ ಪರಶು (ಕೊಡಲಿ) ವನ್ನು ಪಡೆದು, ಕ್ಷತ್ರಿಯರನ್ನೆಲ್ಲ ನಿರ್ಮೂಲಗೊಳಿಸಿ ಕೀರ್ತಿಗಳಿಸಿದೆ ಈಗ ಗುರುಪುತ್ರನಾದ ಗಣಪತಿಯ ದಂತಭಂಗಮಾಡಿ, ಮಹಾ ಪಾಪಿಯೆಂಬ ಅಪಕೀರ್ತಿಗೊಳಗಾದೆ. ಆದುದರಿಂದ 'ದುಷ್ಟನಾದ ನಿನ್ನನ್ನು ನಾನು ಸಂಹರಿಸುವೆನು' ಎಂದು ಪಾರ್ವತಿಯು ಪರಶುರಾಮನನ್ನು ಹೊಡೆಯಲು ಕೋಪದಿಂದ ಕೈಯೆತ್ತಿದಾಗ ಭಾರ್ಗವನು ಶ್ರೀಕೃಷ್ಣನ ಮರೆಹೊಕ್ಕನು. ಕೂಡಲೇ ವಿಷ್ಣುವು ಬ್ರಹ್ಮಚಾರಿಯ ರೂಪದಿಂದ ಅಲ್ಲಿಗೆ ಬರಲು ಶಿವನು ಅತಿಥಿಯಾದ ಅವನಿಗೆ ಭಯಭಕ್ತಿಗಳಿಂದ ಪೂಜಿಸಿ, ಅತಿಥಿಯ ಮಹಿಮೆಯನ್ನು ಕೊಂಡಾಡಿದನು. ಆಗ ಬ್ರಹ್ಮಚಾರಿಯು ತನ್ನ ನಿಜಸ್ವರೂಪವನ್ನು ತಿಳಿಸಿ, ಮಾನವರಿಗೆ ತಂದೆತಾಯಿಗಳಿಗಿಂತ ಗುರುವು ಸರ್ವಶ್ರೇಷ್ಠನಾದುದರಿಂದ, ಪರಶುರಾಮನು ಗುರುಪುತ್ರನ ದಂತಭಂಗಮಾಡಿದುದು ಮಹಾಪರಾಧವೆಂದು ತಿಳಿಸಿದನು. ಅಲ್ಲದೆ ಪುತ್ರಸದೃಶನಾದ ಪರಶುರಾಮನಲ್ಲಿ ಕೋಪಗೊಳ್ಳುವುದುಚಿತವಲ್ಲವೆಂದು ಪಾರ್ವತಿಯನ್ನೂ ಸಮಾಧಾನಗೊಳಿಸಿ ಗಣಪತಿಯ ಮಹಿಮೆಯನ್ನು ಕೊಂಡಾಡಿದನು.

— ॥ ಓಂ ॥—

—॥ ಶ್ರೀ ಗಣೇಶಾಯ ನಮಃ ॥—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಗಣಪತಿಖಂಡೇ

॥ ಪಂಚಚತ್ವಾರಿಂಶತ್ತಮೋಽಧ್ಯಾಯಃ ॥

॥ ನಾರಾಯಣ ಉವಾಚ ॥

ಪಾರ್ವತೀಂ ಬೋಧಯಿತ್ವಾ ತು ವಿಷ್ಣೂ ರಾಮಮುವಾಚ ಹ ।
ಹಿತಂ ಸಾರಂ ನೀತಿಸಾರಂ ಪರಿಣಾಮಸುಖಾವಹಂ ॥ ೧ ॥

॥ ವಿಷ್ಣುರುವಾಚ ॥

ರಾಮ ತ್ವಮಧುನಾ ಸತ್ಯಮಪರಾಧೀ ಶ್ರುತೇರ್ಮತೇ ।
ಕೋಪಾತ್ಕೃತ್ವಾ ದಂತಭಂಗಂ ಗಣೇಶಸ್ಯ ಸ್ಥಿತೋಽಶಿವೇ ॥ ೨ ॥

ಸ್ತೋತ್ರೇಣೈವ ಮಯೋಕ್ತೇನ ಸ್ತುತ್ವಾ ಗಣಪತಿಂ ಪರಂ ।
ಕಾಣ್ವಶಾಖೋಕ್ತವಿಧಿನಾ ಸ್ತೌಹಿ ದುರ್ಗಾಂ ಜಗತ್ಪ್ರಸೂಂ ॥ ೩ ॥

ನಲವತ್ತೈದನೆಯ ಅಧ್ಯಾಯವು

೧. ನಾರಾಯಣಮಹರ್ಷಿ:—ವಿಷ್ಣುವು ಪಾರ್ವತಿಯನ್ನು ಸಮಾಧಾನಗೊಳಿಸಿದನಂತರ ಪರಶುರಾಮನನ್ನು ಕುರಿತು ಹಿತಕರವೂ, ಸಾರಭೂತವೂ ನೀತಿಯುತವೂ, ಪರಿಣಾಮಸುಖದಾಯಕವೂ ಆದ ಕೆಲವು ನುಡಿಗಳನ್ನಾಡಿದನು.

೨. ವಿಷ್ಣು :—ಎಲೈ ಪರಶುರಾಮನೇ, ಶಾಸ್ತ್ರದೃಷ್ಟಿಯಿಂದ ನೀನೀಗ ಸತ್ಯವಾಗಿಯೂ ಅಪರಾಧಿಯಾಗಿದ್ದೀಯೆ. ಕೋಪದಿಂದ ಗುರುಪುತ್ರನಾದ ಗಣೇಶನ ದಂತಭಂಗಮಾಡಿ ಅಮಂಗಳಕ್ಕೊಳಗಾಗಿರುವೆ.

೩. ಆದುದರಿಂದ ನಾನು ಹೇಳಿದ ಸ್ತೋತ್ರದಿಂದ ಗಣಪತಿಯನ್ನು ಸ್ತುತಿಸಿ. ಜಗನ್ಮಾತೆಯಾದ ದುರ್ಗಿಯನ್ನೂ ಕಾಣ್ವಶಾಖೋಕ್ತರೀತಿಯಲ್ಲಿ ಸ್ತುತಿಸು.

ಶ್ರೀಕೃಷ್ಣಸ್ಯ ಪರಾಶಕ್ತಿರ್ಬುದ್ಧಿರೂಪಾ ಜಗತ್ಪ್ರಭೋಃ ।
ಅಸ್ಯಾಂ ಚ ತವ ರುಷ್ಟಾಯಾಂ ಹತಾ ಬುದ್ಧಿರ್ಭವಿಷ್ಯತಿ ॥ ೪ ॥

ಸರ್ವಶಕ್ತಿಸ್ವರೂಪೇಯಮನಯಾ ಶಕ್ತಿಮಜ್ಜಗತ್ ।
ಅನಯಾ ಶಕ್ತಿಮಾನ್ಕೃಷ್ಣೋ ನಿರ್ಗುಣಃ ಪ್ರಕೃತೇಃ ಪರಃ ॥ ೫ ॥

ಸೃಷ್ಟಿಂ ಕರ್ತುಂ ನ ಶಕ್ತಶ್ಚ ಬ್ರಹ್ಮ ಶಕ್ತ್ಯಾಽನಯಾ ವಿನಾ ।
ವಯಮಸ್ಯಾಂ ಪ್ರಸೂತಾಶ್ಚ ಬ್ರಹ್ಮವಿಷ್ಣುಮಹೇಶ್ವರಾಃ ॥ ೬ ॥

ಸುರಸಂಘೇಽಸುರಗ್ರಸ್ತೇ ಕಾಲೇ ಘೋರತರೇ ದ್ವಿಜ ।
ತೇಜಸ್ಸು ಸರ್ವದೇವಾನಾಮಾವಿರ್ಭೂತಾ ಪುರಾಸತೀ ॥ ೭ ॥

ಕೃಷ್ಣಾಜ್ಞಯಾಽಸುರಾನ್ಹತ್ವಾ ದತ್ವಾ ತೇಭ್ಯಃ ಪದಂ ತತಃ ।
ದಕ್ಷಪತ್ನ್ಯಾಂ ಜನಿಂ ಲೇಭೇ ದಕ್ಷಸ್ಯ ತಪಸಾ ಪುರಾ ॥ ೮ ॥

೪. ದುರ್ಗೆಯು, ಜಗತ್ಪ್ರಭುವಾದ ಶ್ರೀಕೃಷ್ಣನ ಪರಾಶಕ್ತಿಯೂ, ಬುದ್ಧಿರೂಪಳೂ ಆಗಿರುವಳು. ಇವಳು ನಿನ್ನಲ್ಲಿ ಕುಪಿತಳಾದರೆ ನಿನ್ನ ಬುದ್ಧಿಯೆಲ್ಲವೂ ನಾಶವಾಗುವುದು.

೫. ಸರ್ವಶಕ್ತಿಸ್ವರೂಪಳಾದ ಈ ದುರ್ಗೆಯಿಂದಲೇ ಜಗತ್ತು ಶಕ್ತಿಯುತವಾಗುವುದು. ನಿರ್ಗುಣನೂ, ಪ್ರಕೃತಿಗಿಂತ ಶ್ರೇಷ್ಠನೂ ಆದ ಶ್ರೀಕೃಷ್ಣನೂ ಕೂಡ ಇವಳಿಂದ ಶಕ್ತಿಯುತನಾಗುವನು.

೬. ಪರಬ್ರಹ್ಮಶಕ್ತಿಸ್ವರೂಪಳಾದ ಇವಳಿಲ್ಲದಿದ್ದರೆ ಪರಮಾತ್ಮನೂ ಸೃಷ್ಟಿಮಾಡಲಸಮರ್ಥನಾಗುವನು. ಬ್ರಹ್ಮವಿಷ್ಣುಮಹೇಶ್ವರರೆಲ್ಲರೂ ಇವಳಿಂದ ಆವಿರ್ಭವಿಸಿದರು.

೭. ಪೂರ್ವದಲ್ಲಿ ದೇವತೆಗಳೆಲ್ಲರೂ ರಾಕ್ಷಸರಬಾಧೆಗೊಳಗಾಗಿದ್ದ ಘೋರ ಸಮಯದಲ್ಲಿ ಸಕಲದೇವತೆಗಳ ತೇಜಸ್ಸಿನಲ್ಲಿ ಈ ದೇವಿಯು ಆವಿರ್ಭವಿಸಿದಳು.

೮. ಅನಂತರ ಶ್ರೀಕೃಷ್ಣನ ಆಜ್ಞೆಯಂತೆ ರಾಕ್ಷಸರನ್ನು ಸಂಹರಿಸಿ, ದೇವತೆಗಳಿಗೆ ಉಚಿತಸ್ಥಾನವನ್ನು ಕೊಟ್ಟು, ತಪಸ್ಸುಮಾಡುತ್ತಿದ್ದ ದಕ್ಷಬ್ರಹ್ಮನ ಪತ್ನಿಯಲ್ಲಿ ಜನಿಸಿ ದಾಕ್ಷಾಯಣಿಯೆನಿಸಿದಳು.

ಭಾರ್ಯಾ ಭೂತ್ವಾ ಶಂಕರಸ್ಯ ಪುನಃ ಪತ್ಯುಶ್ಚ ನಿಂದಯಾ ।
ದೇಹಂ ತ್ಯಕ್ತ್ವಾ ಶೈಲಪತ್ನ್ಯಾಂ ಜನಿಂ ಲೇಭೇ ಪುರಾ ಸತೀ ॥ ೯ ॥

ಶಂಕರಸ್ತಪಸಾ ಲಬ್ಧೋ ಯೋಗೀಂದ್ರಾಣಾಂ ಗುರೋರ್ಗುರುಃ ।
ಲಬ್ಧೋ ಗಣಪತಿಃ ಪುತ್ರಃ ಕೃಷ್ಣಾಂಶಃ ಕೃಷ್ಣಸೇವಯಾ ॥ ೧೦ ॥

ಯಂ ಧ್ಯಾಯಸ್ಯೇವ ನಿತ್ಯಂ ಕಿಂ ತಂ ನ ಜಾನಾಸಿ ಬಾಲಕ ।
ಸ ಏವ ಭಗವಾನ್ಕೃಷ್ಣಶ್ಚಾಂಶೇನ ಗಿರಿಜಾಸುತಃ ॥ ೧೧ ॥

ಕೃತಾಂಜಲಿರ್ನತೋ ಭೂತ್ವಾ ಸ್ತೌಹಿ ದುರ್ಗಾಂ ಶಿವಪ್ರಿಯಾಂ ।
ಶಿವಾಂ ಶಿವಪ್ರದಾಂ ಶೈವಾಂ ಶಿವಬೀಜಾಂ ಶಿವೇಶ್ವರೀಂ ॥ ೧೨ ॥

ಶಿವಾಯಾಃ ಸ್ತೋತ್ರರಾಜೇನ ಪುರಾ ಶೂಲಿಕೃತೇನ ವೈ ।
ತ್ರಿಪುರಸ್ಯ ವಧೇ ಘೋರೇ ಬ್ರಹ್ಮಣಾ ಪ್ರೇರಿತೇನ ಚ ॥ ೧೩ ॥

---

೯. ಶಂಕರನ ಭಾರ್ಯೆಯಾದ ಆ ಸತೀದೇವಿಯು ಪತಿಯ ನಿಂದೆಯನ್ನು ಸಹಿಸಲಾರದೆ ಯಜ್ಞಕುಂಡದಲ್ಲಿ ದೇಹತ್ಯಾಗಮಾಡಿ ಪುನಃ ಪರ್ವತರಾಜನ ಪತ್ನಿಯಲ್ಲಿ ಜನ್ಮವೆತ್ತಿದಳು.

೧೦ ಮತ್ತು ಬಹಳಕಾಲ ತಪಸ್ಸುಮಾಡಿ ಯೋಗಿಗಳ ಗುರುವಾದ ಶಂಕರನನ್ನು ಪತಿಯಾಗಿ ಪಡೆದಳು. ಶ್ರೀಕೃಷ್ಣನ ಸೇವೆಮಾಡಿ ಅವನ ಅಂಶದಿಂದ ಗಣಪತಿಯನ್ನು ಪುತ್ರನನ್ನಾಗಿ ಪಡೆದಳು.

೧೧. ಎಲೈ ಭಾರ್ಗವನೇ, ನೀನು ನಿತ್ಯವೂ ಯಾರನ್ನು ಭಜಿಸುವೆಯೋ ಆ ಕೃಷ್ಣಪರಮಾತ್ಮನ ಮಹಿಮೆಯನ್ನರಿಯೆಯಾ? ಆ ಕೃಷ್ಣಪರಮಾತ್ಮನೇ ತನ್ನದೊಂದಂಶದಿಂದ ಗಿರಿಜೆಯ ಸುತನಾಗಿ ಗಣಪತಿಯೆನಿಸಿರುವನು.

೧೨. ಆದುದರಿಂದ, ವಿನಯದಿಂದ ತಲೆಬಾಗಿ ಕೈಮುಗಿದು ಶಿವಶಕ್ತಿಸ್ವರೂಪಳೂ, ಮಂಗಳದಾಯಕಿಯೂ, ಆದ ಶಿವಪ್ರಿಯೆಯನ್ನು ಸ್ತುತಿಸು.

೧೩. ಹಿಂದೆ ತ್ರಿಪುರಾಸುರ ಸಂಹಾರಕಾಲದಲ್ಲಿ ಬ್ರಹ್ಮನಿಂದ ಪ್ರೇರಿತನಾದ ಶಿವನು ರಚಿಸಿದ ದಿವ್ಯಸ್ತೋತ್ರದಿಂದ ಪಾರ್ವತಿಯನ್ನು ಸ್ತುತಿಸು.

ಇತ್ಯುಕ್ತ್ವಾ ಶ್ರೀಪತಿಃ ಶೀಘ್ರಂ ಜಗಾಮ ಶ್ರೀನಿಕೇತನಂ ।
ಗತೇ ಹರೌ ಹರಿಂ ಸ್ಮೃತ್ವಾ ರಾಮಸ್ತಾಂ ಸ್ತೋತುಮುದ್ಯತಃ ॥ ೧೪

ಸ್ತೋತ್ರೇಣ ವಿಷ್ಣುದತ್ತೇನ ಸರ್ವವಿಘ್ನಹರೇಣ ಚ ।
ಧರ್ಮಾರ್ಥಕಾಮಮೋಕ್ಷಾಣಾಂ ಕಾರಣೇನ ಚ ನಾರದ ॥ ೧೫

ಕೃತಾಂಜಲಿಪುಟೋ ಭೂತ್ವಾ ಸ್ನಾತ್ವಾ ಗಂಗೋದಕೇ ಶುಭೇ ।
ಗುರುಂ ಪ್ರಣಮ್ಯ ಭಕ್ತೇಶಂ ಧೃತ್ವಾ ಧೌತೇ ಚ ವಾಸಸೀ ॥ ೧೬

ಆಚಮ್ಯ ನತ್ವಾ ಮೂರ್ಧ್ನಾ ತಾಂ ಭಕ್ತಿನಮ್ರಾತ್ಮಕಂಧರಃ ।
ಪುಲಕಾಂಚಿತಸರ್ವಾಂಗಶ್ಚಾನಂದಾಶ್ರು ಸಮನ್ವಿತಃ ॥ ೧೭

॥ ಪರಶುರಾಮ ಉವಾಚ ॥

ಶ್ರೀಕೃಷ್ಣಸ್ಯ ಚ ಗೋಲೋಕೇ ಪರಿಪೂರ್ಣತಮಸ್ಯ ಚ ।
ಆವಿರ್ಭೂತಾ ವಿಗ್ರಹತಃ ಪುರಾಸೃಷ್ಟ್ಯುನ್ಮುಖಸ್ಯ ಚ ॥ ೧೮

---

೧೪ ಹೀಗೆಂದು ಹೇಳಿ ಲಕ್ಷ್ಮೀಪತಿಯಾದ ವಿಷ್ಣುವು ಜಾಗ್ರತೆಯಾ ವೈಕುಂಠಕ್ಕೆ ತೆರಳಿದನು. ವಿಷ್ಣುವು ಹೊರಟುಹೋದನಂತರ ಪರಶುರಾಮನು ಹರಿಸ್ಮರಣಪೂರ್ವಕವಾಗಿ ಪಾರ್ವತಿಯನ್ನು ಸ್ತುತಿಸಲಾರಂಭಿಸಿದನು.

೧೫. ಎಲೈ ನಾರದನೇ, ವಿಷ್ಣುವು ತನಗೆ ಉಪದೇಶಿಸಿದ ವಿಘ್ನನಾಶಕವೂ ಧರ್ಮಾರ್ಥಕಾಮಮೋಕ್ಷಗಳಿಗೆ ಆದಿಕಾರಣವೂ ಆದ ದಿವ್ಯಸ್ತೋತ್ರದಿಂ ಭಾರ್ಗವನು ಭವಾನಿಯನ್ನು ಸ್ತುತಿಸಿದನು.

೧೬-೧೭. ಪುಣ್ಯಕರವಾದ ಗಂಗಾಜಲದಲ್ಲಿ ಮಿಂದು, ಶುಭ್ರವಸ್ತ್ರಗಳನ್ನು ಧರಿಸಿ. ಆಚಮನಮಾಡಿ, ಭಕ್ತಿಯಿಂದ ತಲೆಬಾಗ ಕೈಮುಗಿದುಕೊಂಡು, ರೋಮಾಂಚಿತ ಶರೀರನಾಗಿ ಕಣ್ಣುಗಳಲ್ಲಿ ಆನಂದಬಾಷ್ಪವನ್ನು ಸುರಿಸುತ್ತ, ಭಕ್ತಪರಾಧೀನನಾದ ಗುರುವಿಗೆ ನಮಸ್ಕರಿಸಿ, ಪಾರ್ವತೀದೇವಿಯನ್ನು ಸ್ತುತಿಸಿದನು.

೧೮. ಪರಶುರಾಮ :—ಹಿಂದೆ ಗೋಲೋಕದಲ್ಲಿ ಶ್ರೀಕೃಷ್ಣಪರಮಾತ್ಮನು ಸೃಷ್ಟಿಗೆ ಮನಸ್ಸುಮಾಡಿದಾಗ, ಅವನ ಶರೀರದಿಂದ ಪ್ರಕೃತಿಯು ಆವಿರ್ಭವಿಸಿದಳು.

ಸೂರ್ಯಕೋಟಿಪ್ರಭಾಯುಕ್ತಾ ವಸ್ತ್ರಾಲಂಕಾರಭೂಷಿತಾ ।
ವಹ್ನಿಶುದಾಂಶುಕಾಧಾನಾ ಸಸ್ಮಿತಾ ಸುಮನೋಹರಾ ॥ ೧೯ ॥

ನವಯೌವನಸಂಪನ್ನಾ ಸಿಂದೂರಾರುಣಶೋಭಿತಾ ।
ಲಲಿತಂ ಕಬರೀಭಾರಂ ಮಾಲತೀಮಾಲ್ಯಮಂಡಿತಂ ॥ ೨೦ ॥

ಅಹೋಽನಿರ್ವಚನೀಯಾ ತ್ವಂ ಚಾರುಮೂರ್ತಿಂ ಚ ಬಿಭ್ರತೀ ।
ಮೋಕ್ಷಪ್ರದಾ ಮುಮುಕ್ಷೂಣಾಂ ಮಹಾವಿಷ್ಣೋರ್ವಿಧಿಃ ಸ್ವಯಂ ॥ ೨೦ ॥

ಮುಮೋಹ ಕ್ಷಣಮಾತ್ರೇಣ ದೃಷ್ಟ್ವಾ ತ್ವಾಂ ಸರ್ವಮೋಹಿನೀಂ ।
ಬಾಲೈಸ್ಸಂಭೂಯ ಸಹಸಾ ಸಸ್ಮಿತಾ ಧಾವಿತಾ ಪುರಾ ॥ ೨೨ ॥

ಸದ್ಭಿಃ ಖ್ಯಾತಾ ತೇನ ರಾಧಾ ಮೂಲಪ್ರಕೃತಿರೀಶ್ವರೀ ।
ಕೃಷ್ಣಸ್ತಾಂ ಸಹಸಾ ಭೀತೋ ವೀರ್ಯಾಧಾನಂ ಚಕಾರ ಹ ॥ ೨೩ ॥

---

೧೯. ಕೋಟಿಸೂರ್ಯರ ತೇಜಸ್ಸಿನಿಂದ ಬೆಳಗುತ್ತಿದ್ದ ಆ ದೇವಿಯು ಅಗ್ನಿಯಂತೆ ಪರಿಶುದ್ಧವಾದ ವಸ್ತ್ರವನ್ನುಟ್ಟು, ದಿವ್ಯಾಲಂಕಾರಭೂಷಿತಳಾಗಿ ನಗುಮುಖದಿಂದ ಮನೋಹರಳಾಗಿದ್ದಳು.

೨೦. ನವಯುವತಿಯಾದ ಆಕೆಯು ಹಣೆಯಲ್ಲಿ ಚಂದ್ರದ ಬೊಟ್ಟುಗಳನ್ನಿಟ್ಟು, ಸುಂದರವಾದ ಕೇಶಪಾಶಗಳಲ್ಲಿ ಜಾಜಿಮಾಲೆಯನ್ನು ಮುಡಿದಿದ್ದಳು

೨೧. ಅನಿರ್ವಚನೀಯಳೂ, ಸುಂದರಾಕಾರಳೂ, ಮೋಕ್ಷಕಾಮಿಗಳಾದ ಬ್ರಹ್ಮವಿಷ್ಣ್ವಾದಿಗಳಿಗೆ ಮೋಕ್ಷದಾಯಕಳೂ ಆದ ಆ ಪ್ರಕೃತಿದೇವಿಯೇ ನೀನಾಗಿರುವೆ.

೨೨. ಜಗನ್ಮೋಹಿನಿಯಾದ ನಿನ್ನನ್ನು ನೋಡಿ ಶ್ರೀಕೃಷ್ಣನು ಕ್ಷಣಮಾತ್ರದಲ್ಲಿಯೇ ಮೋಹಗೊಳ್ಳಲು, ನೀನು ನಗುಮುಖದಿಂದ, ಅವನ ಸಮೀಪಕ್ಕೆ ಓಡಿಹೋದೆ.

೨೩. ರಾಸಮಂಡಲದಲ್ಲಿ ವ್ಯಕ್ತಳಾಗಿ ಕೃಷ್ಣನ ಸಮೀಪಕ್ಕೆ ಓಡಿದುದರಿಂದಲೇ ಎಲ್ಲವರು ಮೂಲಪ್ರಕೃತಿಯನ್ನು ರಾಧೆಯೆಂದು ಕರೆದರು. ಶ್ರೀಕೃಷ್ಣನು ಕಾಮಾತುರನಾದ ಆಕೆಯ ಗರ್ಭದಲ್ಲಿ ತನ್ನ ವೀರ್ಯವನ್ನಿಟ್ಟನು.

ತತೋ ಡಿಂಭಂ ಮಹಜ್ಜಜ್ಞೇ ತತೋ ಜಾತೋ ಮಹಾವಿರಾಟ್ ।
ಯಸ್ಯೈವ ಲೋಮಕೂಪೇಷು ಬ್ರಹ್ಮಾಂಡಾನ್ಯಖಿಲಾನಿ ಚ ॥ ೨೪ ॥

ರಾಧಾ ರತಿಕ್ರಮೇಣೈವ ತನ್ನಿಶ್ವಾಸೋ ಬಭೂವ ಹ ।
ಸ ನಿಶ್ವಾಸೋ ಮಹಾವಾಯುಃ ಸ ವಿರಾಡ್ ವಿಶ್ವಧಾರಕಃ ॥ ೨೫ ॥

ಭಯಘರ್ಮಜಲೇನೈವ ಪುಪ್ಲುವೇ ವಿಶ್ವಗೋಲಕಂ ।
ಸ ವಿರಾಡ್ವಿಶ್ವನಿಲಯೋ ಜಲರಾಶಿರ್ಬಭೂವ ಹ ॥ ೨೬ ॥

ತತಸ್ತ್ವಂ ಪಂಚಧಾ ಭೂಯ ಪಂಚಮೂರ್ತಿಶ್ಚ ಬಿಭ್ರತೀ ।
ಪ್ರಾಣಾಧಿಷ್ಠಾತೃಮೂರ್ತಿರ್ಯಾ ಕೃಷ್ಣಸ್ಯ ಪರಮಾತ್ಮನಃ ।
ಕೃಷ್ಣಪ್ರಾಣಾಧಿಕಾಂ ರಾಧಾಂ ತಾಂ ವದಂತಿ ಪುರಾ ವಿದಃ ॥ ೨೭ ॥

ವೇದಾಧಿಷ್ಠಾತೃಮೂರ್ತಿರ್ಯಾ ವೇದಶಾಸ್ತ್ರಪ್ರಸೂರಪಿ ।
ತಾಂ ಸಾವಿತ್ರೀಂ ಶುದ್ಧರೂಪಾಂ ಪ್ರವದಂತಿ ಮನೀಷಿಣಃ ॥ ೨೮ ॥

---

೨೪. ಆಗ ಆಕೆಯಿಂದ ಒಂದು ದೊಡ್ಡ ಶಿಶುವು ಅವತರಿಸಿ ಮಹಾವಿರಾಟ್ಪುರುಷ ನೆನಿಸಿತು. ಆ ಮಹಾವಿರಾಟ್ಪುರುಷನ ರೋಮಕೂಪಗಳಲ್ಲಿ ನಿಖಿಲ ಬ್ರಹ್ಮಾಂಡವೂ ಅಡಗಿರುವುದು.

೨೫. ರಾಧಾದೇವಿಗೆ ರತ್ಯಾಯಾಸದಿಂದ ಉತ್ಪನ್ನವಾದ ನಿಃಶ್ವಾಸವಾಯುವೇ ನಿಖಿಲ ವಿಶ್ವಕ್ಕೂ ಆಧಾರವಾದ ಮಹಾವಾಯುವೆನಿಸಿತು.

೨೬. ಆಕೆಯ ಬೆವರು ಹನಿಗಳು ನಿಖಿಲ ವಿಶ್ವವನ್ನೂ ತೋಯಿಸಿ ವಿಶ್ವನಿಲಯವಾದ ದೊಡ್ಡ ಜಲರಾಶಿಯಾಯಿತು.

೨೭. ಅನಂತರ ಮೂಲಪ್ರಕೃತಿಯಾದ ನೀನೇ ಐದುರೂಪವನ್ನು ಧರಿಸಿ ಐದು ಹೆಸರಿನಿಂದ ಪ್ರಸಿದ್ಧಳಾದೆ. ಶ್ರೀಕೃಷ್ಣಪರಮಾತ್ಮನ ಪ್ರಾಣಗಳಿಗೆ ಅಧಿಷ್ಠಾತೃ ದೇವಿಯೂ, ಪ್ರಾಣಕ್ಕಿಂತ ಅಧಿಕಪ್ರಿಯಳೂ ಆದ ದೇವಿಯನ್ನು ರಾಧೆಯೆಂದು ಪಂಡಿತರು ಕರೆದರು.

೨೮. ವೇದಗಳಿಗೆ ಅಧಿಷ್ಠಾತೃದೇವಿಯೂ, ವೇದಶಾಸ್ತ್ರಗಳ ಜನನಿಯೂ, ಶುದ್ಧಸತ್ವಸ್ವರೂಪಿಣಿಯೂ ಆದ ದೇವಿಯನ್ನು ಸಾವಿತ್ರಿಯೆಂದು ಬಲ್ಲವರು ಕರೆದರು.

ಐಶ್ವರ್ಯಾಧಿಷ್ಠಾತೃಮೂರ್ತಿಃ ಶಾಂತಿಸ್ತ್ವಂ ಶಾಂತರೂಪಿಣೀ ।
ಲಕ್ಷ್ಮೀಂ ವದಂತಿ ಸಂತಸ್ತಾಂ ಶುದ್ಧಾಂ ಸತ್ತ್ವಸ್ವರೂಪಿಣೀಂ ॥ ೨೯ ॥

ರಾಗಾಧಿಷ್ಠಾತೃದೇವೀ ಯಾ ಶುಕ್ಲಮೂರ್ತಿಸ್ಸತಾಂ ಪ್ರಸೂಃ ।
ಸರಸ್ವತೀಂ ತಾಂ ಶಾಸ್ತ್ರಜ್ಞಾಂ ಶಾಸ್ತ್ರಜ್ಞಾಃ ಪ್ರವದಂತ್ಯಹೋ ॥ ೩೦ ॥

ಬುದ್ಧಿರ್ವಿದ್ಯಾ ಸರ್ವಶಕ್ತೇರ್ಯಾ ಮೂರ್ತಿರಧಿದೇವತಾ ।
ಸರ್ವಮಂಗಲಮಂಗಲ್ಯಾ ಸರ್ವಮಂಗಲರೂಪಿಣೀ ॥ ೩೧ ॥

ಸರ್ವಮಂಗಲಬೀಜಸ್ಯ ಶಿವಸ್ಯ ನಿಲಯೇಽಧುನಾ ॥ ೩೨ ॥

ಶಿವೇ ಶಿವಾಸ್ವರೂಪಾ ತ್ವಂ ಲಕ್ಷ್ಮೀರ್ನಾರಾಯಣಾಂತಿಕೇ ।
ಸರಸ್ವತೀ ಚ ಸಾವಿತ್ರೀ ವೇದಸೂರ್ಬ್ರಹ್ಮಣಃ ಪ್ರಿಯಾ ॥ ೩೩ ॥

---

೨೯. ಐಶ್ವರ್ಯಕ್ಕೆ ಅಧಿಷ್ಠಾತೃದೇವತೆಯೂ, ಶಾಂತಾಕಾರಳೂ, ಶುದ್ಧ ಸತ್ತ್ವಸ್ವರೂಪಿಣಿಯೂ ಆದ ದೇವಿಯನ್ನು ಲಕ್ಷ್ಮಿಯೆಂದು ತಿಳಿದವರು ಕರೆದರು.

೩೦. ರಾಗಕ್ಕೆ ಅಧಿಷ್ಠಾತೃದೇವಿಯೂ, ಶಾಸ್ತ್ರಜ್ಞಾನಯುತಳೂ, ಬಿಳುಪಾದ ಬಣ್ಣವುಳ್ಳವಳೂ ಆದ ದೇವಿಯನ್ನು ಸರಸ್ವತಿಯೆಂದು ಶಾಸ್ತ್ರಜ್ಞರು ಹೇಳಿದರು.

೩೧-೩೨. ಬುದ್ಧಿ, ವಿದ್ಯೆ, ಮುಂತಾದ ಸಕಲ ಶಕ್ತಿಗಳಿಗೂ ಯಾರು ಅಧಿಷ್ಠಾತೃದೇವಿಯೋ, ಸರ್ವಮಂಗಳಸ್ವರೂಪಿಣಿಯೂ, ಸರ್ವಮಂಗಳಕಾರಣಳೂ ಆದ ಆ ನೀನೇ, ಸರ್ವಮಂಗಳಸ್ವರೂಪನಾದ ಶಿವನ ಮಂದಿರದಲ್ಲಿ ದುರ್ಗಿಯೆಸಿ ಸಿರುವೆ.

೩೩. ನೀನು ಶಿವನ ಸಮೀಪದಲ್ಲಿ ಪಾರ್ವತೀರೂಪದಿಂದಲೂ, ನಾರಾಯಣನ ಸನ್ನಿಧಿಯಲ್ಲಿ ಲಕ್ಷ್ಮೀರೂಪದಿಂದಲೂ, ಬ್ರಹ್ಮನ ಸಮೀಪದಲ್ಲಿ ವೇದಮಾತೆಯಾದ ಸಾವಿತ್ರಿ ಮತ್ತು ಸರಸ್ವತಿಯ ರೂಪದಿಂದಲೂ ನೆಲೆಸಿರುವೆ.

ರಾಧಾ ರಾಸೇಶ್ವರಸ್ಯೈವ ಪರಿಪೂರ್ಣತಮಸ್ಯ ಚ ।
ಪರಮಾನಂದರೂಪಸ್ಯ ಪರಮಾನಂದರೂಪಿಣೀ ॥ ೩೪ ॥

ತ್ವತ್ಕಲಾಂಶಾಂಶಕಲಯಾ ದೇವಾನಾಮಪಿ ಯೋಷಿತಃ ॥ ೩೫ ॥

ತ್ವಂ ವಿದ್ಯಾಯೋಷಿತಃ ಸರ್ವಾಸ್ಸರ್ವೇಷಾಂ ಬೀಜರೂಪಿಣೀ ।
ಛಾಯಾ ಸೂರ್ಯಸ್ಯ ಚಂದ್ರಸ್ಯ ರೋಹಿಣೀ ಸರ್ವಮೋಹಿನೀ ॥ ೩೬ ॥

ಶಚೀ ಶಕ್ರಸ್ಯ ಕಾಮಸ್ಯ ಕಾಮಿನೀ ರತಿರೀಶ್ವರೀ ।
ವರುಣಾನೀ ಜಲೇಶಸ್ಯ ವಾಯೋಃ ಸ್ತ್ರೀಪ್ರಾಣವಲ್ಲಭಾ ॥ ೩೭ ॥

ವಹ್ನೇಃ ಪ್ರಿಯಾ ಹಿ ಸ್ವಾಹಾ ಚ ಕುಬೇರಸ್ಯ ಚ ಸುಂದರಿ ।
ಯಮಸ್ಯ ತು ಸುಶೀಲಾ ಚ ನೈರ್ಋತಸ್ಯ ಚ ಕೈಟಭೀ ॥ ೩೮ ॥

---

೩೪. ಪರಿಪೂರ್ಣತಮನೂ, ಪರಮಾನಂದಸ್ವರೂಪನೂ ಆದ ರಾಸೇಶ್ವರನೊಡನೆ, ಪರಮಾನಂದರೂಪಿಣಿಯಾದ ರಾಧಾರೂಪದಿಂದಿರುವೆ.

೩೫. ದೇವಸ್ತ್ರೀಯರೆಲ್ಲರೂ ನಿನ್ನ ಅಂಶ, ಕಲೆ ಮತ್ತು ಕಲಾಂಶದಿಂದ ಜನಿಸಿರುವರು.

೩೬. ಮೂಲಪ್ರಕೃತಿಯೂ, ಸರ್ವೇಶ್ವರಿಯೂ, ಸ್ತ್ರೀಯರಿಗೆಲ್ಲ ಬೀಜಸ್ವರೂಪಿಣಿಯೂ ಆದ ನೀನೇ ಸೂರ್ಯನಿಗೆ ಛಾಯಾರೂಪದಿಂದಲೂ, ಚಂದ್ರನಿಗೆ ರೋಹಿಣೀರೂಪದಿಂದಲೂ ಪತ್ನಿಯಾಗಿರುವೆ.

೩೭. ಇಂದ್ರನಿಗೆ ಶಚೀರೂಪದಿಂದಲೂ, ಮನ್ಮಥನಿಗೆ ರತಿರೂಪದಿಂದಲೂ, ವರುಣನಿಗೆ ವರುಣಾನೀರೂಪದಿಂದಲೂ, ವಾಯುವಿಗೆ ವಾಯವೀರೂಪದಿಂದಲೂ, ನೀನೇ ಕಲಾಂಶದಿಂದ ಪತ್ನಿಯಾಗಿರುವೆ.

೩೮. ಅಗ್ನಿದೇವನ ಪ್ರಿಯಳಾದ ಸ್ವಾಹಾದೇವಿಯೂ, ಕುಬೇರನ ಪತ್ನಿಯಾದ ಸುಂದರಿಯೂ (ಮನೋರಮೆ) ಯಮನ ಪತ್ನಿಯಾದ ಸುಶೀಲೆಯೂ ನೈರ್ಋತನ ಭಾರ್ಯೆಯಾದ ಕೈಟಭಿಯೂ, ನಿನ್ನ ಕಲೆಯಿಂದ ಜನಿಸಿದಳು.

ಐಶಾನೀಸ್ಯಾಚ್ಛಶಿಕಲಾ ಶತರೂಪಾಮನೋಃ ಪ್ರಿಯಾ ।
ದೇವಹೂತಿಃ ಕರ್ದಮಸ್ಯ ವಸಿಷ್ಠಸ್ಯಾಪ್ಯರುಂಧತೀ ॥ ೩೯ ॥

ಲೋಪಾಮುದ್ರಾಪ್ಯಗಸ್ತ್ಯಸ್ಯ ದೇವಮಾತಾsದಿತಿಸ್ತಥಾ ।
ಅಹಲ್ಯಾಗೌತಮಸ್ಯಾಪಿ ಸರ್ವಾಧಾರಾ ವಸುಂಧರಾ ॥ ೪೦ ॥

ಗಂಗಾ ಚ ತುಲಸೀ ಚಾಪಿ ಪೃಥಿವ್ಯಾಂ ಯಾ ಸರಿದ್ವರಾ ।
ಏತಾಃ ಸರ್ವಾಶ್ಚ ಯಾಹ್ಯನ್ಯಾಃ ಸರ್ವಾಸ್ತ್ವತ್ಕಲಯಾಂಬಿಕೇ ॥ ೪೧ ॥

ಗೃಹಲಕ್ಷ್ಮೀರ್ಗೃಹೇ ನೄಣಾಂ ರಾಜಲಕ್ಷ್ಮೀಶ್ಚ ರಾಜಸು ।
ತಪಸ್ವಿನಾಂ ತಪಸ್ಯಾ ತ್ವಂ ಗಾಯತ್ರೀ ಬ್ರಾಹ್ಮಣಸ್ಯ ಚ ॥ ೪೨ ॥

ಸತಾಂ ಸತ್ವಸ್ವರೂಪಾ ತ್ವಮಸತಾಂ ಕಲಹಾಂಕುರಾ ।
ಜ್ಯೋತೀರೂಪಾ ನಿರ್ಗುಣಸ್ಯ ಶಕ್ತಿಸ್ತ್ವಂ ಸಗುಣಸ್ಯ ಚ ॥ ೪೩ ॥

---

೩೯. ಈಶಾನನಿಗೆ ಶಶಿಕಲೆಯೂ, ಸ್ವಾಯಂಭುವ ಮನುವಿಗೆ ಶತರೂಪೆಯೂ ಕರ್ದಮಮಹರ್ಷಿಗೆ ದೇವಹೂತಿಯೂ, ವಸಿಷ್ಠನಿಗೆ ಅರುಂಧತಿಯೂ, ನಿನ್ನ ಕಲೆಯಿಂದ ಜನಿಸಿ ಪತ್ನಿಯರಾದರು.

೪೦. ಅಗಸ್ತ್ಯನ ಪತ್ನಿಯಾದ ಲೋಪಾಮುದ್ರೆಯೂ, ದೇವತೆಗಳ ಮಾತೆಯಾದ ಅದಿತಿಯೂ, ಗೌತಮನ ಪತ್ನಿಯಾದ ಅಹಲ್ಯೆಯೂ, ಸರ್ವಾಧಾರಳಾದ ವಸುಂಧರೆಯೂ, ನಿನ್ನ ಕಲೆಯಿಂದ ಜನಿಸಿದರು.

೪೧. ತುಳಸೀದೇವಿಯೂ, ಪೃಥ್ವಿಯಲ್ಲಿರುವ ಗಂಗೆಯೇ ಮುಂತಾದ ಪವಿತ್ರನದಿಗಳೂ ಇನ್ನೂ ಅನೇಕ ದೇವಿಯರೂ ಜಗದಂಬಿಕೆಯಾದ ನಿನ್ನ ಕಲೆಯಿಂದ ಜನಿಸಿರುವರು.

೪೨. ನೀನು ಗೃಹಸ್ಥರ ಮನೆಯಲ್ಲಿ ಗೃಹಲಕ್ಷ್ಮಿಯಾಗಿಯೂ. ರಾಜರ ಮನೆಯಲ್ಲಿ ರಾಜ್ಯಲಕ್ಷ್ಮಿಯಾಗಿಯೂ, ತಪಸ್ವಿಗಳಿಗೆ ತಪಸ್ಯಾರೂಪಳಾಗಿಯೂ ಬ್ರಾಹ್ಮಣರಿಗೆ ಗಾಯತ್ರೀರೂಪಳಾಗಿಯೂ, ಇರುವೆ.

೪೩. ಸತ್ಪುರುಷರಿಗೆ ಸತ್ವಸ್ವರೂಪಳಾಗಿಯೂ, ದುಷ್ಟರಿಗೆ ಕಲಹರೂಪಿಣಿಯಾಗಿಯೂ ಇರುವ ನೀನು ನಿರ್ಗುಣನಾದ ಪರಮಾತ್ಮನಿಗೆ ಜ್ಯೋತೀರೂಪಿಣಿಯಾಗಿಯೂ ಇರುವೆ.

ಸೂರ್ಯೇ ಪ್ರಭಾಸ್ವರೂಪಾ ತ್ವಂ ದಾಹಿಕಾ ಚ ಹುತಾಶನೇ ।
ಜಲೇ ಶೈತ್ಯಸ್ವರೂಪಾ ಚ ಶೋಭಾರೂಪಾ ನಿಶಾಕರೇ ॥ ೪೪ ॥

ತ್ವಂ ಭೂಮೌ ಗಂಧರೂಪಾ ಚಾಪ್ಯಾಕಾಶೇ ಶಬ್ದರೂಪಿಣೀ ।
ಕ್ಷುತ್ಪಿಪಾಸಾದಯಸ್ತ್ವಂ ಚ ಜೀವಿನಾಂ ಸರ್ವಶಕ್ತಯಃ ॥ ೪೫ ॥

ಸರ್ವಬೀಜಸ್ವರೂಪಾ ತ್ವಂ ಸಂಸಾರೇ ಸಾರರೂಪಿಣೀ ।
ಸ್ಮೃತಿರ್ಮೇಧಾ ಚ ಬುದ್ಧಿರ್ವಾ ಜ್ಞಾನಶಕ್ತಿರ್ವಿಪಶ್ಚಿತಾಂ ॥ ೪೬ ॥

ಕೃಷ್ಣೇನ ವಿದ್ಯಾ ಯಾ ದತ್ತಾ ಸರ್ವಜ್ಞಾನಪ್ರಸೂಃ ಶುಭಾ ।
ಶೂಲಿನೇ ಕೃಪಯಾ ಸಾ ತ್ವಂ ಯಯಾ ಮೃತ್ಯುಂಜಯಃ ಶಿವಃ ॥ ೪೭ ॥

ಸೃಷ್ಟಿಪಾಲನಸಂಹಾರಶಕ್ತಯಸ್ತ್ರಿವಿಧಾಶ್ಚ ಯಾಃ ।
ಬ್ರಹ್ಮವಿಷ್ಣುಮಹೇಶಾನಾಂ ಸಾ ತ್ವಮೇವ ನಮೋಽಸ್ತು ತೇ ॥ ೪೮ ॥

---

೪೪. ನೀನು ಸೂರ್ಯನಲ್ಲಿ ಪ್ರಭಾರೂಪಳಾಗಿಯೂ, ಅಗ್ನಿಯಲ್ಲಿ ದಾಹರೂಪಳಾಗಿಯೂ, ನೀರಿನಲ್ಲಿ ಶೈತ್ಯರೂಪಳಾಗಿಯೂ, ಚಂದ್ರನಲ್ಲಿ ಕಾಂತಿರೂಪಳಾಗಿಯೂ ಇರುವೆ.

೪೫. ಭೂಮಿಯಲ್ಲಿ ಗಂಧರೂಪದಿಂದಲೂ, ಆಕಾಶದಲ್ಲಿ ಶಬ್ದರೂಪದಿಂದಲೂ, ಪ್ರಾಣಿಗಳಿಗೆ ಹಸಿವು, ಬಾಯಾರಿಕೆ ಮುಂತಾದ ಸಕಲ ಶಕ್ತಿಸ್ವರೂಪದಿಂದಲೂ ನೀನಿರುವೆ.

೪೬. ಸರ್ವಬೀಜಸ್ವರೂಪಳಾದ ನೀನು ಸಂಸಾರಕ್ಕೆ ಸಾರಭೂತಳಾಗಿರುವೆ. ಪಂಡಿತರಿಗೆ ಸ್ಮೃತಿ, ಮೇಧೆ ಮತ್ತು ಜ್ಞಾನಶಕ್ತಿರೂಪಳಾಗಿರುವೆ.

೪೭. ಸಕಲಜ್ಞಾನಗಳಿಗೆ ಜನನಿಯೂ, ವಿದ್ಯಾಸ್ವರೂಪಿಣಿಯೂ, ಆದ ನಿನ್ನನ್ನು ಶ್ರೀಕೃಷ್ಣನು ಶಿವನಿಗೆ ಅನುಗ್ರಹಿಸಿದುದರಿಂದಲೇ ಶಿವನು ಮೃತ್ಯುಂಜಯನೆನಿಸಿದನು.

೪೮. ಬ್ರಹ್ಮವಿಷ್ಣುಮಹೇಶ್ವರರಿಗೆ ಸೃಷ್ಟಿಸ್ಥಿತಿಲಯವೆಂಬ ಮೂರು ಶಕ್ತಿರೂಪದಿಂದ ಉಪಕಾರಕಳಾಗಿರುವ ನಿನಗೆ ಸಾಷ್ಟಾಂಗವೆರಗುವೆನು.

ಮಧುಕೈಟಭಭೀತ್ಯಾ ಚ ತ್ರಸ್ತೋ ಧಾತಾ ಪ್ರಕಂಪಿತಃ ।
ಸ್ತುತ್ವಾ ಮುಕ್ತಶ್ಚ ಯಾಂ ದೇವೀಂ ತಾಂ ಮೂರ್ಧ್ನಾ ಪ್ರಣಮಾಮ್ಯಹಂ ॥

ಮಧುಕೈಟಭಯೋರ್ಯುದ್ಧೇ ತ್ರಾತಾಸೌ ವಿಷ್ಣುರೀಶ್ವರೀಂ ।
ಬಭೂವ ಶಕ್ತಿಮಾಂ ಸ್ತುತ್ವಾ ತ್ವಾಂ ದುರ್ಗಾಂ ಪ್ರಣಮಾಮ್ಯಹಂ ॥ ೫೦ ॥

ತ್ರಿಪುರಸ್ಯ ಮಹಾಯುದ್ಧೇ ಸರಥೇ ಪತಿತೇ ಶಿವೇ ।
ಯಾಂ ತುಷ್ಟುವುಃ ಸುರಾಃ ಸರ್ವೇ ತಾಂ ದುರ್ಗಾಂ ಪ್ರಣಮಾಮ್ಯಹಂ ॥

ವಿಷ್ಣುನಾ ವೃಷರೂಪೇಣ ಸ್ವಯಂ ಶಂಭುಃ ಸಮುತ್ಥಿತಃ ।
ಜಘಾನ ತ್ರಿಪುರಂ ಸ್ತುತ್ವಾ ತಾಂ ದುರ್ಗಾಂ ಪ್ರಣಮಾಮ್ಯಹಂ ॥ ೫೨ ॥

---

೪೯. ಮಧುಕೈಟಭರೆಂಬ ರಾಕ್ಷಸರ ಭಯದಿಂದ ನಡುಗುತ್ತಿದ್ದ ಬ್ರಹ್ಮನು ಯಾವ ದೇವಿಯನ್ನು ಸ್ತುತಿಸಿ ಭಯಮುಕ್ತನಾದನೋ ಆ ದೇವಿಗೆ ಸಾಷ್ಟಾಂಗ ನಮಿಸುವೆನು.

೫೦. ಮಧುಕೈಟಭರೊಡನೆ ಯುದ್ಧಮಾಡುವಾಗ ಜಗದ್ರಕ್ಷಕನಾದ ವಿಷ್ಣುವು ಸರ್ವೇಶ್ವರಿಯಾದ ನಿನ್ನನ್ನು ಸ್ತುತಿಸಿ, ಶಕ್ತಿವಂತನಾದನು. ದುರ್ಗಾಸ್ವರೂಪಿಣಿಯಾದ ನಿನಗೆ ಸಾಷ್ಟಾಂಗವೆರಗುವೆನು.

೫೧. ತ್ರಿಪುರಾಸುರರೊಡನೆ ಮಹಾಯುದ್ಧವಾದಾಗ ಶಿವನು ರಥಸಹಿತನಾಗಿ ಕೆಳಕ್ಕುರುಳಲು, ದೇವತೆಗಳೆಲ್ಲರೂ ಯಾವ ದೇವಿಯನ್ನು ಭಕ್ತಿಪೂರ್ವಕವಾಗಿ ಸ್ತುತಿಸಿದರೋ ಆ ದುರ್ಗೆಗೆ ಇದೋ ನಮಿಸುವೆನು.

೫೨. ಆಗ ವಿಷ್ಣುವು ವೃಷಭರೂಪದಿಂದ ಬಂದು ಶಿವನನ್ನು ಮೇಲಕ್ಕೆತ್ತಲು ಶಿವನು ಯಾರ ಅನುಗ್ರಹದಿಂದ ತ್ರಿಪುರನನ್ನು ಕೊಂದನೋ ಆ ದುರ್ಗಾದೇವಿಗೆ ಸಾಷ್ಟಾಂಗವೆರಗುವೆನು.

ಯದಾಜ್ಞಯಾ ವಾತಿ ವಾತಃ ಸೂರ್ಯಸ್ತಪತಿ ಸಂತತಂ ।
ವರ್ಷತೀಂದ್ರೋ ದಹತ್ಯಗ್ನಿಸ್ತಾಂ ದುರ್ಗಾಂ ಪ್ರಣಮಾಮ್ಯಹಂ ॥ ೫೩ ॥

ಯದಾಜ್ಞಯಾ ಹಿ ಕಾಲಶ್ಚ ಶಶ್ವದ್ಭ್ರಮತಿ ವೇಗತಃ ।
ಮೃತ್ಯುಶ್ಚರತಿ ಜಂತೂನಾಂ ತಾಂ ದುರ್ಗಾಂ ಪ್ರಣಮಾಮ್ಯಹಂ ॥ ೫೪ ॥

ಸ್ರಷ್ಟಾ ಸೃಜತಿ ಸೃಷ್ಟಿಂ ಚ ಪಾತಾ ಪಾತಿ ಯದಾಜ್ಞಯಾ ।
ಸಂಹರ್ತಾ ಸಂಹರೇತ್ಕಾಲೇ ತಾಂ ದುರ್ಗಾಂ ಪ್ರಣಮಾಮ್ಯಹಂ ॥ ೫೫ ॥

ಜ್ಯೋತಿಸ್ಸ್ವರೂಪೋ ಭಗವಾಂಛ್ರೀಕೃಷ್ಣೋ ನಿರ್ಗುಣಃ ಸ್ವಯಂ ।
ಯಯಾ ವಿನಾ ನ ಶಕ್ತಶ್ಚ ಸೃಷ್ಟಿಂ ಕರ್ತುಂ ನಮಾಮಿ ತಾಂ ॥ ೫೬ ॥

ರಕ್ಷ ರಕ್ಷ ಜಗನ್ಮಾತರಪರಾಧಂ ಕ್ಷಮಸ್ವ ಮೇ ।
ಶಿಶೂನಾಮಪರಾಧೇನ ಕುತೋ ಮಾತಾ ಹಿ ಕುಪ್ಯತಿ ॥ ೫೭ ॥

---

೫೩. ಯಾರ ಆಜ್ಞಾಪಾಲನೆಗಾಗಿ ವಾಯುದೇವನು ಚಲಿಸುವನೋ, ಸೂರ್ಯನು ಬೆಳಗುವನೋ, ಇಂದ್ರನು ಮಳೆಗರೆಯುವನೋ, ಅಗ್ನಿಯು ಸುಡುವನೋ ಆ ದುರ್ಗಾದೇವಿಗೆ ಇದೋ ವಂದಿಸುವೆನು.

೫೪. ಕಾಲಪುರುಷನು ಯಾರ ಅಪ್ಪಣೆಯಂತೆ ಎಡೆಬಿಡದೆ ತಿರುಗುವನೋ, ಮೃತ್ಯುದೇವನು ಪ್ರಾಣಿಗಳಲ್ಲಿ ಸಂಚರಿಸುವನೋ ಆ ದುರ್ಗಾದೇವಿಗೆ ನಾನು ನಮಿಸುವೆನು.

೫೫. ಯಾರ ಅನುಗ್ರಹದಿಂದ ಸೃಷ್ಟಿಕರ್ತನು ಸೃಷ್ಟಿಮಾಡುವನೋ, ಪಾಲಕನು ಪಾಲಿಸುವನೋ, ಸಂಹಾರಕನು ಕಾಲದಲ್ಲಿ ಸಂಹರಿಸುವನೋ ಆ ದುರ್ಗಾದೇವಿಗೆ ನಾನು ಸಾಷ್ಟಾಂಗವೆರಗುವೆನು

೫೬. ನಿರ್ಗುಣನೂ, ಪರಂಜ್ಯೋತಿಃಸ್ವರೂಪನೂ ಆದ ಶ್ರೀಕೃಷ್ಣಪರಮಾತ್ಮನೂ ಕೂಡ ಯಾರಿಲ್ಲದಿದ್ದರೆ ಸೃಷ್ಟಿಮಾಡಲಶಕ್ತನಾಗುವನೋ ಆ ದುರ್ಗಾದೇವಿಗೆ ನಾನು ವಂದಿಸುವೆನು.

೫೭. ಎಲೌ ಜಗನ್ಮಾತೆಯೇ, ನನ್ನ ಅಪರಾಧವನ್ನು ಕ್ಷಮಿಸಿ ನನ್ನನ್ನು ಕಾಪಾಡು. ಮಕ್ಕಳು ತಪ್ಪುಮಾಡಿದರೆ ಮಾತೆಯು ಕೋಪಗೊಳ್ಳುವುದುಂಟೇ ?

ಉಕ್ತ್ವಾ ಪರಶುರಾಮಶ್ಚೇತಿ ನತ್ವಾ ತಾಂ ರುರೋದ ಹ ।
ತುಷ್ಟಾ ದುರ್ಗಾ ಸಂಭ್ರಮೇಣ ಚಾಭಯಂ ಚ ವರಂ ದದೌ ॥ ೫೮ ॥

ಅಮರೋ ಭವ ಹೇ ಪುತ್ರ ವತ್ಸ ಸುಸ್ಥಿರತಾಂ ವ್ರಜ ।
ಸರ್ವಪ್ರಸಾದಾತ್ಸರ್ವತ್ರ ಜಯೋಽಸ್ತು ತವ ಸಂತತಂ ॥ ೫೯ ॥

ಸರ್ವಾಂತರಾತ್ಮಾ ಭಗವಾಂಸ್ತುಷ್ಟಸ್ಸ್ಯಾತ್ಸಂತತಂ ಹರಿಃ ।
ಭಕ್ತಿರ್ಭವತು ತೇ ಕೃಷ್ಣೇ ಶಿವದೇ ಚ ಶಿವೇ ಗುರೌ ॥ ೬೦ ॥

ಇಷ್ಟದೇವೇ ಗುರೌ ಯಸ್ಯ ಭಕ್ತಿರ್ಭವತಿ ಶಾಶ್ವತೀ ।
ತಂ ಹಂತುಂ ನ ಹಿ ಶಕ್ತಾ ವಾ ರುಷ್ಟಾ ವಾ ಸರ್ವದೇವತಾಃ ॥ ೬೧ ॥

ಶ್ರೀಕೃಷ್ಣಸ್ಯ ಚ ಭಕ್ತಸ್ತ್ವಂ ಶಿಷ್ಯೋ ವೈ ಶಂಕರಸ್ಯ ಚ ।
ಗುರುಪತ್ನೀಂ ಸ್ತೌಷಿ ಯಸ್ಮಾತ್ಕಸ್ತ್ವಾಂ ಹಂತುಮಿಹೇಶ್ವರ ॥ ೬೨ ॥

---

೫೮. ಪರಶುರಾಮನು ಈ ಪ್ರಕಾರವಾಗಿ ಸ್ತುತಿಸುತ್ತ ಆ ದುರ್ಗೆಗೆ ವಂದಿಸಿ ಗೋಳಾಡಿದನು. ಅವನ ಸ್ತುತಿಗೆ ಸಂತುಷ್ಟಳಾದ ದುರ್ಗೆಯು ಅವನಿಗೆ ಅಭಯ ಪ್ರದಾನ ಮಾಡಿದಳು.

೫೯. ಎಲೈ ವತ್ಸನೇ ನೀನು ಚಿರಂಜೀವಿಯಾಗು. ಚಂಚಲತೆಯನ್ನು ಬಿಟ್ಟು ಧೈರ್ಯತಾಳು ಎಲ್ಲರ ಅನುಗ್ರಹದಿಂದ ನಿನಗೆ ಎಲ್ಲೆಡೆಯಲ್ಲೂ ಯಾವಾಗಲೂ ಜಯ ಲಭಿಸಲಿ.

೬೦. ಸರ್ವಾಂತರ್ಯಾಮಿಯಾದ ಶ್ರೀಹರಿಯು ನಿನಗೆ ಪ್ರಸನ್ನನಾಗಲಿ. ನಿನಗೆ ಶ್ರೀಕೃಷ್ಣಪರಮಾತ್ಮನಲ್ಲೂ, ಗುರುವಾದ ಶಿವನಲ್ಲೂ ಅಚಲ ಭಕ್ತಿಯುಂಟಾಗಲಿ.

೬೧. ಯಾರಿಗೆ ಇಷ್ಟದೇವತೆಯಲ್ಲೂ, ಗುರುವಿನಲ್ಲೂ ಅಚಲವಾದ ಭಕ್ತಿಯಿರುವುದೋ, ಅವನನ್ನು ಕುಪಿತರಾದ ಯಾವ ದೇವತೆಗಳೂ ಕೊಲ್ಲಲಾರರು.

೬೨. ನೀನು ಶ್ರೀಕೃಷ್ಣನ ಭಕ್ತನೂ ಶಂಕರನ ಶಿಷ್ಯನೂ ಆಗಿರುವೆ ಗುರುಪತ್ನಿಯನ್ನು ಭಕ್ತಿಭಾವದಿಂದ ಸ್ತುತಿಸುತ್ತಿರುವ ನಿನ್ನನ್ನು ಕೊಲ್ಲಲು ಯಾರು ಶಕ್ತರು?

ಅಹೋ ನ ಕೃಷ್ಣಭಕ್ತಾನಾಮಶುಭಂ ವಿದ್ಯತೇ ಕ್ವಚಿತ್ !
ಅನ್ಯದೇವೇಷುಯೇ ಭಕ್ತಾ ನ ಭಕ್ತಾ ವಾ ನಿರಂಕುಶಾಃ || ೬೩ ||

ಚಂದ್ರಮಾ ಬಲವಾಂಸ್ತುಷ್ಟೋ ಯೇಷಾಂ ಭಾಗ್ಯವತಾಂ ಭೃಗೋ |
ತೇಷಾಂ ತಾರಾಗಣಾ ರುಷ್ಟಾಃ ಕಿಂ ಕುರ್ವಂತಿ ಚ ದುರ್ಬಲಾಃ || ೬೪ ||

ಯಸ್ಮೈ ತುಷ್ಟಃ ಪಾಲಯತಿ ನರದೇವೋ ಮಹಾನ್ಸುಖೀ |
ತಸ್ಯ ಕಿಂ ವಾ ಕರಿಷ್ಯಂತಿ ರುಷ್ಟಾ ಭೃತ್ಯಾಶ್ಚ ದುರ್ಬಲಾಃ || ೬೫ ||

ಇತ್ಯುಕ್ತ್ವಾ ಪಾರ್ವತೀ ತುಷ್ಟಾ ದತ್ವಾ ರಾಮಾಯ ಚಾಶಿಷಂ |
ಜಗಾಮಾಂತಃ ಪುರಂ ತೂರ್ಣಂ ಹರ್ಷಶಬ್ದೋ ಬಭೂವ ಹ || ೬೬ ||

ಸ್ತೋತ್ರಂ ವೈ ಕಣ್ವಶಾಖೋಕ್ತಂ ಪೂಜಾಕಾಲೇ ಚ ಯಃ ಪಠೇತ್ |
ಯಾತ್ರಾಕಾಲೇ ತಥಾ ಪ್ರಾತರ್ವಾಂಛಿತಾರ್ಥಂ ಲಭೇದ್ಧ್ರುವಂ || ೬೭ ||

---

೬೩. ಶ್ರೀಕೃಷ್ಣಭಕ್ತರಿಗೆ ಎಲ್ಲಿಯೂ ಯಾವಾಗಲೂ ಅಮಂಗಳವಾಗುವುದಿಲ್ಲ. ಇತರ ದೇವತೆಗಳಿಗೆ ಭಕ್ತರಾದವರು ನಿರಂಕುಶರಾದ ಭಕ್ತರೆನಿಸುವರು

೬೪. ಯಾವ ಅದೃಷ್ಟಶಾಲಿಗಳಿಗೆ ಚಂದ್ರನು ಬಲಿಷ್ಠನೂ, ತುಷ್ಟನೂ ಆಗಿರುವನೋ, ಅವರಿಗೆ ದುರ್ಬಲವಾದ ತಾರಾಗಣಗಳು ಕುಪಿತರಾಗಿ ಏನು ಮಾಡಿಯಾರು ?

೬೫. ರಾಜನು ಸಂತುಷ್ಟನಾಗಿ ಯಾರನ್ನು ಪ್ರೀತಿಯಿಂದ ಪರಿಪಾಲಿಸುತ್ತಿರುವನೋ, ಅವನಿಗೆ ದುರ್ಬಲರಾದ ಸೇವಕರು ಕೋಪಗೊಂಡು, ಏನು ತಾನೆ ಮಾಡಿಯಾರು ?

೬೬. ಸಂತುಷ್ಟಳಾದ ಪಾರ್ವತಿಯು ಈ ರೀತಿಯಾಗಿ ನುಡಿದು ಪರಶುರಾಮನಿಗೆ ಆಶೀರ್ವದಿಸಿ ತನ್ನ ಅಂತಃಪುರಕ್ಕೆ ತೆರಳಲು ಅಲ್ಲಿದ್ದ ದೇವತೆಗಳೆಲ್ಲರೂ ಜಯಕಾರಮಾಡಿದರು.

೬೭. ಕಣ್ವಶಾಖೋಕ್ತವಾದ ಮೇಲ್ಕಂಡ ದುರ್ಗಾಸ್ತೋತ್ರವನ್ನು ಯಾರು ಪೂಜಾಕಾಲದಲ್ಲಿಯೂ, ಪ್ರಯಾಣಕಾಲದಲ್ಲಿಯೂ ಭಕ್ತಿಪೂರ್ವಕವಾಗಿ ಪಠಿಸುವರೋ ಅವರಿಗೆ ನಿಶ್ಚಯವಾಗಿಯೂ ಇಷ್ಟಾರ್ಥಸಿದ್ಧಿಯುಂಟಾಗುವುದು.

ಪುತ್ರಾರ್ಥೀ ಲಭತೇ ಪುತ್ರಂ ಕನ್ಯಾರ್ಥೀ ಕನ್ಯಕಾಂ ಲಭೇತ್ ।
ವಿದ್ಯಾರ್ಥೀ ಲಭತೇ ವಿದ್ಯಾಂ ಪ್ರಜಾರ್ಥೀ ಚಾಪ್ನುಯಾತ್ಪ್ರಜಾಃ ।
ಭ್ರಷ್ಟರಾಜ್ಯೋ ಲಭೇದ್ರಾಜ್ಯಂ ನಷ್ಟವಿತ್ತೋ ಧನಂ ಲಭೇತ್ ॥ ೧೮ ॥

ಯಸ್ಯ ರುಷ್ಟೋ ಗುರುರ್ದೇವೋ ರಾಜಾ ವಾ ಬಾಂಧವೋಽಥವಾ ।
ತಸ್ಮೈ ತುಷ್ಟಶ್ಚ ವರದಃ ಸ್ತೋತ್ರರಾಜಪ್ರಸಾದತಃ ॥ ೧೯ ॥

ದಸ್ಯುಗ್ರಸ್ತಃ ಫಣಿಗ್ರಸ್ತಶ್ಶತ್ರುಗ್ರಸ್ತೋ ಭಯಾನಕಃ ।
ವ್ಯಾಧಿಗ್ರಸ್ತೋ ಭವೇನ್ಮುಕ್ತಃ ಸ್ತೋತ್ರಸ್ಮರಣಮಾತ್ರತಃ ॥ ೨೦ ॥

ರಾಜದ್ವಾರೇ ಶ್ಮಶಾನೇ ಚ ಕಾರಾಗಾರೇ ಚ ಬಂಧನೇ ।
ಜಲರಾಶೌ ನಿಮಗ್ನಶ್ಚ ಮುಕ್ತಸ್ತತ್ಸ್ಮೃತಿಮಾತ್ರತಃ ॥ ೨೧ ॥

---

೧೮. ಪುತ್ರಪುತ್ರಿಯರನ್ನೂ, ವಿದ್ಯೆಯನ್ನೂ, ಪ್ರಜೆಗಳನ್ನೂ ಬಯಸುವವರು ತಮ್ಮ ಇಷ್ಟಾರ್ಥವನ್ನು ಪಡೆಯುವರು ಈ ಸ್ತೋತ್ರಪಠನಮಾಡುವುದರಿಂದ ರಾಜ್ಯಭ್ರಷ್ಟನಿಗೆ ರಾಜ್ಯವೂ ದ್ರವ್ಯಭ್ರಷ್ಟನಿಗೆ ದ್ರವ್ಯವೂ ನಿಶ್ಚಿತವಾಗಿ ಲಭಿಸುವುದು

೧೯. ಇಷ್ಟದೇವತೆ, ಗುರು, ರಾಜ ಮತ್ತು ಬಂಧುಗಳ ಆಗ್ರಹಕ್ಕೆ ಪಾತ್ರರಾದವರು ಈ ಸ್ತೋತ್ರವನ್ನು ಪಠಿಸಿದ ಮಾತ್ರದಿಂದ ಅವರ ಅನುಗ್ರಹಕ್ಕೆ ಪಾತ್ರರಾಗುವರು.

೨೦. ಕಳ್ಳರಕೈಗೆ ಸಿಕ್ಕಿದವರೂ, ಕ್ರೂರಸರ್ಪದಿಂದ ಪೀಡಿತರೂ. ಶತ್ರುಗಳಿಗೆ ಸೆರೆಸಿಕ್ಕಿದವರೂ, ಭಯಂಕರವಾದ ರೋಗಕ್ಕೆ ತುತ್ತಾದವರೂ ಈ ಸ್ತೋತ್ರವನ್ನು ಸ್ಮರಿಸಿದ ಮಾತ್ರದಿಂದ ಮುಕ್ತರಾಗುವರು.

೨೧. ರಾಜದ್ವಾರದಲ್ಲಾಗಲೀ, ಶ್ಮಶಾನದಲ್ಲಾಗಲೀ, ಕಾರಾಗಾರ ಬಂಧನದಲ್ಲಾಗಲೀ, ಸಿಲುಕಿದವರೂ, ನೀರಿನಲ್ಲಿ ಮುಳುಗಿದವರೂ, ಈ ಸ್ತೋತ್ರಸ್ಮರಣೆ ಮಾತ್ರದಿಂದ ಮುಕ್ತರಾಗುವರು.

ಸ್ವಾಮಿಭೇದೇ ಪುತ್ರಭೇದೇ ಮಿತ್ರಭೇದೇ ಚ ದಾರುಣೇ ।
ಸ್ತೋತ್ರಸ್ಮರಣಮಾತ್ರೇಣ ವಾಂಛಿತಾರ್ಥಂ ಲಭೇದ್ಧ್ರುವಂ ॥ ೭೨ ॥

ಕೃತ್ವಾ ಹವಿಷ್ಯಂ ವರ್ಷಂ ಚ ಸ್ತೋತ್ರರಾಜಂ ಶೃಣೋತಿ ಯಾ ।
ಭಕ್ತ್ಯಾ ದುರ್ಗಾಂ ಚ ಸಂಪೂಜ್ಯ ಮಹಾವಂಧ್ಯಾ ಪ್ರಸೂಯತೇ ॥ ೭೩ ॥

ಲಭತೇ ಸಾ ದಿವ್ಯಪುತ್ರಂ ಜ್ಞಾನಿನಂ ಚಿರಜೀವಿನಂ ।
ಅಸೌಭಾಗ್ಯಾ ಚ ಸೌಭಾಗ್ಯಂ ಷಣ್ಮಾಸಶ್ರವಣಾಲ್ಲಭೇತ್ ॥ ೭೪ ॥

ನವಮಾಸಂ ಕಾಕವಂಧ್ಯಾ ಮೃತವತ್ಸಾ ಚ ಭಕ್ತಿತಃ ।
ಸ್ತೋತ್ರರಾಜಂ ಯಾ ಶ್ರುಣೋತಿ ಸಾ ಪುತ್ರಂ ಲಭತೇ ಧ್ರುವಂ ॥ ೭೫ ॥

---

೭೨. ಪತಿಪುತ್ರರ ಮತ್ತು ಮಿತ್ರರ ವಿರಹದಿಂದ ಪೀಡಿತರಾದವರು ಈ ಸ್ತೋತ್ರಸ್ಮರಣೆಮಾತ್ರದಿಂದ ಅವರ ಸಂಸರ್ಗರೂಪವಾದ ತಮ್ಮ ಇಷ್ಟಾರ್ಥ ಸಿದ್ಧಿಯನ್ನು ಪಡೆಯುವರು

೭೩. ಬಂಜೆಯಾದ ಹೆಂಗಸು ಒಂದು ವರ್ಷಕಾಲ ಹವಿಷ್ಯಾನ್ನವನ್ನು ಸೇವಿಸುತ್ತ, ಭಕ್ತಿಪೂರ್ವಕವಾಗಿ ದುರ್ಗೆಯನ್ನು ಪೂಜಿಸಿ, ಈ ಸ್ತೋತ್ರವನ್ನು ಕೇಳಿದರೆ ಪುತ್ರನನ್ನು ಪ್ರಸುವಿಸುವಳು.

೭೪. ಅದರಲ್ಲೂ ದಿವ್ಯಜ್ಞಾನಿಯೂ, ಚಿರಂಜೀವಿಯೂ ಆದ ಪುತ್ರನನ್ನೇ ಪಡೆಯುವಳು. ಆರುತಿಂಗಳುಕಾಲ ಈ ಸ್ತೋತ್ರವನ್ನು ಭಕ್ತಿಯಿಂದ ಕೇಳುವ ವಿಧವೆಯು ಮುಂದಿನ ಜನ್ಮದಲ್ಲಿ ಸೌಭಾಗ್ಯವತಿಯಾಗುವಳು.

೭೫ ಒಂದು ಮಗುವಾಗಿ ಮುಂದೆ ಮಕ್ಕಳಾಗದವಳೂ (ಕಾಕವಂಧ್ಯಾ) ಮೃತರಾದ ಮಕ್ಕಳುಳ್ಳವಳೂ, ಒಂಭತ್ತು ತಿಂಗಳು ಭಕ್ತಿಯಿಂದ ಈ ಸ್ತೋತ್ರವನ್ನು ಕೇಳಿದರೆ ನಿಶ್ಚಿತವಾಗಿಯೂ ಮಕ್ಕಳನ್ನು ಪಡೆಯುವರು.

ಕನ್ಯಾಮಾತಾ ಪುತ್ರಹೀನಾ ಪಂಚಮಾಸಂ ಶೃಣೋತಿ ಯಾ ।
ಘಟೇ ಸಂಪೂಜ್ಯ ದುರ್ಗಾಂ ಚ ಸಾ ಪುತ್ರಂ ಲಭತೇ ಧ್ರುವಂ ॥ ೭೬ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ತೃತೀಯೋ ಗಣಪತಿಖಂಡೇ ನಾರದನಾರಾಯಣ ಸಂವಾದೇ ಪರಶುರಾಮಕೃತದುರ್ಗಾಸ್ತೋತ್ರಂ ನಾಮಪಂಚಚತ್ವಾರಿಂಶತ್ತಮೋಽಧ್ಯಾಯಃ

---

೭೬. ಗಂಡುಮಕ್ಕಳಿಲ್ಲದೆ ಕೇವಲ ಹೆಣ್ಣುಮಕ್ಕಳನ್ನು ಪಡೆದವಳು ಐದು ತಿಂಗಳುಕಾಲ ಈ ಸ್ತೋತ್ರವನ್ನು ಕೇಳಿ ಕಲಶದಲ್ಲಿ ದುರ್ಗಿಯನ್ನು ಆವಾಹನೆ ಮಾಡಿ ಪೂಜಿಸುವುದರಿಂದ ಸತ್ಪುತ್ರನನ್ನು ಪಡೆಯುವಳು.

ಇಲ್ಲಿಗೆ ಬ್ರಹ್ಮವೈವರ್ತಮಹಾಪುರಾಣದ ಗಣಪತಿಖಂಡದಲ್ಲಿ ಪರಶುರಾಮಕೃತವಾದ ದುರ್ಗಾಸ್ತೋತ್ರವನ್ನು ತಿಳಿಸುವ ನಲವತ್ತೈದನೆಯ ಅಧ್ಯಾಯವು ಮುಗಿದುದು.

ನಲವತ್ತೈದನೆಯ ಅಧ್ಯಾಯದ ಸಾರಾಂಶ

ವಿಷ್ಣುವು ಪಾರ್ವತಿಯನ್ನು ಸಮಾಧಾನಗೊಳಿಸಿದ ನಂತರ ಪರಶುರಾಮನಿಗೆ ಪಾರ್ವತಿ ಮತ್ತು ಗಣಪತಿಯ ಉತ್ಪತ್ತಿ ಕ್ರಮವನ್ನು ವಿಸ್ತರಿಸಿ ಹೇಳಿ, ಆಕೆಯನ್ನು ಭಜಿಸುವುದರಿಂದ ಆಕೆಯ ಅನುಗ್ರಹಕ್ಕೆ ಪಾತ್ರನಾಗಬಹುದೆಂದು ತಿಳಿಸಿ ತಾನು ಹೊರಟುಹೋದನು. ಅನಂತರ ಪರಶುರಾಮನು ಗಂಗೆಯಲ್ಲಿ ಮಿಂದು ಶುಭ್ರವಸ್ತ್ರ ವನ್ನುಟ್ಟು, ಭಕ್ತಿಭಾವದಿಂದ ಗುರುದೇವನಿಗೆ ವಂದಿಸಿ, ವಿಷ್ಣುವು ಉಪದೇಶಿಸಿದ ಕ್ರಮದಲ್ಲಿ ಪಾರ್ವತಿಯನ್ನು ಸ್ತುತಿಸಲಾರಂಭಿಸಿದನು.

'ಶ್ರೀಕೃಷ್ಣಪರಮಾತ್ಮನು ಸೃಷ್ಟ್ಯುನ್ಮುಖನಾದಾಗ ಅವನ ಅರ್ಧಾಂಗದಿಂದ ಪ್ರಕೃತಿಯು ವ್ಯಕ್ತಳಾದಳು. ಅವಳ ದಿವ್ಯಸುಂದರಾಕಾರವನ್ನು ನೋಡಿ ಮೋಹ ಗೊಂಡು ಕೃಷ್ಣನು ಆಕೆಯ ಯೋನಿಯಲ್ಲಿ ವೀರ್ಯಾಧಾನಮಾಡಲು, ಆಕೆಯ ಗರ್ಭದಿಂದ ಮಹಾವಿರಾಟ್ಪುರುಷನ ಅವತಾರವಾಯಿತು. ಅವನ ಪ್ರತಿ ರೋಮ ಕೂಪದಲ್ಲಿ ಒಂದೊಂದು ಬ್ರಹ್ಮಾಂಡವೂ, ಪ್ರತಿ ಬ್ರಹ್ಮಾಂಡದಲ್ಲಿ ಬ್ರಹ್ಮವಿಷ್ಣು ಮಹೇಶ್ವರಾದಿ ನಿಖಿಲ ಚರಾಚರ ಪಪ್ರಂಚವೂ ವ್ಯಕ್ತವಾಯಿತು. ರತ್ಯಾಯಾಸ ಗೊಂಡ ಪ್ರಕೃತಿಯ ನಿಃಶ್ವಾಸದಿಂದ ಮಹಾವಾಯುವೂ, ಸ್ವೇದಬಿಂದುಗಳಿಂದ ಮಹಾಜಲವೂ ಉತ್ಪತ್ತಿಯಾಯಿತು. ಆಕಾಶವು ನಿತ್ಯವಾಗಿಯೇ ಇದ್ದಿತು ಅನಂತರ ಪ್ರಕೃತಿಯು ಐದು ರೂಪವನ್ನು ಧರಿಸಿ ರಾಧಾರೂಪದಿಂದ ಶ್ರೀಕೃಷ್ಣನನ್ನೂ, ಲಕ್ಷ್ಮಿಯ ರೂಪದಿಂದ ನಾರಾಯಣನನ್ನೂ, ಸರಸ್ವತೀ ಮತ್ತು ಸಾವಿತ್ರೀ ರೂಪದಿಂದ ಬ್ರಹ್ಮನನ್ನೂ, ದುರ್ಗೆಯ ರೂಪದಿಂದ ಶಿವನನ್ನೂ ವರಿಸಿದಳು. ಆಕೆಯ ಅಂಶ ಮತ್ತು ಕಲೆಯಿಂದ ಸ್ತ್ರೀಯರೆಲ್ಲರೂ ಜನಿಸಿದರು. ಮೂಲಪ್ರಕೃತಿಯಾದ ದುರ್ಗಾದೇವಿಯ ಕೃಪೆಯಿಂದ ಬ್ರಹ್ಮವಿಷ್ಣುಗಳು ಮಧುಕೈಟಭರೆಂಬ ರಾಕ್ಷಸರ ಭಯದಿಂದಲೂ ಶಿವನು ತ್ರಿಪುರಾಸುರನ ಭಯದಿಂದಲೂ ಮುಕ್ತರಾದರು. ಶ್ರೀಕೃಷ್ಣನೊಬ್ಬನನ್ನುಳಿದು ನಿಖಿಲ ಪ್ರಪಂಚವು ಆಕೆಯ ಆಜ್ಞಾನುವರ್ತಿಯಾಗಿರುವುದು. ಆದಿಶಕ್ತಿಯಾದ ಆಕೆಯಿಂದಲೇ ಶ್ರೀಕೃಷ್ಣಪರಮಾತ್ಮನೂ ಸೃಷ್ಟಿಮಾಡಲು ಶಕ್ತನಾಗುವನು.'

ಈ ರೀತಿಯಾಗಿ ಪರಶುರಾಮನು ಪಾರ್ವತಿಯ ಮಹಿಮೆಯನ್ನು ಕೊಂಡಾಡಿ ತನ್ನ ಅಪರಾಧವನ್ನು ಕ್ಷಮಿಸಬೇಕೆಂದು ಬೇಡಲು ಅವನ ಸ್ತುತಿಗೆ ಸಂತುಷ್ಟಳಾದ ಪಾರ್ವತಿಯು ಅವನಿಗೆ ಅಭಯಪ್ರದಾನಮಾಡಿ, ನಿನ್ನ ಇಷ್ಟದೇವತೆಯಾದ ಶ್ರೀಕೃಷ್ಣನನ್ನೂ ಗುರುವಾದ ಶಂಕರನನ್ನೂ ಸರ್ವದಾ ಭಜಿಸುತ್ತಿರುವ ನಿನಗೆ ಯಾರಿಂದಲೂ ಯಾವ ಕೆಡಕೂ ಆಗದೆಂದು ಆಶೀರ್ವದಿಸಿ ಅಂತರ್ಧಾನಳಾದಳು

ಪರಶುರಾಮಕೃತವಾದ ಪಾರ್ವತಿಯ ಸ್ತೋತ್ರವನ್ನು ಭಕ್ತಿಯಿಂದ ಪಠಿಸುವವರು ತಮ್ಮ ಇಷ್ಟಸಿದ್ಧಿಯನ್ನು ಪಡೆಯುವರು.

|| ಓಂ ||—

|| ಶ್ರೀ ಗಣೇಶಾಯ ನಮಃ ||—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಗಣಪತಿಖಂಡೇ

|| ಷಟ್ಚತ್ವಾರಿಂಶತ್ತಮೋಽಧ್ಯಾಯಃ ||

|| ನಾರಾಯಣ ಉವಾಚ ||

ಸ್ತುತ್ವಾ ತಾಂ ಪರಶುರಾಮೋಽ ಸೌ ಹರ್ಷಸಂಫುಲ್ಲಮಾನಸಃ |
ಸ್ತೋತ್ರೇಣ ಹರಿಣೋಕ್ತೇನ ಸ ತುಷ್ಟಾವ ಗಣಾಧಿಪಂ || ೧ ||

ಪೂಜಾಂ ಚಕಾರ ಭಕ್ತ್ಯಾ ಚ ನೈವೇದ್ಯೈರ್ವಿವಿಧೈರಪಿ |
ಧೂಪೈರ್ದೀಪೈಶ್ಚ ಗಂಧೈಶ್ಚ ಪುಷ್ಪೈಶ್ಚ ತುಲಸೀಂ ವಿನಾ || ೨ ||

ಸಂಪೂಜ್ಯ ಭ್ರಾತರಂ ಭಕ್ತ್ಯಾ ಸ ರಾಮಃ ಶಂಕರಾಜ್ಞಯಾ |
ಗುರುಪತ್ನೀಂ ಗುರುಂ ನತ್ವಾ ಗಮನಂ ಕರ್ತುಮುದ್ಯತಃ || ೩ ||

ನಲವತ್ತಾರನೆಯ ಅಧ್ಯಾಯವು

೧. ನಾರಾಯಣಮಹರ್ಷಿ:—ಪರಶುರಾಮನು ಪಾರ್ವತಿಯನ್ನು ಈ ರೀತಿಯಾಗಿ ಸ್ತುತಿಸಿ ಸಂತೋಷದಿಂದ ಪ್ರಸನ್ನಮನಸ್ಕನಾಗಿ, ಶ್ರೀಹರಿಯು ಉಪದೇಶಿಸಿದ ಸ್ತೋತ್ರದಿಂದ ಗಣಪತಿಯನ್ನು ಸ್ತುತಿಸಿದನು

೨. ಗಂಧಪುಷ್ಪಗಳಿಂದಲೂ, ಧೂಪದೀಪಗಳಿಂದಲೂ, ವಿವಿಧ ನೈವೇದ್ಯಗಳಿಂದಲೂ, ಭಕ್ತಿಪೂರ್ವಕವಾಗಿ ಗಣಪತಿಯನ್ನು ಪೂಜಿಸಿದನು. ತುಳಸಿಯನ್ನು ಮಾತ್ರ ಪೂಜಿಸಲಿಲ್ಲ.

೩. ಈ ರೀತಿಯಾಗಿ ಶಂಕರನ ಅಪ್ಪಣೆಯಂತೆ ಪರಶುರಾಮನು ಸಹೋದರನನ್ನು (ಗಣಪತಿಯನ್ನು) ಭಕ್ತಿಯಿಂದ ಪೂಜಿಸಿ, ಗುರುಪತ್ನಿಗೂ, ಗುರುವಾದ ಶಂಕರನಿಗೂ ವಂದಿಸಿ ಹೊರಡಲನುವಾದನು.

|| ನಾರದ ಉವಾಚ ||

ಪೂಜಾಂ ಭಗವತಶ್ಚಕ್ರೇ ರಾಮೋ ಗಣಪತೇರ್ಯದಾ ।
ನೈವೇದ್ಯೈರ್ವಿವಿಧೈ ಪುಷ್ಪೈಸ್ತುಲಸೀಂ ಚ ವಿನಾ ಕಥಂ || ೪ ||

ತುಲಸೀ ಸರ್ವಪುಷ್ಪಾಣಾಂ ಮಾನ್ಯಾ ಧನ್ಯಾ ಮನೋಹರಾ ।
ಕಥಂ ಪೂಜಾಂ ಸಾರಭೂತಾಂ ನ ಗೃಹ್ಣಾತಿ ಗಣೇಶ್ವರಃ || ೫ ||

|| ನಾರಾಯಣ ಉವಾಚ ||

ಶೃಣು ನಾರದ ವಕ್ಷ್ಯೇಽಹಮಿತಿಹಾಸಂ ಪುರಾತನಂ ।
ಬ್ರಹ್ಮಕಲ್ಪಸ್ಯ ವೃತ್ತಾಂತಂ ನಿಗೂಢಂ ಚ ಮನೋಹರಂ || ೬ ||

ಏಕದಾ ತುಲಸೀ ದೇವೀ ಪ್ರೋದ್ಭಿನ್ನನವಯೌವನಾ ।
ತೀರ್ಥಂ ಭ್ರಮಂತೀ ತಪಸಾ ನಾರಾಯಣಪರಾಯಣಾ || ೭ ||

---

೪. ನಾರದ:—ಎಲೈ ಮಹರ್ಷಿಯೇ, ಪರಶುರಾಮನು ಭಗವಂತನಾದ ಗಣಪತಿಯನ್ನು ಪೂಜೆಮಾಡಿದ ಕಾಲವಾವುದು ? ಪೂಜೆಯ ಸಮಯದಲ್ಲಿ ಯಾವ ಯಾವ ಪುಷ್ಪಗಳನ್ನೂ, ನೈವೇದ್ಯವನ್ನೂ, ಸಮರ್ಪಿಸಿದನು ? ತುಳಸಿಯನ್ನೇಕೆ ಪೂಜಿಸಲಿಲ್ಲ ?

೫. ಮನೋಹರವಾದ ತುಳಸಿಯು ಎಲ್ಲ ಪುಷ್ಪಗಳಿಗೂ ಮಾನ್ಯವಾದುದು. ಅತ್ಯಂತ ಸಾರಭೂತವಾದ ಆ ತುಳಸೀ ಪತ್ರೆಯನ್ನು ಗಣೇಶ್ವರನು ಏಕೆ ಸ್ವೀಕರಿಸುವುದಿಲ್ಲ ?

೬. ನಾರಾಯಣಮಹರ್ಷಿ :—ಎಲೈ ನಾರದನೇ, ಅತ್ಯಂತ ಗೋಪ್ಯವೂ, ಮನೋಹರವೂ ಆದ ಬ್ರಹ್ಮಕಲ್ಪದ ಪುರಾತನ ಇತಿಹಾಸವನ್ನು ಹೇಳುವೆನು, ಕೇಳು.

೭. ಒಮ್ಮೆ ನವಯುವತಿಯಾದ ತುಳಸೀದೇವಿಯು, ಶ್ರೀಮನ್ನಾರಾಯಣನಲ್ಲಿ ಆಸಕ್ತಳಾಗಿ ಪುಣ್ಯತೀರ್ಥಗಳಲ್ಲಿ ತಪಸ್ಸನ್ನು ಮಾಡುತ್ತಿದ್ದಳು.

ದದರ್ಶ ಗಂಗಾತೀರೇ ಸಾ ಗಣೇಶಂ ಯೌವನಾನ್ವಿತಂ ।
ಅತೀವ ಸುಂದರಂ ಶುದ್ಧಂ ಸಸ್ಮಿತಂ ಪೀತವಾಸಸಂ ॥ ೮ ॥

ಚಂದನೋಕ್ಷಿತಸರ್ವಾಂಗಂ ರತ್ನಭೂಷಣಭೂಷಿತಂ ।
ಧ್ಯಾಯಂತಂ ಕೃಷ್ಣಪಾದಾಬ್ಜೇ ಜನ್ಮಮೃತ್ಯುಜರಾಪಹಂ ॥ ೯ ॥

ಜಿತೇಂದ್ರಿಯಾಣಾಂ ಪ್ರವರಂ ಯೋಗೀಂದ್ರಾಣಾಂ ಗುರೋರ್ಗುರುಂ ।
ಸುರೂಪಹಾರ್ಯಂ ನಿಷ್ಕಾಮಂ ಸಕಾಮಾ ತಮುವಾಚ ಹ ॥ ೧೦ ॥

॥ ತುಲಸ್ಯುವಾಚ ॥

ಅಹೋ ಧ್ಯಾಯಸಿ ಕಿಂ ದೇವ ಶಾಂತರೂಪ ಗಜಾನನ ।
ಕಥಂ ಲಂಬೋದರೋ ದೇಹೋ ಗಜವಕ್ತ್ರಂ ಕಥಂ ತವ ॥ ೧೧ ॥

ಏಕದಂತಃ ಕಥಂ ವಕ್ತ್ರೇ ವದಾಮುತ್ರ ಚ ಕಾರಣಂ ।
ತ್ಯಜ ಧ್ಯಾನಂ ಮಹಾಭಾಗ ಸಾಯಂಕಾಲ ಉಪಸ್ಥಿತಃ ॥ ೧೨ ॥

---

೮. ಆ ಸಮಯದಲ್ಲಿ ನವಯೌವನಸಂಪನ್ನನಾದ ಗಣಪತಿಯು ಪೀತಾಂಬರಧರನಾಗಿ ಸ್ಮಿತಮುಖನಾಗಿ ಗಂಗಾತೀರಕ್ಕೆ ಬಂದುದನ್ನು ಕಂಡಳು.

೯. ಸರ್ವಾವಯವಗಳಿಗೂ ದಿವ್ಯಚಂದನವನ್ನು ಲೇಪಿಸಿಕೊಂಡು, ರತ್ನಭೂಷಣಗಳನ್ನು ತೊಟ್ಟಿದ್ದ ಆ ಗಣೇಶ್ವರನು ಶ್ರೀಕೃಷ್ಣಪರಮಾತ್ಮನ ಜನ್ಮಮೃತ್ಯುಜರಾಪರಿಹಾರಕವಾದ ಪಾದಕಮಲಗಳನ್ನು ಭಜಿಸುತ್ತಿದ್ದನು.

೧೦. ಜಿತೇಂದ್ರಿಯರಲ್ಲಿ ಅಗ್ರಗಣ್ಯನೂ, ಯೋಗಿಶ್ರೇಷ್ಠರಲ್ಲಿ ಉತ್ತಮನೂ, ನಿಷ್ಕಾಮನೂ ಆಗಿ ಅತ್ಯಂತ ಸುಂದರನೂ ಆದ ಆ ಗಣಪತಿಯನ್ನು ನೋಡಿ ಕಾಮಾತುರಳಾದ ತುಳಸಿಯು ಇಂತೆಂದಳು

೧೧. ತುಳಸಿ :—ಎಲೈ ಶಾಂತಾಕಾರನಾದ ಗಜಮುಖನೇ, ನೀನು ಧ್ಯಾನಿಸುತ್ತಿರುವುದೇನು ? ನಿನಗೆ ಲಂಬೋದರ (ನೇತಾಡುವ ಹೊಟ್ಟೆ) ಮತ್ತು ಗಜಮುಖ (ಆನೆಯತಲೆ) ವುಂಟಾಗಲು ಕಾರಣವೇನು ?

೧೨. ನಿನ್ನ ಒಂದು ದಂತವು ಭಂಗವಾಗಲು ಏನು ಕಾರಣ ? ಎಲೈ ಮಹಾಭಾಗನೇ, ಸಾಯಂಕಾಲವಾಯಿತು. ನಿನ್ನ ಧ್ಯಾನವನ್ನು ಮುಗಿಸಿ, ನನ್ನ ಪ್ರಶ್ನೆಗಳಿಗೆ ಉತ್ತರ ಹೇಳು.

ಇತ್ಯುಕ್ತ್ವಾ ತುಲಸೀ ದೇವೀ ಪ್ರಜಹಾಸ ಪುನಃ ಪುನಃ ।
ಪರಂ ಚೇತಸಿ ದಗ್ಧಾ ಸಾ ಕಾಮಬಾಣೈಃ ಸುದಾರುಣೈಃ ॥ ೧೩ ॥

ಗಣೇಶಸ್ಯ ಪ್ರಧಾನಾಂಗೇ ದತ್ವಾ ಕಿಂಚಿಜ್ಜಲಂ ಮುನೇ ।
ಜಘಾನ ತರ್ಜನ್ಯಗ್ರೇಣ ನಿಷ್ಪಂದಂ ಕೃಷ್ಣಮಾನಸಂ ॥ ೧೪ ॥

ಬಭೂವ ಧ್ಯಾನಭಂಗಂ ಚ ತಸ್ಯ ನಾರದ ಚೇತನಂ ।
ದುಃಖಂ ಚ ಧ್ಯಾನಭೇದೇನ ತದ್ವಿಚ್ಛೇದೋ ಹಿ ಶೋಕದಃ ॥ ೧೫ ॥

ಧ್ಯಾನಂ ತ್ಯಕ್ತ್ವಾ ಹರಿಂ ಸ್ಮೃತ್ವಾ ಚಾಪಶ್ಯತ್ಕಾಮಿನೀಂ ಪುರಃ ।
ನವಯೌವನಸಂಪನ್ನಾಂ ಸಸ್ಮಿತಾಂ ಕಾಮಪೀಡಿತಾಂ ॥ ೧೬ ॥

ಲಂಬೋದರಶ್ಚ ತಾಂ ದೃಷ್ಟ್ವಾ ಪರಂ ವಿನಯಪೂರ್ವಕಂ ।
ಉವಾಚ ಸಸ್ಮಿತಃ ಶಾಂತಃ ಶಾಂತಾಂ ಕಾಮಾತುರಾಂ ವಶೀ ॥ ೧೭ ॥

---

೧೩. ತುಳಸೀದೇವಿಯು ಹೀಗೆ ನುಡಿದು, ಮನಸ್ಸಿನಲ್ಲಿಯೇ ಕಾಮಬಾಣ ಹತಳಾಗಿ, ಗಣಪತಿಯನ್ನು ನೋಡಿ ಮತ್ತೆ ಮತ್ತೆ ನಕ್ಕಳು.

೧೪. ಎಲೈ ನಾರದನೇ, ಶ್ರೀಕೃಷ್ಣನನ್ನು ಧ್ಯಾನಿಸುತ್ತ ನಿಶ್ಚಲಮನಸ್ಕನಾಗಿದ್ದ ಗಣಪತಿಯ ತಲೆಯ ಮೇಲೆ ತುಳಸಿಯು ಸ್ವಲ್ಪ ನೀರನ್ನೆರಚಿ ತನ್ನ ತೋರುಬೆರಳಿನ ತುದಿಯಿಂದ ಅವನನ್ನು ಹೊಡೆದಳು.

೧೫. ಕೂಡಲೇ ಗಣಪತಿಯ ಮನಸ್ಸು ಧ್ಯಾನದಿಂದ ಭಗ್ನವಾಗಿ ದುಃಖಿತವಾಯಿತು. ಧ್ಯಾನವಿಚ್ಛೇದದಿಂದ ಯಾರಿಗೆ ತಾನೆ ವ್ಯಥೆಯಾಗುವುದಿಲ್ಲ.

೧೬. ಧ್ಯಾನವನ್ನು ಬಿಟ್ಟು ಶ್ರೀಹರಿಯನ್ನು ಸ್ಮರಿಸುತ್ತ ಗಣಪತಿಯು ತನ್ನ ಮುಂದೆ ನವಯೌವನಸಂಪನ್ನಳೂ, ಕಾಮಪೀಡಿತಳೂ ಆಗಿ ನಗುಮುಖದಿಂದ ನಿಂತಿರುವ ಸುಂದರಿಯೊಬ್ಬಳನ್ನು ಕಂಡನು.

೧೭. ಜಿತೇಂದ್ರಿಯನಾದ ಲಂಬೋದರನು ಆ ಕಾಮುಕಿಯನ್ನು ನೋಡಿ, ಸ್ಮಿತವದನನಾಗಿ ಶಾಂತತೆಯಿಂದಲೂ, ವಿನಯದಿಂದಲೂ ಆಕೆಯನ್ನು ಕುರಿತಿಂತೆಂದನು.

॥ ಗಣೇಶ್ವರ ಉವಾಚ ॥

ಕಾ ತ್ವಂ ವತ್ಸೇ ಕಸ್ಯ ಕನ್ಯೇ ಮಾತವ ೯೦ ಬ್ರೂಹಿ ಕಿಂ ಶುಭೇ ।
ಪಾಪದೋಽಶುಭದಃ ಶಶ್ವದ್ಧ್ಯಾನಭಂಗಸ್ತಪಸ್ವಿನಾಂ ॥ ೧೮ ॥

ಕೃಷ್ಣಃ ಕರೋತು ಕಲ್ಯಾಣಂ ಹಂತು ವಿಘ್ನಂ ಕೃಪಾನಿಧಿಃ ।
ತದ್ಧ್ಯಾನಭಂಗಜಾದ್ದೋಷಾನ್ನಾಶುಭಂ ಸ್ಯಾತ್ತು ತೇ ಶುಭೇ ॥ ೧೯ ॥

ಗಣೇಶವಚನಂ ಶ್ರುತ್ವಾ ತಮುವಾಚ ಸ್ಮರಾತುರಾ ।
ಸಸ್ಮಿತಂ ಸಕಟಾಕ್ಷಂ ಚ ದೇವಂ ಮಧುರಯಾ ಗಿರಾ ॥ ೨೦ ॥

॥ ತುಲಸ್ಯುವಾಚ ॥

ಧರ್ಮಾತ್ಮಜಸ್ಯ ಕನ್ಯಾಹಮಪ್ರೌಢಾ ಚ ತಪಸ್ವಿನೀ ।
ತಪಸ್ಯಾ ಮೇ ಸ್ವಾಮಿನೋಽರ್ಥೇ ತ್ವಂ ಸ್ವಾಮೀ ಭವ ಮೇ ಪ್ರಭೋ ॥ ೨೧ ॥

---

೧೮. ಗಣೇಶ್ವರ:—ಎಲೌ ಮಾತೆಯೇ, ನೀನಾರು ? ಆರಮಗಳು ? ನನ್ನ ಧ್ಯಾನಾಸಕ್ತಮನಸ್ಸನ್ನು ಏಕೆ ಚಂಚಲಗೊಳಿಸಿದೆ. ತಪಸ್ವಿಗಳ ಧ್ಯಾನವನ್ನು ಭಂಗಗೊಳಿಸುವುದರಿಂದ ಪಾಪ ಮತ್ತು ಅಮಂಗಳವು ಘಟಿಸುವುದು

೧೯. ಎಲೌ ಮಂಗಳಾಂಗಿಯೇ, ಕರುಣಾನಿಧಿಯಾದ ಶ್ರೀಕೃಷ್ಣನು ವಿಘ್ನಗಳನ್ನು ಪರಿಹರಿಸಿ, ನಿನಗೆ ಸನ್ಮಂಗಳವನ್ನುಂಟುಮಾಡಲಿ. ಶ್ರೀಕೃಷ್ಣಧ್ಯಾನವನ್ನು ಭಂಗಗೊಳಿಸುದುವರಿಂದ ನಿನಗೆ ಅಮಂಗಳವಾಗದಿರಲಿ.

೨೦. ಗಣೇಶನಾಡಿದ ಮಾತುಗಳನ್ನು ಕೇಳಿ ಕಾಮಾತುರಳಾದ ತುಳಸಿಯು ನಗುಮುಖದಿಂದ ಅವನ ಮೇಲೆ ಕಟಾಕ್ಷಗಳನ್ನು ಬೀರುತ್ತ ಮೃದುಮಧುರವಾಗಿ ಕೆಲವು ಮಾತುಗಳನ್ನು ಹೇಳಿದಳು.

೨೧ ತುಲಸಿ:—ಧರ್ಮಧ್ವಜನ ಕನ್ಯೆಯಾದ ನಾನು ಯೋಗ್ಯನಾದ ವರನನ್ನು ಪಡೆಯಲು ತಪವೆಸಗುತ್ತಿದ್ದೇನೆ. ಎಲೈ ಪ್ರಭುವೇ, ನೀನೇ ನನಗೆ ಪತಿಯಾಗಲು ಯೋಗ್ಯನಾಗಿದ್ದೀಯೆ.

ತುಲಸೀವಚನಂ ಶ್ರುತ್ವಾ ಗಣೇಶಃ ಶ್ರೀಹರಿಂ ಸ್ಮರನ್ ।
ತಾಮುವಾಚ ಮಹಾಪ್ರಾಜ್ಞಃ ಪ್ರಾಜ್ಞೀಂ ಮಧುರಯಾ ಗಿರಾ ॥ ೨೨ ॥

॥ ಗಣೇಶೋವಾಚ ॥

ಹೇ ಮಾತರ್ನಾಸ್ತಿ ಮೇ ವಾಂಛಾ ಘೋರೇ ದಾರಪರಿಗ್ರಹೇ ।
ದಾರಗ್ರಹೋ ಹಿ ದುಃಖಾಯ ನ ಸುಖಾಯ ಕದಾಚನ ॥ ೨೩ ॥

ಹರಿಭಕ್ತೇರ್ವ್ಯವಾಯಶ್ಚ ತಪಸ್ಯಾ ನಾಶಕಾರಕಃ ।
ಮೋಕ್ಷದ್ವಾರಕಪಾಟಶ್ಚ ಭವಬಂಧನಪಾಶಕಃ ॥ ೨೪ ॥

ಗರ್ಭವಾಸಕರಃ ಶಶ್ವತ್ತತ್ವಜ್ಞಾನನಿಕೃಂತಕಃ ।
ಸಂಶಯಾನಾಂ ಸಮಾರಂಭೋ ಯಸ್ತ್ಯಾಜ್ಯೋ ವೃಷಲೈರಪಿ ॥ ೨೫ ॥

---

೨೨. ಪ್ರಾಜ್ಞರಲ್ಲಿ ಅಗ್ರೇಸರನಾದ ಗಣಪತಿಯು, ತುಲಸಿಯ ಮಾತನ್ನು ಕೇಳಿ, ಶ್ರೀಹರಿಯನ್ನು ಸ್ಮರಿಸುತ್ತ, ಜಾಣೆಯಾದ ಆಕೆಯನ್ನು ಕುರಿತು ಕೆಲವು ಮಧುರವಚನಗಳನ್ನಾಡಿದನು.

೨೩. ಗಣೇಶ :—ಎಲೌ ಮಾತೆಯೇ, ನಾನು ವಿವಾಹಿತನಾಗಿ ಘೋರವಾದ ಸಂಸಾರದಲ್ಲಿ ಬೀಳಲು ಇಚ್ಛಿಸುವುದಿಲ್ಲ. ವಧೂಪರಿಗ್ರಹದಿಂದ ಯಾವಾಗಲೂ ದುಃಖವುಂಟಾಗುವುದೇ ಹೊರತು ಎಂದೆಂದಿಗೂ ಸುಖವು ಲಭಿಸುವುದಿಲ್ಲ.

೨೪ ಸ್ತ್ರೀಸಂಗಮಾಡುವುದರಿಂದ ಹರಿಭಕ್ತಿಯೂ, ತಪಸ್ಸೂ ನಾಶವಾಗುವುದು. ಸ್ತ್ರೀಸುಖವೆಂಬುದು ಮೋಕ್ಷದ್ವಾರಕ್ಕೆ ಬಾಗಿಲಂತೆಯೂ, ಸಂಸಾರಬಂಧನಕ್ಕೆ ಪಾಶದಂತೆಯೂ ಇರುವುದು.

೨೫. ಯಾವಾಗಲೂ ಗರ್ಭವಾಸವನ್ನೊದಗಿಸಿ, ತತ್ವಜ್ಞಾನವನ್ನು ನಿರ್ಮೂಲಗೊಳಿಸಿ, ಸಂಶಯಗಳಿಗೆ ಎಡೆಗೊಡುವ ಸಂಸಾರಸುಖವನ್ನು ಶೂದ್ರರೂ ಕೂಡ ದೂರಮಾಡಲೆಳಸುವರು.

ಗೇಹೋಽಯಂ ಕರಣಾನಾಂ ಚ ಸರ್ವಮಾಯಾಕರಂಡಕಂ ।
ಸಾಹಸಾನಾಂ ಸಮೂಹಶ್ಚ ದೋಷಾಣಾಂ ಚ ವಿಶೇಷತಃ ॥ ೨೬ ॥

ನಿವರ್ತಸ್ವ ಮಹಾಭಾಗೇ ಪಶ್ಯಾನ್ಯಂ ಕಾಮುಕಂ ಪತಿಂ ।
ಕಾಮುಕೇನೈವ ಕಾಮುಕ್ಯಾಸ್ಸಂಗಮೋ ಗುಣವಾನ್ಭವೇತ್ ॥ ೨೭ ॥

ಇತ್ಯೇವಂವಚನಂ ಶ್ರುತ್ವಾ ಕೋಪಾತ್ಸಾ ತಂ ಶಶಾಪ ಹ ।
ದಾರಾಸ್ತೇ ಭವಿತಾಽಸಾಧ್ವೀ ಗಣೇಶ್ವರ ನ ಸಂಶಯಃ ॥ ೨೮ ॥

ಇತ್ಯಾಕರ್ಣ್ಯ ಸುರಶ್ರೇಷ್ಠಸ್ತಾಂ ಶಶಪ ಶಿವಾತ್ಮಜಃ ।
ದೇವಿ ತ್ವಮಸುರಗ್ರಸ್ತಾ ಭವಿಷ್ಯಸಿ ನ ಸಂಶಯಃ ॥ ೨೯ ॥

ತತ್ಪಶ್ಚಾನ್ಮಹತಾಂ ಶಾಪಾದ್ವೃಕ್ಷಸ್ತ್ವಂ ಭವಿತೇತಿ ಚ ।
ಮಹಾತಪಸ್ವೀತ್ಯುಕ್ತ್ವಾ ತಾಂ ವಿರರಾಮ ಚ ನಾರದ ॥ ೩೦ ॥

---

೨೬. ಸಂಸಾರವು ಇಂದ್ರಿಯಗಳಿಗೆ ತೌರುಮನೆಯು-ತೆಯೂ, ಮಾಯೆಗೆ ಒಂದು ಭರಣಿಯಂತೆಯೂ ಇರುವುದು ವಿಶೇಷವಾಗಿ ಸಾಹಸ ಮತ್ತು ದೋಷಗಳು ಸಂಸಾರದಲ್ಲಿ ತುಂಬಿವೆ.

೨೭. ಆದುದರಿಂದ, ಎಲೌ ಭಾಗ್ಯಶಾಲಿನಿಯೇ, ನೀನು ನನ್ನನ್ನು ಬಿಟ್ಟು ಕಾಮುಕನಾದ ಮತ್ತೊಬ್ಬ ಪತಿಯನ್ನು ಅರಸಿಕೊಂಡು ಹೋಗು. ಕಾಮುಕಿಯಾದ ಸ್ತ್ರೀಯು ಕಾಮುಕನಾದ ಪುರುಷನೊಡನೆ ಸೇರಿದರೆ ಅತ್ಯುತ್ತಮವಲ್ಲವೆ ?

೨೮. ಈ ಮಾತನ್ನು ಕೇಳಿ ಕುಪಿತಳಾದ ತುಳಸಿಯು ಗಣಪತಿಯನ್ನು ಕುರಿತು ಎಲೈ ಗಣೇಶ್ವರನೇ, ನಿನ್ನ ಹೆಂಡತಿಯು ದುಷ್ಟಳಾಗುವಳು ಎಂದು ಶಪಿಸಿದಳು.

೨೯. ತುಳಸಿಯಾಡಿದ ಕ್ರೂರನುಡಿಗಳನ್ನು ಕೇಳಿ, ಸುರಶ್ರೇಷ್ಠನೂ ಶಿವನ ಪುತ್ರನೂ ಆದ ಗಣಪತಿಯು 'ನೀನು ರಾಕ್ಷಸರ ಪೀಡೆಗೊಳಗಾಗುವೆ' ಎಂದು ಆಕೆಗೆ ಪ್ರತಿಶಾಪವಿತ್ತನು.

೩೦. 'ಅನಂತರದಲ್ಲಿ ಮಹಾತ್ಮರ ಶಾಪದಿಂದ ನೀನು ವೃಕ್ಷರೂಪಳಾಗುವೆ' ಎಂದೂ ಮಹಾತಪಸ್ವಿಯಾದ ಗಣಪತಿಯು ಆಕೆಗೆ ಶಾಪವಿತ್ತು ಸುಮ್ಮನಾದನು.

ಶಾಪಂ ಶ್ರುತ್ವಾ ತು ತುಲಸೀ ಸಾ ರುರೋದ ಪುನಃ ಪುನಃ ।
ತುಷ್ಟಾವ ಚ ಸುರಶ್ರೇಷ್ಠಂ ಸ ಪ್ರಸನ್ನ ಉವಾಚ ತಾಂ ॥ ३೧ ॥

॥ ಗಣೇಶ್ವರ ಉವಾಚ ॥

ಪುಷ್ಪಾಣಾಂ ಸಾರಭೂತಾ ತ್ವಂ ಭವಿಷ್ಯಸಿ ಮನೋರಮೇ ।
ಕಲಾಂಶೇನ ಮಹಾಭಾಗೇ ಸ್ವಯಂ ನಾರಾಯಣಪ್ರಿಯಾ ॥ ३೨ ॥

ಪ್ರಿಯಾ ತ್ವಂ ಸರ್ವದೇವಾನಾಂ ಶ್ರೀಕೃಷ್ಣಸ್ಯ ವಿಶೇಷತಃ ।
ಪೂತಾ ವಿಮುಕ್ತಿದಾ ನೄಣಾಂ ಮಯಾ ಭೋಗ್ಯಾ ನ ನಿತ್ಯಶಃ ॥ ३३ ॥

ಇತ್ಯುಕ್ತ್ವಾ ತಾಂ ಸುರಶ್ರೇಷ್ಠೋ ಜಗಾಮ ತಪಸೇ ಪುನಃ ।
ಹರೇರಾರಾಧನವ್ಯಗ್ರೋ ಬದರೀಸನ್ನಿಧಿಂ ಯಯೌ ॥ ३೪ ॥

ಜಗಾಮ ತುಲಸೀದೇವೀ ಹೃದಯೇನ ವಿದೂಯತಾ ।
ನಿರಾಹಾರಾ ತಪಶ್ಚಕ್ರೇ ಪುಷ್ಕರೇ ಲಕ್ಷವರ್ಷಕಂ ॥ ३೫ ॥

---

३೧. ಗಣಪತಿಯ ಶಾಪವಚನಗಳನ್ನು ಕೇಳಿದ ತುಳಸಿಯು ಮತ್ತೆ ಮತ್ತೆ ಗೋಳಾಡುತ್ತ ಅವನನ್ನು ಭಕ್ತಿಯಿಂದ ಸ್ತುತಿಸಲು, ಪ್ರಸನ್ನನಾದ ಗಣಪತಿಯು ಇಂತು ವರವಿತ್ತನು.

३೨. ಗಣೇಶ್ವರ :–ಎಲೌ ಮನೋರಮೆಯೇ, ನೀನು ವೃಕ್ಷರೂಪದಿಂದಿದ್ದರೂ. ಪುಷ್ಪಗಳಿಗೆಲ್ಲ ಶ್ರೇಷ್ಠಳೆನಿಸಿ, ಕಲಾಂಶದಿಂದ ಶ್ರೀಮನ್ನಾರಾಯಣನಿಗೆ ಪ್ರಿಯಳಾಗುವೆ.

३३. ಪತ್ರರೂಪಳಾದ ನೀನು ಸಕಲದೇವತೆಗಳಿಗೂ, ವಿಶೇಷವಾಗಿ ಶ್ರೀಕೃಷ್ಣನಿಗೂ ಪ್ರಿಯಳಾಗುವೆ. ಪರಮಪವಿತ್ರಳಾದ ನೀನು ಮನುಜರಿಗೆಲ್ಲ ಮುಕ್ತಿಯನ್ನು ಕೊಡುವೆ. ನಾನು ಮಾತ್ರ ನಿನ್ನನ್ನು ಯಾವಾಗಲೂ ಉಪಭೋಗಿಸುವುದಿಲ್ಲ.

३೪. ದೇವಶ್ರೇಷ್ಠನಾದ ಗಣಪತಿಯು ತುಲಸಿಯನ್ನು ಈ ರೀತಿ ಆಶ್ವಾಸನಗೊಳಿಸಿ, ಶ್ರೀಹರಿಯ ಅನುಗ್ರಹಕ್ಕಾಗಿ ತಪವೆಸಗಲು ಬದರಿಕಾಶ್ರಮಕ್ಕೆ ತೆರಳಿದನು.

३೫. ಇತ್ತ ತುಳಸೀದೇವಿಯೂ ಕೂಡ ಮನಸ್ಸಿನಲ್ಲಿಯೇ ವ್ಯಥೆಪಡುತ್ತ. ಪುಷ್ಕರಕ್ಷೇತ್ರಕ್ಕೆ ಹೋಗಿ, ಲಕ್ಷವರ್ಷಗಳಕಾಲ ಆಹಾರವಿಲ್ಲದೆ ತಪಸ್ಸುಮಾಡಿದಳು

ಪಶ್ಚಾನ್ಮುನೀಂದ್ರಶಾಪೇನ ಗಣೇಶಸ್ಯ ಚ ನಾರದ ।
ಸಾ ಪ್ರಿಯಾ ಶಂಖಚೂಡಸ್ಯ ಬಭೂವ ಸುಚಿರಂ ಮುನೇ ॥ ೩೬ ॥

ತತಃ ಶಂಕರಶೂಲೇನ ಸ ಮಮಾರಾಸುರೇಶ್ವರಃ ।
ಸಾ ಕಲಾಂಶೇನ ವೃಕ್ಷತ್ವಂ ಯಯೌ ನಾರಾಯಣಪ್ರಿಯಾ ॥ ೩೭ ॥

ಕಥಿತಶ್ಚೇತಿಹಾಸಸ್ತೇ ಶ್ರುತೋ ಧರ್ಮಮುಖಾತ್ಪುರಾ ।
ಮೋಕ್ಷಪ್ರದಶ್ಚ ಸಾರಶ್ಚ ಪುರಾಣೇನ ಪ್ರಕೀರ್ತಿತಃ ॥ ೩೮ ॥

ತತಃ ಪರಶುರಾಮೋಽಸೌ ಜಗಾಮ ತಪಸೇ ವನಂ ।
ಪ್ರಣಮ್ಯ ಶಂಕರಂ ದುರ್ಗಾಂ ಸಂಪೂಜ್ಯ ಚ ಗಣೇಶ್ವರಂ ॥ ೩೯ ॥

---

೩೬. ಎಲೈ ನಾರದನೇ, ಇಂತು ಲಕ್ಷವರ್ಷಗಳನ್ನು ಕಳೆದನಂತರ ಮುನೀಂದ್ರನ ಮತ್ತು ಗಣಪತಿಯು ಶಾಪದಿಂದ ಆಕೆಯು ಬಹಳಕಾಲ ಶಂಖಚೂಡನ ಪತ್ನಿಯಾಗಿದ್ದಳು.

೩೭. ಅನಂತರ ಆ ಶಂಖಚೂಡನು ಶಂಕರನ ಶೂಲಾಯುಧದಿಂದ ಮೃತನಾಗಲು, ಆ ತುಳಸಿಯು ತನ್ನ ಕಲಾಂಶದಿಂದ ವೃಕ್ಷರೂಪಳಾಗಿ ನಾರಾಯಣನಿಗೆ ಪ್ರಿಯಳಾದಳು

೩೮. ಎಲೈ ನಾರದನೇ, ಪೂರ್ವದಲ್ಲಿ ಧರ್ಮಪುರುಷನ ಮುಖದಿಂದ ನಾನು ಕೇಳಿದ ಇತಿಹಾಸವನ್ನು ನಿನಗೆ ಇದುವರೆಗೂ ಹೇಳಿದೆನು. ಈ ಪುರಾಣವು ಮೋಕ್ಷಪ್ರದವೂ ಅತ್ಯಂತ ಸಾರಭೂತವೂ ಆದುದು.

೩೯. ಅನಂತರದಲ್ಲಿ ಪರಶುರಾಮನು ಶಂಕರಪಾರ್ವತಿಯರಿಗೂ, ಗಣಪತಿಗೂ, ಪೂಜಿಸಿ, ವಂದನೆಮಾಡಿ, ತಪಸ್ಸಿಗಾಗಿ ವನಕ್ಕೆ ತೆರಳಿದನು.

ಪೂಜಿತೋ ವಂದಿತಃ ಸರ್ವೈಃ ಸುರೇಂದ್ರಮುನಿಪುಂಗವೈಃ ।
ಪಾರ್ವತೀ ಶಿವಸಾನ್ನಿಧ್ಯೇ ಸುಖಂ ತಸ್ಥೌ ಗಣೇಶ್ವರಃ ॥ ೪೦ ॥

ಇದಂ ಗಣಪತೇಃ ಖಂಡಂ ಯಃ ಶೃಣೋತಿ ಸಮಾಹಿತಃ ।
ಸ ರಾಜಸೂಯಯಜ್ಞಸ್ಯ ಫಲಮಾಪ್ನೋತಿ ನಿಶ್ಚಿತಂ ॥ ೪೧ ॥

ಅಪುತ್ರೋ ಲಭತೇ ಪುತ್ರಂ ಶ್ರೀಗಣೇಶಪ್ರಸಾದತಃ ।
ಧೀರಂ ವೀರಂ ಚ ಧನಿನಂ ಗುಣಿನಂ ಚಿರಜೀವಿನಂ ॥ ೪೨ ॥

ಯಶಸ್ವಿನಂ ಪುತ್ರಿಣಂ ಚ ವಿದ್ವಾಂಸಂ ಸುಕವೀಶ್ವರಂ ।
ಜಿತೇಂದ್ರಿಯಾಣಾಂ ಪ್ರವರಂ ದಾತಾರಂ ಸರ್ವಸಂಪದಾಂ ॥ ೪೩ ॥

ಸುಶೀಲಂ ಚ ಸದಾಚಾರಂ ಪ್ರಶಂಸ್ಯಂ ವೈಷ್ಣವಂ ಲಭೇತ್ ।
ಅಹಿಂಸಕಂ ದಯಾಲುಂ ಚ ತತ್ವಜ್ಞಾನವಿಶಾರದಂ ॥ ೪೪ ॥

---

೪೦. ಗಣಪತಿಯಾದರೋ, ಸಕಲ ಸುರಮುನಿಶ್ರೇಷ್ಠರಿಂದ ಪೂಜಿತನಾಗಿ, ಪಾರ್ವತೀಪರಮೇಶ್ವರರೊಡನೆ ಸುಖವಾಗಿದ್ದನು.

೪೧. ಈ ಗಣಪತಿಖಂಡವನ್ನು ಏಕಾಗ್ರತೆಯಿಂದ ಕೇಳುವವರು, ರಾಜಸೂಯ ಯಾಗವಾಡಿದ ಫಲವನ್ನು ನಿಶ್ಚಯವಾಗಿಯೂ ಪಡೆಯುವರು.

೪೨. ಮಕ್ಕಳಿಲ್ಲದವರು ಶ್ರೀಗಣಪತಿಯ ಅನುಗ್ರಹದಿಂದ, ಧೀರನೂ, ವೀರನೂ, ಹಣವಂತನೂ, ಗುಣವಂತನೂ ಮತ್ತು ಚಿರಂಜೀವಿಯೂ ಆದ ಮಗನನ್ನು ಪಡೆಯುವರು.

೪೩. ಕೀರ್ತಿವಂತನೂ, ಪುತ್ರವಂತನೂ, ವಿದ್ವಾಂಸನೂ, ಉತ್ತಮ ಕವಿಯೂ, ಜಿತೇಂದ್ರಿಯರಲ್ಲಿ ಶ್ರೇಷ್ಠನೂ, ಸಕಲಸಂಪತ್ಪ್ರದಾತೃವೂ ಆದ ಮಗನನ್ನು ಪಡೆಯುವರು.

೪೪. ಸುಶೀಲನೂ, ಸದಾಚಾರಸಂಪನ್ನನೂ, ಪರಮವೈಷ್ಣವನೂ, ಅಹಿಂಸಾಪರನೂ, ದಯಾಳುವೂ, ತತ್ವಜ್ಞಾನವಿಶಾರದನೂ, ಆದ ಪುತ್ರನನ್ನು ಪಡೆಯುವರು.

ಭಕ್ತ್ಯಾ ಗಣೇಶಂ ಸಂಪೂಜ್ಯ ವಸ್ತ್ರಾಲಂಕಾರಚಂದನೈಃ।
ಶ್ರುತ್ವಾ ಗಣಪತೇಃ ಖಂಡಂ ಮಹಾವಂಧ್ಯಾ ಪ್ರಸೂಯತೇ ॥ ೪೫ ॥

ಮೃತವತ್ಸಾ ಕಾಕವಂಧ್ಯಾ ಬ್ರಹ್ಮನ್ ಪುತ್ರಂ ಲಭೇದ್ಧ್ರುವಂ।
ಅದೂಷ್ಯ ದೂಷಣಪರಾ ಶುದ್ಧಾ ಚೈವ ಲಭೇತ್ಸುತಂ ॥ ೪೬ ॥

ಸಂಪೂರ್ಣೇ ಬ್ರಹ್ಮವೈವರ್ತಂ ಶ್ರುತ್ವಾ ಯಲ್ಲಭತೇ ಫಲಂ।
ತತ್ಫಲಂ ಲಭತೇ ಮರ್ತ್ಯಃ ಶ್ರುತ್ವೇದಂ ಖಂಡಮುತ್ತಮಂ ॥ ೪೭ ॥

ವಾಂಛಾಂ ಕೃತ್ವಾ ತು ಮನಸಿ ಶೃಣೋತಿ ಪರಮಾಸ್ಥಿತಃ।
ತಸ್ಮೈ ದದಾತಿ ಸರ್ವೇಷ್ಟಂ ಸುರಶ್ರೇಷ್ಠೋ ಗಣೇಶ್ವರಃ ॥ ೪೮ ॥

---

೪೫. ಮಕ್ಕಳಾಗದ ಬಂಜೆಯು, ಗಣಪತಿಯನ್ನು ವಸ್ತ್ರಾಲಂಕಾರಚಂದನಗಳಿಂದ ಭಕ್ತಿಪೂರ್ವಕವಾಗಿ ಪೂಜಿಸಿ ಈ ಗಣಪತಿಖಂಡವನ್ನು ಕೇಳಿದರೆ ಮಕ್ಕಳನ್ನು ಹೆರುವಳು.

೪೬. ಎಲೈ ನಾರದನೇ. ಹಡೆದ ಮಕ್ಕಳನ್ನು ಕಳೆದುಕೊಂಡವಳೂ. ಒಂದೇ ಮಗುವನ್ನು ಹಡೆದವಳೂ, ದೀರ್ಘಾಯುಗಳಾದ ಹಲವು ಮಕ್ಕಳನ್ನು ಪಡೆಯುವಳು. ನಿಂದೆಮಾಡಬಾರದವರನ್ನು ನಿಂದಿಸುವವಳೂ ಇದನ್ನು ಕೇಳಿ ಶುದ್ಧಳಾಗಿ ಸತ್ಪುತ್ರರನ್ನು ಪಡೆಯುವಳು.

೪೭. ಬ್ರಹ್ಮವೈವರ್ತಮಹಾಪುರಾಣವನ್ನು ಸಂಪೂರ್ಣವಾಗಿ ಕೇಳಿದರೆ ಯಾವ ಪುಣ್ಯಫಲವು ಲಭಿಸುವುದೋ ಅದು ಅತ್ಯುತ್ತಮವಾದ ಈ ಗಣಪತಿಖಂಡವನ್ನು ಕೇಳುವುದರಿಂದಲೇ ಲಭಿಸುವುದು.

೪೮. ಮನಸ್ಸಿನಲ್ಲಿ ಯಾವುದಾದರೂ ಅಭಿಲಾಷೆಯನ್ನು ಇಟ್ಟುಕೊಂಡು ಪರಮಭಕ್ತಿಯಿಂದ ಈ ಖಂಡವನ್ನು ಕೇಳಿದರೆ ಅಂಥವರಿಗೆ ಗಣಪತಿಯು ಸಕಲ ಇಷ್ಟಾರ್ಥಗಳನ್ನೂ ದಯಪಾಲಿಸುವನು.

ಶ್ರುತ್ವಾ ಗಣಪತೇಃ ಖಂಡಂ ವಿಘ್ನನಾಶಾಯ ಯತ್ನತಃ ।
ಸ್ವರ್ಣಯಜ್ಞೋಪವೀತಂ ಚ ಶ್ವೇತಚ್ಛತ್ರಂ ಚ ಮಾಲ್ಯಕಂ ॥ ೪೯ ॥

ಪ್ರದೀಯತೇ ವಾಚಕಾಯ ಸ್ವಸ್ತಿಕಂ ತಿಲಲಡ್ಡುಕಾನ್ ।
ಪರಿಪಕ್ವಫಲಾನ್ಯೇವ ದೇಶಕಾಲೋದ್ಭವಾನಿ ಚ ॥ ೫೦ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ತೃತೀಯೇ ಗಣಪತಿಖಂಡೇ ನಾರದನಾರಾಯಣಸಂವಾದೇ ಪರಶುರಾಮ ಗಮನ್ಯೈತತ್ಖಂಡ ಶ್ರವಣ ಫಲವರ್ಣನಂ ನಾಮ ಷಟ್ಚತ್ವಾರಿಂಶತ್ತಮೋಽಧ್ಯಾಯಃ

॥ ಇತಿ ಶ್ರೀ ಬ್ರಹ್ಮವೈವರ್ತೇ ತೃತೀಯಂಮಹಾಗಣಪತಿಖಂಡಂ ಸಮಾಪ್ತಂ ॥

೪೯-೫೦. ಈ ಗಣಪತಿಖಂಡವನ್ನು ಕೇಳಿದ ಮೇಲೆ ವಿಘ್ನಪರಿಹಾರಕ್ಕಾಗಿ ಸುವರ್ಣಯಜ್ಞೋಪವೀತವನ್ನೂ, ಶ್ವೇತಚ್ಛತ್ರಿಯನ್ನೂ ಪುಷ್ಪಮಾಲೆಯನ್ನೂ ಸ್ವಸ್ತಿಕವಾಯನವನ್ನೂ ಎಳ್ಳುಂಡೆಗಳನ್ನೂ ಆಯಾಕಾಲಾನುಗುಣವಾದ ಪಕ್ವಫಲಗಳನ್ನೂ ಪುರಾಣ ಓದಿದವರಿಗೆ ಭಕ್ತಿಯಿಂದ ಸಮರ್ಪಿಸಬೇಕು.

ಇಲ್ಲಿಗೆ ಬ್ರಹ್ಮವೈವರ್ತಮಹಾಪುರಾಣದ ಗಣಪತಿಖಂಡದಲ್ಲಿ ಗಣಪತಿ ಖಂಡವನ್ನು ಕೇಳುವುದರಿಂದ ಲಭಿಸುವ ಪುಣ್ಯಫಲವರ್ಣನಾತ್ಮಕವಾದ ನಲವತ್ತಾರನೆಯ ಅಧ್ಯಾಯವು ಮುಗಿದುದು.

ನಲವತ್ತಾರನೆಯ ಅಧ್ಯಾಯದ ಸಾರಾಂಶ

ಪಾರ್ವತಿಯನ್ನು ಸ್ತುತಿಸಿದನಂತರ ಪರಶುರಾಮನು ಗಣಪತಿಯನ್ನು ಭಕ್ತಿಪೂರ್ವಕವಾಗಿ ಪೂಜಿಸಿದನು. ಗಣಪತಿಗೆ ತುಳಸೀಪತ್ರೆಯನ್ನು ಮಾತ್ರ ಪೂಜಿಸಲಿಲ್ಲ. ಇದಕ್ಕೆ ಕಾರಣವೇನೆಂದರೆ, ಹಿಂದೊಮ್ಮೆ ನವಯುವತಿಯಾದ ತುಲಸಿಯು ಗಂಗಾತೀರದಲ್ಲಿ ತಪಸ್ಸುಮಾಡುತ್ತಿದ್ದಾಗ ನವಯೌವನ ಸಂಪನ್ನನಾದ ಗಣಪತಿಯು ಶ್ರೀಹರಿಯನ್ನು ಸ್ಮರಿಸುತ್ತ ಆ ಮಾರ್ಗವಾಗಿ ಬಂದನು. ಅವನ ಸುಂದರರೂಪವನ್ನು ನೋಡಿ ಕಾಮಾತುರಳಾದ ತುಳಸಿಯು ಅವನ ಧ್ಯಾನಾಸಕ್ತವಾದ ಮನಸ್ಸನ್ನು ಚಂಚಲಗೊಳಿಸಿದಳು. ಆಗ ಗಣಪತಿಯು ತನ್ನ ಏಕಾಗ್ರತೆಗೆ ಭಂಗತರಲು ಕಾರಣವೇನೆಂದು ತಳಸಿಯನ್ನು ಕೇಳಲು ಆಕೆಯು ತನ್ನನ್ನು ವರಿಸಬೇಕೆಂದು ಬೇಡಿದಳು. ಜಿತೇಂದ್ರಿಯನಾದ ಗಣಪತಿಯು ಅದಕ್ಕೆ ಸಮ್ಮತಿಸದಿರಲು, ತುಳಸಿಯು ಅವನನ್ನು ಕುರಿತು. 'ನಿನ್ನ ಪತ್ನಿಯು ದುಷ್ಟಳಾಗಲಿ' ಎಂದು ಶಪಿಸಿದಳು. ಅದಕ್ಕೆ ಗಣಪತಿಯು 'ನೀನೂ ರಾಕ್ಷಸರ ಪೀಡೆಗೊಳಗಾಗಿ, ಮಹಾತ್ಮರ ಶಾಪದಿಂದ ತುಳಸೀವೃಕ್ಷವಾಗುವೆ' ಎಂದು ಪ್ರತಿಶಾಪವಿತ್ತನು. ಶಾಪದಿಂದ ದುಃಖಿತಳಾದ ತುಳಸಿಯು ಗಣಪತಿಯ ಕ್ಷಮೆಯನ್ನು ಬೇಡಲು, ಪ್ರಸನ್ನನಾದ ಗಣಪತಿಯು 'ನೀನು ಪುಷ್ಪಗಳಲ್ಲೆಲ್ಲ ಶ್ರೇಷ್ಠಳೆನಿಸಿ, ಎಲ್ಲ ದೇವತೆಗಳಿಗೂ, ವಿಶೇಷವಾಗಿ ಶ್ರೀಕೃಷ್ಣನಿಗೂ ಪ್ರಿಯಳಾಗುವೆ. ಆದರೆ ನಾನು ಮಾತ್ರ ತುಳಸೀಪತ್ರೆಯ ಪೂಜೆಯನ್ನು ಸ್ವೀಕರಿಸುವುದಿಲ್ಲ' ಎಂದು ತುಳಸಿಗೆ ವರವನ್ನಿತ್ತನು. ಅದರಂತೆಯೇ ತುಳಸಿಯು ಶಂಖಚೂಡನೆಂಬ ರಾಕ್ಷಸನ ಪತ್ನಿಯಾಗಿದ್ದು, ಅನಂತರ ವೃಕ್ಷರೂಪಳಾಗಿ, ಶ್ರೀಹರಿಗೆ ಪ್ರಿಯಳಾದಳು. ಇತ್ತ ಪರಶುರಾಮನು ಗಣಪತಿಯನ್ನೂ ಶಿವಪಾರ್ವತಿಯರನ್ನೂ ವಂದಿಸಿ ತಪಸ್ಸಿಗೆ ತೆರಳಿದನು. ಗಣಪತಿಯು ಪಾರ್ವತೀಪರಮೇಶ್ವರರೊಡನೆ ಸುಖವಾಗಿದ್ದನು. ಈ ಗಣಪತಿಖಂಡವನ್ನು ಭಕ್ತಿಪೂರ್ವಕವಾಗಿ ಹೇಳಿ ಕೇಳುವವರಿಗೆ ಸಕಲ ಇಷ್ಟಾರ್ಥಗಳೂ ಸಿದ್ಧಿಸುವುವು.

ಇಲ್ಲಿಗೆ ಗಣೇಶಖಂಡವು ಮುಗಿದುದು.